ISSN: 2249-2429 Volume : 16, Issue : 2, Pages 124, 7th September-2026. Annual Subscription ₹.750/-

RNI REG.NO.KARKAN/2011/38712

ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

SHIKSHAN SOUDHA *A Quarterly Education and Research Journal*

ಯುಜಿಸಿ (UGC)ಯ ಸೂಚಿತ ಮಾನದಂಡಗಳಿಗೆ ಅನುಗುಣವಾದ
(ಪೀರ್ ರಿವ್ಯೂಡ್) ಕನ್ನಡ ಮುದ್ರಿತ ಜರ್ನಲ್.

ಕರ್ನಾಟಕ ಶಬ್ದಾನುಶಾಸನ

ಕಲ್ಯಾಣ ಕರ್ನಾಟಕದ ಪ್ರಸ್ತುತ ಶೈಕ್ಷಣಿಕ ನೀತಿ

ತಂತ್ರಜ್ಞಾನದ ಮೂಲಕ ಜೀವನವನ್ನು ಪರಿವರ್ತಿಸುವುದು

ಶಾಲಾ-ಕಾಲೇಜುಗಳಲ್ಲಿ ರಂಗ ಶಿಕ್ಷಣ ಕೇಂದ್ರದ ಅಗತ್ಯತೆ

www.shikshansoudha.in

RNI REG.NO.KARKAN/2011/38712 7ನೇ ಸಪ್ಟಂಬರ್ 2026 ಸಂಪುಟ : 16 ಸಂಚಿಕೆ : 2 ISSN: 2249-2429

ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

SHIKSHAN SOUDHA
Kannada Quarterly

ಯುಜಿಸಿ (UGC)ಯ ಸೂಚಿತ ಮಾನದಂಡಗಳಿಗೆ
ಅನುಗುಣವಾದ (ಪೀರ್ ರಿವ್ಯೂಡ್) ಕನ್ನಡ ಮುದ್ರಿತ ಜರ್ನಲ್

ಪ್ರಕಾಶಕರು :
ಡಾ॥ ಜಯದೇವ ಮೈ. ಮೆಣಸಗಿ
ವಿದ್ಯಾನಿಧಿ ಪ್ರಕಾಶನ, ಗದಗ
ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :
ಡಾ. ಎಸ್.ಬಿ. ಯಾದವಾಡ

ಸಹಸಂಪಾದಕರು :
ಡಾ. ಪ್ರಕಾಶ ಕೆ. ಬಡಿಗೇರ

ಸಂಪಾದಕ ಮಂಡಳಿ

- **ಪ್ರೊ. ಎಸ್.ಎಸ್. ಪಾಟೀಲ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಪ್ರೊ. ಬಿ.ಎಲ್. ಲಕ್ಕಣ್ಣವರ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ, ಕ.ರಾ.ಅ.ಮ.ವಿ, ವಿಜಯಪುರ
- **ಪ್ರೊ. ಕೆ.ಎಂ. ಮೇತ್ರಿ**
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಕುಲಪತಿಗಳು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ.
- **ಪ್ರೊ. ಜಗನ್ನಾಥ ಕೆ. ಡಾಂಗೆ**
  ಡೀನರು, ಶಿಕ್ಷಣ ನಿಕಾಯ ಮತ್ತು ಮುಖ್ಯಸ್ಥರು, ಶಿಕ್ಷಣ ಅಧ್ಯಯನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಡಾ. ಎನ್. ಲಕ್ಷ್ಮೀ**
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- **ಡಾ. ರಾಜಪ್ಪ ದಳವಾಯಿ**
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- **ಡಾ. ಭೀಮಪ್ಪ ರಂಗಣ್ಣವರ**
  ಸಹ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ,
  ತಮಿಳುನಾಡು, ನಿಲಕುಡಿ, ತಿರುವರೂರ್.
- **ಡಾ. ಹುಚ್ಚೇಗೌಡ**
  ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ,
  ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.

Shikshan Soudha
A Quarterly Education and Research Journal
VIDYANIDHI PRAKASHANA®
Since 1973
SRI SIVAKUMAR AGENCY®
Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-200527
email : shikshansoudha@gmail.com

The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.

ಅಂತರಂಗ Inside

ಸೈದ್ಧಾಂತಿಕ (Articles)

06 ಶಾಲಾ–ಕಾಲೇಜುಗಳಲ್ಲಿ ರಂಗ ಶಿಕ್ಷಣ ಕೇಂದ್ರದ ಅಗತ್ಯತೆ ಮತ್ತು ನಟನೆಯ ಪಾಠಗಳು – ಡಾ. ವೆಂಕಟೇಶಯ್ಯ ಕೆ.ಎಂ.

10 ಕವಿರಾಜ ಮಾರ್ಗದಲ್ಲಿ ಚತ್ತಾಣ – ಬೆದಂಡೆ – ಡಾ. ಲಕ್ಷ್ಮಿ ನರಸಮ್ಮ

11 ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಸಂಸ್ಕೃತಿ : ಅಲಕ್ಷಿತ ಪ್ರೇಕ್ಷಣೀಯ ನೆಲೆಗಳ ಅನನ್ಯತೆ – ಡಾ. ಚಿತ್ತಯ್ಯ ಕೆ.

13 ಕುವೆಂಪು ಅವರ ಕಥನ ಕವನಗಳಲ್ಲಿ ಅನಾವರಣಗೊಂಡ ಸಾಮಾಜಿಕ ನೆಲೆ – ರಾಶಿ ಎಂ.ಆರ್.

15 ಹಾ.ಮಾ.ನಾ. ಅವರ ವೈಚಾರಿಕ ಬರಹಗಳಲ್ಲಿ ಶೈಕ್ಷಣಿಕ ಚಿಂತನೆಗಳು – ಡಾ. ಅನಸೂಯಾ ಜಿ. ಪಾಟೀಲ

18 ಸಿದ್ಧಲಿಂಗಯ್ಯರವರ ಮೆರವಣಿಗೆ : ಸ್ತ್ರೀ ಪರ ದೃಷ್ಟಿ – ಡಾ. ಮಂಜುಳಾ ಜಿ.

21 ಬೆಳಗೆರೆ ಪರಿಸರದ ಸಾಹಿತಿಗಳು : ಒಂದು ಅವಲೋಕನ – ಮುರಳಿ ಎಂ.

23 ಕರ್ನಾಟಕದ ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಎದುರಿಸುತ್ತಿರುವ ಸವಾಲುಗಳು ಮತ್ತು ಪರಿಹಾರಗಳು – ರಾಜೇಶ ಎ.ಎಸ್.

25 ಮಹಿಳಾ ಸಬಲೀಕರಣಕ್ಕಾಗಿ ಕೃತಕ ಬುದ್ಧಿ ಮತ್ತೆ : ತಂತ್ರಜ್ಞಾನದ ಮೂಲಕ ಜೀವನವನ್ನು ಪರಿವರ್ತಿಸುವುದು – ಡಾ. ರಶ್ಮಿ ತುರಮರಿ, ಡಾ. ನಮ್ರತ ಎಂ.

27 ಹರಿಹರೇಶ್ವರ ದೇವಾಲಯದ ವಾಸ್ತುಶಿಲ್ಪ – ಡಾ. ಶರಣಪ್ಪ

30 ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರ ಮೈಲಾರ ಮಹದೇವಪ್ಪ – ಡಾ. ಶಶಿಕುಮಾರ್ ಬಿ.ಎಸ್.

32 ಮಾದಪ್ಪನ ಭಂಟ ಬೇಡರ ಕನ್ನಯ್ಯ – ಡಾ. ಎಂ.ವೈ. ಶಿವರಾಮು

35 ಕನಕದಾಸರ ರಾಮಧಾನ್ಯ ಚರಿತ್ರೆ : ಸಮತೆ, ಸಮಾನತೆ ತಾತ್ವಿಕ ಮೌಲ್ಯಗಳ ಪ್ರತಿಪಾದನೆ – ಡಾ. ಉಮೇಶ

37 ಕರ್ಣಾಟಕ ಶಬ್ದಾನುಶಾಸನ : ಒಂದು ಅವಲೋಕನ – ಡಾ. ಮಹೇಶ ಎಂ. ಪ್ರೊ.ಎನ್.ಕೆ. ಲೋಲಾಕ್ಷಿ

39 "ಡಾ. ಸಿದ್ಧಲಿಂಗಯ್ಯ : ಕನ್ನಡ ಸಾಹಿತ್ಯ ಪರಂಪರೆ" – ಡಾ. ಪಿ. ನಂಜುಡ

43 ನಾಗಮಂಗಲ ತಾಲ್ಲೂಕಿನ ಶಾಸನೋಕ್ತ ಜೈನ ಸ್ಮಾರಕಗಳು – ಡಾ. ರಕ್ಷಿತ ಡಿ.

47 ಕನ್ನಡ ಪ್ರಗತಿಶೀಲ ಸಾಹಿತ್ಯ : ಶ್ರೀಸಾಮಾನ್ಯನ ಚಿಂತನೆ – ಡಾ. ಅಶೋಕ ಎಚ್.ಕೆ., ಉಷಾ ಎಚ್.ಪಿ.

51 ಲಿಂಗಲೀಲಾ ವಿಲಾಸ ಚಾರಿತ್ರ : ಸಮಕಾಲೀನ ಸಾಹಿತ್ಯದ ಹಿನ್ನೆಲೆ – ಡಾ. ರಣಧೀರ

53 ಮಹಿಳೆ ಮತ್ತು ಸ್ವಾವಲಂಬನೆ – ಡಾ. ಎಂ. ಕೆಂಪಮ್ಮ ಕಾರ್ಕಹಳ್ಳಿ, ಡಾ. ಕುಮಾರ

56 ಆಯ್ದ ನವ್ಯ ಕಥೆಗಳಲ್ಲಿ ಅಸ್ತಿತ್ವವಾದಿ ನೆಲೆಗಳು – ಲಕ್ಷ್ಮಿ ಎ.ಎಂ.

59 ಭೂಮಿಯ ಉಳಿಸಲು ಭೂಮಿಗೆ ಇಳಿದ ದೇವತೆ ಗ್ರೇತಾಥನ್ ಬರ್ಗ್ – ಡಾ. ಮಹದೇವಪ್ರಸಾದ್ ಎನ್.ಎಸ್.

61 ಡಿ. ವಿ. ಗುಂಡಪ್ಪನವರ ನಾಟಕಗಳು : ಪ್ರಜಾಪ್ರಭುತ್ವದ ಸ್ವರೂಪ – ಡಾ. ಉಷಾ ಜಿ.ಎನ್.

65 ಲಂಕೇಶರ ಕತೆಗಳಲ್ಲಿ ಆಧುನಿಕತೆ – ಡಾ. ಮೃತ್ಯುಂಜಯ ಎಚ್.

: ಸೂಚನೆ :

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನವಾದಲ್ಲಿ 1500 ಶಬ್ದಗಳನ್ನು ಮೀರಬಾರದು ಹಾಗೂ ಸಂಶೋಧನಾ ಲೇಖನವಾದಲ್ಲಿ 2000 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು ಕಳಿಸಿರಿ.

67 ಪೌರಾಣಿಕ ನಾಟಕಗಳ ಒಂದು ಅವಲೋಕನ – ಡಾ. ನಾಗಮ್ಮ ಹೆಚ್. ಭಂಗರಗಿ

70 ಜನಪದ ಸಾಹಿತ್ಯದಲ್ಲಿ ಮಳೆಯ ಸ್ವರೂಪ – ಸತೀಶ್ ಎ.ಎಸ್.

75 'ಹೈವೇ 63' ಕಾದಂಬರಿಯಲ್ಲಿನ ಮಹಿಳೆಯರು–ಒಂದು ನೋಟ – ಡಾ. ಶರ್ಮಿಳಾ ವಿ.ಎನ್.

75 ಕ್ರಿಪ್ಟೋ ಕರೆನ್ಸಿ ಬಗ್ಗೆ ಒಂದು ಚರ್ಚೆ – ಶಿವಕುಮಾರ ಬಿ. ಉಪವಾಸಿ

77 ಆಚಾರ ವಿಚಾರಗಳ ಸಂಸ್ಕೃತಿಯ ಮುಖಾಮುಖಿ – ಡಾ. ಸುವರ್ಣಮ್ಮ ಡಿ.

80 ವಚನಕಾರರು ಮತ್ತು ಪ್ರಜಾಸತ್ತಾತ್ಮಕ ಚಿಂತನೆಗಳು – ತಿಪ್ಪೇರುದ್ರ ಸಂಡೂರ

84 ಶ್ರೀ ಹಡಪದ ಅಪ್ಪಣ್ಣನವರ ಜೀವನ ಕಥನ – ಡಾ. ನಾಗಪ್ಪ ಟಿ. ಗೋಗಿ

86 ಕುರುಬ ಮಹಿಳೆ : ಡಾ. ಚನ್ನಪ್ಪ ಕಟ್ಟಿ ಅವರ ಸಂಶೋಧನೆ – ಡಾ. ರಾಜಶ್ರೀ ಎಸ್. ಮಾರನೂರ

89 'ಜ್ವಾಲಾಮುಖಿಯ ಮೇಲೆ' ಕಾದಂಬರಿಯಲ್ಲಿನ ಕಾರ್ಮಿಕ ವರ್ಗದ ಹೋರಾಟ ಮತ್ತು ಬದುಕು – ಮುನಿಕೃಷ್ಣ ಸಿ.

91 ದೇವರ ದಾಸಿಮಯ್ಯ – ಡಾ. ಭಾಗ್ಯಜ್ಯೋತಿ

ಸಂಶೋಧನೆ (Reserch)

93 ಸ್ನಾತಕ ವಿದ್ಯಾರ್ಥಿಗಳ ರಾಜಕೀಯ ಜಾಗೃತಿ : ಒಂದು ಅಧ್ಯಯನ – ಡಾ. ನಿರೀಕ್ಷಣ್‌ಸಿಂಗ್ ಗೌಗಿ ಎಸ್.ಕೆ.

99 ಪ್ರಾಚೀನ ಕರ್ನಾಟಕಕ್ಕೆ ಹೊರನಾಡಿನ ವರ್ತಕರ ಕೊಡುಗೆಗಳು ಒಂದು ಅಧ್ಯಯನ – ಡಾ. ನಾಗಮ್ಮ ಹೆಚ್.ಎನ್.

102 ಕರ್ನಾಟಕದ ಪರಿಸರ ಸಂವೇದಿ ಪ್ರದೇಶಗಳಲ್ಲಿ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಸಂಘರ್ಷ : ಒಂದು ವಿಶ್ಲೇಷಣಾತ್ಮಕ ಅಧ್ಯಯನ (2025–26) – ಬಸವರಾಜ ಕುರಗುಂದ, ಪ್ರೊ. ವೈ. ಎಸ್. ಬಲವಂತಗೋಳ

108 ಗಜೇಂದ್ರಗಡದಲ್ಲಿನ ವಲಸೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ – ಡಾ. ಪ್ರಶಾಂತ ಹುಲಕುಂದ

111 ಕಲ್ಯಾಣ ಕರ್ನಾಟಕದ ಪ್ರಸ್ತುತ ಶೈಕ್ಷಣಿಕ ನೀತಿ : ಆಡಳಿತದ ಪಾತ್ರ ಮತ್ತು ಕೊಡುಗೆಗಳ ವಿಶ್ಲೇಷಣಾತ್ಮಕ ಅಧ್ಯಯನ – ಡಾ. ಸಿದ್ಧಲಿಂಗಪ್ಪ ಎಸ್. ದೇಶಮುಖ್

115 ಸಂಶೋಧನಾ ಪದವೀಧರರು ಸಂಶೋಧನಾ ಸಮಯದಲ್ಲಿ ಮಾರ್ಗದರ್ಶಕರ ಮಾರ್ಗದರ್ಶನದ ಕುರಿತು ಹೊಂದಿದ ಅಭಿಪ್ರಾಯದ ವಿಶ್ಲೇಷಣಾತ್ಮಕ ಅಧ್ಯಯನ – ಡಾ. ರಂಗಸ್ವಾಮಿ ಆಯ್.ಜೆ.

ಶಿಕ್ಷಣ ತಜ್ಞರು (Education Thinkers)

121 ರೂಬಲ್ ನಾಗಿ – ಡಾ. ಗೀತಾ ಕೊಣ್ಣೂರ

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.

ದೂರವಾಣಿ : 08372–200527

e-mail : vidyanidhiprakashana@gmail.com.



ವಿದ್ಯಾ ಪ್ರಕಾಶನ®

ಜೆ.ಟಿ.ಮಠ ರೋಡ, ಗದಗ - 582101

e-mail: vidyaprakashana26@gmail.com

www.shikshansoudha.in

ಶಿಕ್ಷಣ ಸೌಧ

ಸಂಪಾದಕೀಯ

ಶಿಕ್ಷಕರ ದಿನಾಚರಣೆ 2026
ಜ್ಞಾನ, ಮೌಲ್ಯ ಮತ್ತು ಭವಿಷ್ಯದ ನಿರ್ಮಾತೃಗಳು

ಭಾರತದಲ್ಲಿ ಪ್ರತಿವರ್ಷ ಸಪ್ಟಂಬರ್ 5ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಈ ದಿನವು ಭಾರತದ ಮಾಜಿ ರಾಷ್ಟ್ರಪತಿ ಹಾಗೂ ಶ್ರೇಷ್ಠ ಶಿಕ್ಷಣ ತಜ್ಞರಾದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವನ್ನು ಸ್ಮರಿಸುತ್ತದೆ. ಶಿಕ್ಷಕರು ಕೇವಲ ಪಾಠ ಬೋಧಿಸುವವರಲ್ಲ, ಅವರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವ ಮಾರ್ಗದರ್ಶಕರು. ವಿದ್ಯಾರ್ಥಿಗಳಲ್ಲಿ ಜ್ಞಾನ, ಕೌಶಲ್ಯ, ಮೌಲ್ಯ ಮತ್ತು ಮಾನವೀಯತೆಯನ್ನು ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ವೇಗವಾಗಿ ಬದಲಾಗುತ್ತಿರುವ ಇಂದಿನ ತಂತ್ರಜ್ಞಾನ ಯುಗದಲ್ಲಿ ಶಿಕ್ಷಕರ ಜವಾಬ್ದಾರಿ ಇನ್ನಷ್ಟು ವಿಸ್ತರಿಸಿದೆ.

ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲ್ ತಂತ್ರಜ್ಞಾನಗಳು ಶಿಕ್ಷಣದ ಸ್ವರೂಪವನ್ನು ಬದಲಾಯಿಸುತ್ತಿವೆ. ಆದರೆ ತಂತ್ರಜ್ಞಾನವು ಶಿಕ್ಷಕರ ಸ್ಥಾನವನ್ನು ಸಂಪೂರ್ಣವಾಗಿ ಭರಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳಲ್ಲಿ ಚಿಂತನೆ, ಸೃಜನಶೀಲತೆ, ನೈತಿಕತೆ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವುದು ಶಿಕ್ಷಕರ ವಿಶಿಷ್ಟ ಕೊಡುಗೆಯಾಗಿದೆ. ಪ್ರತಿ ವಿದ್ಯಾರ್ಥಿಯ ವೈಯಕ್ತಿಕ ಸಾಮರ್ಥ್ಯ ಮತ್ತು ಕಲಿಕೆಯ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು ಉತ್ತಮ ಶಿಕ್ಷಕರ ಗುಣವಾಗಿದೆ. ಶಿಕ್ಷಣವು ಪರೀಕ್ಷೆ ಮತ್ತು ಅಂಕಗಳಿಗೆ ಮಾತ್ರ ಸೀಮಿತವಾಗದೆ ಜೀವನ ಕೌಶಲ್ಯಗಳ ಅಭಿವೃದ್ಧಿಗೆ ದಾರಿ ಮಾಡಿಕೊಡಬೇಕು. ಶಿಕ್ಷಕರು ಪ್ರಶ್ನಿಸುವ, ಅನ್ವೇಷಿಸುವ ಮತ್ತು ಹೊಸದನ್ನು ಕಲಿಯುವ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಸಮಾವೇಶಿತ ಶಿಕ್ಷಣದ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಗೂ ಸಮಾನ ಅವಕಾಶಗಳನ್ನು ಒದಗಿಸುವುದು ಅಗತ್ಯವಾಗಿದೆ.

ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿ ಗುಣಮಟ್ಟದ ಶಿಕ್ಷಣಕ್ಕೆ ಪ್ರಮುಖ ಆಧಾರವಾಗಿದೆ. ಸಮಾಜದ ಬದಲಾವಣೆಗೆ ಅನುಗುಣವಾಗಿ ಶಿಕ್ಷಕರು ತಮ್ಮ ಜ್ಞಾನ ಮತ್ತು ಬೋಧನಾ ವಿಧಾನಗಳನ್ನು ನಿರಂತರವಾಗಿ ನವೀಕರಿಸಿಕೊಳ್ಳಬೇಕು. ಪೋಷಕರು, ಶಿಕ್ಷಕರು ಮತ್ತು ಸಮುದಾಯದ ಸಹಕಾರವು ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಶಿಕ್ಷಕರಿಗೆ ಗೌರವ ನೀಡುವುದು ಕೇವಲ ಒಂದು ದಿನದ ಆಚರಣೆಯಾಗದೆ ನಿರಂತರ ಸಾಮಾಜಿಕ ಬದ್ಧತೆಯಾಗಬೇಕು.

ಉತ್ತಮ ಶಿಕ್ಷಕರಿಗೆ ಸೂಕ್ತ ಮಾನ್ಯತೆ, ಬೆಂಬಲ ಮತ್ತು ಕಾರ್ಯಪರಿಸರವನ್ನು ಒದಗಿಸುವುದು ಸಮಾಜದ ಜವಾಬ್ದಾರಿಯಾಗಿದೆ. ಇಂದಿನ ಶಿಕ್ಷಕರು ನಾಳಿನ ವಿಜ್ಞಾನಿಗಳು, ನಾಯಕರು, ನಾಗರಿಕರು ಮತ್ತು ಸಮಾಜ ನಿರ್ಮಾತೃಗಳನ್ನು ರೂಪಿಸುತ್ತಿದ್ದಾರೆ. ಆದ್ದರಿಂದ ಶಿಕ್ಷಕರ ದಿನಾಚರಣೆ ಶಿಕ್ಷಕರ ಸೇವೆ ಮತ್ತು ಸಮರ್ಪಣೆಯನ್ನು ಗೌರವಿಸುವ ಮಹತ್ವದ ಸಂದರ್ಭವಾಗಿದೆ.

"ಶಿಕ್ಷಕರನ್ನು ಗೌರವಿಸುವುದು ಎಂದರೆ ಜ್ಞಾನವನ್ನು, ಶಿಕ್ಷಣವನ್ನು ಮತ್ತು ನಮ್ಮ ಭವಿಷ್ಯವನ್ನು ಗೌರವಿಸುವುದಾಗಿದೆ".

– ಡಾ. ಎಸ್.ಬಿ. ಯಾದವಾಡ
ಸಂಪಾದಕರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶಾಲಾ–ಕಾಲೇಜುಗಳಲ್ಲಿ ರಂಗ ಶಿಕ್ಷಣ ಕೇಂದ್ರದ ಅಗತ್ಯತೆ ಮತ್ತು ನಟನೆಯ ಪಾಠಗಳು

✍ **ಡಾ. ವೆಂಕಟೇಶಯ್ಯ ಕೆ.ಎಂ.** ಕನ್ನಡ ಸಹಾಯಕ ಪ್ರಾಧ್ಯಾಪಕರು, ಆಚಾರ್ಯ ಪಾಠ ಶಾಲಾ ಕಲೆ ಮತ್ತು ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು ನರಸಿಂಹರಾಜ ಕಾಲೋನಿ, ಬೆಂಗಳೂರು.

ಸ್ವಾತಂತ್ರ್ಯ ಪೂರ್ವದಲ್ಲೇ ಶಿಕ್ಷಣದ ಮಹತ್ವವನ್ನು ಅರಿತು ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಿ, ಅಂದಿನಿಂದ ಇಂದಿನವರೆಗೂ ಸುಮಾರು ವರ್ಷಗಳಿಂದ ನಿರಂತರವಾಗಿ ಶೈಕ್ಷಣಿಕ ಸೇವೆಯನ್ನು ನಡೆಸುತ್ತಾ, ಸುವರ್ಣ ಮಹೋತ್ಸವದತ್ತ ದಾಪುಗಾಲು ಇಡುತ್ತಿರುವ ಶಿಕ್ಷಣ ದತ್ತಿ ಸಂಸ್ಥೆಗಳಿಗೆ ಅಭಿನಂದನೀಯ.

ಪ್ರತಿ ನಾಗರೀಕನಿಗೂ ವಿದ್ಯೆ ಆತನ ಬದಕನ್ನು ರೂಪಿಸುವ ಮಾಧ್ಯಮ.ಒಮ್ಮೆ ಆತ ಪಡೆದ ಶಿಕ್ಷಣ ಅವನು ಸಾಯುವವರೆಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅವನ ಮೇಲೆ ಪ್ರಭಾವ ಬೀರುತ್ತಿರುತ್ತದೆ.ಆದ ಕಾರಣ ವಿದ್ಯೆ ನೀಡುವ ಶಿಕ್ಷಣ ಸಂಸ್ಥೆಗಳು ಕಾಲಕಾಲಕ್ಕೆ ಶಿಕ್ಷಣ ವಿಷಯಗಳಲ್ಲಿ ಅನೇಕ ಹೊಸ ಹೊಸ ವಿಷಯಗಳನ್ನು ಸೇರ್ಪಡೆ ಮಾಡುವುದು ಅಗತ್ಯವಾದುದು.ಶಿಕ್ಷಣವೆನ್ನುವುದು ಆಯಾಯ ಕಾಲದ ಆದಾಯದ ಮೂಲವನ್ನು ಹುಡುಕಿಕೊಡುವುದರ ಜೊತೆಗೆ ಬದುಕನ್ನು ಎಲ್ಲಾ ರೀತಿಯಲ್ಲಿಯೂ ಪರಿಪೂರ್ಣವನ್ನಾಗಿಸುವ ಮಾಧ್ಯಮವಾಗಬೇಕಾಗಿದೆ. ಈ ಸಾಲಿನಲ್ಲಿ ಸರ್ಕಾರ, ಸಾರ್ವಜನಿಕ, ಖಾಸಗಿ ಶಿಕ್ಷಣ ಸಂಸ್ಥೆಗಳು ಹುಡುಕಾಟಗಳನ್ನು ನಡೆಸುತ್ತಿವೆ. ಹಾಗಾಗಿ ಈ ನಿಟ್ಟಿನಲ್ಲಿ ಎಲ್ಲಾ ಕಾರ್ಯಗಳನ್ನು ಮಾಡುವ ಶಕ್ತಿ ಕಲಾಪ್ರಕಾರಗಳಿವೆ. ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಜೊತೆಗೆ ಹುಟ್ಟಿ ಬೆಳೆಯುವ ಭಾರತೀಯ ನಾಗರೀಕ ತನ್ನ ಜೀವನವನ್ನು ಪರಿಪೂರ್ಣ ಮಾಡಿಕೊಳ್ಳುವುದು ಸಹ, ಕಲಾಪ್ರಕಾರಗಳನ್ನು ಬದುಕಿನ ಅವಿಭಾಜ್ಯಅಂಗಗಳಾನ್ನಾಗಿಸಿ ಕೊಳ್ಳುವುದರಿಂದಲೇ ಎಂದರೆ ತಪ್ಪಾಗಲಾರದು.ಆದ ಕಾರಣ ಕಲೆ ಸಂಸ್ಕೃತಿ ಪರಂಪರೆಗಳು ಭಾರತೀಯ ಸಮಾಜದ ಜ್ಞಾನದ ಕಣಜಗಳೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.ಇಂತಹ ಜ್ಞಾನ ಶಾಖೆಗಳಲ್ಲಿ ಅಡಗಿರುವ ಶಕ್ತಿಗಳನ್ನು ಶೈಕ್ಷಣಿಕ ವ್ಯವಸ್ಥೆಯ ವಿಷಯವನ್ನಾಗಿಸುವ ಮೂಲಕ ವಿದ್ಯಾರ್ಥಿಗಳ ಭವಿಷ್ಯವನ್ನು ಉಜ್ವಲಗೊಳಿಸಬಹುದೆಂಬುದು ನಮ್ಮೆಲ್ಲ ಒಟ್ಟಾರೆ ಅಭಿಪ್ರಾಯವಾಗಿದೆ. ಆದ್ದರಿಂದ ಎಲ್ಲಾ ವಿದ್ಯಾ ಸಂಸ್ಥೆಗಳು ಕಲೆ, ಸಂಸ್ಕೃತಿ ಪರಂಪರೆಗಳನ್ನು ಶಿಕ್ಷಣದ ಭಾಗವಾಗಿಸುವ ಸಲುವಾಗಿ ಸರ್ಟಿಫಿಕೇಟ್, ಡಿಪ್ಲೋಮಾ, ಪದವಿಪೂರ್ವ ಮತ್ತು ಪದವಿ ಹಂತದಲ್ಲಿಯೇ ಕಲೆ ಸಂಸ್ಕೃತಿ ಪರಂಪರೆಗಳನ್ನು ಅಧ್ಯಯನದ ವಿಷಯಗಳನ್ನಾಗಿ ಪರಿಚಯಿಸುವ ಸಲುವಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಶಿಕ್ಷಣ ಕೇಂದ್ರ ಅಥವಾ ರಂಗ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಬೇಕಾಗಿದೆ. ಕಳೆದ ಸುಮಾರು ವರ್ಷಗಳಿಂದ ಹಲವು ಸಂಸ್ಥೆಗಳು ಸಾಂಪ್ರದಾಯಿಕ ಶಿಕ್ಷಣವನ್ನು ನೀಡುವುದರ ಮೂಲಕ ರಾಷ್ಟ್ರವನ್ನು ಕಟ್ಟುವ ಕಾಯಕದಲ್ಲಿದೆ. ಹಾಗೆಯೇ ಸಾಂಸ್ಕೃತಿಕ ಚಟುವಟಿಕೆಯನ್ನು ಸಹ, ಪಠ್ಯೇತರ ಚಟುವಟಿಕೆಯಾಗಿ ವಿರಳವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಆದರೆ ಬದಲಾದ ಕಾಲಕ್ಕೆ ಅನುಗುಣವಾಗಿ ಶೈಕ್ಷಣಿಕ ವಿಷಯಗಳಲ್ಲಿ ಸಾಂಸ್ಕೃತಿಕತೆಯನ್ನು ಅಳವಡಿಸಿಕೊಳ್ಳುವ ಅಗತ್ಯತೆ ಇಂದು ಎಂದೆಂದಿಗಿಂತಲೂ ಮುಖ್ಯವಾಗಿದೆ.ಏಕೆಂದರೆ ನಮ್ಮ ದೇಶವನ್ನು ಕಟ್ಟಿದ ನಾಯಕರು ಶೈಕ್ಷಣಿಕ ವಲಯಕ್ಕೆ ಹೆಚ್ಚಿನ ಆಧ್ಯತೆಯನ್ನು ನೀಡಿದ್ದರ ಪರಿಣಾಮವಾಗಿ ಇಂದು ಶಿಕ್ಷಣವಲಯ ಸಾಕಷ್ಟು ವಿಶಾಲವಾದ ಬೆಳವಣಿಗೆಯನ್ನು ಸಾಧಿಸಿದೆ.ಆದರೆ ಇದಿಷ್ಟೇ ಸಾಲದು.ಏಕೆಂದರೆ ಭಾರತ ದೇಶ ಕಲೆ, ಸಂಸ್ಕೃತಿ ಪರಂಪರೆಗಳ ನಾಡು.ಇಲ್ಲಿ ಅನೇಕ ವೈವಿಧ್ಯಮಯ ಜೀವನ ಶೈಲಿ ಇದೆ.ಇವೆಲ್ಲವನ್ನು ಹೊರತುಪಡಿಸಿದ ಶಿಕ್ಷಣ ವ್ಯವಸ್ಥೆ ನಮ್ಮಲ್ಲಿ ಇದೆ.ಆದರೆ ದೇಶವನ್ನು ಕಟ್ಟುವಾಗ ಸಮೂಹ ಕಲಾ ಪರಂಪರೆಯನ್ನು ಕಡೆಗಣಿಸಿದರೆ ಪರಿಪೂರ್ಣ ದೇಶ ಮತ್ತು ಸಮಾಜವನ್ನು ನೀರಿಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರದರ್ಶನ ಕಲಾ ಸಂಸ್ಕೃತಿಗಳನ್ನು ಶಿಕ್ಷಣದ ಭಾಗವಾಗಿಸುವ ಸುಸಮಯ ಒದಗಿಬಂದಿದೆ. ಈ ನಿಟ್ಟಿನಲ್ಲಿ ಸರ್ಕಾರ ಸೇರಿದಂತೆ ಕೆಲವು ಖಾಸಗಿ ಶಾಲಾ ಕಾಲೇಜುಗಳು ಕ್ರಮಕೈಗೊಂಡು ಇಂತಹ ಕಲಾ ಪರಂಪರೆಗಳನ್ನು ಶಿಕ್ಷಣದ ಭಾಗವಾಗಿಸುತ್ತಿವೆ. ಇದೇ ಮಾದರಿಯನ್ನು ನಾಡಿನ ಎಲ್ಲಾ ಶೈಕ್ಷಣಿಕ ಸಂಸ್ಥೆಗಳುಅಳವಡಿಸಿಕೊಳ್ಳಲು ಬಯಸುತ್ತಿವೆ. ಆದ ಕಾರಣ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲೂ ಪ್ರತ್ಯೇಕವಾದ **ಸಾಂಸ್ಕೃತಿಕ ಶಿಕ್ಷಣ ಕೇಂದ್ರ** ಅಥವಾ **ರಂಗ ಶಿಕ್ಷಣ ಕೇಂದ್ರ** ಅಥವಾ **ಪ್ರದರ್ಶನ ಕಲಾಕೇಂದ್ರ**ವನ್ನು ಸ್ಥಾಪಿಸಿಕೊಳ್ಳುವುದು ಅತ್ಯಗತ್ಯ.

ಕಲೆ ವಿಲಾಸಕ್ಕಲ್ಲ, ವಿಕಾಸಕ್ಕೆ ಎಂಬಂತೆ ರಂಗ ಶಿಕ್ಷಣ ಕೇಂದ್ರ ಮೂಲಕ ಶೈಕ್ಷಣಿಕ ವರ್ಷದ ಕಾರ್ಯಚಟುವಟಿಕೆಗಳ ರೂಪುರೇಷೆಗಳನ್ನು ಈ ಪ್ರಕಾರವಾಗಿ ಅಳವಡಿಸಿಕೊಳ್ಳಬಹುದು.

1. ಅಂತರ ತರಗತಿಯ ಹಾಗೂ ಅಂತರ ವರ್ಗೀಯ ಪದವಿ ವಿದ್ಯಾರ್ಥಿಗಳ ನಾಟಕೋತ್ಸವ (ಪ್ರತಿವರ್ಷಕ್ಕೊಮ್ಮೆ) : ಕಾಲೇಜಿನ ವಿದ್ಯಾರ್ಥಿಗಳಿಂದ ಪ್ರತಿ ವರ್ಷವು ಪ್ರತಿ ವಿಭಾಗವು ಒಬ್ಬೊಬ್ಬ ಅಧ್ಯಾಪಕರ ನಾಯಕತ್ವದಲ್ಲಿ ವಿದ್ಯಾರ್ಥಿಗಳ ತಂಡ ರಚನೆ ಮಾಡಬೇಕು. ಸುಮಾರು ಮುಕ್ಕಾಲು ಘಂಟೆಯ ಕನ್ನಡ ನಾಟಕವನ್ನು ವಿದ್ಯಾರ್ಥಿಗಳಿಂದಲೇ ಸಿದ್ದಪಡಿಸಲಾಗುವುದು. ಇದು ಪಾಠ ಪ್ರವಚನಗಳಿಗೆ ಯಾವುದೇ ಕೊರತೆಯಾಗದಂತೆ ಜೊತೆ ಜೊತೆಯಲ್ಲಿಯೇ ಶೈಕ್ಷಣಿಕ ವರ್ಷದ ಪ್ರಾರಂಭ ಅಥವಾ ದ್ವೀತಿಯ ಸೆಮಿಸ್ಟರ್ ಆರಂಭದಲ್ಲಿಯೇ ನಾಟಕವನ್ನು ಸಿದ್ದಪಡಿಸಲಾಗಿರುತ್ತದೆ. ವಿದ್ಯಾರ್ಥಿಗಳ ಸೃಜನಾತ್ಮಕವಾಗಿ ಸುಪ್ತವಾಗಿರುವ ಪ್ರಜ್ಞೆಯ ಪ್ರತಿಭಾನ್ವೇಷಣೆಯ ಅನಾವರಣಗೊಳ್ಳುವಂತೆ ಮಾಡಬಹುದು.

ನಾಟಕಗಳ ಆಯ್ಕೆಯನ್ನು ಪಠ್ಯ ಆಧಾರಿತವಾಗಿಯೇ ಇರುತ್ತವೆ. ಕಾವ್ಯ, ಕಥೆ, ಕಾದಂಬರಿ, ನಾಟಕಗಳನ್ನು ಪ್ರದರ್ಶನ ಯೋಗ್ಯಕ್ಕೆ ಬಳಸಿಕೊಳ್ಳಬಹುದು. ಸಾಹಿತ್ಯೇತರ ಪಠ್ಯಗಳನ್ನು ಕೂಡ ಆಯ್ಕೆ ಮಾಡಬಹುದು. ಉದಾಹರಣೆಯಾಗಿ ವಾಣಿಜ್ಯ ಕಾಲೇಜುವಾಗಿರುವುದ ರಿಂದ ವ್ಯಾಪಾರ– ವಹಿವಾಟು ಮುಂತಾದವುಗಳ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಮೂಲಕವೇ ನಾಟಕಗಳನ್ನು ತಯಾರು ಮಾಡಬಹುದು.

ಪ್ರಾಂಶುಪಾಲರ ಮಾರ್ಗದರ್ಶನದಲ್ಲಿ ಈ ಮೇಲ್ಕಂಡ ಕಾರ್ಯಯೋಜನೆಯ ರೂಪುರೇಷೆಗಳ ಜವಾಬ್ದಾರಿಯನ್ನು ಭಾಷಾ ವಿಭಾಗವು ವಹಿಸಿಕೊಳ್ಳುತ್ತದೆ. ಕನ್ನಡ ಭಾಷಾ ಅಭಿವೃದ್ಧಿಯ ಕಡೆಗೆ ವಿದ್ಯಾರ್ಥಿಗಳನ್ನು ಕರೆತಂದು ಉತ್ತೇಜಿಸಬಹುದು. ಹಾಗೆಯೇ ಪ್ರವೇಶಾತಿಯನ್ನು ಕೂಡ ಹೆಚ್ಚಿಸಬಹುದು. ಒಟ್ಟಿನಲ್ಲಿ ವಿದ್ಯಾರ್ಥಿಗಳ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸರ್ವತೋಮುಖ ಬೆಳವಣಿಗೆಗೆ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಓದಿನ ಆಸಕ್ತಿಯನ್ನು ಹೆಚ್ಚಿಸುವತ್ತ ಈ ನಾಟಕೋತ್ಸವವು ಕಾರ್ಯ ನಿರ್ವಹಿಸುತ್ತದೆಂದು ಹೇಳಬಹುದು.

2. ನಾಡ ಹಾಗೂ ರಾಷ್ಟ್ರೀಯ ಹಬ್ಬಗಳು ಮತ್ತು ಕಾಲೇಜು ಉತ್ಸವಗಳಿಗೆ ಸಾಂಸ್ಕೃತಿಕ ಕಲೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ದಪಡಿಸುವುದು : ಕನ್ನಡ ರಾಜ್ಯೋತ್ಸವ, ಗಣರಾಜ್ಯೋತ್ಸವ, ಸ್ವಾತಂತ್ರ್ಯ ಆಚರಣೆ, ಗಾಂಧಿಜಯಂತಿ, ಅಂಬೇಡ್ಕರ್, ವಿವೇಕಾನಂದ, ಡಾ. ಸರ್ವೆಪಲ್ಲಿ ರಾಧಕೃಷ್ಣ ಮುಂತಾದ ರಾಷ್ಟ್ರನಾಯಕರ/ಸಾಧಕರ ಜಂಯಂತಿ ಉತ್ಸವಗಳನ್ನು ಮಾಡಲು ಈ ಸಾಂಸ್ಕೃತಿಕ ಕೇಂದ್ರದಿಂದಲೇ ತಯಾರುಮಾಡುವುದು.ವರ್ಷವಿಡೀ ಕಾಲೇಜಿನ ಉತ್ಸವಗಳಿಗೆ ವಿದ್ಯಾರ್ಥಿಗಳನ್ನು ಅಣಿಗೊಳಿಸಲಾಗುತ್ತದೆ.

3. ಎನ್.ಸಿ.ಸಿ., ವೈಆರ್‌ಸಿ. ಹಾಗೂ ಎನ್.ಎಸ್.ಎಸ್. ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪೂರ್ವಯೋಜನೆಗಳನ್ನು ಸಿದ್ದಪಡಿಸುವುದು : ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಶಿಕ್ಷಣ, ಆರೋಗ್ಯ, ಕುಟಂಬ, ರಾಷ್ಟ್ರಪ್ರೇಮ ಮುಂತಾದವುಗಳ ಬೀದಿನಾಟಕಗಳನ್ನು ರೂಪಿಸಲು ಅಥವಾ ಶಿಸ್ತು ಕ್ರಮಗಳ ಅಳವಡಿಕೆಯ ಕಾರ್ಯಗಾರ, ಉದ್ಯೋಗ ತರಬೇತಿ ಕಾರ್ಯಕ್ರಮ, ಹೀಗೆ ಮುಂತಾದ ಹಲವಾರು ಶಿಸ್ತು–ಬದ್ದ ಕ್ರಮ–ಯೋಜನೆಗಳನ್ನು ಈ ಕೇಂದ್ರದಿಂದಲೇ ತರಬೇತುಗೊಳಿಸಲಾಗುತ್ತದೆ.

4. ವಿಶೇಷ ಉಪನ್ಯಾಸ ಮಾಲಿಕೆಗಳು ಮತ್ತು ಸಾಂಸ್ಕೃತಿಕ ಚಿಂತನಾ ಮಾಲೆ ಹಾಗೂ ಸಾಹಿತ್ಯ ಕೃಷಿ ಕಾರ್ಯಗಾರಗಳು (ಸಾಹಿತಿಯ ಜೀವನ ದರ್ಶನ) ಕುರಿತು ಕಾರ್ಯ ಚಟುವಟಿಗಳು : ಇಂತಹ ಕಾರ್ಯಕ್ರಮಗಳು ತಿಂಗಳಿಗೊಂದರಂತೆ ವಿಶೇಷ ಉಪನ್ಯಾಸವನ್ನು ಬೋಧಕ/ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ತುಂಬ ಉಪಯುಕ್ತ ಇದು ನಿಗದಿತ ದಿನಾಂಕವನ್ನು ಗೊತ್ತುಪಡಿಸಿ ವರ್ಷದಾದ್ಯಂತ ಅಂದರೆ ತಿಂಗಳಿಗೊಂದು ಎಂಬಂತೆ 12 ಚಿಂತನಾ ಕಾರ್ಯಕ್ರಮವನ್ನು ಮಾಡುವುದು. ವಿಶೇಷ ಪರಿಣಿತ ಸಂಪನ್ಮೂಲ ವ್ಯಕ್ತಿಗಳಿಂದ ಒಂದು ಗಂಟೆಗಳ ಅವಧಿಯಲ್ಲಿ ಮುಗಿಸಬೇಕು.ವಿಶೇಷವಾಗಿ ಶಿಕ್ಷಕರಿಗೆ ತರಬೇತಿ ಕಾರ್ಯಗಾರಗಳನ್ನು ಮಾಡಬಹುದು.ಯುಜಿಸಿ ನಿಯಮದ ಪ್ರಕಾರ ಕನಿಷ್ಠ 2–3 ಉಪನ್ಯಾಸಗಳ ಅಭಿವೃದ್ಧಿ ಹಾಗೂ ಪರಿಷ್ಕರಿಸುವ ಕಾರ್ಯಕ್ರಮವನ್ನು ಮಾಡಬಹುದು.ಇಂತಹ ಕಾರ್ಯಕ್ರಮಗಳ ಉಪನ್ಯಾಸ ಕಾರ್ಯಾಗಾರ, ಶಿಬಿರ, ಕಮ್ಮಟಗಳಲ್ಲಿ ನಡೆದ ವಿಚಾರಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಇದರಿಂದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗುವುದು.

5. ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಿಗೆ ತರಬೇತಿ ಶಿಬಿರ : ಪ್ರತಿ ವರ್ಷ ನಡೆಯುವ ಈ ಕೆಳಗಿನ ಸ್ಪರ್ಧೆಗಳಿಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಸದುದ್ದೇಶದಿಂದ ಸಿದ್ದಪಡಿಸಲಾಗುತ್ತದೆ.

ಅ. ಅಂತರ ಕಾಲೇಜು ರಂಗ ಸ್ಪರ್ಧೆಗಳು (ಕರ್ನಾಟಕ ಅಕಾಡೆಮಿ, ಭಾರತ ಯಾತ್ರ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ–ಆಯೋಜನೆ)

ಆ. ಬೆಂಗಳೂರು ಜಿಲ್ಲಾ ನಾಟಕೋತ್ಸವ (ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಜಾನಪದ ಪರಿಷತ್ತು–ಆಯೋಜನೆ)

ಇ. Theatre Olympics - NSD - ನವದೆಹಲಿ

ಈ. South Zone youth Festivals (Association Indian University)

ಉ. ರಾಷ್ಟ್ರೀಯ ನಾಟಕೋತ್ಸವ (ಸಾಣೇಹಳ್ಳಿ – ಹೊಸದುರ್ಗ)

ಊ. ಜಿಲ್ಲಾ ಮಟ್ಟದ ಕಾಲೇಜು ರಂಗೋತ್ಸವ

ಋ. ವಿಶ್ವವಿದ್ಯಾಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳು

ಎ. ಜನಪದ ಉತ್ಸವ

ಏ. ಬೆಂಗಳೂರು ವಿಭಾಗ ಮಟ್ಟದ ಯುವಜನ ಮೇಳ

ಐ. ಯುವ ಜಾನಪದ ಉತ್ಸವ

ಒ. ಕನ್ನಡ ರಂಗ ನಾಟಕೋತ್ಸವ

ಓ. ವಿದ್ಯಾರ್ಥಿ ನಾಟಕೋತ್ಸವ–ಬಳ್ಳಾರಿ

ಔ. ರಂಗಾಯಣ ನಾಟಕೋತ್ಸವ

ಅಂ. ವಿವಿಧ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳು

ಹೀಗೆ ಮುಂತಾದ ಪ್ರಸ್ತುತ ಚಾಲ್ತಿಯಲ್ಲಿರುವ ಸ್ಪರ್ಧೆಗಳಿಗೆ ಈ ಕೇಂದ್ರದ ಮೂಲಕ ತಯಾರು ಮಾಡುವುದು. ಈ ಕಾಲೇಜಿನಿಂದ ಪ್ರದರ್ಶನಕ್ಕೆ ಹೋದ ವಿದ್ಯಾರ್ಥಿಗಳು ಕಾಲೇಜಿನ ಗೌರವವನ್ನು ಹೆಚ್ಚಿಸಿರುತ್ತಾರೆ, ಹಾಗೂ ಕಾಲೇಜಿನ ಕೀರ್ತಿ, ಹೆಸರು, ರಾಷ್ಟ್ರ ಹಾಗೂ ನಾಡಿನಾದ್ಯಾಂತ ಕೀರ್ತಿಯನ್ನು ತಂದು ತಮ್ಮ ಆತ್ಮಸ್ಥೈರ್ಯವನ್ನು ಹೆಚ್ಚಿಸಿಕೊಳ್ಳುತ್ತಾರೆ.

6. ಸಿನಿಮಾ ಕಾರ್ಯಾಗಾರ : ಕಲಾತ್ಮಕ, ಸಾಮಾಜಿಕ, ಪೌರಾಣಿಕ, ಇತಿಹಾಸ, ಸಾಧಕರು, ಆದರ್ಶವ್ಯಕ್ತಿ ಪರಿಚಯ, ಪತ್ಯ ಆಧಾರಿತ ವಿಷಯ ವಸ್ತುಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ವ್ಯಕ್ತಿಗಳ ಅಸಾಮಾನ್ಯರಾದವರ ಕುರಿತ ವ್ಯಕ್ತಿಚಿತ್ರಗಳನ್ನು ವಿದ್ಯಾರ್ಥಿಗಳಿಗೆ ತೋರಿಸುವ ಮೂಲಕ ವ್ಯಾಸಂಗವನ್ನು ಆಸಕ್ತಿದಾಯಕವನ್ನಾಗಿಸುವುದು.

7. ವಿಶೇಷ ಅನುದಾನ ಬಳಕೆ : ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಓ.ಬಿ.ಸಿ ವಿದ್ಯಾರ್ಥಿಗಳಿಗೆ ವಿಶೇಷ ಘಟಕದಡಿ ಸರ್ಕಾರದ ಉತ್ತೇಜಿತ ಕಾರ್ಯಕ್ರಮಗಳನ್ನು ಕಾಲೇಜಿನಲ್ಲಿ ಬಳಸಿಕೊಳ್ಳಬಹುದು. ಸರ್ಕಾರದ ಹಲವು ಇಲಾಖೆಗಳ ಶೈಕ್ಷಣಿಕ ಉಪಯುಕ್ತ ಸೌಲಭ್ಯಗಳನ್ನು ಕಾಲೇಜಿನ ವಿದ್ಯಾರ್ಥಿಗಳಿಗೆ ಅನುದಾನಗಳನ್ನು ಬಳಸಿಕೊಳ್ಳಲಾಗುತ್ತದೆ. ಹಲವಾರು ಸಂಘ ಸಂಸ್ಥೆಗಳು ಉಚಿತವಾಗಿ ಕಾರ್ಯಗಾರಗಳನ್ನು ಮಾಡುವ ಉದ್ದೇಶವನ್ನು ಇಂತಹ ಕೇಂದ್ರಗಳಿಂದ ಬಳಸಿಕೊಳ್ಳುವುದರಲ್ಲಿ ಸಫಲರಾಗುತ್ತಾರೆ. ಹಾಗೆಯೇ ಗಿರಿಜನ ಬುಡಕಟ್ಟು ಯೋಜನೆಗಳ ಪ್ರಯೋಜನವನ್ನು ಪಡೆಯಬಹುದು.

8. ಜನಪದ ಪ್ರದರ್ಶನ ಕಲೆಗಳ ಕಾರ್ಯಾಗಾರ : ಜನಪದ ಸಮೂಹ ಮಾಧ್ಯಮವಾಗಿ ಸಂಘಟಿತವಾಗಿದ್ದು, ಪಾಶ್ಚಾತ್ತೀಕರಣಕ್ಕೆ ಸೆಡ್ಡು ಹೊಡೆಯಲು ಅಥವಾ ವಿದೇಶಕ್ಕೆ ಮಾರು ಹೋಗುತ್ತಿರುವ ವಿದ್ಯಾರ್ಥಿಗಳನ್ನು ದೇಶಿಯ ಸಂಪ್ರದಾಯ ಕಲೆಗಳಾದ ಹಾಡು, ಕುಣಿತ, ಆಟ, ನೃತ್ಯಗಳನ್ನು ಈ ಕೇಂದ್ರದ ಮೂಲಕ ತರಬೇತುಗೊಳಿಸಬಹುದು. ಇದರಿಂದ ಹಳ್ಳಿ ಸೊಗಡನ್ನು ಉಳಿಸಬಹುದು.ಜಾನಪದ ವಾದ್ಯಗಳ ತರಬೇತಿ ಕಾರ್ಯಗಾರಗಳನ್ನು ಸಹ ಆಯೋಜಿಸಬಹುದಾಗಿದೆ.

9. ವಿಚಾರ ಸಂಕಿರಣಗಳು : ರಾಜ್ಯ, ರಾಷ್ಟ್ರ,ವಿಶ್ವವಿದ್ಯಾಲಯ, ಕಾಲೇಜು ಮಟ್ಟದ ವಿಚಾರ ಸಂಕಿರಣಗಳನ್ನು ಹಾಗೂ ಕಮ್ಮಟಗಳನ್ನು ಹಮ್ಮಿಕೊಳ್ಳಬಹುದು.

1. ಕ್ಯಾಂಪಸ್ ಕವಿಗೋಷ್ಠಿ
2. ಸ್ವರಚಿತ ಕವನವಾಚನ
3. ಲೇಖನ, ಪ್ರಬಂಧ ಮತ್ತು ನಾಟಕ ರಚನಾ ಕಾರ್ಯಗಾರ
4. ನಿರೂಪಣಾಗಾರರ ತರಬೇತಿ ಶಿಬಿರ
5. ಹಳಗನ್ನಡ ಓದುವುದು
6. ಗಮಕವಾಚನ ಕಲಿಕಾ ಕಾರ್ಯಗಾರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

7. ದಾಸಪದ ಕಲಿಯುವಿಕೆ
8. ತತ್ವಪದಗಳ ಕಲಿಕಾ ಕಾರ್ಯಗಾರ
9. ವಿವಿಧ ಜಯಂತಿಗಳ ವಿಚಾರ ಸಂಕಿರಣಗಳು.

– ಇನ್ನೂ ಮುಂತಾಗಿ ಆಯೋಜಿಸಬಹುದು.ಹಾಗೆಯೇ ಒಂದು ವರ್ಷಕ್ಕೆ ಕನಿಷ್ಟ 20 ವಿಚಾರ ಸಂಕಿರಣಗಳಿಂದ 20 ಪುಸ್ತಕಗಳನ್ನು ಪ್ರಕಟಿಸಬಹುದು.

10.ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸುವುದು : ಆಯಾ ಕಾಲೇಜುಗಳಲ್ಲಿ ರಂಗಮಂದಿರ ಇರುವುದರಿಂದ ಕಾಲೇಜಿನ ಗೌರವವನ್ನು ಹೆಚ್ಚಿಸಲು ಕಾಲೇಜಿನ ವತಿಯಿಂದಲೇ ನಾಟಕ, ಹಾಡು, ನೃತ್ಯ, ಭಾಷಣ, ಚಿತ್ರಬಿಡಿಸುವಿಕೆ, ಜಾಗೃತಿ ಕಾರ್ಯಕ್ರಮಗಳು ಮುಂತಾದವುಗಳನ್ನು ಏರ್ಪಡಿಸಬಹುದು.ಇದರಿಂದ ಹಲವಾರು ಕಾಲೇಜುಗಳು ತಮ್ಮ ತಮ್ಮ ಕಾಲೇಜಿಗೆ ಬರುವುದರಿಂದ ಇಲ್ಲಿನ ಕಾರ್ಯಚಟುವಟಿಕೆಗಳು ಅವರಿಗೆ ಪ್ರಭಾವ ಬೀರುತ್ತವೆ. ಹಾಗಾಗಿ ಇದರಿಂದ ಶೈಕ್ಷಣಿಕ ವರ್ಷದ ಪ್ರವೇಶಾತಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಕೂಡ ಹೆಚ್ಚಿಸಬಹುದು.

11. ಸರ್ಕಾರ ಹಾಗೂ ಖಾಸಗಿ ಸಂಘ ಸಂಸ್ಥೆಗಳ ಸುದುಪಯೋಗ :

1. ಕರ್ನಾಟಕ ಜಾನಪದ ಅಕಾಡೆಮಿ
2. ಕನ್ನಡ ಸಾಹಿತ್ಯ ಪರಿಷತ್ತು
3. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.
4. ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
5. ಕರ್ನಾಟಕ ಮಾಧ್ಯಮ ಅಕಾಡೆಮಿ
6. ಕರ್ನಾಟಕ ಚಲನಚಿತ್ರ ಅಕಾಡೆಮಿ, ವಾಣಿಜ್ಯ ಮಂಡಳಿ, ವಾರ್ತಾ ಇಲಾಖೆ
7. ಯುವ–ಜನ ಸೇವಾ ಮತ್ತು ಕ್ರೀಡಾ ಇಲಾಖೆ
8. ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತು
9. ಕನ್ನಡ ಮತ್ತು ಸಂಸ್ಕೃತಿ ಇಲಾಖೆ
10. ದಾಸ ಸಾಹಿತ್ಯ ಪರಿಷತ್ತು
11. ಕರ್ನಾಟಕ ಸಾಹಿತ್ಯ ಅಕಾಡೆಮಿ
12. ಕನ್ನಡ ಅಧ್ಯಯನ ಕೇಂದ್ರ–ಸೆಂಟ್ರಲ್ ವಿಶ್ವವಿದ್ಯಾಲಯ, ಬೆಂಗಳೂರು
13. ಕರ್ನಾಟಕ ಜನಪದ ಪರಿಷತ್ತು
14. ಜನಪದ ವಿಶ್ವವಿದ್ಯಾಲಯ–ಹಾವೇರಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ–ಹಾವೇರಿ
15. ಪ್ರದರ್ಶನ ಕಲಾವಿಭಾಗ–ಬೆಂಗಳೂರು ಜ್ಞಾನಭಾರತಿ ವಿಶ್ವವಿದ್ಯಾಲಯ,
16. ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ–ಮೈಸೂರು.
17. ಉರ್ದು ಆಕಾಡೆಮಿ 'ಗಜಲ್ ಕಾರ್ಯಗಾರ.

ಕಾಲೇಜು – ಕಾಲೇಜು ಸಹಯೋಗ, ವಿದೇಶಿ ವಿಶ್ವವಿದ್ಯಾಲಯ, ಟ್ರಸ್ಟ್‌ಗಳ ಸಹಯೋಗ, ಇನ್‌ಪೋಸಿಸ್‌ನ (ಸುಧಾಮೂರ್ತಿ), ವಿವಿಧ ಜಾಗತೀಕ ಸಂಸ್ಥೆ, ಕೈಗಾರಿಕೆಗಳಿಂದ ಹಲವಾರು ಪ್ರಯೋಜನಗಳನ್ನು ಪಡೆಯಬಹುದು.

12.ಸರ್ಟಿಫಿಕೇಟ್ ಕೋರ್ಸ್ ಡಿಪ್ಲೋಮೋ ಕೋರ್ಸ್‌ಗಳನ್ನು ಆರಂಭಿಸುವುದು : ಆರು ತಿಂಗಳು ಸರ್ಟಿಫಿಕೇಟ್ ಕೋರ್ಸ್ ಹಾಗೂ ಒಂದು ವರ್ಷದ ಡಿಪ್ಲೊಮೋ ತರಗತಿಗಳನ್ನು ಆರಂಭಿಸಬಹುದು. ವಾರಾಂತ್ಯ ಅಥವಾ ರಜಾದಿನಗಳಲ್ಲಿ ತರಗತಿಗಳನ್ನು ಮಾಡಬಹುದು.ಅನ್ಯ ಕಾಲೇಜಿನ ವಿದ್ಯಾರ್ಥಿಗಳಿಗೂ ಇದರ ಉಪಯುಕ್ತತೆಯನ್ನು ಒದಿಗಿಸಬಹುದು ರಂಗಭೂಮಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಮೈಸೂರು" ಅಥವಾ ಕರ್ನಾಟಕ "ಜಾನಪದ ವಿಶ್ವವಿದ್ಯಾಲಯ–ಹಾವೇರಿ" ವಿಶ್ವವಿದ್ಯಾಲಯಗಳಿಂದ ನೊಂದಾಯಿಸಿ ಕೊಂಡರೆ ಉಪಯುಕ್ತವಾಗುತ್ತದೆ.

ಪದವಿಯೊಡನೆ (ಬಿ.ಕಾಂ) ಈ ಸರ್ಟಿಫೀಕೇಟ್‌ನಿಂದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಹಾಗೂ ಪ್ರದರ್ಶನ ಕಲಾವಿಭಾಗ–ಬೆಂಗಳೂರು ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯ–ಹಾವೆರಿ, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ ಮುಂತಾದ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ತಮ್ಮ ಜೀವನದ ಸಾರ್ಥಕತೆಯನ್ನು ವಿದ್ಯಾರ್ಥಿಗಳು ಪಡೆಯಬಹುದಾಗಿದೆ.

13. ತರಗತಿಯ ಕೊಠಡಿಗಳಲ್ಲಿ ನಾಟಕದ ಬಳಕೆ : ನಾಟಕವು ವಿದ್ಯಾರ್ಥಿಗಳನ್ನು ಕಲಿಕೆ ಮತ್ತು ಕಲಿಕಾ ವಸ್ತು–ವಿಷಯಗಳೊಂದಿಗೆ ಜೋಡಿಸುವ ಪ್ರಬಲ ಶಕ್ತಿಶಾಲಿ ಉಪಕರಣವಾಗಿದೆ. ಕಲಿಕೆ ಎಂದರೆ ಏನು ಎಂಬುದು ನಮಗೆಗೊತ್ತಿದೆ.ಅದು ತರಗತಿಗಳಲ್ಲಿ ಜೀವಂತವಾಗಿ ಬೆರೆತು ಬೆಳೆಯುವ, ಅವರಲ್ಲಿ ಅನುಭವವನ್ನು ಉಂಟುಮಾಡುವ ಪ್ರಕ್ರಿಯೆಯನ್ನು ಒದಗಿಸುತ್ತದೆಂಬುದನ್ನು ಕಂಡುಕೊಳ್ಳಲಾಗಿದೆ. ಸ್ವಾಭಾವಿಕವಾಗಿಯೇ ಸಾಮಾಜಿಕ ಸಂಗತಿಗಳೊಂದಿಗೆ ವಿದ್ಯಾರ್ಥಿಗಳನ್ನು ಒಳಗೊಳ್ಳುವಂತೆ ಮಾಡುವುದರೊಂದಿಗೆ, ಆಲೋಚಿಸುವಂತೆ, ಮಾತನಾಡುವಂತೆ ಹಾಗೂ ಸಾಮಾನ್ಯ ವಸ್ತಗಳ ಮೇಲೆ ಕೈ ಚಳಕ ತೋರುವಂತೆ ಮಾಡುತ್ತದೆ. ಹೀಗೆ ನಾಟಕದ ಮೂಲಕ ಸಾಮಾಜಿಕ ಅನುಭವಗಳನ್ನು ಪಡೆಯುವ ಮಾನವನ ಮಾನಸಿಕ ಪೂರ್ವಸಿದ್ಧತಾ ಅಳವಡಿಕೆಯ ಪ್ರಯತ್ನದ ಆರಂಭದೊಂದಿಗೆ, ವಿದ್ಯಾರ್ಥಿಗಳು ವಾಸ್ತವಿಕ ಜ್ಞಾನ ಮತ್ತು ವಸ್ತು ವಿಷಯ ಪರಿಕಲ್ಪನೆಯ ಅನ್ವೇಷಣೆ ಮಾಡುವಂತಾಗುತ್ತಾರೆ.

14. ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ರಂಗತರಬೇತಿ ಕಾರ್ಯಾಗಾರ: ಪ್ರತಿಯೊಬ್ಬರು ಭೂಮಿಯ ನಾನಾ ಪಾತ್ರಗಳಾಗಿ ಬದುಕಿನಲ್ಲಿ ಅಭಿನಯಿಸುತ್ತಿರುತ್ತಾರೆ. (ಜಗತ್ತಿನ ನಾಟಕರತ್ನ) ಶೇಕ್ಸಪಿಯರ್ ಹೇಳಿದ ಹಾಗೆ– All the world is stage, MEN and women meainy playears. ಎಂಬಂತೆ ಶಿಕ್ಷಕರಿಗೂ ಹಾಗೂ ವಿದ್ಯಾರ್ಥಿಗಳಿಗೆ ಆಂಗಿಕ, ವಾಚಿಕ, ಸಾತ್ವಿಕ, ಆಹಾರ್ಯ ಕುರಿತಂತೆ ಧ್ವನಿಯ ಏರಿಳಿತ, ದೇಹ ಚಲನೆ, ಪಠ್ಯವಿವರಣೆ, ಪಾಠಗಳನ್ನು ನಾಟಕದ ಮೂಲಕ ವಿದ್ಯಾರ್ಥಿಗಳಿಗೆ ಬೋಧಿಸುವಂತೆ ನಾನಾ ರೀತಿಯ ರಂಗಭೂಮಿ ಕುರಿತ ವಿಚಾರಗಳನ್ನು ಪರಿಚಯಿಸಬಹುದು.

ಉಪನ್ಯಾಸಕರು ಸಹ ಕಲಾವಿದರೇ ಆಗಿರುತ್ತಾರೆ, ಹಾಗಾಗಿ ಅವರು ತರಗತಿಗಳಲ್ಲಿ ವಿದ್ಯಾರ್ಥಿಗಳ ಮುಂದೆ ಪಠ್ಯಗಳ ಮೂಲಕ ನಟಿಸಬೇಕಾಗುತ್ತದೆ.ಅವರಿಗೆ ಪಾಠ ಪ್ರವಚನಗಳ ಬಗ್ಗೆ ಆಲೋಚಿಸುವಂತೆ ಮಾಡಿ ಅಭಿವೃಧಿಯ ಕಡೆಗೆ ಮುಖಮಾಡುವ ರೀತಿಯಲ್ಲಿ ಕಾರ್ಯ ಗಾರಗಳನ್ನು ಆಯೋಜಿಸಬಹುದು.

15. ಪೋಷಕರ ಕಾರ್ಯಗಾರಗಳು : ವಿದ್ಯಾರ್ಥಿಗಳ ತಾಯಿ–ತಂದೆ ಹಾಗೂ ಪೋಷಕರಿಗೆ ಅವರ ಜವಾಬ್ದಾರಿಗಳನ್ನು ಮನವರಿಕೆ ಮಾಡುವುದು, ಮನೆಯ ಓದಿನಲ್ಲಿ ಪಾಲಕರ ಪಾತ್ರವೇನು ? ವಿದ್ಯಾರ್ಥಿಗಳ (ಮಕ್ಕಳ) ಮುಂದಿನ ಭವಿಷ್ಯವೇನು ? ಕೌಟುಂಭಿಕ ಸಮಸ್ಯೆಗಳಿಂದ ಮುಕ್ತರಾಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಕ್ಕಳನ್ನು ವಿದ್ಯಾಭ್ಯಾಸದ ಕಡೆ ಸೆಳೆಯುವುದು. ಯಾವ ವೃತ್ತಿ ಪರಕೋರ್ಸ್‌ಗಳು ಸ್ವರ್ಧಾತ್ಮಕ ಪರೀಕ್ಷೆಗಳು ಕುರಿತು ನಾನಾ ಕಾರ್ಯಕ್ರಮವನ್ನು ಆಯೋಜಿಸ ಬಹುದು. ಹೀಗೆ ಹೆತ್ತವರ ಮೂಲಭೂತ ಕರ್ತವ್ಯಗಳನ್ನು ಪೋಷಕರ ಹಾಗೂ ವಿದ್ಯಾರ್ಥಿಗಳ ಅವಗಾಹನೆಗೆ ತಂದು ಅವರಿಗೆ ಮನೆಯಲ್ಲಿಯೇ ವಿದ್ಯಾರ್ಥಿಗಳನ್ನು ಉತ್ತೇಜಿಸುವಂತೆ ಹಲವಾರು ಆಸಕ್ತಿ ಹುಟ್ಟುವಂತೆ ಮಾಡಬಹುದು.

16. **ರಂಗ ಶಿಕ್ಷಣ ಕೇಂದ್ರಗಳನ್ನು ಹೊಂದಿರುವ ಬೆಂಗಳೂರು ನಗರದ ಬಹುತೇಕ ಕಾಲೇಜುಗಳು :**

1. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ
2. ವಿ.ವಿ. ಪುರಂ. ಕಾಲೇಜು
3. ಎನ್.ಎಂ.ಕೆ.ಆರ್.ವಿ. ಕಾಲೇಜು
4. ವಿಜಯ ಕಾಲೇಜು
5. ಮಹಾರಾಣಿ ಕಾಲೇಜು
6. ಸೆಂಟ್ ಜೋಸೆಪ್ ವಾಣಿಜ್ಯ ಕಾಲೇಜು, ಎಂ. ಜಿ ರಸ್ತೆ,
7. ಕ್ರಿಸ್ತು ಜಯಂತಿ ಕಾಲೇಜು
8. ಎಂ.ಇ.ಎಸ್.–ಕಿಶೋರ ಕೇಂದ್ರ– ಮಲ್ಲೇಶ್ವರಂ
9. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ.
10. ಜೈನ್ ಶಿಕ್ಷಣ ಸಂಸ್ಥೆ

ಸಾಮಾಜಿಕ ಹಾಗೂ ಸಾಂಸ್ಕೃತಿಕ ಶಿಕ್ಷಣದ ಗುರಿ, ಉದ್ದೇಶಗಳು ಮತ್ತು ಪ್ರಾಮುಖ್ಯತೆ

ಪ್ರಪಂಚದ ಸಾಂಸ್ಕೃತಿಕ ಇತಿಹಾಸದಲ್ಲಿ ಕಲೆಗಳಿಗೆ ವಿಶಿಷ್ಟಸ್ಥಾನವಿದೆ. ಸುಸಂಸ್ಕೃತಿಯ ನಾಡು ಎಂಬುದಾಗಿ ಪ್ರಪಂಚದ ಹೊಗಳಿಕೆಗೆ ಪಾತ್ರವಾದ ಈ ಕನ್ನಡ ನಾಡಿನಲ್ಲಿ ಸಾಂಪ್ರದಾಯಕ ಕಲೆಗಳ ಬಗ್ಗೆ ಇರುವ ನಿರ್ಲಪ್ತತೆ ಮತ್ತು ಅವನತಿಯನ್ನು ತಡೆಗಟ್ಟಿ ಯುವಪೀಳಿಗೆಯಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಉತ್ತಮ ಗುಣಮಟ್ಟದ ಕಲಾಭಿರುಚಿಯನ್ನು ಬೆಳೆಸಿ ಸಮಾಜದ ಉತ್ತಮ ಪ್ರಜೆಯನ್ನಾಗಿ ಮಾಡುವ ಉದ್ದೇಶವಿದ್ದು, ಪ್ರಸ್ತುತ ಈ ಎಲ್ಲಾ ವಿಚಾರಗಳನ್ನು ಗಮನಿಸಿ ನಮ್ಮ ಸಂಸ್ಕೃತಿ, ಜನಪದ, ಭಾಷೆ, ಸಾಹಿತ್ಯ ರಂಗಭೂಮಿಯನ್ನು ಉಳಿಸಿ ಬೆಳೆಸುವ ಸಾಹಸವನ್ನುಶಾಲಾ–ಕಾಲೇಜುಗಳು ಕೈಗೊಳ್ಳುವುದು ಅತ್ಯಗತ್ಯ.

ಪ್ರಸುತ್ತ ಶಿಕ್ಷಣ ವ್ಯವಸ್ಥೆ ಕೇವಲ ಉದ್ಯೋಗವನ್ನು ಮಾತ್ರ ಸೃಷ್ಠಿಸುತ್ತದೆ ಪರಿಪೂರ್ಣವಾದ, ವೈಚಾರಿಕವಾದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಬಾಲ್ಯದಿಂದಲೇ ವಿದ್ಯಾರ್ಥಿ ಜೀವನದಿಂದಲೇ ಜೀವನದ ಅಡಿಪಾಯವಾಗಿ ಕಲೆ, ಸಂಸ್ಕೃತಿ, ಜನಪದ ರಂಗಭೂಮಿಯನ್ನು ಅಧ್ಯಯನ ಮಾಡುವುದರಿಂದ ಉತ್ತಮ ನಾಗರೀಕನಾಗಿ ಸಮಾಜವನ್ನು ಸುಂದರವಾಗಿಡಬಹುದು.

ಕಲೆ, ಸಂಸ್ಕೃತಿ, ಸಾಹಿತ್ಯ, ಜನಪದದ ಜೀವನಾಡಿಯಾಗಿರುವ ರಂಗಶಿಕ್ಷಣವನ್ನು ಶಾಲಾ–ಕಾಲೇಜು ಮಟ್ಟಗಳಲ್ಲಿ ಅಳವಡಿಸಬೇಕಾಗಿದೆ. ಶಾಲಾ ಮಟ್ಟದಲ್ಲಿ, ಕಾಲೇಜು ಮಟ್ಟಗಳಲ್ಲಿ, ಒಬ್ಬ ಕ್ರೀಡಾ ಶಿಕ್ಷಕರನ್ನು ನೇಮಿಸುವಂತೆ ರಂಗ ಶಿಕ್ಷಕರನ್ನು ನೇಮಿಸುವುದು. ಶಾಲಾ ಮಟ್ಟದಲ್ಲಿ ಹೊಲಿಗೆ ತರಬೇತಿ, ಚಿತ್ರಕಲೆ, ಸಂಗೀತ ನೃತ್ಯ ತರಬೇತಿ ನೀಡುವಂತೆ ರಂಗ ಶಿಕ್ಷಣ ನೀಡುವುದು ಅತ್ಯಾವಶ್ಯಕವಾಗಿದೆ.

ಈಗಾಗಲೇ ಸರ್ಕಾರ ಘೋಷಿಸಿರುವ ಹಾಗೆ ಆಯ್ದ ಕೆಲವು ಸರ್ಕಾರಿ ಕಾಲೇಜು ಕ್ಲಸ್ಟರ್ ವಿಶ್ವವಿದ್ಯಾಲಯಗಳನ್ನಾಗಿ ಮಾಡಿರುವುದರಿಂದ ಇಲ್ಲಿ ರಂಗ ಶಿಕ್ಷಣವನ್ನು ಪದವಿಮಟ್ಟದಲ್ಲಿ ಪರಿಚಯಿಸಿ ವೃತ್ತಿಪರ ಕೋರ್ಸ್‌ಗಳನ್ನು ಅಧ್ಯಯನ ಮಾಡಿಸುವಂತೆ ರಂಗಕಲೆಯನ್ನು ಐಚ್ಛಿಕ ವಿಷಯವನ್ನಾಗಿ ಅಥವಾ ಪದವಿ ವಿಷಯವನ್ನಾಗಿಯೂ ಪರಿಚಯಿಸುವುದು.

1. ಶಿಕ್ಷಣ ಸಬಲೀಕರಣ ಕ್ಷೇತ್ರದಲ್ಲಿ ಸಾಂಸ್ಕೃತಿಕತೆ ಅಳವಡಿಕೆ.
2. ಕಲಿಕಾರ್ಥಿಯಲ್ಲಿ ಹುದುಗಿರುವ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸೃಜನಾತ್ಮಕ ಚಟುವಟಿಕೆಗಳನ್ನು ಹೊರತೆಗೆದು ಬೌದ್ಧಿಕ ವಿಕಾಸಕ್ಕೆ ಪೂರಕವಾದ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವಲ್ಲಿ ಸಾಂಸ್ಕೃತಿಕತೆ ಪ್ರಮುಖ ಪಾತ್ರವಹಿಸುತ್ತದೆ.
3. ತರಗತಿಯ ಒಳಗೆ ಮತ್ತು ಹೊರಗೆ ಉಂಟಾಗುವ ಶೈಕ್ಷಣಿಕ ಮತ್ತು ಸಾಮಾಜಿಕ ಸಮಾನತೆ ಗುರುತಿಸಬಹುದು ಹಾಗೂ ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಸಾಂಸ್ಕೃತಿಕತೆಯು ಪ್ರಮುಖವಾಗಿ ಕ್ರಿಯಾತ್ಮಕ ಆಪ್ತರಂಗಭೂಮಿ ಅಳವಡಿಕೆ ಮಾಡುವುದು.
4. ಇಂದಿನ ಶೈಕ್ಷಣಿಕ ಸಂದರ್ಭದಲ್ಲಿ ರಂಗಭೂಮಿ ಮತ್ತಿತರ ಸಾಂಸ್ಕೃತಿಕ ಚಟುವಟಿಕೆಗಳು ಅವಶ್ಯಕವಾಗಿದೆ.
5. ನಮ್ಮ ರಾಷ್ಟ್ರದ ಕಲೆ, ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು. ವಿಮರ್ಶೆ, ಪ್ರಬಂಧಗಳನ್ನಾ ಪ್ರಕಟಿಸುವುದು, ಸಮ್ಮೇಳನ, ವಿಚಾರಗೋಷ್ಠಿ ಮೊದಲಾದವುಗಳನ್ನು ಏರ್ಪಡಿಸುವುದು.
6. ಧಾರ್ಮಿಕ ಹಾಗೂ ಮೂಢನಂಬಿಕೆಗಳನ್ನು ಹೋಗಲಾಡಿಸುವುದು.
7. ಪರಿಸರ ಜಾಗೃತಿ ಆಂದೋಲನ ಕಾರ್ಯಕ್ರಮ ನಡೆಸುವುದು.
8. ರಾಷ್ಟ್ರೀಯ ಹಾಗೂ ನಾಡ ಹಬ್ಬಗಳನ್ನು ಆಚರಿಸುವುದು, ಹಾಗೆಯೇ ಸಮಾಜ ಸುಧಾರಕರ ಜಯಂತಿ ಮುಂತಾದವುಗಳನ್ನು ಆಚರಿಸುವುದು.
9. ವಿದ್ಯಾರ್ಥಿಗಳಲ್ಲಿ, ಮಕ್ಕಳಲ್ಲಿ, ಬೌಧಿಕ, ಸಾಂಸ್ಕೃತಿಕ, ದೈಹಿಕ, ಮಾನಸಿಕ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ರಂಗಶಿಕ್ಷಣ ಅತ್ಯಾವಶ್ಯಕ.
10. ನಮ್ಮ ನಾಡು–ನುಡಿ, ಸಂಸ್ಕೃತಿಕ, ಕಲೆ, ಸಾಹಿತ್ಯ, ಜನಪದದ ಅರಿವು ಪಡೆಯಲು ರಂಗಶಿಕ್ಷಣ ಉತ್ತಮ ಪಾತ್ರ ನಿರ್ವಹಿಸುತ್ತದೆ.
11. ರಂಗಭೂಮಿ ಒಂದು ಪರಿಣಾಮಕಾರಿ ಮಾಧ್ಯಮವಾಗಿದ್ದು ಅವರಲ್ಲಿ ಜಾಗೃತಿ ಮೂಡಿಸಲು ಪರಿಸರ ಸಂರಕ್ಷಣೆ ಮಳೆ ನೀರು ಕೊಯ್ಲಿ ನೀರಿನ ಸಂರಕ್ಷಣೆ ಸ್ವಚ್ಚತೆ, ಆರೋಗ್ಯ, ಅಭಿವೃದ್ಧಿ, ಗ್ರಾಮ ವಿಕಾಸ, ಸರ್ಕಾರಿ ಯೋಜನೆಗಳನ್ನ ಜನರಿಗೆ ತಲುಪಿಸುವ ರಂಗಶಿಕ್ಷಣ ಪರಿಣಾಮಕಾರಿ ಮಾಧ್ಯಮವಾಗಿದೆ. ದೂರದರ್ಶನ, ಕಿರುತೆರೆಗಿಂತ ಬೀದಿನಾಟಕಗಳ ಮೂಲಕ ಜಾಗೃತಿ ಮೂಡಿಸಬಹುದು.
12. ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತೆಗೆಯಬಹುದು, ನೃತ್ಯ–ನಾಟಕ, ಅಭಿನಯ ಕಲೆಗಳಲ್ಲಿ ಮಕ್ಕಳನ್ನು ಉರಿದುಂಬಿಸುವುದು, ಉತ್ತಮ ವೇದಿಕೆ ಕಲ್ಪಿಸುವುದು.
13. ನಾಟಕ ಪ್ರಭಾವಿ ಸಂವಹನ ಮಾಧ್ಯಮವಾಗಿ ಬಳಸುವುದು.
14. ಸಮಾಜದ ಬೇರೆ–ಬೇರೆ ಸ್ತರಗಳ ಜನರನ್ನು ಒಳಗೊಳ್ಳುವಂತೆ, ಪಾಲ್ಗೊಳ್ಳುವಂತೆ ಮಾಡುವುದು. ಸೌಹಾರ್ದತೆ ಬೆಳೆಸುವುದು, ರಂಗಶಿಕ್ಷಣದಿಂದ ಸರ್ಕಾರಿ ಇಲಾಖೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ವೃತ್ತಿಪರತೆಯಿಂದಲೂ ಸಂಪಾದಿಸಬಹುದು.
15. ಸಮೂಹ ಸಂಘಟನೆ, ಸಮೂಹ ಸಹ ಜೀವನವನ್ನು ಉತ್ತೇಜಿಸಬಹುದು ಕಿರುತೆರೆ ಚಲನಚಿತ್ರ, ದೂರದರ್ಶನಗಳಲ್ಲಿ ಅವಕಾಶ ಪಡೆಯಬಹುದು.
16. ಮಕ್ಕಳಲ್ಲಿ ಯುವಕರಲ್ಲಿ ಲವಲವಿಕೆ ಹುಟ್ಟಿಸುವಂತೆ ರಂಗಶಿಕ್ಷಣ ಮಾಡುತ್ತದೆ ವಿದ್ಯಾರ್ಥಿಗಳ, ಯುವಕರ ಮಾನಸಿಕ ಖಿನ್ನತೆಯನ್ನು ಹೋಗಲಾಡಿಸಬಹುದು.

– 50ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕವಿರಾಜ ಮಾರ್ಗದಲ್ಲಿ ಚತ್ತಾಣ – ಬೆದಂಡೆ

ಡಾ. ಲಕ್ಷ್ಮಿ ನರಸಮ್ಮ ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕನ್ನಡ ಸಾಹಿತ್ಯ ಪರಂಪರೆಯನ್ನು ಅರಿಯಲು ನಮಗೆ ದೊರೆತಿರುವ ಲಾಕ್ಷಣಿಕ ಗ್ರಂಥವೇ ಕವಿರಾಜಮಾರ್ಗ. ಈ ಕೃತಿಯು ಕ್ರಿ. ಶ. 850ರಲ್ಲಿ ಶ್ರೀ ವಿಜಯನಿಂದ ರಚಿತವಾದ ಅತ್ಯಂತ ಅಮೂಲ್ಯವಾದ ಕೃತಿಯಾಗಿದೆ. ಕವಿರಾಜ ಮಾರ್ಗದ ಕರ್ತೃ ಅಮೋಘವರ್ಷ ನೃಪತುಂಗನಾ ಅಥವಾ ಶ್ರೀ ವಿಜಯನಾ ಎಂಬ ಜಿಜ್ಞಾಸೆ ನಡೆಯುತ್ತಲೇ ಇದೆ. ಏನೇ ಜಿಜ್ಞಾಸೆಗಳು ನಡೆಯುತ್ತಿದ್ದರೂ ಹಲವು ವಿದ್ವಾಂಸರ ಮೇರೆಗೆ ಕವಿ ರಾಜಮಾರ್ಗದ ಕರ್ತೃ ಶ್ರೀ ವಿಜಯನೆಂದು ಗ್ರಹಿಸಲಾಗಿದೆ. ಕವಿರಾಜ ಮಾರ್ಗ ಕೃತಿಯೂ ಕವಿಗಳಿಗೆ ಗದ್ಯ ಮತ್ತು ಕಾವ್ಯದ ಬಗೆಗೆ ಲಕ್ಷಣಗಳ ಮಾರ್ಗವನ್ನು ತೋರಿಸುವ ಮಹತ್ಕೃತಿಯಾಗಿದ್ದು ಪದ್ಯ ಕವಿಗಳನ್ನು ಹೆಸರಿಸಿ ಕಾವ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದಾಗಿದ್ದರೂ ಗದ್ಯ ಪ್ರಕಾರದ ಲಕ್ಷಣಗಳನ್ನು ಕಡೆಗಣಿಸಿಲ್ಲ. ಗದ್ಯ ಕವಿಗಳ ಹೆಸರುಗಳನ್ನು ಸಹ ಗುರುತಿಸಿದ್ದಾನೆ. ಕವಿರಾಜ ಮಾರ್ಗ ಕೃತಿಯಲ್ಲಿ ಕನ್ನಡ ನಾಡಿನ ಪ್ರಾದೇಶಿಕ ಎಲ್ಲೆ, ಕನ್ನಡಿಗರ ವೀರತನ, ಜನಪದರ ಹಿರಿಮೆ, ಕಾವ್ಯದ ಗುಣಲಕ್ಷಣ ಹಾಗೂ ಕಾವ್ಯ ಅಲಂಕಾರಗಳ ಬಗ್ಗೆ ಹಲವು ವಿಚಾರಗಳು ಅಡಕವಾಗಿವೆ. ಕವಿರಾಜ ಮಾರ್ಗದ ಮೂಲ ಆಕರ ಗ್ರಂಥ ದಂಡಿಯ ಕಾವ್ಯದರ್ಶನವಾಗಿದ್ದು, ಸಂಸ್ಕೃತದಲ್ಲಿ ರಚನೆಯಾಗಿದೆ. ಕವಿರಾಜ ಮಾರ್ಗದಲ್ಲಿ ಗದ್ಯ ಪದ್ಯಗಳ ಸಮ್ಮಿಶ್ರಿತವಾದ ಚಂಪೂ ಪ್ರಕಾರ ಹೇಗೆ ಚಾಲ್ತಿಯಲ್ಲಿ ಇದ್ದಿತೋ ಹಾಗೆಯೇ ದೇಸಿ ಗಬ್ಬಗಳಾದ ಚತ್ತಾಣ–ಬೆದಂಡೆಗಳ ಬಗ್ಗೆ ಒಂದನೇಯ ನಾಗವರ್ಮನ ಛಂದೋಂಬುಧಿ ಹಾಗೂ ಕೇಶೀರಾಜನ ಶಬ್ದಮಣಿ ದರ್ಪಣದಲ್ಲಿ ಹಲವು ಮಾಹಿತಿಗಳು ಅಡಕವಾಗಿವೆ. ಚತ್ತಾಣ–ಬೆದಂಡೆಗಳು ಛಂದೋ ಪ್ರಕಾರಗಳಾಗಿದ್ದು ದೇಸೀ ಹಾಡು ಗಬ್ಬಗಳಾಗಿವೆ. ಚತ್ತಾಣ–ಬೆದಂಡೆಗಳು ಜನಪದೀಯ ಕಾವ್ಯ ಪ್ರಕಾರಗಳಾಗಿವೆ ಎಂದರೆ ಎರಡು ಮಾತಿಲ್ಲ. ಈ ಲೇಖನದಲ್ಲಿಚತ್ತಾಣ–ಬೆದಂಡೆಕಾವ್ಯ ಪ್ರಕಾರಗಳ ಲಕ್ಷಣಗಳು ಹಾಗೂ ಅವುಗಳ ಪ್ರಯೋಗವನ್ನು ಕುರಿತು ಅಧ್ಯಯನ ಮಾಡುವುದೇ ಮುಖ್ಯ ಉದ್ದೇಶವಾಗಿದೆ.

ಚತ್ತಾಣವು ಬೆದಂಡೆಯಂತೆ ಒಂದು ಪ್ರಭೇದವಾಗಿದೆ. ಚತ್ತಾಣದಲ್ಲಿ ಮೂರು ಸಾಲಿನ ತ್ರಿಪದಿ, ನಾಲ್ಕು ಸಾಲಿನ ಚೌಪದಿ ಇತ್ಯಾದಿ ರೂಪಗಳನ್ನು ಬಳಸುವ ಪದ್ಧತಿಯಿತ್ತು. ಚತ್ತಾಣದ ಪ್ರಕಾರವನ್ನು ಯಕ್ಷಗಾನದಲ್ಲಿ ಗುರುತಿಸುವ ಪ್ರಯತ್ನ ನಡೆದಿದೆ. ಹಿರಿಯ ವಿದ್ವಾಂಸರಾದಎಲ್. ಬಸವರಾಜು ಅವರು ಚತ್ತಾಣವನ್ನು ಜನ ಸಾಮಾನ್ಯರು ಬಿಡುವಿನ ವೇಳೆಯಲ್ಲಿ ತಮ್ಮ ಮನರಂಜನೆಗಾಗಿ ಹಾಡಿನ ರೂಪದಲ್ಲಿ ಸೃಷ್ಟಿಸಿ ಹಾಡುತ್ತಿದ್ದರೆಂದು ಅಭಿಪ್ರಾಯಪಟ್ಟಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ವಿಶ್ವಕೋಶದಲ್ಲಿಚತ್ತಾಣವುಒಂದು ಬಗೆಯ ಕಾವ್ಯವಾಗಿದೆಎಂದು ನಮೂದಿತವಾಗಿದೆ. ಅಲ್ಲಲ್ಲಿ ಕೆಲವು ಸಂದರ್ಭಗಳಲ್ಲಿ ಚತ್ತಾಣದ ಬಳಕೆಯಲ್ಲಿದ್ದರೆ ಅದರ ಪೂರ್ಣವಾದ ಮಾಹಿತಿಯನ್ನು ಕ್ರಿ.ಶ. 850ರ ಕವಿರಾಜ ಮಾರ್ಗದಲ್ಲಿ ಶ್ರೀವಿಜಯನು ನೀಡಿದ್ದಾನೆ. ಚತ್ತಾಣ ಪ್ರಕಾರವು ಪೂರ್ವದ ಹಳಗನ್ನಡ, ಹಳಗನ್ನಡದ ವೇಳೆಯಲ್ಲಿ ಬಳಕೆಯಾಗುತ್ತಿತ್ತು ಎಂಬ ವಿಷಯವನ್ನು ಕವಿರಾಜಮಾರ್ಗಕಾರನು ಮನಗಾಣಿಸಿದ್ದಾನೆ. ಕವಿರಾಜ ಮಾರ್ಗದಲ್ಲಿ ಕವಿರಾಜ ಮಾರ್ಗಕಾರನು

ನುಡಿಗೆಲ್ಲಾ ಸಲ್ಲದ ಕ
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮಂದೀ
ಗಡಿನ ನೆಗತೆಯ ಕಬ್ಬದೊ
ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್ ।

ಎಂಬ ಕಂದ ಪದ್ಯವನ್ನು ಚತ್ತಾಣ ಪ್ರಕಾರಕ್ಕೆ ಉಲ್ಲೇಖಿಸಿದ್ದಾನೆ. ಚತ್ತಾಣದ ಮೂಲ ರೂಪ ಚಿತ್ರಾಯುತನ ಪದ. ಈ ಪದ 13ನೇ ಶತಮಾನದ ಜನ್ನ ಕವಿಯ ಕಾವ್ಯ ಕೃತಿಯಲ್ಲಿ ಉಲ್ಲೇಖವಾಗಿದೆ ಎಂಬುದನ್ನು ಗ್ರಹಿಸಬಹುದಾಗಿದೆ. ಕವಿರಾಜ ಮಾರ್ಗಕಾರನು ಕವಿರಾಜ ಮಾರ್ಗದಲ್ಲಿ ಚತ್ತಾಣ ದೇಸೀ ಕಾವ್ಯದಲ್ಲಿ ಕಂದಪದ್ಯಗಳು ಅಧಿಕವಾಗಿ ಕಂಡು ಬಂದಿದೆ. ಹಾಗೆಯೇ ಅಲ್ಲಲ್ಲಿ ಖ್ಯಾತ ಕರ್ನಾಟಕ ವೃತ್ತಗಳು, ಚೌಪದಿ, ಗೀತಿಕೆ, ತ್ರಿಪದಿಗಳು ಬರಬೇಕು ಎಂಬ ನಿಯಮವಿದೆ. ಆದಾಗ್ಯೂ ವೃತ್ತಗಳಿಗೆ ಚತ್ತಾಣದಲ್ಲಿ ಹೆಚ್ಚಿನ ಪ್ರಾಶಸ್ತ್ಯವಿದೆ. ತೀ. ನಂ.ಶ್ರೀಕಂಠಯ್ಯನವರು ಚತ್ತಾಣವೂ ಓದುವ ಕಾವ್ಯವೆಂದು ಅಭಿಪ್ರಾಯಪಟ್ಟಿದ್ದಾರೆ. ಚತ್ತಾಣವು ಭಾಜನೆ ಗಬ್ಬಎಂಬಂತೆ ತಿಳಿಯುವುದಾದರೆ ಅದು ವಾಚನದ ತದ್ಭವವಾಗಿರುತ್ತದೆ ಹಾಗೂ ವಾಚನ ಮಾಡುವಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಎರಡನೇ ನಾಗವರ್ಮನ ಕಾವ್ಯ ಲೋಕದಲ್ಲಿ ಚತ್ತಾಣದ ಲಕ್ಷಣವನ್ನು ಗಮನಿಸಿದರೆ ಬೆದಂಡೆಗಿಂತ ದೀರ್ಘವಾದ ಕಾವ್ಯ ಪ್ರಕಾರವಾಗಿತ್ತು ಎಂಬುದಾಗಿ ಊಹಿಸಬಹುದಾಗಿದೆ ಎಂಬ ವಿಷಯವನ್ನು ತೀ.ನಂ.ಶ್ರೀಕಂಠಯ್ಯನವರು ಅಭಿವ್ಯಕ್ತಿಪಡಿಸಿದ್ದಾರೆ. ಇವೆಲ್ಲವೂಕೂಡ ಊಹಾಪೋಹಗಳಾಗಿದ್ದು ಇದೇ ನಿಜವಾದ ಲಕ್ಷಣವೆಂದು ತಿಳಿಯಲಿಕ್ಕೆ ಸಾಧ್ಯವಿಲ್ಲ. ಚತ್ತಾಣ ಕಾವ್ಯ ಪ್ರಕಾರವನ್ನು ಗ್ರಹಿಸುವುದಾದರೆ ಜನಪದ ಹಾಡುಗಳನ್ನು ಮೊದಲು ತಿಳಿಯಬೇಕು. ಏಕೆಂದರೆ ಜಾನಪದ ಅನಾದಿ ಕಾಲದ್ದು ಆಗಿದ್ದು ಅದು ಕೂಡಾ ಹಾಡು ಗಬ್ಬವಾಗಿದೆ. ಜನಪದರು ವಿದ್ಯಾವಂತರಾಗದಿದ್ದರೂ ಹಾಡುಗಳನ್ನು ಹಾಡುವ ಹವ್ಯಾಸವನ್ನು ಹೊಂದಿದ್ದರು. ಅವರು ಹಾಡಿದ ಹಾಡು ಒಬ್ಬರಿಂದ ಒಬ್ಬರಿಗೆ ಸಾಗಿ ಸಾಮೂಹಿಕವಾದ ಹಾಡು ಎನಿಸಿಕೊಳ್ಳುತ್ತಿತ್ತು. ಹಾಗಾಗಿ ಕವಿರಾಜ ಮಾರ್ಗಕಾರ ಕವಿರಾಜ ಮಾರ್ಗದಲ್ಲಿ ಹೇಳಿರುವಂತೆ **"ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್"** ಎಂದು ಹೇಳಿರುವ ಕಂದ ಪದ್ಯದ ಸಾಲಿನಲ್ಲಿ ಜನಪದರ ಜಾಣ್ಮೆ ಕಾವ್ಯ ಶಕ್ತಿಯನ್ನು ಹೊಗಳಿರುವುದು ಗ್ರಾಹ್ಯವಾಗಿದೆ. ಜನಪದರು ಎಂದೂ ಕುಳಿತು ಓದದಿದ್ದರೂ ಹಾಡುಗಳನ್ನು ಹಾಡುವ ಸಾಮರ್ಥ್ಯವನ್ನು ಹೊಂದಿದ್ದರೆಂದೂ ತನ್ನ ಅಭಿಪ್ರಾಯವನ್ನು ರಾಷ್ಟ್ರಕೂಟರ ರಾಜ ಶ್ರೀವಿಜಯ ತಿಳಿಸಿದ್ದಾನೆ. ಈ ವಿಷಯವನ್ನು ಆಧಾರವಾಗಿ ಇಟ್ಟುಕೊಂಡರೆ ಚತ್ತಾಣ ಕಾವ್ಯ ಮಾದರಿಗೆ ಸಹಾಯವಾಗುತ್ತದೆ ಎಂದು ಅಭಿಪ್ರಾಯಪಡಬಹುದು. ಹೇಗೆಂದರೆ ಜನಪದ ಹಾಡಿನ ಧಾಟಿ ಚತ್ತಾಣದಲ್ಲಿದೆ. ಜನಪದ ತ್ರಿಪದಿಗಳಂತೆ ಚತ್ತಾಣದಲ್ಲೂ ಮೂರು ಸಾಲಿನ ಪದ್ಯಗಳಿವೆ. ಹಾಗಾಗಿ ಚತ್ತಾಣದ ಲಕ್ಷಣವನ್ನು ತಿಳಿಯುವಲ್ಲಿ ಜನಪದ ತ್ರಿಪದಿಗಳು ಮೂಲ ದಾಖಲೆಯಾಗಲು ಸಾಧ್ಯವಿದೆ. ಶಿಷ್ಟ ಸಾಹಿತ್ಯದ ಮೂಲ ಜಾನಪದವೇ ಆಗಿದೆ ಎಂದರೆ ತಪ್ಪಾಗಲಾರದು.

ಬೆದಂಡೆಯ ಬಳಕೆಯನ್ನು ಕವಿರಾಜ ಮಾರ್ಗ ಕೃತಿಯಲ್ಲಿ ಕಾಣುತ್ತೇವೆ. ಇದರ ಬಗ್ಗೆ ಅತ್ಯಂತ ವಿಸ್ತಾರವಾದ ಮಾಹಿತಿಯನ್ನು ಶ್ರೀವಿಜಯನು ನೀಡಿದ್ದಾನೆ. ಬೆದಂಡೆ ಕಾವ್ಯ ಪ್ರಕಾರದ ಬಗ್ಗೆ ನಾಗವರ್ಮನ ಕಾವ್ಯಾವಲೋಕನ ಹಾಗೂ ಕೇಶೀರಾಜನ ಶಬ್ದಮಣಿ ದರ್ಪಣದಲ್ಲಿ ಪ್ರಸ್ತಾಪವಿದೆ. ಬೆದಂಡೆಯೂ ಹಾಡುಗಬ್ಬ ಅಥವಾ ಹಾಡಲಿಕ್ಕೆ ಬರುವಂಥ

– 29ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಸಂಸ್ಕೃತಿ : ಅಲಕ್ಷಿತ ಪ್ರೇಕ್ಷಣೀಯ ನೆಲೆಗಳ ಅನನ್ಯತೆ

✍ **ಡಾ. ಚಿತ್ತಯ್ಯ ಕೆ.** ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ.

ಚಿತ್ರದುರ್ಗ ಜಿಲ್ಲೆ ಪ್ರಾಚೀನ ಕಾಲದಿಂದಲೂ ಮಾನವನ ಪ್ರಸಿದ್ಧ ನೆಲೆಯಾಗಿದ್ದು ವೈವಿಧ್ಯಮಯವಾದ ಕೋಟೆ–ಕೊತ್ತಲು, ಗುಡ್ಡ–ಬೆಟ್ಟಗಳನ್ನು ಹೊಂದಿದೆ. ಅಶೋಕ ಮತ್ತು ಮಯೂರಶರ್ಮನ ಶಾಸನಗಳು, ಚಂದ್ರವಳ್ಳಿಯ ಭೂ ಶೋಧನೆ, ಅಲೆಮಾರಿ – ಅರೆ ಅಲೆಮಾರಿ ಸಂಪ್ರದಾಯಗಳನ್ನು ಉಳಿಸಿಕೊಂಡು ಬರುತ್ತಿರುವ ಜಿಲ್ಲೆಯ ಬುಡಕಟ್ಟು ಜನಾಂಗಗಳ ಬದುಕಿನ ರೀತಿ, ಮೌಖಿಕ ಸಾಹಿತ್ಯ, ಸಂಗೀತ, ಕಲೆ, ಜನಪದ ಹಾಗೂ ಬಯಲಾಟ ನಾಟಕ ಪರಂಪರೆ ಜತೆಗೆ ಈಗ ವಿಜ್ಞಾನ ಮತ್ತು ವೈಜ್ಞಾನಿಕ ಸಂಸ್ಥೆಗಳ ಕೇಂದ್ರವಾಗಿಯೂ ಹೊರ ಹೊಮ್ಮಿದೆ.

ಶತಮಾನಗಳ ರಾಜಕೀಯ ಇತಿಹಾಸವಿರುವ ಚಿತ್ರದುರ್ಗದ ಅನೇಕ ಭೂಪ್ರದೇಶ ಬರಡು ನೆಲವಾಗಿದ್ದು ಈಚೆಗೆ ಭದ್ರಾ ಮೇಲ್ದಂಡೆ ಯೋಜನೆಯ ಹಿರಿಯೂರು ವಾಣಿ ವಿಲಾಸ ಸಾಗರದಿಂದ ಚಳ್ಳಕೆರೆ ತಾಲ್ಲೂಕಿ ಹಲವು ಬ್ಯಾರೇಜ್‌ಗಳಿಗೆ ಹರಿದು ಬಂದ ನೀರು ಮತ್ತು ಸರ್ಕಾರದ ಸೌಲಭ್ಯ ಬಳಸಿಕೊಂಡು ಇಲ್ಲಿನ ಜನರು ಅಲ್ಲಲ್ಲಿ ನೀರಾವರಿ ಪ್ರದೇಶವನ್ನಾಗಿಸಿ ಕೊಂಡು ಜೀವನ ಸಾಗಿಸುತ್ತಿದ್ದಾರೆ. ಪ್ರಾದೇಶಿಕ ಇತಿಹಾಸ ತುಂಬಾ ವಿಶಿಷ್ಟವಾದುದು. ಅಶೋಕ ಮತ್ತು ಮಯೂರಶರ್ಮನ ಶಾಸನಗಳು, ಚಂದ್ರವಳ್ಳಿ ಮತ್ತು ಮೊಳಕಾಲ್ಮೂರು ತಾಲ್ಲೂಕು ಬ್ರಹ್ಮಗಿರಿ ಭೂ ಶೋಧನೆಗಳು ಆದಿ ಮಾನವನ ಬದುಕಿನ ಬಗೆಗೆ ಖಚಿತ ಮಾಹಿತಿ ಒದಗಿಸಿವೆ. ಅಶೋಕ ಸಿದ್ದಾಪುರ – ಬ್ರಹ್ಮಗಿರಿ ಮತ್ತು ಚಳ್ಳಕೆರೆ ತಾಲ್ಲೂಕಿನ ಕೆಲ ಭಾಗದಲ್ಲಿ ನವಶಿಲಾಯುಗ, ಆದಿ ಚಾರಿತ್ರಿಕಯುಗ ಹಾಗೂ ಕಬ್ಬಿಣದ ಬೃಹತ್ ಶಿಲಾಯುಗದ ಕುರುಹುಗಳು ಮತ್ತು ಇತಿಹಾಸ ಆರಂಭಯುಗದ ಸಂಸ್ಕೃತಿಗಳ ಅವಶೇಷಗಳು ಸಾಕಷ್ಟು ಪ್ರಮಾಣದಲ್ಲಿ ಕಂಡುಬಂದಿವೆ.

ಕೊಕ್ಕನೂರು, ಅಸಗೋಡು, ಜಾನಕಲ್ಲು, ತಣಿಗೇಕಲ್ಲು, ಬೂದಿಹಾಳು (ಶ್ರೀರಾಂಪುರ), ಮೈಲಾರಗುಡ್ಡ, ಘಟ್ಟಿಹೊಸಹಳ್ಳಿ, ತಾಳ್ಯ, ಪಂಡರಹಳ್ಳಿ, ಗಂಜಿಗಟ್ಟೆ, ಕುರುಮರಡಿಕೆರೆ, ತುರುವನೂರು, ತಮಟಕಲ್ಲು, ಚೆನ್ನಯ್ಯನಹಟ್ಟಿ, ದೊಡ್ಡೇರಿ, ಡಿ.ಉಪ್ಪಾರಹಟ್ಟಿ (ಹಳೆದೊಡ್ಡೇರಿ), ಗಂಜಿಗುಂಟೆ, ಸಾಣಿಕರೆ, ಕಾಲುವೆಹಳ್ಳಿ, ಕಾಲುವೆಹಳ್ಳಿ, ಗೌಡರಹಟ್ಟಿ, ಯಾದಲಗಟ್ಟೆ, ರಂಗವ್ವನಹಳ್ಳಿ, ದೊಡ್ಡಉಳ್ಳಾರ್ತಿ, ಪಿ.ಮಹದೇವಪುರ, ಚಿಕ್ಕಮಧುರೆ, ಹಿರೇಮಧುರೆ, ಕ್ಯಾತಗೊಂಡನಹಳ್ಳಿ, ನನ್ನಿವಾಳ, ನಾಯಕನಹಟ್ಟಿ ಹೊಸಗುಡ್ಡ, ನಾಗಗೊಂಡನಹಳ್ಳಿ ಮುಂತಾದ ಗ್ರಾಮದ ಪ್ರದೇಶದಲ್ಲಿ ದೊರೆತಿರುವ ಶಿಲಾಯುಧ (ಕಲ್ಲಿನ ಕೊಡಲಿ)ಮಣ್ಣಿನ ಮಡಿಕೆ ಚೂರು, ಹವಳದ ಮಣಿ, ಬೆಣಚುಕಲ್ಲು, ಗುಂಡುಕಲ್ಲು ಮತ್ತಿತರ ವಸ್ತುಗಳು. ಮತ್ತು ಕಲ್ಲು– ಬಂಡೆಗಳ ಮೇಲೆ ಕೊರೆದ ಚಿತ್ರ. ಅಲ್ಲದೆ ಬಿಳಿ ಮತ್ತು ವರ್ಣಚಿತ್ರಗಳು, ಬಯಲುಬಂಡೆ ರೇಖಾಚಿತ್ರಗಳು, ಇತಿಹಾಸ ಪೂರ್ವಯುಗದ ಬೃಹತ್ ಶಿಲಾಯುಗದ ಸಮಾಧಿಗಳು ಕಂಡು ಬರುತ್ತಿದ್ದು ಈ ಜಿಲ್ಲೆ ಪ್ರಾಗೈತಿಹಾಸಿಕವಾಗಿಯೂ ಮಹತ್ವ ಪಡೆದಿದೆ ಎನ್ನಬಹುದಾಗಿದೆ.

ಬುಡಕಟ್ಟು ಸಂಸ್ಕೃತಿಯ ತೊಟ್ಟಿಲು ಎತ್ತಪ್ಪ ದೈವದ ತಳಕಿನ ಗುಡ್ಡ

ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ಸಂಸ್ಕೃತಿಯ ಸಾಂಸ್ಕೃತಿಕ ತೊಟ್ಟಿಲು ಎಂದೇ ಕರೆಯಲ್ಪಡುವ ಚಳ್ಳಕೆರೆ ತಾಲ್ಲೂಕಿನ ತಳಕು ಗ್ರಾಮ ಕೆರೆಯಂಚಿನಲ್ಲಿರುವ ಎತ್ತಪ್ಪ ದೈವದ ಸಮಾಧಿ ಇರುವ ಗುಡ್ಡವೇ ಸಾಂಸ್ಕೃತಿಕ ವೀರ ಎತ್ತಪ್ಪನ ಗುಡ್ಡ. ಕಾಡುಗೊಲ್ಲರ ಕುಲಮೂಲದ ಪಶುಪಾಲಕನಾಗಿದ್ದ ಎತ್ತಪ್ಪ, ಕೂಡ್ಲಿಗಿ ತಾಲ್ಲೂಕು ಜರಮಲೆ ಸೀಮೆಯಿಂದ ದಕ್ಷಿಣ ಭಾಗದ ಕಡೆಗೆ ಬರುವಾಗ ತಳಕಿನ ಕೆರೆ ಮತ್ತು ಗುಡ್ಡದ ಕಾವಲು ಪ್ರದೇಶದಲ್ಲಿ ದನಕರುಗಳನ್ನು ಮೇಯಿಸುವಾಗ ಸತ್ತು ಹೋದ ಎತ್ತಪ್ಪನ ದೇಹವನ್ನು ಗುಡ್ಡದ ತುದಿಯಲ್ಲಿ ಸಮಾಧಿ ಮಾಡಲಾಗಿದೆ.

ಗುಡ್ಡದ ಮೇಲ್ಭಾಗ ತುಂಬಾ ವಿಸ್ತಾರವಾಗಿದ್ದು ಅಲ್ಲಿ ಎತ್ತಪ್ಪ ದೈವದ ಸಮಾಧಿ ಇದೆ. ಅದರ ಸುತ್ತ ವೃತ್ತಾಕಾರವಾಗಿ ಎರಡೆರಡು ಅಡಿ ಉದ್ದದ ಚಿಕ್ಕೆಕಲ್ಲುಗಳನ್ನು ನಿಲ್ಲಿಸಲಾಗಿದೆ. ಆ ಕಲ್ಲಿನ ಪಕ್ಕದಲ್ಲಿ ಎತ್ತಪ್ಪನ ಗುಡ್ಡೆಕಲ್ಲು ಮತ್ತು ಎತ್ತಪ್ಪನ ಅಳಿಯ ವಲಿಗಾನಿ ಗುಡ್ಡೆ ಇದೆ. ಮತ್ತು ಬಯಲು ಪ್ರದೇಶದ ಗುಡ್ಡೆಯ ಮುಂದೆ ದೀಪಸ್ತಂಭ–ಸಾಕ್ಷಿ ಕಲ್ಲಿನ ರೀತಿಯಲ್ಲಿ ಎಂಟು ಅಡಿ ಎತ್ತರದ ಹಲುವು ನಿಲುವುಗಲ್ಲುಗಳು ಇವೆ. ಗುಡ್ಡದ ಸುತ್ತಲಿನ ಇಳಿಜಾರು ಮತ್ತು ಮೇಲ್ಭಾಗದ ಪ್ರದೇಶದ ಹೆಬ್ಬಂಡೆ, ಕಿರುಬಂಡೆ ಸಂದಿ–ಗೊಂದಿಯಲ್ಲಿ ಕಾರೇ, ಕವಳಿ, ಬಂದ್ರೆ, ತುಗ್ಗಲಿ, ಬಂದಗಳ್ಳಿ, ಮಂಡಗಳ್ಳಿ, ಪಾಪಸ್‌ಕಳ್ಳಿ, ಕರಿಜಾಲಿ, ಹೊಟ್ಟಿಮುಳ್ಳಿನ ಪಟ್ಟಜಾಲಿ, ಬಿಳಿಹೂಲಿ, ತಂಗಟೆ, ಕಾಡಕಸ್ತೂರಿ, ಹೊಂಗೆ, ಬೇವು, ಮಂಗಾರೆ, ಸೇಗುಣಿಸೆ, ಬನ್ನಿ, ಜಂಬೆ, ಬ್ಯಾಟೆ, ಬಿಲ್ವಪತ್ರೆ ಹೀಗೆ ಹಲವು ಜಾತಿಯ ಮರಗಳ ಜತೆಗೆ ಕುರುಚಲು ಗಿಡ ದಟ್ಟವಾಗಿ ಬೆಳೆದ ಬಳ್ಳಿಗಳು ಚಾರಣ ಪ್ರಿಯರನ್ನು ಕೈ ಬೀಸಿ ಕರೆಯುವಂತಿವೆ.

ಗುಡ್ಡದ ಮೇಲೆ ಅಲ್ಲಲ್ಲಿ ಸಮತಟ್ಟಾದ ಹೆಬ್ಬಂಡೆ ಹಾಗೂ ದೊಡ್ಡ ದೊಡ್ಡ ಕಲ್ಲು–ಗುಂಡುಗಳಿವೆ. ನೆಲ ಮಟ್ಟದಿಂದ 500 ಅಡಿ ಎತ್ತರದ ಗುಡ್ಡದ ಮಧ್ಯೆ ದಕ್ಷಿಣ ಭಾಗಕ್ಕೆ 15 ಅಡಿ ಎತ್ತರದಲ್ಲಿ ಹೆಬ್ಬಂಡೆಯ ಮೇಲೆ ನೀರಿನದೊಣೆ (ಕಲ್ಯಾಣಿ) ಕಿರುಬಾವಿ ಇದೆ. ಆ ದೊಣೆಯಲ್ಲಿ ಸಂಗ್ರಹಗೊಂಡ ಮಳೆನೀರು ಸದಾ ಇರುತ್ತದೆ. ದೊಣೆ ಹತ್ತಲು ಸುಲಭವಾಗುವಂತೆ ಬಂಡೆ ಮೇಲೆ ಅಲ್ಲಲ್ಲಿ ಹೆಜ್ಜೆಯನ್ನು ಕಂಡರಿಸಿಸಿದ್ದಾರೆ. ಮತ್ತು ದೊಣೆಯಲ್ಲಿನ ನೀರನ್ನು ಪವಿತ್ರ ತೀರ್ಥದಂತೆ ಪ್ರೋಕ್ಷಣೆ ಮಾಡಿಕೊಂಡು ಪೂಜೆಸಲ್ಲಿಸಿ ಭಕ್ತರು ಹಿಂದಿರುಗುತ್ತಾರೆ. ಮತ್ತು ಬಾದೆ, ಕಾಡುರಾಗಿ, ಇಸ್ಬದ್ರೆ, ಯರಮಳಕೆ, ಚಿಪ್ಪಿಗ, ಮಾರವಾಡಿ, ತಪರೆ, ಎರಮಳಿಕೆ, ಸೀರಿಣಿಗ, ಗಂಟಿಗ, ಕರಿಕೆ, ಹಂಚಿ, ದೊಡ್ಡಹಂಚಿ, ಹೊಂಬಾಳೆ ಹಲವು ಜಾತಿ ಹುಲ್ಲುಗಳ ವಿವಿಧ ತಳಿಗಳು ಗುಡ್ಡದ ಹಾಸುಪಾಸಿನಲ್ಲಿ ಬೆಳೆದಿರುತ್ತವೆ. ಕುರಿ, ಮೇಕೆ, ದನಗಳನ್ನು ಮೇಯಿಸಲು ಇದು ಯೋಗ್ಯ ಕಾವಲು ಪ್ರದೇಶವಾಗಿದ್ದು ಕುರಿ–ದನಗಾಹಿಗಳ ಆಕರ್ಷಣೆಯ ತಾಳವೂ ಆಗಿದೆ. ಗುಡ್ಡದ ಕೆಳಭಾಗದಲ್ಲಿ ದಕ್ಷಿಣಕ್ಕೆ ನಿಂತು ಉತ್ತರಕ್ಕೆ ನೋಡಿದರೆ ಹಾವಿನ ಹೆಡೆಯ ಆಕಾರದಲ್ಲಿ ಎತ್ತಪ್ಪನ ಗುಡ್ಡ ಕಾಣಿಸುತ್ತದೆ.

ಪಶುಪಾಲಕರ ಸಂಸ್ಕೃತಿ ಕೇಂದ್ರವಾಗಿರುವ ಈ ಗುಡ್ಡದ ತಪ್ಪಲು ಪ್ರದೇಶವನ್ನು ಕಾಡುಗೊಲ್ಲರ ಕಾಶಿ ಎಂತಲೂ ಕರೆಯುವ ವಾಡಿಕೆ ಇದೆ. ಮುಂಗಾರು ಸುರಿದು ಅಡವಿ ತುಂಬ ಹುಲ್ಲು ಬೆಳೆದು ಸಮೃದ್ಧಿಯಾದಾಗ ತಮಗೆ ಕುಲಕೋಟ್ಟ ಆರಾಧ್ಯ ದೈವ ಎತ್ತಪ್ಪನಿಗೆ ಕೃತಜ್ಞತೆ ಸೂಚಿಸಲು ಗುಡ್ಡಕ್ಕೆ ಹೋಗಿ ಬರುವ ಸಂಪ್ರದಾಯ ಕಾಡುಗೊಲ್ಲರಲ್ಲಿ ಇಂದಿಗೂ ಇದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿಶಿಷ್ಟ ಸಂಪ್ರದಾಯ : ಜಿಲ್ಲೆಯಲ್ಲಿರುವ ಕಾಡುಗೊಲ್ಲರ ಹಟ್ಟಿಯ ನೂರಾರು ಭಕ್ತರು ಸೋಮವಾರ ಹಾಲುಗ್ಗಿ –ಹಾಲು ಮೀಸಲು ಅನ್ನದ ಬಾನದ ಜತೆಗೆ ಸಾಂಸ್ಕೃತಿಕ ವೀರರಾದ ಎತ್ತಪ್ಪ, ಜುಂಜಪ್ಪ, ಕ್ಯಾತಪ್ಪ, ಈರಣ್ಣ, ಚಿಕ್ಕಣ್ಣ, ಸಿರಿಯಣ್ಣ, ರಂಗಪ್ಪ, ತಿಮ್ಮಪ್ಪ, ಚಿತ್ತಯ್ಯ, ಕಾಟಯ್ಯ ಮುಂತಾದ ದೈವಗಳ ಪೆಟ್ಟಿಗೆಯನ್ನು ಹೊತ್ತು ಗುಡ್ಡಕ್ಕೆ ಬರಿಗಾಲಲ್ಲಿ ಹೋಗಿ ಎತ್ತಪ್ಪನ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ ಬರುವ ಸಂಪ್ರದಾಯ ಬುಡಕಟ್ಟು ಜನರಲ್ಲಿದೆ. ಈ ಆಚರಣೆ ಪ್ರತಿವರ್ಷದ ಮುಂಗಾರು ಹಂಗಾಮಿನ ಆಷಾಡ ಮಾಸದ ಕಾರ ಹುಣ್ಣಿಮೆಯ ಸೋಮವಾರ ಪ್ರಾರಂಭಿಸಿ ಶ್ರಾವಣದವರೆಗೂ ಕಾಡುಗೊಲ್ಲರ ಹಲವು ಹಟ್ಟಿಗಳಲ್ಲಿ ವಿಶಿಷ್ಟವಾಗಿ ಜರುಗುತ್ತದೆ. ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಸಮುದಾಯ ಸಂಘಟನೆ ನೆಪದಲ್ಲಿ ಇತ್ತೀಚೆಗೆ ಎತ್ತಪ್ಪನ ಆಚರಣೆ ಜಾತ್ರೆಯ ಸ್ವರೂಪ ಪಡೆದುಕೊಳ್ಳುತ್ತಿದೆ. ಹೀಗಾಗಿ ಸಂಘಟನೆಗಳು ಪ್ರತಿ ಹಟ್ಟಿಗಳಲ್ಲಿ ಜಾತ್ರಾ ಮಹೋತ್ಸವದ ಕರಪತ್ರ ಹಂಚುವ ಮೂಲಕ ಪ್ರತಿ ವರ್ಷ ಶ್ರಾವಣ ಮಾಸದ ಮೊದಲ ಸೋಮವಾರ ದಂದು ಎತ್ತಪ್ಪನ ಗುಡ್ಡದ ಬಳಿ ಬೃಹತ್ ಪ್ರಮಾಣದಲ್ಲಿ ಜಾತ್ರೆ ಆಚರಿಸುತ್ತಿದೆ.

ಗುಡ್ಡಕ್ಕೆ ಹೋಗುವ ಒಂದು ದಿನ ಮುಂಚಿತವಾಗಿ ಹಟ್ಟಿಯ ಪ್ರತಿ ಮನೆಯಲ್ಲಿ ನೆಲಕಾರಣೆ ಮಾಡಿ, ಪರವು (ಹಬ್ಬ)ಕ್ಕಾಗಿ ಕುರಿಹಟ್ಟಿಯಿಂದ ನಡೆಮುಡಿಯಿಂದ ಮೀಸಲು ಹಾಲನ್ನು ದೇವರಗುಡಿಯ ದೊಡ್ಡ ಕಂಚಿನಹಂಡೆಯಲ್ಲಿ ಶೇಖರಿಸುತ್ತಾರೆ.

ಮೀಸಲು ಹಾಲು, ಅಕ್ಕಿ, ಬೆಲ್ಲದಿಂದ ತಯಾರಿಸಿದ ಉಗ್ಗಿ (ಎಡೆ) ನೈವೇದ್ಯ ಅರ್ಪಿಸಿದ ನಂತರ ಎತ್ತಪ್ಪನ ಸಮಾಧಿಗೆ ಹಾಲಿನ ಅಭಿಷೇಕ ಮಾಡುವ ಪದ್ಧತಿ ಇದೆ. ಪೆಟ್ಟಿಗೆ ದೇವರ ಜತೆಗೆ ಘಂಟೆ, ದೂಪದಾರತಿ, ಶಂಖ, ಕಂಭ, ಜಾಗಟೆ, ಬವನಾಶಿ, ಬಿದಿರಬೆತ್ತ, ಗಣೆ, ಊದೋಗಣೆ, ಹರಕೆಗಣೆ, ತೆಗೆದುಕೊಂಡು ಹೋಗುತ್ತಾರೆ. ಗುಡ್ಡದ ಮೇಲೆ ದೈವದ ಸಮಾಧಿಗೆ ಪೂಜೆ ಸಲ್ಲಿಸುತ್ತಾರೆ. ಬುಡಕಟ್ಟು ಸಂಸ್ಕೃತಿಯ ಅನಾವರಣ ಗೊಳಿಸುವ ಜಾನಪದದ ಅಧ್ಯಯನದ ಸಲುವಾಗಿ ಕ್ಷೇತ್ರಕಾರ್ಯ ನಡೆಸಲು ಈ ಪ್ರದೇಶಕ್ಕೆ ಪ್ರತಿವರ್ಷ ನೂರಾರು ಜನ ಜಾನಪದ ಸಂಶೋಧಕರು ಭೇಟಿ ನೀಡುತ್ತಿರುತ್ತಾರೆ. ಹಾಗಾಗಿ ನಾಡಿನ ಬುಡಕಟ್ಟು ಸಂಸ್ಕೃತಿಯ ಪರಂಪರೆಯ ಜೀವನಾಡಿಯಾದ ಎತ್ತಪ್ಪ ದೈವದ ಗುಡ್ಡಕ್ಕೆ ಸುರಕ್ಷತೆ ಕಲ್ಪಿಸುವುದಲ್ಲದೆ ಗುಡ್ಡದ ಮೇಲಕ್ಕೆ ಹತ್ತಿಹೋಗಲು ಮೆಟ್ಟಿಲುರಸ್ತೆ, ಬೆಳಕು, ಶುದ್ಧಕುಡಿಯುವ ನೀರು, ನೆರಳಿನ ವ್ಯವಸ್ಥೆ ಜತೆಗೆ ಒಂದೆರಡು ದಿನ ಭಕ್ತರು ಅಲ್ಲಿಯೆ ಉಳಿದುಕೊಳ್ಳಲಿಕ್ಕೆ ಸಮುದಾಯಭವನ ನಿರ್ಮಿಸಿ ಅಭಿವೃದ್ಧಿಪಡಿಸಬೇಕಿದೆ.

ಚಳ್ಳಕೆರೆ ಜಗಲೂರಜ್ಜ ಸ್ವಾಮಿ ಮಹಾ ಪುಣ್ಯಕ್ಷೇತ್ರ : ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ನಗರಪ್ರದೇಶದ ರಾಷ್ಟ್ರೀಯ ಹೆದ್ದಾರಿಯ ಬೈಪಾಸ್‌ಗೆ ಕೂಗಳತೆ ದೂರದಲ್ಲಿರುವ ಬುಡಕಟ್ಟು ಸಾಂಸ್ಕೃತಿಕ ಕೇಂದ್ರ, ಪಶುಪಾಲಕ ಸಂಸ್ಕೃತಿ ಮೂಲದ ಜಗಲೂರಜ್ಜಸ್ವಾಮಿ ಮಹಾಪುಣ್ಯಕ್ಷೇತ್ರವಿದೆ. ಇದು ಗೊರ್ಲಕಟ್ಟೆ ಗ್ರಾಮದ ಪಶ್ಚಿಮದ ಭಾಗಕ್ಕೆ ಕೆರೆಯ ಬಳಿ ಕರೆಕಲ್ಲು ಗುಡ್ಡದ ನಡುವೆ ಮನಮೋಹಕವಾಗಿ ಕಂಗೊಳಿಸುವ ಕ್ಷೇತ್ರ. ಜಗಲೂರಜ್ಜ (ಸಾಂಸ್ಕೃತಿಕ ವೀರ ಜಗಲೂರು ಪಾಪನಾಯಕ) ಮಹಾಸ್ವಾಮಿ ಪುಣ್ಯಕ್ಷೇತ್ರ ಭಕ್ತರ ನೆಚ್ಚಿನ ತಾಣವಾಗಿದೆ. ಇದನ್ನು ಜಗಲೂರಜ್ಜ ದೇವಸ್ಥಾನ ಎಂದೂ ಕರೆಯುತ್ತಾರೆ. ಪಶುಪಾಲಕ ಸಂಸ್ಕೃತಿ ಮೂಲದ ಮ್ಯಾಸಬೇಡರ ಪ್ರಸಿದ್ಧ ಆರಾಧ್ಯ ದೈವ – ಸಾಂಸ್ಕೃತಿಕವೀರ ಜಗಲೂರಜ್ಜನ ಸಮಾಧಿಯೇ ಈಗ ಪುಣ್ಯಕ್ಷೇತ್ರವಾಗಿ ಮಾರ್ಪಟ್ಟಿದೆ. ದನ, ಕುರಿ ಸಾಕಾಣಿಕೆ ಮಾಡಿಕೊಂಡು ಜೀವನ ಸಾಗಿಸುವ ನಾಡಿನ ಮ್ಯಾಸಬೇಡ, ಕಾಡುಗೊಲ್ಲ, ಕರುಬ, ಜೋಗಿ, ಹೆಳವ ಮುಂತಾದ ಬುಡಕಟ್ಟು ಸಮುದಾಯ ಅಲ್ಲದೆ ಇತರೆ ಸಮುದಾಯದವರೂ ಕೂಡ ಪ್ರತಿ ಸೋಮವಾರ ಈ ಪುಣ್ಯಕ್ಷೇತ್ರದ (ಸಮಾಧಿ) ಬಳಿ ವಿಶೇಷ ಪೂಜೆ ಸಲ್ಲಿಸಿ ಇಲ್ಲಿಯೇ ಅಡುಗೆ ತಯಾರಿಸಿ ಪರ್ವ ಆಚರಿಸಿಕೊಂಡು ಬರುತ್ತಿರುತ್ತಾರೆ.

ನನ್ನಿವಾಳ ಕಟ್ಟೆಮನೆ ವ್ಯಾಪ್ತಿಯ ಪವಿತ್ರ ಕ್ಷೇತ್ರವಾಗಿರುವ ಕಾರಣ ಇಲ್ಲಿನ ಮ್ಯಾಸಬೇಡರ ಇಪ್ಪತ್ತಕ್ಕೂ ಹೆಚ್ಚು ಹಟ್ಟಿಯ ಜನರು ಮತ್ತು ಸರ್ವಧರ್ಮಿಯರು ಹಾಗೂ ವಿವಿಧ ಜಾತಿಯ ಜನರು ಮದುವೆ, ಜೌಳ, ನಾಮಕರಣ ಮುಂತಾದ ಶುಭಕಾರ್ಯ ಹಾಗೂ ಧಾರ್ಮಿಕ ಆಚರಣೆಗಳು ಆಗಾಗ ಜರುಗುತ್ತವೆ. ಅಲ್ಲದೆ ಜನರು–ಜಾನುವಾರುಗಳು ಮತ್ತು ಹೊಲದಲ್ಲಿ ಬಿತ್ತಿದೆ ಬೆಳೆಗೆ ರೋಗ–ರುಜನ ಕಾಣಿಸಿಕೊಂಡಾಗ ಜಗಲೂರಜ್ಜನಿಗೆ ಹರಕೆ ಮಾಡಿಕೊಂಡ ಭಕ್ತರು ದೇವಾಲಯದ ಬಳಿ ಹೋಗಿ ಪರ್ವ ಮಾಡಿಕೊಂಡು ಬರುತ್ತಾರೆ. ಮುಂಗಾರು ಹಂಗಾಮಿನ ಪ್ರತಿ ಆಷಾಡ ಮಾಸದ ಕಾರಹುಣ್ಣಿಮೆಯಿಂದ ಪ್ರಾರಂಭಿಸಿ ಶ್ರಾವಣಮಾಸ, ದಸರಾ, ದೀಪಾವಳಿ ಮತ್ತು ಯುಗಾದಿ ಸಂದರ್ಭದಲ್ಲಿ ಆರಾಧ್ಯ ದೈವ ಜಗಲೂರಜ್ಜಮಹಾಸ್ವಾಮಿಗೆ ನೂರಾರು ಜನ ಭಕ್ತರು ಹಾಲು–ಮೀಸಲು ನೈವೇದ್ಯ ತೆಗೆದುಕೊಂಡು ಹೋಗಿ ಅರ್ಪಿಸುವ ವಿಶಿಷ್ಟ ಸಂಪ್ರದಾಯವಿದೆ. ಮ್ಯಾಸಬೇಡ ಬುಡಕಟ್ಟು ಸಮುದಾಯದ ಆರಾಧ್ಯ ದೈವ ಗಾದ್ರಿಪಾಲನಾಯಕ, ಸೂರೇರಾಜ ದಡ್ಡಿಕಾಮನಾಯಕ, ದಡ್ಡಿ ಸೂರನಾಯಕ, ಸೂರ್ಯ ಯರಗಟ್ಟನಾಯಕ, ಜಗಲೂರು ಪಾಪನಾಯಕ, ಕೋರಿ ಯರಮಂಚನಾಯಕ, ಬೋರೆದೇವರು, ಕಂಪಳ ದೇವರು ಮುಂತಾದ ದೇವರ ದನಗಳು ನನ್ನಿವಾಳ ಕಟ್ಟೆಮನೆ ವ್ಯಾಪ್ತಿಯ ಈ ಮಹಾಕ್ಷೇತ್ರದ ಬಳಿ ಸೇರುತ್ತವೆ. ಈ ಪುಣ್ಯಕ್ಷೇತ್ರದಲ್ಲಿ ಪ್ರತಿವರ್ಷ ಯುಗಾದಿ ಹಬ್ಬದಲ್ಲಿ ಮೂರು ದಿನ ವಿಶೇಷ ಜಾತ್ರೆಯೂ ನಡೆಯುತ್ತದೆ. ಇದನ್ನೇ ಜಗಲೂರಜ್ಜನ ಜಾತ್ರೆ ಎಂದು ಕರೆಯುತ್ತಾರೆ.

ವಿಶಿಷ್ಟ ಆಚರಣೆ : ಉಪವಾಸ ವ್ರತ ಹಿಡಿದ ಪೂಜಾರಿ–ದಾಸಯ್ಯಗಳು ಮತ್ತು ಹರಕೆ ಮಾಡಿಕೊಂಡ ಭಕ್ತರು ದೇವರಗುಡಿಯಲ್ಲಿ ಅಕ್ಕಿ, ಬೆಲ್ಲ ಹಾಗೂ ಮೀಸಲು ಕುರಿ ಹಾಲಿನಿಂದ ನೈವೇದ್ಯ ತಯಾರಿಸಿ ತಂದು ದೇವರ ಸಮಾಧಿಗೆ ಅರ್ಪಿಸುತ್ತಾರೆ. ಮತ್ತು ಕುರಿ–ಕೋಳಿ ಬಾಡೂಟವನ್ನು ತಯಾರಿಸಿ ಊಟ ಮಾಡುತ್ತಾರೆ. ದೇವರ ತೀರ್ಥ, ಪ್ರಸಾದ ಹಾಗೂ ದೂಳ್ಳ (ಭಂಡಾರದ ಬೂದಿ) ತೆಗೆದುಕೊಂಡು ಹೋಗಿ ಮನೆಯಲ್ಲಿ ವರ್ಷತನಕ ಪೂಜೆ ಸಲ್ಲಿಸುತ್ತಾರೆ. ಮತ್ತು ರೋಗ–ರುಜಿನ ಕಾಣಿಸಿಕೊಂಡಾಗ ಕುಟುಂಬದ ಸದಸ್ಯರಿಗೆ, ಬಂಧು ಬಳಗದವರಿಗೆ, ಜಾನುವಾರು ಮತ್ತು ಬೆಳೆದ ದೂಳ್ಳ ಬಳಕೆ ಮಾಡಿದರೆ ಎಲ್ಲವೂ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ. ದೇವರ ಗುಡಿ ಇರುವ ಜಾಗ ತುಂಬಾ ವಿಸ್ತಾರವಾಗಿದ್ದು ಕರೆಕಲ್ಲಿನ ಚಿಕ್ಕ ಚಿಕ್ಕ ಗುಡ್ಡದ ನಡುವೆ ಜಗಲೂರಜ್ಜ ದೈವದ ಸಮಾಧಿ ಇದೆ. ಅದರ ಸುತ್ತ ಐವತ್ತು –ಅರವತ್ತು ಅಡಿ ಎತ್ತರದಲ್ಲಿ ಆಲ–ಅರಳಿ ಮರಗಳು, ಹುಣಸೆ ಮತ್ತು ಬೇವಿನ ಮರಗಳು ದಟ್ಟವಾಗಿ ಬೆಳೆದಿವೆ. ದೇವಸ್ಥಾನದ ಆವರಣದಲ್ಲಿ ಪ್ರವಾಸಿ–ಭಕ್ತರಿಗೆಂದೇ ನಿರ್ಮಿಸಿರುವ ಸುಸಜ್ಜಿತವಾದ ದೊಡ್ಡ ಯಾತ್ರಿನಿವಾಸ ಭವನ ಮತ್ತು ಅಡುಗೆ ತಯಾರಿಸಲು ಅಲ್ಲಲ್ಲಿ ಸಣ್ಣ ಭವನಗಳು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ದೇವರ ಗರ್ಭಗುಡಿಯನ್ನು ವೃತ್ತಾಕಾರವಾಗಿ ನಿರ್ಮಿಸಲಾಗಿದೆ. ದೇವರ ಸಮಾಧಿ ಹಾಗೂ ಪೂಜಾ ಸಾಮಗ್ರಿಗಳ ರಕ್ಷಣೆಗೆ ಚಾವಣಿ ಸುತ್ತಲೂ ಕಬ್ಬಿಣದ ಸರಳಿನ ಕಂಬಿ ಅಳಡಿಸಿದ್ದು ಸುತ್ತಲೂ ಕಲ್ಲಿನ ಕಂಪೌಂಡ್ ನಿರ್ಮಿಸಲಾಗಿದೆ. ಗರ್ಭಗುಡಿ ಮುಂದೆ ಏಳೆಂಟು ಅಡಿ ಎತ್ತರದ ದೀಪಸ್ತಂಭ ನಿಲ್ಲಿಸಲಾಗಿದೆ. ಜಾನಪದೀಯ ನೆಲೆಯನ್ನು ಹೊಂದಿರುವ ಈ ಪುಣ್ಯಕ್ಷೇತ್ರವನ್ನು ಸುತ್ತುವರೆದು ಬೆಳೆದ ಮಂಡಕಳ್ಳಿ, ಪಾಪಸ್ ಕಳ್ಳಿ, ಬಂದ್ರೆ, ತುಗ್ಗಲಿಮರ, ತಗಂಟೆ, ಮಂಗಾರೆ, ಕಾರೇ, ಹೊಂಗೆ, ಜಾಲಿ, ಬೇವು, ಮರಲೆ ವಿವಿಧ ಜಾತಿಯ ಮರ–ಗಿಡ–ಬಳ್ಳಿಗಳು, ಪಕ್ಕದ ಕೆರೆ, ಅಲ್ಲಲ್ಲಿ ಕಂಡು ಬರುವ ಕರೆಕಲ್ಲಿನ ಹೆಬ್ಬಂಡೆ ಇವು ಚಾರಣ ಪ್ರಿಯರನ್ನು ಕೈ ಬೀಸಿ ಕರೆಯುವಂತಿವೆ.

– 88ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕುವೆಂಪು ಅವರ ಕಥನ ಕವನಗಳಲ್ಲಿ ಅನಾವರಣಗೊಂಡ ಸಾಮಾಜಿಕ ನೆಲೆ

✍ **ರಾಶಿ ಎಂ. ಆರ್.** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜು, ಹುಣಸೂರು.

ಮಲೆನಾಡು ಕಂಡ ಧೀಮಂತ ವ್ಯಕ್ತಿತ್ವ ಕುವೆಂಪು ಅವರದು. ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಕುವೆಂಪು ಅವರ ಪ್ರತಿಭೆ ಅಸಾಧಾರಣವಾದುದು. ನಿಸರ್ಗದ ಕವಿ ಎಂದೇ ಖ್ಯಾತನಾಮರಾದ ಕುವೆಂಪು ಅವರ 'ನಾಗಿ' ಮತ್ತು 'ಮರಸು ಬೇಟೆ' ಕಥನ ಕವನಗಳನ್ನು ಸಾಮಾಜಿಕ ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಿ ವಿಮರ್ಶಿಸುವುದು ನನ್ನ ಈ ಲೇಖನದ ಉದ್ದೇಶವಾಗಿದೆ.

ಸಾಹಿತ್ಯ ಜೀವನದ ಪ್ರತಿಬಿಂಬ, ಓರ್ವ ಲೇಖಕ ತನ್ನ ಸಂವೇದನೆಯ ಜೀವಂತಿಕೆಯನ್ನು ತಾನು ವಾಸಿಸುತ್ತಿರುವ ಸಾಮಾಜಿಕ ಪರಿಸರದಲ್ಲೇ ಪ್ರಕಟಿಸಬೇಕು. ಇಲ್ಲವಾದರೆ ಆತನ ಬರವಣಿಗೆಯು ಜಡತ್ವವನ್ನು ಹೊಂದುತ್ತದೆ. ಸಮಕಾಲೀನ ಜೀವನವನ್ನು ಪ್ರಭಾವಿಸುವ ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಪ್ರತಿಕ್ರಿಯಿಸಬೇಕು. ಹಾಗಾಗದಿದ್ದರೆ ಸಾಹಿತ್ಯ ಜೀವನದಿಂದ ಹೊರತಾಗುತ್ತದೆ.

ಈ ಸಂದರ್ಭದಲ್ಲಿ ಗಿರಡ್ಡಿಯವರ ಮಾತುಗಳನ್ನು ನೆನಪಿಸಿ ಕೊಳ್ಳಬಹುದು. 'ಪ್ರತಿಯೊಬ್ಬ ಲೇಖಕನೂ ಸಮಾಜವೊಂದರ ಅಂಗವಾಗಿ ಬೆಳೆಯುವುದರಿಂದ ಅವನ ವ್ಯಕ್ತಿತ್ವದ ರಚನೆಯಲ್ಲಿ, ದೃಷ್ಟಿಕೋನದ ಬಣ್ಣಗಳಲ್ಲಿ, ಭಾವನೆಗಳ ಸಂಘರ್ಷದಲ್ಲಿ, ಬೌದ್ಧಿಕ ಸ್ವರೂಪದಲ್ಲಿ, ಸಂವಹನದಲ್ಲಿ ಸಾಮಾಜಿಕ ಪರಿಸರದ ಪ್ರಭಾವಗಳು ವ್ಯಕ್ತವಾಗಿಯೋ ಅವ್ಯಕ್ತವಾಗಿಯೋ ಅನಿವಾರ್ಯವಾಗಿ ಸೇರಿಕೊಂಡಿರುತ್ತವೆ. ಆದರೆ ಈ ಪ್ರಭಾವಗಳು ಲೇಖಕನ ಸಂವೇದನೆಯನ್ನು ಆಳದಲ್ಲಿ ಪ್ರಭಾವಿಸುವುದರಿಂದ ಅವನ ಒಟ್ಟು ಸಂವೇದನೆಯ ದ್ರವ್ಯದಲ್ಲೇ ಕರಗಿರುವುದರಿಂದ ಅವುಗಳನ್ನು ವಿಂಗಡಿಸಿ ತೋರಿಸುವುದು ಕಠಿಣವಾದ ಕೆಲಸ'.[1]

ಮಲೆನಾಡ ಹಳ್ಳಿಗಳ ಬಾಹ್ಯಸೌಂದರ್ಯ ನಮ್ಮನ್ನು ಬೆರಗು ಗೊಳಿಸುವಂತೆ ಇದ್ದರೂ, ಆಂತರಿಕ ಸ್ವರೂಪ ಭಿನ್ನವಾಗಿರುತ್ತದೆ. ಅಲ್ಲದೇ ಉತ್ತಮ ಪರಿಸರ, ಮಲೆನಾಡ ಹಳ್ಳಿಯ ಸಕಲ ಲಕ್ಷಣಗಳನ್ನೆಲ್ಲ ಒಳಗೊಂಡಿದ್ದರೂ ಅದು ಹಲವು ಸಮಸ್ಯೆಗಳ ಗೌಪ್ಯ ತಾಣವಾಗಿರುತ್ತದೆ. ಸಮಾಜದಲ್ಲಿ ಅಸ್ತಿತ್ವದಲ್ಲಿರುವ ವಿವಿಧ ಸಮಸ್ಯೆಗಳಾದ ಜಾತಿಪದ್ಧತಿ, ಮೂಢನಂಬಿಕೆ, ವಿವಾಹಪದ್ಧತಿ, ಬಾಲ್ಯವಿವಾಹ, ವಿಧವೆಯರ ಸ್ಥಿತಿಗತಿ, ಮೇಲುಕೀಳೆಂಬ ತಾರತಮ್ಯ, ವೇಶ್ಯಾವಾಟಿಕಾ ವೃತ್ತಿ, ರೈತರ ಬವಣೆ, ಬಡವ–ಶ್ರೀಮಂತರೆಂಬ ವರ್ಗಭೇದ ಕೌಟುಂಬಿಕ ಸಮಸ್ಯೆ, ಅನೈತಿಕತೆ ಮೊದಲಾದವುಗಳನ್ನು ಈ ಲೇಖನದಲ್ಲಿ ಸಾಮಾಜಿಕ ನೆಲೆಯೊಳಗೆ ಗುರುತಿಸಿ, ಕುವೆಂಪು ಅವರ ಮೇಲೆ ಹೆಸರಿಸಿದ ಎರಡು ಕಥನಕವನಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ನಾಗಿ : ಈ ಕಥನಕವನದ ನಾಯಕಿ 'ನಾಗಿ'. ಈಕೆ ಕಥನದ ಕೇಂದ್ರಪಾತ್ರ. ನಾಗಿ ಪಾತ್ರದ ಜೊತೆಗೆ ಮಾದ, ಮಾದಿ, ಸಿಂಗ ಪಾತ್ರಗಳು ಬರುತ್ತವೆ. ಹೆಚ್ಚು ಪಾತ್ರಗಳ ತೊಡಕಿಲ್ಲದೇ ಮೇಲಿನ ಪಾತ್ರಗಳೊಟ್ಟಿಗೆ ಕಥೆಯೂ ಸಾಗುತ್ತದೆ. ಕುವೆಂಪು ಅವರು ಕಥನಕವನದ ಆರಂಭದಲ್ಲಿ ಮಲೆನಾಡ ಪ್ರಕೃತಿಯ ವರ್ಣನೆಯನ್ನು ಈ ರೀತಿಯಾಗಿ ಚಿತ್ರಿಸಿದ್ದಾರೆ.

"ಹಸುರು ಬೆಟ್ಟದ ಓರೆಯಲ್ಲಿ ಬೈಗುಗೆಂಪು ಆಡುತ್ತಿತ್ತು; ಗರಿಯ ತೆರದಿ ಬೈಗುಗಪ್ಪು ಮೆಲ್ಲನಿಳಿಯುತ್ತಿದ್ದಿತು!"

ದನಗಳನ್ನು ಕಾಯಲು ಹೋದ ತಬ್ಬಲಿನಾಗಿ ಗುಡಿಸಲೊಳಗೆ ಬಂದಳು ಎಂದು ನಿರೂಪಿಸುವ ಕವಿಯ ಮಾತುಗಳಿಂದ ನಾಯಕಿ ಬಡತನದ ಕುಟುಂಬಕ್ಕೆ ಸೇರಿದವಳೆಂದು ತಿಳಿಯುತ್ತದೆ. ದನ ಕಾಯಲು ಹೋದ ನಾಗಿ ತಬ್ಬಲಿ. ಮಲತಾಯಿಯಾದ ಮಾದಿಯ ಬೈಗುಳದ ಆರೈಕೆಯಲ್ಲಿ ಬೆಳೆದವಳು. ಮಾದಿ ತುಂಗೆ ಎಂಬ ದನವು ಕಾಡಿನಲ್ಲಿ ಕಳೆದುಹೋಗಿದ್ದರಿಂದ, ನಾಗಿಯನ್ನು ಹೊಡೆದು ಮನೆಯಿಂದ ಹೊರಗೆ ಹಾಕುತ್ತಾಳೆ. ಮಲತಾಯಿಯ ಬೈಗುಳವನ್ನು ಕೇಳಲಾರದೆ "ಸವತಿ ತಾಯಿಗಿಂತ ಗಾದೆ ಲೇಸು" ಎಂದು ತಿಳಿದು ತುಂಗೆಯನ್ನು ಹುಡುಕಿ ತರಲು ನಾಗಿ ಕತ್ತಲಲ್ಲಿ ಕಾಡಿಗೆ ಪ್ರವೇಶಿಸುತ್ತಾಳೆ. ಮಲತಾಯಿ ಮಾದಿಯ ಭಯ ತಬ್ಬಲಿ ನಾಗಿಗೆ ಕಗ್ಗತ್ತಲಿನ ಕಾಡಿನ ಭೀತಿಯನ್ನು ಓಡಿಸುವ ಮಟ್ಟಿಗಿತ್ತು ಎನ್ನುವ ನಿರೂಪಕರ ಮಾತು ಮಲತಾಯಿಯ ಮನಸ್ಸಿನ ಕಾಠಿಣ್ಯತೆಯನ್ನು ಅರಿವಿಗೆ ತರುತ್ತದೆ. ಕಾಡಿನ ಭಯಕ್ಕಿಂತ ಮಲತಾಯಿಯ ಭಯವೇ ಮೇಲುಗೈ ಸಾಧಿಸುವುದು ವಿಪರ್ಯಾಸ. ಮಲತಾಯಿ ಎಂದಿಗೂ ತಾಯಿಯಾಗಲಾರಳು ಎಂಬ ಸತ್ಯ ಮಾದಿಯ ವರ್ತನೆಯಿಂದ ತಿಳಿಯುತ್ತದೆ. ನಾಗಿ ಸತ್ತ ತನ್ನ ತಾಯಿಯ ರೂಪವನ್ನು ಮರಗಳ ಹಿಂದೆ ಕಂಡಂತೆ ಭಾವಿಸುತ್ತಾ ತುಂಗೆಯನ್ನು ಅರಸುತ್ತಾ ಹೊರಡುತ್ತಾಳೆ.

ಇದೇ ಸಂದರ್ಭದಲ್ಲಿ ಬೇಟೆಗೆಂದು ಹೋದ ಮಾದ ಕಾಕತಾಳೀಯ ವಾಗಿ ಅದೇ ಕಾಡಿನಲ್ಲಿ ಎದುರಾಗುವ ಸನ್ನಿವೇಶವನ್ನು ಕವಿ ಚಿತ್ರಿಸಿದ್ದಾರೆ. ಕತ್ತಲಲ್ಲಿ ತನ್ನ ಕರುಳ ಕಂದನನ್ನು ಅರಿಯದೆ ಕಾಡಿನ ಜಂತುವೆಂದು ತಿಳಿದು ಗುರಿಯಿಟ್ಟು ಗುಂಡಿನಿಂದ ಹೊಡೆದನು. ಗುಂಡಿನ ಶಬ್ದದೊಂದಿಗೆ ಅವ್ವ, ಅಪ್ಪ ಎನ್ನುವ ಮನುಷ್ಯ ಧ್ವನಿ ಕೇಳಿದೊಡನೆ ಮಾದನ ಜಂಘಾಬಲವೇ ಹುದುಗಿಹೋಯಿತು. ಕಾಡಿನ ಜಂತು ಬಿದ್ದ ಸ್ಥಳಕ್ಕೆ ಮಾದ ಧಾವಿಸಿದ. ತಾನು ಕೊಂದದ್ದು ತನ್ನ ಮಗಳು ನಾಗಿಯೆಂದು ತಿಳಿದು ಅಪಾರ ದುಃಖಿಸಿದ. ಇನ್ನೇನೋ ಪ್ರಾಣ ಕಳೆದುಕೊಳ್ಳುತ್ತಿದ್ದ ನಾಗಿ ತುಂಗೆಯನ್ನು ಹುಡುಕಿ ತರುವೆ ಬಯ್ಯದಿರೆಂದು ಅಪ್ಪನಲ್ಲಿ ಅಂಗಲಾಚುತ್ತಾಳೆ. ಮಗಳ ಸ್ಥಿತಿಯನ್ನು ಕಂಡ ತಂದೆ ನಾಗಿಯ ದೇಹವನ್ನು ಅಪ್ಪಿ ಸತ್ತುಹೋಗುತ್ತಾನೆ. ಇದು ತಂದೆಯಾಗಿ ನಾಗಿಯ ಮೇಲಿನ ಮಾದನ ಅದಮ್ಯ ಪ್ರೀತಿಯನ್ನು ತೋರಿಸುತ್ತದೆ. ಮಾದ ಹೆಂಡತಿ (ನಾಗಿಯ ತಾಯಿ) ಸತ್ತ ಅನಂತರ ನಾಗಿಯನ್ನು ನೋಡಿಕೊಳ್ಳಲು ಮಾದಿಯನ್ನು ಎರಡನೆ ಮದುವೆಯಾದ. ವಿಧುರನಾದ ಮಾದ ಮರುವಿವಾಹವಾಗಿದ್ದು ಮಗಳ ಹಿತದೃಷ್ಟಿಯಿಂದ ಹೊರತು ತನ್ನ ಸ್ವಾರ್ಥಕ್ಕಲ್ಲ ಎಂಬುದು ಆತನ ಸಾವಿನಿಂದ ವಿಧಿತವಾಗುತ್ತದೆ.

ಇತ್ತ ಗುಡಿಸಿಲಿನಲ್ಲಿ ಬೇಟೆಗಾಗಿ ಹೋದ ಮಾದನನ್ನು ಮಾದಿ ಎದುರುನೋಡುತ್ತಾ ಕುಳಿತಿದ್ದಳು. ಎಷ್ಟು ಕಾದರೂ ಮಾದ ಬರಲಿಲ್ಲ. ಊರಿನವರು ನಾಗಿ ಮತ್ತು ಮಾದನನ್ನು ಹುಡುಕಿ ಬರಲು ಕಾಡಿಗೆ ತೆರಳಿದರು. ಅವರ ಸುಳಿವು ಎಲ್ಲೂ ಕಾಣದೇ ಹಿಂತಿರುಗಿದರು. ಬೇಟೆಗಾಗಿ ಹೋದ ಮಾದನ ಸಾವಿನ ಸುದ್ದಿ ತಿಳಿದ ಕೆಲವು ದಿನಗಳ ಅನಂತರ, ಮಾದಿ ಸಿಂಗನೆಂಬ ವರನೊಂದಿಗೆ ಮರುವಿವಾಹವಾದಳು. ಸತ್ತ ಗಂಡನ ನೆನಪು ದುಃಖ ತಂದರೂ, ಅದು ದೀರ್ಘಕಾಲಿಕವಾಗಿ ಉಳಿಯದೇ ಸಿಂಗನ ಪ್ರೇಮದಲ್ಲಿ ಮರೆಯಾಯಿತು. ವಿಧವೆಯಾದ ಮಾದಿ ಮರುವಿವಾಹವಾಗಲು ನಿರ್ಧರಿಸಿದ್ದು ಪ್ರಗತಿಪರ ಧೋರಣೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂದುಕೊಂಡರೂ, ಅವಳ ವರ್ತನೆಯಿಂದ ಅದು ಓದುಗರಲ್ಲಿ ಬೇಸರ ತರಿಸದಿರದು.

ಮಾದ ಮತ್ತು ಮಾದಿ ಪುನರ್ವಿವಾಹವಾದರೂ ಬದುಕಿನಲ್ಲಿ ನೆಮ್ಮದಿ ಕಾಣದಿರುವುದು ಮುಂದೆ ಮಾದಿಯ ಜೀವನದಲ್ಲಿ ಬಂದ ಸಿಂಗನು ಮನಃಶಾತಿಯನ್ನು ಪಡೆಯದೇ ಹೋಗುವುದು – ಈ ಎರಡೂ ಸಂಗತಿಗಳು ಮುಂದೊದಗುವ ಅನಾಹುತಕ್ಕೆ ಅಡಿಪಾಯದಂತೆ ಕಾಣುತ್ತವೆ. ಹಲವು ದಿನಗಳು ಕಳೆದ ಬಳಿಕ ಒಮ್ಮೆ ಬೆತ್ತವನ್ನು ತರಲು ಮಾದಿ ಮತ್ತು ಸಿಂಗ ಕಾಡಿಗೆ ಹೊರಡುತ್ತಾರೆ. ಬೆತ್ತವನ್ನು ಕಡಿದು ತರುತ್ತಿರುವಾಗ ದಾರಿಯ ಹಳುವಿನಲ್ಲಿ ಬಿಳಿಯ ಎರಡು ಅಸ್ಥಿಪಂಜರಗಳು ಒಂದನ್ನೊಂದು ಅಪ್ಪಿರುವುದನ್ನು ಸಿಂಗ ನೋಡಿ ಭಯಗೊಂಡು ಮಾದಿಗೆ ತೋರಿಸುತ್ತಾನೆ. ಮಾಡಿದ ಕರ್ಮ ಹಿಂಬಾಲಿಸದೆ ಬಿಡದು ಎಂಬಂತೆ ಮಾದಿಗೆ ಅದು ತನ್ನ ಮೊದಲ ಗಂಡ ಮಾದ ಮತ್ತು ಸವತಿಯ ಮಗಳು ನಾಗಿಯ ದೇಹವೆಂದು ಬಹುಬೇಗ ತಿಳಿದು ಮೂರ್ಛೆಹೋಗುತ್ತಾಳೆ. ಅವುಗಳು ಸಿಂಗ ಮತ್ತು ಮಾದಿಯರನ್ನು ಮೂದಲಿಸುತ್ತಿರುವಂತೆ ಕಾಣುತ್ತವೆ. ಹೆದರಿದ ಸಿಂಗ ಮತ್ತು ಮಾದಿ ಊರು ಸೇರಿ ಕೆಲವು ದಿನಗಳ ಅನಂತರ ಭೀತಿರೋಗದಿಂದ ಬಳಲಿ ಸತ್ತುಹೋಗುತ್ತಾರೆ.

"ಅಲ್ಪಕಾಲದಲ್ಲೇ ನಾಗಿಯ ಸಾವು ಮಾದಿಯನ್ನು ಕಾಡಿನಲ್ಲೇ ಬಲಿ ತೆಗೆದುಕೊಳ್ಳುತ್ತದೆ. ಈ ಎಲ್ಲಾ ಸಾವುಗಳೂ ಅರಣ್ಯದಲ್ಲೇ ನಡೆಯುತ್ತವೆ. ಮಾದ ಮತ್ತು ಮಾದಿ ಇಬ್ಬರೂ ಬದುಕಿನಲ್ಲಿ ಸೋಲುತ್ತಾರೆ. ಇಬ್ಬರಿಗೂ ಬೇರೆ ಬೇರೆ ಎರಡು ಮದುವೆಗಳಾಗಿರುತ್ತವೆ. ಆದರೂ ಇವರಿಗೆ ಬದುಕು ಸಾಧ್ಯವಾಗುವುದಿಲ್ಲ. ಇದು ಮುಖ್ಯ. ಕವನದಲ್ಲಿ ಸೃಷ್ಟಿಯಾಗಿರುವ ಮುಗ್ಧ ಎಳೆಯ ಹುಡುಗಿ ನಾಗಿಯ ಬದುಕಿನ ದುರಂತ ಮತ್ತು ಅದು ಬೆಳೆದ ರೀತಿ ಅದಕ್ಕೆ ಕಾರಣವಾದ ಮಲತಾಯಿ ಮಾದಿಗೆ ಬದುಕು ಸಾಧ್ಯವಾಗದಿರುವುದು ಕವನದಲ್ಲಿ ಮುಖ್ಯ ಅಂಶ. ನಾಗಿಯನ್ನು ಅರಣ್ಯಕ್ಕೆ ತಳ್ಳುವವಳು ಮಾದಿಯೆ. ಈ ತಳ್ಳುವಿಕೆ ಅರಣ್ಯದ ವಿಧ್ವಂಸಕ ಶಕ್ತಿಗೆ ಒಂದು ರೀತಿಯ ಸವಾಲಾಗಿ ಪರಿವರ್ತನೆಯಾಗುತ್ತದೆ. ಮಾದಿ ಮತ್ತು ಸಿಂಗ ಇಬ್ಬರೂ ನಾಗಿ ಮತ್ತು ಮಾದರ ಅಸ್ಥಿಪಂಜರಗಳ ದರ್ಶನದಿಂದ ಅರಣ್ಯದಲ್ಲೇ ಸಾಯುತ್ತಾರೆ. ಕವನದಲ್ಲಿ ಇವರ ಸಾವು ಒಂದು ರೀತಿಯ ದುಷ್ಕರ್ಮದ ಫಲವಾಗಿ ಬರುತ್ತದೆ. ಮಾದಿಯ ಅಮಾನುಷ ಕೃತ್ಯಕ್ಕೆ ಅರಣ್ಯದ ಕರಾಳ ಶಕ್ತಿಯೇ ಅವಳಿಗೆ ಒಂದು ರೀತಿ ಶಿಕ್ಷೆಯ ಮೂಲವಾಗಿ ಬರುತ್ತದೆ".[2]

ಇಂದಿಗೂ ನಾಗಿ ಮತ್ತು ಮಾದ ಹುಣ್ಣಿಮೆಯ ರಾತ್ರಿಯಲ್ಲಿ ದೆವ್ವವಾಗಿ ಓಡಾಡುತ್ತಿರುವರೆಂದು ಅಲ್ಲಿಯ ಜನರು ಮಾತನಾಡುವರೆಂದು ಹೇಳುವ ಕವಿ ಮಲೆನಾಡ ಸಾಮಾಜಿಕ ಪರಿಸರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. "ಇದು ನಡೆದ ಘಟನೆ. ಆದರೆ ಇದು ಮಲೆನಾಡಿನ ಜನಜೀವನದಲ್ಲಿ ಪಡೆದುಕೊಂಡ ತಿರುವು. ಬಾಳಿಗೆ ತೀರ ಹತ್ತಿರವಾಗಿದೆ" ಈ ಮಾತಿಗೆ ಪೋಷಕವಾಗಿ 'ಮಲೆನಾಡಿನ ಚಿತ್ರಗಳು' ಎಂಬ ಕೃತಿಯಲ್ಲಿ ಬರುವ "ನಾನೂ ನೀನೂ ನಂಬದಿದ್ದರೂ ಹಳ್ಳಿಯಲ್ಲಿ ಪ್ರತಿಯೊಬ್ಬನೂ ಭೂತದ ಮಹಿಮೆಯಲ್ಲಿ ನಮ್ಮಿಂದ ಗ್ರಹಿಸಲಸದಳವಾದ ನಂಬಿಕೆ ಇಟ್ಟಿದ್ದಾನೆ. ಭೂತದ ವಿಷಯವಾದ ಕತೆಗಳು ನಿಜವಾಗಿ ನಡೆದವೆಂದೇ ಅವನ ಬಲವಾದ ನಂಬಿಕೆ. ಹೆಚ್ಚೇನು ಈ ನಂಬಿಕೆಯ ಮೇಲೆಯೇ ಅವನು ಜೀವಿಸುತ್ತಾನೆ" ಎನ್ನುವ ಕುವೆಂಪುರವರ ನುಡಿಗಳನ್ನು ಇಲ್ಲಿ ನೆನೆಯಬಹುದು.[3]

ಕುವೆಂಪು ಅವರ ನಾಗಿ ಕಥನಕವನ ದುರಂತದಲ್ಲಿ ಅಂತ್ಯಗೊಳ್ಳುತ್ತದೆ. ಕಥನಕವನದಲ್ಲಿ ಬರುವ ನಾಲ್ಕೂ ಪಾತ್ರಗಳು ದಾರುಣ ಸಾವಿನೊಂದಿಗೆ ಅಂತ್ಯಗೊಳ್ಳುತ್ತವೆ. ವಿದ್ಯುಕ್ತವಾಗಿ ಕಥನ ಇಲ್ಲಿಗೆ ಕೊನೆಗೊಳ್ಳುತ್ತದೆ.

ಮರಸು ಬೇಟೆ : ಈ ಕಥನಕವನದಲ್ಲಿ ಎರಡು ಪಾತ್ರಗಳಿವೆ. ಅವುಗಳೆಂದರೆ ತಂದೆ ಮತ್ತು ಮಗನ ಪಾತ್ರ. ಬೇಟೆಯಾಡಲು ಹೋಗುವ ತಂದೆಯೊಟ್ಟಿಗೆ 7 ವರ್ಷದ ಮಗ ತಾನೂ ಕಾಡಿಗೆ ಬರುವುದಾಗಿ ಹಠ ಹಿಡಿಯುತ್ತದೆ. ತಂದೆ ಬೇಡವೆಂದು ಹೊರಟರೂ ಆತನಿಗೆ ಅರಿಯದಂತೆ ಹಿಂಬಾಲಿಸುತ್ತದೆ. ಕಾಡಿನಲ್ಲಿ ಮರಸು ಬೇಟೆಯಾಡುತ್ತಿದ್ದ ತಂದೆ ಮೊದಲು ಗುರಿಯಿಟ್ಟು ಹೊಡೆದಾಗ ಆ ಗುಂಡು ಸಿಡಿಯುವುದಿಲ್ಲ. ಅದಕ್ಕೆ ಕಾರಣವೇನೆಂದು ಬಂದೂಕನ್ನು ಪರೀಕ್ಷಿಸುವಾಗ, ದೂರದಲ್ಲಿ ಬರುತ್ತಿದ್ದ ತನ್ನ ಮಗುವನ್ನು ನೋಡಿ ತಂದೆ ಭಯಗೊಳ್ಳುತ್ತಾನೆ. ಅದೃಷ್ಟವಶಾತ್ ಗುಂಡು ಸಿಡಿಯದೇ ಮಗು ಬದುಕುಳಿಯುತ್ತದೆ. ಬಂದೂಕಿನ ಗುಂಡು ಸಿಡಿಯದೇ ಮಗು ಉಳಿದೀತೆಂದು ಅದಕ್ಕೆ ನಮಸ್ಕರಿಸಿ ಅಂದಿನಿಂದ ಬೇಟೆಯಾಡಿ ಇತರ ಜೀವಗಳನ್ನು ಹಿಂಸಿಸುವುದಿಲ್ಲವೆಂದು ವ್ರತವನ್ನು ಕೈಗೊಳ್ಳುತ್ತಾನೆ. ವಿದ್ಯುಕ್ತವಾಗಿ ಕಥನಕವನ ಇಲ್ಲಿಗೆ ಕೊನೆಗೊಳ್ಳುತ್ತದೆ.

ನಾಗಿ ಮತ್ತು ಮರಸು ಬೇಟೆ ಕಥನಕವನದಲ್ಲಿನ ಸಾಮ್ಯತೆ ಮತ್ತು ವೈವಿಧ್ಯತೆಯ ಅಂಶಗಳು

ನಾಗಿ ಕಥನಕವನ ಮುಗಿಯುವಷ್ಟರಲ್ಲಿ ಅಲ್ಲಿ ಬಿತ್ತರಗೊಂಡ ಪಾತ್ರಗಳೆಲ್ಲವೂ (ನಾಗಿ ಮತ್ತು ಮಾದ, ಸಿಂಗ, ಮಾದಿ, ಕಾಣೆಯಾದ ತುಂಗೆ ಕೂಡ) ಸಾವಿನೊಂದಿಗೆ ಪಲಾಯನಗೊಳ್ಳುತ್ತವೆ.

ಬೇಟೆಗಾಗಿ ಹೋದ ಮಾದ ಮತ್ತು ಮಗಳು ನಾಗಿ ದುರಂತ ಸಾವನ್ನಪ್ಪುತ್ತಾರೆ. ಇದು ಮರಸು ಬೇಟೆ ಕಥನ ಕವನದಲ್ಲಿ ಭಿನ್ನವಾಗಿ ನಿರೂಪಣೆಗೊಂಡಿದೆ. ನಾಗಿ ಮತ್ತು ಮಾದರ ಮುಖಾಮುಖಿ ಕಾಡಿನಲ್ಲಾಗುತ್ತದೆ. ಅದು ಬೇಟೆಯ ಸಂದರ್ಭದಲ್ಲಿ. ಅಂತೆಯೇ ಮರಸು ಬೇಟೆ ಕಥನಕವನದಲ್ಲಿ ತಂದೆ–ಮಗನ ಮುಖಾಮುಖಿ ಕಾಡಿನಲ್ಲಿ ಬೇಟೆಯಾಡುವ ಸಂದರ್ಭದಲ್ಲಾಗುತ್ತದೆ.

ಇಲ್ಲಿ ಮಗ ಮತ್ತು ತಂದೆ ಸಾವಿಗೀಡಾಗುವ ಪ್ರಸಂಗ ಬರುವುದಿಲ್ಲ. ಬದಲಿಗೆ ಈರ್ವರೂ ಬದುಕುಳಿಯುತ್ತಾರೆ.

ನಾಗಿ ಕಥನಕವನದಲ್ಲಿ ಮುಂದೊದಗುವ ದುರಂತದ ಪ್ರತೀಕವೆಂಬಂತೆ ಕಾಡು ಪ್ರತಿಧ್ವನಿಗೈಯ್ಯುತ್ತದೆ. ಅದೇ ರೀತಿಯಾಗಿ ಮರಸು ಬೇಟೆ ಕಥನಕವನದಲ್ಲಿ ಮುಂದೊದಗುವ ದುರಂತತೆಯನ್ನು ಧ್ವನಿಸುವಂತೆ ಕಾಡಿನ ಮರಗಳು ಗೋಳಿಡುವ ಸನ್ನಿವೇಶ ಮಲೆನಾಡಿನ ಕಾಡುಗಳನ್ನು ಓದುಗರ ಕಣ್ಣಮುಂದೆ ತಂದು ನಿಲ್ಲಿಸುತ್ತದೆ. ಅದಕ್ಕೆ ನಿದರ್ಶನವಾಗಿ ಕಥನಕವನಗಳ ಕೆಳಕಂಡ ಸಾಲುಗಳನ್ನು ಗಮನಿಸಬಹುದು.

"ಜನವಿಹೀನವಾದ ಕಾಡು, ದಟ್ಟವಾದ ಮಲೆಯ ನಾಡು.....
ಅವಳ ಕೂಗಿಗೆ ಬೆಟ್ಟಗುಡ್ಡಗಳೆಲ್ಲ ಮರುದನಿ ಬೀರುತಿರಲು....."[4]

(ನಾಗಿ)

"ತೂಗಿ ಮರದಲಿ ಗಾಳಿ ಸುಯ್ಯಿಡೆ,
ಒಂದಕೊಂದಕೆ ತೀಡಿ ಮೆಳೆಯಲಿ
ಬಿದಿರು ಚೀರಿಡಲಡವಿ ನರಳಿತು
ರೋದಿಸುವ ವೋಲು
ಹಾಡ ನಿಲ್ಲಿಸಿತಡವಿ ಹಕ್ಕಿ;
.....
ಯಾರೊ ಕೂಗಿದ ಹಾಗೆ ಅಲ್ಲವೆ?
ಯಾರೊ ಗೋಳಿಟ್ಟಂತೆ ಅಲ್ಲವೆ?
ಬಿದಿರು ಮೆಳೆಯಲಿ ಕೂಗಿತೇನೋ!
ಏನು ಗಾಳಿಯಿದು!....."[5]

(ಮರಸು ಬೇಟೆ)

ಮೇಲ್ಕಂಡ ಎರಡು ಕಥನ ಕವನಗಳಲ್ಲಿ ವಿಧವಾ ಮರುವಿವಾಹ, ಮಲತಾಯಿ ಧೋರಣೆ, ದೆವ್ವಗಳ ಪ್ರಕರಣ, ಬಡತನ, ಮೂಢನಂಬಿಕೆ, ಮಲೆನಾಡ ಪ್ರಕೃತಿಯ ವರ್ಣನೆ, ಬೇಟೆ – ಮೊದಲಾದವುಗಳು ಸಾಮಾಜಿಕ ನೆಲೆಯೊಳಗೆ ಬಿಂಬಿತವಾಗಿವೆ.

– 22ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹಾ.ಮಾ.ನಾ. ಅವರ ವೈಚಾರಿಕ ಬರಹಗಳಲ್ಲಿ ಶೈಕ್ಷಣಿಕ ಚಿಂತನೆಗಳು

✍ ಡಾ. ಅನುಸೂಯಾ ಜಿ. ಪಾಟೀಲ, ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ,

ಯಾವುದೇ ಒಂದು ದೇಶ ಅಥವಾ ಪ್ರಾಂತ ಅಭಿವೃದ್ಧಿ ಹೊಂದ ಬೇಕಾದರೆ ಆ ಪ್ರಾಂತದ ಜನರು ಬುದ್ಧಿವಂತರಾಗಿರಬೇಕು, ಚಾಣಾಕ್ಷನಾರಾಗಿರಬೇಕು, ಅಕ್ಷರಸ್ಥರಾಗಿರಬೇಕು, ಮೌಲ್ಯಯುತ ಒಳ್ಳೆಯ ಗುಣಮಟ್ಟದ ಜನಸಂಖ್ಯೆಯನ್ನು ಅದು ಹೊಂದಿರಬೇಕು. ಮೌಲ್ಯರಹಿತ ಜನರಿದ್ದಾಗ ಅವರು ಆ ಪ್ರಾಂತಕ್ಕೆ ಹೊರೆಯಾಗುವರೆ ಹೊರತು ಯಾವುದೇ ರೀತಿಯಲ್ಲಿ ಸಕಾರಾತ್ಮಕವಾಗಿರುವುದಿಲ್ಲ. ಕಾಲದಿಂದ ಕಾಲಕ್ಕೆ ಸಮಾಜವೂ ದಿನೇ ದಿನೇ ಬದಲಾವಣೆ ಹೊಂದುತ್ತಲೇ ಬರುತ್ತಿದೆ. ಹಾಗೆ ಆಗುವುದು ಒಳ್ಳೆಯದೇ ಕಾರಣ. ಈ ಸಮಸ್ತ ಸಂಸಾರವೇ ಪರಿವರ್ತನಶೀಲವಾದದ್ದು. ಯಾವುದೇ ಸಂದರ್ಭದಲ್ಲಿ ಅದು ನಿಂತ ನೀರಲ್ಲ ಅದು ನಿರಂತರವಾಗಿ ಹರಿಯುತ್ತಿರುತ್ತದೆ. ಹಾಗಿದ್ದಲ್ಲಿಯೇ ಸ್ವಚ್ಛತೆ, ಶುದ್ಧತೆ ಇರುವುದುಂಟು. ವ್ಯಕ್ತಿ ಬದಲಾಗುವ ಸನ್ನಿವೇಶಕ್ಕೆ ಸೂಕ್ತವಾಗಿ ಸ್ಪಂದಿಸಿ ಉಳಿದು ಬೆಳೆಯಬೇಕು. ಆಗ ಮಾತ್ರ ನಾಗರೀಕತೆ ಮುಂದುವರೆಯುತ್ತದೆ. ಈ ಪ್ರಕ್ರಿಯೆಯಲ್ಲಿ ಶಿಕ್ಷಣದ ಪಾತ್ರ ಅದ್ವಿತೀಯವಾದುದು, ಅನಿವಾರ್ಯವಾದುದು. ಜಡವಾದ ಸಮಾಜದಲ್ಲಿ ಚೈತನ್ಯ – ಜೀವಕಳೆ ತುಂಬಿ, ಅದರಲ್ಲಿ ಹೊಸತನ್ನು ತಂದು ಸುಧಾರಿಸುವ ಸುಕಾರ್ಯದಲ್ಲಿ ಶಿಕ್ಷಣದ ಪಾತ್ರ ಅತಿ ಮಹತ್ವ ಪಡೆದಿರುವುದಾಗಿದೆ. 'ಶಿಕ್ಷಣ ಜೀವನದ ಒಂದು ಅವಿಭಾಜ್ಯ ಅಂಗ' ಎಂಬುದನ್ನು ಪ್ರಪಂಚದ ಶ್ರೇಷ್ಠ ಚಿಂತಕರೆಲ್ಲರ ಒಟ್ಟಾಭಿಪ್ರಾಯವಾಗಿದೆ. ಶಿಕ್ಷಣವು ಇಂದು ಸಂಕುಚಿತಾರ್ಥದಲ್ಲಿ ಶಾಲಾ ಶಿಕ್ಷಣವಾಗಿದೆ. ಆದರೆ ಅದು ವಿಶಾಲಾರ್ಥದಲ್ಲಿ ಜೀವನದುದ್ದಕ್ಕೂ ನಡೆಯುವ ಪ್ರಕ್ರಿಯೆಯಾಗಿದೆ.

ಹಾ.ಮಾ. ನಾಯಕ ಅವರು ಹೇಳುವ ಶಿಕ್ಷಣ : ಪ್ರಸ್ತುತ ಶಿಕ್ಷಣ ವ್ಯವಸ್ಥೆ, ವಿದ್ಯಾರ್ಥಿಗಳ ಓದು ಬರಹ, ಅಕ್ಷರಸ್ಥ–ನಿಜವಾದ ವಿದ್ಯಾವಂತಿಕೆ, ಕನ್ನಡ ಮತ್ತು ಇಂಗ್ಲೀಷ ಮುಂತಾದ ಕೆಲವು ಶೈಕ್ಷಣಿಕ ಚಿಂತನೆಗಳನ್ನು ಗಮನಿಸುವುದು ಈ ಸಂದರ್ಭದಲ್ಲಿ ತುಂಬಾ ಮಹತ್ವದ್ದಾಗಿದೆ. ಶಿಕ್ಷಣವೆಂದರೆ, ಮನುಷ್ಯನ ಆಂತರಿಕ ಮತ್ತು ಬಾಹ್ಯ ಅಭಿವ್ಯಕ್ತಿಗಳು ಗಟ್ಟಿಗೊಳ್ಳಬೇಕು. ಉನ್ನತಿಯಾಗಬೇಕು. ಉದಾಹರಣೆಗೆ ಒಂದು ಹುಟ್ಟಿದ ಮಗುವಿಗೆ ಏನೂ ತಿಳಿದಿರುವುದಿಲ್ಲ. ಆ ಮಗುವಿಗೆ ಶಿಕ್ಷಣದ ಮುಖಾಂತರ ಸಂಸ್ಕೃತಿ, ಪರಂಪರೆ, ಜೀವನ ಮೌಲ್ಯಗಳನ್ನು ತಿಳಿಸುವುದೇ ಆಗಿದೆ. ಆದರೆ ಇಂದು ಕೇವಲ ಅಕ್ಷರಗಳ ಕಲಿಕೆ ಮಾತ್ರವೇ ಶಿಕ್ಷಣವಾಗಿ ಮಾರ್ಪಾಡಾಗಿದೆ. ಇದನ್ನು ಹಾ.ಮಾ.ನಾ. ಅವರ ಮಾತುಗಳಲ್ಲಿ ಹೇಳುವುದಾದರೆ, 'ಶಿಕ್ಷಣ ಎಂದರೆ ವಿಷಯಗಳನ್ನು ತುರುಕುವುದಲ್ಲ, ಬುದ್ಧಿ ದಯಗಳನ್ನು ರೂಪಿಸುವುದು.' ಶಿಕ್ಷಣ ಎಲ್ಲರ ಹಕ್ಕು. ಆದರೆ ಉನ್ನತ ಶಿಕ್ಷಣ ಅರ್ಹ, ಕೇವಲ ಆಸಕ್ತರ ಹಕ್ಕು, ಶಿಕ್ಷಣ ಕಾಮಧೇನುವಲ್ಲ, ಕಲ್ಪವೃಕ್ಷವಲ್ಲ. ಅದು ನಮ್ಮನ್ನು ನಾವು ತಿಳಿದುಕೊಳ್ಳುವ, ತೆಗೆದುಕೊಳ್ಳುವ, ಶಿಸ್ತಿಗೆ ಒಳಪಡಿಸಿಕೊಳ್ಳುವ ಒಂದು ಸಾಧನ. ಅಂತಿಮವಾಗಿ ಎಲ್ಲ ಶಿಕ್ಷಣದ ಗುರಿಯೂ ಇಷ್ಟೆ. ಅದಕ್ಕಿಂತ ಹೆಚ್ಚಿನದನ್ನು ನಾವು ಬಯಸಬಾರದು' ಈ ರೀತಿಯಾಗಿ ಇರುವಂತಹ ಅವರ ಕೆಲವು ಶೈಕ್ಷಣಿಕ ವಿಚಾರಗಳನ್ನು ಕುರಿತು ಪರಿಶೋಧನಾತ್ಮಕ ಸಂಶೋಧನೆಯನ್ನು *[1] ಹಾಗೂ ರಚನಾತ್ಮಕ ಶೋಧವನ್ನು*[2] ಈ ಒಂದು ಲೇಖನದಲ್ಲಿ ಮಾಡಲಾಗಿದೆ.

ಡಾ. ಹಾ.ಮಾ. ನಾಯಕರು ಬಯಸುವ ಶಿಕ್ಷಣ ಈ ರೀತಿಯದಾಗಿದೆ. "ಮೂಲ ಶಿಕ್ಷಣವನ್ನು ಎಲ್ಲರಿಗೂ ನೀಡಿದ ಮೇಲೆ ಎಲ್ಲರನ್ನು ಕಾಲೇಜಿಗೆ ಕಳಿಸಬಾರದು. ಉನ್ನತ ಶಿಕ್ಷಣ ಎನ್ನುವುದು ನಿಜವಾದ ಬುದ್ಧಿವಂತರಿಗೆ, ಆಸಕ್ತರಿಗೆ ಮಾತ್ರ ಸೀಮಿತವಾಗಿರಬೇಕು. ಅಲ್ಲಿಯೂ ಪ್ರವೇಶ ಯೋಜನೆಯ ಆಧಾರದ ಮೇಲೆ ಇರಬೇಕು. ಇನ್ನು ಐದು ವರ್ಷಗಳಿಗೆ ನಮಗೆ ಎಷ್ಟು ಜನ ವೈದ್ಯರು, ಇಂಜನಿಯರರು ಬೇಕು ಎನ್ನುವುದು ನಮಗೆ ತಿಳಿದಿರಬೇಕು. ಅಷ್ಟೇ ಜನ ಅರ್ಹರಿಗೆ ಮಾತ್ರ ಈ ವರ್ಷ ಈ ತರಗತಿಯಲ್ಲಿ ಪ್ರವೇಶ ದೊರೆಯಬೇಕು. ಇದು ಉನ್ನತ ಶಿಕ್ಷಣದ ಎಲ್ಲ ಮುಖಗಳಿಗೂ ಸಮನಾದುದು. ಎಲ್ಲರಿಗೂ ಎಲ್ಲ ಬಗೆಯ ಶಿಕ್ಷಣ ಎನ್ನುವುದು ತಪ್ಪು. ರಾಷ್ಟ್ರದ ಅಗತ್ಯಗಳಿಗೆ ಅನುಗುಣವಾಗಿ ಮಾತ್ರ ಉನ್ನತ ಶಿಕ್ಷಣ ದೊರೆಯುವಂತಾಗಬೇಕು. ಮೂಲ ಶಿಕ್ಷಣ ಎಲ್ಲರ ಹಕ್ಕು; ಉನ್ನತ ಶಿಕ್ಷಣ ಅರ್ಹರಿಗೆ ಮಾತ್ರ, ಆಗ ಮಾತ್ರ ನಿಜವಾದ ಶಿಕ್ಷಣದ ಉದ್ದೇಶ ಈಡೇರುತ್ತದೆ![1]

ದುಡ್ಡು ತುಂಬಿ, ಲಂಚ ಕೊಟ್ಟು ಡಿಗ್ರಿಗಳನ್ನು ತಮ್ಮದಾಗಿಸಿಕೊಳ್ಳುತ್ತಿರುವ ಇಂದಿನ ಸಮಾಜದಲ್ಲಿ ಶಿಕ್ಷಣಕ್ಕೆ ಬೆಲೆಯೇ ಇಲ್ಲದಾಗಿದೆ. ಇಂದು ಜಾತಿಯ ಆಧಾರದ ಮೇಲೆ, ಅಂಗವಿಕಲರಿಗಾಗಿ ಕಾದಿರಿಸಿದ ಸ್ಥಳಗಳಿಂದಾಗಿ ನಿಜವಾಗಿಯೂ ನಾವು ಮೌಲ್ಯಯುತ ಉತ್ತಮ ವಿದ್ಯಾರ್ಥಿಗಳನ್ನು ತಲೆಬಡಿದು ಕೂಡಿಸುವಂತಾಗುವುದರಲ್ಲಿ ಸಂದೇಹವೇ ಇಲ್ಲ. ಹಾ.ಮಾ.ನಾಯಕರು ಹೇಳಿದಂತೆ : 'ಮೂಲ ಶಿಕ್ಷಣ ಎಲ್ಲರ ಹಕ್ಕು; ಉನ್ನತ ಶಿಕ್ಷಣ ಅರ್ಹರಿಗೆ ಮಾತ್ರ ಆದಾಗ ಮಾತ್ರ ನಿಜವಾಗಿಯೂ ಒಳ್ಳೆಯ ಶಿಕ್ಷಕರು, ಒಳ್ಳೆಯ ಡಾಕ್ಟರರು, ಇಂಜಿನಿಯರರು ಬರಲು ಸಾಧ್ಯವಾಗುತ್ತದೆ. ನಮ್ಮ ದೇಶದ ಭವಿಷ್ಯ ಉಜ್ವಲವಾಗುತ್ತದೆ ಎಂದು ಹೇಳಬಹುದು.

ಬಡತನಕ್ಕೆ ಹೆಸರಾದ ಭಾರತ ದೇಶದಲ್ಲಿ ಬೆರಳೆಣಿಕೆಯಷ್ಟು ಶ್ರೀಮಂತರಿದ್ದಾರೆ. ಹಾಗಾಗಿ ಬಡತನದಲ್ಲಿದ್ದ ಜನರು ದಿನ ಬೆಳಗಾದರೆ ಕೂಲಿಗೆ ಹೋಗದೆ ಇದ್ದರೆ ಅವರ ಹೊಟ್ಟೆ ಹೊರೆಯುವುದು ಕಷ್ಟವಾಗಿರುತ್ತದೆ. ಅಂಥ ಸಂದರ್ಭದಲ್ಲಿ ಮಕ್ಕಳ ಪೋಷಣೆಯಲ್ಲಿ ಅವರಿಗೆ ಗಮನ ಕಡಿಮೆಯಾಗುತ್ತದೆ. ಕೇವಲ ಅವರು ಹೊಟ್ಟೆ ತುಂಬಿಸಿಕೊಳ್ಳುವ ಕುರಿತು ಆಲೋಚನೆ ಮಾಡುತ್ತಿರುತ್ತಾರೆ. ಅಂಥ ಸಂದರ್ಭದಲ್ಲಿ ಮಕ್ಕಳು ಸ್ವಲ್ಪ ಬೆಳೆದು ಕೆಲಸ ಮಾಡಲು ಪ್ರಾರಂಭಿಸುವಷ್ಟರಲ್ಲಿಯೇ ಅವರಿಗೆ ಇನ್ನಷ್ಟು ಕೆಲಸದ ಭಾರವನ್ನು ಹಾಕಿ ಅವರ ವಿದ್ಯಾಭ್ಯಾಸದ ಕಡೆ ಗಮನಕೊಡದೆ ಅವರನ್ನು ಅಜ್ಞಾನದಲ್ಲಿ ಮುಳುಗಿಸುತ್ತಾರೆ. ಹೀಗಿರುವಾಗ ಎಲ್ಲರೂ ಸುಶಿಕ್ಷಿತರಾಗಬೇಕು ಅನ್ನುವ ಮಾತು ಯಾವಾಗ ನನಸಾಗಬೇಕು? ಆದ್ದರಿಂದಲೆ ಹಾ. ಮಾ.ನಾ. ಅವರು ಈ ಸಂವಿಧಾನದಲ್ಲಿ ಶಿಕ್ಷಣದ ಕುರಿತು ಕಾನೂನಿದ್ದರೂ ಸಹ ಅದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ.

"ಭಾರತದಂಥ ಬಡ ರಾಷ್ಟ್ರಗಳಲ್ಲಿ ಜೀವನ ನಡೆಸುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ಅಕ್ಷರ ಕಲಿಯುವುದು ಅನವಶ್ಯಕವೆನಿಸುವ ಶ್ರೀಮಂತಿಕೆಯಾಗುತ್ತದೆ. ಶಾಲೆಗೆ ಹೋಗುವ ಮಕ್ಕಳು ಮನೆಯ ಹಿರಿಯರಿಗೆ ದೈನಂದಿನ ಕೆಲಸಗಳಲ್ಲಿ ನೆರವಾಗಬೇಕಾಗಿದೆ. ದುಡಿದು ತರಬೇಕಾಗಿದೆ. ಅಕ್ಷರ ಅನ್ನ ಕೊಡುವುದಿಲ್ಲ ಎಂಬ ಮೌಢ್ಯ ಜನರನ್ನು ಕಾಡುತ್ತಿದೆ. ಆದ್ದರಿಂದ ಕಡ್ಡಾಯ ಶಿಕ್ಷಣದ ಕಾನೂನಿದ್ದರೂ ಅದರಿಂದಾಗುವ ಸಾಧನೆ ದೊಡ್ಡದೇನೂ ಅಲ್ಲ."[2]

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇಂದಿನ ಕಂಪ್ಯೂಟರ್ ಯುಗದಲ್ಲಿಯೂ ಕೂಡ ನಾವು ಇಷ್ಟು ಹಿಂದುಳಿದಿದ್ದೇವೆ. ಸರ್ಕಾರ ಹಳ್ಳಿಗಳಲ್ಲಿ ಉಚಿತ ಶಿಕ್ಷಣ ಕೊಡಲು ನೆರವಾಗುತ್ತಿದ್ದರೂ ನಮ್ಮ ಮೌಢ್ಯ ದೂರಾಗಿಲ್ಲ. ತಮ್ಮ ಮನೆಯಲ್ಲಿಯ ಕೆಲಸ ಮಕ್ಕಳು ಮಾಡುತ್ತಿದ್ದರೆ ಸಾಕು ನಮ್ಮ ದಿನದ ಹೊಟ್ಟೆ ತುಂಬಿದರೆ ಸಾಕು ಎಂಬ ಭಾವನೆ ಜನರಲ್ಲಿ ಜಡವಾಗಿ ಬೇರೂರಿದೆ. ಇದನ್ನು ಹೋಗಲಾಡಿಸಬೇಕಾದರೆ ನಮ್ಮ ಜನರ ಮನಸ್ಸು ಪರಿವರ್ತನೆಯಾಗಬೇಕು. ಜನರು ಮುಂದೆ ಬರಬೇಕು. ಇನ್ನೊಂದು ಮಾತೆಂದರೆ ನಮ್ಮ ದೇಶದಲ್ಲಿ ವಯಸ್ಕರರೇ ಇರಲಿ, ಚಿಕ್ಕ ಮಕ್ಕಳೇ ಇರಲಿ. ಅವರಿಗೆ ಅಕ್ಷರಸ್ಥರನ್ನಾಗಿ ಮಾಡಿ ಸುಶಿಕ್ಷಿತರನ್ನಾಗಿ ಮಾಡಬೇಕು ಎಂದು ನಮ್ಮ ಸರಕಾರ ಅನೇಕ ಯೋಜನೆಗಳನ್ನು ಹಮ್ಮಿಕೊಂಡರೂ ಅದರ ಉಪಯೋಗ ಸರಿಯಾಗಿ ಆಗುತ್ತಿಲ್ಲ. ನಮ್ಮ ದೇಶದಲ್ಲಿ ವಿಚಿತ್ರವಾದ ಪರಿಸ್ಥಿತಿ ಇದೆ. ಮಕ್ಕಳ ಶಿಕ್ಷಣಕ್ಕೆ ಗಮನ ಕೊಟ್ಟರೆ ಅನಕ್ಷರಸ್ಥರ ಸಂಖ್ಯೆ ಹಾಗೇ ಉಳಿಯುತ್ತದೆ, ವಯಸ್ಕರ ಶಿಕ್ಷಣಕ್ಕೆ ಗಮನಕೊಟ್ಟರೆ ಅನಕ್ಷರಸ್ಥ ಮಕ್ಕಳ ಸಂಖ್ಯೆ ಬೆಳೆಯುತ್ತದೆ. ಈ ಎರಡನ್ನೂ ತೂಗಿಸಿಕೊಂಡು ಹೋಗುವುದರ ಕಡೆಗೆ ಗಮನ ಕೊಡಬೇಕು. ನಮಗೆ ಎಂತಹ ಶಿಕ್ಷಣ ಬೇಕು ? ಶಿಕ್ಷಣದಲ್ಲಿ ಭಾಷೆಯ ಪಾತ್ರ ಇವುಗಳ ಬಗೆಗೆ ನಾಯಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಪ್ರಸ್ತುತವಾಗಿವೆ. ಎಲ್ಲರಿಗೂ ಶಿಕ್ಷಣ ಬೇಕು, ನಿಜ. ಯಾರಿಗೆ ಎಂಥ ಶಿಕ್ಷಣ ? ಯಾವ ಸ್ವರೂಪದ್ದು? ಇದನ್ನು ನಾವು ಯೋಚಿಸುತ್ತಲ್ಲ. ಗಾತ್ರಕ್ಕೆ ಮಾರು ಹೋಗಿ ಗುಣವನ್ನು ಕಡೆಗಣಿಸುತ್ತಿರುವುದೇ ನಮ್ಮ ಶಿಕ್ಷಣದ ಅಧೋಗತಿಯನ್ನು ಮುಟ್ಟಿರಲು ಕಾರಣವೆನ್ನಬಹುದೆ ಎಂಬುದು ನಮ್ಮ ಅರಿವಿಗೆ ಬರುತ್ತಿಲ್ಲ.

ನಮ್ಮ ದೇಶದಲ್ಲಿ ಇದೊಂದು ದೊಡ್ಡ ಸಮಸ್ಯೆಯಾಗಿಯೇ ಉಳಿಯುತ್ತಿದೆ. ಇದಕ್ಕೆ ಯಾವ ರೀತಿಯ ಪರಿಹಾರ ಕಂಡುಕೊಳ್ಳಬೇಕು ಎಂಬುದು ಸರ್ಕಾರದ ಜೊತೆಗೆ ಪ್ರಜೆಗಳ ಕರ್ತವ್ಯವೂ ಆಗಿದೆ. ಶಿಕ್ಷಣ ಎಲ್ಲರಿಗೂ ಬೇಕು, ಎಲ್ಲರಿಗೂ ಉನ್ನತ ಶಿಕ್ಷಣ ಸಾಧ್ಯವಿಲ್ಲ, ಅಗತ್ಯವಿಲ್ಲ, ಇದು ನಮಗೆ ಮನದಟ್ಟಾಗದಿರುವುದರಿಂದಲೇ ಇಂದು ಶಿಕ್ಷಣ ಸಮಸ್ಯೆಯಾಗಿ ನಿಂತಿದೆ ಎಂಬುದನ್ನು ತಿಳಿಸುತ್ತಾರೆ. ಶಿಕ್ಷಣದಲ್ಲಿ ಭಾಷೆಯ ಸ್ಥಾನ ಪ್ರಮುಖವಾದ ಪಾತ್ರವಹಿಸುತ್ತದೆ. ನಮ್ಮ ಸಂಸ್ಕೃತಿ, ಪರಂಪರೆಯನ್ನು ತಮ್ಮದೇ ಭಾಷೆಯಲ್ಲಿ ನಮ್ಮ ಮಕ್ಕಳಿಗೆ ತಿಳಿಸಿಕೊಡುವುದಾದರೆ ಶಿಕ್ಷಣ ಹೆಚ್ಚು ಮಹತ್ವದ್ದಾಗಿರುತ್ತದೆ. "ಶಿಕ್ಷಣದಲ್ಲಿ ಭಾಷೆಯ ಸ್ಥಾನ ಬಹಳ ದೊಡ್ಡದು. ಗ್ರಹಿಕೆ ಭಾಷೆಯ ಮೂಲಕ ಶಿಕ್ಷಣದಲ್ಲಿ ವಿಷಯ ಗ್ರಹಣ ಪ್ರಧಾನವಾದುದು. ಅದು ಯಾವ ಭಾಷೆ ಮೂಲಕ ಎನ್ನುವುದು ಮಹತ್ವದ ಪ್ರಶ್ನೆ"[3] ಆದುದರಿಂದ ಶಿಕ್ಷಣದ ಯಶಸ್ಸೆಲ್ಲ ಅದರ ಮಾಧ್ಯಮವನ್ನೇ ಅವಲಂಬಿಸಿರುತ್ತದೆ. ಹಾಗಾಗಿ ಭಾಷೆ ಶಿಕ್ಷಣ ಸಮಸ್ಯೆಯ ಕೇಂದ್ರ ಬಿಂದು ಎಂದು ಹೇಳುತ್ತಾರೆ.

ನಮ್ಮ ಶಿಕ್ಷಣ ಅಧೋಗತಿಗೆ ಇಳಿದಿದೆ. ಅದು ಸುಧಾರಿಸಬೇಕು. ಪ್ರಾಥಮಿಕ ಶಿಕ್ಷಣ ಎಲ್ಲರ ಹಕ್ಕು. ಆದರೆ ಉನ್ನತ ಶಿಕ್ಷಣ ಅರ್ಹರಿಗೆ ಮಾತ್ರ ಸೀಮಿತವಾಗಿರಬೇಕೆಂಬುದನ್ನು ನಾಯಕ ಅವರ ಆಶಯವಾಗಿತ್ತು. ಇದರಿಂದ ಆಯಾ ವಿಷಯದ ಬಗ್ಗೆ ಪರಿಜ್ಞಾನ ಇಲ್ಲದವರಿಗೆ ಅವರು ಪಡೆದುಕೊಳ್ಳುವ ಪದವಿಗಳ ತಿಳಿವಳಿಕೆಯೇ ಇಲ್ಲದವರಿಗೆ ಪದವಿಗಳನ್ನು ನೀಡುವಲ್ಲಿ ಅರ್ಥವಿಲ್ಲ. ಇದರಿಂದ ರಾಜ್ಯಕಷ್ಟೇ ಹಾನಿಯಲ್ಲ ಇಡೀ ದೇಶಕ್ಕೇ ಎಂದು ಹೇಳಬಹುದು.

'ಶಿಕ್ಷಣ ಎಲ್ಲಿಯವರೆಗೆ ತೇಪೆಯ ಕೆಲಸವಾಗುತ್ತದೆಯೋ ಅಲ್ಲಿಯವರೆಗೆ ಅದರಿಂದ ರಾಷ್ಟ್ರೀಯ ಹಿತದ ರಕ್ಷಣೆಯಾಗುವುದಿಲ್ಲ. ನಮ್ಮ ಶಿಕ್ಷಣವನ್ನು ಹೊಸ ಹಲಗೆಯ ಮೇಲೆ ಬರೆಯುವಂತೆ, ಸಂಪೂರ್ಣವಾಗಿ ಹೊಸದಾಗಿ ಆರಂಭಿಸಬೇಕು' ಎಂದು ನಾಯಕರು ಹೇಳುತ್ತಾರೆ. ಅವರ ಮಾತಿನಲ್ಲಿ ಚುರುಕತನವಿದೆ. ಅವರಿಗೆ ಏನು ಹೇಳಬೇಕಾಗಿದೆಯೋ ಅದನ್ನು ದಿಟ್ಟತನದಿಂದ ಯಾವುದೇ ಅಂಜಿಕೆ ಅಳಕು ಇಲ್ಲದೆಯೇ ಸರಳವಾಗಿ ಹೇಳುವ ಧೈರ್ಯ ಹೊಂದಿದ್ದರು. ಉದಾಹರಣೆಗೆ ನಮ್ಮಲ್ಲಿ ಪ್ರಚಲಿತವಿರುವ ಧ್ಯೇಯೋದ್ದೇಶಗಳೆಲ್ಲ "ಅಧ್ಯಾಪಕರ ಸಂಬಳ ಸಾರಿಗೆಯ ಭದ್ರತೆ, ಸಂಸ್ಥೆಗಳ ಲಾಭ, ಪ್ರತಿಷ್ಠೆ, ಸಂಬಂಧಿಸಿದ ಇಲಾಖೆಯ ಪಟ್ಟಭದ್ರಹಿತಾಸಕ್ತಿ ಇವುಗಳನ್ನೇ ಕುರಿತಾಗಿದೆ. ಇವುಗಳ ನಡುವೆ ಶಿಕ್ಷಣದ ಅರ್ಥ ಎಲ್ಲೋ ಮರೆಯಾಗಿದೆ. ನಮ್ಮ ಆಡಳಿತದಲ್ಲಿ, ಸಾರ್ವಜನಿಕ ಜೀವನದಲ್ಲಿ ಈ ಅರ್ಥದ ಬಗೆಗೆ ಯಾವುದೇ ವಿಧವಾದ ಆಸಕ್ತಿಯೂ ಉಳಿದಿಲ್ಲ. ಎಲ್ಲಿಯವರೆಗೆ ಶಿಕ್ಷಣ ವ್ಯವಸ್ಥೆ ಕ್ರಿಯಾತ್ಮಕವಾಗಿರದೆ ಕೇವಲ ಯಾಂತ್ರಿಕವಾಗಿರುತ್ತದೆಯೋ ಅಲ್ಲಿಯವರೆಗೆ ಕನ್ನಡದ ಸ್ಥಿತಿ ಉತ್ತಮಗೊಳ್ಳುವುದು ಸಾಧ್ಯವಿಲ್ಲ. ಸಧ್ಯಕ್ಕೆ ಇಂಗ್ಲೀಷಿನ ಪೊಳ್ಳು ಪ್ರತಿಷ್ಠೆ ನಮ್ಮ ರಾಷ್ಟ್ರ ಜೀವನವನ್ನು ಕೊರೆಯುತ್ತಿದೆ."[4] ಹೀಗೆ ಹೇಳುವ ಅವರ ಮಾತುಗಳಲ್ಲಿ ತಥ್ಯವಿದೆ, ಸರ್ಕಾರವು ಶಿಕ್ಷಣ ಸುಧಾರಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದರೆ ಅದರಲ್ಲಿ ಅದು ಯಶಸ್ವಿ ಸಾಧಿಸುವುದು ಕಠಿಣವಾಗಿದೆ. ಕಾರಣ ಅಲ್ಲಿ ಬೇಕಾಗಿರುವುದೇ ಒಂದು ಸರ್ಕಾರ ಮಾಡುತ್ತಿರುವುದೇ ಇನ್ನೊಂದು. ಇಂದು ಸಹ ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳ ಪರಿಸ್ಥಿತಿ ನೋಡಿದರೆ ನಿಜವಾಗಿಯೂ ಶೋಚನೀಯವಾಗಿದೆ. ಕಾರಣ ಅಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವ ಶಿಕ್ಷಕರು ಇರುವುದಿಲ್ಲ. ಆದರೆ ಮಧ್ಯಾಹ್ನದ ಊಟ ಮಾತ್ರ ಸಿದ್ಧವಾಗಿರುತ್ತದೆ. ಉಚಿತವಾಗಿ ಪುಸ್ತಕಗಳನ್ನು ಒದಗಿಸಲಾಗುತ್ತದೆ ಆದರೆ ಪುಸ್ತಕದಲ್ಲಿ ಏನಿದೆ ಎಂಬುದನ್ನು ತಿಳಿಸಿ ಹೇಳುವ ಕರ್ತವ್ಯಪರ ಶಿಕ್ಷಕರ ಸಂಖ್ಯೆ ಅತಿ ವಿರಳ. ಹಾಗಾಗಿ ಸಹಾಯಮಾಡಿದ್ದು ವ್ಯರ್ಥವಾಗುವ ಸಾಹಸ ನಾವುಕಣ್ಣಾರೆ ಕಂಡಿರುವ ದೃಶ್ಯ. ಆದರೆ ಮಕ್ಕಳ ಮನಸ್ಸು ಅರ್ಥ ಮಾಡಿಕೊಂಡು ಸರಿಯಾದ ಮಾರ್ಗ ತೋರಿಸುವಲ್ಲಿ ಎಚ್ಚರವಾಗಬೇಕಾಗಿದೆ.

ಶಿಕ್ಷಣದ ಗಾತ್ರದ ಕಡೆಗೆ ಗಮನ ಕೊಟ್ಟಿರುವ ನಾವು ಅದರ ಗುಣವನ್ನು ನಿರ್ಲಕ್ಷಿಸಿದ್ದೇವೆ. ಶಿಕ್ಷಣದ ಕೊರತೆ ಇರುವುದೇ ಇಲ್ಲಿ. ಕಟ್ಟಡಗಳಿಲ್ಲದ ಶಾಲೆಗಳು, ಅಧ್ಯಾಪಕರಿಲ್ಲದ ತರಗತಿಗಳು, ಪೀಠೋಪಕರಣಗಳಿಲ್ಲದ ಸಂಸ್ಥೆಗಳು, ಎಂಥ ಹೊಸ ಶಿಕ್ಷಣ ಪದ್ಧತಿಗಳನ್ನಾದರೂ ಹೇಗೆ ಅನುಷ್ಠಾನಗೊಳಿಸುತ್ತವೆ ? ಶಾಲೆ ಕಾಲೇಜುಗಳನ್ನು ತೆರೆಯುವುದರಲ್ಲಷ್ಟೇ ನಮ್ಮ ಆಸಕ್ತಿ. ಅವುಗಳಿಂದ ಏನಾಗಬೇಕೆಂಬುದನ್ನು ಯೋಚಿಸುವುದಿಲ್ಲ. ಬಿಟ್ಟಿ ಪುಸ್ತಕಗಳು, ಬಿಟ್ಟಿ ಸಮವಸ್ತ್ರ ಬಿಟ್ಟಿ ಅನ್ನ ಇವುಗಳಿಂದ ಶಿಕ್ಷಣ ಸುಧಾರಿಸುವುದಿಲ್ಲ. ಒಳ್ಳೆಯ ಪರಿಸರದ ಶಾಲೆ, ಬೋಧನೆಯಲ್ಲಿ ಪ್ರೀತಿಯುಳ್ಳ ಅಧ್ಯಾಪಕರು, ಸುಸಜ್ಜಿತವಾದ ಗ್ರಂಥಾಲಯ, ಪ್ರಯೋಗಾಲಯ, ಆಕರ್ಷಕವಾದ ಪಠ್ಯಪುಸ್ತಕಗಳು ಇವೇ ಶಿಕ್ಷಣದ ಆಧಾರ. ನಮ್ಮ ಶಿಕ್ಷಣಕ್ರಮದಲ್ಲಿ ಇದನ್ನು ಬಿಟ್ಟು ಉಳಿದೆಲ್ಲ ಇದೆ. ಇಂದಿಗೂ ಹಳ್ಳಿಗಳಲ್ಲಿ ಮಕ್ಕಳಿಗೆ ಕುಳಿತುಕೊಳ್ಳಲು ಶಾಲಾ ಕಟ್ಟಡಗಳು ಇಲ್ಲ. ಗಿಡದ ಕೆಳಗಡೆ ಕುಳ್ಳಿರಿಸಿ ಕಲಿಸುವ ಶಾಲೆಗಳು ಬಹಳಷ್ಟು ಕಡೆ ಇವೆ.ಅವುಗಳನ್ನು ನೋಡಿಯೇ ನಾಯಕರು ಈ ಮಾತುಗಳನ್ನು ಹೇಳಿರಬೇಕು. "ಕುಸಿದು ಬೀಳುತ್ತಿರುವ ಕಟ್ಟಡಗಳು, ದೊಡ್ಡಿಯಾದ ತರಗತಿಗಳು, ಅಧ್ಯಾಪಕರಿಲ್ಲದ ಶಾಲೆಗಳು, ಪಾಠಹೇಳದ ಅನೇಕ ಅಧ್ಯಾಪಕರು, ದಿನ ಬೆಳಗಾದರೆ ರಜಾ, ಶಿಸ್ತಿಲ್ಲದ ವ್ಯವಸ್ಥೆ, ಮೂತ್ರದ ವಾಸನೆಯ ಪರಿಸರ, ಇದು ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿ."[4]

ಒಂದು ಸುಂದರ, ಸುಸಂಸ್ಕೃತ ವಾತಾವರಣ ಸಮಾಜದಲ್ಲಿ ಶಿಕ್ಷಣ ಮುಖ್ಯ. ಈ ಶಿಕ್ಷಣವನ್ನು ಪಡೆದುಕೊಂಡ ಮಕ್ಕಳು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಒಳ್ಳೆ ರಾಷ್ಟ್ರ ನಿರ್ಮಾಣಕ್ಕೆ ಶಿಕ್ಷಣ ಎಷ್ಟು ಮುಖ್ಯವೋ ಅಷ್ಟೇ ವಿದ್ಯಾವಂತರು ಸಹ ಬೇಕು. ವಿದ್ಯಾವಂತರ ಜೊತೆ ಒಳ್ಳೆಯ ಸಂಸ್ಕೃತಿ, ನೀತಿ, ನ್ಯಾಯ ಇವೆಲ್ಲವೂ ಸಹ ಅಷ್ಟೇ ತೀಕ್ಷ್ಣವಾಗಿ ಕಾರ್ಯ ನಿರ್ವಹಿಸುತ್ತವೆ. ಆದರೆ ಈ ಎಲ್ಲಾ ಮೌಲ್ಯಗಳೂ ಸಹ ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿ ಸಾಗಿದರೆ ಅದು ತುಂಬಾ ಶೋಚನೀಯ ಪ್ರಶ್ನೆ. ಇಂಥ ಪ್ರಶ್ನೆಯನ್ನು ಓದುವ ಮನಸ್ಸು ಜಾಗೃತಗೊಳ್ಳುಂತೆ ಎಚ್ಚರಿಸುವಂಥ ಕೆಲಸ ಹಾ. ಮಾ. ನಾಯಕ ಅವರು ಮಾಡಿದ್ದಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

"ಪುಸ್ತಕದ ಭಾರ ಮುಂದಿನ ಪೀಳಿಗೆಯ ಮೇಲೆ ಯಾವ ಬಗೆಯ ಪರಿಣಾಮವನ್ನುಂಟು ಮಾಡಬಹುದೆಂಬುದನ್ನು ಕುರಿತು ಈಚೆಗೆ ಸಂಶೋಧನೆಗಳನ್ನು ನಡೆಸಿರುವುದೂ ಉಂಟು. ಈ ಮಕ್ಕಳು ಹೀಗೆಯೇ ಭಾರವನ್ನು ಹೊರುತ್ತಿದ್ದರೆ ಮುಂದೊಂದು ದಿನ ಬೆನ್ನು ಬಾಗಿದ ಸಂತತಿಯನ್ನೇ ನಾವು ಕಾಣಬೇಕಾದೀತು ಎಂದು ಈ ಸಂಶೋಧನೆಗಳು ಎಚ್ಚರಿಸಿವೆ. ಆದ್ದರಿಂದ ಈ ಪುಸ್ತಕ ಭಾರದ ಹಿಂದೆ ನಾವು ಗಂಭೀರವಾಗಿ ಪರಿಗಣಿಸಬೇಕಾದ ಸಮಸ್ಯೆಗಳಿವೆ ಎಂಬುದನ್ನು ಗಮನಿಸುವ ಅಗತ್ಯವಿದೆ. ಅದೇನೆ ಇರಲಿ, ಆರ್.ಕೆ.ನಾರಾಯಣ ಅವರು ಸಮಸ್ಯೆಯನ್ನು ಈಗ ರಾಷ್ಟ್ರದ ಗಮನಕ್ಕೆ ತಂದಿದ್ದಾರೆ. ನಾರಾಯಣ ಅವರ ಮಾತುಗಳಲ್ಲಿ ಹಾಸ್ಯದ ಲೇಪ ಇದ್ದರೂ ತೀವ್ರವಾದ ಕಳಕಳಿ ಇದೆ."[5] ನಮ್ಮ ಶಿಕ್ಷಣ ಪ್ರಗತಿಪರ ಶಿಕ್ಷಣವಾಗಬೇಕು. ಕೇವಲ ಪುಸ್ತಕಗಳ ಭಾರದಿಂದ ಮಕ್ಕಳು ಶಿಕ್ಷಣವೆಂದರೆ ಹೆದರುವಂತಾಗಬಾರದು. ಅದರಂತೆಯೇ ಅದು ಕೇವಲ ಗಿಳಿಪಾಠವಾಗಿ ಪ್ರಾರಂಭವಾಗಿ ಗಿಳಿಪಾಠದಲ್ಲಿಯೇ ಮುಗಿಯುವಂತಾಗಬಾರದು ಎಂಬುದನ್ನು ವಿ.ಕೃ. ಗೋಕಾಕ ಅವರು ಹೇಳುತ್ತಾರೆ. "ಒಂದು ಪದವಿಗಾಗಿ ಒಂದು ವಿಷಯ ಇಲ್ಲವೆ ವಿಷಯಗಳನ್ನು ಅಭ್ಯಸಿಸುವಾಗ, ವಿಷಯಜ್ಞಾನವಂತೂ ನಮಗಾಗುತ್ತದೆ. ಆದರೆ ಅದಕ್ಕೂ ಮುಖ್ಯವಾಗಿ ನಮ್ಮ ಬುದ್ದಿಗೆ ಸಂಕೀರ್ಣ ಆಯಾಮ ದೊರೆಯುತ್ತದೆ. ಬರಿ ಒಂದು ಗಿಳಿಪಾಠ ಇಲ್ಲವೆ ವಿಷಯ ಜ್ಞಾನದಲ್ಲಿಯೇ ನಮ್ಮ ಶಿಕ್ಷಣ ಮುಗಿಯಬಾರದು. ಯಾವ ವಿಷಯವನ್ನಾದರೂ ನೇರ ಆಹ್ವಾನಿಸಿ ಅದರ ಮೇಲೆ ಪ್ರಭುತ್ವವನ್ನು ಸ್ಥಾಪಿಸುವಷ್ಟು ಪರಿಣತಿಯನ್ನು ಒಂದು ವಿಷಯದಲ್ಲಿಯ ಶಿಕ್ಷಣದಿಂದ ನಮ್ಮ ಬುದ್ದಿ ಪಡೆದಿರಬೇಕು. ಆಗ ನಮ್ಮ ಶಿಕ್ಷಣ ಪ್ರಗತಿಪರ ವಾಯಿತೆನ್ನಬಹುದು. ಈಗ ಹೆಚ್ಚಾಗಿ ಅದು ಗಿಳಿಪಾಠದಲ್ಲಿಯೇ ಪ್ರಾರಂಭವಾಗಿ ಗಿಳಿಪಾಠದಲ್ಲಿಯೇ ಮುಗಿಯುತ್ತಿದೆ"[6]

ಗಿಳಿಪಾಠದಲ್ಲಿ ನಿಜವಾಗಿಯೂ ಜ್ಞಾನ ಅಂತರಾಳಕ್ಕೆ ಇಳಿಯಲಾರದು. ಹಾಗಾಗಿ ಗೋಕಾಕ ಅವರು ಹೇಳುವ ಮಾತಿನಲ್ಲಿ ಸತ್ಯವಿದೆ. ಯಾವುದೇ ವಿಷಯವಿರಲಿ ಅದನ್ನು ಆಳವಾಗಿ ತಿಳಿದುಕೊಳ್ಳಬೇಕು. ಆಗ ನಿಜವಾಗಿಯೂ ಹೃದಯವಂತರು ನಿರ್ಮಾಣವಾಗುತ್ತಾರೆ. ಹೃದಯ ಸಂಸ್ಕಾರವಾಗ ಬೇಕಾದರೆ, ಒಳ್ಳೆಯ ಸಾಹಿತ್ಯದ ಓದು ಸಹ ಅವಶ್ಯಕವಾದುದಾಗಿದೆ. ಕೇವಲ ತಾಂತ್ರಿಕ ಜ್ಞಾನ ಪಡೆದರಷ್ಟೇ ಸಾಲದು. ಆದರೆ ಪರಿಸ್ಥಿತಿ ಹಾಗಾಗದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಇದರ ಜೊತೆಗೆ ಹೃದಯ ಸಂಸ್ಕಾರವೂ ಬೇಕಷ್ಟೆ. "ನಿರಕ್ಷರತೆ ಎನ್ನುವುದು ರಾಷ್ಟ್ರ ಜೀವನದ ಆಂತರಿಕ ಶತ್ರು. ಈ ಶತ್ರುವನ್ನು ಓಡಿಸದೆ ರಾಷ್ಟ್ರಜೀವನ ಹಸನಾಗುವುದಿಲ್ಲ. ಗಾಳಿ, ನೀರು, ಬೆಳಕುಗಳಷ್ಟು ಸಹಜವಾಗಿ ವಿದ್ಯೆ ಜನರಿಗೆ ತಲುಪಬೇಕು. ಈ ಉದ್ದೇಶದಿಂದಲೇ ಅಂತರಾಷ್ಟ್ರೀಯ ಸಾಕ್ಷರತಾ ದಿನವನ್ನು ಗೊತ್ತು ಮಾಡಿದೆ. ಈ ದಿನವು ನಮ್ಮನ್ನು ನಮ್ಮ ಕರ್ತವ್ಯಗಳ ಕಡೆಗೆ ಎಚ್ಚರಿಸುತ್ತದೆ. ನಾವು ಸಾಕ್ಷರಿಗಳಾಗಿದ್ದರಷ್ಟೇ ಸಾಲದು. ನಮ್ಮ ನೆರೆಹೊರೆಯವರೆಲ್ಲರೂ ಅಕ್ಷರಸ್ಥರಾಗಬೇಕಾದ ಅಗತ್ಯವನ್ನು ಅದು ನೆನಪಿಗೆ ತರುತ್ತದೆ. ಸಾಕ್ಷರತೆಗೂ, ದೇಶದ ಅಭಿವೃದ್ಧಿಗೂ ಬಿಡಿಸಲಾಗದಷ್ಟರಮಟ್ಟಿನ ತಳಕು ಹಾಕಿದೆ. ನಮ್ಮ ಜನರನ್ನು ಅಕ್ಷರಸ್ಥರನ್ನಾಗಿಸದೇ ನಾವು ದೇಶದ ಪ್ರಗತಿಯನ್ನು ಸಾಧಿಸುತ್ತೇವೆಂಬುವುದು ಸಾಧ್ಯವಿಲ್ಲ. ಸಾಕ್ಷರತೆಯೇ ನಮ್ಮ ಆಯುಧ. ಆದರಿಂದಲೇ ಮೌಢ್ಯ ನಿವಾರಣೆ; ಅಭಿವೃದ್ಧಿ ಪ್ರಾಪ್ತಿ" (ಸಂಪಣ, ಪುಟ 36) ಎಂದು ಹಾಮಾನಾ ಅಕ್ಷರದ ಮಹತ್ವವನ್ನು ಕುರಿತು ಹೇಳುತ್ತಾರೆ, ಇಂದಿನ ದಿನಗಳಲ್ಲಿ ಹಲವು ಸಂದರ್ಭಗಳಲ್ಲಿ ವಿದ್ಯಾವಂತ ಎಂಬ ಮಾತನ್ನು ಅಕ್ಷರಸ್ಥ ಎಂಬ ಮಾತಿಗೆ ಪರ್ಯಾಯವಾಗಿ ಬಳಸುತ್ತಿರುವುದು ಕಂಡು ಬರುತ್ತಿದೆ. ಓದಲು ಬರೆಯಲು ಬಂದಷ್ಟಕ್ಕೇ ಅವರನ್ನು ವಿದ್ಯಾವಂತರೆಂದು ಪರಿಗಣಿಸುತ್ತಿದ್ದೇವೆ. ಅದನ್ನು ಹಾಮಾನಾ ಅವರು ಕಡೆಗಣಿಸಿ ಹೀಗೆ ಹೇಳುತ್ತಾರೆ.

ವಿದ್ಯಾವಂತ ಅಕ್ಷರಸ್ಥ ಇಬ್ಬರೂ ಬೇರೆ ಬೇರೆಯಾಗಿರುವುದು ಸಾಧ್ಯ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅಕ್ಷರಗಳನ್ನು ಬಲ್ಲವರೆಲ್ಲ ವಿದ್ಯಾವಂತರಲ್ಲ; ವಿದ್ಯಾವಂತನಾದವನು ಅಕ್ಷರಗಳನ್ನು ಕಲಿತಿರ ಬೇಕೆಂಬುದಿಲ್ಲ. ಅಕ್ಷರಗಳ ಕಲಿಕೆ ವಿದ್ಯೆಯನ್ನು ತರಬಹುದು, ತರದಿರಬಹುದು. ಆದರೆ ಅಕ್ಷರಗಳನ್ನು ತಿಳಿದಿರುವುದು ವಿದ್ಯಾವಂತನ ಲಕ್ಷಣ ಎಂಬುದು ನಿಜ. ಎಷ್ಟೇ ಪದವಿಗಳ ಮೇಲೆ ಪದವಿಗಳನ್ನು ಪಡೆದರೂ ಅವರಲ್ಲಿ ಒಳ್ಳೆಯ ನಡತೆ ಇರಲಿಲ್ಲವೆಂದರೆ, ಸಂಸ್ಕೃತಿಯ ಅಭಿವ್ಯಕ್ತಿ, ನಡವಳಿಕೆಯ ಪಾಠ ತಿಳಿದಿರಲಿಲ್ಲವೆಂದರೆ ಅಂಥವರು ಅನರ್ಹರೇ ಎಂಬ ಆಶಯ ಹಾಮಾನಾ ಅವರದಾಗಿದೆ. ಉದಾ : ಹುಲಿಯ ಚರ್ಮವನ್ನು ಹೊದ್ದ ಮಾತ್ರಕ್ಕೆ ಕತ್ತೆ ಹುಲಿಯಾಗುವುದಿಲ್ಲ. ತೋರಿಕೆಯ ಈ ಉಪಾಧಿಗಳೆಲ್ಲ ಕೇವಲ ಚಿಪ್ಪು, ವಿದ್ಯೆಯ ತಿರುಳು ಬೇರೆಯೇ ಇರುತ್ತದೆ.

ನಾಯಕರು ಅಕ್ಷರಸ್ಥನಿಗೂ–ವಿದ್ಯಾವಂತನಿಗೂ ಇರುವ ವ್ಯತ್ಯಾಸವನ್ನು ಈ ಕೆಳಗಿನಂತೆ ಹೇಳುತ್ತಾರೆ.

ಅಕ್ಷರಸ್ಥ	ವಿದ್ಯಾವಂತ
• **ಅಕ್ಷರಸ್ಥ ವ್ಯವಹಾರದಲ್ಲಿ ಪಳಗುತ್ತಾನೆ.**	**ವಿದ್ಯಾವಂತ ಬದುಕಿನಲ್ಲಿ ಪಳಗುತ್ತಾನೆ.**
• **ಇವರಲ್ಲಿ ಕೃತಕತೆ ಕಾಣಿಸುತ್ತದೆ.**	**ಇವರಲ್ಲಿ ಸಹಜತೆ ಶೋಭಿಸುತ್ತದೆ.**
• **ಅಕ್ಷರಸ್ಥ ವ್ಯವಹಾರ ಪ್ರಪಂಚದ ಪ್ರಜೆ.**	**ವಿದ್ಯಾವಂತ ಸಂಸ್ಕೃತಿಯ ಒಂದು ಭಾಗ**

ಆದುದರಿಂದ ನಾವು ಅಕ್ಷರಸ್ಥರನ್ನು ವಿದ್ಯಾವಂತರನ್ನು ಬೆರೆಸಬಾರದು. ಒಬ್ಬರು ಇನ್ನೊಬ್ಬರೆಂದು ತಪ್ಪಾಗಿ ಗುರುತಿಸಬಾರದು. 'ವಿದ್ಯೆ ಮನುಷ್ಯನನ್ನು ನಿಜವಾದ ಮನುಷ್ಯನನ್ನಾಗಿ ಮಾಡುತ್ತದೆ. ಜ್ಞಾನ, ಕರುಣೆ, ಅನುಕಂಪ, ಸಹಾನುಭೂತಿ, ಋಜುತ್ವ, ಮಾರ್ದವತೆ, ಸೌಜನ್ಯ, ಧೈರ್ಯ, ಸಾಹಸ ಮೊದಲಾದ ಗುಣಗಳು ವಿದ್ಯಾವಂತರಲ್ಲಿ ಮನೆಮಾಡಿಕೊಂಡಿರುತ್ತವೆ. ಮೃದುತ್ವ, ಕೋಮಲತೆ, ಮಧುರತೆ, ಗೆಳೆತನ, ನೇರವಾದ, ಸರಳವಾದ ಪ್ರಾಮಾಣಿಕತೆ, ನೆಟ್ಟನೋಟ, ನ್ಯಾಯ ಈಗ ನಮಗೆ ನಮ್ಮ ದೇಶಕ್ಕೆ ಬೇಕಾಗಿರುವುದು ಅಕ್ಷರಸ್ಥರಲ್ಲ, ವಿದ್ಯಾವಂತರು. ಅಂಥ ವಿದ್ಯಾವಂತರನ್ನು ರೂಪಿಸುವ ಶಿಕ್ಷಣ ವ್ಯವಸ್ಥೆ ನಮಗೆ ಬೇಕಾಗಿದೆ ಎಂದು ಅವರು ಹಲಬುತ್ತಾರೆ.

'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎನ್ನುವ ಮಾತು ಶತಸಿದ್ಧವಾದದ್ದು. ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡುವ ಹೊಣೆ ತಂದೆ ತಾಯಿಯರ ಮೊದಲ ಜವಾಬ್ದಾರಿಯಾಗಿದ್ದರೆ, ಎರಡನೆಯ ಜವಾಬ್ದಾರಿ ಗುರು–ಹಿರಿಯರ ಮೇಲಿದೆ. ಒಳ್ಳೆಯ ಪ್ರಜೆಗಳನ್ನು ತಯಾರಿಸುವ ಹೊಣೆ ಗುರುಗಳ ಮೇಲಿರುವಾಗ ಗುರುವೃಂದವರಷ್ಟು ಜವಾಬ್ದಾರಿಯುತ ಕೆಲಸ ಬೇರೆ ಯಾವುದೇ ಹುದ್ದೆಯಲ್ಲಿರುವವರಿಗೆ ಇಲ್ಲವೇ ಇಲ್ಲ ಎಂದರೂ ತಪ್ಪಾಗಲಾದರು. ಯಥಾ ರಾಜಾ ತಥಾ ಪ್ರಜಾ ಎಂಬಂತೆ ಯಥಾ ಗುರು ತಥಾ ಅವರಿಗೆ ತಾವು ಕಣ್ಣಿನಲ್ಲಿ ಕಂಡದ್ದಕ್ಕಿಂತ ಪತ್ರಿಕೆಗಳಲ್ಲಿ ಪ್ರಕಟವಾದದ್ದು ಹೆಚ್ಚಿನ ನಂಬಿಕೆಗೆ ಅರ್ಹವಾದದ್ದು, ಇಂಥ ಪರಿಸ್ಥಿತಿಯಲ್ಲಿ ಪತ್ರಿಕೆಗಳ ಜವಾಬ್ದಾರಿಯಾದರೂ ತುಂಬಾ ಮಹತ್ವದ್ದು, ಅಕ್ಷರ ಬಲ್ಲವರಾದರೆ ತಿಳವಳಿಕೆ ಉಳ್ಳವರಾದರೆ ಅವರು ಇಂಥದರ ಬಗ್ಗೆ ಕುರಿತು ಆಲೋಚನೆ ಮಾಡುವ ಶಕ್ತಿ ಅವರಿಗಿರುತ್ತದೆ.

ಹಾಮಾನಾ ಅವರ ಚಿಂನೆಗಳು ಇನ್ನು ವಿಸ್ತಾರವಾಗಿ ವಿಶ್ಲೇಷಣೆಯ ಅಗತ್ಯವಿದೆ. ಪ್ರಸ್ತುತ ಲೇಖನದ ಮಿತಿಯಲ್ಲಿ ಕೆಲವು ಅವಶ್ಯಕ ಚಿಂತನೆಗಳನ್ನು ಮಾತ್ರ ವಿಶ್ಲೇಷಣಾತ್ಮಕ ಶೋಧದ ತೆಕ್ಕೆಗೆ ತೆಗೆದುಕೋಳ್ಳಲಾಗಿದೆ.

– 34ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಿದ್ಧಲಿಂಗಯ್ಯರವರ ಮೆರವಣಿಗೆ : ಸ್ತ್ರೀ ಪರ ದೃಷ್ಟಿ

✍ ಡಾ. ಮಂಜುಳ ಜಿ., W/o. ಪ್ರತಾಪ್ ಕೆ. ಅರಹಳ್ಳಿ, ಗ್ರಾಮ ಮತ್ತು ಅಂಚೆ, ಕೋಲಾರ ತಾಲೂಕು ಮತ್ತು ಜಿಲ್ಲೆ – 563101

ಕನ್ನಡ ಸಾಹಿತ್ಯದಲ್ಲಿ ದಲಿತ ಕವಿ, ದಲಿತರ ಆದಿಕವಿ, ಬಡವರ ನಗುವಿನ ಶಕ್ತಿ ಎಂಬ ಪ್ರೀತಿ ಪಾತ್ರಗಳಿಗೆ ಹೆಸರಾದವರು ಡಾ. ಸಿದ್ಧಲಿಂಗಯ್ಯನವರು. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬಂತ ವ್ಯಕ್ತಿತ್ವ ಇವರದು. ಇವರು ಕವನ ಸಂಕಲನ, ಪ್ರಬಂಧ ಸಾಹಿತ್ಯ, ವಿಮರ್ಶಾ ಸಾಹಿತ್ಯ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯವನ್ನು ಸೃಜಿಸಿದ್ದಾರೆ. ಇವರ ಸಾಹಿತ್ಯವು ದಲಿತ ಹೋರಾಟ ಹಾಗೂ ಸಾಮಾಜಿಕ ಸಮಾನತೆಯ ಆಶಯದ ಜೊತೆ ಜೊತೆಗೆ ಸಾಗಿ ಬಂದಿದೆ. ಇವರು ದಲಿತ ಸಂಘರ್ಷ ಸಮಿತಿಯ ಅಧ್ಯಕ್ಷರಲ್ಲದೆ, ವಿಧಾನ ಪರಿಷತ್ತಿನ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದಾರೆ. ಇವರು ಅಂಬೇಡ್ಕರ್, ಪೆರಿಯಾರ್, ವಸುದೇವ ಭೂಪಾಲ, ಲೋಹಿಯಾ ಮುಂತಾದವರ ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದರು. ಇವರ ರಚನೆಗಳಲ್ಲಿ 'ಮೆರವಣಿಗೆ' ಸಂಕಲನವು ಬಹುಮುಖ್ಯವಾದುದಾಗಿದೆ. ಈ ಸಂಕಲನದಲ್ಲಿ 1975ರಲ್ಲಿ ಪ್ರಕಟವಾದ 'ಹೊಲೆಮಾದಿಗರ ಹಾಡು', 1979ರಲ್ಲಿ 'ಸಾವಿರಾರು ನದಿಗಳು', 1983ರಲ್ಲಿ 'ಕಪ್ಪು ಕಾಡಿನ ಹಾಡು', 2000ರಲ್ಲಿ 'ಹೊಸ ಕವಿತೆಗಳು' ಈ ಸಂಕಲನದಲ್ಲಿ ಸೇರ್ಪಡೆಯಾಗಿವೆ.

ಸಮಾಜದಲ್ಲಿ ತುಳಿತಕ್ಕೆ ಒಳಗಾದ ದೀನ ದಲಿತರ, ಅಸ್ಪೃಶ್ಯ ಜನಾಂಗಗಳ ಮೇಲಿನ ಶೋಷಣೆ, ಅವಮಾನ, ಬಡತನದ ಏಳು–ಬೀಳು ಹೀಗೆ ಹಲವಾರು ಸಮಾಜ ಕಂಟಕ ಮಗ್ಗುಲುಗಳನ್ನ ಅವರ ಕಾವ್ಯದ ವಸ್ತುವಾಗಿಸಿಕೊಂಡಿದ್ದಾರೆ. ಸಮಾಜವನ್ನು ಪ್ರಶ್ನಿಸುವ, ಮೇಲ್ವರ್ಗದವರ ದಬ್ಬಾಳಿಕೆಯನ್ನು ಖಂಡಿಸುವ ಹಾಗೂ ತನ್ನತನದ ಅಸ್ತಿತ್ವವನ್ನು ಹುಡುಕಾಡುವ ಪ್ರಯತ್ನ ಈ ಸಂಕಲನದಲ್ಲಿದೆ. ಮೇಲ್ವರ್ಗಗಳ ಅಪಮಾನ, ಶೋಷಣೆಗಳನ್ನ ಅನುಭವಿಸಿದ ನೊಂದವರ ಬದುಕಿನ ಅನುದಿನದ ಪಯಣದಲ್ಲಿ ಕಂಡಂತಹ ನೋವು–ನಷ್ಟಗಳೆಲ್ಲವನ್ನು ಇದರಲ್ಲಿ ದಾಖಲಿಸಿದ್ದಾರೆ. ಬಡತನ, ಹಸಿವು, ಮೌಢ್ಯಾಚಾರಗಳಿಂದ ಸಂಪ್ರದಾಯ ಗಳಿಗೆ ಕಟ್ಟು ಬಿದ್ದು ಜೀವಿಸುತ್ತಿರುವ ಶೋಷಿತ ಸಮುದಾಯಗಳ ದನಿಯಾಗಿ ಸಿದ್ಧಲಿಂಗಯ್ಯನವರ ಈ ಕಾವ್ಯಗಳು ಮಾತಾಡುತ್ತವೆ. ಸ್ವಾತಂತ್ರ್ಯ, ಸಮಾನತೆಯ ಕುರಿತು ಗಟ್ಟಿಯಾಗಿ ಪ್ರಶ್ನಿಸುವ ಪ್ರಯತ್ನ ಈ ಕಾವ್ಯಗಳಲ್ಲಿದೆ. ತಮ್ಮನ್ನು ಅವಮಾನಿಸುವ ಮೇಲ್ವರ್ಗಗಳನ್ನ 'ರೊಚ್ಚಿನ ಭಾಷೆ'ಯಲ್ಲಿ ತೀವ್ರವಾಗಿ ಪ್ರಶ್ನಿಸುವ ಹಾಗೂ ದಲಿತ ಸಮುದಾಯಗಳ ಶ್ರಮದ ಪ್ರಧಾನ್ಯತೆಯ ಭಾಗವಾಗಿ ಇಲ್ಲಿನ ಪದ್ಯಗಳು ಮೂಡಿಬಂದಿವೆ.

ಬಂಡಾಯ ಚಳುವಳಿಯ ಪ್ರಮುಖ ಘಟ್ಟಗಳಾಗಿ ದಲಿತ ಚಳುವಳಿ ಹಾಗೂ ಸ್ತ್ರೀವಾದ ಚಳುವಳಿಯು ಕವಲೊಡೆದಿದೆ. ದಲಿತ ಸಾಹಿತ್ಯ ಮತ್ತು ಸಂಘಟನೆಗಳ ಮೂಲಕ ದಲಿತ ಆಶಯವನ್ನು ಹಾಗೆಯೇ ಸ್ತ್ರೀವಾದಿ ಸಂಘಟನೆಗಳ ಮೂಲಕ ಸ್ತ್ರೀವಾದಿ ಬಂಡಾಯ ಆಶಯವನ್ನು ಕಾಣಬಹುದು. ಬಂಡಾಯ ಕವಿಗಳು ದಲಿತ ಮತ್ತು ಮಹಿಳಾ ಪರ ಕಾಳಜಿಗಳನ್ನು ಮುಖ್ಯ ವಸ್ತುಗಳನ್ನಾಗಿಸಿಕೊಂಡು ಕಾವ್ಯ ರಚಿಸುತ್ತಾರೆ. ಸಾಮಾಜಿಕ ಶೋಷಣೆಯಲ್ಲಿ ಅಪಮಾನಕ್ಕೊಳಗಾಗುತ್ತಿರುವ ದಲಿತರು ಒಂದೆಡೆಯಾದರೆ ಮತ್ತೊಂದೆಡೆ 'ಹೆಣ್ಣು' ಕೂಡ ಅದಕ್ಕಿಂತಲೂ ಹೆಚ್ಚಿನದಾದ ರೀತಿಯ ಶೋಷಣೆಗೆ ಒಳಗಾಗುತ್ತಾ ಬಂದಿದ್ದಾಳೆ. ಪುರಾಣ ಕಾಲದಿಂದಲೂ ಸ್ತ್ರೀಯನ್ನು ವೈಭವೀಕರಿಸಿ ಸಾಂಪ್ರದಾಯಿಕತೆಗಳ ಗೊಂಬೆಗಳಾಗಿಸಿ ಎಲ್ಲಾ ಅನುಕೂಲತೆಗಳಿಗೆ, ಅಗತ್ಯಗಳಿಗೆ ತಕ್ಕಂತೆ ಪುರುಷರು ಸೃಷ್ಟಿಸಿಕೊಂಡಿದ್ದಾರೆ. ಆದರೆ ಬಂಡಾಯ ಸಾಹಿತ್ಯದ ಮೂಲಕ ಹೆಣ್ಣು ಅತಿರೇಕದ ಸಾಂಪ್ರದಾಯಿಕತೆಯನ್ನು ಮೀರುವ, ಸ್ವಾತಂತ್ರ್ಯವನ್ನು ಬಯಸುವ, ಪುರುಷಾಹಂಕಾರಗಳನ್ನ ಪ್ರಶ್ನಿಸುವ ಪ್ರಗತಿಪರವಾದ ಯೋಚನೆಯು ಸಾಧ್ಯವಾಯಿತು. ಮಾಲೀಕ–ಜೀತದಾಳು, ಒಡೆಯ–ಸೇವಕ, ಗಂಡು–ಹೆಣ್ಣು ಈ ಸ್ಥರದಲ್ಲಿನ ಶೋಷಣೆಯಿಂದಾಗಿ ಹೆಣ್ಣಿನ ಮೇಲಾಗುತ್ತಿರುವ ದೌರ್ಜನ್ಯವನ್ನ ಕುರಿತು ವಿಮರ್ಶಿಸುವ ಪ್ರಯತ್ನ ಈ ಲೇಖನದ್ದಾಗಿದೆ.

ಹೆಣ್ಣಿನ ಮೇಲಿನ ದೌರ್ಜನ್ಯ ನೆನ್ನೆ ಮೊನ್ನೆಯದಲ್ಲ. ಪುರಾಣ ಮಹಾಕಾವ್ಯವಾದ ರಾಮಾಯಣದಲ್ಲಿ ಸೀತೆಯ ಪಾತೀವ್ರತ್ಯವನ್ನು ಅನುಮಾನಿಸಿ ಅವಳನ್ನು ಅಗ್ನಿ ಪರೀಕ್ಷೆಗೆ ಒಳಪಡಿಸುತ್ತಾರೆ. ಸೀತೆ ತನ್ನ ಮೇಲಾದ ಅಪಮಾನವನ್ನು ಬೆಂಕಿಗೆ ಹಾರುವ ಮೂಲಕ ಉತ್ತರಿಸುತ್ತಾಳೆ. ಮಹಾಭಾರತದಲ್ಲಿ ಧರ್ಮರಾಜನು ಜೂಜಿನ ಫಲವಾಗಿ ದ್ರೌಪದಿಯನ್ನು ಪಣಕ್ಕಿಡುತ್ತಾನೆ. 'ಸತಿಯೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು' ಎಂದು ದ್ರೌಪದಿ ತನ್ನ ಮೇಲಾದ ಶೋಷಣೆಯ ಕುರಿತು ದನಿಯೆತ್ತುತ್ತಾಳೆ. ಹೀಗೆ ಹೆಣ್ಣು ಒಂದಿಲ್ಲೊಂದು ರೀತಿಯಲ್ಲಿ ತನ್ನ ಮೇಲಾದ ದೌರ್ಜನ್ಯವನ್ನು ಮೌನವಾಗಿ ಪ್ರತಿಭಟಿಸುತ್ತಾ ಬಂದಿದ್ದಾಳೆ. ಆದರೆ ಈ ಮೌನ ಗಟ್ಟಿ ದನಿಯಾಗಿ ನೆಲೆಗೊಂಡಿದ್ದು ವಚನ ಚಳುವಳಿಯಿಂದಾಗಿ ಅಂದರೆ ತಪ್ಪಾಗಲಾರದು. 12ನೆಯ ಶತಮಾನದ ವಚನ ಚಳುವಳಿಯಲ್ಲಿ ಅಕ್ಕಮಹಾದೇವಿ, ಮುಕ್ತಾಯಕ್ಕ, ಸೂಳೆ ಸಂಕವ್ವ ಹಾಗೂ ಇತರ ವಚನಕಾರ್ತಿಯರ ವಚನಗಳಿಂದ ಮಹಿಳಾ ಸಂವೇದನೆಯ ಕುರುಹನ್ನು ಗುರ್ತಿಸಬಹುದು. 20ನೆಯ ಶತಮಾನದ ನಂತರ ಲಲಿತಾ ನಾಯಕ್, ವಿಜಯಾದಬ್ಬೆ, ಗೀತಾ ನಾಗಭೂಷಣ್, ಸುಕನ್ಯಾ ಮಾರುತಿ, ಪ್ರತಿಭಾ ನಂದಕುಮಾರ್, ಮಾಲತಿ ಪಟ್ಟಣಶೆಟ್ಟಿ ಮುಂತಾದವರು ಸ್ತ್ರೀವಾದಿ ಸಾಹಿತ್ಯದ ಮೂಲಕ ಸ್ತ್ರೀ ಸಂವೇದನೆಯ ನೆಲೆಗಳನ್ನು ವಿಸ್ತರಿಸಿಕೊಂಡರು. ಈ ಹಾದಿಯಲ್ಲಿ ಸಿದ್ಧಲಿಂಗಯ್ಯನವರು ತಮ್ಮ ಕಾವ್ಯಗಳ ಮೂಲಕ ಮಹಿಳಾ ಶೋಷಣೆ ಹಾಗೂ ಮಹಿಳಾ ಸಂವೇದನೆಯ ಕುರಿತಂತೆ ದನಿಯೆತ್ತಿರುವುದನ್ನು ಇಲ್ಲಿ ಗುರ್ತಿಸಬಹುದಾಗಿದೆ. ಶತಮಾನಗಳಿಂದಲೂ ಪುರುಷಾಹಂಕಾರದ ದರ್ಪಕ್ಕೆ ಒಳಗಾಗಿರುವ ಹೆಣ್ಣನ್ನು ಮೇಲ್ವರ್ಗಗಳು ತಮ್ಮ ಭೋಗದ ವಸ್ತುವಾಗಿ ಬಳಸಿಕೊಂಡಿರುವುದನ್ನು ಖಂಡಿಸುವ ಬಗೆಯಲ್ಲಿ ತಮ್ಮ ಕಾವ್ಯಗಳನ್ನು ಚಿತ್ರಿಸಿದ್ದಾರೆ. 'ಹೊಸ ಕವಿತೆ'ಗಳಲ್ಲಿನ ಪ್ರಕೃತಿ, ಗ್ರಾಮದೇವತೆ ಕುರಿತ ಕವಿತೆಗಳಲ್ಲಿ ಕಾಡನ್ನು ಕಾಡುಗಳ್ಳರು ಅವರ ಹೇಯ ಕೃತ್ಯಗಳಿಗೆ ಬಳಸಿಕೊಂಡು ನಾಶಪಡಿಸುವಂತೆ ಹೆಣ್ಣನ್ನು ಕಾಡಿಗೆ ಹೋಲಿಕೆ ಮಾಡಬಹುದಾದ ರೀತಿಯಲ್ಲಿ ರಚಿಸಿರುವುದನ್ನು ಗುರ್ತಿಸಬಹುದಾಗಿದೆ.

'ಪುಟ್ಟ ಗುಡಿಸಲಿನಲ್ಲಿ ಮೈಮಾರಿಕೊಳ್ಳುತ್ತಿರುವ
ಹೆಣ್ಣ ಸಂಕಟದಲ್ಲಿ ನೋವಿತ್ತು.
ದೇವರೆದುರಲಿ ದೇಹ ದಾಹವನ್ನು ಇಂಗಿಸಿದ
ದೇವದಾಸಿಯ ಮಕ್ಕಳೇನಾದರೂ
ದೇವರನು ಧಿಕ್ಕರಿಸಿ ಮಾನವತೆಯನು ನಂಬಿ
ಉಳ್ಳವರ ಎದೆಗವರು ಮುಳ್ಳಾದರು'.

(ಮೆರವಣಿಗೆ, ಪು.ಸಂ–36)

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ದೇವರ ಹೆಸರಿನಲ್ಲಿ ಹೆಣ್ಣುಮಕ್ಕಳನ್ನು ಬಸವಿ, ದೇವದಾಸಿ, ಜೋಗತಿಯರನ್ನಾಗಿಸಿ ಮೇಲ್ವರ್ಗದವರ ಕಂದಾಚಾರಗಳಿಗೆ, ಕಾಮತೃಷೆಗೆ ಸಾವಕಾಶವಾಗಿಸಿಕೊಳ್ಳುತ್ತಿದ್ದರು. ದೇವರ ಹೆಸರಿನಲ್ಲಿ ಉಳ್ಳವರ ಕಾಮಕ್ಕೆ ಬಲಿಯಾದರೂ, ತಮ್ಮನ್ನು ಮುಗ್ಧವಾಗಿ ದೇವರ ಸೇವೆಗೆಂದು ಅರ್ಪಿಸಿಕೊಂಡಿದ್ದರು. ತಳ ಸಮುದಾಯದ ಜನಗಳ ಮೌಢ್ಯಗಳೇ ಆ ಸಮುದಾಯಗಳ ಹೆಣ್ಣು ಮಕ್ಕಳನ್ನ ಉಳ್ಳವರ ಪಾಲಾಗಿಸುವುದಕ್ಕೆ ಪ್ರಮುಖ ಕಾರಣವಾಗಿದೆ. ಚಿಕ್ಕ ಗುಡಿಸಲು, ಜೋಪಡಿಗಳಲ್ಲಿ ವಾಸಿಸುವ ಹೆಂಗಸರು ಬಡತನದ ಬೇಗೆಯಿಂದ ಮೈಮಾರಿಕೊಂಡು ಜೀವಿಸುವುದಲ್ಲದೆ, ಉಳ್ಳವರ ಅವಶ್ಯಕತೆಗಳನ್ನ ಪೂರೈಸಲು ಬಲಿಯಾಗುತ್ತಿದ್ದಾರೆ. ಹೀಗೆ ದಾಸಿಯಾಗಿದ್ದ ಹೆಣ್ಣು ಮತ್ತು ಆಕೆಯ ಮಕ್ಕಳು ಸಂವಿಧಾನ ನೀಡಿದ ಅವಕಾಶದಿಂದಾಗಿ ಅಕ್ಷರ ಕಲಿತು ಕ್ರೂರ ವ್ಯವಸ್ಥೆಯನ್ನ ಪ್ರಶ್ನೆ ಮಾಡತೊಡಗಿದರೆ ಅದು ಉಳ್ಳವರ ದೃಷ್ಟಿಯಲ್ಲಿ ದೇಶದ್ರೋಹವಾಗುತ್ತದೆ. ಈ ರೀತಿ ತಮ್ಮ ನೀಚ ಕೃತ್ಯಗಳು, ನೀಚ ಆಚರಣೆಗಳ ವಿರುದ್ಧ ದನಿಯೆತ್ತದಂತೆ ಹಿಂದಿನಿಂದಲೂ ಒಂದಿಲ್ಲೊಂದು ರೀತಿಯಲ್ಲಿ ಹತ್ತಿಕ್ಕುತ್ತಲೇ ಬರಲಾಗುತ್ತಿದೆ. ಅದರಲ್ಲೂ ಹೆಣ್ಣು ಮಕ್ಕಳೇನಾದರೂ ತಮ್ಮ ಮೇಲಾದ ದೌರ್ಜನ್ಯದ ವಿರುದ್ಧ ತಿರುಗಿಬಿದ್ದರೆ ಇಡೀ ಕೊಳಕು ಸಮಾಜ ಆಕೆಯ ಚಾರಿತ್ರ್ಯಹರಣ ಮಾಡಿ ತಮ್ಮ ಗಂಡಸ್ತನವನ್ನು ತೋರಿಸಿಬಿಡುತ್ತಾರೆ. ಹೀಗೆ ಈ ಕವಿತೆಯಲ್ಲಿ ದಾಸಿಯರು ತಮಗಾದ ಸಂಕಟ, ಶೋಷಣೆಯ ವಿರುದ್ಧ ತಿರುಗಿ ಬೀಳಬೇಕೆಂಬ ಸಣ್ಣ ಸುಳಿವನ್ನ ನೀಡುವಂತಿದೆ.

'ಒಲಿದ ಹೆಣ್ಣಿನ ಜೊತೆಗೆ ಹೋಗು ಯೋಜನ ದೂರ
ಅರಗಳಿಗೆ ನಿಲ್ಲದಿರು ಈ ಊರಿನಲ್ಲಿ'
'ಒಲವ ಹಂಬಲಿಸಿ ಹೋದವಳ ಮರೆತು ಬಿಡಿ
ಎಂಬ ಮುದ್ದಿನ ಮಗಳ ಪತ್ರ ಕಂಡ'

(ಮೆರವಣಿಗೆ, ಪು.ಸಂ:50)

ಪ್ರೀತಿಸಿದ ಪ್ರೇಮಿಗಳು ಮದುವೆಯಾಗಲು ಅವರಿಗೆ ಜಾತಿಯು ಶಾಪವಾಗಿ ಪರಿಣಮಿಸುತ್ತದೆ. ಪ್ರೀತಿ, ಪ್ರೇಮ ಯಾವುದೇ ಗಡಿಗಳನ್ನೂ ಮೀರಿದ ಬಂಧ. ಆದರೆ ಜಾತಿ ಕಾರಣವಾಗಿ ಹಿಂದಿನಿಂದಲೂ ಅಡ್ಡಿ–ಆತಂಕಗಳು ಈ ರೀತಿಯ ಸಮಾಜಮುಖಿ ಆಲೋಚನೆಯನ್ನು ತಡೆಯುತ್ತಲೇ ಬಂದಿವೆ. ಹಾಗಾಗಿ ಇಂದಿಗೂ ಅಂತರ್ಜಾತೀಯ ಸಂಬಂಧಗಳನ್ನು ಸಹಿಸಲಾಗದೇ ಮರ್ಯಾದಾ ಹತ್ಯೆಗಳನ್ನು ಮಾಡುತ್ತಿದ್ದಾರೆ. ಕರುಳ ಸಂಬಂಧಕ್ಕಿಂತಲೂ ಜಾತಿ, ಪ್ರತಿಷ್ಠೆಗಳು ಹೆಚ್ಚಾಗಿ ಕೊಲೆ ಮಾಡುವಂತ ಮನಸ್ಥಿತಿಯೂ ಸಾಧ್ಯವಾಗುತ್ತಿದೆ. ಹೀಗೆ ಈ ಕವಿತೆಯಲ್ಲಿ ಅಂತರ್ಜಾತಿಯ ವಿವಾಹಕ್ಕೆ ಸಹಾಯ ಮಾಡುವಂತ ಜ್ಯೋತಿಷಿಯು ಮನೆಗೆ ಬಂದು ನೋಡಿದರೆ ತನ್ನ ಮಗಳೇ ಓಡಿಹೋದದ್ದು ಎಂದು ತಿಳಿಯುತ್ತದೆ. ಇಲ್ಲಿ ಇದು ಹಾಸ್ಯ ಅನಿಸಿದರೂ ಬೇರೊಬ್ಬರ ನೋವು ನಲಿವನ್ನ ಉದಾಸೀನವಾಗಿ ತೆಗೆದುಕೊಳ್ಳುವ ನಾವು, ನಮಗೆ ಆ ರೀತಿಯ ಸನ್ನಿವೇಶ ಎದುರಾದಾಗ ತೋರುವ ಅಭಿವ್ಯಕ್ತಿ ಬೇರೆಯದೇ ಆಗುತ್ತದೆ. ಇದಕ್ಕೆ ಪ್ರತಿಯಾಗಿ ಬಿ.ಎಂ. ಶ್ರೀಯವರ 'ಕಾರಿಹೆಗ್ಗಡೆಯ ಮಗಳು' ಕವಿತೆಯನ್ನು ಉದಾಹರಿಸಬಹುದು.

'ಅಲ್ಲಿ ಒಬ್ಬ ಪೈಲ್ವಾನ್ ತ್ವಡೇ ಭುಜ ತಟ್ಕಂಡು ಒಬ್ಬ ಬಡ್ಡಿ ಮಗನ್ನ ಎಳ್ಕಂಡು
ಬಡ ಬಡನ ಓಡೋಡಿ ಅಡ್ ಬೀಳ್ತಿದ್ದಂಗೆ
ಡೊಳ್ಳೊಟ್ಟೆಕುಳ್ಳ ಹಲ್ಲುದ್ರಿದ ಅಜ್ಜ ಇನ್ನೊಬ್ಬ ಸಕ್ಕತ್ ಗೂಂಡಾ
ಇವ್ರು ಓಡ್ ಬಂದು ಪೈಲ್ವಾನನ್ನ ಎಳೆದಾಕಿ, ನುಗ್ಗಿ,
ಅಡಗೂಲಜ್ಜಿಯ ಕಾಲು, ಕೈ, ಸ್ವಂಟ, ನೆರೆಕೂದ್ಲು
ಇತ್ಯಾದಿಗಳನ್ನು ನೆಕ್ಕಿ ನೆಕ್ಕಿ ಚೆಪ್ಪರಿಸಿ ಕ್ಯಾಕಹಾಕಿ
ಮುಂದಕ್ಕಳುಸ್ತಾರೆ.'

(ಮೆರವಣಿಗೆ, ಪು.ಸಂ–63)

'ಅಡಗೂಲಜ್ಜಿಯ ಕಥೆ' ಕವಿತೆಯು ಈ ಸಾಲುಗಳಲ್ಲಿ ಪುರುಷಾಧಿಕಾರದ ವ್ಯವಸ್ಥೆ ಹಾಗೂ ಅವರ ಕಾಮದ ಅತಿರೇಕ ಎದ್ದು ತೋರುತ್ತದೆ. ಅಜ್ಜಿ ಎಂದು ಕೂಡ ನೋಡದೆ ಅವಳ ಮೇಲೆ ಅತ್ಯಾಚಾರ ಎಸಗುತ್ತಾರೆ. ಅತ್ಯಾಚಾರದ ಹಿಂಸೆಗೆ ಅಪ್ರಾಪ್ತ ಬಾಲಕಿಯರಿಂದ ಹಿಡಿದು ವೃದ್ಧರವರೆಗೂ ನಲುಗುವಂತಾಗಿದೆ. ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳೇ ಕಳೆದರೂ ಹೆಣ್ಣಿನ ಮೇಲೆ ನಡೆಯುತ್ತಿರುವ ಅತ್ಯಾಚಾರ, ಅನಾಚಾರ ಇಂದಿಗೂ ಕಡಿಮೆಯಾಗಿಲ್ಲ. ಅಜ್ಜಿಯೆಂದೂ ನೋಡದೆ ಅಸಭ್ಯವಾಗಿ ವರ್ತಿಸಿ ಅತ್ಯಾಚಾರಗೈಯುವಂತಹ ನೀಚಗೇಡಿಗಳನ್ನ ಧಿಕ್ಕರಿಸುವಿಕೆಯನ್ನು ಈ ಕವಿತೆಯು ಅಭಿವ್ಯಕ್ತಿಸುತ್ತದೆ. ಹೆಣ್ಣು ಧರಿಸಿರುವ ಅರೆಬರೆ ಬಟ್ಟೆಗಳೇ ಅತ್ಯಾಚಾರಗಳಿಗೆ ಕಾರಣ ಎನ್ನುವುದಾದರೆ, ಹಸುಗೂಸು ಕಂದಮ್ಮಗಳು, ಮುದುಕಿಯರು ಅದ್ಯಾವ ರೀತಿಯಲ್ಲಿ ಕಾಮ ಪ್ರಚೋದನೆ ಮಾಡುವರು ಎಂಬುವುದನ್ನು ಚಿಂತಿಸಬೇಕಾಗಿದೆ. ಲೈಂಗಿಕ ದೌರ್ಜನ್ಯಕ್ಕೊಳಗಾದ ಹೆಣ್ಣು ಪಡುವಂತಹ ಹಿಂಸೆ, ಮುಜುಗರ, ಅವಮಾನ ಆಕೆಯನ್ನು ದೈಹಿಕವಾಗಿ, ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತದೆ. ಅತ್ಯಾಚಾರಿಗಳಿಗೆ ಕಠಿಣವಾದ ಶಿಕ್ಷೆ ವಿಧಿಸುವುದಕ್ಕಿಂತ ಮಿಗಿಲಾಗಿ ಪ್ರತಿಯೊಬ್ಬ ಗಂಡಸೂ ಕೂಡ ಹೆಣ್ಣಿನ ಬಗ್ಗೆ ಗೌರವ, ಸಮಭಾವ ಮನಸ್ಥಿತಿಯು ಮೂಡುವಂತೆ ಮಾಡಬೇಕು. ಹೀಗೆ ಹೆಣ್ಣಿನ ಮೇಲೆ ಆಗುತ್ತಿರುವ ಅತ್ಯಾಚಾರದ ಕ್ರೂರತೆಯನ್ನು ಇಲ್ಲಿ ಹೇಳಲಾಗಿದೆ.

'ಹರಿದ ಸೀರೆಯ ಅಂಚು ಸುಳಿವ ಗಾಳಿಗೆ ಹಾರಿ
ಅಡಗಿದ್ದ ತೊಡೆಗಳನ್ನು ತೋರುತ್ತಿತ್ತು.
ಚಿಂದಿ ಕುಬುಸವು ತನ್ನ ಒಲವು ಬಂದೊಡೆ ತೂರಿ
ವಕ್ಷಗಳ ದರ್ಶನವ ಮಾಡಿಸಿತ್ತು'
'ಅನ್ನವಿಲ್ಲದ ಹೆಣ್ಗೆ ಕುಂಕುಮವು ಕಡುಕೇಡು
ಹಣೆಯಲ್ಲಿ ಬೆವರಹನಿ ಮಿನುಗುತ್ತಿತ್ತು
ಉಟ್ಟ ಸೀರೆಯ ಸೆರಗು ಎತ್ತೆತ್ತಲೋ ಹಾರಿ
ಬಡತನದ ಬಾವುಟ ಹಾರುತ್ತಿತ್ತು.'

(ಮೆರವಣಿಗೆ, ಪು.ಸಂ–76)

'ಬೀಳು' ಕವನದ ಈ ಸಾಲುಗಳು ಬಡತನದ ದಲಿತ ಹೆಣ್ಣಿನ ಸ್ಥಿತಿಯನ್ನು ಕಣ್ಣಿಗೆ ಕಟ್ಟಿದಂತೆ ಚಿತ್ರಿಸಲಾಗಿದೆ. ತಲೆಗೆ ಎಣ್ಣೆ ಇಲ್ಲದೆ, ಹೊಟ್ಟೆಗೆ ಊಟ ಇಲ್ಲದೆ, ಮೈ ಮುಚ್ಚಿಕೊಳ್ಳಲು ಬಟ್ಟೆ ಇಲ್ಲದಂತ ಭೀಕರ ಬಡತನದ ಸ್ಥಿತಿಯಲ್ಲಿನ ಬಡ ಹೆಣ್ಣಿನ ಬವಣೆಯು ನಮಗೆ ಅರಿವಾಗುತ್ತದೆ. ಇಲ್ಲಿ ಬೆವರ ಹನಿಯು ಮುಖ್ಯವಾಗಿ ಮಹಿಳೆಯರ ಶ್ರಮವನ್ನು ಪ್ರತಿನಿಧಿಸುತ್ತದೆ. ಕೌಟುಂಬಿಕ ಕಾರಣಗಳಿಂದಾಗಿ ಜವಾಬ್ದಾರಿಯ ಹೊರೆ ಹೊತ್ತು ಪುರುಷ ಸಮಾಜದ ಕಾಟ–ತೀಟೆಗಳಿಂದ ನೊಂದರೂ ಸಹ ಸ್ವಾಭಿಮಾನದಿಂದ ದುಡಿಯುವ ಮಹಿಳೆಯರ ಚಿತ್ರಣವನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಹೀಗೆ ಬಡತನ, ಶೋಷಣೆಯಿಂದ ನಲುಗಿಹೋದ ಹೆಣ್ಣಿನ ನೈಜ ಸ್ಥಿತಿಯ ಬದುಕಿನ ರೀತಿಯನ್ನು ಇಲ್ಲಿ ಹೇಳಲಾಗಿದೆ.

'ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು'

(ಮೆರವಣಿಗೆ, ಪು.ಸಂ–87)

'ಬೆಲ್ಚಿಯ ಹಾಡು' ಕವಿತೆಯ ಈ ಸಾಲುಗಳು ಊರ ಗೌಡರ ತೋಟಕ್ಕೆ ದುಡಿಯಲು ಹೋಗುವ ಮಹಿಳೆಯರ ಮೇಲಾಗುವ ದೌರ್ಜನ್ಯದ ಕುರಿತು ಹೇಳುತ್ತದೆ. ಅವರ ತೋಟದಲ್ಲಿ ದುಡಿಯುವ ಅಸಹಾಯಕ ಹೆಣ್ಣು ಮಕ್ಕಳು ಗೌಡರ ದರ್ಪಕ್ಕೆ ಬಲಿಯಾಗುತ್ತಿದ್ದರು. ಇಲ್ಲೂ ಕೂಡ ಹೆಣ್ಣಿನ ಅಸಹಾಯಕತೆಯನ್ನು ಗುರಿಯಾಗಿಸಿಕೊಂಡು ಆಕೆಯನ್ನ ಲೈಂಗಿಕವಾಗಿ ಬಳಸಿಕೊಳ್ಳಲಾಗಿತ್ತು. ಹೆಂಗಸರನ್ನು ಮೇಲು ಜಾತಿಯವರು ಸ್ವೇಚ್ಛೆಯಾಗಿ ಬಳಸಿಕೊಂಡರು. ಉಳ್ಳವರ ಬಹುಪಾಲು ಕೆಲಸಗಳಿಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ದಲಿತರನ್ನ ಬಳಸಿಕೊಳ್ಳುವಂತೆ, ಅವರ ಕಾಮತೃಷೆಗೆ ದಲಿತ ಹೆಣ್ಣುಮಕ್ಕಳು ಬಲಿಯಾಗುತ್ತಿದ್ದಾರೆ. ಮೇಲ್ವರ್ಗದವರ ಹಿತಾಸಕ್ತಿಗೆ ಬಡವರ ಬದುಕು ನೋವಿನಲ್ಲಿ ಮುಳುಗುವ ಮೂಲಕ ಕೊನೆಯಾಗುತ್ತದೆ. ಅವರು ಹೇಳಿದ್ದನ್ನು ಧಿಕ್ಕರಿಸಿ ನಡೆದರೆ ಸಮಾಜದಲ್ಲಿ ಬದುಕಲು ಬಿಡುವುದಿಲ್ಲ. ಜಾತಿ ಕಾರಣವಾಗಿ ದಲಿತರನ್ನು ದೂರವಿಡುವ ಮೇಲ್ವರ್ಗಗಳು ತಮ್ಮ ಕಾರ್ಯಸಾಧನೆಗೆ ಅವರನ್ನು ಬಳಸಿಕೊಳ್ಳುವಲ್ಲಿ ಜಾತಿ ಅಡ್ಡಿ ಬರಲಾರದು. ದಲಿತರ ನೆರಳು ಕಂಡರೆ ಹೌಹಾರಿ ಬೀಳುವ ಇವರು ತಮ್ಮ ಕಾಮಕೇಳಿಗೆ ದಲಿತ ಹೆಣ್ಣುಮಕ್ಕಳನ್ನ ಬಳಸಿಕೊಳ್ಳಬೇಕಾದರೆ ಮಡಿ ಮೈಲಿಗೆಯ ಯಾವ ಪ್ರಶ್ನೆಯೂ ಉದ್ಭವಿಸುವುದಿಲ್ಲ. ಹೀಗೆ ಮೇಲ್ವರ್ಗಗಳ ದೌರ್ಜನ್ಯದ ವಿರುದ್ಧ ಕ್ರಾಂತಿಕಾರಕವಾಗಿ ಸಿಡಿದೇಳುವ ಬಂಡಾಯವನ್ನು ಈ ಕವಿತೆಯಲ್ಲಿ ಕಾಣಬಹುದಾಗಿದೆ.

'ಭಾರತದ ಬಾವುಟವ ಸುತ್ತಿ ಬಾಯಿಗೆ ತುರುಕಿ
ಕಿತ್ತುಕೊಂಡರು ಅವಳ ಮಾತುಗಳನು'

'ಸಪ್ತಸಾಗರನೆದ್ದು ಬರಸೆಳೆದುಕೊಂಡಂತೆ
ಕಾಮುಕರ ಸರಪಳಿಗೆ ಒಳಗಾದಳು'

'ಅವಳಿಟ್ಟ ಕಣ್ಣೀರು ತೊರೆಯಾಗಿ ಹರಿದರೂ
ನೂರು ನಾಲಗೆ ದಾಹ ತಣಿಸಲಿಲ್ಲ'

(ಮೆರವಣಿಗೆ, ಪು.ಸಂ–97)

'ಕಂಡೆ ನನ್ನವಳ ಒಂದು ದಿವಸ' ಕವನವು ಅತ್ಯಾಚಾರ ಕುರಿತಂತೆ ಕಾಮುಕರ ಪೈಶಾಚಿಕ ವರ್ತನೆಯ ಬಗ್ಗೆ ಮಾತಾಡುತ್ತದೆ. ಸ್ವಾತಂತ್ರ್ಯ ಸಿಕ್ಕ ನಂತರ ಹೆಣ್ಣು ಧೈರ್ಯವಾಗಿ, ಮುಕ್ತವಾಗಿ ಮಧ್ಯ ರಾತ್ರಿಯಲ್ಲೂ ನಿರ್ಭೀತಿಯಿಂದ ಓಡಾಡಬಹುದೆಂಬ ಕನಸು ನನಸಾಗಲೇ ಇಲ್ಲ. ರಾತ್ರಿಯಿರಲಿ ಹಾಡು ಹಗಲೇ ಒಂಟಿಯಾಗಿ ಸಿಕ್ಕ ಹೆಣ್ಣು ಮಕ್ಕಳ ಮೇಲೆ ಸಾಮೂಹಿಕ ಅತ್ಯಾಚಾರವಾದಂತಹ ಹಲವಾರು ಪ್ರಕರಣಗಳು ನಮ್ಮ ಮುಂದಿವೆ. ಪುರುಷರ ಕಾಮತೃಷೆಗೆ ಅಸಂಖ್ಯ ಹೆಣ್ಣುಗಳು ಬಲಿಯಾಗುತ್ತಿದ್ದಾರೆ. ಆಕೆ ಅತ್ತು ಕೂಗಿ ಗೋಗರೆದರೂ ಅವಳ ಬಗೆಗೆ ಎಳ್ಳಷ್ಟೂ ಕರುಣೆ ಹುಟ್ಟದಾಗಿದೆ. ತನ್ನನ್ನು ಹೆತ್ತವಳು, ಜೊತೆ ಹುಟ್ಟಿದವಳು, ಸಂಗಾತಿಯಾದವಳು ಹೆಣ್ಣೆಂದು ತಿಳಿದಿದ್ದರೂ ಅನ್ಯ ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿಯೇ ಬೇರೆ. ಈ ಕವಿತೆಯ ಸಾಲುಗಳನ್ನು ಓದುವಾಗ ಅತ್ಯಾಚಾರದ ತೀವ್ರತೆ ಹಾಗೂ ಕ್ರೂರ ದಾರುಣತೆಯು ಮೈ ಮನ ಕುದಿಯುವಂತೆ ಮಾಡುವುದರಲ್ಲಿ ಎರಡು ಮಾತಿಲ್ಲ.

'ಬದುಕು ಪ್ರೀತಿಸುವ ಬಡವರ ಮಗಳು
ನಿರಾಭರಣೆ ಕವನ'

'ಹೆಣ್ಣು ತುಳುಕಿಸಿದ ಕಣ್ಣೀರಿನ ಹನಿ
ನನ್ನ ಪುಟ್ಟ ಕವನ'

(ಮೆರವಣಿಗೆ, ಪು.ಸಂ–119)

ದುಡಿಯುವ ದಲಿತ ಮಹಿಳೆ ತನಗೆ ಆಭರಣಗಳು ಬೇಕು, ತಾನು ಸುಂದರವಾಗಿ ಕಾಣಬೇಕೆಂಬ ಆಶಾ ಭಾವನೆ ಹೊಂದುವುದು ಸಾಮಾನ್ಯವಾಗಿ ತೀರಾ ಕಡಿಮೆ. ದುಡಿದು ಆ ದಿನದ ಒಂದು ಹೊತ್ತಿನ ಊಟಕ್ಕೆ ತೃಪ್ತಿ ಪಟ್ಟುಕೊಳ್ಳುವಂತವರಿಗೆ ಬಾಹ್ಯ ಸೌಂದರ್ಯದ ಬಗೆಗೆ ಪರಿಜ್ಞಾನವೇ ಇರುವುದಿಲ್ಲ. ಅನುಕೂಲಸ್ಥ ಹೆಂಗಸರ ಹಾಗೆ ಕನಸು ಕಾಣದೆ ನಿರಾಭರಣವಾಗಿ ಜೀವಿಸುವ ಆತ್ಮ ಸೌಂದರ್ಯದ ಕರಿತು ಕವಿತೆ ಹೇಳುತ್ತದೆ. ಬೆಳಗಿನಿಂದ ಜೀತದಾಳುಗಳಾಗಿ ಕಷ್ಟಪಟ್ಟು ದುಡಿಯುವುದಲ್ಲದೆ ಪುರುಷಾಹಂಕಾರದಿಂದಾಗಿ ಕಣ್ಣೀರಲ್ಲೇ ಬದುಕು ಸಾಗಿಸುವುದು ಬಡ ಹೆಣ್ಣು ಮಕ್ಕಳ ಅಸಹಾಯಕ ರೂಢಿಯಾಗಿದೆ. ಬಡತನದ ಬೇಗೆಯಲ್ಲಿ ಬೆಂದು ಶ್ರೀಮಂತರ ಗಾಳಗಳಲ್ಲಿ ಸಿಕ್ಕಿ ನೋವು ಅನುಭವಿಸುತ್ತಿರುವ ಅಸಂಖ್ಯಾ ಹೆಣ್ಣು ಮಕ್ಕಳ ಕಣ್ಣೀರು 'ನನ್ನ ಕವನ' ಎಂದು ಬರೆದುಕೊಳ್ಳುತ್ತಾರೆ. ಶ್ರಮ, ಬಡತನ, ಕಣ್ಣೀರು, ನೊಂದವರ ಪರವಾದ ದನಿಯೇ ನನ್ನ ಕವನ ಎನ್ನುವ ಮೂಲಕ ಸಿದ್ಧಲಿಂಗಯ್ಯನವರು ನೊಂದ ಮಹಿಳೆಯರ ಪರವಾದ ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ನನ್ನ ಸೀರೆಯ ಸೆರಗು ಮರೆ ಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲೇನು
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮೆರೆವ ಜನಗಳ ಮೇಲೆ ಚೆಲ್ಲಲೇನು

(ಮೆರವಣಿಗೆ, ಪು.ಸಂ–122)

'ಬೆಂಗಳೂರಿನ ಹಾಡು' ಈ ಕವಿತೆಯಲ್ಲಿ ಬೆಂಗಳೂರನ್ನು ಹೆಣ್ಣಿಗೆ ಹೋಲಿಸಿ ಬರೆಯಲಾಗಿದೆ. ಬೆಂಗಳೂರು ಮುಗಿಲೆತ್ತರದ ಮಹಡಿಗಳ ಜೊತೆಗೆ ಮುರಿದ ಜೋಪಡಿಗಳಿಗೂ ಆಶ್ರಯವನ್ನು ಕೊಟ್ಟಿದೆ. ಬೆಂಗಳೂರಿನ ನಗರ ಮೇಲು ನೋಟಕ್ಕೆ ಲಕಲಕನೆ ಸುಂದರವಾಗಿ ಕಂಡರೂ ಅಂತರಾಳದಲ್ಲಿ ಅಗಾಧವಾದ ಸಂಕಟಗಳನ್ನು ಹೊತ್ತು ನಿಂತಿದೆ. ಸುಂದರವಾದ ಪರದೆಯ ಹಿಂದೆ ಇರುವ ಒಡಲಾಳದ ಬೇಗೆಗಳು, ನೋವುಗಳು ಯಾರಿಗೂ ಕಾಣುವುದಿಲ್ಲ. ಉಳ್ಳವರ ಆಕ್ರಮಣಕಾರಿ ಅಟ್ಟಹಾಸ, ಶ್ರೀಮಂತರ ತುಳಿತಕ್ಕೆ ಸಿಕ್ಕಿ ನಲುಗಿದಂತಹ ಅಸಹಾಯಕ ಹೆಣ್ಣುಗಳ ಕಥೆಯನ್ನು ಬೆಂಗಳೂರಿನ ಮೂಲಕವಾಗಿ ನೋಡಬಹುದಾಗಿದೆ. ಬೆಂಗಳೂರಿನ ಹಾಗೆ ಹೆಣ್ಣು ಕೂಡ ತನ್ನೊಡಲಲ್ಲಿ ಅಗಾಧ ನೋವು–ನಷ್ಟಗಳನ್ನು ಹೊತ್ತಿದ್ದರೂ ಮೇಲುನೋಟಕ್ಕೆ ಸಮಾಜದೆದುರು ತಲೆಯೆತ್ತಿ ನಿಲ್ಲಲು ಪ್ರಯತ್ನಿಸುತ್ತಾಳೆ. ಆಕೆಯ ಮೇಲೆ ಗೌರವ, ಕನಿಕರ ತೋರುವ ಮಂದಿಗಿಂತ ಅವಕಾಶ ಸಿಕ್ಕರೆ ಅವಳನ್ನು ಹರಿದು ಮುಕ್ಕುವ ದುರ್ಬುದ್ಧಿಯವರೇ ಜಾಸ್ತಿಯಾಗಿದ್ದಾರೆ. ಹೀಗೆ ನಗರ ನಿರ್ಮಾಣದ ಹಿಂದಿನ ಇತಿಹಾಸವನ್ನು ಈ ಕವಿತೆಯು ನೆನಪಿಸುವುದರ ಜೊತೆಗೆ ಹೆಣ್ಣಿನ ಮೇಲಿನ ಶೋಷಣೆಯನ್ನು, ಅವಳ ಅಸಹಾಯಕತೆಯನ್ನು ಕುರಿತು ಬೆಳಕು ಚಲ್ಲುತ್ತದೆ.

ಸಣ್ಣ ಸಂಗತಿಗಳಿಗೂ ಕೂಗಾಡುವ ಕುಣಿಯುವ
ಹೆಂಗಸರಾ ಪಡೆ ಅಲ್ಲಿತ್ತು
ಮಾಜೀ ರೌಡಿಯ ಕುಂಟು ನಡಿಗೆಯಲಿ
ಪೋಲಿಸರ ಏಟಿನ ಗುರುತಿತ್ತು.

(ಮೆರವಣಿಗೆ, ಪು.ಸಂ–146)

'ಕೊಳಗೇರಿಯ ಹಾಡು' ಕವಿತೆಯ ಈ ಸಾಲುಗಳು ವ್ಯವಸ್ಥೆಯ ಅಧಿಕಾರ ವಂಚನೆಯ ಕುರಿತಂತೆ ವಿಷಾದ ವ್ಯಕ್ತಪಡಿಸುತ್ತದೆ. ಬೆಂಗಳೂರಿನ ಕೊಳಗೇರಿಯೊಂದರ ನೆಲಸಮ ಮಾಡುವ ಸಂದರ್ಭದ ಸ್ಥಿತಿಯನ್ನು ಇಲ್ಲಿ ವಿವರಿಸಲಾಗಿದೆ. ಈ ಸಂದರ್ಭದಲ್ಲಿ ಹೆಣ್ಣು ತನ್ನ ಸಂಕಟವನ್ನು ವ್ಯಕ್ತಪಡಿಸುವ ರೀತಿಯ ಬಗ್ಗೆ ಸೂಕ್ಷ್ಮವಾಗಿ ಹೇಳಲಾಗಿದೆ. ಸಣ್ಣ ಸಂಗತಿಗಳಿಗೂ ಖುಷಿ ಪಡುವ, ಸಣ್ಣ ಸಂಗತಿಗಳಿಗೂ ಕೂಗಾಡುವ ಮಹಿಳೆಯ ಮನಸ್ಥಿತಿಯು ತಾನು ತನ್ನವರ ಪರವಾದ ಉಳಿವಿಗಾಗಿ ಸದಾ ಸಿದ್ದವೆಂಬ ಸೂಕ್ಷ್ಮತೆಯನ್ನು ಇಲ್ಲಿ ಗಮನಿಸಬಹುದು. ಕೊಳಗೇರಿಯ ಹೆಂಗಸರು ತನ್ನ ಕುಟುಂಬ ಹಾಗೂ ತನ್ನ ಜೋಪಡಿಗಳ ಉಳಿವಿಗಾಗಿ ಹೋರಾಟ ನಡೆಸುತ್ತಲೇ ಇರುತ್ತಾರೆ. ಕೊಳಗೇರಿಯ ಜನರ ಮೇಲೆ ಈ ರೀತಿಯ ಅಧಿಕಾರಿಶಾಹಿಗಳು, ಉಳ್ಳವರು, ಭೂಗಳ್ಳರ ಶೋಷಣೆಯು ನಿರಂತರವಾಗಿ ನಡೆಯತ್ತಲೇ ಬಂದಿದೆ.

ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಸಮಾಜವು ಶೋಷಿತ ಸಮುದಾಯದ ಹೆಣ್ಣಿಗೆ ನೀಡಿರುವಂತ ಸ್ಥಾನಮಾನದ ಪ್ರಶ್ನೆಯನ್ನು ನಮ್ಮ ಮುಂದಿಡುತ್ತವೆ. ಮೇಲ್ವರ್ಗಗಳು ಅವರನ್ನು ಹೇಗೆ ನಡೆಸಿಕೊಂಡಿದೆ ಎಂಬುದನ್ನು ಪ್ರತಿಭಟಿಸುವ ಮೂಲಕ ಎಚ್ಚೆತ್ತುಕೊಳ್ಳುವಂತೆ ಮಾಡುತ್ತವೆ. ಪುರುಷ ಪಾರುಪತ್ಯದ ದೌರ್ಜನ್ಯಗಳು ನಿರಂತರವಾಗಿ ಕೊನೆ ಇಲ್ಲದಂತೆ ಹೆಣ್ಣನ್ನು ಶೋಷಿಸುತ್ತಲೇ ಇದೆ. ಈ ರೀತಿ ಶೋಷಣೆಗೆ ಒಳಗಾದವರನ್ನು

– 122ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬೆಳಗೆರೆ ಪರಿಸರದ ಸಾಹಿತಿಗಳು : ಒಂದು ಅವಲೋಕನ

✍ ಮುರಳಿ ಎಂ., ಸಹಾಯಕ ಪ್ರಾಧ್ಯಾಪಕರು, ಹೆಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.

ಕನ್ನಡ ನಾಡು ಹಲವು ವೈವಿಧ್ಯತೆಗಳಿಗೆ ಹೆಸರುವಾಸಿಯಾಗಿದೆ. ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಸಾಮಾಜಿಕ, ಜಾನಪದ ಹಾಗೂ ಸಾಹಿತ್ಯಿಕವಾಗಿ ವಿಶಿಷ್ಟವಾದ ಪರಂಪರೆಯನ್ನು ಹೊಂದಿದೆ. ಇಂತಹ ವಿಶಿಷ್ಟ ಪರಿಸರದಲ್ಲಿ ಹಲವು ಕವಿಗಳು ಜನ್ಮವೆತ್ತಿ ಸಾಹಿತ್ಯ ರಚನೆಯಲ್ಲಿ ತೊಡಗಿ ತಮ್ಮ ಪರಿಸರದ ಮುಂದಿನ ತಲೆಮಾರುಗಳಿಗೆ ಪ್ರೇರಣೆಯನ್ನು ಒದಗಿಸಿ ತನ್ನದೇ ಆದ ಸಾಹಿತ್ಯಿಕ ಪರಿಸರವನ್ನು ನಿರ್ಮಿಸಿರುವುದನ್ನು ಆರಂಭ ಕಾಲದಿಂದಲೂ ನಾವು ಗುರುತಿಸಬಹುದು. ಕನ್ನಡ ಸಾಹಿತ್ಯದ ಪ್ರಾರಂಭಿಕ ಕಾಲ ಘಟ್ಟದ ಪ್ರಮುಖ ಚಂಪೂ ಕವಿಯಾದ ಜನ್ನನ ಸಾಹಿತ್ಯಿಕ ಪರಿಸರವನ್ನು ಒಮ್ಮೆ ಅವಲೋಕಿಸುವುದಾದರೆಈತ ವಿದ್ವಾಂಸರ ಕುಟುಂಬದಲ್ಲಿ ಜನಿಸಿದ. ಜನ್ನನ ಕೌಟುಂಬಿಕ ಪರಿಸರದಲ್ಲಿಯೇ ಆತನ ಸುತ್ತಒಂದು ವಿದ್ವಾಂಸರ ಲೋಕವನ್ನೇ ನಾವು ಕಾಣಬಹುದು. ಆತನ ಸೋದರಿ ಗಂಡನಾದ ಯೋಗಿ ಪ್ರವರ ಚಿದಾನಂದ ಮಲ್ಲಿಕಾರ್ಜುನ ಕನ್ನಡ ಮೊಟ್ಟಮೊದಲ ಸಂಕಲನ ಗ್ರಂಥವಾದ 'ಸೂಕ್ತಿಸುಧಾರ್ಣವ' ವನ್ನು ಸಂಪಾದಿಸಿದ.ಸೋದರಳಿಯ ಕೇಶಿರಾಜ ಹಳಗನ್ನಡದ ಪ್ರಖ್ಯಾತ ವ್ಯಾಕರಣ ಕೃತಿಯಾದ 'ಶಬ್ದಮಣಿದರ್ಪಣ'ವನ್ನು ರಚಿಸಿದ. ಇನ್ನೂ ಕೇಶಿರಾಜನ ತಾಯಿಯ ತಂದೆಯೂ ಸಹ ಕವಿಯೂ, ಯಾದವ ಕಟಕಚಾರ್ಯನೆಂದು ಪ್ರಸಿದ್ದನಾಗಿದ್ದ ಸುಮನೋಬಾಣ ಎಂಬುದನ್ನು 'ಶಬ್ದಮಣಿದರ್ಪಣ'ದ ಆದಿಯಲ್ಲಿಉಲ್ಲೇಖಿಸಲಾಗಿದೆ. ಪಾಂಡಿತ್ಯಪೂರ್ಣವಾದ ಕವಿ ಪರಂಪರೆಯನ್ನು ಜನ್ನನ ಕೌಟುಂಬಿಕ ಪರಿಸರದಲ್ಲಿ ಕಾಣಬಹುದು. ನಡುಗನ್ನಡ ಸಾಹಿತ್ಯದಲ್ಲಿ 'ಕ್ರಾಂತಿಕವಿ' ಎಂದೇ ಕರೆಯಲ್ಪಡುವ ಹರಿಹರನ ಸಾಹಿತ್ಯಿಕ ಪರಿಸರದಲ್ಲಿ ಸೋದರಳಿಯ 'ಪಟ್ಟದಿಯ ಬ್ರಹ್ಮ'ನೆಂದು ಖ್ಯಾತಿ ಪಡೆದ ರಾಘವಾಂಕನು ಹರಿಹರನ ಪ್ರೇರಣೆ ಮತು ಪ್ರಭಾವವನ್ನು ಪಡೆದವನು.

ಹಳಗನ್ನಡ ಕಾಲದಿಂದ ಸಹ ವಿಶಿಷ್ಟವಾದ ಸಾಹಿತ್ಯಿಕ ಪರಿಸರದಲ್ಲಿ ಬೆಳೆದು ಬಂದ ಕವಿ ಪರಂಪರೆಯನ್ನು ಕಾಣಬಹುದು. ಹೊಸಗನ್ನಡ ಸಾಹಿತ್ಯ ಕಾಲಘಟ್ಟದಲ್ಲಿಯೂಇದರ ಮುಂದುವರಿಕೆಯನ್ನು ಗುರುತಿಸುಬಹುದು. ಕರುನಾಡಿನಲ್ಲಿ ಗಂಡು ಮೆಟ್ಟಿನ ನಾಡು, ಏಳು ಸುತ್ತಿನಕೋಟೆ, ಬಂಡೆಗಲ್ಲುಗಳ ನಾಡು, ಬಯಲು ಸೀಮೆ ಎಂದೇ ಕರೆಯಲ್ಪಡುವ ಮಧ್ಯ ಕರ್ನಾಟಕದ ಅವಿಭಜಿತ ಚಿತ್ರದುರ್ಗವು ಶಿಲಾಯುಗದ ಕಾಲದಿಂದ ಪಾಳೇಗಾರರ ಕಾಲದವರೆಗೂ ಚಾರಿತ್ರಿಕ ಪ್ರಾಮುಖ್ಯತೆಯನ್ನು ಒಳಗೊಂಡ ಪ್ರದೇಶವಾಗಿದೆ. ಇದು ಕೇವಲ ಐತಿಹಾಸಿಕವಾಗಿ ಮಾತ್ರವಲ್ಲದೇ ಬುಡಕಟ್ಟು ಸಂಸ್ಕೃತಿಯ ಮೌಖಿಕ ಸಾಹಿತ್ಯ ಪರಂಪರೆಯ ಸಮೃದ್ಧತೆಯನ್ನು ಹೊಂದಿರುವ ಪ್ರದೇಶವಾಗಿದೆ. ಜಿಲ್ಲೆಯ ಸಾಹಿತ್ಯಿಕ ಪರಿಸರದಲ್ಲಿ ಚಳ್ಳಕೆರೆ ತಾಲ್ಲೂಕು ತುಂಬಾ ವಿಶಿಷ್ಟತೆಯನ್ನು ಹೊಂದಿದ್ದು, ಚಾರಿತ್ರಿಕ, ಸಾಹಿತ್ಯಿಕ, ಜಾನಪದೀಯ ಅನನ್ಯ ಪರಂಪರೆಯನ್ನು ಗುರುತಿಸಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯ ಸಾಹಿತ್ಯಿಕ ಪರಂಪರೆಯನ್ನು ಸ್ಮರಿಸುವಾಗ ಆಧುನಿಕ ಕನ್ನಡ ಸಾಹಿತ್ಯ ತಲೆಯೆತ್ತುವ ಆರಂಭ ಕಾಲ ಘಟ್ಟದಲ್ಲಿ ಕವಿಗಳಿಗೆ ಶ್ರೇಷ್ಟ ಗುರು ಪರಂಪರೆ ಮತ್ತು ಪ್ರಮುಖ ಲೇಖಕರನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಕೊಡುಗೆ ನೀಡಿರುವುದನ್ನು ನಾವು ಮನಗಾಣಬಹುದು. ಅದರಲ್ಲಿ ಚಳ್ಳಕೆರೆಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಗಮನಿಸುವುದಾದರೆ ಕನ್ನಡ ಸಾಹಿತ್ಯ ಜಗತ್ತಿಗೆ ಅಮೂಲ್ಯವಾದ ಕಾಣಿಕೆಯನ್ನು ನೀಡಿದ ಎರಡು ಮನೆತನಗಳ ಸಾಹಿತ್ಯಿಕ ಸೇವೆ ಇಲ್ಲಿ ಪ್ರಮುಖವಾಗಿ ಕಂಡು ಬರುತ್ತದೆ. ಆ ಮನೆತನಗಳೆಂದರೆ, ಮೊದಲನೆಯದಾಗಿ ತಳುಕಿನ ಮನೆತನ ಮತ್ತೊಂದು ಬೆಳಗೆರೆ ಮನೆತನ.

ತಳುಕಿನ ಮನೆತನ ಆಧುನಿಕ ಕನ್ನಡ ಸಾಹಿತ್ಯ ರೂಪಗೊಳ್ಳುವ ಆರಂಭ ಕಾಲ ಘಟ್ಟದಲ್ಲಿ ಹಲವು ಕವಿವರ್ಯರಿಗೆ ಗುರುವಾದ ತಳುಕಿನ ವೆಂಕಣ್ಣಯ್ಯನವರಿಂದ ಆರಂಭವಾಗುತ್ತದೆ. ಆ ನಂತರದಲ್ಲಿ ಕನ್ನಡ ಸಾಹಿತ್ಯದ ಚರಿತ್ರೆಕಾರರಲ್ಲಿ ಪ್ರಮುಖರಾದ ತ. ಸು. ಶಾಮರಾಯರು ಹಾಗೂ ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಶ್ರೇಷ್ಟ ಕಾದಂಬರಿಕಾರರಲ್ಲಿ ಒಬ್ಬರಾಗಿರುವ ತ.ರಾ.ಸುಬ್ಬರಾಯರನ್ನುಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದಕೀರ್ತಿ ತಳುಕಿಗೆ ಸಲ್ಲುತ್ತದೆ. ಈ ಮನೆತನ ಕನ್ನಡ ನಾಡು–ನುಡಿ, ಸಂಸ್ಕೃತಿ, ಪರಂಪರೆಗೆ ಅಪರಿಮಿತವಾದ ಸೇವೆಯನ್ನು ಸಲ್ಲಿಸಿದೆ.

ಬೆಳಗೆರೆ ಪರಿಸರದ ಸಾಹಿತಿಗಳ ಬಗ್ಗೆ ಅವಲೋಕನ ನಡೆಸುವುದಾದರೆ ಜೀವನ ಪರ್ಯಂತ ಸಂತ ಶ್ರೇಷ್ಟನಂತೆ, ತಪಸ್ವಿಯಂತೆ ಜೀವಿಸಿದ ಹಾಗೂ ಸಮಾಜ ಮುಖಿ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಮತ್ತು ಸಾಹಿತ್ಯದ ಸೇವೆಯಲ್ಲಿ ನಿರತರಾಗಿದ್ದ ಬೆಳಗೆರೆ ಕೃಷ್ಣಶಾಸ್ತ್ರಿ , ಕನ್ನಡ ಸಾಹಿತ್ಯದಲ್ಲಿ ಆರಂಭಕಾಲದ ಬರಹಗಾರ್ತಿಯರಲ್ಲಿ ಪ್ರಮುಖರಾದ ಬೆಳಗೆರೆ ಜಾನಕಮ್ಮ ಹಾಗೂ ಆಧುನಿಕ ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ಸಂಚಲನವನ್ನು ಮೂಡಿಸಿದ ಬರಹಗಾರ, ಶ್ರೇಷ್ಟ ವಾಗ್ಮಿ, ಪತ್ರಕರ್ತರಾದ ರವಿ ಬೆಳಗೆರೆಯವರು ಕನ್ನಡ ಸಾಹಿತ್ಯ ಪರಂಪರೆಗೆ ಗಮನಾರ್ಹವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಕನ್ನಡ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪರಂಪರೆಗೆ ಚಳ್ಳಕೆರೆ ತಾಲ್ಲೂಕಿನ ಕೊಡುಗೆ ಅಪಾರವಾದುದು. ಇದರಲ್ಲಿ ಕೆಲವು ಕವಿಗಳ ಹೆಸರು ಮಾತ್ರ ಜನಮಾನಸದಲ್ಲಿ ಕೇಳಿ ಬರುತ್ತದೆ. ಇದರ ಹೊರತಾಗಿ ಎಲೆ ಮರೆಯಾಗಿ ಉಳಿದಿರುವ ಕಾಯಿಯಂತಿರುವ ಬೆಳಗೆರೆ ಪರಿಸರದ ಸಾಹಿತಿಗಳ ಬದುಕು ಬರಹವನ್ನು ಅಧ್ಯಯನಕ್ಕೆ ಬಳಪಡಿಸುವುದೇ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಈ ಅಧ್ಯಯನವು ಬೆಳಗೆರೆ ಗ್ರಾಮದ ಸಾಹಿತಿಗಳಾದ ಬೆಳಗೆರೆ ಕೃಷ್ಣಶಾಸ್ತ್ರೀ, ಬೆಳಗೆರೆ ಜಾನಕಮ್ಮ ಹಾಗೂ ರವಿ ಬೆಳಗೆರೆ ಇವರನ್ನು ಅನುಲಕ್ಷಿಸಿ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಗುರುತಿಸುವ ಉದ್ದೇಶವನ್ನು ಒಳಗೊಂಡಿದೆ.

ಬೆಳಗೆರೆ ಪರಿಸರದಲ್ಲಿ ಸಾಹಿತಿಗಳಾಗಿ ರೂಪುಗೊಳ್ಳಲು ಕಾರಣವಾದ ಸಾಹಿತ್ಯ ಪರಿಸರ ಮತ್ತು ಕೌಟುಂಬಿಕ ಪ್ರೇರಣಾಂಶಗಳ ಮೇಲೆ ಬೆಳಕು ಚೆಲ್ಲುವುದು. ಮುಖ್ಯವಾಗಿ ಬೆಳಗೆರೆ ಮನೆತನದಲ್ಲಿ ಬೆಳೆದು ಬಂದಿದ್ದ ಸಾಹಿತ್ಯಿಕ ವಾತಾವರಣದ ಮೇಲೆ ಗಮನಹರಿಸುವುದು. ಈ ನಿಟ್ಟಿನಲ್ಲಿ ಬೆಳಗೆರೆ ಮನೆತನದಲ್ಲಿ ನರಸಿಂಹಶಾಸ್ತ್ರಿಗಳು ಬೆಳಗೆರೆ ಗ್ರಾಮೀಣ ಬದುಕಿನ ಸಾಂಸ್ಕೃತಿಕ ರಾಯಭಾರಿ ಆಗಿದ್ದವರು. ಜೀವನ ನಿರ್ವಹಣೆಗೆ ಪೌರೋಹಿತ್ಯದ ಜೊತೆ ಹಳ್ಳಿ ಜನರ ಮನರಂಜನೆಗೆ ನಾಟಕಗಳನ್ನು ಬರೆದು ಆಡಿಸುತ್ತಿದ್ದರು. ಎರಿ ಭೂದೇವಮ್ಮ ಬೆಳಗೆರೆ ಕೃಷ್ಣಶಾಸ್ತ್ರೀಗಳ ಸೋದರತ್ತೆ ಕನ್ನಡ ಪದ ಮತ್ತು ಸಂಸ್ಕೃತ ಶ್ಲೋಕಗಳನ್ನು ಹಾಡುತ್ತಿದ್ದರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶಶಿರೇಖಾ ಪರಿಣಯವನ್ನು ಅಲ್ಲಿನ ಹಳ್ಳಿಗಾಡಿನ ಹೆಣ್ಣು ಮಕ್ಕಳಿಗೆ ಬಾಯಿಪಾಠ ಮಾಡಿಸುತ್ತಿದ್ದರು. ಬೆಳಗೆರೆ ಚಂದ್ರಶೇಖರ ಶಾಸ್ತ್ರೀಯವರು ಆಶುಕವಿ, ನಾಟಕಕಾರ, ಲಾವಣಿಕಾರ ಹೆಸರಾಂತ ಕವಿಗಳೊಂದಿಗೆ ಒಡನಾಟವನ್ನು ಹೊಂದಿದ್ದರು. ಸೀತಾರಾಮ ಶಾಸ್ತ್ರೀಯವರು ಕ್ಯಾಲಿಕುಲಸ್ ಶಾಸ್ತ್ರೀಗಳೆಂದು ಹೆಸರಾಗಿದ್ದವರು. ಈ ರೀತಿಯಾಗಿ ಬೆಳಗೆರೆ ಕೌಟುಂಬಿಕ ವಾತಾವರಣದಲ್ಲಿನ ಮೊದಲ ತಲೆಮಾರು ಶಿಕ್ಷಣ ಪಡೆದು ತಮ್ಮ ಸುತ್ತಮುತ್ತಲಿನ ಜನರ ನಡುವೆ ತಮಲ್ಲಿರುವ ಜ್ಞಾನವನ್ನು ಹಂಚುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಪರಿಸರವನ್ನು ನಿರ್ಮಾಣ ಮಾಡುವ ಕಾರ್ಯವನ್ನು ಕೈಗೊಂಡಿತ್ತು. ಇಂತಹ ಸುಶಿಕ್ಷಿತ ಮನೆತನದಲ್ಲಿ ಬೆಳೆದು ಬಂದ ಬೆಳಗೆರೆ ಕೃಷ್ಣಶಾಸ್ತ್ರೀ, ಬೆಳಗೆರೆ ಜಾನಕಮ್ಮ ಹಾಗೂ ರವಿ ಬೆಳಗೆರೆಯವರ ಸಾಹಿತ್ಯಿಕ ಸಾಧನೆಯಲ್ಲಿ ಕೌಟುಂಬಿಕ ಪರಿಸರ ಬೀರಿದ ಪ್ರಭಾವವನ್ನು ಕಂಡುಕೊಳ್ಳುವುದು.

ಬೆಳಗೆರೆ ಕೃಷ್ಣಶಾಸ್ತ್ರಿ ಒಬ್ಬ ಪ್ರಸಿದ್ಧ ಕನ್ನಡ ಲೇಖಕ, ಶಿಕ್ಷಕ, ಗಾಂಧಿವಾದಿ ಮತ್ತು ಸಮಾಜ ಸೇವಕರಾಗಿದ್ದರು, ಇವರು ತಮ್ಮ ಸರಳತೆ, ಆಧ್ಯಾತ್ಮಿಕ ಚಿಂತನೆ ಮತ್ತು ಗ್ರಾಮೀಣ ಶಿಕ್ಷಣಕ್ಕೆ ನೀಡಿದ ಕೊಡುಗೆಗಳಿಂದ ಹೆಸರುವಾಸಿಯಾಗಿದ್ದಾರೆ. **"ಯೇಗ್ದಾಗೆಲ್ಲಾಐತೆ", "ಹಳ್ಳಿಚಿತ್ರ", "ಹಳ್ಳಿ ಮೇಷ್ಟ್ರು", "ಮರೆಯಲಾದೀತೆ", "ಸಾಹಿತಿಗಳ ಸ್ಮೃತಿ", "ಎಲೆಮರೆಯ ಆಲರು"** ಅವರ ಪ್ರಮುಖ ಕೃತಿಗಳಾಗಿದ್ದು, ಇವುಗಳಿಗೆ ಹಲವು ಪ್ರಶಸ್ತಿಗಳು ಸಂದಿವೆ. ಅವರು ಬಯಲುಸೀಮೆ ಗಾಂಧಿ ಎಂದೇ ಕರೆಯಲ್ಪಡುತ್ತಿದ್ದರು. ಬೆಳಗೆರೆ ಕೃಷ್ಣಶಾಸ್ತ್ರೀಯವರ ವ್ಯಕ್ತಿತ್ವ ರೂಪುಗೊಳ್ಳಲು ಪ್ರಮುಖ ಪಾತ್ರ ವಹಿಸಿದ ಗಾಂಧೀಜಿ, ವಿನೋಬಾ ಭಾವೆ, ರಮಣ ಮಹರ್ಷಿಮತ್ತು ಮುಕುಂದೂರು ಸ್ವಾಮಿಗಳು ಪ್ರಭಾವ ಬೀರಿದವರು. ಸಾಹಿತ್ಯಿಕ ಅಧ್ಯಯನದ ಜೊತೆ ಜೊತೆಗೆ ಸಂತನಂತೆ, ಒಬ್ಬ ತಪಸ್ವಿಯಂತೆ ಜೀವನ ನಡೆಸಿದ ಬೆಳಗೆರೆ ಕೃಷ್ಣಶಾಸ್ತ್ರೀಯವರು ಬದುಕಿನ ಚಿತ್ರಣ. ಸಾಮಾನ್ಯರಲ್ಲಿ ಸಾಮಾನ್ಯ ವ್ಯಕ್ತಿಯಂತೆ ಸರಳತೆಗೆ ಸಾಕಾರ ಮೂರ್ತಿಯಾಗಿ ಗ್ರಾಮೀಣ ಪ್ರದೇಶದ ಶೈಕ್ಷಣಿಕ ಪರಿಸರವನ್ನು ಸದೃಢಗೊಳಿಸಿದ ಚಿಂತನೆಯನ್ನು ಈ ಅಧ್ಯಯನ ಒಳಗೊಂಡಿದೆ. 'ಕೊಟ್ಟು–ಕಟ್ಟುವ ಕಾರ್ಯ'ದ ಪರಿಕಲ್ಪನೆ, ಕಾಯಕ ಜೀವಿಯಾಗಿ 'ಶ್ರಮದಾನ'ಕ್ಕೆ ಶಾಸ್ತ್ರೀಯವರು ನೀಡಿದ ಆದ್ಯತೆಯನ್ನು ಗಮನಿಸಲಾಗುತ್ತದೆ. ಬೆಳಗೆರೆ ಕೃಷ್ಣಶಾಸ್ತ್ರಿಯವರ ಕೃತಿಗಳಲ್ಲಿ ಶಾಸ್ತ್ರೀಯವರು ಮತ್ತು ಆಧ್ಯಾತ್ಮಿಕ ಚಿಂತಕರ ನಡುವಿನ ಒಡನಾಟಗಳ ವಿಶ್ಲೇಷಣೆ, ಸಮಾಜದಲ್ಲಿನ ಮೌಢ್ಯತೆಗಳನ್ನು ತಿದ್ದುವಲ್ಲಿ ಸಮಾಜ ಸುಧಾರಕರಾಗಿ ಕಂಡು ಬರುವ ಅವರ ವ್ಯಕ್ತಿತ್ವದ ವಿವಿಧ ಮಜಲುಗಳನ್ನು ಕಾಣಬಹುದು. ಕೃಷ್ಣಶಾಸ್ತ್ರಿಗಳು ನಾಟಕ, ಪ್ರವಚನ, ಕನ್ನಡದ ಪ್ರಾಚೀನ ಕವಿಗಳ ಕುರಿತಾದ ಸಾಹಿತ್ಯೋತ್ಸವ, ಜಾನಪದ ಉತ್ಸವಗಳು, ವಿವಿಧ ಸಾಹಿತಿಗಳ ಉಪನ್ಯಾಸ, ಗ್ರಾಮೀಣ ಸಾಂಸ್ಕೃತಿಕ ಉತ್ಸವಗಳನ್ನು ಏರ್ಪಡಿಸಿ ಹಳ್ಳಿಗಳಲ್ಲಿ ಸಾಮರಸ್ಯ ಉಂಟು ಮಾಡುವಲ್ಲಿ ಮಹತ್ವದ ಪಾತ್ರವಹಿಸಿದರು.

ಬೆಳಗೆರೆ ಕೃಷ್ಣಶಾಸ್ತ್ರಿಗಳ ಕೃತಿಗಳು : ತುಂಬಿ (ಕವನ ಸಂಕಲನ), ಯೇಗ್ದಾಗೆಲ್ಲಾಐತೆ (ಶ್ರೀ ಮುಕುಂದೂರು ಸ್ವಾಮಿಗಳನ್ನು ಕುರಿತ ನೆನಪು), ಹಳ್ಳಿಚಿತ್ರ, ಹಳ್ಳಿಮೇಷ್ಟ್ರು, ಪದ್ಮಿನಿ, ಪಾಶುಪತಾಸ್ತ್ರ, ಏಕಲವ್ಯ, ಸೋಹ್ರಾಬ್ ರುಸ್ತುಂ (ನಾಟಕಗಳು), ಸಾಹಿತಿಗಳ ಸ್ಮೃತಿ, ಮರೆಯಲಾದೀತೆ, ಎಲೆಯ ಮರೆಯ ಆಲರು (ನೆನಪುಗಳು) ಚಿನ್ಮಯ ಎ. ಸಂಭಾವನಾ ಗ್ರಂಥ ಅವರಿಗೆ ಅರ್ಪಿತವಾಗಿದೆ.

ಸ್ವಾತಂತ್ರ್ಯ ಪೂರ್ವದ 1942 ರಲ್ಲಿ ಪ್ರಕಟಗೊಂಡ ಬೆಳಗೆರೆ ಜಾನಕಮ್ಮನವರ 'ಕಲ್ಯಾಣಿ' ಕವನ ಸಂಕಲನದ ಮೂಲಕ ಆಧುನಿಕ ಕನ್ನಡ ಸಾಹಿತ್ಯದ ಆರಂಭಿಕ ಬರಹಗಾರ್ತಿಯಾಗಿ ಜಾನಕಮ್ಮನವರು ಸ್ತ್ರೀ ಸಂವೇದನೆಯನ್ನು ಪ್ರಾಮಾಣಿಕವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿರುವುದನ್ನು ಅಧ್ಯಯನಕ್ಕೊಳಪಡಿಸುವುದು.

ಆಧುನಿಕ ಕನ್ನಡ ಪತ್ರಿಕೋದ್ಯಮದಲ್ಲಿಒಂದು ಹೊಸ ಸಂಚಲನವನ್ನು ಉಂಟು ಮಾಡಿದ ಪತ್ರಕರ್ತ, ಬರಹಗಾರ, ಉತ್ತಮ ವಾಗ್ಮಿ, ಟಿವಿ ಮಾಧ್ಯಮಗಳ ನಿರೂಪಕ, ಚಲನ ಚಿತ್ರ ನಟ, ರವಿ ಬೆಳಗೆರೆಯವರ ಸಾಹಿತ್ಯಿಕ ಬರಹಗಳ ಅಧ್ಯಯಳ. ಇವರು ಬೆಳಗೆರೆಯವರಲ್ಲದಿದ್ದರೂ ತಾಯಿ ಪಾರ್ವತಮ್ಮ ಮತ್ತು ಮಾವ ಬೆಳಗೆರೆ ಕೃಷ್ಣಶಾಸ್ತ್ರೀಗಳ ಬಾಂಧವ್ಯದಿಂದ ಬೆಳಗೆರೆ ಕುಟುಂಬದೊಳಗೆ ಹಾಸು ಹೊಕ್ಕಾಗಿ ಸೇರಿರುವರು.

ರವಿ ಬೆಳಗೆರೆ ಅವರುಕಾದಂಬರಿ, ಸಣ್ಣಕತೆ, ಪ್ರವಾಸಕಥನ, ಅಂಕಣ ಬರಹಗಳಂತಹ ಹಲವು ಪ್ರಕಾರಗಳಲ್ಲಿ ಬರೆದಿದ್ದಾರೆ. ಕಾದಂಬರಿಗಳು: ಗೋಲಿಬಾರ್, ಅರ್ತಿ, ಮಾಂಡೋವಿ, ಮಾಟಗಾತಿ, ಒಮರ್ಟಾ, ಸರ್ಪ ಸಂಬಂಧ, ಹೇಳಿ ಹೋಗು ಕಾರಣ, ನೀ ಹಿಂಗ ನೋಡಬ್ಯಾಡ ನನ್ನ, ಗಾಡ್‌ಫಾದರ್, ಕಾಮರಾಜ ಮಾರ್ಗ, ಹಿಮಾಗ್ನಿ.ಕಥಾ ಸಂಕಲನಗಳು: ದಾರಿ, ಪಾಪಿಗಳ ಲೋಕದಲ್ಲಿ, ಖಾಸಬಾತ್.ಪತ್ರಿಕೆಗಳು: 'ಹಾಯ್ ಬೆಂಗಳೂರು', 'ಓ ಮನಸೇ' ಪತ್ರಿಕೆಗಳ ಮೂಲಕ ಪ್ರಸಿದ್ಧರಾದರು.

ಈ ಲೇಖನದ ಮೂಲಕ ಬೆಳಗೆರೆ ಕುಟುಂಬದ ಸಾಹಿತಿಗಳ ಒಂದು ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ.

■■

– 14ನೇ ಪುಟದಿಂದ ಮುಂದುವರೆದುದು

ಅಡಿ ಟಿಪ್ಪಣಿಗಳು

1. ಸಮಗ್ರ ವಿಮರ್ಶೆ, ಗಿರಡ್ಡಿ ಗೋವಿಂದರಾಜ, ಪು.ಸಂ. 251
2. ಕುವೆಂಪು ಕವನಗಳು, ಬದುಕಿನ ಸಾಂಸ್ಕೃತಿಕ ಚರ್ಚೆ, ಎನ್.ಎಸ್. ರಘುನಾಥ್, ಪು.ಸಂ. 73, 74
3. ಕುವೆಂಪು ಕೃತಿವಿಮರ್ಶೆ, (ಸಂ.) ಅರವಿಂದ ಮಾಲಗತ್ತಿ, ಪು.ಸಂ. 315, 316
4. ಕುವೆಂಪು ಸಮಗ್ರ ಕಾವ್ಯ – ಸಂ. 2, ಪು.ಸಂ. 609
5. ಕುವೆಂಪು ಸಮಗ್ರ ಕಾವ್ಯ – ಸಂ. 2, ಪು.ಸಂ. 598

ಪರಾಮರ್ಶನ ಗ್ರಂಥಗಳು

- **ಎನ್.ಎಸ್. ರಘುನಾಥ್ (2015) :** ಕುವೆಂಪು ಕವನಗಳು – ಬದುಕಿನ ಸಾಂಸ್ಕೃತಿಕ ಚರ್ಚೆ ಮೈಸೂರು ಪ್ರಕಾಶನ, ಸಂಸ್ಕೃತಿ ಬುಕ್ ಪ್ಯಾರಡೈಸ್ ಕುವೆಂಪುನಗರ.
- **ಅರವಿಂದ ಮಾಲಗತ್ತಿ (ಸಂ.) (2006) :** ಕುವೆಂಪು ಕೃತಿ ವಿಮರ್ಶೆ, ಮೈಸೂರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿ.
- **ಗಿರಡ್ಡಿ ಗೋವಿಂದರಾಜ (2013) :** ಸಮಗ್ರ ವಿಮರ್ಶೆ, ಸಂ. 1, ಬೆಂಗಳೂರು ಸಪ್ನ ಬುಕ್‌ಹೌಸ್.
- **ಕುವೆಂಪು ಸಮಗ್ರ ಕಾವ್ಯ – ಸಂ. 2 (2017) :** ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಕುಪ್ಪಳ್ಳಿ, ಮೈಸೂರು ಉದಯರವಿ ಪ್ರಕಾಶನ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕರ್ನಾಟಕದ ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಎದುರಿಸುತ್ತಿರುವ ಸವಾಲುಗಳು ಮತ್ತು ಪರಿಹಾರಗಳು

✍ **ರಾಜೇಶ ಎ. ಎಸ್.,** ಸಹಾಯಕ ಪ್ರಾಧ್ಯಾಪಕರು ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಾಲಿಗ್ರಾಮ.

ಪ್ರತಿಯೊಂದು ಗ್ರಾಮವು ಚಿಕ್ಕದಾದ ಸ್ವಾವಲಂಬನೆ ಪಡೆದ ಗಣ ರಾಜ್ಯವಾಗಿರಬೇಕು. ಇವು ಸ್ಥಳೀಯ ವ್ಯವಹಾರಗಳನ್ನು ನಿರ್ವಹಿಸಲು ಗರಿಷ್ಠ ಸ್ವಾತಂತ್ರ್ಯವನ್ನು ಹೊಂದಿರಬೇಕು ಎಂಬುದು ಗಾಂಧೀಜಿಯವರ ನಿಲುವಾಗಿದೆ. ಅಧಿಕಾರದ ವಿಕೇಂದ್ರೀಕರಣವೇ ನಿಜವಾದ ಪ್ರಜಾ ಪ್ರಭುತ್ವವೆಂದು ತಿಳಿಸಿ ಈ ಮೂಲಕ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸಬೇಕೆಂಬುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಪರಿಕಲ್ಪನೆಯು ನಿರ್ಧಾರ ತೆಗೆದುಕೊಳ್ಳುವ ಮತ್ತು ನೀತಿರೂಪಿಸುವ ಪ್ರಕ್ರಿಯೆಯಲ್ಲಿ ಎಲ್ಲಾ ಪಾಲುದಾರರನ್ನು ಒಳಗೊಳ್ಳುವ ಮೂಲಕ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗೆ ಸಹಕಾರಿಯಾದ ಪ್ರಮುಖ ಸಾಧನವಾಗಿದೆ. ಭಾರತದ ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು (PRIs) ಪ್ರಮುಖ ಪಾತ್ರ ವಹಿಸುತ್ತಿವೆ. 73ನೇ ಸಂವಿಧಾನ ತಿದ್ದುಪಡಿಯ ಮೂಲಕ ಗ್ರಾಮೀಣ ಸ್ವರಾಜ್ಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಈ ಸಂಸ್ಥೆಗಳಿಗೆ ಶಾಸನಬದ್ಧ ಸ್ಥಾನಮಾನ ದೊರೆತಿದೆ. ಕರ್ನಾಟಕದಲ್ಲಿ 1993ರ ಕರ್ನಾಟಕ ಪಂಚಾಯತ್ ರಾಜ್‌ಕಾಯ್ದೆಯ ಮೂಲಕ ಗ್ರಾಮ ಮಟ್ಟದಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಲಾಗಿದೆ. ಪಂಚಾಯತ್‌ರಾಜ್ ಸಂಸ್ಥೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಂತರ ಸರ್ಕಾರದ ವಿಕೇಂದ್ರೀಕೃತ ವ್ಯವಸ್ಥೆಯ ಮೂರನೇ ಹಂತವಾಗಿದೆ. ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಪಂಚಾಯತ್‌ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜನರ ಜೀವನದಲ್ಲಿ ಗಮನಾರ್ಹ ಬದಲಾವಣೆ ತರಲು ಕೆಲಸ ಮಾಡುತ್ತಿದ್ದಾರೆ. ಅವರು ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಅಭಿವೃದ್ಧಿಯನ್ನು ಸಾಧಿಸಲು ಗ್ರಾಮ ಪಂಚಾಯಿತಿ ಸದಸ್ಯರೊಂದಿಗೆಕಾರ್ಯ ನಿರ್ವಹಿಸುತ್ತಿದ್ದಾರೆ. ಇವರು ತಮ್ಮ ದೈನಂದಿನ ಕಾರ್ಯಗಳನ್ನು ನಿರ್ವಹಿಸುವಾಗ ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಾರೆ. ಕಾರ್ಯದ ಒತ್ತಡ, ಸದಸ್ಯರ ರಾಜಕೀಯ ಹಸ್ತಕ್ಷೇಪ, ಮೇಲಧಿಕಾರಿಗಳ ಒತ್ತಡ ಮುಂತಾದ ಕಾರಣಗಳಿಂದ ಮಾನಸಿಕವಾಗಿ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಆದರೂ ಸಹ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸುತ್ತಾರೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು

2008 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಅನುಷ್ಠಾನವನ್ನು ವೇಗಗೊಳಿಸಲು ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯದರ್ಶಿಯ ಜೊತೆಗೆ ಪಿಡಿಒ ಹುದ್ದೆಯನ್ನು ಸೃಷ್ಟಿಸಿತು. ಇವರು ಗ್ರಾಮ ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಾಗಿರುವ ಕಾರಣ, ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ಇವರ ಕೊಡುಗೆ ಅನಿವಾರ್ಯವಾಗಿದೆ. ಇವರು ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಲು, ಜನರಿಂದ ಆಯ್ಕೆಗೊಂಡ ಜನ ಪ್ರತಿನಿಧಿಗಳ ಸಹಾಯದಿಂದ ಗ್ರಾಮ ಪಂಚಾಯತ್‌ನ ಚಟುವಟಿಕೆಗಳನ್ನು ಕೈಗೊಳ್ಳಲು ಸರ್ಕಾರ ನೇಮಿಸಿದ ಅಧಿಕಾರಿಗಳಾಗಿದ್ದಾರೆ. ಇವರು ಜನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವಲ್ಲಿ ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯ ನಿರ್ವಹಿಸುತ್ತಾರೆ. ಸರ್ಕಾರವು 31–3–2008 ರಆದೇಶದ ಮೂಲಕ ಪ್ರತಿಗ್ರಾಮ ಪಂಚಾಯತ್‌ನ ನಿರ್ವಹಣೆ ಮಾಡಲು ಸೂಪರಿಂಟೆಂಡೆಂಟ್‌ಗಳ ಶ್ರೇಣಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ 5627 ಹುದ್ದೆಗಳನ್ನು ಸೃಜಿಸಿದೆ. ಪಿಡಿಒ ಗಳು ಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಗೊಂಡ ಸದಸ್ಯರಿಗೆ ಆಡಳಿತಾತ್ಮಕ ವಿಷಯಗಳಲ್ಲಿ ಮಾರ್ಗದರ್ಶನ ನೀಡುವುದು ಮತ್ತು ಅವರೊಂದಿಗೆ ಸಮನ್ವಯದಲ್ಲಿ ಅಗತ್ಯವಿರುವವರಿಗೆ ಯೋಜನೆಗಳನ್ನು ಜಾರಿಗೊಳಿಸುವುದು. ಪ್ರತಿಗ್ರಾಮ ಪಂಚಾಯತ್‌ನಲ್ಲಿ ಆಯ್ಕೆಗೊಂಡ ಪ್ರತಿನಿಧಿಗಳ ಸಹಾಯದಿಂದ ಗ್ರಾಮ ಪಂಚಾಯತ್‌ನ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು ಒಬ್ಬ ಪಿಡಿಒಇರುತ್ತಾರೆ.

ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿಗಳ ಕಾರ್ಯ ನಿರ್ವಾಹಕ ಅಧಿಕಾರಿಗಳಾಗಿರುತ್ತಾರೆ. ಇವರು ಗ್ರಾಮ ಪಂಚಾಯತಿ ಸದಸ್ಯರ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುವಂತೆ ಸಹಾಯ ಮಾಡುತ್ತಾರೆ. ಕೇಂದ್ರ ಮತ್ತುರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ಜಾರಿಗೊಳಿಸುತ್ತಾರೆ. ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮಾಹಿತಿ ನೀಡಿ, ಅವರ ಅಭಿಪ್ರಾಯಗಳನ್ನು ಸರ್ಕಾರಕ್ಕೆ ಮುಟ್ಟಿಸುತ್ತಾರೆ. ಗ್ರಾಮ ಪಂಚಾಯತ್‌ಗಳ ಕಾರ್ಯನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡುವುದು ಹಾಗೂ ಗ್ರಾಮ ಪಂಚಾಯತ್ ಸಭೆಗಳಲ್ಲಿ ಮತ್ತು ಅದರ ಸ್ಥಾಯಿ ಸಮಿತಿ ಸಭೆಗಳಲ್ಲಿ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಮಾರ್ಗದರ್ಶನ ನೀಡುವುದು ಮತ್ತು ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಗಳೊಂದಿಗೆ ಸಮನ್ವಯ ಸಾಧಿಸುವಲ್ಲಿಇವರ ಪಾತ್ರವಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ, ಸರ್ಕಾರದ ಸುತ್ತೋಲೆಗಳು, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮತ್ತು ತಾಲೂಕು ಕಾರ್ಯ ನಿರ್ವಹಣಾಧಿಕಾರಿಗಳ ನಿರ್ದೇಶನ ಮತ್ತು ಮಾರ್ಗದರ್ಶನದಂತೆ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಇವರು ಕಾರ್ಯ ನಿರ್ವಹಿಸುತ್ತಾರೆ. ಗ್ರಾಮೀಣ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಬರುವ ಸಮಸ್ಯೆಗಳನ್ನು ನಿವಾರಿಸುವ ಮೂಲಕ ಗ್ರಾಮ ಪಂಚಾಯತಿಯ ಜನರ ಜೀವನ ಮಟ್ಟವನ್ನು ಸುಧಾರಿಸುತ್ತಾರೆ.

ಗ್ರಾಮ ಪಂಚಾಯತಿಗಳಲ್ಲಿ ಪಿಡಿಒಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು

ರಾಜಕೀಯ ಹಸ್ತಕ್ಷೇಪ : ಗ್ರಾಮ ಪಂಚಾಯತಿಗಳಲ್ಲಿ ರಾಜಕೀಯ ಹಸ್ತಕ್ಷೇಪ ಹೆಚ್ಚಾಗಿರುತ್ತದೆ. ಇದರಿಂದಾಗಿ ಪಿಡಿಒಗಳು ತಮ್ಮ ಕೆಲಸವನ್ನು ನಿಷ್ಪಕ್ಷಪಾತವಾಗಿ ಮಾಡಲು ಸಾಧ್ಯವಾಗುವುದಿಲ್ಲ.

ಜನರ ನಿರೀಕ್ಷೆಗಳು : ಗ್ರಾಮಸ್ಥರ ನಿರೀಕ್ಷೆಗಳು ಹೆಚ್ಚಾಗಿರುತ್ತವೆ. ಆದರೆ, ಸೀಮಿತ ಸಂಪನ್ಮೂಲಗಳಿಂದಾಗಿ ಎಲ್ಲಾ ನಿರೀಕ್ಷೆಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಪಿಡಿಒಗಳು ಒತ್ತಡಕ್ಕೆ ಒಳಗಾಗುತ್ತಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಾಂತ್ರಿಕ ಜ್ಞಾನದ ಕೊರತೆ : ಹೊಸ ತಂತ್ರಜ್ಞಾನಗಳ ಬಗ್ಗೆ ಸಾಕಷ್ಟು ಜ್ಞಾನವಿಲ್ಲದ ಕಾರಣ, ಕೆಲವು ಪಿಡಿಒಗಳು ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಕೆಲಸ ಮಾಡಲುಕಷ್ಟಪಡುತ್ತಾರೆ.

ಕಾನೂನು ಜಟಿಲತೆಗಳು : ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಕಾನೂನುಗಳು ಸಂಕೀರ್ಣವಾಗಿರುತ್ತವೆ. ಇದರಿಂದಾಗಿ ಪಿಡಿಒಗಳು ಕಾನೂನು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಜನಸಂಪರ್ಕದ ಕೊರತೆ : ಕೆಲವು ಪಿಡಿಒಗಳು ಗ್ರಾಮಸ್ಥರೊಂದಿಗೆ ಸಮರ್ಥವಾಗಿ ಸಂವಹನ ನಡೆಸಲು ವಿಫಲರಾಗುತ್ತಾರೆ. ಇದರಿಂದಾಗಿ ಗ್ರಾಮಸ್ಥರಲ್ಲಿ ಅಸಮಾಧಾನ ಉಂಟಾಗುತ್ತದೆ.

ಸಂಪನ್ಮೂಲಗಳ ಕೊರತೆ : ಸಾಕಷ್ಟು ಹಣ, ಸಿಬ್ಬಂದಿ ಮತ್ತು ಸಲಕರಣೆಗಳ ಕೊರತೆಯಿಂದಾಗಿ ಯೋಜನೆಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಲು ಕಷ್ಟವಾಗುತ್ತದೆ.

ಭ್ರಷ್ಟಾಚಾರ: ಕೆಲವು ಪಿಡಿಒಗಳು ಭ್ರಷ್ಟಾಚಾರದಲ್ಲಿ ಭಾಗಿಯಾಗುತ್ತಾರೆ. ಇದರಿಂದಾಗಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಕಾರ್ಯಕ್ರಮಗಳು ಪ್ರಭಾವಿತವಾಗುತ್ತವೆ.

ಈ ಸಮಸ್ಯೆಗಳನ್ನು ನಿವಾರಿಸಲು ಸರ್ಕಾರ ಮತ್ತು ಇತರ ಸಂಸ್ಥೆಗಳು ಹಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಉದಾಹರಣೆಗೆ, ಪಿಡಿಒಗಳಿಗೆ ಸಾಕಷ್ಟುತರಬೇತಿ ನೀಡುವುದು, ಸಂಪನ್ಮೂಲಗಳನ್ನು ಹೆಚ್ಚಿಸುವುದು, ರಾಜಕೀಯ ಹಸ್ತಕ್ಷೇಪವನ್ನು ತಡೆಯುವುದು ಇತ್ಯಾದಿ.

ಶಿಫಾರಸ್ಸುಗಳು

ಗ್ರಾಮೀಣ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿಯ ನಿಟ್ಟಿನಲ್ಲಿ, ಪಂಚಾಯತಿಅಭಿವೃದ್ಧಿ ಅಧಿಕಾರಿಗಳಿಗೆ ಕೆಲವು ಶಿಫಾರಸುಗಳನ್ನು ನೀಡಬಹುದು.

ಗ್ರಾಮ ಸಭೆಗಳನ್ನು ಸಕ್ರಿಯಗೊಳಿಸುವುದು : ಗ್ರಾಮ ಸಭೆಗಳನ್ನು ನಿಯಮಿತವಾಗಿ ನಡೆಸುವುದು ಮತ್ತು ಎಲ್ಲಾ ಗ್ರಾಮಸ್ಥರನ್ನು ಭಾಗವಹಿಸುವಂತೆ ಪ್ರೋತ್ಸಾಹಿಸುವುದು. ಗ್ರಾಮ ಸಭೆಗಳಲ್ಲಿ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸುವುದು ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವುದು. ಗ್ರಾಮಸ್ಥರ ಅಭಿಪ್ರಾಯಗಳನ್ನು ಸಂಗ್ರಹಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡುವುದು. ಗ್ರಾಮ ಸಭೆಯಲ್ಲಿ ಗ್ರಾಮದ ವಿವಿಧ ಸಂಘಟನೆಗಳು ಮತ್ತು ಮಹಿಳೆಯರು ಭಾಗವಹಿಸುವಂತೆ ಕ್ರಮ ಕೈಗೊಳ್ಳುವುದು. ಯೋಜನೆಗಳ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆ ಮಾಡುವುದು.

ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು : ಸ್ವಚ್ಛತೆ, ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ ಇತ್ಯಾದಿ ವಿಷಯಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು. ಸಾಮಾಜಿಕ ಅಸಮಾನತೆಯ ಕೆಟ್ಟ ಪದ್ಧತಿಗಳನ್ನು ನಿರ್ಮೂಲನ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಮತ್ತು ಪ್ರಜೆಗಳಲ್ಲಿ ವೈಜ್ಞಾನಿಕ ಮನೋಭಾವದ ಮೂಲಕ ಜಾಗೃತಿ ಮೂಡಿಸುವುದು. ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಗ್ರಾಮಗಳಲ್ಲಿ ಸಾಂಸ್ಕೃತಿಕ ದಾಖಲೆಗಳನ್ನು ಸಂರಕ್ಷಣೆ ಮಾಡುವುದು.

ಮೂಲ ಸೌಕರ್ಯಗಳ ಅಭಿವೃದ್ಧಿ ಮಾಡುವುದು : ಕುಡಿಯುವ ನೀರು, ವಿದ್ಯುತ್, ರಸ್ತೆಗಳು, ಆರೋಗ್ಯ ಕೇಂದ್ರಗಳು, ಸ್ವಚ್ಛತೆ ಮತ್ತು ನೈರ್ಮಲ್ಯ ಮುಂತಾದ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದು. ತ್ಯಾಜ್ಯ ನಿರ್ವಹಣೆ ವ್ಯವಸ್ಥೆಯನ್ನು ಸುಧಾರಿಸುವುದು. ಸ್ವಚ್ಛ ಗ್ರಾಮ ಅಭಿಯಾನವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

ಮಹಿಳಾ ಸಬಲೀಕರಣಕ್ಕೆ ಆದ್ಯತೆ ನೀಡುವುದು : ಗ್ರಾಮದ ಅಭಿವೃದ್ಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು ಬಳಸಿಕೊಳ್ಳುವುದು. ಮಹಿಳೆಯರ ಸ್ವಸಹಾಯ ಗುಂಪುಗಳನ್ನು ಬೆಳೆಸುವುದು. ಮಹಿಳೆಯರಿಗೆ ಕೌಶಲ್ಯತರಬೇತಿ ನೀಡುವುದು. ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆಕ್ರಮ ಕೈಗೊಳ್ಳುವುದು. ಮಹಿಳಾ ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆತರುವುದು.

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಗಮನ ಹರಿಸುವುದು : ಸುಸಜ್ಜಿತ ಶಾಲೆ ಕಟ್ಟಡಗಳ ನಿರ್ವಹಣೆ ಮತ್ತು ಶಾಲೆಗಳನ್ನು ಸುಧಾರಿಸುವುದು. ಮಕ್ಕಳ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವುದು. ಆರೋಗ್ಯ ಕೇಂದ್ರಗಳನ್ನು ಸುಧಾರಿಸುವುದು. ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡುವುದು.

ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವುದು : ಆಡಳಿತದಲ್ಲಿ ಪ್ರಜೆಗಳು ಸಕ್ರಿಯವಾಗಿ ಭಾಗವಹಿಸುವಂತೆ ಮಾಡುವುದು. ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಜನರಿಗೆ ಮಾಹಿತಿ ನೀಡುವುದು. ಯೋಜನೆಗಳ ಲಾಭವನ್ನು ಎಲ್ಲಾ ವರ್ಗದ ಜನರಿಗೆ ಸಮಾನವಾಗಿ ತಲುಪಿಸುವಂತೆ ನೋಡಿಕೊಳ್ಳುವುದು. ಸರ್ಕಾರದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆತರುವುದು.

ಭ್ರಷ್ಟಾಚಾರ ನಿವಾರಣೆ ಮಾಡುವುದು : ಭ್ರಷ್ಟಾಚಾರ ವಿರೋಧಿ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವುದು. ಭ್ರಷ್ಟಾಚಾರವನ್ನು ತಡೆಯಲು ಕಠಿಣ ಕ್ರಮಗಳನ್ನು ಕೈಗೊಳ್ಳುವುದು. ಪಾರದರ್ಶಕ ಆಡಳಿತವನ್ನು ಸ್ಥಾಪಿಸುವುದು. ಆಡಳಿತದಲ್ಲಿ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ಮೈಗೂಡಿಸಿಕೊಳ್ಳುವುದು.

ಆಡಳಿತದಲ್ಲಿ ತಂತ್ರಜ್ಞಾನ ಬಳಕೆ ಮಾಡಿಕೊಳ್ಳುವುದು : ಗ್ರಾಮೀಣ ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಬಳಕೆಯನ್ನು ಪ್ರೋತ್ಸಾಹಿಸುವುದು. ಜಿಯೋ ಇನ್ಫರ್ಮ್ಯಾಟಿಕ್ಸ್, ರಿಮೋಟ್ ಸೆನ್ಸಿಂಗ್ ಇತ್ಯಾದಿ ತಂತ್ರಜ್ಞಾನಗಳನ್ನು ಬಳಸಿಕೊಂಡು ಯೋಜನೆಗಳನ್ನು ರೂಪಿಸುವುದು. ಸರ್ಕಾರದ ಪಂಚತಂತ್ರ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೆ ತರುವುದು. ಗ್ರಾಮ ಒನ್, ಕರ್ನಾಟಕ ಒನ್ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು.

ಸಹಕಾರ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು : ಗ್ರಾಮದ ಸ್ವ ಸಹಾಯ ಮತ್ತು ಸಹಕಾರಿ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಗ್ರಾಮೀಣ ಅಭಿವೃದ್ಧಿಯಲ್ಲಿ ಅವುಗಳ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸಿಕೊಳ್ಳುವುದು. ಗ್ರಾಮದ ವಿವಿಧ ಸಂಘ ಸಂಸ್ಥೆಗಳೊಂದಿಗೆ ನಿರಂತರವಾಗಿ ಸಂಪರ್ಕವನ್ನಿಟ್ಟುಕೊಂಡು ಗ್ರಾಮದ ಅಭಿವೃದ್ಧಿಯಲ್ಲಿ ಅವರ ಸಹಕಾರವನ್ನು ಪಡೆಯಬೇಕು.

ಗ್ರಾಮೀಣ ಅಭಿವೃದ್ಧಿ ಕ್ರಿಯಾ ಯೋಜನೆಯನ್ನು ಆದ್ಯತೆಯ ಆಧಾರದ ಮೇಲೆ ಮಾಡಬೇಕು : ಸಾರ್ವಜನಿಕರಿಗೆ ಅತ್ಯಂತ ಅಗತ್ಯವಾಗಿ ಅವಶ್ಯಕವಾಗಿರುವ ಮೂಲಭೂತ ಕಾರ್ಯಗಳ ಕ್ರಿಯಾ ಯೋಜನೆಯನ್ನು ಆದ್ಯತೆಯ ಮೇರೆಗೆಅನುಷ್ಠಾನಕ್ಕೆ ತರಬೇಕು.

ನಿಯಮಿತವಾಗಿ ಲೆಕ್ಕ ತಪಾಸಣೆಗೆ ಒಳಪಡಿಸಬೇಕು : ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾಲ ಕಾಲಕ್ಕೆ ಗ್ರಾಮ ಪಂಚಾಯತಿಯ ಲೆಕ್ಕ ಪರಿಶೀಲನೆಯ ಪರಿಶೋಧನೆಯನ್ನು ಮಾಡಿಸಬೇಕು. ಇದರಿಂದ ಆಡಳಿತದಲ್ಲಿ ಪಾರದರ್ಶಕತೆ ಮತ್ತೆ ದಕ್ಷತೆಯನ್ನು ಹೆಚ್ಚಿಸಬಹುದು ಹಾಗೂ ಅಧಿಕಾರ ಮತ್ತು ಹಣದ ದುರುಪಯೋಗವನ್ನು ತಡೆಗಟ್ಟಬಹುದು.

– 46ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಹಿಳಾ ಸಬಲೀಕರಣಕ್ಕಾಗಿ ಕೃತಕ ಬುದ್ಧಿ ಮತ್ತೆ : ತಂತ್ರಜ್ಞಾನದ ಮೂಲಕ ಜೀವನವನ್ನು ಪರಿವರ್ತಿಸುವುದು

✍ ಡಾ. ರಶ್ಮಿ ತುರಮರಿ, ಸಹ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಧಾರವಾಡ.

✍ ಡಾ. ನಮ್ರತ ಎಮ್., ಸಹ ಪ್ರಾದ್ಯಾಪಕರು, ಗೃಹ ವಿಜ್ಞಾನ ವಿಭಾಗ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.

ಸಾರಾಂಶ

ಕೃತಕ ಬುದ್ಧಿಮತ್ತೆಯು ಮಹಿಳಾ ಸಬಲೀಕರಣದ ಪ್ರಸ್ತುತ ಪರಿಸ್ಥಿತಿಯನ್ನು ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿದ್ದು, ಮಹಿಳೆಯರ ಸರ್ವತೋಮುಖ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ ಹಾಗೂ ಲಿಂಗ ಅಸಮಾನತೆಗಳನ್ನು ಪರಿಹರಿಸುತ್ತದೆ. ಈ ಸಂಶೋಧನಾ ಪ್ರಬಂಧವು ಮಹಿಳಾ ಶಿಕ್ಷಣ, ಆರೋಗ್ಯ ರಕ್ಷಣೆ, ಸುರಕ್ಷತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವಲ್ಲಿ ಕೃತಕ ಬುದ್ಧಿಮತ್ತೆಯು ಬಹುಮುಖಿ ಪಾತ್ರಗಳನ್ನು ಪರಿಶೋಧಿಸುತ್ತಿದೆ ಮತ್ತು ಅದರ ಅನುಷ್ಠಾನಕ್ಕೆ ಸಂಬಂಧಿಸಿದ ಸವಾಲುಗಳು ಮತ್ತು ನೈತಿಕ ಜವಾಬ್ದಾರಿಗಳನ್ನು ಸಹ ಗುರುತಿಸುತ್ತದೆ. ನೈಜ ಪ್ರಪಂಚದ ಉದಾಹರಣೆಗಳು ಮತ್ತು ವಿಷಯ ಅಧ್ಯಯನಗಳನ್ನು (case studies) ಪರಿಶೀಲಿಸುವ ಮೂಲಕ, ಈ ಸಂಶೋಧನಾ ಲೇಖನವು ಜಾಗತಿಕವಾಗಿ ಮಹಿಳೆಯರ ಜೀವನದ ಮೇಲೆ ಕೃತಕ ಬುದ್ಧಿಮತ್ತೆಯು ಆಳವಾದ ಪ್ರಭಾವವನ್ನು ಎತ್ತಿ ತೋರಿಸುತ್ತದೆ.

ಪ್ರಮುಖ ಪದಗಳು : ಕೃತಕ ಬುದ್ಧಿಮತ್ತೆ, ಮಹಿಳಾ ಸಬಲೀಕರಣ, ಶಿಕ್ಷಣ, ಆರೋಗ್ಯ ರಕ್ಷಣೆ, ಸುರಕ್ಷತೆ ಮತ್ತು ಭದ್ರತೆ.

ಪರಿಚಯ

ಕೃತಕ ಬುದ್ಧಿಮತ್ತೆಯ ಪರಿಚಯವು ವಿವಿಧ ಕ್ಷೇತ್ರಗಳಲ್ಲಿ ಕ್ರಾಂತಿಯನ್ನುಂಟು ಮಾಡಿದೆ, ನಾವೀನ್ಯತೆ ಮತ್ತು ದಕ್ಷತೆಗೆ ಚಾಲನೆ ನೀಡಿದೆ. ಆದಾಗ್ಯೂ, ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅದರ ಪಾತ್ರವು ವಿಶೇಷವಾಗಿ ಮಹಿಳಾ ಸಬಲೀಕರಣವು ಗಮನಾರ್ಹ ಗಮನವನ್ನು ಗಳಿಸಿದೆ. ಪ್ರಪಂಚದಾದ್ಯಂತ ಮಹಿಳೆಯರು ಶಿಕ್ಷಣ ಆರೋಗ್ಯ ರಕ್ಷಣೆ ಮತ್ತು ಉದ್ಯೋಗಾವಕಾಶಗಳಿಗೆ ಸೀಮಿತ ಪ್ರವೇಶ ಸೇರಿದಂತೆ ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದಾರೆ. ದೊಡ್ಡ ಪ್ರಮಾಣದ ಡೇಟಾವನ್ನು ಪ್ರಕ್ರಿಯೆಗೊಳಿಸುವ ಮತ್ತು ವೈಯಕ್ತಿಕಗೊಳಿಸಿದ ಪರಿಹಾರಗಳನ್ನು ನೀಡುವ ಸಾಮರ್ಥ್ಯದೊಂದಿಗೆ, ಈ ಅಂತರವನ್ನು ಕಡಿಮೆ ಮಾಡಲು ಮತ್ತು ಅಂತರ್ಗತ ಸಮಾಜವನ್ನು ಬೆಳೆಸಲು ಅಭೂತಪೂರ್ವ ಅವಕಾಶವನ್ನು ಒದಗಿಸುತ್ತದೆ. ಈ ಸಂಶೋಧನಾ ಲೇಖನವು ಮಹಿಳೆಯರನ್ನು ಸಬಲೀಕರಣಗೊಳಿಸುವ ವಿಧಾನಗಳನ್ನು ಪರಿಶೀಲಿಸುತ್ತದೆ, ಅದರ ಅಪ್ಲಿಕೇಶನ್‌ಗಳು ಮತ್ತು ಸಾಮರ್ಥ್ಯದ ಸಮಗ್ರ ಅವಲೋಕನವನ್ನು ಒದಗಿಸುತ್ತದೆ.

ಚರ್ಚೆ

1. ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿಸುವುದು

ಸ್ವಯಂ ಚಾಲಿತ ವೈಯಕ್ತೀಕರಿಸಿದ ಕಲಿಕಾ ವೇದಿಕೆಗಳು ಶೈಕ್ಷಣಿಕ ವಿಷಯವನ್ನು ವೈಯಕ್ತಿಕ ಕಲಿಕೆಯ ಶೈಲಿಗಳಿಗೆ ತಕ್ಕಂತೆ ಮಾಡಬಹುದು, ಶಿಕ್ಷಣದ ಅಡೆತಡೆಗಳನ್ನು ಜಯಿಸಲು ಮಹಿಳೆಯರು ಮತ್ತು ಹುಡುಗಿಯರನ್ನು ಸಕ್ರಿಯಗೊಳಿಸುತ್ತದೆ. ಉದಾಹರಣೆಗೆ, ಕೋರಸೇರಾ ಮತ್ತು ಖಾನ್ ಅಕಾಡೆಮಿ ನಂತಹ ಪ್ಲಾಟ್‌ಫಾರ್ಮ್‌ಗಳು ಬಳಕೆದಾರರ ಆದ್ಯತೆಗಳು ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ ಕೋರ್ಸ್‌ಗಳು ಮತ್ತು ಸಂಪನ್ಮೂಲಗಳನ್ನು ಶಿಫಾರಸು ಮಾಡಲು ಕೃತಕ ಬುದ್ಧಿಮತ್ತೆಯ ಅಲ್ಗಾರಿಥಮಗಳನ್ನು ಬಳಸುತ್ತವೆ. ಕೃತಕ ಬುದ್ಧಿಮತ್ತೆಯ ಅಪ್ಲಿಕೇಶನಗಳು ಬೋಧಕರ ಮತ್ತು ಚಾಟ್‌ಬಾಟ್‌ಗಳ ತ್ವರಿತ ಶೈಕ್ಷಣಿಕ ಬೆಂಬಲವನ್ನು ನೀಡುತ್ತವೆ, ಕಲಿಕೆಯನ್ನು ಯಾವುದೇ ಸಮಯದಲ್ಲಿ, ಎಲ್ಲಿಯಾದರೂ ಪ್ರವೇಶಿಸಬಹುದಾಗಿದೆ. ಹೀಗಾಗಿ ಮಹಿಳೆಯರು ಮನೆಯಲ್ಲಿಯೆ ಕುಳಿತುಕೊಂಡು ಶೈಕ್ಷಣಿಕವಾಗಿ ಉತ್ತುಂಗ ಸ್ಥಾನದ ಕಲಿಕೆಯನ್ನು ಪಡೆಯಬಹುದು.

2. ವರ್ಕ್‌ಫೋರ್ಸ್ ಇನ್‌ಕ್ಲೂಷನ್ ಅನ್ನು ಉತ್ತೇಜಿಸುವುದು

ಕೃತಕ ಬುದ್ಧಿಮತ್ತೆಯು ನೇಮಕಾತಿ ಪ್ರಕ್ರಿಯೆಗಳಲ್ಲಿನ ಪಕ್ಷಪಾತಗಳನ್ನು ತೆಗೆದುಹಾಕುವ ಮೂಲಕ ಕಾರ್ಯಪಡೆಯ ಸೇರ್ಪಡೆಯ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರುತ್ತದೆ. ಕೃತಕ ಬುದ್ಧಿಮತ್ತೆ–ಚಾಲಿತ ನೇಮಕಾತಿ ಪರಿಕರಗಳಾದ ಹೈರ್ ವ್ಯೂ ಮತ್ತು ಪೈಮೇಟಿಕ್ಸಗಳು ಲಿಂಗ ಅಥವಾ ಹಿನ್ನೆಲೆಗಿಂತ ಹೆಚ್ಚಾಗಿ ಕೌಶಲ್ಯ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಅಭ್ಯರ್ಥಿಗಳನ್ನು ನಿರ್ಣಯಿಸುತ್ತದೆ. ಇದಲ್ಲದೆ, ಟ್ರೆಲ್ಲೊ ಮತ್ತು ಸ್ಲಾಕ್‌ನಂತಹ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಟೂಲ್‌ಗಳ ಮೂಲಕ ದೂರಸ್ಥ ಕೆಲಸದ ವಾತಾವರಣವನ್ನು ಕೃತಕ ಬುದ್ಧಿಮತ್ತೆ ಸುಗಮಗೊಳಿಸುತ್ತದೆ, ಇದು ಮಹಿಳೆಯರಿಗೆ ಕೆಲಸ ಮತ್ತು ಕೌಟುಂಬಿಕ ಜವಾಬ್ದಾರಿಗಳನ್ನು ಸಮತೋಲನಗೊಳಿಸಲು ಅನುವು ಮಾಡಿಕೊಡುತ್ತದೆ.

3. ಮಹಿಳಾ ಆರೋಗ್ಯ ನಿರ್ವಹಣೆ

ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನಗಳು ರೋಗ ನಿರ್ಣಯದ ನಿಖರತೆಯನ್ನು ಸುಧಾರಿಸುವ ಮೂಲಕ ಮತ್ತು ಚಿಕಿತ್ಸೆಗಳನ್ನು ವೈಯಕ್ತೀಕರಿಸುವ ಮೂಲಕ ಆರೋಗ್ಯ ರಕ್ಷಣೆಯನ್ನು ಪರಿವರ್ತಿಸುತ್ತಿವೆ. ನಿರಂತರವಾಗಿ ಚಲಿಸುತ್ತಿರುವ ಜಗತ್ತಿನಲ್ಲಿ, ಆರೋಗ್ಯ ಮತ್ತು ಕ್ಷೇಮದ ಮೇಲೆ ಗಮನ ಕೇಂದ್ರೀಕರಿಸುವುದು ದೊಡ್ಡ ಸವಾಲಾಗಿದೆ. ಇದಕ್ಕೂ ಸಹ ಕೃತಕ ಬುದ್ಧಿಮತ್ತೆಯಲ್ಲಿ ಪರಿಹಾರವಿದೆ. ಮಹಿಳೆಯರ ಆರೋಗ್ಯ ಸುರಕ್ಷತೆಗೆ (Safe her) ಫಿಟ್‌ಬಿಟ್, ಆಪಲ್ ವಾಚ್ ಅಥವಾ ಗಾರ್ಮಿನ್‌ನಂತಹ ಸಾಧನಗಳು ಮಹಿಳೆಯರ ದೈಹಿಕ ಚಟುವಟಿಕೆ, ಹೃದಯ ಬಡಿತ ಮತ್ತು ನಿದ್ರೆಯ ಮಾದರಿಗಳನ್ನು ಟ್ರ್ಯಾಕ್ ಮಾಡಲು ಕೃತಕ ಬುದ್ಧಿಮತ್ತೆ (AI) ಅನ್ನು ಬಳಸಬಹುದು. ಇವುಗಳು ಮಹಿಳೆಯರ ಫಿಟ್‌ನೆಸ್ ಗುರಿಗಳನ್ನು ಹೊಂದಿಸಲು ಮತ್ತು ಅವರ ಒಟ್ಟಾರೆ ಆರೋಗ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಸಹಾಯ ಮಾಡುತ್ತದೆ.

ಕೃತಕ ಬುದ್ಧಿಮತ್ತೆ–ಚಾಲಿತ ಆರೋಗ್ಯ ಅಪ್ಲಿಕೇಶನ್‌ಗಳು ಮಹಿಳೆಯರಿಗೆ ಸಂತಾನೋತ್ಪತ್ತಿ ಆರೋಗ್ಯ, ಮಾನಸಿಕ ಸ್ವಾಸ್ಥ್ಯ ಮತ್ತು ದೀರ್ಘಕಾಲದ ಕಾಯಿಲೆ ನಿರ್ವಹಣೆಯ ಕುರಿತು ವಿಶ್ವಾಸಾರ್ಹ ಮಾಹಿತಿಯನ್ನು ಒದಗಿಸುತ್ತವೆ. ಈ ಅಪ್ಲಿಕೇಶನ್‌ಗಳು ಮಹಿಳೆಯರಿಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತಿಳುವಳಿಕೆಯುಳ್ಳ ಆರೋಗ್ಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಮತ್ತು ಸಮಯೋಚಿತ ವೈದ್ಯಕೀಯ ಸಲಹೆಯನ್ನು ಪಡೆಯಲು ಅನುಕೂಲ ಮಾಡಿಕೊಡುತ್ತವೆ. ವೋ ಮತ್ತು ಕ್ಲೂ ನಂತಹ Woebot ಅಥವಾ Replika ನಂತಹ AI–ಚಾಲಿತ ಪ್ಲಾಟ್‌ಫಾರ್ಮ್‌ಗಳು ಮಾನಸಿಕ ಆರೋಗ್ಯವನ್ನು ಹೆಚ್ಚಿಸುತ್ತದೆ. ಸಹಾನುಭೂತಿಯ ಸಂಭಾಷಣೆಗಳನ್ನು ಒದಗಿಸುವ ಚಾಟ್‌ಬಾಟ್‌ಗಳು ಮೂಲಕ ಮಾನಸಿಕ ಆರೋಗ್ಯ ಬೆಂಬಲವನ್ನು ನೀಡುತ್ತವೆ. ದಿನನಿತ್ಯ ವೇಳಾಪಟ್ಟಿಯಲ್ಲಿ ಒತ್ತಡ, ಆತಂಕ ಅಥವಾ ಖಿನ್ನತೆಯನ್ನು ನಿರ್ವಹಿಸಲು ಮಹಿಳೆಯರಿಗೆ ಸಹಾಯ ಮಾಡಲು ಈ ಅಪ್ಲಿಕೇಶನ್‌ಗಳನ್ನು ವಿನ್ಯಾಸಗೊಳಿಸಲಾಗಿದೆ.

4. ಸುರಕ್ಷತೆ ಮತ್ತು ಭದ್ರತೆ

ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದು ಮಹಿಳೆಯರ ಸಬಲೀಕರಣಕ್ಕೆ ಸುರಕ್ಷತೆ ಮತ್ತು ಭದ್ರತೆಯು ನಿರ್ಣಾಯಕವಾಗಿದೆ. ಕೃತಕ ಬುದ್ಧಿಮತ್ತೆ ಆಧಾರಿತ ಅಪ್ಲಿಕೇಶನ್‌ಗಳಾದ B Safe ಮತ್ತು Safe Trek ನೈಜ–ಸಮಯದ ಟ್ರ್ಯಾಕಿಂಗ್ ಮತ್ತು ತುರ್ತು ಪ್ರತಿಕ್ರಿಯೆ ವೈಶಿಷ್ಟ್ಯಗಳನ್ನು ನೀಡುವ ಮೂಲಕ ವೈಯಕ್ತಿಕ ಸುರಕ್ಷತೆಯನ್ನು ಹೆಚ್ಚಿಸುತ್ತವೆ. ಲಿಂಗ–ಆಧಾರಿತ ಹಿಂಸಾಚಾರದ ಘಟನೆಗಳನ್ನು ಊಹಿಸಲು ಮತ್ತು ತಡೆಗಟ್ಟಲು ಕೃತಕ ಬುದ್ಧಿಮತ್ತೆಯು (AI) ಡೇಟಾದಲ್ಲಿನ ನಮೂನೆಗಳನ್ನು ವಿಶ್ಲೇಷಿಸಬಹುದು, ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಅನುವು ಮಾಡಿಕೊಡುತ್ತದೆ.

5. ಉದ್ಯಮಶೀಲತೆಯನ್ನು ಉತ್ತೇಜಿಸುವಿಕೆ

ಉದ್ಯಮಶೀಲತೆಯನ್ನು ಉತ್ತೇಜಿಸುವ ಸ್ವಯಂ–ಚಾಲಿತ ವೇದಿಕೆಗಳು ವ್ಯಾಪಾರದ ಒಳನೋಟಗಳು, ಮಾರುಕಟ್ಟೆ ಪ್ರವೃತ್ತಿಗಳು ಮತ್ತು ಹಣಕಾಸು ನಿರ್ವಹಣಾ ಸಾಧನಗಳನ್ನು ಒದಗಿಸುವ ಮೂಲಕ ಮಹಿಳಾ ಉದ್ಯಮಿಗಳಿಗೆ ಬೆಂಬಲ ನೀಡುತ್ತವೆ. ಉದಾಹರಣೆಗೆ, ಶಾಫಿ ಫೀ ಮತ್ತು ಸ್ಕವೇರ್ ಸಹಾಯಕ ನಂತಹ ಪ್ಲಾಟ್‌ಫಾರ್ಮ್‌ಗಳು ಕಾರ್ಯಾಚರಣೆಗಳನ್ನು ನಿರ್ವಹಿಸುವಲ್ಲಿ ಮತ್ತು ಜಾಗತಿಕ ಮಾರುಕಟ್ಟೆಗಳನ್ನು ತಲುಪುವಲ್ಲಿ ಮಹಿಳಾ ನೇತೃತ್ವದ ವ್ಯವಹಾರಗಳಿಗೆ ಸಹಾಯ ಮಾಡುತ್ತವೆ. ಕೃತಕ ಬುದ್ಧಿಮತ್ತೆಯ ಕಿರುಬಂಡವಾಳ ಮತ್ತು ಹೂಡಿಕೆಯ ಅವಕಾಶಗಳಿಗೆ ಪ್ರವೇಶವನ್ನು ಸುಗಮಗೊಳಿಸುತ್ತದೆ, ಮಹಿಳಾ ಉದ್ಯಮಶೀಲತೆಯ ಉದ್ಯಮಗಳಿಗೆ ಆಗಾಗ್ಗೆ ಅಡ್ಡಿಯಾಗುವ ಹಣಕಾಸಿನ ಅಡೆತಡೆಗಳನ್ನು ಒಡೆಯುತ್ತದೆ.

6. ಸಾಮಾಜಿಕ ಮತ್ತು ಸಾಂಸ್ಕೃತಿಕ ಸವಾಲುಗಳು

ಸವಾಲಿನ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಡೆತಡೆಗಳು ಕೃತಕ ಬುದ್ಧಿಮತ್ತೆಯು ಮಹಿಳೆಯರ ಪ್ರಗತಿಗೆ ಅಡ್ಡಿಯಾಗುವ ಸಾಂಸ್ಕೃತಿಕ ಮತ್ತು ಸಾಮಾಜಿಕ ರೂಢಿಗಳನ್ನು ಸವಾಲು ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಧನಾತ್ಮಕ ನಿರೂಪಣೆಗಳನ್ನು ಉತ್ತೇಜಿಸುವ ಮೂಲಕ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಕೃತಕ ಬುದ್ಧಿಮತ್ತೆಯು – ಕ್ಯುರೇಟೆಡ್ ವಿಷಯದ ಮೂಲಕ ಯಶಸ್ವಿ ಸ್ತ್ರೀ ಮಾದರಿಗಳನ್ನು ಪ್ರದರ್ಶಿಸುವ ಮೂಲಕ, ಕೃತಕ ಬುದ್ಧಿಮತ್ತೆಯು ಸಾಮಾಜಿಕ ವರ್ತನೆಗಳ ಮೇಲೆ ಪ್ರಭಾವ ಬೀರಬಹುದು ಮತ್ತು ಹೆಚ್ಚು ಅಂತರಾತ್ಮಕವಾಗಿ ಒಳಗೊಳ್ಳುವ ಮನಸ್ಥಿತಿಯನ್ನು ಪ್ರೋತ್ಸಾಹಿಸಬಹುದು.

7. ಸಮಯ ನಿರ್ವಹಣೆ ಮತ್ತು ಉತ್ಪಾದಕತೆ

ಹಲವಾರು ಮಹಿಳೆಯರು ನನಗೆ ಮಾಡಲು ಹಲವಾರು ಕೆಲಸಗಳಿವೆ. ಆದರೆ ಅವುಗಳನ್ನು ಮಾಡಲು ನನ್ನಲ್ಲಿ ಸಾಕಷ್ಟು ಸಮಯವಿಲ್ಲ ಎಂದು ಹೇಳುತ್ತಿರುತ್ತಾರೆ. ಕೃತಕ ಬುದ್ಧಿಮತ್ತೆಯು (AI) ಸುಲಭ ಪರಿಹಾರವನ್ನು ನೀಡುತ್ತದೆ. ಕೃತಕ ಬುದ್ಧಿಮತ್ತೆಯು (AI) –ಚಾಲಿತ ಪರಿಕರಗಳು ಕಾರ್ಯಗಳನ್ನು ಸ್ವಯಂಚಾಲಿತಗೊಳಿಸುವ ಮೂಲಕ, ಮಹಿಳೆಯರ ವೇಳಾಪಟ್ಟಿಯನ್ನು ಸಂಘಟಿಸುವ ಮೂಲಕ ಮತ್ತು ನಿಜವಾಗಿಯೂ ಮುಖ್ಯವಾದುದನ್ನು ಕೇಂದ್ರೀಕರಿಸಲು ಕೃತಕ ಬುದ್ಧಿಮತ್ತೆಯು (AI) ನೆರವಾಗುತ್ತದೆ. ಸಿರಿ, ಗೂಗಲ್ ಅಸಿಸ್ಟೆಂಟ್ ಮತ್ತು ಅಲೆಕ್ಸಾದಂತಹ ಸ್ಮಾರ್ಟ್ ಅಸಿಸ್ಟೆಂಟ್‌ಗಳು ಮಹಿಳೆಯರಿಗೆ ರಿಮೈಂಡರ್‌ಗಳನ್ನು ಹೊಂದಿಸಲು, ಮಾಡಬೇಕಾದ ಪಟ್ಟಿಗಳನ್ನು ರಚಿಸಲು, ಅಪಾಯಿಂಟ್‌ಮೆಂಟ್‌ಗಳನ್ನು ನಿಗದಿಪಡಿಸಲು ಮತ್ತು ಇಮೇಲ್‌ಗಳನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಕ್ಯಾಲೆಂಡರ್ ಅಥವಾ Clara ನಂತಹ AI–ಚಾಲಿತ ವೇಳಾಪಟ್ಟಿ ಅಪ್ಲಿಕೇಶನ್‌ಗಳನ್ನು ಸಹ ಬಳಸಿಕೊಳ್ಳಬಹುದು.

8. ನಿರ್ಧಾರ ತೆಗೆದುಕೊಳ್ಳುವ ಸಮಸ್ಯೆ

ಏನನ್ನು ಧರಿಸಬೇಕು ಎನ್ನುವುದರಿಂದ ಹಿಡಿದು ಯಾವ ವೃತ್ತಿಜೀವನವನ್ನು ಆರಿಸುವುದು ಸೇರಿದಂತೆ ಮಹಿಳೆಯರು ಹಲವಾರು ಪ್ರಶ್ನೆಗಳನ್ನು ಹೊಂದಿರುತ್ತಾರೆ. ಹಲವು ಆಯ್ಕೆಗಳ ಮಧ್ಯೆ ನಿರ್ಧಾರ ಕಷ್ಟಕರವಾಗಿರುತ್ತದೆ. ಇಂಥಾ ಸಂದರ್ಭದಲ್ಲಿ ಈ ಸಮಸ್ಯೆಯನ್ನು ಬಗೆಹರಿಸುತ್ತದೆ. ಸ್ಟಿಚ್ ಫಿಕ್ಸ್‌ನಂತಹ AI–ಚಾಲಿತ ಫ್ಯಾಷನ್ ಅಪ್ಲಿಕೇಶನ್‌ಗಳಿಂದ, ಮಹಿಳೆಯರ ಶೈಲಿಯ ಆದ್ಯತೆಗಳ ಆಧಾರದ ಮೇಲೆ ಬಟ್ಟೆಯ ಆಯ್ಕೆಗಳನ್ನು ನಿರ್ವಹಿಸುತ್ತದೆ, ಅವರ ಅಗತ್ಯಗಳಿಗೆ ಅನುಗುಣವಾಗಿ ಉತ್ಪನ್ನಗಳನ್ನು ಶಿಫಾರಸು ಮಾಡುವ Amazon ನಂತಹ ಇ–ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳವರೆಗೆ ಬುದ್ಧಿಮತ್ತೆಯು ಶಾಪಿಂಗ್ ಮತ್ತು ದೈನಂದಿನ ನಿರ್ಧಾರಗಳನ್ನು ತ್ವರಿತವಾಗಿ ಮಾಡಲು ನೆರವಾಗುತ್ತದೆ. Betterment ಅಥವಾ Weathfront ನಂತಹ ಪರಿಕರಗಳು ಹೂಡಿಕೆಗಳನ್ನು ನಿರ್ವಹಿಸಲು, ಉಳಿತಾಯವನ್ನು ಸ್ವಯಂಚಾಲಿತಗೊಳಿಸಲು ಮತ್ತು ತಿಳುವಳಿಕೆಯುಳ್ಳ ಹಣಕಾಸಿನ ನಿರ್ಧಾರಗಳನ್ನು ಮಾಡಲು ಮಹಿಳೆಯರಿಗೆ ಸಹಾಯ ಮಾಡುತ್ತವೆ.

ಕೇಸ್‌ಸ್ಟಡೀಸ್ ಮತ್ತು ಉದಾಹರಣೆಗಳು

ಕೇಸ್‌ಸ್ಟಡಿ 1 : ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ

ಗ್ರಾಮೀಣ ಭಾರತದಲ್ಲಿ, ಕೃತಕ ಬುದ್ಧಿಮತ್ತೆಯು ಸ್ವಯಂ–ಚಾಲಿತ ಶೈಕ್ಷಣಿಕ ಕಾರ್ಯಕ್ರಮಗಳು ಹುಡುಗಿಯರನ್ನು ಸಾಕ್ಷರತೆಯ ಪ್ರಮಾಣವನ್ನು ಗಣನೀಯವಾಗಿ ಸುಧಾರಿಸಿದೆ. ಉದಾಹರಣೆಗೆ, **"ರೋಬೋಟ್ ಟ್ಯೂಟರ್"** ಉಪಕ್ರಮವು ವೈಯಕ್ತೀಕರಿಸಿದ ಕಲಿಕೆಯ ಅನುಭವಗಳನ್ನು ಒದಗಿಸಲು ಕೃತಕ ಬುದ್ಧಿಮತ್ತೆಯನ್ನು ಬಳಸುತ್ತದೆ, ದೂರದ ಪ್ರದೇಶಗಳಲ್ಲಿನ ಹುಡುಗಿಯರು ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಸಹಾಯ ಮಾಡುತ್ತದೆ.

ಕೇಸ್ ಸ್ಟಡಿ 2 : ಉತ್ತಮ ಆರೋಗ್ಯ ಕಾಪಾಡುವಲ್ಲಿ ಕೃತಕ ಬುದ್ಧಿಮತ್ತೆ

ಹೆಲ್ತ್‌ಕೇರ್ ಕೃತಕ ಬುದ್ಧಿಮತ್ತೆ ಯ–ಆಧಾರಿತ ಡಯಾಗ್ನೋಸ್ಟಿಕ್ ಟೂಲ್‌ಗಳಲ್ಲಿನ ಕೃತಕ ಬುದ್ಧಿಮತ್ತೆಯ ಸಬ್–ಸಹಾರನ್ ಆಫ್ರಿಕಾದಲ್ಲಿ ಮಹಿಳೆಯರ ಆರೋಗ್ಯ ಫಲಿತಾಂಶಗಳನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. **"ಕೃತಕ ಬುದ್ಧಿಮತ್ತೆ ಫಾರ್ ಗುಡ್"** ನಂತಹ ಕಾರ್ಯಕ್ರಮಗಳು ಸ್ತನ ಕ್ಯಾನ್ಸರ್‌ನ ಆರಂಭಿಕ ಚಿಹ್ನೆಗಳನ್ನು ಪತ್ತೆಹಚ್ಚಲು ಯಂತ್ರ ಕಲಿಕೆಗಳಲ್ಲಿ ಅಲ್ಗಾರಿಥಮಗಳನ್ನು ಬಳಸಿಕೊಳ್ಳುತ್ತವೆ, ಸೀಮಿತ ವೈದ್ಯಕೀಯ ಮೂಲಸೌಕರ್ಯ ಹೊಂದಿರುವ ಪ್ರದೇಶಗಳಲ್ಲಿ ಸಮಯೋಚಿತ ಮತ್ತು ನಿಖರವಾದ ರೋಗನಿರ್ಣಯವನ್ನು ಕೃತಕ ಬುದ್ಧಿಮತ್ತೆಯು ಒದಗಿಸುತ್ತದೆ.

– 72ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹರಿಹರೇಶ್ವರ ದೇವಾಲಯದ ವಾಸ್ತುಶಿಲ್ಪ

✍ ಡಾ. ಶರಣಪ್ಪ, ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿ.

ಪೀಠಿಕೆ

ದಾವಣಗೆರೆ ಜಿಲ್ಲೆಯ ಹರಿಹರ ಪ್ರಾಚೀನ ಕಾಲದ ಊರು ಹಾಗೂ ಯಾತ್ರಾಸ್ಥಳ. ಈ ಊರನ್ನು 'ಹರೀಶಪುರ', 'ಗುಹಾರಣ್ಯ ಕ್ಷೇತ್ರ', 'ಕೂಡಲೂರು', 'ಕೂಡೂರು' ಎಂದು ಶಾಸನದಲ್ಲಿ ಬಗೆ ಬಗೆಯಾಗಿ ಕರೆದಿದೆ. ಹರಿ ಮತ್ತು ಹರರು ಕೂಡಿ ಹರಿಹರೇಶ್ವರ ಆಗಿರುವುದರಿಂದ ಈ ಊರಿಗೆ ಹರಿಹರ ಎಂಬ ಹೆಸರೂ ಬಂದಿದೆ. ಹರಿಹರರು ಒಂದಾಗಿರುವ ಊರು ಹರೀಶಪುರ. ಗುಹಾಸುರನಿದ್ದ ಪ್ರದೇಶ ಗುಹಾರಣ್ಯ ಕ್ಷೇತ್ರ. ಹರಿಹರರು ಒಂದಾಗಿ ಗುಹಾಸುರ ಎಂಬ ರಾಕ್ಷಸನನ್ನು ಮೆಟ್ಟಿ ಪಾತಾಳಕ್ಕೆ ಕಳುಹಿಸಿದ ಸ್ಥಳ. ಕೂಡಲೂರು ಮತ್ತು ಕೂಡೂರು ಹರಿಹರರ ಸಮನ್ವಯವನ್ನು ಸೂಚಿಸುತ್ತದೆ. ಇಲ್ಲಿ ಹರಿಯುವ ತುಂಗಭದ್ರಾ ನದಿಗೆ ಸಮೀಪದ ಮತ್ತೊಂದು ಕಿರುಹಳ್ಳ ಹರಿದ್ರಾ ನದಿ ಸೇರುವುದರಿಂದಲೂ, ಕೂಡಲೂರು ಹೆಸರು ಬಂದಿರಬಹುದು. ಈ ಊರಿಗೆ ಸುಮಾರು ಸಾವಿರದಐನೂರು ವರ್ಷಗಳಿಗೂ ಮಿಕ್ಕ ಇತಿಹಾಸವಿದೆ. ದೇವಾಲಯದ ಹೊರಗಡೆ, ಹರಿಹರದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಐವತ್ತಕ್ಕೂ ಹೆಚ್ಚಿನ ಶಾಸನಗಳು ದೊರೆತಿವೆ. ಈ ಶಾಸನಗಳಲ್ಲಿ ಕೆಲವಂತೂ ಪ್ರಸಿದ್ಧವಾಗಿದ್ದು ಚಾಳುಕ್ಯರ ಕಾಲದಿಂದ ಹಿಡಿದು ವಿಜಯನಗರದ ಅರಸರ ಕಾಲದವರೆಗೂ ವ್ಯಾಪಿಸಿವೆ.

ಐತಿಹಾಸಿಕ ಹಿನ್ನೆಲೆ

ಹರಿಹರೇಶ್ವರ ಮೂರ್ತಿಯು ಸ್ವಯಂಭು ಮೂರ್ತಿಯಾಗಿದ್ದು, ಕ್ರಿ.ಶ. 694ನೆಯ ಇಮ್ಮಡಿ ಪುಲಿಕೇಶಿಯ ಮೊಮ್ಮಗ ವಿನಯಾದಿತ್ಯ ಶಾಸನವು ಈ ಮೂರ್ತಿಯನ್ನು ಹೆಸರಿಸುತ್ತದೆ. ಮುಂದೆ ಐದು ಶತಮಾನಗಳ ಕಾಲ ಹರಿಹರನ ಬಗೆಗಾಗಲಿ ಅಥವಾ ಶ್ರೀ ದೇವರ ಬಗ್ಗೆಯಾಗಲಿ ಯಾವ ಸಂಗತಿಗಳೂ ಕಾಣಬರುವುದಿಲ್ಲ. ಬಹುಶಃ ಆ ಕಾಲದ ರಾಜಕೀಯ ಶೋಭೆಗಳಿಂದಾಗಿ ಈ ಗತಿ ಒದಗಿ ಬಂದಿರಬೇಕು. ದೇವರಿಗೆ ಒಂದು ಸರಿಯಾದಗುಡಿ ಇದ್ದಿರಲಾರದು ಎಂಬ ಅಂಶ ಶಾಸನಗಳಲ್ಲಿ ಕಂಡು ಬರುತ್ತದೆ.

ಹರಿಹರದ ಹರಿಹರೇಶ್ವರ ದೇವರಿಗೆ ಒಂದು ಸುಂದರವಾದ ನೆಲೆ ಮಾಡಿಸುವ ಸಂಕಲ್ಪ ಬಂದದ್ದು ಪೋಲಾ ದಂಡನಾಯಕ ಎಂಬ ದಂಡಾಧಿಪತಿಗೆ, ಇವನು ಆಂಧ್ರಪ್ರದೇಶದವನು. ಈತನ ಊರು ನಾರಣಪುರ, ಈತನು ಹೊಯ್ಸಳ ಸಾಮ್ರಾಜ್ಯದ ವೀರಬಲ್ಲಾಳನಿಗೂ, ಅವನ ಮಗ ವೀರ ನಾರಸಿಂಹನಿಗೂ ಮತ್ತು ವೀರಬಲ್ಲಾಳನ ಮೊಮ್ಮಗ ವೀರ ಸೋಮೇಶ್ವರನಿಗೂ ದಂಡಾಧಿಪತಿಯಾಗಿದ್ದ ಎಂದ ಮೇಲೆ ಈತನ ಸಾಮರ್ಥ್ಯವನ್ನು ಏನು ಹೇಳುವುದು ? ಲೋಕವನ್ನು ಬೆಳಗತಕ್ಕೆ ಕೀರ್ತಿ, ಮುಗಿಲನ್ನು ಮುಟ್ಟುವ ಹಿರಿದು, ಸಮುದ್ರಕ್ಕೆ ಸ್ಪರ್ಧಿಯಾದ ಗಾಂಭೀರ್ಯ, ಐಶ್ವರ್ಯವನ್ನು ಲೋಕಕ್ಕೆ ನೀಡುವ ಉದಾರ ನೀತಿ ಮತ್ತು ಪ್ರೀತಿಗಳು ಇವನಲ್ಲಿ ಸಂಗಮಿಸಿದ್ದವು ಎಂದು ದಾವಣಗೆರೆಯ 24ನೆಯ ಶಾಸನ ಇವನನ್ನು ವರ್ಣಿಸುತ್ತದೆ.

ಈಗಿರುವ ದೇವಸ್ಥಾನವನ್ನು ಹೊಯ್ಸಳ ದಂಡಾಧಿಪತಿ ಪೋಲಾಳ್ಳ ದಂಡನಾಥನು ಶಕಾಲ್ಕುದನ ಶಕವರ್ಷ 1145 ಸ್ವಭಾನು ಸಂವತ್ಸರದ ಮಾಘ ಶುದ್ಧ ಏಕಾದಶಿ ಬೃಹಸ್ಪತಿವಾರದಂದು (1324 ಫೆಬ್ರುವರಿ 8 ರಂದು) ನೂರ ಹದಿನೈದು ಚಿನ್ನದ ಕಲಶಗಳಿಂದ ಮೆರೆಯುವಂತೆ ಮಾಡಿಸಿ ಅದನ್ನು ಶ್ರೀ ದೇವರಿಗೆ ಅರ್ಪಿಸಿದನು.ಈ ಉತ್ಸವಕ್ಕೆ ಈ ದಂಡನಾಯಕನ ಗುಣಗಳಿಂದ ಆಕರ್ಷಿತರಾದ ಇತರ ಪ್ರಧಾನಿಗಳು ಕವಿಗಳು ವಿದ್ವಾಂಸರು ಆಗಮಿಸಿದ್ದು ಅದರಲ್ಲಿ ಭಾಗವಹಿಸಿರಬೇಕು.

ಶ್ರೀ ಹರಿಹರೇಶ್ವರ ದೇವಾಲಯ ಸುಮಾರು ದೊಡ್ಡದಾಗಿದೆಯೆಂದೇ ಹೇಳಬೇಕು. ಇಂಥದೊಂದು ದೇವಾಲಯವನ್ನು ಕಟ್ಟಿಸಿ, ಅದನ್ನು ನೂರಾರು ಚಿನ್ನದ ಕಳಸಗಳಿಂದ ಅಲಂಕರಿಸಬೇಕಾದರೆ ಪೋಲಾಳನ ಐಶ್ವರ್ಯ, ಅದನ್ನು ಸರಿಗಟ್ಟುವ ಅವನ ಧರ್ಮಶ್ರದ್ಧೆ ಅನನ್ಯವಾದದ್ದು ಕಲಾವೈಭವದಿಂದ ಕೂಡಿದ ಈ ದೇವಸ್ಥಾನವನ್ನು ಶಾಸನಕವಿ ಮನೋಹರವಾಗಿ ಬಣ್ಣಿದ್ದಾನೆ.

ಹರಿಹರೇಶ್ವರ ದೇವಾಲಯದ ವಾಸ್ತುಶಿಲ್ಪ

ಈ ದೇವಾಲಯ ನಗರದ ಪಶ್ಚಿಮ ಭಾಗದಲ್ಲಿದ್ದು, ತುಂಗಭದ್ರಾ ನದಿಯ ಬಲದಂಡೆಯ ಮೇಲಿದೆ. ಈ ದೇವಾಲಯ ನಗರದ ಪಶ್ಚಿಮ ಭಾಗದಲ್ಲಿದ್ದು ತುಂಗಭದ್ರಾ ನದಿಯ ಬಲದಂಡೆಯ ಮೇಲಿದೆ. ಹರಿಹರೇಶ್ವರ ದೇವಾಲಯವು ವಿಶಾಲವಾದ ತಳವಿನ್ಯಾಸದಲ್ಲಿ ರಚನೆಗೊಂಡಿದ್ದು ಗರ್ಭಗೃಹ, ಅದೇ ಅಳತೆಯ ಶುಕನಾಸ, ನವರಂಗ ಮತ್ತು ವಿಶಾಲವಾದ ಮಹಾಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಹರಿಹರನ ಸ್ಥಾನಿಕ ಶಿಲ್ಪವಿದೆ. ವಿತಾನದಲ್ಲಿ ಪದ್ಮದ ಅಲಂಕರಣವಿದೆ.

ಗರ್ಭಗೃಹದ ಪ್ರವೇಶದ್ವಾರವು ಹೆಚ್ಚಿನ ಅಲಂಕರಣೆಗಳನ್ನು ಹೊಂದಿಲ್ಲವಾದರೂ ಪೇದ್ಯದಲ್ಲಿ ಕುಂಭದ ಅಲಂಕರಣವಿದೆ. ಇದಕ್ಕೆ ಹೊಂದಿಕೊಂಡಂತೆ ಗರ್ಭಗೃಹದಷ್ಟೇ ವಿಸ್ತೀರ್ಣದ ಶುಕನಾಸವಿದೆ. ಇದರಲ್ಲಿ ಯಾವುದೇ ಮೂರ್ತಿಗಳಿಲ್ಲ. ಆದರೆ ವಿತಾನದಲ್ಲಿ ಪದ್ಮದ ಅಲಂಕರಣವಿದೆ. ಪ್ರವೇಶದ್ವಾರದ ಬಲ ಪೇದ್ಯದಲ್ಲಿ ಇಬ್ಬರು ಶೈವ ದ್ವಾರಪಾಲಕರೂ, ಹಾಗೂ ಎಡ ಪೇದ್ಯದಲ್ಲಿ ಇಬ್ಬರು ವೈಷ್ಣವ ದ್ವಾರಪಾಲಕರಿರುವರು. ಪ್ರವೇಶ ದ್ವಾರವು ಪುಷ್ಪ, ಲತಾ, ಸ್ತಂಭ ಇವುಗಳಿಂದ ಅಲಂಕೃತಗೊಂಡಿದೆ. ಸ್ತಂಭಶಾಖೆಯ ಇಕ್ಕೆಲಗಳಲ್ಲಿ ಜಾಲಾಂಧ್ರಗಳಿವೆ. ಈ ಜಲಾಂಧ್ರಗಳನ್ನು ಪುಷ್ಪಗಳಿಂದ ಅಲಂಕರಿಸಲಾಗಿದೆ. ಪುಷ್ಪ ಹಾಗೂ ಲತಾ ಶಾಖೆಗಳು ಲಲಾಟದವರೆಗೂ ಮುಂದುವರೆದಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದೇವಾಲಯದ ನವರಂಗವುತುಂಬ ವಿಶೇಷತೆಯಿಂದ ಕೂಡಿದೆ. ಇದುದಕ್ಷಿಣ, ಉತ್ತರ ಮತ್ತು ಪೂರ್ವದಿಂದ ಪ್ರವೇಶ ದ್ವಾರಗಳನ್ನು ಹೊಂದಿದೆ. ನವರಂಗದ ಮಧ್ಯಭಾಗದಲ್ಲಿ ತಿರುಗಣಿ ಯಂತ್ರದ ಸಹಾಯದಿಂದ ನಿರ್ಮಿಸಿರುವ ಬಳಪದಕಲ್ಲಿನ ಘಂಟಾಕೃತಿಯ ನಾಲ್ಕು ಕಂಬಗಳಿವೆ. ಪೀಠದ ಮೇಲೆ ನಿಂತಿರುವ ಬಳಪದಕಲ್ಲಿನ ಘಂಟಾಕೃತಿಯ ನಾಲ್ಕು ಕಂಬಗಳಿವೆ. ಪೀಠದ ಮೇಲೆ ನಿಂತಿರುವ ಕಂಬಗಳ ಕೆಳಭಾಗ ಹನ್ನೊಂದು ವೃತ್ತಗಳುಳ್ಳ ದಿಂಡು, ಮುಗುಚಿದ ಬೋಗುಣಿಯಂತೆ ಮಧ್ಯಉಬ್ಬಿದ ವೃತ್ತಕಾರ ಭಾಗ ಹಾಗೂ ಬೋಧಿಗೆಯನ್ನು ಹೊಂದಿದೆ. ಬೋಧಿಗೆಗಳು ಪುಷ್ಪದಳಗಳಿಂದ ಅಲಂಕೃತಗೊಂಡಿದ್ದರೆ, ಮಧ್ಯದ ಮುಗುಚಿದ ಭೋಗುಣಿಯಂತಹ ಭಾಗವು ಪತ್ರ ಹಾಗೂ ಮಾಲಾಲಂಕಾರದಿಂದ ಕೂಡಿವೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲರನ್ನು ವಾಹನ ಸಮೇತರಾಗಿ ಅತ್ಯಂತ ಸುಂದರವಾಗಿ ನಿರೂಪಿಸಲಾಗಿದೆ. ಉತ್ತರದಿಂದ ಕ್ರಮವಾಗಿ ಕುಬೇರ, ಈಶಾನ, ಇಂದ್ರ, ಅಗ್ನಿ, ಯಮ, ನಿಋತಿ, ವರುಣ ಮತ್ತು ವಾಯು ಇರುವರು. ನವರಂಗದ ಉಳಿದ ವಿತಾನಗಳಲ್ಲಿ ಕಮಲದ ಮೊಗ್ಗುಗಳನ್ನು ಕಾಣಬಹುದು.ಉತ್ತರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರವೇಶದ್ವಾರವು ಲತಾ, ಪುಷ್ಪ, ಹಾಗೂ ಸ್ತಂಭಶಾಖೆಗಳಿಂದ ಅಲಂಕೃತಗೊಂಡಿದ್ದು ದ್ವಾರಪಾಲಕರಿದ್ದಾರೆ. ಲಲಾಟದಲ್ಲಿಗ ಜಲಕ್ಷ್ಮಿ ಶಿಲ್ಪವಿದೆ, ಈ ಪ್ರವೇಶದ್ವಾರಕ್ಕೆ ಹೊಂದಿಕೊಂಡಿರುವ ಕಾಲ ಭೈರವನ ದೇವಾಲಯವಿದೆ. ಕಾಲ ಭೈರವದೇವಾಲಯದ ಅಧಿಷ್ಠಾನ, ಭಿತ್ತಿ, ಹಾರಗಳೆಲ್ಲವೂ ಹರಿಹರೇಶ್ವರ ದೇವಾಲಯಕ್ಕೆ ಪೂರಕವಾಗಿಯೇ ರಚನೆಗೊಂಡಿವೆ. ನವರಂಗದ ದಕ್ಷಿಣ ದ್ವಾರವು ಉತ್ತರ ದ್ವಾರದ ಅಲಂಕರಣ ರೀತಿಯಲ್ಲಿಯೇ ಇದೆ. ನವರಂಗದ ಪಶ್ಚಿಮ ಭಾಗದಲ್ಲಿ ಅಂದರೆ ಅಂತರಾಳದ ಇಕ್ಕೆಲಗಳಲ್ಲಿ ಎರಡು ದೇವ ಕೋಷ್ಟಗಳಿವೆ.

ನವರಂಗದ ಮುಖ್ಯ (ಪೂರ್ವ) ಪ್ರವೇಶದ್ವಾರವು ಹಲವಾರು ಶಾಖೆಗಳಿಂದ ಅಲಂಕೃತಗೊಂಡಿದೆ. ರತ್ನ, ಪುಷ್ಪ, ಸ್ತಂಭ ಯಾಳ ಶಾಖೆಗಳಿವೆ. ಮೊದಲ ಮೂರು ಶಾಖೆಗಳು ಲಲಾಟದವರೆಗೂ ಮುಂದುವರೆದಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಚೌಕಾಕಾರದ ಈ ಪಟ್ಟಿಕೆಯ ಇಕ್ಕೆಲಗಳಲ್ಲಿ ಇಳಿ ಬಿದ್ದ ಕಮಲದ ಮೊಗ್ಗಿನ ಸುಂದರ ಅಲಂಕಾರವಿದೆ. ಉತ್ತರಾಂಗವನ್ನು ಪುಷ್ಪ, ಲತೆ ಹಾಗೂ ಸ್ತಂಭಗಳಿಂದ ಅಲಂಕರಿಸಲಾಗಿದೆ. ಮಧ್ಯದಲ್ಲಿ ಹರಿಹರೇಶ್ವರ ಹಾಗೂ ಇಕ್ಕೆಲಗಳಲ್ಲಿ ಕೆಲವು ಧ್ಯಾನಾಸಕ್ತ ಮೂರ್ತಿಗಳನ್ನು ನಿರೂಪಿಸಿದ್ದು ಇವುಗಳನ್ನು ಕೀರ್ತಿಮುಖಗಳಿಂದ ಸಿಂಗರಿಸಲಾಗಿದೆ. ಪ್ರಸ್ತುತ ದ್ವಾರಬಂಧದ ದ್ವಾರಪಾಲಕರ ಕೆತ್ತನೆಯಲ್ಲಿಯೂ ಸಹ ಶೈವ ಮತ್ತು ವೈಷ್ಣವ ಸಂವೇದನೆಗಳಿಗೆ ಪೂರಕವಾಗಿ ದ್ವಾರ ಬಂಧದ ಬಲಭಾಗದಲ್ಲಿ ದ್ವಾರಪಾಲಕನ ಪಕ್ಕದಲ್ಲಿ ಶಿವನ ಶಿಲ್ಪವೂ ಎಡಭಾಗದ ದ್ವಾರಪಾಲಕನ ಪಕ್ಕದಲ್ಲಿ ಕೇಶವನ ಶಿಲ್ಪವೂ ಕಂಡುಬರುತ್ತವೆ.

ನವರಂಗಕ್ಕೆ ಹೊಂದಿಕೊಂಡಂತೆ ಪೂರ್ವದಿಕ್ಕಿನಲ್ಲಿ ವಿಶಾಲವಾದ ಮಹಾಮಂಟಪವಿದೆ. ಮಹಾಮಂಟಪಕ್ಕೆ ಪೂರ್ವ, ಉತ್ತರ ಮತ್ತು ದಕ್ಷಿಣದಲ್ಲಿ ಪ್ರವೇಶದ್ವಾರಗಳಿವೆ. ಮಹಾಮಂಟಪದಲ್ಲಿ ಒಟ್ಟು ಅರವತ್ತೆಂಟು ಸುಂದರವಾದ ವಿಭಿನ್ನ ಶೈಲಿಯ ಕಂಬಗಳಿವೆ. ಕಂಬಗಳ ಪೀಠದ ಮೇಲಿನ ಭಾಗ ಚೌಕಾಕಾರವಾಗಿದ್ದು ಅದರ ಮೇಲಿನ ಕಂಬಗಳ ರಚನೆ ನವರಂಗದ ಕಂಬಗಳಂತೆಯೇ ಕಂಡುಬರುತ್ತದೆ. ಬೋಧಿಗೆಯು ಪುಷ್ಪಗಳಿಂದ ಅಲಂಕೃತಗೊಂಡಿದೆ. ಮಹಾಮಂಟಪದ ಮಧ್ಯದ ಭುವನೇಶ್ವರಿಯಲ್ಲಿ ಅರಳಿ ಮುಗುಚಿದ ಕಮಲದ ಹಾಗೂ ಮಧ್ಯದಲ್ಲಿ ಕಮಲದ ಮೊಗ್ಗಿನ ಅಲಂಕಾರವಿದೆ. ಸುತ್ತಲೂ ಚಿಕ್ಕ ಚಿಕ್ಕ ಪುಷ್ಪಗಳಿವೆ. ಮಹಾಮಂಟಪದ ಸುತ್ತಲೂ ಹೊರಚಾಚಿದ ಕಪೋತದ ಒಳಭಾಗದಲ್ಲಿ ಪುಷ್ಪ, ಹುಲಿಯನ್ನು ಕೊಲ್ಲುತ್ತಿರುವ ಸಳ, ಆನೆ, ಸಿಂಹ ಹಾಗೂ ಕೀರ್ತಿ ಮುಖಗಳನ್ನು ನಿರೂಪಿಸಲಾಗಿದೆ.

ಪಾರ್ಶ್ವನೋಟದಲ್ಲಿ ಹರಿಹರೇಶ್ವರ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅಧಿಷ್ಠಾನವು ಉಪಾನ, ಜಗತಿ, ಪದ್ಮ, ಕಪೋತ, ದಂತ ಪಂಕ್ತಿಗಳನ್ನು ಹೊಂದಿದೆ. ಅಧಿಷ್ಠಾನದ ಕೆಲಪಟ್ಟಿ ಅಂದರೆ ಉಪಾನದಲ್ಲಿ ಲತಾಸುರುಳಿವೆ ಭಿತ್ತಿಯು ಅರೆಗಂಬಗಳಿಂದ ಕೂಡಿದ್ದು ಮೇಲ್ಬಾಗದಲ್ಲಿ ಶಿಖರದ ಮಾದರಿಯನ್ನು ಕೆತ್ತಲಾಗಿದೆ. ಇವುಗಳನ್ನು ಭಿತ್ತಿಯಲ್ಲಿಯೇ ಗೂಡಿನಂತೆ ರಚಿಸಿದಂತೆ ಕಂಡುಬರುತ್ತದೆ. ಎರಡೂ ಪಾರ್ಶ್ವಗಳಲ್ಲಿ ಕೋಷ್ಟ ಪಂಜರಗಳಿವೆ. ಈ ಎಲ್ಲ ಕೋಷ್ಟಗಳಿಗೆ ಒಂದೇ ಎತ್ತರದಲ್ಲಿ ಕಪೋತ ಪಟ್ಟಿಕೆಗಳಿವೆ. ಮೇಲ್ಬಾಗದಲ್ಲಿ ಶಿಖರಗಳಿವೆ. ದೇವಾಲಯದ ಭಿತ್ತಿಯ ಕೊನೆಸ್ತರದಲ್ಲಿ ಕಪೋತ ಭಾಗವು ಹೊರಚಾಚಿ ಕೆಳಕ್ಕೆ ಬಾಗಿದ ರೀತಿಯಲ್ಲಿದೆ. ಇದು ಮಹಾಮಂಟಪದ ಸುತ್ತಲೂ ಹೆಚ್ಚು ಹೊರಬಾಗಿದ್ದು ಕಪೋತದ ಮೆಲ್ಬಾಗದಲ್ಲಿ ಕೂಟ, ಪಂಜರ ಹಾಗೂ ಕೀರ್ತಿ ಮುಖಗಳನ್ನು ನಿರೂಪಿಸಲಾಗಿದೆ. ಈ ದೇವಾಲಯದ ಗರ್ಭಗೃಹದ ಮೇಲಿನ ಶಿಖರವು ದ್ರಾವಿಡ ಶೈಲಿಯ ತ್ರಿತಲದಲ್ಲಿದೆ. ಅಧಿಷ್ಠಾನದಲ್ಲಿರುವ ಅಲಂಕರಣೆಗಳು, ಭಿತ್ತಿಯಲ್ಲಿ ಬರುವ ಕೋಷ್ಟಪಂಜರಗಳು ಕಂಡುಬರುತ್ತವೆ. ಶುಕನಾಸಿಯಲ್ಲಿ ಈಗಿನ ಶಿಖರಕ್ಕೆ ಹೊಂದಿಕೊಂಡಂತೆ ಸಳನು ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವನ್ನು ಅಳವಡಿಸಿದ್ದಾರೆ.

ಪ್ರಸ್ತುತ ದೇವಾಲಯವು ವಿಶಾಲವಾದ ಪ್ರಾಕಾರವನ್ನು ಹೊಂದಿದ್ದು, ಮಹಾದ್ವಾರವೂ ಸಹ ಇದೆ. ಈ ದೇಗುಲದ ಸುತ್ತಲೂ ಕಿರು ದೇವಾಲಯಗಳು ಕಂಡುಬರುತ್ತವೆ. ಈ ದೇವಾಲಯದ ಉತ್ತರಕ್ಕೆ ಇದೇ ಸಂಕೀರ್ಣದಲ್ಲಿ ಲಕ್ಷ್ಮೀ ದೇವಾಲಯವಿದೆ. ಇದೊಂದು ಏಕಕೂಟ ದೇವಾಲಯವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಮತ್ತು ನೇರವಾಗಿ ಮಹಾ ಮಂಟಪವನ್ನು ಹೊಂದಿದ್ದು. ಮಹಾ ಮಂಟಪದಿಂದಲೇ ಗರ್ಭಗೃಹವನ್ನು ಪ್ರವೇಶಿಸಬಹುದಾಗಿದೆ. ಗರ್ಭಗೃಹವು ಚೌಕಾಕಾರವಾಗಿದ್ದು ಪಾರ್ಶ್ವ ನೋಟದಲ್ಲಿ ಅಧಿಷ್ಠಾನ ಮಾತ್ರ ಹರಿಹರೇಶ್ವರ ದೇವಾಲಯದಂತೆಯೇ ಕಂಡುಬರುತ್ತದೆ.

ಮಹಾ ಮಂಟಪವೂ ಸಹ ಸುತ್ತಲೂ ಕಕ್ಷಾಸನವನ್ನು ಹೊಂದಿದೆ. ಕಕ್ಷಾಸನದ ಹೊರಮೈ ಸ್ತಂಭ ಪಂಜರಗಳಿಂದ ಮತ್ತು ಪುಷ್ಪಗಳಿಂದ ಅಲಂಕೃತವಾಗಿದೆ. ಮಹಾಮಂಟಪದ ಮಧ್ಯದ ಕಂಬಗಳು ಮಾತ್ರ ವೃತ್ತಾಕಾರವಾಗಿದ್ದು ಉಳಿದೆಲ್ಲ ಕಂಬಗಳು ಅಷ್ಟಮುಖಗಳನ್ನು ಹೊಂದಿವೆ. ಇದೇ ಪ್ರಕಾರದಲ್ಲಿ ಪಾರ್ವತಿಯದೇವಾಲಯವು ಇದ್ದ ಬಗ್ಗೆ ಮಾಹಿತಿ ಇದ್ದರೂ ಅದು ಈಗ ಸಂಪೂರ್ಣವಾಗಿ ನಾಶವಾಗಿದೆ. ಬಹುಶಃ ಹರಿಹರರ ಪತ್ನಿಯರಾದ ಲಕ್ಷ್ಮೀ ಹಾಗೂ ಪಾರ್ವತಿಯರಿಗಾಗಿ ಈ ದೇವಾಲಯಗಳು ನಿರ್ಮಾಣವಾಗಿರಬಹುದೆಂದು ಊಹಿಸಬಹುದಾಗಿದೆ.

ಅಲ್ಲದೆ ಈ ದೇವಾಲಯದ ಮಹಾದ್ವಾರದ ಎರಡು ಪಾರ್ಶ್ವಗಳಲ್ಲಿ ದೀಪಸ್ತಂಬಗಳು ಕಂಡುಬರುತ್ತವೆ. ಈ ರೀತಿಯ ದೀಪಸ್ತಂಭಗಳು ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರಗಳಲ್ಲಿರುವ ದೇವಾಲಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ದೀಪಸ್ತಂಭಗಳು ಅಷ್ಟಮುಖಗಳನ್ನು ಹೊಂದಿದ್ದು, ವೃತ್ತಾಕಾರವಾಗಿವೆ. ಈ ಸ್ತಂಭದಲ್ಲಿ 25 ಹೊರ ಚಾಚಿದ ಎಣ್ಣೆ ದೀಪದ ಕುಳಿಗಳಿವೆ. ಇದೇ ರೀತಿಯ ದೀಪದ ಕಂಬಗಳನ್ನು ಬಾದಾಮಿಯ ಬನಶಂಕರಿ ದೇವಾಲಯದಲ್ಲಿ, ಸವದತ್ತಿ ತಾಲ್ಲೂಕಿನ ಎಲ್ಲಮ್ಮನ ಗುಡ್ಡದಲ್ಲಿ ಕಾಣಬಹುದಾಗಿದೆ. ಇವುಗಳನ್ನು ಮಹಾದ್ವಾರದ ಎರಡೂ ಒಳಪಾರ್ಶ್ವಗಳಲ್ಲಿ ನಿರ್ಮಿಸಿರುವುದು ಕಂಡುಬರುತ್ತದೆ.

ಈ ದೇವಾಲಯಕ್ಕೆ ಸಂಬಂಧಿಸಿದಂತೆ ಸುಮಾರುಅರವತ್ತು ಶಾಸನಗಳು ದೊರೆಯುತ್ತವೆ. ಆದರೆಯಾವ ಶಾಸನವೂ ಮೂಲ ದೇವಾಲಯದ ನಿರ್ಮಾಣದ ಬಗ್ಗೆ ಬೆಳಕು ಚೆಲ್ಲುವುದಿಲ್ಲ. ಕ್ರಿ. ಶ. 1110ರ ಉಚ್ಚಂಗಿ ಪಾಂಡ್ಯರ ಶಾಸನವು ಪಾಂಡ್ಯರ ದೊರೆಗಳಾದ ವೀರಪಾಂಡ್ಯ, ವಿಜಯಪಾಂಡ್ಯ ಮತ್ತು ಕಲಚೂರಿಗಳ ಬಿಜ್ಜಳ, ಹೊಯ್ಸಳ, ಯಾದವ ಮತ್ತು ವಿಜಯನಗರ ಅರಸರುಗಳು ಈ ದೇವಾಲಯದ ಉನ್ನತಿಗಾಗಿ ಹಲವಾರು ದಾನಗಳನ್ನು ನೀಡಿದ್ದಾರೆ. ಆದರೆ ಹೊಯ್ಸಳರ ದೊರೆ ಎರಡನೇ ನರಸಿಂಹ ಮತ್ತು ಬಲ್ಲಾಳರ ಕಾಲದಲ್ಲಿ ಈ ಭಾಗದ ದಂಡನಾಯಕನಾಗಿದ್ದ ಪೊಲಾಳ್ವ ದಂಡನಾಯಕನು ಈ ಹಿಂದೆ ಅಂದರೆ ಕ್ರಿ. ಶ. 1124ರಲ್ಲಿ ಪೆರ್ಮಾಡಿಯು ನಿರ್ಮಿಸಿದ್ದ ಈ ದೇವಾಲಯವನ್ನು ಸಂಪೂರ್ಣವಾಗಿ ಪುನರನಿರ್ಮಿಸಿ ದೇವಾಲಯದ ಮೇಲೆ ನೂರಾ ಹದಿನೈದು ಬಂಗಾರದ ಕಲಶಗಳನ್ನು ಪ್ರತಿಷ್ಟಾಪಿಸಿದನೆಂದು ತಿಳಿದುಬರುತ್ತದೆ. ಹೊಯ್ಸಳ ನರಸಿಂಹನು ಈ ದೇವಾಲಯಕ್ಕೆ ಹಲವಾರು ರೀತಿಯ ದಾನ ದತ್ತಿಗಳನ್ನು ನೀಡಿದ ವಿಷಯ ಶಾಸನೋಕ್ತವಾಗಿದೆ. ಮಹಾದ್ವಾರವನ್ನು ನಿರ್ಮಿಸಿ ಅದರ ಮೇಲೆ ಸುವರ್ಣ ಕಳಶಗಳನ್ನು ಇರಿಸಿದನೆಂದು ತಿಳಿದುಬರುತ್ತದೆ. ನಂತರದ ಕಾಲದಲ್ಲಿ ಸಾಕಷ್ಟು ಜೀರ್ಣೋದ್ಧಾರಗೊಂಡ ಈ ದೇವಾಲಯ ಪುನಃ ವಿಜಯನಗರದ ಅರಸರ ಕಾಲದಲ್ಲಿ ಹಲವಾರು ಬದಲಾವಣೆಗಳನ್ನು ಕಂಡಿದೆ.

ಪರಾಮರ್ಶನ ಗ್ರಂಥಗಳು

- **ಗಿರಿಜಾ ಟಿ. (2001) :** ದಾವಣಗೆರೆ ನಮ್ಮಜಿಲ್ಲೆ, ದಾವಣಗೆರೆ ನಿಹಾರಿಕ ಪ್ರಕಾಶನ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

- **ಗಿರಿಜಾ ಟಿ. (2001) :** ಚಿತ್ರದುರ್ಗ ಜಿಲ್ಲಾ ದರ್ಶಿನಿ, ದಾವಣಗೆರೆ ನಿಹಾರಿಕ ಪ್ರಕಾಶನ,
- **ಕಾಮತ್ ಸೂರ್ಯನಾಥ್ ಯು. (2022) :** ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಬೆಂಗಳೂರು ಎಂಸಿಸಿ ಪಬ್ಲಿಕೇಶನ್.
- **ಬಸವರಾಜ್ ಕೆ. ಆರ್. (2011) :** ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ,
- **Eshwarappa, M.G. (2009) :** Centennial DavangereChampalal 'B' Deliria, Davangere.
- **Foekema, Gerard (1996) :** Complete Guide to Hoysala Temples. New Delhi: Abhinav. ISBN 81-7017345-0.
- **Rice B. L. (2001) (1897) :** Mysore Gazetteer Compiled for Government-vol-2. New Delhi, Madras: Asian Educational Services. ISBN 81-206-0977-8.
- **Sundara (Ed.) (2004) :** Indian pre-History and Post-History, Mysore Archaeological Museum.

■■

– 10ನೇ ಪುಟದಿಂದ ಮುಂದುವರೆದುದು

ಕಾವ್ಯ. ಬೆದಂಡೆಯಲ್ಲೂ ಮಾತ್ರ ವೃತ್ತಗಳಿಂದ ಕೂಡಿದ ಕಾವ್ಯದ ಸಾಲುಗಳಿವೆ. ಮಾತ್ರೆಗಳ ಲೆಕ್ಕಾಚಾರ ಪ್ರಧಾನವಾಗಿಕಂಡು ಬಂದಿದೆ. ಬೆದಂಡೆಯ ಮೂಲವನ್ನು ಕಿಟ್ಟೆಲ್ ತನ್ನ ನಿಘಂಟಿನಲ್ಲಿ ವೈದಂಡಿಕದ ತದ್ಭವರೂಪವಾಗಿದೆ ಎಂದಿದ್ದಾನೆ. ದಂಡಿಕಾ, ದಂಡಿಗೆ ಎನ್ನುವುದು ವೀಣೆಯದಂಡವೆಂದು ತಿಳಿಯಬೇಕೆಂದು ತಿಳಿಸಿದ್ದಾನೆ. ವೀಣೆಯ ದಂಡವಿಲ್ಲದೇ, ಹಿಮ್ಮೇಳವಿಲ್ಲದೆ ಹಾಡುವ ಪ್ರಭೇದವೇ ಬೆದಂಡೆಯಾಗಿರುತ್ತದೆ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಜನಪದ ಹಾಡುಗಳು ದೇಸೀ ವಾದ್ಯಗಳಾದ ತಂಬೂರಿ, ಕಂಸಾಳೆ ಇನ್ನಿತರಗಳಿಂದ ಹಾಡಲ್ಪಡುತ್ತದೆ. ವೀಣೆಯು ಶಿಷ್ಟರ ಸಾಂಪ್ರದಾಯಿಕ ಶಾಸ್ತ್ರೀಯ ಸಂಗೀತಕ್ಕೆ ಬಳಸುವ ವಾದ್ಯವಾಗಿರುವುದರಿಂದ ಬೆದಂಡೆ ವೀಣೆಯ ಸಹಕಾರವಿಲ್ಲದೇ ಹಾಡುವಂಥದ್ದೆಂದು ತಿಳಿಯಬಹುದಾಗಿದೆ. ಶಬ್ದಮಣಿ ದರ್ಪಣದಲ್ಲಿ ಕೇಶೀರಾಜನು ಬೆದಂಡೆಗೆ ವೈದಂಡಿಕಂ ಎಂಬ ಪದವನ್ನು ಸೂಚಿಸಿದ್ದಾನೆ. ಇಂತಹ ಕೃತಿಗಳಲ್ಲಿ ಬೆದಂಡೆಯ ಸಂಕ್ಷಿಪ್ತ ವಿಷಯಗಳನ್ನು ತಿಳಿಯಬಹುದಷ್ಟೇ. ನಮಗೆ ಬೆದಂಡೆಕಾವ್ಯ ಪ್ರಕಾರದ ಬಗ್ಗೆ ವಿಸ್ತೃತವಾದ ವಿಷಯ ವಿಶ್ಲೇಷಣೆ ದೊರೆಯುವುದು ಕವಿರಾಜ ಮಾರ್ಗದಲ್ಲಿ ಮಾತ್ರ. ಇಂದಿನ ಸಾಹಿತ್ಯ ಸಂದರ್ಭದಲ್ಲಿ ಬೆದಂಡೆ ಪದ ಪ್ರಕಾರವಿಲ್ಲದಿದ್ದರೂ ಜನಪದ ಕಾವ್ಯದ ತುಣುಕುಗಳನ್ನು ಗಮನಿಸಿದರೆ ಬೆದಂಡೆಯ ಮುಂದುವರೆದ ಕಾವ್ಯ ಪ್ರಭೇದಗಳನ್ನು ಕಾಣಲು ಸಾಧ್ಯವಿದೆ. ಪೂರ್ವದ ಹಳಗನ್ನಡ, ಹಳಗನ್ನಡದ ವೇಳೆಯಲ್ಲಿ ಬೆದಂಡೆ ಪ್ರಕಾರತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತು. ಅಂದಿನ ಜಾಯಮಾನ ಸಂಸ್ಕೃತ ಭೂಯಿಷ್ಟವಾದ ಸಾಹಿತ್ಯವಾಗಿದ್ದರೂ ಹಾಡುಗಬ್ಬಗಳಿಗೆ ಪ್ರಮುಖವಾದ ಪ್ರಾಧಾನ್ಯತೆಯನ್ನು ನೀಡಿದ್ದರು ಎನ್ನುವುದಕ್ಕೆ ಬೆದಂಡೆರೂಪ ದಾಖಲೆಯಾಗಿದೆ. ಕಂದಪದ್ಯ, ಮಾತ್ರಾವೃತ್ತಗಳು, ತ್ರಿಪದಿ, ಚೌಪದಿ ಮೊದಲಾದ ಛಂದಸ್ಸಿನ ಪ್ರಕಾರಗಳಿಂದ ಹಾಡುವಂಥಹ ಕಾವ್ಯವಾದ ಬೆದಂಡೆಯೂ ಕವಿರಾಜ ಮಾರ್ಗದಲ್ಲಿ ಲಕ್ಷಣ ಸಹಿತಯಿದ್ದರೂ ಬೆದಂಡೆ ಗಬ್ಬಗಳು ಯಾವುವು ಎಂದು ನಿಖರವಾಗಿ ಹೇಳಲು ಯಾವ ಕೃತಿಗಳು ಉಪಲಬ್ಧವಿಲ್ಲ. ಹಾಗಾಗಿ ಬೆದಂಡೆ ಕಾವ್ಯ ಪ್ರಕಾರ ಕೇವಲ ಲಾಕ್ಷಣಿಕ ಗ್ರಂಥದಲ್ಲಿ ಉಳಿದುಕೊಂಡಿದೆ. ಕವಿರಾಜ ಮಾರ್ಗ ಕೃತಿಯಲ್ಲಿ

"ಪಾಡುಗಳಿಂದಂ ತಲುಪಲೆ
ಮಾಡಿದುದಂ ಪಾಡುಗಬ್ಬಮೆಂದು ಬುಧರ್ ಕೊಂ
ಡಾಡುವರಿನ್ನದುದಲ್ ಮೆ
ಲ್ವಡುಂರೂಢಿಯಬೆದಂಡೆಗಬ್ಬಮುಮಕ್ಕುಂ"

ಎಂಬ ಪದ್ಯದ ಭಾಗದಲ್ಲಿ ಶ್ರೀವಿಜಯನು ಬೆದಂಡೆಯ ಬಗ್ಗೆ ಬುಧರು ಹಾಡುಗಳಿಂದ ರಚಿಸಿದ ಹಾಡುಗಳನ್ನು ಹಾಡಿದರೆಂದು ಹಾಗೂ ಆ ಹಾಡುಗಳೇ ರೂಢಿಯಾಗಿ ಬೆದಂಡೆಗಬ್ಬವಾಯಿತೆಂದು ತಿಳಿಸಿದ್ದಾರೆಂದು ಅಭಿಪ್ರಾಯಪಟ್ಟಿದ್ದಾನೆ. ಬೆದಂಡೆಯ ಮೂಲ ನನಗನಿಸಿದಂತೆ ಜನಪದ ಗೀತೆ ಮೌಖಿಕವಾಗಿದ್ದು ಹಾಡುವುದರೊಂದಿಗೆ ಸಾಮೂಹಿಕ ಗೀತೆಯಾಗಿ ಪರಿವರ್ತನೆಯಾಗುತ್ತದೆ. ಇದರಂತೆ ಬೆದಂಡೆಯೂ ಕೂಡ ಜನಪದ ಗೀತೆಯಂತೆ ಹಾಡುಗಬ್ಬವಾಗಿರಬಹುದು ಎಂದೆನಿಸುತ್ತದೆ. ನಾಗವರ್ಮನ ಪ್ರಕಾರಕಂದ, ವೃತ್ತಜಾತಿ ಸೇರಿ ಪದವಾಗಿ ಹನ್ನೆರಡು ಪರ್ಯಂತ ಸೇರಿ ಮೇಲ್ವಾಡುಆಗುತ್ತದೆ ಹಾಗೂ ಹದಿನೈದರಿಂದಇಪ್ಪತ್ತೈದರವರೆಗೂ ಪದಗಳು ಸೇರಿ ರಸಾಲಂಕಾರಗಳಿಂದ ಪಾಡುಗಬ್ಬವಾಗುತ್ತದೆ. ಪಾಡುಗಬ್ಬವಾದ ಮೇಲ್ವಾಡು ಬೆದಂಡೆಯಾಗುತ್ತದೆ ಎಂಬುದಾಗಿ ನಾಗವರ್ಮ ತಿಳಿಸಿದ್ದಾನೆ. ಬೆದಂಡೆಯಲ್ಲಿ ಕಥೆಯೂ ಪ್ರಧಾನವಾಗಿ ಕಾವ್ಯರೂಪವಾಗಿ ಮುಂದುವರೆಯುವುದ ರಿಂದ ಬೆದಂಡೆ ಕಥಾರೂಪಕವಾಗಲು ಸಾಧ್ಯವಿದೆ ಎಂಬುದನ್ನು ನಾಗವರ್ಮನಿಂದ ತಿಳಿಯಬಹುದಾಗಿದೆ. ಜನಪದ ಲಾವಣಿ ಹೇಗೆ ಕಥಾತ್ಮಕವಾಗಿ ಹಾಡಿನ ಮೂಲಕ ಹಿಮ್ಮೇಳ ಮುಮ್ಮೇಳದೊಂದಿಗೆ ಹಾಡಲ್ಪಡುವುದೋ ಹಾಗೇ ಬೆದಂಡೆಯೂ ಅಕ್ಷರ ರೂಪದಲ್ಲಿ ರೂಪಿತವಾಗಿರಬಹುದಾಗಿದೆ. ಬೆದಂಡೆ ಕಾವ್ಯ ಪ್ರಕಾರದ ಲಕ್ಷಣವನ್ನು ಹೀಗೆ ಗ್ರಹಿಸಬಹುದು.

ಒಟ್ಟಾರೆಯಾಗಿ ಚತ್ತಾಣ–ಬೆದಂಡೆಗಳು ಕನ್ನಡ ಸಾಹಿತ್ಯ ವಾಙ್ಮಯದಲ್ಲಿ ಅವಳಿಗಳಿದ್ದಂತೆ. ಒಂದಕ್ಕೊಂದು ಎಡೆಬಿಡದೇ ಹಾಡುಗಬ್ಬಗಳಾಗಿ ಅಂದು ಮುಂದುವರೆದಿವೆ. ಚತ್ತಾಣವಾಗಲಿ, ಬೆದಂಡೆಯಾಗಲೀ ನಮಗೆ ಅವುಗಳ ಕುರುಹು, ಲಕ್ಷಣಗಳನ್ನು ತಿಳಿಯಲು ಶ್ರೀವಿಜಯನ ಕವಿರಾಜ ಮಾರ್ಗವೊಂದೇ ದೊರಕಿರುವ ಕೃತಿಯಾಗಿದೆ. ಇದರಿಂದ ಮಾತ್ರ ಚತ್ತಾಣ–ಬೆದಂಡೆ ಕಾವ್ಯರೂಪಗಳಿದ್ದವೆಂದು ಖಾತ್ರಿಯಾಗಿದೆ. ಇವುಗಳ ಲಕ್ಷಣಗಳು ಕಂದ, ತ್ರಿಪದಿ, ದ್ವಿಪದಿ, ಚೌಪದಿಗಳಿಂದಾದ ಸಾಲುಗಳ ರಚನೆ ಹಾಗೂ ಹಾಡುವ ಕಾವ್ಯಗಳಾಗಿರುತ್ತವೆ ಎಂಬುದಾಗಿ ತಿಳಿಯಬಹುದಾಗಿದೆ ಅಷ್ಟೇ. ಆದರೆಚತ್ತಾಣ–ಬೆದಂಡೆಕಾವ್ಯ ಪ್ರಭೇಧಗಳು ಇಂದಿಗೂ ಚಾಲ್ತಿಯಲ್ಲಿ ಇವೆಯೇ ಎಂದು ಪ್ರಶ್ನಿಸಿಕೊಂಡರೆ ಅವುಗಳ ರಚನೆಯಿಲ್ಲದಿದ್ದರೂ ಇಂದಿನ ಕವಿಗಳು ನಾಲ್ಕು ಸಾಲಿನ ಕವಿತೆ, ಎರಡು ಸಾಲಿನ ಕವಿತೆ, ಆರು ಸಾಲಿನ ಹನಿಗವನಗಳನ್ನು ಬರೆಯುತ್ತಿರುವುದು ಸರಿಯಷ್ಟೇ. ಕಾಲಕ್ಕೆ ತಕ್ಕಂತೆ ಹಳೆಯ ಪ್ರಕಾರಗಳು ಮುಂದುವರೆಯದಿದ್ದರೂ ನವನವೀನ ಕಾವ್ಯ ಪ್ರಕಾರಗಳು ಹುಟ್ಟುತ್ತಿವೆ. ಚತ್ತಾಣ–ಬೆದಂಡೆ ಕಾವ್ಯ ಪ್ರಭೇಧಗಳು ಶ್ರೀವಿಜಯನ ಪ್ರಕಾರ ದೇಸೀ ಗಬ್ಬಗಳಾಗಿವೆ. ಅವುಗಳ ಸಂಪೂರ್ಣವಾದ ಸ್ವರೂಪ, ಲಕ್ಷಣಗಳನ್ನು ಅರಿಯಲು ಇಂದಿಗೂ ಸಾಧ್ಯವಾಗಿಲ್ಲ. ಅವುಗಳು ಅಲ್ಲಲ್ಲಿ ಕಾಣಿಸಿಕೊಂಡರೂ ಅವುಗಳಿಂದಾದ ಕೃತಿಗಳು ಲಭ್ಯವಾಗಿಲ್ಲ. ಆದರೂ ಚತ್ತಾಣ–ಬೆದಂಡೆ ಕಾವ್ಯರೂಪಗಳು ಅಸ್ತಿತ್ವದಲ್ಲಿದ್ದವೆಂದು ಗ್ರಾಹ್ಯವಾಗಿದೆ.

ಪರಾಮರ್ಶನ ಗ್ರಂಥಗಳು

- **ಕೆ. ವಿ. ಸುಬ್ಬಣ್ಣ :** ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು ವಿಶ್ವಕನ್ನಡ ಸಮ್ಮೇಳನ ಸಾಹಿತ್ಯಮಾಲೆ
- **ಎಂ.ಎಂ. ಕಲಬುರ್ಗಿ :** ಕವಿ ರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪ್ರಕಾಶಕರು ಬೆಂಗಳೂರು ಸ್ವಪ್ನ ಬುಕ್ ಹೌಸ್, 3ನೇ ಮುಖ್ಯರಸ್ತೆ, ಗಾಂಧೀನಗರ.
- **ನಾಡೋಜ ಪ್ರೊ. ಹಂಪ ನಾಗರಾಜಯ್ಯ :** ಶ್ರೀವಿಜಯ ವಿರಚಿತ ಕವಿರಾಜ ಮಾರ್ಗಂ, ಹೊಸ ಶೋಧದ ಬೆಳಕಿನಲ್ಲಿ, ಬೆಂಗಳೂರು ಸ್ವಪ್ನ ಬುಕ್ ಹೌಸ್, 3ನೇ ಮುಖ್ಯರಸ್ತೆ, ಗಾಂಧೀನಗರ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರ ಮೈಲಾರ ಮಹದೇವಪ್ಪ

✍ ಡಾ. ಶಶಿಕುಮಾರ್ ಬಿ. ಎಸ್., ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು–ತಿಪಟೂರು.

ಭಾರತ ದೇಶ ಸ್ವಾತಂತ್ರ್ಯ ಪಡೆದ 75 ನೇ ವರ್ಷದ ಅಮೃತ ಮಹೋತ್ಸವದ ಖುಷಿಯಲ್ಲಿದೆ. ಈ ಸಂಭ್ರಮಕ್ಕೆ ಕಾರಣವಾದವರು ಲೆಕ್ಕವಿಲ್ಲದಷ್ಟು ಸ್ವಾತಂತ್ರ ಹೋರಾಟಗಾರರು. ಭಾರತ ದೇಶವನ್ನು ಬ್ರಿಟೀಷರ ಹಿಡಿತದಿಂದ ಮುಕ್ತಗೊಳಿಸಲು ನಡೆಸಿದ ಸ್ವಾತಂತ್ರ ಸಂಗ್ರಾಮದ ಹೋರಾಟವು ದೇಶದ ಇತಿಹಾಸದಲ್ಲಿ ನಡೆದ ಅತಿ ಮುಖ್ಯವಾದ ಅಧ್ಯಾಯವಾಗಿದೆ. ದೇಶದ ಹಲವು ಸ್ವಾತಂತ್ರ ಹೋರಾಟಗಾರರು ಬೇರೆ ಯಾವುದೇ ವೈಯಕ್ತಿಕ ಹಿತಚಿಂತನೆಗೆ ಗಮನನೀಡದೆ ಹೋರಾಟದಲ್ಲಿ ಭಾಗಿಯಾದರು. ಇಂತಹ ಹೋರಾಟಗಾರರಲ್ಲಿ ಯುವಕರ ಸಂಖ್ಯೆ ಅಪಾರವಾಗಿತ್ತು. ಇವರು ತಮ್ಮ ಕೌಟುಂಬಿಕ ಜವಾಬ್ದಾರಿಗಳನ್ನು ತೊರೆದು ಬ್ರಿಟೀಷರ ಲಾಟಿ ಏಟು, ಜೈಲು ಶಿಕ್ಷೆ, ಗುಂಡಿನೇಟಿಗೂ ಅಂಜದೆ, ಯಾವುದೇ ಫಲಾಪೇಕ್ಷೆಗಳಿಲ್ಲದೆ ದೇಶದ ಬಿಡುಗಡೆಗೋಸ್ಕರ ಹೋರಾಡುತ್ತಿದ್ದರು. ಇಂತಹ ಹೋರಾಟಗಾರರ ಪೈಕಿ ಹಾವೇರಿ ಜಿಲ್ಲೆಯ ಮೈಲಾರ ಮಹದೇವಪ್ಪ ಕೂಡ ಒಬ್ಬರು.

ಆರಂಭಿಕ ಜೀವನ : ಕರ್ನಾಟಕದ ಸ್ವಾತಂತ್ರ ಹೋರಾಟದಲ್ಲಿ ತಾನು ಸಾಯಬಹುದೆಂದು ತಿಳಿದೂ ಕೂಡ ಸ್ವಯಂ ಸ್ಫೂರ್ತಿಯಿಂದ ದೀಪಕ್ಕೆರಗಿದ ಹಾರುವ ಹುಳುವಿನಂತೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಹುತಾತ್ಮ ನಾಯಕರಲ್ಲಿ ನಮ್ಮ ಕರ್ನಾಟಕದ ಮೈಲಾರ ಮಹದೇವಪ್ಪ ಕೂಡ ಒಬ್ಬರು. ಇವರು ಜೂನ್ 8, 1911 ರಲ್ಲಿ ಇಂದಿನ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಮೋಟೆಬೆನ್ನೂರಿನ ರೈತ ಕುಟುಂಬದ ಮಾರ್ತಾಂಡಪ್ಪ ಮತ್ತು ಬಸವಮ್ಮ ದಂಪತಿಗಳ ಮಗನಾಗಿ ಜನಿಸಿದರು. ದೇವರ ಗುಡ್ಡದ ಶೂರ ದೇವರು ಮೈಲಾರನ ಭಕ್ತರಾಗಿದ್ದರಿಂದ ತಮ್ಮ ಮಗನಿಗೆ ಮೈಲಾರ ಮಹದೇವಪ್ಪ ಎಂದು ಹೆಸರಿಟ್ಟರು. ಸ್ವಗ್ರಾಮದಲ್ಲೇ ಪ್ರಾಥಮಿಕ ಶಿಕ್ಷಣ ಪಡೆದು, ಗರಡಿ ಮನೆಯಲ್ಲಿ ಕುಸ್ತಿ ಮಾಡಿ ಗಟ್ಟಿಮುಟ್ಟಾದ ದೇಹಹೊಂದಿದ್ದು, ತನ್ನ ಶಿಕ್ಷಕರಾದ ಕೆ.ಎಪ್. ಪಾಟೇಲರ ಪ್ರಭಾವದಿಂದ ದೇಶ ಸೇವಾಕಾರ್ಯದಲ್ಲಿ ತೊಡಗಲು ಮುಂದಾದರು.

ಸ್ವಾತಂತ್ರ ಚಳುವಳಿಯಲ್ಲಿ ಮಹದೇವಪ್ಪ : ಉತ್ತರ ಕರ್ನಾಟಕ ಭಾಗದಲ್ಲಿ ಬಾಲಗಂಗಾಧರ ತಿಲಕರು ದೇಶಾಭಿಮಾನ ಹರಡಲು, ಜನರನ್ನು ಒಂದುಗೂಡಿಸಲು ಹಿಂದುಗಳ ಮನೆಯಲ್ಲಿ ವಿನಾಯಕ ಜಯಂತಿ ಮತ್ತು ಶಿವಾಜಿ ಉತ್ಸವಗಳನ್ನು ಆಚರಿಸುವ ನೂತನ ಪದ್ಧತಿಗಳನ್ನು ಜಾರಿಗೆ ತಂದ ಪ್ರಭಾವದಿಂದಾಗಿ ಗಣೇಶೋತ್ಸವ ನಾಡಹಬ್ಬವಾಗಿ ಪರಿಣಮಿಸಿತು. ಇಂತಹ ವೇಳೆಯಲ್ಲಿ ಮೈಲಾರ ಮಹದೇವಪ್ಪ ನವರು ಕರಿಯಪ್ಪ, ಹುಚ್ಚಣ್ಣ ಮುಂತಾದ ಸ್ನೇಹಿತರೊಂದಿಗೆ ಸೇರಿಕೊಂಡು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದರು. ಒಮ್ಮೆ ಸಭೆಯೊಂದರಲ್ಲಿ **"ಪರೋಪಕಾರಿ"** ಎಂದು ಬಿರುಧಾಂಕಿತರಾಗಿದ್ದ ತರುಣ ಸಿದ್ಧಲಿಂಗ ಮಹಾಸ್ವಾಮಿಗಳು ವಿದೇಶಿ ಬಟ್ಟೆಯನ್ನು ಸುಟ್ಟರು, ಅಂದಿನಿಂದ ಮಹದೇವಪ್ಪನವರು ಖಾದಿಬಟ್ಟೆ ತೊಡಲು ಆರಂಭಿಸಿ, ಅಜೀವಪರ್ಯಂತ ಖಾದಿಧಾರಿಗಳಾದರು. ಹಾಗೆಯೇ ಹರ್ಡಿಕರ್ ಮಂಜಪ್ಪ, ಕಲ್ಲನಗೌಡ ಪಾಟೀಲ, ಹುಕ್ಕೇರಿಕರ್, ದಿವಾಕರ್ ಮೊದಲಾದ ದೇಶನಾಯಕರ ಭಾಷಣಗಳಿಂದ ಪ್ರೇರಿತರಾಗಿ ದೇಶಸೇವೆಗೆ ದುಮುಕಲು ಸಿದ್ದರಾದರು. ಇದೆ ವೇಳೆಯಲ್ಲಿ ಬಿ. ಹಿರೇಮಠರು ಸ್ಥಾಪಿಸಿದ್ದ ಭಾರತೀಯ ತರುಣರ ಸಂಘದ ಸದಸ್ಯರಾಗಿ ಸೇರಿದರು. ಈ ಸಂಘದಲ್ಲಿ ಇವರ ಉತ್ಸಾಹ ಕಂಡ ಗುದ್ಲೆಪ್ಪ ಹಳ್ಳಿಕೇರಿ ಎಂಬುವವರು ಗಂಗಾಧರರಾವ್ ದೇಶಪಾಂಡೆ ಮತ್ತು ಕೌಜಲಗಿ ಹನುಮಂತರಾಯರ ಪರಿಚಯ ಮಾಡಿಸಿದರು. ಮುಂದೆ ಕೌಜಲಗಿ ಹನುಮಂತರಾಯರು ಮಹದೇವಪ್ಪನವರನ್ನು ಗ್ರಾಮೋದ್ಯೋಗದಲ್ಲಿ ಹೆಚ್ಚು ಅನುಭವ ಪಡೆಯಲೆಂದು ಗಾಂಧೀಜಿಯವರ ಸಬರಮತಿ ಆಶ್ರಮಕ್ಕೆ ಕಳುಹಿಸಿಕೊಟ್ಟರು. ಇಲ್ಲಿ ತನ್ನ ವಿಧೇಯತೆ ಮತ್ತು ಸೇವಾ ಗುಣಗಳಿಂದ ಮಹದೇವರು ಗಾಂಧೀಜಿಯವರ ನೆಚ್ಚಿನ ಶಿಷ್ಯರಾದರು.

1924 ರ ಬೆಳಗಾವಿಯಲ್ಲಿ ಜರುಗಿದ ಭಾರತ ರಾಷ್ಟ್ರೀಯ ಕಾಂಗ್ರೇಸ್ ಅಧಿವೇಶನದ ಗಾಂಧಿಜಿಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಮಹದೇವಪ್ಪನವರು ಕೂಡ ಈ ಸಭೆಯಲ್ಲಿ ಹಾಜರಾಗಿದ್ದರು. ಮುಂದೆ 1930 ರಲ್ಲಿ ಗಾಂಧೀಜಿಯವರು ಚರಿತ್ರಾರ್ಹವಾದ ದಂಡಿ ಸತ್ಯಾಗ್ರಹ ಕೈಗೊಂಡರು. ಈ ಸತ್ಯಾಗ್ರಹಕ್ಕೆ ಆಯ್ದ 78 ಸದಸ್ಯರುಗಳಲ್ಲಿ ಕರ್ನಾಟಕದಿಂದ ಪಾಲ್ಗೊಂಡಿದ್ದ ಏಕಮಾತ್ರ ಹೋರಾಟಗಾರರಾಗಿದ್ದರು. ಈ ಹೋರಾಟದಲ್ಲಿ ಭಾಗಿಯಾಗಿದ್ದಕ್ಕಾಗಿ ನಾಲ್ಕು ತಿಂಗಳು ಜೈಲು ಶಿಕ್ಷೆಗೆ ಗುರಿಯಾಗಿದ್ದರು. ಮುಂದೆ ಗಾಂಧಿ–ಇರ್ವಿನ್ ಒಪ್ಪಂದದಿಂದಾಗಿ ಬಿಡುಗಡೆ ಪಡೆದರು.

ಗಾಂಧೀಜಿಯವರು 2ನೇ ದುಂಡುಮೇಜಿನ ಸಮ್ಮೇಳನದಲ್ಲಿ ಭಾಗಿಯಗಿ ಸಭೆಯಲ್ಲಿ ಉಂಟಾದ ದ್ವಂದ್ವ ನಿಲುವುಗಳಿಂದಾಗಿ ಬರಿಗೈಯಲ್ಲಿ ಹಿಂತಿರುಗಿ ಬಂದು ಕಾನೂನುಬಂಗ ಚಳುವಳಿಗೆ ಕರೆನೀಡಿದರು. ಈ ಕರೆಗೆ ದೇಶದಾದ್ಯಂತ ಲಕ್ಷಾಂತರ ಜನರು ಚಳವಳಿಗೆ ದುಮುಕಿ, ಬ್ರಿಟೀಷರಿಂದ ಬಂಧನಕ್ಕೆ ಒಳಗಾದರು. ಇದೆ ವೇಳೆ ಮೈಲಾರ ಮಹದೇವಪ್ಪನವರು, ಅವರ ತಾಯಿ ಬಸಮ್ಮನವರು, ಪತ್ನಿ ಸಿದ್ದಮ್ಮನವರು ಬಂಧನಕ್ಕೆ ಗುರಿಯಾದರು. 1930 ರಲ್ಲಿ ಆರಂಭವಾದ ಸಾಮೂಹಿಕ ಕಾನೂನುಬಂಗ ಚಳುವಳಿಯು ವೈಯಕ್ತಿಕ ಸತ್ಯಾಗ್ರಹವಾಗಿ ಬದಲಾದಾಗ ಮೈಲಾರ ಮಹದೇವಪ್ಪನವರು ಮತ್ತು ಅವರ ಪತ್ನಿ ಸಿದ್ದಮ್ಮ ಇಬ್ಬರು ಭಾಗವಹಿಸಿ 6 ತಿಂಗಳ ಬಂಧನಕ್ಕೆ ಒಳಗಾದರು. ಈ ವೇಳೆ ಪತಿ ಪತ್ನಿಯರನ್ನು ಒಂದೇ ಜೈಲಿನಲ್ಲಿ ಇರಿಸಲು ಇಷ್ಟಪಡದ ಸರ್ಕಾರ ಮಹದೇವಪ್ಪನವರನ್ನು ಬೆಳಗಾವಿಯ ಹಿಂಡಲಗ ಜೈಲಿನಲ್ಲಿಟ್ಟರೆ, ಸಿದ್ದಮ್ಮನವರನ್ನು ಅಹಮದಾಬಾದ್ ಜೈಲಿಗೆ ಕಳುಹಿಸಿತು.

1934 ರಲ್ಲಿ ಗಾಂಧೀಜಿಯವರು ಕಾನೂನುಬಂಗ ಚಳುವಳಿಯನ್ನು ಸ್ಥಗಿತಗೊಳಿಸಿ ಹರಿಜನೋದ್ಧಾರ ಕೆಲಸ ಕೈಗೊಂಡರು. ಇದಕ್ಕಾಗಿ ಅಖಿಲ ಭಾರತ ಪ್ರವಾಸ ಕೈಗೊಂಡರು. ಈ ವೇಳೆಯಲ್ಲಿ ಕರ್ನಾಟಕ್ಕೆ ಭೇಟಿ ನೀಡಿದ್ದಾಗ ಮೋಟೆಬೆನ್ನೂರಿಗೂ ಆಗಮಿಸಿದ್ದರು. ಈ ವೇಳೆಗೆ ಮಹದೇವರು ಇನ್ನು ಜೈಲಿನಲ್ಲೇ ಇದ್ದರು. ಮಹಾತ್ಮರು ಮಹದೇವರ ಮನೆಗೆ ಭೇಟಿ ನೀಡಿ ಮನೆಯವರ ಯೋಗಕ್ಷೇಮ ವಿಚಾರಿಸಿದರು. ಮಹದೇವರ ಪತ್ನಿ ಸಿದ್ದಮ್ಮನವರನ್ನು ಕರೆದುಕೊಂಡು ಹಿಂಡಲಗ ಜೈಲಿಗೆ ಹೋಗಿ ಮಹದೇವರನ್ನು ಭೇಟಿಮಾಡಿದರು.

ಹರಿಜನೋದ್ಧಾರ ಕೆಲಸದಲ್ಲಿ ಮಹದೇವರು : ಬಂಧನದಿಂದ ಮುಕ್ತರಾಗಿ ಹೊರಬಂದ ಮೇಲೆ ಹರಿಜನೋದ್ಧಾರ ಕೆಲಸ ಕೈಗೊಂಡರು. ನಾಡಿನ ಪರಿಸ್ಥಿತಿ ಗಮನಿಸಿ ಗುದ್ಲೇಪ್ಪ ಹಳ್ಳಿಕೇರಿಯವರು ಸ್ಥಾಪಿಸಿದ್ದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೊಸರಿತ್ತಿಯ ಗಾಂಧೀ ಆಶ್ರಮಕ್ಕೆ ಪತ್ನಿಯೊಂದಿಗೆ ತೆರಳಿ ಹರಿಜನ ಮತ್ತು ಅವರ ಮಕ್ಕಳ ಸೇವೆಯಲ್ಲಿ ತೊಡಗಿದರು. ಕೊರಡೂರಿನ ಆಶ್ರಮದಲ್ಲಿ ಗಾಂಧೀಜಿಯವರ ತತ್ತ್ವಗಳಂತೆ ಜನರಿಗೆ ಖಾದಿ ಗ್ರಾಮೋದ್ಯೋಗ, ಕೈಕಾಗದದ ತಯಾರಿಕೆ, ನೂಲುವುದು, ನೇಯುವುದು, ಬಣ್ಣಹಾಕುವ ಕಲೆಯನ್ನು ಅನೇಕರಿಗೆ ಕಲಿಸಿದರು. ಜೊತೆಗೆ ಆರೋಗ್ಯ ಪಾಲನೆ, ಶಿಕ್ಷಣ, ಶಿಸ್ತು, ಸಂಯಮಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತಿತ್ತು. ಹರಿಜನರನ್ನು ಸಹೋದರರಂತೆ ಕಾಣುತ್ತಾ ಅವರ ಕೇರಿಗಳಿಗೆ ತೆರಳಿ ಕುಡಿಯುವುದು, ಸತ್ತ ದನದ ಮಾಂಸ ತಿನ್ನುವುದು ಮೊದಲಾದ ದುರಭ್ಯಾಸಗಳನ್ನು ಬಿಡುವಂತೆ ಮನವರಿಕೆ ಮಾಡಲಾಗುತ್ತಿತ್ತು. ಕೊರಡೂರಿನ ಆಶ್ರಮದಲ್ಲಿನ ಪಾಠ ಪ್ರವಚನಗಳಿಗೆ ಬೇರೆ ಊರಿನಿಂದಲೂ ಜನ ಬರುತ್ತಿದ್ದರು. ಈ ಆಶ್ರಮದಿಂದಾಗಿ ಸುತ್ತ–ಮುತ್ತಲಿನ ಹಳ್ಳಿಗಳಿಗೂ ಹೊಸ ಚೇತನ ಬಂದಿತು. ಈ ಆಶ್ರಮದಲ್ಲಿ ತಯಾರಾದ ಖಾದಿಬಟ್ಟೆಯನ್ನು ಪ್ರಚಾರಪಡಿಸಲು ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದ ಬದನಾಳುವಿನ ಖಾದಿ ಕೇಂದ್ರಕ್ಕೆ ಕಳುಹಿಸಿಕೊಡಲಾಯ್ತು.

1940 ರಲ್ಲಿ ತಾಲ್ಲೂಕು ಕಾಂಗ್ರೇಸ್ ಸಮಿತಿ ಚುನಾವಣೆಗೆ ಸ್ಪರ್ಧಿಸಿ, ಸ್ವದೇಶಿ, ಸ್ವರಾಜ್ಯ, ಸ್ವಾತಂತ್ರ್ಯದ ಗುರಿ ಇವುಗಳ ಬಗ್ಗೆ ಪ್ರಚಾರ ಕೈಗೊಂಡು, ಚುನಾವಣೆಯಲ್ಲಿ ಗೆಲುವು ಸಾಧಿಸಿ ಹಾವೇರಿ ತಾಲ್ಲೂಕು ಕಾಂಗ್ರೇಸ್ ನ ಅಧ್ಯಕ್ಷರಾದರು. ಈ ವೇಳೆಗೆ ಜಗತ್ತು ಘೋರವಾದ 2ನೇ ವಿಶ್ವಯುದ್ಧಕ್ಕೆ ಒಳಗಾಯ್ತು. ಜಪಾನ್ ಹಠಾತ್ತನೆ ಏಷ್ಯಾದ ಮೇಲೆ ದಾಳಿ ನಡೆಸಿ ಮಲೇಷಿಯಾ, ಸಿಂಗಾಪುರ, ಬರ್ಮಾ, ಇಂಡೋನೇಷ್ಯ ಮುಂತಾದ ದೇಶಗಳನ್ನು ವಶಪಡಿಸಿಕೊಂಡು ಭಾರತದತ್ತ ಧಾವಿಸುತ್ತಿತ್ತು. ಈ ಸಮಯದಲ್ಲಿ ಬ್ರಿಟೀಷರು ಭಾರತದ ಬೆಂಬಲ ಕೇಳಿದಾಗ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡಿದರೆ ಯುದ್ಧದಲ್ಲಿ ಬೆಂಬಲ ನೀಡಲು ಸಾಧ್ಯವಾಗುವುದೆಂದು ಕಾಂಗ್ರೇಸ್ ಸರ್ಕಾರಕ್ಕೆ ತಿಳಿಸಿತು. ಆದರೆ ಬ್ರಿಟೀಷರು ಭಾರತಕ್ಕೆ ಸ್ವಾತಂತ್ರ ನೀಡಲು ಸಿದ್ಧರಿರಲಿಲ್ಲ, ಹೀಗಾಗಿ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು. ಆಚಾರ್ಯ ವಿನೋಬಭಾವೆಯವರು ಮೊದಲ ಸತ್ಯಾಗ್ರಹಿಯಾಗಿ ಆಯ್ಕೆಯಾಗಿ ಸತ್ಯಾಗ್ರಹ ಆರಂಬಿಸಿ ಬಂಧನಕ್ಕೆ ಗುರಿಯಾದರು. ಮುಂದೆ ರಾಷ್ಟ್ರೀಯ ಕಾಂಗ್ರೇಸ್‌ನ ಮುಖಂಡರುಗಳು ಒಬ್ಬೊಬ್ಬರಾಗಿ ಸತ್ಯಾಗ್ರಹ ಆರಂಬಿಸಿ ಬಂಧನಕ್ಕೆ ಗುರಿಯಾದರು. ಕರ್ನಾಟಕದಲ್ಲಿ ಮಹದೇವಪ್ಪನವರು ಸತ್ಯಾಗ್ರಹ ಆರಂಬಿಸಿ 1 ವರ್ಷದ ಬಂಧನಕ್ಕೆ ಒಳಗಾಗಬೇಕಾಯ್ತು.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಮಹದೇವಪ್ಪನವರು : ಗಾಂಧೀಜಿಯವರು ಆರಂಭಿಸಿದ ವೈಯಕ್ತಿಕ ಸತ್ಯಾಗ್ರಹ ಬ್ರಿಟೀಷರ ಮೇಲೆ ಯಾವುದೇ ಪರಿಣಾಮ ಬೀರದಿದ್ದಾಗ ಗಾಂಧೀಜಿಯವರು ರಾಷ್ಟ್ರೀಯ ಕಾಂಗ್ರೇಸ್‌ನ ಮುಖಂಡರುಗಳೊಂದಿಗೆ ಚರ್ಚಿಸಿ ಈ ಸನ್ನಿವೇಶದಲ್ಲಿ ಬ್ರಿಟೀಷ್ ಪ್ರಭುತ್ವವನ್ನು ಮಣಿಸಲು ಆಗಸ್ಟ್ 8, 1942 ರಂದು ಬ್ರಿಟೀಷರ ವಿರುದ್ಧ ಕಾರ್ಯಾಚರಣೆಗೆ ಕರೆನೀಡಿ, **"ಬ್ರಿಟೀಷರೇ ಭಾರತ ಬಿಟ್ಟು ತೊಲಗಿ"** ಎಂದು ಕರೆನೀಡಿದರು. ಇದೆ ಐತಿಹಾಸಿಕವಾದ **"ಚಲೇಜಾವ್ ಅಥವಾ ಕ್ವಿಟ್ ಇಂಡಿಯಾ ಚಳುವಳಿ"**. ಆದರೆ ಬ್ರಿಟೀಷ್ ಸರ್ಕಾರ ಇದಕ್ಕೆ ಕಿವಿಗೊಡದೆ ಮಹಾತ್ಮರನ್ನು ಸೇರಿದಂತೆ ದೇಶದ ಎಲ್ಲಾ ರಾಷ್ಟ್ರೀಯ ಕಾಂಗ್ರೇಸ್ ನ ಮುಖಂಡರುಗಳನ್ನು ಆಗಸ್ಟ್ 8 ಮತ್ತು 9ರಂದೇ ಬಂಧಿಸಿತು. ಈ ಸಮಯದಲ್ಲಿ ಗಾಂಧೀಜಿಯವರು ಕರೆ ನೀಡಿದ್ದ **"ಮಾಡು ಇಲ್ಲವೇ ಮಡಿ"** ಎಂಬುದು ದೇಶದಾದ್ಯಂತ ಸಂಚಲನದ ಅಲೆ ಸೃಷ್ಟಿಮಾಡಿತು. ಮಹಾತ್ಮರ ಬಂಧನದ ವಿಷಯ ದೇಶದ ಜನತೆಯ ಸಹನೆಯ ಕಟ್ಟೆಯೊಡೆಯುವಂತೆ ಮಾಡಿತು. ಈ ವೇಳೆ ಸರ್ಕಾರದ ಎಲ್ಲಾ ಕಾರ್ಯಗಳನ್ನು ವಿದ್ವಂಸ ಮಾಡಲು ಜನತೆ ಸ್ವಯಂ ಪ್ರೇರಿತರಾಗಿ ಸಿದ್ದರಾದರು. ಈ ಸಮಯದಲ್ಲಿ ಗಾಂಧೀಜಿಯವರ ಹಲವು ಅನುಯಾಯಿಗಳು ಭೂಗತರಾಗಿ ವಿನಾಶಕಾರಿ ಕೃತ್ಯಗಳಲ್ಲಿ ಭಾಗಿಯಾದರು.

ಇದೇ ವೇಳೆಯಲ್ಲಿ ಕರ್ನಾಟಕದಲ್ಲಿ ಮೈಲಾರ ಮಹದೇವಪ್ಪನವರು ಸಹಾ ತಮ್ಮ ನಾಯಕತ್ವದಲ್ಲಿ ವಿದ್ವಂಸಕ ಕೆಲಸಗಳಿಗೆ ತಮ್ಮನಾದ ಲಿಂಗಣ್ಣನನ್ನು ಜೊತೆಗೆ ಇತರ 20 ಜನ ಸದಸ್ಯರ ತಂಡವೊಂದನ್ನು ಸಿದ್ದಪಡಿಸಿಕೊಂಡರು. ಇವರೆಲ್ಲಾ ವೇಶ ಮರೆಸಿಕೊಂಡು ಮಹದೇವರ ನಾಯಕತ್ವದಲ್ಲಿ ಸವಣೂರು ರೈಲ್ವೆ ನಿಲ್ದಾಣದಿಂದ ಬೇರೆ ಸ್ಥಳಗಳಿಗೆ ಒಯ್ಯುತ್ತಿದ್ದ ಟಪಾಲು ವಾಹನಕ್ಕೆ ಕೆಲವರನ್ನು ಹತ್ತಿಸಿ, ಉಳಿದವರು ಹಲವು ಕಿ.ಮೀ. ದೂರದಲ್ಲಿ ಅಡಗಿ ಕುಳಿತಿದ್ದು, ವಾಹನ ರಸ್ತೆಯಲ್ಲಿ ಚಲಿಸುತ್ತಿದ್ದಾಗ ವಾಹನವನ್ನು ಅಡ್ಡಹಾಕಿ ಟಪಾಲು ಚೀಲಗಳನ್ನು ಕದ್ದು ಅದರಲ್ಲಿದ್ದ ದಾಖಲೆಗಳನ್ನು ಭಾರತ್ ಮಾತಾ ಕೀ ಜೈ ಎಂದು ಘೋಷಣೆ ಕೂಗುತ್ತಾ ಬೆಂಕಿ ಹಚ್ಚಿ ಸುಟ್ಟುಹಾಕಲಾಯ್ತು. ಪೋಲೀಸರಿಗೆ ವಿಷಯ ತಲುಪಿದ ಕೂಡಲೆ ದರೋಡೆ ತಂಡವನ್ನು ಹಿಡಿಯುವ ಪ್ರಯತ್ನ ಮಾಡಲಾಯ್ತು, ಆದರೆ ಈ ಪ್ರಯತ್ನ ಫಲಿಸಲಿಲ್ಲ. ಮುಂದುವರಿದು ಸರ್ಕಾರಿ ಕಟ್ಟಡಗಳನ್ನು ಜಖಂ ಮಾಡುವುದು, ಟೆಲಿಗ್ರಾಪ್ ತಂತಿ ಕತ್ತರಿಸುವುದು, ಸರ್ಕಾರಿ ದಾಖಲೆಗಳ ನಾಶ ಇವೇ ಮೊದಲಾದ ವಿನಾಶಕಾರಿ ಕೆಲಸಗಳಲ್ಲಿ ಮಹದೇವಪ್ಪನವರ ತಂಡ ನಿರತವಾಯಿತು. ಸ್ಥಳೀಯ ಜನರು ಈ ಗುಂಪಿಗೆ ಬೆಂಬಲ ಮತ್ತು ಸಹಕಾರ ನೀಡುತ್ತಿದ್ದರಿಂದ ಪೋಲೀಸರಿಗೆ ಇವರನ್ನು ಹಿಡಿಯುವುದು ಕಷ್ಟವಾಯಿತು. ಈ ಹೋರಾಟಗಾರರು ಬ್ರಿಟೀಷರಿಗೆ ದುಸ್ವಪ್ನದಂತೆ ಕಾಡುತ್ತಿದ್ದರು. ಈ ಗುಂಪು ಗುಡಿಗೇರಿ ರೈಲ್ವೇ ನಿಲ್ದಾಣವನ್ನು ಸುಡುವ ಮಾಹಿತಿ ತಿಳಿದು ಪೋಲೀಸರು ಅಲ್ಲಿಗೆ ಬಲವಾದ ಕಾವಲು ಹಾಕಿದಾಗ ಗುಡಿಗೇರಿ ರೈಲ್ವೇ ನಿಲ್ದಾಣವನ್ನು ಬಿಟ್ಟು ಸವಣೂರು ರೈಲ್ವೇ ನಿಲ್ದಾಣವನ್ನು ಬೆಂಕಿಗೆ ಆಹುತಿಮಾಡಿ ಸುಟ್ಟುಹಾಕಿದರು.

ಮಹದೇವಪ್ಪನವರು ಬಿಂದುಮಾದವ ಬುರ್ಲಿಯವರೊಡನೆ ಹಾವೇರಿಯ ಸುತ್ತಾಮುತ್ತಾ ವಿಧ್ವಂಸಕ ಕಾರ್ಯಗಳ ಯೋಜನೆ ರೂಪಿಸಿದರು. ಹೋರಾಟದ ಕಾರ್ಯವಿಧಾನಗಳನ್ನು ನಿಶ್ಚಯಿಸಲು ಆನವಟ್ಟಿ ಬಳಿಯ ಎಣ್ಣೆಕೊಪ್ಪಲಿನ ಮಲ್ಲಿಕಾರ್ಜುನ ಎಂಬುವರ ಮನೆಯಲ್ಲಿ ಸುಮಾರು 50 ರಿಂದ 60 ಜನ ಕಾರ್ಯಕರ್ತರು ಸೇರಿದ್ದರು. ಇದರಲ್ಲಿ ಕರಿಯಪ್ಪ ಸರಗೂರ, ವೀರಭದ್ರಪ್ಪ ನ್ಯಾಮತಿ, ಹಾಲಪ್ಪ ತೊಗರಿಸಿ, ಕೆ ಎಪ್ ಪಾಟೀಲ್, ದುಂದೂರು ವಕೀಲ, ವೆಂಕಟೇಶ ಮಾಗಡಿ ಮುಂತಾದವರು ಪ್ರಮುಖರು. ಯೋಜನೆಯಂತೆ ಬ್ಯಾಡಗಿ ರೈಲ್ವೇ ನಿಲ್ದಾಣವನ್ನು ಸುಡುವ ಯೋಜನೆಯನ್ನು ಕರಿಯಪ್ಪ ಸರಗೂರ, ತಿಮ್ಮನಗೌಡ ಮೆಣಸಿನ ಹಾಳ, ವೀರಭದ್ರಪ್ಪ ನ್ಯಾಮತಿಗೆ ಒಪ್ಪಿಸಲಾಯ್ತು. ಹಾಗೆಯೇ ಬೇರೆ ಸುಡುವ ಯೋಜನೆಗಳಿಗೆ ವಿವಿಧ ಕಾರ್ಯಕರ್ತರನ್ನು ನೇಮಿಸಿ ಅದರಂತೆ ಕೆಲಸಗಳು ನಡೆದವು.

ಸರ್ಕಾರದ ವಿರುದ್ಧ ದಮನಕಾರಿ ಚಟುವಟಿಕೆಗಳಲ್ಲಿ ತೊಡಗಲು ಧಾರವಾಡ ಜಿಲ್ಲೆಯ ದಕ್ಷಿಣಭಾಗದಲ್ಲಿ ನಾಲ್ಕು ಜನರಾದ ಕರಿಯಪ್ಪ ಸರಗೂರ, ತಿಮ್ಮನಗೌಡ ಮೆಣಸಿನಹಾಳ, ಶಿವಪ್ಪ ನೆಶ್ಟಿ, ಮೈಲಾರ ಮಹದೇವಪ್ಪನವರ ನಾಯಕತ್ವಗಳಲ್ಲಿ, ಬಲಭೀಮ, ಬಲವಂತ, ಕಭೀರ, ದಶರಥ ಎಂಬ ಗುಪ್ತನಾಮಗಳನ್ನು ಧರಿಸಿ ಹಿರೇಕೆರೂರು, ರಾಣಿಬೆನ್ನೂರು, ಹಾವೇರಿ, ಸವಣೂರುಗಳಲ್ಲಿ ತಮ್ಮ ಕಾರ್ಯಕ್ಷೇತ್ರವಾಗಿ ಮಾಡಿಕೊಂಡು ಅನೇಕ ಕಾರ್ಯಕರ್ತರೊಂದಿಗೆ ಹೋರಾಟಗಳಲ್ಲಿ ತೊಡಗಿದರು.

ಮಹಾದೇವನವರು ತಮ್ಮ ವೇಷ ಬದಲಾಯಿಸುತ್ತಾ ಕಾರ್ಯಕರ್ತರಿಗೆ ಕಾರ್ಯವಿಧಾನಗಳ ವಿವರಗಳ ಸಮಾಲೋಚನೆ ನಡೆಸುತ್ತಾ, ಧನ ಸಹಾಯ ನೀಡುತ್ತಾ, ಅವರನ್ನು ಹುರಿದುಂಬಿಸುತ್ತಾ ಹಗಲಿರುಳೆನ್ನದೆ ಹಾವೇರಿಯ 50 ರಿಂದ 60 ಕಿ. ಮೀ. ಉದ್ದಗಲದ ಕ್ಷೇತ್ರದಲ್ಲಿ ಅನೇಕ ವಿದ್ವಂಸಕ ಕೃತ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಹಾದೇವರು 13 ಅಕ್ಟೋಬರ್ 1942 ರಂದು ತಮ್ಮ ತಂಡದೊಂದಿಗೆ ಸೇರಿಕೊಂಡು ಹೊಸರಿತ್ತಿ ಅಂಚೆಯ ಟಪಾಲು ಲೂಟಿ ಮಾಡಿದರು. ಇದೇ ತಿಂಗಳ 16 ರಂದು ಹಾನಗಲ್

– 69ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾದಪ್ಪನ ಭಂಟ ಬೇಡರ ಕನ್ನಯ್ಯ

✍ ಡಾ. ಎಂ.ವೈ.ಶಿವರಾಮು, ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ–571401.

ಜಾನಪದ ಮಹಾಕಾವ್ಯಗಳಲ್ಲಿ ಮಲೆಯ ಮಾದೇಶ್ವರ ಕಾವ್ಯಕ್ಕೆ ಅಗ್ರಸ್ಥಾನವಿದೆ. ವಿಷಯ ಸಂಕೀರ್ಣತೆ ಹಾಗೂ ಬೃಹತ್‌ನಿಂದಾಗಿ ಮಹತ್ವ ಪಡೆದುಕೊಂಡಿದೆ. ಈ ಮಹಾಕಾವ್ಯವನ್ನು ಅವಲೋಕಿಸಿದಾಗ ನಮ್ಮ ಜನಪದರ ಕರ್ತೃತ್ವ ಶಕ್ತಿ ಹಾಗೂ ಸ್ಮರಣ ಶಕ್ತಿಗಳ ಅಗಾಧ ಪರಿಚಯವಾಗುತ್ತದೆ. ಇಲ್ಲಿನ ಭಾಷೆ, ಕಥೆಯ ನಿರೂಪಣೆ ಬಹಳ ಅಚ್ಚುಕಟ್ಟಾಗಿ ಒಂದು ಸಾಂಸ್ಕೃತಿಕ ಲೋಕದ ಅನಾವರಣವಾಗುತ್ತದೆ. ವಸ್ತು, ವಿಷಯದ ದೃಷ್ಟಿಯಿಂದಲೂ ಈ ಕಾವ್ಯ ಮಹತ್ವ ಪಡೆದುಕೊಂಡಿದೆ. ಇಡೀ ಕೃತಿಯು ನಮ್ಮ ಜನಪದ ಸಂಸ್ಕೃತಿಯನ್ನು ತನ್ನ ಒಡಲೊಳಗೆ ಗರ್ಭೀಕರಿಸಿಕೊಂಡಿದೆ. ಜನಪದ ಸಾಹಿತ್ಯದ ಅನರ್ಘ್ಯ ರತ್ನಗಳಲ್ಲಿ ಇದೂ ಒಂದಾಗಿದೆ. ಜನಪದರ ಜೀವನ ಕ್ರಮಗಳೊಡನೆ ಅವರ ಆಚಾರ, ವಿಚಾರಗಳ, ಬದುಕು, ಬವಣೆಗಳ ಮೇಲೆ ಬೆಳಕು ಚಲ್ಲುತ್ತದೆ. ಜಾನಪದ ಬ್ರಹ್ಮರೆನಿಸಿಕೊಂಡ ಡಾ. ಪಿ.ಕೆ. ರಾಜಶೇಖರ್ ಅವರು ಈ ಮಹಾಕಾವ್ಯವನ್ನು ಬಹಳ ಪರಿಶ್ರಮದಿಂದ ಸುವ್ಯವಸ್ಥಿತವಾಗಿ ಸಂಪಾದಿಸಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಈ ಕಾವ್ಯ ಬೃಹತ್ತು ಮತ್ತು ಮಹತ್ತುಗಳನ್ನು ಒಳಗೊಂಡಿರುವ ಅದ್ಭುತ ಕಾವ್ಯವಾಗಿದೆ. ಸಂಶೋಧಕರಿಗೆ, ಇತಿಹಾಸಕಾರರಿಗೆ, ಸಂಸ್ಕೃತಿ ತಜ್ಞರಿಗೆ, ಕುತೂಹಲಿಗಳಿಗೆ, ಸಾಹಿತ್ಯಾಸಕ್ತರಿಗೆ ಇನ್ನೂ ಅನೇಕರಿಗೆ ಅನೇಕ ವಿಧದ ಆಕರ ಗ್ರಂಥಗಳಾಗಿವೆ.

ಎಲ್ಲಾ ಜನಾಂಗಕ್ಕೂ ಇತಿಹಾಸವಿರುವಂತೆ ಬೇಡ ಜನಾಂಗಕ್ಕೂ ಚಾರಿತ್ರಿಕ ಹಿನ್ನೆಲೆ ಇದೆ. ನಾಯಕ, ವ್ಯಾದ, ಬೇಡ ಮುಂತಾದ ಹೆಸರುಗಳಿಂದ ಈ ಸಮುದಾಯವನ್ನು ಗುರುತಿಸುತ್ತಾರೆ. ವೇದ ಕಾಲದಿಂದಲೂ ಈ ಸಮುದಾಯ ಜೀವಿಸುತ್ತಿತ್ತು ಎನ್ನತ್ತಾರೆ. ವೇದ ಪದದಿಂದಲೇ ವ್ಯಾದ ಎಂಬ ಪದ ಹುಟ್ಟಿದೆ ಎಂದೂ, ಈ ವ್ಯಾದ ಪದಕ್ಕೆ ಸಂವಾದಿಯಾಗಿ ಬೇಡ ಪದ ಬಳಕೆಗೆ ಬಂದಿದೆ. ಬೇಟೆ ಎಂಬುದು ಬೇಡ ಪದದ ಮೂಲ ಪದವಾಗಿದೆ. 'ಬೇಡರ' ಎಂಬುದು ಉರ್ದು ಭಾಷೆಯ ಪದವಾಗಿದ್ದು ಉರ್ದುವಿನಲ್ಲಿ ಅದರರ್ಥ ಹೆದರದೇ ಇರುವ ಶೂರಜನ ಎಂದಿದೆ. ಬೇಟೆ ಎಂಬುದು ಅನಾದಿ ಕಾಲದಿಂದಲೂ ಮಾನವನ ಜೊತೆ ಜೊತೆಯಲ್ಲಿಯೇ ಸಾಗುತ್ತಿದೆ. ಬೇಟೆಗೂ ಮಾನವನಿಗೂ ಅವಿನಾಭಾವ ಸಂಬಂಧವಿದೆ. ಆದಿಮಾನವನ ಜೀವಿತದ ಸಂದರ್ಭದಲ್ಲಿ ಬೇಟೆ ಮಾನವರೆಲ್ಲರ ಕುಲಕಸುಬಾಗಿತ್ತು. ವೃತ್ತಿಗಳು ಹಾಗೂ ಮಾನವನ ಅಭಿರುಚಿಗಳು ವಿಸ್ತರಿಸಿದಂತೆ ಬೇಟೆಯೂ ಒಂದು ಸಮುದಾಯಕ್ಕೆ ಸೀಮಿತವಾಯಿತು. ನಮ್ಮ ಜಾತಿ ವವ್ಯಸ್ಥೆ ಕಸುಬಾದಾರಿತವಾಗಿ ನೆಲೆಗೊಂಡಂತೆ ಬೇಡ ಪದವೂ ಕೂಡ ಜಾತಿ ಪದವಾಗಿ ನೆಲೆಯೂರಿದೆ.

ಮಾದಪ್ಪ ತನ್ನ ಸೇವೆಗಾಗಿ ಅನೇಕ ಶಿಶು ಮಕ್ಕಳನ್ನು ಸಂಪಾದಿಸಿ ಕೊಂಡಿದ್ದನು. ಅವರಲ್ಲಿ ಬೇಡರ ಕನ್ನಯ್ಯನಿಗೆ ಅಗ್ರ ಸ್ಥಾನವಿದೆ. ಬೇಡರ ಕಣ್ಣಪ್ಪನೇ ಬೇಡರ ಕನ್ನಯ್ಯನಾಗಿರಬಹುದು. ಬೇಡರ ಕನ್ನಯ್ಯನು ಬ್ಯಾಡಗಂಪಣ ಸೀಮೆ ಬ್ಯಾಡ ನಾಯ್ಕನ ಮಗನಾಗಿ ಹುಟ್ಟುತ್ತಾನೆ. ಹುಟ್ಟುತ್ತಲೇ ತನ್ನ ಅಪ್ಪ ಅಮ್ಮನನ್ನು ಕಳೆದುಕೊಳ್ಳುತ್ತಾನೆ. ಬ್ಯಾಡಗಂಪಣನೇ ಈತನಿಗೆ ಬೇಡರ ಕನ್ನಯ್ಯ ಎಂದು ಹೆಸರಿಟ್ಟು ಸಾಕುತ್ತಾನೆ. ಈ ಬೇಡರ ಕನ್ನಯ್ಯ ಬಹಳ ಪರಾಕ್ರಮಿಯಾಗಿದ್ದನು. ಈತನ ಪರಾಕ್ರಮ ನೋಡಿ ಅನೇಕರು ಈರ್ಷ್ಯೆ ಪಡುತ್ತಿದ್ದರು. ಇದಕ್ಕಾಗಿ ಈತನ ಸಾಕು ತಂದೆ ಬ್ಯಾಡ ಗಂಪಣ್ಣ ತನ್ನ ಮಗನಿಗೆ ಒಬ್ಬನೇ ಬೇಟೆಗೆ ಹೋಗಬೇಕೆಂದು ಉಪದೇಶಿಸುತ್ತಾನೆ.

ಬೇಟೆಗಾಗಿ ಕಾಡಿಗೆ ಬಂದ ಬೇಡರ ಕನ್ನಯ್ಯನನ್ನು ಕಂಡ ಮಾದಪ್ಪ ಈತನನ್ನು ತನ್ನ ಶಿಶು ಮಗನಾಗಿ ಪಡೆದುಕೊಳ್ಳಬೇಕೆಂದು ನಿರ್ಧರಿಸುತ್ತಾನೆ. ಮಾದಪ್ಪ ಎಂದರೆ ಪವಾಡ ಪುರುಷ ಎಂಬ ನಂಬಿಕೆಯಿದೆ. ಮಾದಪ್ಪನ ಪವಾಡಗಳು ಅತ್ಯದ್ಭುತವಾದವುಗಳಾಗಿವೆ. ದೇವರಿಗೊಂದು ಅತೀತ ಶಕ್ತಿಯಿದೆ ಎಂಬ ನಂಬಿಕೆ ಇಂದಿಗೂ ಜೀವಂತವಾಗಿದೆ. ಮಾದಪ್ಪನೂ ಕೂಡ ದೇವಸಂತತಿಯವನಾದುದರಿಂದ ಆತನಲ್ಲಿಯೂ ನಮ್ಮ ಜನಪದರು ಅತೀತ ಶಕ್ತಿ ಇತ್ತೆಂದು ನಂಬಿದ್ದರು. ಇಂದಿಗೂ ಮಾದಪ್ಪನ ಭಕ್ತರು ಅಪಾರ ಜನರಿದ್ದಾರೆ. ಬೇಡರ ಕನ್ನಯ್ಯನನ್ನು ತನ್ನ ಶಿಶುಮಗನನ್ನಾಗಿ ಮಾಡಿಕೊಳ್ಳಲು ಪವಾಡ ಮೆರೆಯುತ್ತಾನೆ. ಬೇಡರ ಕನ್ನಯ್ಯನಿಗೆ ಯಾವುದೇ ಮೃಗ ಖಗಗಳು ದೊರಕದಂತೆ ಮಾಡುತ್ತಾನೆ. ಇದರಿಂದ ಕನ್ನಯ್ಯ ಬಹಳವಾಗಿ ಚಿಂತಿತನಾಗುತ್ತಾನೆ. ಮಾದಪ್ಪ ಬೇಟೆಗಾರನ ವೇಷ ತೊಟ್ಟು ಬರುತ್ತಾನೆ.

ಬೇಡರ ಕನ್ನಯ್ಯ ಬೇಟೆ ಸಿಗದೆ ಹತಾಶೆಯಿಂದ ಅಲೆದಾಡುತ್ತಿರುತ್ತಾನೆ. ಮಾದಪ್ಪ ತನ್ನ ಬರಗದ ಮೇಲೆ ಕುಳಿತು ಬೇಟೆಗೆ ಬರುತ್ತಾನೆ. ಬೇಡರ ಕನ್ನಯ್ಯ ಮತ್ತು ಮಾದಪ್ಪ ಇಬ್ಬರೂ ಬೇಟೆಯ ಹುಡುಕಾಟದಲ್ಲಿದ್ದರು. ಈ ಸಂದರ್ಭದಲ್ಲಿ ಮಾದಪ್ಪ ಮಾಯದ ಹಂದಿಯೊಂದನ್ನು ಸೃಷ್ಟಿಸುತ್ತಾರೆ. ಈ ಹಂದಿಗೆ ಬೇಡರ ಕನ್ನಯ್ಯ ತನ್ನ ಬಾಣ ಬಿಡುತ್ತಾನೆ. ಇಬ್ಬರಿಗೂ ಯಾರ ಬಾಣದಿಂದ ಹಂದಿ ಹತವಾಯಿತು ಎಂದು ವಾದ ಬೆಳೆಯತ್ತದೆ. ಇದು ಮಹಾಭಾರತದಲ್ಲಿ ಶಿವ ಮತ್ತು ಅರ್ಜುನನ ನಡುವಿನ ವಾಗ್ಯುದ್ಧದಂತಿದೆ. ಹಿಂದೆ ಇಂದಿನಷ್ಟು ಮನರಂಜನಾ ವೈವಿದ್ಯಗಳು ಇಲ್ಲದಿದ್ದ ಸಮಯದಲ್ಲಿ ಹಳ್ಳಿ ಹಳ್ಳಿಗಳಲ್ಲಿ ಮಹಾಭಾರತ, ರಾಮಾಯಣದ ಕಥೆಗಳು ಜನಜನಿತವಾಗಿದ್ದವು. ರಂಗದ ಮೇಲೆ ವಿವಿಧ ಪ್ರಸಂಗಗಳನ್ನು ಪ್ರದರ್ಶಿಸುತ್ತಿದ್ದರು. ರಾಮಾಯಣ ಮತ್ತು ಮಹಾಭಾರತದ ಕಥೆಯನ್ನು ಕೇಳದ ಜನಪದರೇ ಇರಲಿಲ್ಲ. ಹರಿಕಥೆ, ನಾಟಕ, ಕಾವ್ಯ ವಾಚನದ ಮೂಲಕ ಜನಮನ ಮುಟ್ಟುತ್ತಿದ್ದವು. ಬೇಡರ ಕನ್ನಯ ಹಾಗೂ ಮಾದಪ್ಪರ ನಡುವಿನ ಈ ಪ್ರಸಂಗಕ್ಕೆ ಮಹಾಭಾರತದ ಕಿರಾತಾರ್ಜುನೀಯ ಪ್ರಸಂಗದ ಪ್ರಭಾವವಿದೆ. ನಮ್ಮೆಲ್ಲಾ ಪುರಾಣ ಕಥೆಗಳು ಕೂಡ ಮಹಾಭಾರತ ಮತ್ತು ರಾಮಾಯಣದ ಪ್ರಭಾವಕ್ಕೆ ಒಳಗಾಗಿವೆ. ರಾಮಾಯಣ ಮತ್ತು ಮಹಾಭಾರತದ ಪ್ರಭಾವ ಎಲ್ಲದರ ಮೇಲೂ ದಟ್ಟ ಪ್ರಭಾವ ಬೀರಿವೆ. ಈ ಮಹಾಕಾವ್ಯಗಳ ಕುರಿತಷ್ಟು ಸಾಹಿತ್ಯ ರಚನೆ ಮತ್ತಾವ ಕಾವ್ಯಗಳ ಕುರಿತೂ ನಡೆದಿಲ್ಲ.

ನಾನು ಮೊದಲು ನೋಡಿದೆ, ನಾನು ಮೊದಲು ಬಾಣ ಪ್ರಯೋಗಿಸಿದೆ ಎಂದು ಇಬ್ಬರೂ ವಾದಿಸುತ್ತಾರೆ. ಮಾದಪ್ಪ ಕನ್ನಯ್ಯನಿಗೆ ನಿನಗೆ ಅರ್ಧ ಕೊಡುತೀನಿ ಎನ್ನುತ್ತಾನೆ. ಈ ಮಾತಿನಿಂದ ಕೆರಳಿದ ಕನ್ನಯ್ಯನು ಮಾದಪ್ಪನನ್ನು ಕಾಳಗಕ್ಕೆ ಕರೆಯುತ್ತಾನೆ. ತೊಡೆತಟ್ಟಿ ಕಾಲುಕೆರೆದು ಮಾದಪ್ಪನ ಮೇಲೆ ಎರಗುತ್ತಾನೆ. ಅಲ್ಲದೆ ಮಾದಪ್ಪನನ್ನು ಕೆಳಕ್ಕೆ ಬೀಳಿಸುತ್ತಾನೆ. ಆಗ ಮಾದಪ್ಪ 'ಹಣ್ಣಣ್ಣು ಮುದುಕನನ್ನು ಈ ರೀತಿ ಕೆಡಗುವುದು ತರವಲ್ಲ'

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂದು ತಿಳಿಹೇಳುತ್ತಾನೆ. ಕನ್ನಯ್ಯ ಬೇಡಿಕೊಂಡಿದ್ದರೆ ಕೊಡುತ್ತಿದ್ದೆ ಎನ್ನುತ್ತಾನೆ. ಆಗ ಮಾದಪ್ಪ ಸತ್ತು ಬಿದ್ದಿದ್ದ ಹಂದಿಗೆ ಜೀವ ನೀಡಿ ಓಡಿಸುತ್ತಾನೆ. ಆ ಕಾಡು ಹಂದಿಯನ್ನು ಕನ್ನಯ್ಯ ಹಿಂಬಾಲಿಸುತ್ತಾನೆ. ಆದರೆ ಮಾದಪ್ಪನ ಪವಾಡದಿಂದಾಗಿ ಅದು ಮಾಯವಾಗುತ್ತದೆ. ಹಂದಿ ಕನ್ನಯ್ಯನನ್ನು ಇನ್ನಿಲ್ಲದಂತೆ ಕಾಡುತ್ತದೆ. ರೋಜಾದ ಗುತ್ತಿಯಲ್ಲಿ ಅದು ಅವಿತುಕೊಳ್ಳುತ್ತದೆ. ಆಗ ಕನ್ನಯ್ಯ ರೋಜಾದ ಗುತ್ತಿಗೆ ಬಾಣದಿಂದ ಹೊಡೆಯುತ್ತಾನೆ. ಆ ಗುತ್ತಿಯಲ್ಲೇ ಮಾರುವೇಷದಲ್ಲಿದ್ದ ಮಾದಪ್ಪನ ಕಣ್ಣಿಗೆ ಆ ಬಾಣ ನಾಟಿಕೊಳ್ಳುತ್ತದೆ.

ಯಾರಪ್ಪ ಹೊಡುದೋರು–ಬಾಣ್ವ
ಯಾರಪ್ಪ ಹೊಡುದೋರು
ಸೂರರ ಮಗನೇನೊ ಕಣ್ಣಿಗೊಡುದೋನು
ಭಾರಿ ಬಂದಾ ! (ಮಲೆಯ ಮಾದೇಶ್ವರ,
ಸಂಪುಟ–ಒಂದು, ಪುಟ–310)

ಎಂದು ಗೋಳಾಡುತ್ತಾನೆ. ವೀರರ ಮಗ ನೀನು, ಶೂರರ ಮಗ ನಿನು ಮಾರಿಬ್ಯಾನೆ ತಂದಲ್ಲೋ ಎನ್ನುತ್ತಾನೆ. ಇದಕ್ಕೆ ಬೇಡರ ಕನ್ನಯ್ಯ ರೋಜಾದ ಮೆಳೆವಳಗೆ ನಿನ್ನ ವೋಜೇನು ಗಾಜಿನರಮನೆ ನಿರ್ಮಿಸಿಕೊಡುತ್ತೇನೆ ಎಂದು ಹೇಳುತ್ತಾನೆ. ಆಗ ಮಾದಪ್ಪ ನನ್ನ ಕಣ್ಣೋಯ್ತಲಪ್ಪ ಕಣ್ಣ ಕೊಟ್ಟು ಪುಣ್ಯ ಕಟುಕೊಪ್ಪ ಎಂದು ಹಲಬುತ್ತಾನೆ. ಕನ್ನಯ್ಯ ತನ್ನನ್ನೇ ಸೇವೆಗಿಟ್ಟುಕೊಳ್ಳಪ್ಪ ಎಂದು ನಿವೇದಿಸಿಕೊಳ್ಳುತ್ತಾನೆ. ಮಾದಪ್ಪ ನನಗೆ ಕಣ್ಣೇ ಬೇಕೆನ್ನುತ್ತಾನೆ. ಕನ್ನಯ್ಯ ತನ್ನ ಬಾಣದಿಂದ ಎಡಗಣ್ಣನ್ನೇ ಕಿತ್ತು ನೀಡುತ್ತಾನೆ. ಈ ಪ್ರಸಂಗ ಬೇಡರಕಣ್ಣಪ್ಪನ ಪ್ರಸಂಗವನ್ನೇ ಹೋಲುತ್ತದೆ. ಆಗ ಮಾದಪ್ಪ

ಬಲಗಣ್ಣು ಇಲ್ಲುವಲ್ಲೊ ಕನ್ನಯ್ಯ
ಬಲಗಣ್ಣು ಇಲ್ಲುವಲ್ಲೊ
ಬಲಗಣ್ಣ ಕೊಡೊ ಕನ್ನಯ್ಯ ನನ್ಗೆ
ಎಡಗಣ್ಣ ಕೊಟ್ಟಂಗೆ (ಮಲೆಯ ಮಾದೇಶ್ವರ,
ಸಂಪುಟ–ಒಂದು, ಪುಟ–311)

ಆಗ ಕನ್ನಯ್ಯನು ತನ್ನ ಎಡಗಾಲಿನ ಹೆಬ್ಬೆಟ್ಟನ್ನು ಗುರುತಿಗೆ ಮಾದಪ್ಪನ ಬಲಗಣ್ಣಿಗೆ ಮಡಗಿ ಬಲಗಣ್ಣನ್ನೂ ಕಿತ್ತು ಜೋಡಿಸುತ್ತಾನೆ. ಆಗ ಮಾದಪ್ಪ

ತುಂಬೀದ ಭಕ್ತ್ಯಲ್ಲೊ – ಕನ್ನಯ್ಯ
ಕಾಲನ್ನೆ ಮಡುಗ್ದಲ್ಲೊ
ತುಂಬೀದ ಭಕ್ತಿಯ ನಿನ್ನ ಸಿರುಪಾದ
ತುಂಬೇಯ ಹೂವಾಗಲೊ
(ಮಲೆಯ ಮಾದೇಶ್ವರ, ಸಂಪುಟ–ಒಂದು, ಪುಟ–312)

ಎಂದು ಹರಸುತ್ತಾರೆ. ಕನ್ನಯ್ಯನ ಸಮರ್ಪಿತ ಭಕ್ತಿಗೆ ಮೆಚ್ಚಿ ಆತನನ್ನು ರಕ್ಷಿಸಿ ತನ್ನ ಸಿಸು ಮಗನನ್ನಾಗಿ ಮಾಡಿಕೊಳ್ಳುತ್ತಾರೆ. ಇಲ್ಲಿ ಬೇಡರ ಕಣ್ಣಪ್ಪ ಮತ್ತು ಶಿವನ ನಡುವಿನ ಕಥೆಯನ್ನೇ ಬಳಸಿಕೊಂಡು ಬಹಳ ನಯವಾಗಿ ಜೋಡಿಸಿ ಅದ್ಭುತ ಸನ್ನಿವೇಶವನ್ನೇ ಸೃಷ್ಟಿಸಿದ್ದಾರೆ. ನಮ್ಮ ಜನಪದರು ಪೌರಾಣಿಕ ಸನ್ನಿವೇಶಗಳನ್ನು ಹಾಗೂ ಇತರ ಕಥೆಗಳನ್ನೂ ತಮ್ಮ ಬುದ್ದಿವಂತಿಕೆಯಿಂದ ಬಳಸಿಕೊಳ್ಳುತಿದುದಕ್ಕೆ ಈ ಪ್ರಸಂಗ ನಿದರ್ಶನವಾಗಿದೆ. ಮಹಾಭಾರತದ ಕಿರಾತಾರ್ಜುನೀಯ ಪ್ರಕರಣ ಹಾಗೂ ಬೇಡರ ಕಣ್ಣಪ್ಪನ ಕಥೆಯಿಂದಾಗಿ ಈ ಸನ್ನಿವೇಶ ರಸವತ್ತಾಗಿ ಮೂಡಿ ಬಂದಿದೆ.

ಮಾದಪ್ಪ ಹಲವು ಪರೀಕ್ಷೆಗಳ ಮೂಲಕ ತನ್ನ ಆಪ್ತ ಸಹಾಯಕನನ್ನು ನೇಮಿಸಿಕೊಳ್ಳುವ ಈ ಪರಿ ಇಂದಿಗೂ ಜೀವಂತವಾಗಿದೆ. ಬೇಡರ ಕನ್ನಯ್ಯನನ್ನು ಹಲವು ತೆರನಾಗಿ ಪರೀಕ್ಷಿಸಿ ಆತ ತನ್ನನ್ನು ತನ್ನ ಒಡೆಯನ ಸೇವೆಗಾಗಿ ತನ್ಮಯತೆಯಿಂದ ಸಮರ್ಪಿಸಿಕೊಳ್ಳುತ್ತಾನೆ ಎಂಬುದನ್ನು ಖಾತರಿಪಡಿಸಿಕೊಂಡು ಸಿಸು ಮಗನನ್ನಾಗಿ ಮಾಡಿಕೊಳ್ಳುತ್ತಾನೆ. ಸರ್ಕಾರಿ ಉದ್ಯೋಗಕ್ಕೆ ನೇಮಿಸಿಕೊಳ್ಳುವಾಗಲೂ ಕೂಡ ದೈಹಿಕ ಹಾಗೂ ಮಾನಸಿಕ ಆರೋಗ್ಯ, ಆತನ ಗುಣ ಮತ್ತು ನಡವಳಿಕೆ ಕುರಿತು ಆರಕ್ಷಕ ವರದಿ ಎಲ್ಲವನ್ನೂ ಪರೀಕ್ಷಿಸಲಾಗುತ್ತದೆ. ಅನೇಕರು ತಮ್ಮ ಆಪ್ತರನ್ನಾಗಿ ವ್ಯಕ್ತಿಗಳನ್ನು ನೇಮಿಸಕೊಳ್ಳುವಾಗ ಆತನ ಪೂರ್ವಾಪರಗಳನ್ನು ತಿಳಿದುಕೊಳ್ಳುವುದು ರೂಢಿಗತವಾಗಿದೆ. ಇಂದು ರಾಷ್ಟ್ರಪತಿ, ಪ್ರಧಾನ ಮಂತ್ರಿಗಳ ಅಂಗ ರಕ್ಷಕರನ್ನು ನೇಮಿಸಿಕೊಳ್ಳುವಾಗ ಅವರನ್ನು ವಿವಿಧ ರೀತಿಯಲ್ಲಿ ಪರೀಕ್ಷಿಸಿಯೇ ನೇಮಕ ಮಾಡಿಕೊಳ್ಳುತ್ತಾರೆ. ಹೀಗೆ ತಮ್ಮ ಆಪ್ತ ಸಹಾಯಕರನ್ನಾಗಿ ತಮ್ಮ ಸೇವೆಗೆ ನೇಮಿಸಿಕೊಳ್ಳುವ ಪದ್ದತಿ ಪರಂಪರಾನುಗತವಾಗಿ ನಡೆದುಕೊಂಡು ಬಂದಿದೆ. ಮಾದಪ್ಪನಿಗೆ ಬೇಡರ ಕನ್ನಯ್ಯನಂತೆ ಕಾರಯ್ಯ, ಬಿಲ್ಲಯ್ಯರೂ ಶಿಶು ಮಕ್ಕಳಾಗಿದ್ದರು. ಆದರೆ ಬೇಡರ ಕನ್ನಯ್ಯನ ಮೇಲಿದ್ದ ಕಕ್ಕುಲತೆ ಇತರರ ಮೇಲಿರಲಿಲ್ಲ. ಕನ್ನಯ್ಯ ಮಾದಪ್ಪನಿಗೆ ಬಲಗೈ ಭಂಟನಂತಿದ್ದನು. ಇಂದಿಗೂ ಈ ಬಲಗೈ ಭಂಟರು ತಮ್ಮ ನಾಯಕರ ಸೇವೆಗೆ ಸದಾ ಸನ್ನದ್ದರಾಗಿರುತ್ತಾರೆ. ಎಂತಹ ಕಠಿಣ ಕೆಲಸವಾದರೂ ಕೂಡ ಅದನ್ನು ಕಾರ್ಯಗತಗೊಳಿಸಲು ಸರ್ವ ರೀತಿಯ ಪ್ರಯತ್ನಗಳನ್ನು ಮಾಡುತ್ತಾರೆ.

ಬೇವಿನ್ಹಟ್ಟಿ ಕಾಳಮ್ಮನನ್ನು ಪರೀಕ್ಷಿಸಲು ಕಾರಯ್ಯನನ್ನು ಕಳುಹಿಸುತ್ತಾರೆ. ಆತ ಕಾಳಮ್ಮನ ಮನೆಗಿದ್ದ ಹಾವಿನ ಪಹರೆಯನ್ನು ಕಂಡು ಹೆದರಿ ಭಯದಿಂದ ಹಿಂದಿರುಗುತ್ತಾನೆ. ಇಂತಹ ಹಲವು ಸನ್ನಿವೇಶಗಳಲ್ಲಿ ಬೇಡರ ಕನ್ನಯ್ಯನನ್ನು ಧೈರ್ಯವಂತನಲ್ಲದ ರೀತಿಯಲ್ಲೇ ಚಿತ್ರಿಸಲಾಗಿದೆ. ಇದು ಮಾದಪ್ಪನ ಶೂರತ್ವ, ವೀರತ್ವಕ್ಕೆ ಕುಂದುಂಟಾಗಬಾರದು ಎಂಬುದೇ ಕಾರಣವಾಗಿದೆ. ಕಥಾ ನಾಯಕ ಇತರರಿಗಿಂತಲೂ ಶಕ್ತಿಶಾಲಿಯಾಗಿರಬೇಕು ಎಂದು ಎಲ್ಲಾ ಕಾಲಘಟ್ಟದಲ್ಲೂ ಜನ ಬಯಸುತ್ತಿದ್ದರು. ಅದಕ್ಕಾಗಿಯೇ ಕಥಾನಾಯಕ ಯಾವಾಗಲೂ ಇತರರಿಗಿಂತ ಅಸಾಧ್ಯವಾದುದನ್ನೇ ಮಾಡುತ್ತಾನೆ. ಇಂದಿನ ಸಿನಿಮಾಗಳೂ ಕೂಡ ಇದೇ ಮಾದರಿಯಲ್ಲಿ ನಿರ್ಮಾಣಗೊಳ್ಳುವುದನ್ನು ಕಾಣಬಹುದು. ಮಾದಪ್ಪ ತನ್ನ ಅಚ್ಚು ಮೆಚ್ಚಿನ ಶಿಶು ಮಗನಾದ ಬೇಡರ ಕನ್ನಯ್ಯನನ್ನು ಕರೆದು ಕೊಂಗರ ಪೂಜೆ ನನಗೆ ಸರಿ ಬರುವುದಿಲ್ಲ. ಆದುದರಿಂದ ನೀನು ನನಗೆ ಏಳು ಮಾನ ಎಳ್ಳನ್ನು ಕೊಡುವ ಭಕ್ತರನ್ನು ಪಡೆದು ಬಾ ಎಂದು ಆದೇಶಿಸುತ್ತಾರೆ. ಆಗ ಕನ್ನಯ್ಯ **"ಜಗದೊಡೆಯ ನಿಮಗೆ ಏಳ್ಮಾನ ಅಚ್ಚೆಳ್ ಕೊಡುವಂಥಾ ಭಕ್ತಾದಿಗಳು ಎಲ್ಲಿದ್ದರು ನನ್ನಪ್ಪ?"** ಎಂದು ಕೇಳುತ್ತಾನೆ. ಅದಕ್ಕೆ ಮಾದಪ್ಪ **"** ಕೇಳಪ್ಪ ನನಕಂದ ಸಿಸುಮಗನೆ ಬ್ಯಾಡ್ರು ಕನ್ನಯ್ಯ ಅಪ್ಪಾರ ದೂರ ಹೋಗುಬ್ಯಾಡ ಕಡುವಾಳದಕಟ್ಟೆ ಕಂಚುವಾಳದ ಬ್ವಾರೆ ಹುಟ್ಟರೆ ಕಲ್ಬಂಡೆ ಪಕ್ದಲ್ಲಿ ಬಾಣ್ಗಾರ್ ಕೆಬ್ಬೆಹೊಲ ನನಕಂದ ಬಾಣ್ಗಾರ್ ಕೆಬ್ಬೆಹೊಲದಲ್ಲಿ ಕೆಂಡೇಗೌಡನ ಮಡದಿ ಹೊನ್ನುಣ್ಸೆ ಬೇವುನ ಕಾಳಮ್ಮ ಇದ್ದಾಳೆ ಬಡಸ್ತನವಿದ್ದ ಆಕೆಗೆ ಸಿರಿತನ ಕೊಟ್ಟಿದ್ದೀನಿ ಆಕೆ ಈಗ ಸಿರಿತನದಲ್ಲಿ ಓಲಾಡ್ತಾವಳೆ ಬೇವುನ ಕಾಳಿಯ ಒಕ್ಕಲ ಪಡ್ಕೊಂಡು ಬಾ" ಎನ್ನುತ್ತಾನೆ. ಈ ಮಾತನ್ನು ಕೇಳಿದ ತಕ್ಷಣ ಭಯದಿಂದ ನಡಗುತ್ತಾನೆ. ಯಾಕೆ ಎಂದು ಮಾದಪ್ಪ ಕೇಳಿದಾಗ ಕನ್ನಯ್ಯ ಅವಳ ಭಯಂಕರವಾದ ದರ್ಪದ ನಡವಳಿಕೆ ಬಗ್ಗೆ ತಿಳಿಸುತ್ತಾನೆ. ಆಗ ಮಾದಪ್ಪನೇ ಸ್ವತಃ ಬೇವುನ ಕಾಳಮ್ಮನ ಧೃಡತೆಯನ್ನು ಪರೀಕ್ಷೆ ಮಾಡಲು ನಿರ್ಧರಿಸುತ್ತಾನೆ.

ಹೀಗೆ ತನೇ ಕರುಣಿಸಿದ ಸಿರಿತನದಲ್ಲಿ ತೇಲಾಡುತ್ತಿರುವ ಬೇವುನ ಕಾಳಮ್ಮನನ್ನು ಪರೀಕ್ಷಿಸಲು ತೀರ್ಮಾನಿಸಿದ ಮೇಲೆ ಅಲ್ಲಿಗೆ ಕಾಲ್ನಡಿಗೇಲಿ ಹೋದುದ್ದೇ ಆದ್ರೆ ನನ್ನ ಪುಟ್ಟ ಪಾದುವೆಲ್ಲ ನಲಗೋಯ್ತದೆ ಅದಕ್ಕಾ ಒಂದು ಬಣ್ಣದ ಬರ್ಗ ತರಲು ಹೇಳುತ್ತಾನೆ. ಈಗ ಕನ್ನಯ್ಯ ಮತ್ತಷ್ಟು ಚಿಂತೆಗೀಡಾಗುತ್ತಾನೆ. ಕೆಲಸಗಾರರ ಸಾಮರ್ಥ್ಯಕ್ಕೂ ಮಿಗಿಲಾದ, ಮಾಡಲು ಅಸಾಧ್ಯವಾದ ಕಾರ್ಯಗಳನ್ನು ಮಾಡಲು ಆದೇಶಿಸುತಿದ್ದ ಯಜಮಾನರ ನಡವಳಿಕೆ ಇದಾಗಿದೆ. ಯಾವುದೇ ಕಥೆಯಲ್ಲಿಯೂ ಕಥಾನಾಯಕ ಮಾತ್ರವೇ ಬಲಿಷ್ಠನೂ, ಬುದ್ದಿವಂತನೂ, ಚತುರೋಪಾಯಗಳನ್ನು ಬಲ್ಲವನೂ ಆಗಿರುತ್ತಾನೆ. ಅಂತೆಯೇ ಇಲ್ಲಿಯೂ ಮಾದಪ್ಪ ವೀರ, ಧೀರ, ಶೂರನಂತೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಚಿತ್ರಿತವಾಗಿದ್ದರೆ ಕನ್ನಯ್ಯ ಇವುಗಳಿಗೆ ವಿರುದ್ಧವಾಗಿ ಇದ್ದಾನೆ. ಮಾದಪ್ಪನಂತೆ ಪವಾಡ ಮೆರೆಯುವ ಶಕ್ತಿ ಕನ್ನಯ್ಯನಿಗಿಲ್ಲ. ಮಾದಪ್ಪ ಬೇವುನ್ಹಟ್ಟಿಗೆ ತೆರಳಲು ಹುಲಿ ತರಲೇಳಿದಾಗ " ಅಯ್ಯೋ ನನ್ನಪ್ಪಾಜಿ ನೀವೆಲ್ಲಾರ ಹೊಂಟ್ರಿ ಅಂದ್ರೆ ನನಗೆ ಇಪರೀತ್ಯಾಯ್ತದೆ ಬುದ್ಧಿ ಎತ್ತಲ್ಲ, ಎಮ್ಮಲ್ಲ, ದನಾ ಅಲ್ಲ, ಕರುವಲ್ಲ ಕಾಡಲ್ಲಿರುವಂತಾ ಮೃಗಜಾತಿ ಹುಲಿಯನ್ನು ಕೈಲ್ಲಮುಟ್ಟಿ ಹಿಡ್ಕಂಡ್ಬಾ ಅಂತೀರಲ್ಲ" ಎಂದು ಕಳಕಳಿಸುತ್ತಾನೆ. ಮಾದೇವನ ತಂಟೆ ತರವಲ್ಲ ಎಂದು ಚಿಂತಿಸುತ್ತಾನೆ. ಚಿಂತೆಗೀಡಾದ ಕನ್ನಯ್ಯನನ್ನು ಮಾದಪ್ಪ ಪ್ರಶ್ನಿಸುತ್ತಾನೆ. ಆಗ ತನಗೆ ಹುಲಿ ಕಂಡರೆ ಭಯವೆಂದು ತಿಳಿಸುತ್ತಾನೆ. ಆಗ ಮಾದಪ್ಪ ಮಾಯದ್ಡೊಳ್ಳ ಕೊಟ್ಟು ಧೈರ್ಯ ತುಂಬುತ್ತಾರೆ.

ಮಾದಪ್ಪ ಕನ್ನಯ್ಯನನ್ನು ಕಳುಹಿಸಿ ಸುಮ್ಮನೆ ಕೂರುವುದಿಲ್ಲ ಆತನ ಕರ್ತವ್ಯ ನಿಷ್ಠೆಯನ್ನು ಪರೀಕ್ಷಿಸುತ್ತಾನೆ. ಕನ್ನಯ್ಯನೂ ತನ್ನ ಒಡೆಯನ ಆಜ್ಞೆಯನ್ನು ಪಾಲಿಸದಿದ್ದರೆ ಆತ ಶಾಪ ನೀಡಬಹುದು ಅದರಿಂದ ಕಣ್ಣಿಂಗೋದತೋ, ಕಪಾಲವೇ ಸಿಡಿದೊದತೋ ಎಂದು ಹೆದರುತ್ತಾನೆ. ಇದಕ್ಕಾಗಿಯಾದರೂ ತಾನು ಹುಲಿಯನ್ನು ತರಲೇಬೇಕು ಎಂದು ಹಪಹಪಿಸುತ್ತಾನೆ. ಕುಂತೂರು ಮಠದ ಹಿರಿಯರು ಕೊಟ್ಟ ಹನ್ನೆರಡೆಜ್ಜೆ ಕೆಂಬುರುಗವನ್ನು ಹಿಡಿದು ತರುವಂತೆ ಮಾದಪ್ಪ ಹೇಳಿರುತ್ತಾರೆ. ಕನ್ನಯ್ಯನಿಗೆ ಮಾದಪ್ಪನ ಮಹಿಮಾ ಶಕ್ತಿಯ ಅರಿವಿದ್ದರೂ ಹುಲಿ ಮೇಲಿನ ಭಯ ಇನ್ನೂ ಇದ್ದೇ ಇತ್ತು. ಹುಲಿಗಳ ಹಿಂಡನ್ನು ಕಂಡು ಭಯದಿಂದ ಮರೆಯಾಗುತ್ತಾನೆ. ಅವುಗಳೆಲ್ಲಾ ಮಾದಪ್ಪನ ಮಹಿಮೆಯಿಂದ ಕೊತ್ತಿ ಮರಿಯಂಗಾಗ್ಬುಟ್ಟೋ. ಈಗ ಕನ್ನಯ್ಯನಿಗೆ ಧೈರ್ಯ ಬರುತ್ತದೆ. ಅವುಗಳ ಮೈದಡವಿ ಮಲ್ಗೆ ಹೂವಿನ ಮೊಕರಂಬ ಹಾಕುತ್ತಾನೆ. ಇಲ್ಲೂ ಕನ್ನಯ್ಯನ ಪೆದ್ದುತನ ಪ್ರದರ್ಶನವಾಗುತ್ತದೆ. ಮಾದಪ್ಪ ಹೇಳಿದ ಹುಲಿಯಷ್ಟನ್ನೇ ಹಿಡಿದು ತಾರದೇ ಗೊಂದಲವಾಗಿ ಮಾದಪ್ಪನೇ ಆತನಿಗಿಷ್ಟವಾದ ಬರಗವನ್ನು ಆತನೇ ಆಯ್ಕೆ ಮಾಡಿಕೊಳ್ಳಲೆಂದು ಎಲ್ಲಾ ಬರಗಗಳನ್ನು ಕುರುಬಗೌಡ ಮುನ್ಮುಂದೆ ಕುರುಗಳ ಬುಟ್ಕಂಡು ಹಿನುಹಿಂದೆ ಯಾವರೀತಿ ಹೋಗುತ್ತಾನೋ, ಅಂತೆಯೇ ಕನ್ನಯ್ಯನೂ ಹುಲಿಗಳನ್ನು ಕರೆದು ತರುತ್ತಾನೆ. ಇದನ್ನು ನೋಡಿ ಮಾದಪ್ಪ ಮದ್ದು ತಕ್ಕಂಡ್ಬಾ ಅಂದ್ರೆ ಮರನೇ ತಂದಿದ್ದೀಯಲ್ಲ ಎಂದು ಚೇಡಿಸುತ್ತಾನೆ. ಎಲ್ಲಾ ಕಾವ್ಯಗಳಲ್ಲೂ ಕಥಾನಾಯಕನೇ ಬುದ್ಧಿವಂತನಾಗಿದ್ದು, ಆತನ ಸೇವಕರು ಆತನಿಗಿಂತ ಕಡಿಮೆ ಬುದ್ಧಿವಂತರಾಗಿರುತ್ತಾರೆ. ಹೀಗೆ ಕನ್ನಯ್ಯನ ಸೇವೆ ಮಾದಪ್ಪನಿಗೆ ಮೀಸಲಾಗಿದ್ದು, ಮಾದಪ್ಪ ಆತನನ್ನು ಪೋಷಿಸುವ ಕೆಲಸವನ್ನು ಮಾಡುತ್ತಾನೆ.

ಯಜಮಾನಿಕೆ ಸಂಸ್ಕೃತಿ ಪ್ರಾಚೀನ ಕಾಲದಿಂದಲೂ ಅಸ್ಥಿತ್ವದಲ್ಲಿದೆ. ಬಲಿಷ್ಠರು ತಮ್ಮ ಸೇವೆಗಾಗಿ ದುರ್ಬಲರನ್ನು ದುಡಿಸಿಕೊಳ್ಳುತ್ತಾರೆ. ಇದು ಎಲ್ಲಾ ಕಾಲದಲ್ಲೂ ಅವ್ಯಾಹತವಾಗಿ ಬೆಳೆದು ಬಂದಿದೆ. ಇಂದಿಗೂ ಇದು ನಿರಂತರವಾಗಿ ಅಸ್ಥಿತ್ವದಲ್ಲಿದೆ. ಜೀತ ಎಂಬ ಅನಿಷ್ಟ ಪದ್ಧತಿ ಆಚರಣೆಯಲ್ಲಿತ್ತು. ಸಾಮಾನ್ಯವಾಗಿ ಈ ರೀತಿಯ ಸೇವೆಗೆ ನಿಲ್ಲುವವರು ಬಡವರು, ಮುಗ್ದರು, ದುರ್ಬಲರೇ ಆಗಿರುತ್ತಾರೆ. ಬಡವರು, ಮುಗ್ದರು, ದುರ್ಬಲರನ್ನು ಬಲಾಡ್ಯರು ಶೋಷಿಸುವುದು ಅನಾದಿ ಕಾಲದಿಂದಲೂ ಅವ್ಯಾಹತವಾಗಿ ನಡೆದು ಬಂದಿದೆ. ಇಪ್ಪತ್ತನೇ ಶತಮಾನದವರೆಗೂ ಗುಲಾಮ ಪದ್ಧತಿ ಅಮೇರಿಕಾದಂತಹ ಮುಂದುವರಿದ ದೇಶದಲ್ಲಿಯೇ ಬಳಕೆಯಲ್ಲಿತ್ತು. ಒಬ್ಬ ಮುಖಂಡನಿಗೆ ಅನೇಕ ಅನುಯಾಯಿಗಳಿರುತ್ತಾರೆ. ಈ ಅನುಯಾಯಿಗಳು ತಮ್ಮ ಯಜಮಾನನ ಸೇವೆಗೆ ಕಟಿಬದ್ಧರಾಗಿರುತ್ತಾರೆ. ಅವರ ಆದೇಶಗಳು ಎಂತಿರಲಿ, ಅವುಗಳ ಪಾಲನೆ ಮಾಡುವುದನ್ನೇ ತಮ್ಮ ಧ್ಯೇಯವಾಗಿಸಿಕೊಂಡಿರುತ್ತಾರೆ. ಇವರಲ್ಲಿಯೂ ಎಡಗೈ ಭಂಟ, ಬಲಗೈ ಭಂಟ ಎಂದು ಅತ್ಯಾಪ್ತರನ್ನು ಗುರುತಿಸಿ ಕರೆಯುತ್ತಾರೆ. ಇಂದು ರಾಜಕಾರಣಿಗಳು ಕೂಡ ತಮ್ಮ ನಿಷ್ಠರನ್ನು ಬಲಗೈ ಹಾಗೂ ಎಡಗೈ ಎಂದು ಗುರುತಿಸುತ್ತಾರೆ. ಇವರು ಯಜಮಾನನಿಗೆ ನಿಷ್ಠಾವಂತ ಸೇವಕರಾಗಿದ್ದು ಆತನ ಸೇವೆಯನ್ನು ವಿಶ್ವಾಸಪೂರ್ವಕವಾಗಿ ಮಾಡುತಿರುತ್ತಾರೆ. ಇವರಿಗೂ ಕೂಡ ಅವರ ಯಜಮಾನನಷ್ಟೇ ಪ್ರಾಮುಖ್ಯತೆ ಇರುತ್ತದೆ. ಯಜಮಾನನಿಂದ ಆಗಬೇಕಾದ ಕೆಲಸ ಕಾರ್ಯಗಳಿಗಾಗಿ ಇವರ ಹತ್ತಿರ ದಂಬಾಲು ಬೀಳುತ್ತಾರೆ.

ಪರಾಮರ್ಶನ ಗ್ರಂಥಗಳು

- **ಡಾ.ಪಿ.ಕೆ.ರಾಜಶೇಖರ (2006) :** ಮಲೆಯ ಮಾದೇಶ್ವರ : ಸಂಪುಟ–1 ಸಂ. ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- **ಡಾ. ಪಿ.ಕೆ. ರಾಜಶೇಖರ (2015) :** ಮಲೆಯ ಮಾದೇಶ್ವರ ಕಥಾ ಧಾರೆ ಮೈಸೂರು ಹೊನ್ನಾರು ಜನಪದ ಗಾಯಕರು.
- **ಜೀ.ಶಂ.ಪರಮಶಿವಯ್ಯ (1989) :** ಮೈಸೂರು ಜನಪದ ಸಾಹಿತ್ಯ ಸಮೀಕ್ಷೆ.
- **ಜೀ. ಶಂ. ಪರಮಶಿವಯ್ಯ, (1989) :** ದಕ್ಷಿಣ ಕರ್ನಾಟಕ ಜಾನಪದ ಕಾವ್ಯ ಪ್ರಕಾರಗಳು, ಮೈಸೂರು ಪ್ರಸಾರಾಂಗ.

■■

– 17ನೇ ಪುಟದಿಂದ ಮುಂದುವರೆದುದು

ಅಡಿ ಟಿಪ್ಪಣಿಗಳು

1. ಸುರಗಿ ಹಾಮಾನಾ 77
2. ನೆನಪುಗಳು ಸಾಯುವುದಿಲ್ಲ ಆರ್ ರಾಜಪ್ಪ ದಳವಾಯಿ 01 3. ನೆನಪುಗಳು ಸಾಯುವುದಿಲ್ಲ ಆರ್. ರಾಜಪ್ಪ ದಳವಾಯಿ 110
4. ನೆನಪುಗಳು ಸಾಯುವುದಿಲ್ಲ ಆರ್. ರಾಜಪ್ಪ ದಳವಾಯಿ 162
5. ಸಂಪ್ರತಿ–3 ಹಾಮಾನಾ 109
6. ಹಾಮಾನಾ ಅಭಿನಂದನ ಗ್ರಂಥ ಸಂ. ಎಸ್. ಎಲ್. ಭೈರಪ್ಪ ಹಾಗೂ ಪ್ರಧಾನ ಗುರುದತ್ 203

*1 . ಪರಿಶೋಧನಾತ್ಮಕ ಸಂಶೋಧನೆಯೆಂದರೆ : ಇದು ಹೊಸ ಸಮಸ್ಯೆಗಳಿಗೆ ಒಂದು ರಚನಾತ್ಮಕ ಚೌಕಟ್ಟು ಒದಗಿಸಿ ಹೊಸ ಸಮಸ್ಯೆಗಳನ್ನು ಗುರುತಿಸುತ್ತದೆ.

*2 . ರಚನಾತ್ಮಕ ಸಂಶೋಧನೆ ಎಂದರೆ : ಇದು ಸಮಸ್ಯೆಯೊಂದಕ್ಕೆ ಪರಿಹಾರಗಳನ್ನು ಗುರುತಿಸುತ್ತದೆ.

ಪರಾಮರ್ಶನ ಗ್ರಂಥಗಳು

- **ಹಾಮಾನಾ (1987) :** ಸಂಪ್ರತಿ ಬೆಂಗಳೂರು, ಐ. ಬಿ.ಎಚ್.
- **ಸನ್ನುಡಿ ಮಾಲೆ (1993) :** ಮೈಸೂರು.
- **ಸ್ಪಂದನ (1969) :** ಮೈಸೂರು ಶಾರದಾ ಮಂದಿರ
- **ಸಪ್ತಕ (1989) :** ಮೈಸೂರು ಕಾವ್ಯ ಪ್ರಕಾಶನ.
- **ಸಂಪಣ (1986) :** ಮೈಸೂರು ಗೀತಾ ಬುಕ್ ಹೌಸ್.
- **ಸಂ. ಎಸ್. ಎಲ್. ಭೈರಪ್ಪ ಹಾಗೂ ಪ್ರಧಾನ ಗುರುದತ್ (1992) :** ಮಾನ ಅಭಿನಂದನ ಗ್ರಂಥ, ಸಂಪಾದಕರು ಗೀತಾ ಬುಕ್ ಹೌಸ್.
- **ಸಂ. ಡಾ. ಎಚ್.ಎಸ್. ಸುಜಾತ ಸುಹಾಸ್ (1991) :** ಹಾಮಾನಾ ಹೊತ್ತಗೆಗಳು, ಮೈಸೂರು ಪ್ರಕಟಣೆಗಳು.
- **ನೆನಪುಗಳು ಸಾಯುವುದಿಲ್ಲ (1991) :** ವೈಚಾರಿಕ ಪುಸ್ತಕ ಮಾಲೆ.
- **ಕೆ ವಿ ನಾರಾಯಣ (1986) :** ವಿಚಾರ ಸಾಹಿತ್ಯ–2 ಬೆಂಗಳೂರು ವಿಶ್ವವಿದ್ಯಾಲಯ ಪ್ರಸಾರಂಗ.
- **ಸಂ. ಸ. ಟಿ. ರಮೇಶ್ (2001) :** ಶ್ರದ್ಧಾಂಜಲಿ ಹೊಸಪೇಟೆ ಅಂಶು ಪ್ರಕಾಶನ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕನಕದಾಸರ ರಾಮಧಾನ್ಯ ಚರಿತ್ರೆ : ಸಮತೆ, ಸಮಾನತೆ ತಾತ್ವಿಕ ಮೌಲ್ಯಗಳ ಪ್ರತಿಪಾದನೆ

✍ **ಡಾ. ಉಮೇಶ,** ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆನರಸೀಪುರ.

ಕನ್ನಡದ ಸಂತ ಕವಿಗಳಲ್ಲಿ ಒಬ್ಬರಾಗಿರುವ ಕನಕದಾಸರ ಸಾಹಿತ್ಯ ಮತ್ತು ಜೀವನವು ಎಲ್ಲಾ ಕಾಲಕ್ಕೂ ಆದರಣೀಯವಾದದ್ದು. ಕನಕದಾಸರ ಮೂಲ ಹೆಸರು ತಿಮ್ಮಪ್ಪನಾಯಕ. ಈಗಿನ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದ ಕನಕದಾಸರು ಕರ್ನಾಟಕದಲ್ಲಿ 15 ರಿಂದ 16ನೆಯ ಶತಮಾನದಲ್ಲಿ ಜನಪ್ರಿಯವಾದ ಭಕ್ತಿಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರಾಗಿದ್ದಾರೆ. ಭಕ್ತಿಪಂಥದದಾಸ ಪರಂಪರೆಯಲ್ಲಿ ಕಂಡು ಬರುವ 250 ಕ್ಕೂ ಹೆಚ್ಚು ಹರಿದಾಸರಲ್ಲಿ ಕನಕದಾಸರೊಬ್ಬರೇ ಕೆಳಪಂಗಡದ ದಾಸರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು. ತಮ್ಮ ಸಮಕಾಲೀನರಾದ ಪುರಂದರದಾಸರೊಂದಿಗೆ 'ಕರ್ನಾಟಕ ಸಂಗೀತ'ದ ಮೂಲಭೂತ ಸಿದ್ಧಾಂತಗಳಿಗೆ ಅಭೂತ ಪೂರ್ವಕಾಣಿಕೆ ನೀಡಿದವರು. ಆದುದರಿಂದಲೇ ಕನ್ನಡ ದಾಸ ಸಾಹಿತ್ಯದಲ್ಲಿ ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಕರೆಯಲಾಗಿದೆ. ಸೈನ್ಯದಲ್ಲಿ ದಂಡನಾಯಕರಾಗಿದ್ದ ಕನಕದಾಸರು ಯುದ್ಧವೊಂದರಲ್ಲಿ ಸೋತು ವೈರಾಗ್ಯವುಂಟಾಗಿ ಕಾಗಿನೆಲೆಯ ಆದಿಕೇಶವನ ಸೇವಕರಾದರು. ನಂತರ ಶ್ರೀ ವ್ಯಾಸರಾಯರನ್ನು ಗುರುಗಳನ್ನಾಗಿ ಸ್ವೀಕರಿಸಿ, ಆಧ್ಯಾತ್ಮದ ಕಡೆ ಮುಖ ಮಾಡಿದ ಇವರು ಸಮಾಜದಲ್ಲಿನ ಜಾತಿ ಪದ್ಧತಿಗಳನ್ನು ಅಲ್ಲಗಳೆದರು. ಮಾನವನು ಸಮಾಜದಲ್ಲಿ ನೆಮ್ಮದಿಯಿಂದ ಬದುಕಲು ಬೇಕಾದ ನೈತಿಕ ಮೌಲ್ಯಗಳಾದ ತಾತ್ವಿಕತೆ, ಮಾನವೀಯತೆ, ಆಧ್ಯಾತ್ಮಿಕ ಆದರ್ಶಗಳ ಮುಖಾಂತರ ಸಂದೇಶ ನೀಡಿದರು.

ಕನಕದಾಸರು ಕೀರ್ತನೆಗಳನ್ನಷ್ಟೇ ಅಲ್ಲದೇ ಕಾವ್ಯ, ಖಂಡಕಾವ್ಯ, ಮುಂಡಿಗೆಗಳನ್ನು ಬರೆದಿದ್ದಾರೆ. ಹೀಗಾಗಿ ಅವರು ಕೀರ್ತನೆಗಳ ದೃಷ್ಟಿಯಿಂದ ಕೀರ್ತನಕಾರರಾಗಿಯೂ, ಕಾವ್ಯಗಳ ದೃಷ್ಟಿಯಿಂದ ಕವಿಯೂ ಆಗಿದ್ದಾರೆ. 'ಮೋಹನ ತರಂಗಿಣಿ', 'ನಳಚರಿತ್ರೆ', 'ರಾಮಧಾನ್ಯಚರಿತ್ರೆ', 'ಹರಿಭಕ್ತಿ ಸಾರ', ಕೀರ್ತನೆ ಹಾಗೂ ಮಂಡಿಗೆಗಳು ಕನಕದಾಸರಿಂದ ರಚಿತವಾದ ಕೃತಿಗಳು. 'ಕಾಗಿನೆಲೆಯ ಆದಿಕೇಶವ' ಇವರ ಕೀರ್ತನೆಗಳ ಅಂಕಿತನಾಮ. ಹರಿಯ ಬಗೆಗಿನ ಭಕ್ತಿಯೇ ಅಲ್ಲದೆ ಕನಕದಾಸರ ಹಲವಾರು ಕೀರ್ತನೆಗಳಲ್ಲಿ ತಾತ್ವಿಕತೆ, ವೈಚಾರಿಕತೆ, ಸಾಮಾಜಿಕ ವಿಮರ್ಶೆ ಮತ್ತು ವಿಡಂಬನೆ ಕಂಡು ಬರುತ್ತದೆ. ಆ ಕಾಲಘಟ್ಟಕ್ಕೆ ಪ್ರಚಲಿತವಿದ್ದ ಹಲವು ಮೂಢನಂಬಿಕೆಗಳನ್ನು, ಕಂದಾಚಾರಗಳನ್ನು, ಜಾತಿ–ವರ್ಗ ಭೇದಗಳನ್ನು ಕನಕದಾಸರುತಮ್ಮ ಕೀರ್ತನೆಗಳಲ್ಲಿ ಮಾರ್ಮಿಕವಾಗಿ ಖಂಡಿಸಿದ್ದಾರೆ. "ಕುಲ ಕುಲ ಕುಲವೆಂದುಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂಬ ಮೊದಲಾದ ಕೀರ್ತನೆಗಳಲ್ಲಿ ಈ ಅಂಶಗಳು ಅನಾವರಣ ಗೊಂಡಿರುವುದು ನಾವು ಪರಾಮರ್ಶಿಸಬಹುದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪೊನ್ನ, ನಾಗಚಂದ್ರ, ಲಕ್ಷ್ಮೀಶ ಕವಿಗಳ ಆದಿಯಾಗಿ ಆಧುನಿಕ ಸಾಹಿತ್ಯದ ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯದವರೆವಿಗೂ ರಾಮಕತೆಯ ಪ್ರವಾಹವು ನಿರಂತರವಾಗಿ ಪ್ರವಹಿಸಿರುವುದನ್ನು ನಾವು ಗಮನಿಸಬಹುದು. ಹಾಗೆಯೇ ಕನಕದಾಸರು ತಮ್ಮ ಕಾಲಘಟ್ಟದಲ್ಲಿದ್ದ ವರ್ಗ–ವರ್ಣತಾರತಮ್ಯವನ್ನು ಹೋಗಲಾಡಿಸುವ ಪ್ರಯತ್ನದ ಫಲವಾಗಿ ತಮ್ಮ ವಿಚಾರಧಾರೆಯನ್ನು ಮಂಡಿಸಲು ರಾಮಾಯಣದ ಕಥೆಯನ್ನೇ ಆರಿಸಿಕೊಂಡಿದ್ದಾರೆ. ಈ ಮುಖೇನ ಸಿದ್ಧಗೊಂಡ ಕೃತಿಯೇ 'ರಾಮಧಾನ್ಯಚರಿತ್ರೆ'. ಕನಕದಾಸರ ವೈಶಿಷ್ಟ್ಯಪೂರ್ಣವಾದ ಕೃತಿಗಳಲ್ಲಿ 'ರಾಮಧಾನ್ಯ ಚರಿತ್ರೆ' ಕೃತಿ ಪ್ರಮುಖವಾದುದಾಗಿದೆ. ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಈ ಖಂಡಕಾವ್ಯ ಸುಮಾರು 158 ಪದ್ಯಗಳನ್ನು ಒಳಗೊಂಡಿದೆ.

ಭಾರತೀಯ ಸನಾತನ ಪರಂಪರೆಯಲ್ಲಿ ವರ್ಗ–ವರ್ಣ ಸಂಘರ್ಷವು ಬಹಳ ಪುರಾತನವಾದವುಗಳು. ಈ ಹಿನ್ನೆಲೆಯಲ್ಲಿ ಕನಕದಾಸರು ತಮ್ಮ ಜೀವನದಲ್ಲಿ ಅನುಭವಿಸಿದ ಕಹಿ ಘಟನೆಗಳನ್ನು, ಕಂಡುಂಡ ವರ್ಗ–ವರ್ಣ ಸಂಘರ್ಷಗಳ ಅನುಭವಗಳನ್ನು ಈ ಕೃತಿಯಲ್ಲಿ ದಾಖಲು ಮಾಡಿದ್ದಾರೆ. ರಾಮಧಾನ್ಯ ಚರಿತ್ರೆಯಲ್ಲಿ ನಾವು ಊಟ ಮಾಡುವ ಧಾನ್ಯಗಳನ್ನು ಪಾತ್ರವಾಗಿಸಿ ಅದಕ್ಕೆ ಜೀವ ತುಂಬಿ ಸಮಾಜದ ಅಸಮಾನತೆಯ ಚಿತ್ರಣ ನೀಡಿದವರು ಕನಕದಾಸರು. ಕೃತಿಯಲ್ಲಿ ಧಾನ್ಯಗಳನ್ನು ಮೂರ್ತಿಕರಿಸಿ ಕಥೆಯನ್ನುರೂಪಾತ್ಮಕವಾಗಿ ಚಿತ್ರಿಸಿರುವ ಕನಕದಾಸರ ಕವಿ ಪ್ರತಿಭೆ ವಿಶೇಷವಾಗಿದೆ. ಈ ಕಥಾಹಂದರವು ಮೂಲ ರಾಮಾಯಣದಲ್ಲಿ ಇಲ್ಲದಿರುವುದು ಈ ಕಾವ್ಯದ ವೈಶಿಷ್ಟ್ಯವಾಗಿದ್ದು ಅದು ಕನಕದಾಸರ ಸ್ವತಂತ್ರ ಕಲ್ಪನೆ ಆಗಿದೆ. ಇಡೀ ರಾಮಾಯಣದ ಕಥೆಯನ್ನು ಸಿಂಹಾವಲೋಕನ ಕ್ರಮದಿಂದ ನಿರೂಪಿಸುವ ಈ ಕಾವ್ಯ ಪೌರಾಣಿಕ ವಿನ್ಯಾಸದಂತೆ ಭಾಸವಾದರೂ ಆಂತರ್ಯದಲ್ಲಿ ಒಂದು ಬಗೆಯ ವಿಡಂಬನೆ, ವ್ಯಂಗ್ಯವನ್ನು ಒಳಗೊಂಡಿದೆ.

"ರಾಮಧಾನ್ಯದಕೃತಿಯನೀಜನಂ
ಸ್ತೋಮವೆಲ್ಲಾದರಿಸುವಂದದಿ
ಭೂಮಿಗಚ್ಚರಿಯಾಗಿ ಪೇಳುವೇನೀ ಮಹಾಕಥೆಯ"

(ಪದ್ಯ 3)

ಎಂಬ ಪದ್ಯದ ಮೂಲಕ ಕಾವ್ಯವನ್ನು ಆರಂಭಿಸಿರುವ ಕನಕದಾಸರು ಈ ರಾಮಚರಿತ್ರೆಯೊಳಗೆ ನರೆದಲೆಗ (ರಾಗಿ) ಮತ್ತು ವ್ರೀಹಿ (ಭತ್ತ)ಯ ಕಥೆಯ ಮೂಲಕ ಸಮತೆ, ಸಮಾನತೆಯ ಮೌಲ್ಯವನ್ನು ಪ್ರತಿಪಾದಿಸಿದ್ದಾರೆ.

ಶ್ರೀರಾಮಚಂದ್ರನು ಸೀತೆಯನ್ನು ಅಪಹರಿಸಿದ ರಾವಣಾದಿಯಾಗಿ ಎಲ್ಲರನ್ನು ಕೊಂದು ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿತನ್ನ ಪರಿವಾರದೊಂದಿಗೆ ಮಹರ್ಷಿಗಳ ಆಶ್ರಮಕ್ಕೆ ಆಗಮಿಸುತ್ತಾನೆ. ಆಗ ಋಷಿಗಳೆಲ್ಲರೂ ರಾವಣನನ್ನು ಕೊಂದು ಮುನಿವರ್ಯರಿಗೆ ಅವನಿಂದ ಆಗುತ್ತಿದ್ದ ಕಿರುಕುಳವನ್ನು ತಪ್ಪಿಸಿದರೆಂದು ಹೊಗಳಿ ರಾಮನನ್ನು ಉಪಚರಿಸಲು ವಿವಿಧ ಧಾನ್ಯಗಳಿಂದ ಬಗೆ ಬಗೆಯ ಭೋಜನವನ್ನು ಮಾಡಿಸುತ್ತಾರೆ. ಆಗ ಹನುಮಂತನು "ಭಕ್ಷ್ಯಗಳೇನೋ ರುಚಿಯಾಗಿವೆ. ಆದರೆ ಈ ಭಕ್ಷ್ಯಗಳನ್ನು ಯಾವ ಯಾವ ಧಾನ್ಯಗಳಿಂದ ತಯಾರಿಸಿದ್ದಾರೋ ಆ ಧಾನ್ಯಗಳನ್ನೆಲ್ಲ ಒಮ್ಮೆ ತಾನು ನೋಡಬೇಕು" ಎಂದನು.ಆಗ ಶ್ರೀರಾಮಚಂದ್ರನು ಗೌತಮ ಮಹರ್ಷಿಗಳಿಗೆ ಹೇಳಿ ಧಾನ್ಯಗಳನ್ನು ತರಿಸಿದನು. ನರೆದಲೆಗ, ರಾಗಿ, ನೆಲ್ಲು, ಹಾರಕ, ಬರಗು, ಕಂಬು, ಸಾಮೆ, ನವಣೆ ಎಂಬ ನವಧಾನ್ಯಗಳು ಬಂದವು. ಆಗ ರಾಮನು ಈ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನವಧಾನ್ಯಗಳಲ್ಲಿ ಯಾವುದು ಶ್ರೇಷ್ಠ ಎಂದು ಕೇಳಲು, ಒಬ್ಬರು ಗೋಧಿ ಎಂದು, ಇನ್ನೊಬ್ಬರು ಸಾಮೆ ಎಂದುತರೇವಾರಿ ಉತ್ತರ ನೀಡಿದರು. ಅದಕ್ಕೆ ಶ್ರೀರಾಮಚಂದ್ರನು ಹಲವು ಹೆಸರುಗಳನ್ನು ಹೇಳದೆ ಒಂದನ್ನೆ ಹೇಳುವಂತೆ ಕೇಳಲಾಗಿ ಆಗ ಗೌತಮ ಮುನಿಗಳು

"ದಾಶರಥಿಚಿತ್ತೈಸು ನಮ್ಮಯ
ದೇಶಕತಿಶಯ ನರೆದಲೆಗನೇ
ವಾಸಿಯುಳ್ಳವನೀತ ಮಿಕ್ಕಿನ ಧಾನ್ಯವೇಕೆನಲು"

(ಪದ್ಯ 34)

ಎಂದು ಉತ್ತರಿಸುತ್ತಾರೆ. ಇದನ್ನು ಕೇಳಿದ ವ್ರೀಹಿ ಕೋಪಗೊಂಡು

"ನೆಲ್ಲು ನಾನಿರೆ, ಗೋಧಿ ಮೊದಲಾ
ದೆಲ್ಲಾ ಧಾನ್ಯಗಳಿರಲು ಇದರಲಿ
ಬಲ್ಲಿದನು ನರೆದಲೆಗನೆಂಬುದಿದಾವಮತ?ವೆಂದ"

(ಪದ್ಯ 35)

ಎಂದು ನುಡಿದು ಗೌತಮ ಮಹರ್ಷಿಗಳಿಗೆ ದೋಷ ರಹಿತರಾದ ನೀವು ಹೀಗೆ ಪಕ್ಷಪಾತದಿಂದ ನುಡಿಯಬಾರದಿತ್ತು ಎಂದು ಹೇಳಿದಲ್ಲದೆ ನಲೆದಲೆಗವನ್ನು ಕುರಿತು ಕೋಪದಿಂದ

"ಏನೆಲೆವೊ ನರೆದಲೆಗ ನೀನು ಸ
ಮಾನನೇಎನಗಿಲ್ಲಿ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕಿಪತಿ ಸನಿಹದಲಿ ಕುಲ
ಹೀನ ನೀನ ಪ್ರತಿಷ್ಟೆ ಸುಡುಮತಿ
ಹೀನ ನೀನೆಂದನುತಖತಿಯಲಿ ಬೈದು ಭಂಗಿಸಿದ॥"

(ಪದ್ಯ 36)

ಎಂದು ತನ್ನ ಮಹಿಮೆಯನ್ನು ಹೇಳಿಕೊಳ್ಳಲಾರಂಭಿಸಿತು. ಭತ್ತವು ನುಡಿದ ಮೇಲಿನ ಅಹಂಕಾರದ, ಅವಮಾನಕರ ಮಾತುಗಳನ್ನು ಕೇಳಿದ ರಾಗಿಗೆ ಅಭಿಮಾನ ಭಂಗವಾಯಿತು. ಅದಕ್ಕೆ ಕೋಪದಿಂದ **"ನುಡಿಗೆ** ಹೇಸದ ನಿನ್ನಂತಹ ಭಂಡರಿಗೆ ಮಾರುತ್ತರ ಕೊಡುವರೇ ಯಾರಾದರೂ? ಕಡುಮೂರ್ಖ ನಿನ್ನೊಡನೆ ಮಾತೇಕೆ. ಸತ್ಯಹೀನನು ನೀನು, ಬಡವರನ್ನು ನೀನು ಕಣ್ಣೆತ್ತಿಯೂ ನೋಡುವುದಿಲ್ಲ. ಆದರೆ ಶ್ರೀಮಂತರನ್ನು ಮಾತ್ರ ಬೆಂಬತ್ತಿಯೇ ಇರುವ ಅಪೇಕ್ಷೆ ನಿನ್ನದು. ಹೆತ್ತ ಬಾಣಂತಿಯರಿಗೆ, ರೋಗಿಗಳಿಗೆ ನೀನು ವರ್ಜ್ಯವಲ್ಲವೇ ? ಹೆಣದ ಬಾಯಿಗೆ ಹಾಕುವ ತುತ್ತು ನೀನಲ್ಲವೇ ? ನಿನ್ನ ಜನ್ಮ ನಿರರ್ಥಕ" ಎಂದು ಮಾತು ಮುಂದುವರೆಸಿ

"ಮಳೆದಡೆದು ಬೆಳೆಯಡಗಿ ಕ್ಷಾಮದ
ವಿಲಯಕ್ಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾಧರಿಸಿ ಸಲಹುವೆನು ಜಗವರಿಯೆ"

(ಪದ್ಯ 47)

ಎಂದು ರಾಗಿಯು ತನ್ನ ನೈಜ ವ್ಯಕ್ತಿತ್ವವನ್ನು ಹೇಳಿಕೊಂಡಿತು.

ಮೇಲ್ಕಂಡಂತೆ ನಾನೇ ಶ್ರೇಷ್ಠ, ನಾನೇ ಶ್ರೇಷ್ಠ ಎಂದುರಾಗಿ ಮತ್ತುಭತ್ತಗಳ ನಡುವೆ ವಾದ–ವಿವಾದ ಆರಂಭವಾಗಿ ಪರಿಸ್ಥಿತಿ ವಿಪರೀತಕ್ಕೆ ಹೋಗುತ್ತದೆ. ಇದನ್ನು ಗಮನಿಸಿದ ರಾಮನು ಸರಿಯಾದ ಉತ್ತರ ಪಡೆಯಲುರಾಗಿ ಮತ್ತು ಭತ್ತಗಳನ್ನು ಆರು ತಿಂಗಳುಗಳ ಕಾಲ ಸೆರೆಮನೆಯಲ್ಲಿ ಇಡುವಂತೆ ಆಜ್ಞೆ ಮಾಡುತ್ತಾನೆ. ಆರು ತಿಂಗಳು ಗಡುವು ಮುಗಿದ ನಂತರ ಇಬ್ಬರನ್ನು ಕರೆತಂದಾಗ ವ್ರೀಹಿ (ಭತ್ತ) ನಿಸ್ಸಾರವೂ, ಕಾಂತಿಹೀನವೂ ಆಗಿತ್ತು. ನರೆದಲೆಗ (ರಾಗಿ) ಸತ್ವವಾಗಿಯೂ, ವರ್ಣಸಹಿತವಾಗಿಯೂ ಇರುವುದನ್ನು ಕಂಡು ರಾಮ ಅದಕ್ಕೆ 'ರಾಘವ' ಎಂದು ತನ್ನ ನಾಮಾಂಕಿತವನ್ನು ಇಟ್ಟನು. ಅಂದಿನಿಂದ ನೆರೆದಲೆಗನಿಗೆ 'ರಾಗಿ' ಎಂಬ ಹೆಸರೇ ಶಾಶ್ವತವಾಗಿದೆ. ಈ ಸನ್ನಿವೇಶದಲ್ಲಿ ರಾಮನು ನೀಡಿದ ತೀರ್ಪು ಸಮಾಜದ ಎಲ್ಲಾ ವರ್ಣ–ವರ್ಗಗಳಿಗೂ ಸರ್ವಸಮಾನತೆಯ, ಸಮತೆಯ ತತ್ವವನ್ನುಒತ್ತಿ ಹೇಳುತ್ತದೆ. ಈ ರೀತಿ ಧಾನ್ಯಗಳನ್ನು ಮೂರ್ತಿಕರಿಸಿ ಕನಕದಾಸರು ನವಿರಾದ ಹಾಸ್ಯದೊಂದಿಗೆ ಸಮಾಜದಲ್ಲಿನ ತಾರತಮ್ಯಗಳನ್ನು ತಮ್ಮ ವಿಡಂಬನಾ ಶೈಲಿಯ ಮೂಲಕ 'ರಾಗಿ'ಯನ್ನು 'ರಾಘವ'ನೆಂದು ವೈಭವೀಕರಿಸಿ ನಿರೂಪಿಸಿದ್ದಾರೆ. ಈ ಪ್ರಸಂಗದ ಮೂಲಕ ಸಮಾಜದ ಗಂಭೀರ ಸಮಸ್ಯೆಗಳನ್ನು ಎತ್ತಿಹಿಡಿಯುವ ಕನಕದಾಸರು ವರ್ಣಾಶ್ರಮದ ಅನ್ಯಾಯವನ್ನು ಪ್ರಶ್ನಿಸಿದ್ದಾರೆ ಮತ್ತು ಸಾಮಾನ್ಯ ಜನರ ಅಸಮಾನತೆಯನ್ನು ಅನಾವರಣಗೊಳಿಸಿದ್ದಾರೆ.

ಭಾರತೀಯ ಜಾತಿ ವ್ಯವಸ್ಥೆಯಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಸಮಾನ ಸ್ಥಾನಮಾನದ ಹಂಚಿಕೆಯಲ್ಲಿ ವಂಚಿತರಾದ ತಳಸಮುದಾಯಗಳ ನೋವುಗಳನ್ನು ಹೇಳುವಂತ ಕೃತಿಯು ರಾಮಧಾನ್ಯ ಚರಿತ್ರೆಯಾಗಿದೆ. ಸಸ್ಯ ಸಹಜವಾದ ಆಹಾರ ಧಾನ್ಯಗಳ ಮೂಲಕ ಸಾಮಾಜಿಕ ಸಮಸ್ಯೆಗಳ ವಿವರವಾದ ಕುರಿತ ಚರ್ಚೆಯನ್ನು ಕಟ್ಟಿಕೊಡುವ ಈ ಕೃತಿಯಲ್ಲಿ ಕೆಳಸಮುದಾಯಗಳನ್ನು ಕಡೆಗಣಿಸುವ ಉತ್ತಮ ಕುಲವರ್ಗದವರ ವಿವರಗಳನ್ನು ಈ ಕೃತಿ ಅನಾವರಣಗೊಳಿಸಿದೆ. ರಾಮಧಾನ್ಯ ಚರಿತ್ರೆಯಲ್ಲಿ ರಾಗಿ ಮತ್ತು ಭತ್ತಗಳ ನಡುವಿನ ವಾಗ್ವಾದವು ಸಮಾಜದಲ್ಲಿರುವ ವರ್ಗ–ವರ್ಣ ಸಂಘರ್ಷಗಳ ನಡುವಿನ ಘರ್ಷಣೆಯಾಗಿ ಬಿಂಬಿತವಾಗಿದ್ದರೂ, ಕನಕದಾಸರು ಕೆಳವರ್ಗದಲ್ಲಿ ಜನಿಸಿದ ಒಂದೇಕಾರಣದಿಂದ ಸಾಮಾಜಿಕವಾಗಿ ಆಗುತ್ತಿದ್ದ ಅನ್ಯಾಯವನ್ನು ಸೂಚಿಸುತ್ತದೆಂದು, ವರ್ಗ ಹೋರಾಟವನ್ನು ಸಂಕೇತಿಸುತ್ತದೆಂದು ಹೇಳಬಹುದು.

'ರಾಮಧಾನ್ಯ ಚರಿತ್ರೆ' ಕಾವ್ಯವನ್ನು ಮುಖ್ಯವಾಗಿ ಅವಲೋಕಿಸಿದರೆ ಇದು ಜಾತಿ, ವರ್ಗ–ವರ್ಣ ಸಂಘರ್ಷ ನೆಲೆಯದ್ದಾಗಿದ್ದು ಮೇಲ್ವರ್ಗದ ಶ್ರೀಮಂತರು ಅಂತಃಸತ್ವವಿಲ್ಲದವರಾಗಿದ್ದು ಕೇವಲ ಅಹಂಕಾರಿಗಳಾಗಿ, ಬಾಹ್ಯ ಆಡಂಬರದಿಂದ ಬದುಕುತ್ತಾರೆ ಎಂಬುದು ಕವಿಯ ನಿಲುವು.ಇದಲ್ಲದೆ ಜನ ಸಾಮಾನ್ಯರಿಗೆ ಸಮಾಜದಲ್ಲಿನ ಸಾಮಾಜಿಕ ಸಮಸ್ಯೆಗಳು, ಅಂಕುಡೊಂಕುಗಳು ಅರಿವಾಗಬೇಕೆಂಬ ಮಹತ್ವ ಪೂರ್ಣವಾದ ಆಶಯ ಕೃತಿಯಲ್ಲಿ ಅಡಕಗೊಂಡಿದೆ. ಕಾವ್ಯದ ಕೊನೆಯಲ್ಲಿ ವ್ರೀಹಿಗೆ ರಾಮನು ಹೇಳುವ

"ದೇವರಿಗೆ ಪರಮಾನ್ನ ನೀ ಮನು
ಜಾವಳಿಗೆ ಪಕ್ವಾನ್ನವೀತನು
ನೀವು ಧರೆಯೊಳಗಿಬ್ಬರತಿ ಹಿತದಲಿ ನೀವಿಹುದು"

(ಪದ್ಯ 149)

ಎಂದು ಹೇಳುವ ಮಾತುಗಳು ಸಾಮಾಜಿಕ ಹಿತದೃಷ್ಟಿಯಿಂದ ಸಮಸಮಾಜದ ರಚನೆಯ ಹಿನ್ನೆಲೆಯಲ್ಲಿ ಮೂಡಿ ಬಂದ ಅರ್ಥ ಗರ್ಭಿತ ಮಾತುಗಳಾಗಿವೆ. ಕನಕದಾಸರ ಮೇಲಿನ ಸಾಲುಗಳು ಮಾನವರೆಲ್ಲರೂ ಸಮಾನರು, ಅವರಲ್ಲಿ ಸೌಹಾರ್ದತೆಯ ಅರಿವಿರಬೇಕು ಎಂಬ ಕಾಲಾತೀತವಾದ ಸಂದೇಶವನ್ನು ನೀಡುತ್ತದೆ. ಸಮಾಜದಲ್ಲಿ ಮೇಲು–ಕೀಳು, ಬಡವ–ಬಲ್ಲಿದ ದಾಸ್ಯತ್ವ ತೊಲಗಿ ಎಲ್ಲರೂ ಒಂದಾಗಿ ಸಮಾನತೆ, ಸಮನ್ವಯತೆಯ ಅಡಿಯಲ್ಲಿ ಬಾಳಬೇಕೆಂಬ ಉತ್ಕಟ ಅಪೇಕ್ಷೆ ಕೃತಿಯಲ್ಲಿ ಬಹುಮುಖ್ಯವಾಗಿ ಅನಾವರಣಗೊಂಡಿದೆ.

ಮಾನವ ಮೂಲತಃ ಸಂಘ ಜೀವಿ. ಆತನು ಬದುಕಲು, ಜೀವನ ನಿರ್ವಹಿಸಲು ತಾನು ನಿರ್ಮಿಸಿಕೊಂಡ ಜನಸಮೂಹ, ಸಂಘ ಸಮುದಾಯಗಳೇ ಸಮಾಜ. ಈ ಸಮಾಜದಲ್ಲಿ ದಿನನಿತ್ಯದ ಆಗು–

– 110ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕರ್ಣಾಟಕ ಶಬ್ದಾನುಶಾಸನ : ಒಂದು ಅವಲೋಕನ

✍ **ಡಾ. ಮಹೇಶ ಎಂ.,** ಪಿ.ಡಿ.ಎಫ್. ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
✍ **ಮಾರ್ಗದರ್ಶಕರು, ಪ್ರೊ. ಎನ್.ಕೆ. ಲೋಲಾಕ್ಷಿ,** ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಪ್ರಾಚೀನ ಕನ್ನಡ ವ್ಯಾಕರಣ ಕೃತಿಗಳಲ್ಲಿ ಕರ್ಣಾಟಕ ಶಬ್ದಾನುಶಾಸನವೇ ಕೊನೆಯದಾಗಿದೆ. ಇದರ ಕರ್ತೃ ಭಟ್ಟಾಕಲಂಕ. ಜೈನನಾದ ಈತ ತನ್ನ ಈ ಕೃತಿ ಶಕ 1526ನೆಯ ಶೋಭಕೃತ್ ಸಂವತ್ಸರದಲ್ಲಿಎಂದರೆ 1604ರಲ್ಲಿ ರಚಿಸಲ್ಪಟ್ಟಿತು ಎಂದು ಹೇಳಿಕೊಂಡಿರುವುದರಿಂದ ಈತನ ಕಾಲ ಖಚಿತವಾಗಿ ಕ್ರಿ. ಶ. 1604 ಎಂದು ತಿಳಿಯಬಹುದಾಗಿದೆ. ಇವನು ವಿಜಯನಗರದ ಶ್ರೀರಂಗರಾಜನ (1573–1583) ಕಾಲದಲ್ಲಿ ಜೀವಿಸಿದ್ದನೆಂದು ತಿಳಿದು ಬರುತ್ತದೆ. ಈತನ ಗುರು ಅಕಲಂಕದೇವ. ಇವರು ಶ್ರವಣಬೆಳಗೊಳದ ಶ್ರೀಮಚ್ಚಾರು ಕೀರ್ತಿ ಪಂಡಿತಾಚಾರ್ಯರ ಶಿಷ್ಯ ಪರಂಪರೆಯವರು. ಇವರು ದಕ್ಷಿಣ ಕನ್ನಡ ಜಿಲ್ಲೆಯ ಹಾಡುವಳ್ಳಿಯಲ್ಲಿ ಜೈನ ಮಠಾಧಿಪತಿಯಾಗಿದ್ದರು. ಹಾಡುವಳ್ಳಿಯನ್ನು ಸಂಸ್ಕೃತದಲ್ಲಿ ಸಂಗೀತಪುರವೆಂದು ಕರೆಯಲಾಗಿದೆ.

ಕರ್ಣಾಟಕ ಶಬ್ದಾನುಶಾಸನ ಸಂಸ್ಕೃತ ಭಾಷೆಯಲ್ಲಿ ಕನ್ನಡ ವ್ಯಾಕರಣ ತತ್ವಗಳನ್ನು ವಿವರಿಸುವ ಬೃಹತ್ಕೃತಿ. ಇದರಲ್ಲಿ ಒಟ್ಟು 592 ಸೂತ್ರಗಳಿವೆ. ಈ ಸೂತ್ರಗಳು 101 ಅನುಷ್ಟುಪ್ ಶ್ಲೋಕ ಪ್ರಮಾಣವಾಗಿವೆ. ಈ ಕೃತಿಯನ್ನು ನಾಮ, ಲಿಂಗ, ಸಮಾಸ ಮತ್ತು ಧಾತು ಎಂದು ನಾಲ್ಕು ಪಾದಗಳಾಗಿ ವಿಭಜಿಸಲಾಗಿದೆ.

ಪ್ರಥಮಪಾದ : ಇದರಲ್ಲಿ 1 ರಿಂದ 101ರ ವರೆಗಿನ ಸೂತ್ರಗಳಿವೆ ಹಾಗೂ ಐದು ಭಾಗಗಳಿವೆ. ಮೊದಲನೆಯದಾದ ಪರಿಭಾಷಾ ಪ್ರಕರಣದಲ್ಲಿ ವಿವಿಧ ಸಂಜ್ಞೆಗಳಿಗೆ ಆದೇಶವಾಗುವ ಪದಗಳು, ವರ್ಣಗಳು, ಲಿಂಗ, ವಚನ, ಅವ್ಯಯಗಳ ಬಗ್ಗೆ, ಎರಡನೆಯದಾದ ಸಂಧಿ ಪ್ರಕರಣದಲ್ಲಿಎಲ್ಲಾ ಸಂಧಿಗಳ ಬಗ್ಗೆ, ಮೂರನೆಯದಾದ ಪ್ರಕೃತಿಭಾವ ಪ್ರಕರಣದಲ್ಲಿ ಪ್ರಕೃತಿ ಭಾವ ಉಂಟಾಗುವ ರೀತಿ, ನಿಪಾತ, ಅನುಕರಣಾವ್ಯಯ, ನಾಲ್ಕನೆಯದಾದ ವ್ಯಂಜನಸಂಧಿ ಪ್ರಕರಣದಲ್ಲಿ ವಿವಿಧ ಪದಗಳಿಗೆ ಸ್ವರ ಪರವಾದಾಗ ದ್ವಿತ್ವ ಬರುವ ಬಗೆ ಮತ್ತು ವಿಕಲ್ಪವಾಗುವ ಬಗೆ, ಐದನೆಯದಾದ ವ್ಯಂಜನಾದೇಶ ಸಂಧಿ ಪ್ರಕರಣದಲ್ಲಿ ಸ್ವರಗಳಿಗೆ 'ಮ', 'ನ' ವರ್ಣಗಳು ಆದೇಶವಾಗಿ ಬರುವ ರೀತಿಯನ್ನು ದೀರ್ಘವಾಗಿ ಚರ್ಚಿಸಲಾಗಿದೆ.

ದ್ವಿತೀಯಪಾದ : ಇದರಲ್ಲಿ 102 ರಿಂದ 291ರ ವರೆಗಿನ ಸೂತ್ರಗಳಿವೆ ಹಾಗೂ ಏಳು ಭಾಗಗಳಿವೆ.

1. **ಲಿಂಗ ಸಂಜ್ಞಾ ಪ್ರಕರಣ :** ಇದರಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ, ವಿಶೇಷ್ಯ ಲಿಂಗ ಹಾಗೂ ದ್ವಂದ್ವ ಮತ್ತು ಅಂಶಿಸಮಾಸವು ಪರಪದ ಲಿಂಗದಂತೆ ಲಿಂಗವನ್ನು ಹೊಂದುತ್ತವೆ ಎಂಬಿತ್ಯಾದಿ ವಿಚಾರಗಳು ಚರ್ಚಿತವಾಗಿವೆ.

2. **ಸಮ ಸಂಸ್ಕೃತ ಪ್ರಕರಣ :** ಊಷ್ಮಾದಿ ಶಬ್ದಗಳು ಹಾಗೂ 'ಋ' ಕಾರಂತ ಶಬ್ದಗಳ ಬಗ್ಗೆ ಚರ್ಚೆಇದೆ.

3. **ತದ್ಭವ ಪ್ರಕರಣ**
4. **ದೇಶ್ಯಲಿಂಗ ಪ್ರಕರಣ**
5. **ಸ್ತ್ರೀ ಪ್ರತ್ಯಯ ಪ್ರಕರಣ**
6. **ಸುಪ್ ವಿಭಕ್ತಿ ಪ್ರಕರಣ**
7. **ಸುಬಾಶ್ರಯ ವಿಧಿ ಪ್ರಕರಣ.**

ಇದರಲ್ಲಿ ವಿಶೇಷವಾಗಿ 'ಸುಪ್' ಪ್ರತ್ಯಯದ ಬಗ್ಗೆ ಚರ್ಚೆ ಮಾಡಲಾಗಿದೆ.

ತೃತೀಯ ಪಾದ : ಇದರಲ್ಲಿ 292 ರಿಂದ 441ರ ವರೆಗಿನ ಸೂತ್ರಗಳು ಹಾಗೂ ಸಮಾಸ, ಏಕಶೇಷ, ಏಕವದ್ಭಾವ, ಸಮಾಸಾಂತ ಪ್ರತ್ಯಯ, ಸಮಾಸಾಶ್ರಯ ವಿಧಿ, ದ್ವಿರುಕ್ತಿ, ತದ್ಧಿತ ಪ್ರಕರಣ ಎಂಬ ಏಳು ಭಾಗಗಳಿವೆ.

ಚತುರ್ಥಃ ಪಾದ :ಇದರಲ್ಲಿ 442 ರಿಂದ 592ರ ವರೆಗಿನ ಸೂತ್ರಗಳಿವೆ ಹಾಗೂ 2ಭಾಗಗಳಿವೆ.

1. **ಧಾತು ಪ್ರಕರಣ :** ಸಕರ್ಮಕ, ಅಕರ್ಮಕ, ದ್ವಿಕರ್ಮಕತ್ವ, ದ, ದಪ, ದವ ಪ್ರತ್ಯಯಗಳು, 'ಪಡು' ಧಾತು ಪ್ರಯೋಗ, ಪ್ರೇರಣಾರ್ಥದ 'ಇಸು' ಪ್ರತ್ಯಯದ ಬಗ್ಗೆ ವಿವರಣೆಇದೆ.

2. **ಕೃದಂತ ಪ್ರಕರಣ :** ಅಚ್, ಅತ್, ಅವಿ, ಅಸು, ವುದು, ಅಲ್, ದೊಡೆ, ವೊಡೆತ್ ಪ್ರತ್ಯಯಗಳ ಬಗ್ಗೆ ತಿಳಿಸಲಾಗಿದೆ.

ಭಟ್ಟಾಕಲಂಕನು ಸಂಸ್ಕೃತ ಮತ್ತು ಕನ್ನಡ ವೈಯಾಕರಣರಿಗೆ ಋಣಿಯಾಗಿದ್ದಾನೆ. ಆತ ತನ್ನ ಶಬ್ದಾನುಶಾಸನವನ್ನು ಶಾಕಟಾಯನಾಚಾರ್ಯರ ಸಂಸ್ಕೃತ ಶಬ್ದಾನುಶಾಸನದ ಮಾರ್ಗದಲ್ಲಿ ರಚಿಸಿದ್ದಾನೆ. ಈತ ಶಾಕಟಾಯನರನ್ನು 'ಆಚಾರ್ಯಃ' ಮತ್ತು ಪ್ರಾಜ್ಞಃ' ಎಂದು, ಶರ್ವವರ್ಮರನ್ನು 'ಪೂರ್ವಾಚಾರ್ಯಃ' ಎಂದು, ಪೂಜ್ಯಪಾದರನ್ನು 'ಭಗವಾನ್' ಎಂದು, ಪಾಣಿನ್ಯಾಚಾರ್ಯರನ್ನು 'ಶಿಕ್ಷಾಕಾರಃ' ಎಂತಲೂ, ಕೇಶಿರಾಜನನ್ನು 'ದರ್ಪಣಕೃತ್' ಎಂಬುದಾಗಿಗೌರವ ವಚನಗಳಿಂದ ಸಂಬೋಧಿಸಿದ್ದಾನೆ. ಇವನು ಶಾಕಟಾಯನರ ಸಂಸ್ಕೃತ ಶಬ್ದಾನುಶಾಸನದಿಂದ ಸುಮಾರು 50ಕ್ಕಿಂತ ಹೆಚ್ಚಿನಸೂತ್ರಗಳನ್ನೂ, ಪಾಣಿನಿಯ ಅಷ್ಟಾಧ್ಯಾಯಿಯಿಂದ ಸುಮಾರು 32 ಸೂತ್ರಗಳನ್ನೂ, ಶರ್ವವರ್ಮನಕಾತಂತ್ರದಿಂದ 30 ಸೂತ್ರಗಳನ್ನೂ, ಪೂಜ್ಯಪಾದರ ಜೈನೇಂದ್ರ ವ್ಯಾಕರಣದಿಂದ 6 ಸೂತ್ರಗಳನ್ನೂ, ಸಾರಸ್ವತದಿಂದ ಮೂರು ಸೂತ್ರಗಳನ್ನೂ ಉದಾಹರಿಸಿದ್ದಾನೆ. ಅಲ್ಲದೇ ನಾಗವರ್ಮನನ್ನೂ ಸ್ಮರಿಸಿದ್ದಾನೆ.

"ಕರ್ಣಾಟಕ ಶಬ್ದಾನುಶಾಸನವನ್ನು ಕ್ರಿ. ಶ. 1890ರಲ್ಲಿ ಬಿ.ಎಲ್. ರೈಸ್ ಅವರು ಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದರು. ಇದರಲ್ಲಿ ರೈಸ್ಅವರು ಪಠ್ಯ ಭಾಗವನ್ನು ರೋಮನ್ ಲಿಪಿಯಲ್ಲಿ ಕೊಟ್ಟು ಸೂತ್ರಗಳನ್ನು ಇಂಗ್ಲೀಷಿನಲ್ಲಿ ಅನುವಾದ ಮತ್ತು ಟಿಪ್ಪಣಿಯೊಡನೆ ಪ್ರಕಾಶಿಸಿದರು"[1]. ಅನಂತರ ಈ ಗ್ರಂಥವನ್ನು ಆರ್. ನರಸಿಂಹಾಚಾರ್ ಅವರು ಸಂಸ್ಕೃತ ಸೂತ್ರಗಳಿಗೆ 'ಭಾಷಾಮಂಜರೀ' ಎಂಬ ವೃತ್ತಿಯನ್ನೂ 'ಮಂಜರೀಮಕರಂದ' ಎಂಬ ಟೀಕೆಯನ್ನೂ ಸಿದ್ಧಪಡಿಸಿ ಹೊರತಂದರು. ಮುಂದೆ 1908ರಲ್ಲಿ 'ಕರ್ಣಾಟಕ ಶಬ್ದಾನುಶಾಸನ'ದ ಮೊದಲನೆಯ ಭಾಗವು ಕುಂಡಲಗಿ ಗಿರ್ಯಾಚಾರ್ಯರಿಂದ ರಚಿತವಾದ ಟೀಕಿನೊಡನೆ ವಾಗ್ಭೂಷಣ ಗ್ರಂಥಮಾಲೆಯ 47ನೆಯ ಗ್ರಂಥವಾಗಿ ಹೊರ ಬಂದಿತು. ಅನಂತರ ಆರ್. ನರಸಿಂಹಾಚಾರ್ಯರಿಂದ ಪರಿಷ್ಕೃತವಾಗಿದ್ದ ಈ ಗ್ರಂಥವು 1923ರಲ್ಲಿ ಮೈಸೂರು ಸರ್ಕಾರದಿಂದ ಪ್ರಕಟವಾಯಿತು. ಈ ಆವೃತ್ತಿಗೆ 3 ಹಸ್ತ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಇವೆಲ್ಲವುಗಳ ಆದಿಯಾಗಿ ಈ ಕೃತಿಯನ್ನು ಮತ್ತೆ ಕ್ರಿ. ಶ. 1941ರಲ್ಲಿ ಸಂಪಾದಿಸಿರುವವರು ಶಿ.ಶಿ.ಬಸವನಾಳರು. ಕುಂಡಲ ಗಿರ್ಯಾಚಾರ್ಯರ ಮೊದಲ ಭಾಗದ ಟೀಕಿನ ಜೊತೆಗೆ ಉಳಿದ ಸೂತ್ರಗಳಿಗೂ ಮ.ಪ್ರ. ಪೂಜಾರರು ಮಾಡಿದ ಟಿಪ್ಪಣಿಗಳ ಸಹಿತವಾದ ಆವೃತ್ತಿಯು 1941ರಲ್ಲಿ ಹೊರ ಬಂದಿತು. ಇವಲ್ಲದೇ ಶ್ರೀನಿವಾಸ ಮೂರ್ತಾಚಾರ್ಯ ಕಟ್ಟಿ ಅವರು 'ಶಬ್ದಾನುಶಾಸನ ಪ್ರಕಾಶಿಕಾ' ಎಂಬ ಟೀಕನ್ನು, ಕ್ರಿ.ಶ. 1968ರಲ್ಲಿ ಡಿ. ಪದ್ಮನಾಭಶರ್ಮ ಅವರು 'ನಲ್ನುಡಿಗನ್ನಡ' ಎಂಬ ವ್ಯಾಖ್ಯಾನವನ್ನು ರಚಿಸಿದ್ದಾರೆ.

"ಭಟ್ಟಾಕಳಂಕನು ತನ್ನ ಗ್ರಂಥವನ್ನು 'ಸ್ವೋಪಜ್ಞ ಶಬ್ದಾನುಶಾಸನ' ಎಂದು ಕರೆದು ಕೊಂಡಿದ್ದಾನೆ. ಬಿ. ಎಲ್. ರೈಸ್ ಅವರು ಈ ಬೃಹತ್ ವ್ಯಾಕರಣ ಗ್ರಂಥವನ್ನು ಪಾಣಿನಿಯ ಅಷ್ಟಾಧ್ಯಾಯಿಗೆ ಹೋಲಿಸಿದ್ದಾರೆ. ಪಾಣಿನಿಯ ಅಷ್ಟಾಧ್ಯಾಯಿಗೆ ಪತಂಜಲಿ ಭಾಷ್ಯವನ್ನು ಬರೆದಂತೆ, ಭಟ್ಟಾಕಳಂಕನ ಶಬ್ದಾನುಶಾಸನಕ್ಕೂ ವರದಾರ್ಯ ಎಂಬುವವನು 'ಶಬ್ದಾನುಶಾಸನ ತತ್ತ್ವಾಲೋಕ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ"[2].

"ಶಬ್ದಾನುಶಾಸನ ಕನ್ನಡ ವ್ಯಾಕರಣ ತತ್ತ್ವಗಳನ್ನು ಸಂಸ್ಕೃತ ಪದ್ಧತಿ ಪರಿಭಾಷೆಗಳಲ್ಲಿ ವಿದ್ವತ್ಪೂರ್ಣವಾಗಿ ವಿವರಿಸಲು ಪ್ರಯತ್ನಿಸಿರುವ ಒಂದು ವೈದಗ್ಧ್ಯ ಕೃತಿ. ಶಾಕಟಾಯನ ಮತ್ತು ಹೇಮಚಂದ್ರರು ತಮ್ಮ ವ್ಯಾಕರಣಗಳಿಗೆ 'ಶಬ್ದಾನುಶಾಸನ' ಎಂಬ ಹೆಸರನ್ನು ಇಟ್ಟಿರುವುದನ್ನು ಪ್ರಾಯಃ ಗಮನಿಸಿಯೋ ಏನೋ, ಹರದತ್ತನ ಕೃತಿಯಾದ 'ಪದಮಂಜರಿ' ಮತ್ತು ಅದಕ್ಕೆ ರಂಗನಾಥನ ವ್ಯಾಖ್ಯಾನವಾದ 'ಮಂಜರೀ ಮಕರಂದ'ವನ್ನು ಲಕ್ಷಿಸಿಯೋ ಏನೋ ಭಟ್ಟಾಕಲಂಕ ತನ್ನ ಕೃತಿಗೆ ಮತ್ತುಅದರ ವ್ಯಾಖ್ಯಾನಗಳಿಗೆ ಸಂವಾದಿಯಾದ ಹೆಸರುಗಳನ್ನಿಟ್ಟಿರಬಹುದು"[3] ಎಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ ಈ ಗ್ರಂಥದ ಮೌಲ್ಯವನ್ನು ಕುರಿತು ಇದು 'ಕನ್ನಡದ ಅಷ್ಟಾಧ್ಯಾಯಿ' ಎಂದು ಬಣ್ಣಿಸಿದ್ದಾರೆ.

ಭಟ್ಟಾಕಲಂಕ ತನ್ನ ಕೃತಿಗೆ ನಾಗವರ್ಮ, ಕೇಶಿರಾಜರಿಂದ ವಿಷಯವನ್ನು ಸ್ವೀಕರಿಸಿದ್ದರೂ ಅವನ್ನು ತುಂಬ ವಿಸ್ತಾರವಾಗಿ ಪ್ರಸ್ತಾಪಿಸಿರುವುದರಿಂದ ಹೆಚ್ಚು ಬೆಲೆ ಬಂದಿದೆ. ಈತ ವರ್ಣಮಾಲೆಯಲ್ಲಿ ಶುದ್ಧಗೆಯ ವಿಚಾರವನ್ನು ಬಹಳ ದೀರ್ಘವಾಗಿ ಹೇಳಿದ್ದಾನೆ. ಈ ಕೃತಿಯಲ್ಲಿನ ಮೊದಲ ಸೂತ್ರ ಹೀಗಿದೆ.

ಸೂತ್ರ : "ಸಿದ್ಧಾಹಿ ಶುದ್ಧಕಾಃ"[4]

ವೃತ್ತಿ : ಅಕಾರಾದಯೋ ವರ್ಣಾಃ ಶುದ್ಧಕಾಃತೇಹಿ ಲೋಕ ಪ್ರಸಿದ್ಧಾಹಿ ವೇದಿತವ್ಯಾಃ

ಅರ್ಥ : 'ಅ' ಕಾರದಿಂದ ಹಿಡಿದು 'ಳ' ಕಾರದವರೆಗಿನ ವರ್ಣಗಳ ಸಮುದಾಯಕ್ಕೆ ಶುದ್ಧಕಗಳೆಂದು ಹೆಸರು. 'ಸಿದ್ಧಾಹಿ' ಎಂಬುದು ವರ್ಣಸಮಾಮ್ನಾಯವು ಲೋಕ ಪ್ರಸಿದ್ಧಿಯಾಗಿದೆ ಎಂದರ್ಥ.

ಈತ ಅ, ಇ, ಉ, ಋ, ಇ, ಏ, ಓ, ಔ ಎಂಬ 9 ಸ್ವರಗಳನ್ನು ಹೆಸರಿಸಿದ್ದಾನೆ. ಅವು ಹ್ರಸ್ವ, ದೀರ್ಘ, ಪ್ಲುತದೃಷ್ಟಿಯಿಂದ 25 ಆಗುತ್ತವೆ ಎಂದು ಹೇಳಿ, 25 ಸ್ವರಗಳನ್ನು ಕನ್ನಡಕ್ಕೆ ಪಟ್ಟಿ ಹಾಕಿರುವುದು ಅನುಚಿತ ಎನಿಸುತ್ತದೆ. ವರ್ಗೀಯಗಳು–25, ಅವರ್ಗೀಯಗಳು–8, ಱ, ೞ –02 ಎಂದು ಗುರುತಿಸಿ, ಒಟ್ಟು 35 ವ್ಯಂಜನಾಕ್ಷರಗಳು ಎಂದಿದ್ದಾನೆ. ಕವರ್ಗ, ಚವರ್ಗ, ಟವರ್ಗ, ತವರ್ಗ ಮತ್ತು ಪವರ್ಗವೆಂದು ಐದು ವರ್ಗಗಳಿವೆ. ಉಳಿದ ವರ್ಣಗಳು ಅವರ್ಗೀಯಗಳು, ಯರಲವ ಅಂತಸ್ಥಗಳು, ಶ, ಷ ಸಹ ಊಷ್ಮ ವರ್ಣಗಳೆಂದಿದ್ದಾನೆ. ಉಳಿದಂತೆ ಅಲ್ಪಪ್ರಾಣ, ಮಹಾಪ್ರಾಣ, ಅನುನಾಸಿಕಗಳ ಬಗ್ಗೆಯೂ ತಿಳಿಸಿದ್ದಾನೆ. ಆದರೆ ವರ್ಣಮಾಲೆಯ ವಿಚಾರವನ್ನು ಈತ ವಿವೇಚಿಸಿರುವ ಬಗ್ಗೆ ಸರಿ ಎನಿಸುವುದಿಲ್ಲ.

ಱ ೞ, ಕುಳ, ಕ್ಷಳ ಗಳ ವಿಚಾರ : ಱ, ೞ, ಕಾರಗಳು ಕನ್ನಡಕ್ಕೆ ಅಂಗೀಕಾರವಾಗಿರುವುದರಿಂದ ಅವುಗಳನ್ನು ಹಾಗೆ ಉಳಿಸಿಕೊಂಡಿದ್ದಾನೆ. ಆದರೆ ಕುಳ, ಕ್ಷಳ ಗಳನ್ನು ಕೈ ಬಿಟ್ಟಿದ್ದಾನೆ. ಉಚ್ಚಾರಣೆಯ ದೃಷ್ಟಿಯಿಂದ ಱ, ೞ, ಕುಳ, ಕ್ಷಳಗಳಿಗೆ ಅಭೇದವನ್ನು ಹೇಳಿ, ೞ, ಕಾರದಲ್ಲಿಯೇ ಕುಳ, ಕ್ಷಳಗಳಿಗೆ ಅಂತರ್ಭಾವವನ್ನು ಸೂಚಿಸಿದ್ದಾನೆ.

ನಾಮಿಯ ವಿಚಾರವಾಗಿ ಪಾಣಿನಿ, ನಾಗವರ್ಮ, ಕೇಶಿರಾಜ ಅವರು ಪ್ರಸ್ತಾಪಿಸಿದ್ದಾರೆ. ಆದರೆ ಭಟ್ಟಾಕಳಂಕ ತನ್ನಗ್ರಂಥದಲ್ಲಿ ಸೂಚಿಸಿಲ್ಲ. ಮಹಾ ಪ್ರಾಣಗಳಿಗೆ ಸಂಬಂಧಿಸಿದಂತೆ ಚರ್ಚೆ ಮಾಡದೆ ಮೂಲ ವರ್ಣಗಳಲ್ಲೇ ಅಡಕಮಾಡಿದ್ದಾನೆ. ಅವರ್ಗೀಯ ವ್ಯಂಜನಗಳಾದ ಯ, ವ, ಲ, ಗಳು ಅನುನಾಸಿಕವೂ ಆಗಿವೆ ಎಂದು ಹೇಳಿರುವುದು ವಿಶೇಷವಾಗಿದೆ. ಹಾಗೆಯೇ ವಕಾರಾಗಮ ಸಂಧಿಯನ್ನು ವಿವರಿಸುವಾಗ ಲೃಲ್ಲಾ ಗಳ ಪ್ರಸ್ತಾಪ, ದ್ವಿತ್ವ ಸಂಧಿಯನ್ನುಅನವಶ್ಯಕವಾಗಿ ವಿಸ್ತರಿಸಿ ಹೇಳಿರುವುದು ಸಮಂಜಸವಲ್ಲ.

ಭಟ್ಟಾಕಳಂಕ ತನ್ನಕೃತಿಯಲ್ಲಿ ಸುಮಾರು 50ಕ್ಕೂ ಹೆಚ್ಚು ಕೃತಿಗಳಿಂದ ಉದಾಹರಣೆಗಳನ್ನು ತೆಗೆದುಕೊಂಡಿದ್ದಾನೆ. ಕ್ರಿ.ಶ. 850ರ ಕವಿರಾಜ ಮಾರ್ಗದಿಂದ ಹಿಡಿದು; ಆದಿಪುರಾಣ, ಪಂಪಭಾರತ, ಗದಾಯುದ್ಧ, ಜಿನಾಕ್ಷರ ಮಾಲೆ, ನೇಮಿನಾಥ ಪುರಾಣ, ಧರ್ಮಾಮೃತ, ಕಾವ್ಯಸಾರ, ಪಂಪರಾಮಾಯಣ, ಜಗನ್ನಾಥ ವಿಜಯ, ಕಬ್ಬಿಗರ ಕಾವ, ಚಂದ್ರಪ್ರಭ ಪುರಾಣ, ಪುಷ್ಪದಂತ ಪುರಾಣ ಹೀಗೆ ಕ್ರಿ.ಶ. 1385ರ ಮಧುರನ ಗೊಮ್ಮಟ ಸ್ತುತಿಯವರೆಗಿನ ಕಾವ್ಯಗಳನ್ನು ಲಕ್ಷಿಸಿ ವಿರಳವಾಗಿ ಅವುಗಳಿಂದ ಪ್ರಯೋಗಗಳನ್ನು ತೆಗೆದುಕೊಂಡಿರುವುದು ಗಮನಾರ್ಹ ವಿಚಾರವಾಗಿದೆ. ಆದರೆ "ನಡುಗನ್ನಡ ಕಾಲದ ಅನಂತರ ಬರುವ ಈತ ಅದರ ಬಗ್ಗೆ ಸ್ವಲ್ಪವಾದರೂ ಪ್ರಸ್ತಾಪಿಸದಿರುವುದುತುಂಬ ಆಶ್ಚರ್ಯ; ಬದಲಾಗುತ್ತಿದ್ದ ತನ್ನ ಕಾಲದ ಕನ್ನಡ ಭಾಷೆಯ ಬಗ್ಗೆಯೂ ಗಮನ ಹರಿಸದಿರುವುದು ಒಂದು ಕೊರತೆಯೇ. ನಾಗವರ್ಮ, ಕೇಶಿರಾಜರ ಕೃತಿಗಳಿಗಿಂತ ಇದುದೊಡ್ಡದಾಗಿದ್ದರೂ ಆ ಕೃತಿಗಳಲ್ಲಿಯ ಔಚಿತ್ಯ, ಕನ್ನಡ ಭಾಷಾ ಪರಿಜ್ಞಾನ, ಪ್ರಯೋಗ ಪ್ರಾಮಾಣ್ಯವನ್ನು ಇದರಲ್ಲಿ ಕಾಣಲಾಗದು"[5] ಎಂಬ ಎನ್.ಎಸ್. ತಾರಾನಾಥ ಅವರ ಮಾತುಗಳು ದಿಟವಾಗಿವೆ.

ಭಟ್ಟಾಕಳಂಕನ ಶಬ್ದಾನುಶಾಸನ ನಾಗವರ್ಮ, ಕೇಶಿರಾಜರ ವ್ಯಾಕರಣ ಕೃತಿಗಳಿಗಿಂತ ಗಾತ್ರದಲ್ಲಿ ಬೃಹತ್ತಾಗಿದೆ. ಕೆಲವು ವಿಚಾರಗಳಲ್ಲಿ ದೀರ್ಘಪ್ರಸ್ತಾಪ ಮತ್ತು ವೈಶಿಷ್ಟ್ಯತೆ ಇದ್ದರೂ ವಿಷಯ ನಿರೂಪಣೆಯಲ್ಲಿ ಅಸ್ಪಷ್ಟತೆ ಇದೆ. ಹಾಗೆಯೇ ಇದರಲ್ಲಿ ಸಂಸ್ಕೃತ ವ್ಯಾಕರಣಗಳ ಪ್ರಭಾವ ದಟ್ಟವಾಗಿರುವುದರಿಂದ ಕನ್ನಡ ವ್ಯಾಕರಣಾಭ್ಯಾಸಿಗಳಿಗೆ ಅಷ್ಟಾಗಿ ರುಚಿಸಲಿಲ್ಲ ಎಂದೆನಿಸುತ್ತದೆ.

ಅಡಿ ಟಿಪ್ಪಣಿಗಳು

- **ಬಿ.ಎಸ್.ಸಣ್ಣಯ್ಯ :** ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ, ಪು.ಸಂ. 331.
- **ಸಂಗಮೇಶ ಸವದತ್ತಿಮಠ :** ಕನ್ನಡ ಭಾಷಾ ವ್ಯಾಸಂಗ, ಪು.ಸಂ. 29.
- **ಆರ್. ನರಸಿಂಹಾಚಾರ್ಯರು :** ಕರ್ಣಾಟಕ ಶಬ್ದಾನು ಶಾಸನಂ, ಪು.ಸಂ. 7.
- **ಡಿ. ಪದ್ಮನಾಭಶರ್ಮ ಭುವನಹಳ್ಳಿ :** ಕರ್ಣಾಟಕ ಶಬ್ದಾನು ಶಾಸನಂ–ನಲ್ನುಡಿಗನ್ನಡಿ, ಪು.ಸಂ.21.
- **ಎನ್. ಎಸ್. ತಾರಾನಾಥ :** ಶೋಧನ ಲೋಕ, ಪು.ಸಂ.44.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

"ಡಾ. ಸಿದ್ಧಲಿಂಗಯ್ಯ : ಕನ್ನಡ ಸಾಹಿತ್ಯ ಪರಂಪರೆ"

✍ **ಡಾ. ಪಿ. ನಂಜುಂಡ,** ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಬೆಂಗಳೂರು.

> "ಕನ್ನಡ ಕಾವ್ಯ ಮುದಿಯಾಗಿ ಸತ್ತಿತು ಅನ್ನುವಷ್ಟರಲ್ಲಿ ಅಲ್ಲೇ ಹೊಸ ಚಿಗುರು ಕಾಣಿಸಿಕೊಂಡಿದೆ. ಅದು ಸಿದ್ಧಲಿಂಗಯ್ಯ ಅವರ 'ಹೊಲೆ ಮಾದಿಗರ ಹಾಡು'. ಹೊಸ ಜಗತ್ತಿನಿಂದ ಎದ್ದ ದನಿಯೆಂಬ ಕಾರಣಕ್ಕಾಗೋ ಏನೋ ಅನೇಕ ಸಾಹಿತ್ಯೇತರ ಸಮಸ್ಯೆಗಳಿಗೆ ಈ ಪುಟ್ಟ ಪುಸ್ತಕ ಉತ್ತರ ಕೊಡುತ್ತದೆ. ಎಷ್ಟೋ ಚರ್ಚೆಗೆ, ಥಿಯರಿಗೆ ನಿಲುಕದ ನಿಜವನ್ನು 'ಹೊಲೆ ಮಾದಿಗರ ಹಾಡು' ತೋರಿಸಿಕೊಡುತ್ತದೆ
>
> – ದೇವನೂರು ಮಹಾದೇವ"

ಎರಡು ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಲವಾರು ಕವಿಗಳು, ಲೇಖಕರು, ಸಾಹಿತ್ಯದ ನಾನಾ ಪ್ರಕಾರದಲ್ಲಿ ತಮ್ಮ ಸಾಹಿತ್ಯ ಕೃಷಿಯನ್ನು ನಡೆಸಿದ್ದಾರೆ. ಲಿಖಿತ ಮತ್ತು ಮೌಖಿಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹಲವಾರು ಸಾಹಿತಿಗಳು ಭಾಷೆಯ ಮೂಲಕ ಕನ್ನಡ ಸಾಹಿತ್ಯ ಪರಂಪರೆಯನ್ನು ಶ್ರೀಮಂತ ಹಾಗೂ ಧೀಮಂತಗೊಳಿಸುವ ಕೆಲಸವನ್ನು ಮಾಡಿದ್ದಾರೆ. ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ–ದಲಿತ, ಸ್ತ್ರೀ ಸಂವೇದನೆಗಳು ಮತ್ತು ಸಾಂಸ್ಕೃತಿಕ ಅಧ್ಯಯನಗಳೆಂಬ ವರ್ಗೀಕರಣದಲ್ಲಿ ಹಲವಾರು ಲೇಖಕ–ಲೇಖಕಿಯರು ತಮ್ಮ ಸಮಕಾಲೀನ ಸಮಾಜದ ಆಗುಹೋಗುಗಳನ್ನು ಸಾಮಾಜಿಕ–ಆರ್ಥಿಕ–ರಾಜಕೀಯ ಸ್ಥಿತ್ಯಂತರಗಳನ್ನು ಸಾಹಿತ್ಯದ ನಾನಾ ಪ್ರಕಾರಗಳ ಮೂಲಕ ಕನ್ನಡ ಭಾಷೆಯಲ್ಲಿ ಸಮರ್ಥವಾಗಿ ದಾಖಲಿಸುವ ಕೆಲಸವನ್ನು ಪ್ರಾಮಾಣಿಕವಾಗಿ ನಿಭಾಯಿಸಿದ್ದಾರೆ. ವರ್ಗ, ವರ್ಣ, ಲಿಂಗ, ಭಾಷೆ ಮತ್ತು ಪ್ರಾದೇಶಿಕ ಸಂಘರ್ಷಗಳನ್ನು ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ಮಂಡಿಸಿ ಯಶಸ್ವಿಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯು ಸಮೃದ್ಧವಾಗಿದೆ ಮತ್ತು ಸಂಪತ್‌ಭರಿತವಾಗಿದೆ.

ಕವಿರಾಜ ಮಾರ್ಗಕಾರ, ಪಂಪ, ರನ್ನ, ಜನ್ನ, ಪೊನ್ನ, ವಚನಸಾಹಿತ್ಯ, ರಾಘವಾಂಕ, ಹರಿಹರ, ಕುಮಾರವ್ಯಾಸ, ಪುರಂದರದಾಸರು, ಕನಕದಾಸರು, ನವೋದಯದಿಂದ ಸಾಂಸ್ಕೃತಿಕ ಅಧ್ಯಯನದ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನಾಡಿನ ಜನಜೀವನವನ್ನು ಬಿಂಬಿಸುವ ಕನ್ನಡ ನಾಡಿನ ಆಚಾರ–ವಿಚಾರ, ಸಂಪ್ರದಾಯಗಳನ್ನು ದಾಖಲಿಸುವ ಪ್ರಯತ್ನವನ್ನು ಮಾಡಿದ್ದಾರೆ.

ನವೋದಯ ಕಾಲಘಟ್ಟದಲ್ಲಿ ಪ್ರಮುಖವಾಗಿ ಕೇಳಿಬರುವ ಲೇಖಕ ಕುವೆಂಪು. ಸಂಪ್ರದಾಯ ಕೇಂದ್ರಿತ ಸಂಸ್ಕೃತಿ ಮತ್ತು ಸಂಸ್ಕೃತ ಕೇಂದ್ರಿತ ಚಿಂತನೆಗಳು ಮುನ್ನಲೆಗೆ ಇದ್ದ ಈ ಹೊತ್ತಿನಲ್ಲಿ ಶೂದ್ರ ಪ್ರತಿಭೆಯಾದ ಕುವೆಂಪು ಅವರು ಮಲೆನಾಡಿನ ಕುಗ್ರಾಮವಾದ ಕುಪ್ಪಳ್ಳಿಯಲ್ಲಿ ಜನಿಸಿ, ಕನ್ನಡ ಸಾಹಿತ್ಯ ಪರಂಪರೆಗೆ ಭಿನ್ನ ಧ್ವನಿಯನ್ನು ಸೇರಿಸಿದವರು. ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಬ್ರಾಹ್ಮಣ್ಯತ್ವದ ವಿರೋಧಿತನವನ್ನು ತೋರಿ ಸಂಪ್ರದಾಯ ಕೇಂದ್ರಿತ ಸಂಸ್ಕೃತಿ ಮತ್ತು ಸಂಸ್ಕೃತ ಭಾಷೆಗಳನ್ನು ಅರಗಿಸಿಕೊಂಡು, ಹೊಸ ಮನ್ವಂತರವನ್ನು ಸಾಹಿತ್ಯದಲ್ಲಿ ತಂದು ಯಶಸ್ವಿಯಾಗಿ, ಕರ್ನಾಟಕದ ಸಾಂಸ್ಕೃತಿಕ ನಾಯಕರಾದರು.

ನವೋದಯ, ಪ್ರಗತಿಶೀಲ, ನವ್ಯ ಸಾಹಿತ್ಯ ತನ್ನ ಕಾವು ಹಾಗೂ ತೀವ್ರತೆ ಕಳೆದುಕೊಳ್ಳುವ ವೇಳೆಯಲ್ಲಿ ಬಂಡಾಯ–ದಲಿತ ಧ್ವನಿಯು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಬಲವಾಯಿತು. "ಬೂಸ ಚಳುವಳಿ" ಕನ್ನಡ ಸಾಹಿತ್ಯ ಪರಂಪರೆಯಲ್ಲಿ, ಚಾರಿತ್ರಿಕ ದೃಷ್ಟಿಕೋನದಿಂದ ಮಹತ್ವದ ಸ್ಥಾನವಿದೆ. 'ಬೂಸ ಚಳುವಳಿ' ಕನ್ನಡ ಸಾಹಿತ್ಯ ಪರಂಪರೆಯನ್ನು ಮತ್ತೆ ಮರು ಓದಿಗೆ ತೀವ್ರವಾಗಿ ಒತ್ತಾಯಿಸಿದ ಸಂದರ್ಭ. ಶ್ರೀ. ಬಿ. ಬಸವಲಿಂಗಪ್ಪನವರು ದಿನಾಂಕ 18–11–1973ರಂದು ಮೈಸೂರಿನಲ್ಲಿ ನಡೆದ ಸಮಾರಂಭದಲ್ಲಿ "ಕನ್ನಡ ಸಾಹಿತ್ಯ ಬಹಳಷ್ಟು ಬೂಸದಿಂದ ಕೂಡಿದೆ" ಎನ್ನುವ ಮಾತುಗಳು, ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅನೇಕ ವಾದ– ಪ್ರತಿವಾದ– ವಿವಾದಗಳು ನಡೆದು, ಕೊನೆಗೆ ಶ್ರೀ ಬಿ. ಬಸವಲಿಂಗಪ್ಪರವರ ಶಾಸಕತ್ವದ ರಾಜೀನಾಮೆಯೊಂದಿಗೆ 'ಬೂಸ' ವಿಚಾರ ತಾರಕಕ್ಕೆ ಏರಿತು. ಈ ಅವಧಿಯಲ್ಲಿ ಅವರ ನೆರವಿಗೆ ಬಂದಿದ್ದು, ಕನ್ನಡ ಸಾಹಿತ್ಯದ ದಲಿತರ ಆದಿಕವಿ ಹುಟ್ಟು ಹೋರಾಟಗಾರರಾದ ನಾಡೋಜ ಡಾ.ಸಿದ್ಧಲಿಂಗಯ್ಯ.

ಈಗೀನ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಮಂಚನಬೆಲೆ ಗ್ರಾಮದಿಂದ ಬಂದ ಸಿದ್ದಲಿಂಗಯ್ಯ ಅವರು ತಂದೆ–ತಾಯಿಯ ಅನೇಕ ಗುಣಗಳನ್ನು ಚಿಕ್ಕಂದಿನಿಂದಲೇ ಮೈಗೂಡಿಸಿಕೊಂಡು, ಮನೆಯ ಹಿರಿಯಮಗನಾಗಿ, ಕನ್ನಡ ಸಾಹಿತ್ಯ ಪರಂಪರೆಗೆ ವಿಶಿಷ್ಟ ಧ್ವನಿಯಾಗಿ, ದಣಿಯಾಗಿ ಗುರುತಿಸಿಕೊಂಡಿದ್ದಾರೆ. ಅವರ ಬಾಲ್ಯದ ಬಡತನಗಳು, ಜಾತಿಯ ಅಪಮಾನ–ಅವಮಾನಗಳು ಮುಂದೆ ಅದು ಸನ್ಮಾನವಾಗಿ ಪರಿವರ್ತಿತವಾದ ಬಗೆ ನಿಜಕ್ಕೂ ವಿಸ್ಮಯ.

ಸಿದ್ಧಲಿಂಗಯ್ಯ ಅವರನ್ನು ರೂಪಿಸಿದ ಪರಿಸರ ಕೇರಿ ಮತ್ತು ಊರು. ಮಾಗಡಿ ಮತ್ತು ಶ್ರೀರಾಂಪುರಂ ಇವೆರಡೂ ಅವರ ವ್ಯಕ್ತಿತ್ವದ ಭಾಗಗಳೇ ಆಗಿವೆ. ಸಿದ್ಧಲಿಂಗಯ್ಯ ಅವರನ್ನು ಚಳುವಳಿಗಾರ, ಹೋರಾಟಗಾರನಾಗಿ ಮಾಡಿದ ಶ್ರೇಯಸ್ಸು ಶ್ರೀರಾಂಪುರಂ ನಗರಕ್ಕಿದ್ದರೆ, ಕೇರಿಯಾದ ಮಾಗಡಿಯು ಅವರಲ್ಲಿರುವ ಮುಗ್ಧತೆಯನ್ನು ನಾಶ ಮಾಡದೇ, ಬದುಕನ್ನು ಮುಕ್ತವಾಗಿ ನೋಡುವ ಕ್ರಮವನ್ನು ಕಲಿಸಿದೆ ಎನ್ನಬಹುದು.

ಸಿದ್ಧಲಿಂಗಯ್ಯ ಅವರು ಮೊದಲ ತಲೆಮಾರಿನ ಅಕ್ಷರ ಕಲಿತ ದಲಿತ ಸಮುದಾಯಕ್ಕೆ ಸೇರಿ, ತನ್ನ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಕಣ್ಣಾರೆ ಕಂಡವರು. ಭಾರತದ ಸಂವಿಧಾನದ ಪಿತಾಮಹರಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು ಮತ್ತು ಬರಹಗಳು ಸಿದ್ಧಲಿಂಗಯ್ಯ ಅವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ತನ್ನ ಸಮುದಾಯದ ದುಃಖ, ದುಮ್ಮಾನ, ನೋವುಗಳಿಗೆ ಇರುವ ಏಕೈಕ ಪರಿಹಾರ ಅದು ಡಾ. ಬಿ. ಆರ್. ಅಂಬೇಡ್ಕರ್ ಅವರ ಚಿಂತನೆಗಳೆಂದು ಚಿಕ್ಕಂದಿನಲ್ಲೇ ಅರ್ಥ ಮಾಡಿಕೊಂಡ ಸಿದ್ಧಲಿಂಗಯ್ಯ ಅವರು ತಮ್ಮ ಸಮಾಜ ಅನುಭವಿಸುತ್ತಿರುವ ಜಾತಿಯ ಅಪಮಾನಕ್ಕೆ ಮುಖ್ಯ ಕಾರಣ, ತನ್ನ ವರ್ಗದಲ್ಲಿರುವ ಶಿಕ್ಷಣದ ಕೊರತೆಯೆಂದು ಪರಿಭಾವಿಸಿ, ತನ್ನ ಜನಾಂಗಕ್ಕೆ ಮೊದಲು ಶಿಕ್ಷಣ ಸಿಕ್ಕರೆ ಅವರು ಜಾಗೃತರಾಗುತ್ತಾರೆಂದು ಮನಗೊಂಡು, ಕೊಳಗೇರಿಯಲ್ಲಿರುವ ತನ್ನ ಸಮುದಾಯಕ್ಕೆ, ರಾತ್ರಿ ಶಿಕ್ಷಣವನ್ನು ನೀಡಲು ಮುಂದಾಗಿ ಅದರಲ್ಲಿ ಅಭೂತಪೂರ್ವ ಯಶಸ್ಸು ಅನ್ನು ಪಡೆದರು.

ಡಾ. ಬಿ. ಆರ್. ಅಂಬೇಡ್ಕರ್ ಅವರ ಮೂಲ ಪರಿಕಲ್ಪನೆಗಳಾದ ಶಿಕ್ಷಣ, ಸಂಘಟನೆ, ಹೋರಾಟ ಈ ತ್ರಿವಳಿಶಕ್ತಿಗಳ ಬಗ್ಗೆ ನಂಬಿಕೆಯಿದ್ದ ಸಿದ್ಧಲಿಂಗಯ್ಯ ಅವರು ತಮ್ಮ ಜನಾಂಗದ ಶೋಷಣೆಯ ಬಿಡುಗಡೆಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶ್ರಮಿಸಿದ್ದು, ಭಾಷೆಯ ಮೂಲಕ, ಹಾಡಿನ ಮೂಲಕ. ಇದು ಕವಿಗಳ ಬದುಕಿನಲ್ಲಿ ಗಮನಿಸಬೇಕಾದ ಗಮನಾರ್ಹ ಸಂಗತಿ.

ದನಿಯಿಲ್ಲದವರಿಗೆ ದನಿಯಾಗಿ, ಕನ್ನಡ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡ ಸಿದ್ಧಲಿಂಗಯ್ಯ ಅವರು ಇಂದು ಅಂತರರಾಷ್ಟ್ರೀಯ ಕವಿಯಾಗಿ, ಜನಮಾನಸದಲ್ಲಿ ಜನಪದ ಕವಿಯಾಗಿದ್ದಾರೆ. ಹಾಗೆಯೇ ತನ್ನ ಸಮಾಜದ ನೋವು, ಕಷ್ಟ, ಕಾರ್ಪಣ್ಯಗಳನ್ನು ಹಾಡಾಗಿಸಿದ್ದಾರೆ.

"ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು"
"ದಲಿತರು ಬರುವರು, ದಾರಿಬಿಡಿ, ದಲಿತರಿಗೆ ರಾಜ್ಯ ಕೊಡಿ"
"ಹಸಿವನಿಂದ ಸತ್ತೋರು ಸೈಜುಗಲ್ಲು ಹೊತ್ತೋರು ನನ್ನ ಜನಗಳು"
"ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ"
"ಗುಡಿಸಿನಲ್ಲಿ ಅರಳುವ ಗುಲಾಬಿ, ಬದುಕ
ಪ್ರೀತಿಸುವ, ಕಾಡಿನ ನಡುವೆ ಕಂಗೆಟ್ಟವರಿಗೆ
ನಡುರಾತ್ರಿಯಲಿ ನಡುಗುವ
ಜನತೆಗೆ ಬಂಡಾಯ, ಜೀವ ಮತ್ತು ಧೈರ್ಯ ಕೊಡುವ ಕವನ"
"ದೊಡ್ಡ ಗೌಡರ ಬಾಗಿಲಿಗೇ, ನಮ್ಮ ಮೂಳೆಯೇ ತ್ವಾರಣ"

ಈ ಮೇಲಿನ ಸಾಲುಗಳು ಸಿದ್ಧಲಿಂಗಯ್ಯ ಅವರ ಲೇಖನಿಯಿಂದ ಬಂದ ಶಕ್ತ ಕೆಲವು ಸಾಲುಗಳು. ಸಿದ್ಧಲಿಂಗಯ್ಯ ಅವರು ಕನ್ನಡದ ಪ್ರಮುಖ ಕವಿಯಾಗಿ ಮೂಡಲು ಕಾರಣ, ಅವರ ನಿರಂತರವಾದ ಅಧ್ಯಯನದ ಆಸಕ್ತಿ, ಚಿಕ್ಕಂದಿನಿಂದಲೂ ನಾಸ್ತಿಕ ಗುಣವನ್ನು ಹೊಂದಿದ್ದರಿಂದ, ಸಹಜವಾಗಿ ಅವರಲ್ಲಿ ವೈಚಾರಿಕ ಪ್ರಜ್ಞೆಯು ದಟ್ಟವಾಗಿದೆ. ಕನ್ನಡ ಸಾಹಿತ್ಯ ಪರಂಪರೆಯನ್ನು ಆಳವಾಗಿ ಅಧ್ಯಯನ ಮಾಡಿ, ಕನ್ನಡ ನಾಡು, ನುಡಿಯ ಬಗ್ಗೆ ವ್ಯಾಮೋಹವನ್ನು ಹೊಂದಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿರುವ ಪ್ರತಿಭಟನೆಯ ಅಂಶಗಳು ಸಿದ್ಧಲಿಂಗಯ್ಯ ಅವರಿಗೆ ಹೆಚ್ಚು ಆಪ್ತವಾದದ್ದು. ಈ ಪ್ರತಿಭಟನೆಯ ಮೂಲ ನೆಲೆಗಳಾದ ಗಾಂಧಿ, ಅಂಬೇಡ್ಕರ್, ಲೋಹಿಯಾ ವಾದಗಳನ್ನು ನಿರಂತರವಾಗಿ ಅನುಸಂಧಾನವನ್ನು ಮಾಡಿಕೊಂಡು ಬಂದಿದ್ದಾರೆ.

ಸಿದ್ಧಲಿಂಗಯ್ಯ ಅವರು ಕನ್ನಡ ಸಾಹಿತ್ಯ ಪರಂಪರೆಯ ಮುಖ್ಯಧಾತುವಾದ ಸಂದರ್ಭ. ಅವರ 'ಹೊಲೆಮಾದಿಗರ ಹಾಡು' ಕವನ ಸಂಕಲನದಿಂದ. ಕನ್ನಡ ಸಾಹಿತ್ಯ ಕಾವ್ಯ ಪರಂಪರೆಗೆ ಹೊಸದಾದ ನುಡಿಗಟ್ಟನ್ನು ಕೊಡುವ ಕೆಲಸವನ್ನು ಮಾಡಿದರು. ಸಂಪ್ರದಾಯ ಸಮಾಜ 'ಹೊಲೆ ಮಾದಿಗರ ಹಾಡು' ಕವನ ಸಂಕಲನ ಬಿಡುಗಡೆಯಾದಾಗ ಬೆಚ್ಚಿತು. 1975ರಲ್ಲಿ ಬಿಡುಗಡೆಯಾದ 'ಹೊಲೆ ಮಾದಿಗರ ಹಾಡು' ಕವನಗಳು ಬೆಳಕು ಮೂಡುವ ವೇಳೆಗಾಗಲೇ ಸಿದ್ಧಲಿಂಗಯ್ಯ ಕನ್ನಡದ ಭರವಸೆಯ ಕವಿ ಸಿದ್ಧಲಿಂಗಯ್ಯರಾಗಿ ರೂಪಾಂತರಗೊಂಡರು. ನಂತರ ಬಂದ ಅವರ 'ಸಾವಿರಾರು ನದಿಗಳು', 'ಕಪ್ಪು ಕಾಡಿನ ಹಾಡು', 'ಮೆರವಣಿಗೆ' ಕವನ ಸಂಕಲನಗಳು ಹೋರಾಟವನ್ನು ರೂಪಿಸುವ ದಿವ್ಯಶಕ್ತಿಗಳಾಗಿ ರೂಪುಗೊಂಡವು.

ಕನ್ನಡ ಸಾಹಿತ್ಯ ಪರಂಪರೆಯು ಇಲ್ಲಿಯವರೆಗೂ ರೂಢಿಸಿಕೊಂಡು ಬಂದ ಶಿಲಾಲತೆಯ ಭಾಷೆಯನ್ನು ಮುರಿದು, ಹೊಸಅನುಭವ–ಹೊಸವಿಚಾರಗಳೊಂದಿಗೆ, ಶ್ರಮಿಕ ಸಮುದಾಯದ ಭಾವನೆಗಳನ್ನು ತಮ್ಮ ಕಾವ್ಯಗಳಲ್ಲಿ ಅಭಿವ್ಯಕ್ತಪಡಿಸಿ, ಅವರ 'ಪಂಚಮ', 'ನೆಲಸಮ' ಮತ್ತು 'ಏಕಲವ್ಯ' ನಾಟಕಗಳು ತಮ್ಮ ಸಮುದಾಯದ ಮೇಲೆ ಮೇಲ್ವರ್ಗದವರ ನಿರಂತರವಾದ ದಬ್ಬಾಳಿಕೆಗಳನ್ನು, ಜನಸಾಮಾನ್ಯರಿಗೆ ತಿಳಿಸುವ ಪ್ರಯತ್ನವನ್ನು ಮಾಡಿದರು. ಭಾರತೀಯರಲ್ಲಿರುವ ಜಾತಿಭೂತಗಳ, ವಿಕಾರಗಳ ಬಗ್ಗೆ ನೇರವಾಗಿ, ದಿಟ್ಟವಾಗಿ ಬರೆಯುವ ಪ್ರಶ್ನಿಸುವ ಬಂಡಾಯ ಮನೋಧರ್ಮದ ಕವಿ ಸಿದ್ಧಲಿಂಗಯ್ಯ ಅವರು ತಮ್ಮ ಕವಿತೆ ಮತ್ತು ನಾಟಕಗಳಿಂದ ಸಾಮಾನ್ಯ ಜನತೆಗೆ ಹತ್ತಿರವಾದರು.

ಈ ವೇಳೆಯಲ್ಲಿ ಕವಿ ಸಿದ್ಧಲಿಂಗಯ್ಯ ಅವರು ತಮ್ಮ ಪಿಎಚ್.ಡಿ ವ್ಯಾಸಂಗದಲ್ಲಿ ಒಂಬತ್ತು ವರ್ಷಗಳು ಕರ್ನಾಟಕದಲ್ಲಿರುವ ಶಿಷ್ಟ – ಜನಪದೀಯ ದೇವತೆಗಳ ಅಧ್ಯಯನ ನಡೆಸಿದರು. ಈ ವೇಳೆಯಲ್ಲಿ ಕರ್ನಾಟಕ ಸಂಪೂರ್ಣ ನಗರ– ಹಳ್ಳಿಯ ಪರಿಚಯ ಕವಿ ಸಿದ್ಧಲಿಂಗಯ್ಯ ಅವರಿಗೆ ಆಗಿತ್ತು. ಈ ವೇಳೆ ಜನಸಾಮಾನ್ಯರ ನಂಬಿಕೆಗಳು, ಆಚರಣೆಗಳು ಸಂಪ್ರದಾಯದ ಮೂಲಕ ಆಳವಾಗಿ ಗ್ರಾಮದಲ್ಲಿ ಹೇಗೆ ಬೇರೂರಿದೆಯೆಂದು ಗ್ರಹಿಸಿದರು. ಗ್ರಾಮೀಣ ಭಾಗದ ಜನರಲ್ಲಿ ನಡೆಯುತ್ತಿರುವ ಶೋಷಣೆಗಳ ಅವರಿಗೆ ತಮ್ಮ ತಿರುಗಾಟದ ಮೂಲಕ ಸಂಪೂರ್ಣವಾಗಿ ಗಮನಕ್ಕೆ ಬಂದಿತ್ತು. ಅವರ 'ಗ್ರಾಮದೇವತೆಗಳು' ಪುಸ್ತಕಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ನೀಡಿತು. 'ಅವತಾರಗಳು' ಎನ್ನುವ ಕೃತಿಯು ಗ್ರಾಮೀಣ ದೇವರುಗಳ ಬಗ್ಗೆ ಬೆಳಕು ಚೆಲ್ಲುವ ಕೃತಿ.

ಕವಿ ಸಿದ್ಧಲಿಂಗಯ್ಯ ಅವರ "ಅವತಾರಗಳು ಮತ್ತು ಗ್ರಾಮ ದೇವತೆಗಳು" ಕೃತಿ ಕನ್ನಡ ಸಾಹಿತ್ಯ ಪರಂಪರೆಗೆ ವಿಶಿಷ್ಟವಾದ ಗದ್ಯ ಕೃತಿಗಳು. ಗ್ರಾಮದೇವತೆಗಳು ಪುಸ್ತಕ ಇಂದು ಸಹ ಕನ್ನಡ ಸಾಹಿತ್ಯ ಸಂಶೋಧನೆ ಮಾಡುವ ವಿದ್ಯಾರ್ಥಿಗಳಿಗೆ ಪ್ರಮುಖವಾದ ಆಕರ ಪಠ್ಯವಾಗಿದೆ.

ಅವರ 'ಊರು–ಕೇರಿ' ಭಾಗ–1, 2, ಮತ್ತು 3 ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಂದಿರುವ ಆತ್ಮಕಥೆಯಲ್ಲಿಯೇ ತುಂಬಾ ವಿಶಿಷ್ಟ ಮತ್ತು ವಿನೋದದಿಂದ ಕೂಡಿದ್ದು, ಕಾರಣ ಅವರು ತಮ್ಮ ಆತ್ಮಕಥೆಯಲ್ಲಿ ಬಳಸುವ ನಾಟಕೀಯವಾದ ಶೈಲಿ, ತೆಳುಹಾಸ್ಯದ ಸಂದರ್ಭಗಳನ್ನು ವಿವರಿಸುವ ಕ್ರಮ ವಿನೂತನವಾದದ್ದು.

'ಊರು–ಕೇರಿ ಭಾಗ–1'ರಲ್ಲಿ ಬಾಲ್ಯದಲ್ಲಿ ಕಂಡ ಬಹಳಷ್ಟು ಘಟನೆಗಳನ್ನು ವಿಷಾದ–ವಿನೋದದೊಂದಿಗೆ ಬೆರೆಸಿ ಚಿತ್ರಿಸುತ್ತಾರೆ. ಅದು ತನ್ನ ತಂದೆಯ ಜೀತದ ಪ್ರಸಂಗವನ್ನು ಚಿತ್ರಿಸುವಾಗ, ಕವಿತೆಯಲ್ಲಿ ಕಾಣುವ ರೊಚ್ಚು, ಸೆಡವುಗಳು ಕಾಣದೇ, ತಣ್ಣಗೆ ಶೋಷಣೆಯ ಕ್ರೌರ್ಯವನ್ನು ಮಧ್ಯಮ ಮಾರ್ಗದಿಂದ ಸಂಯಮದಿಂದ ಚಿತ್ರಿಸುತ್ತಾ, ಶೋಷಿತರ ಮನಸ್ಸಿನ ಎದೆಯಾಳದಲ್ಲಿ ಪಾಪಪ್ರಜ್ಞೆಯನ್ನು ಮೂಡಿಸಿ, ಅವರ ಎದೆಯಲ್ಲಿ ಜೀವಪರತೆಯನ್ನು, ಮಾನವೀಯತೆಯನ್ನು ತುಂಬುವ ಕೆಲಸವನ್ನು ಮಾಡಿದ್ದಾರೆ.

ಅವರ 'ಊರು–ಕೇರಿ' ಮೂರು ಕೃತಿಗಳಲ್ಲಿ ಸಮಾಜದಲ್ಲಿರುವ ಹಲವಾರು ಜಾತಿಕೇಂದ್ರಿತ ಮನಸ್ಸುಗಳ ಪ್ರಸಂಗ, ಸಂದರ್ಭವನ್ನು ವಿವರಿಸುವಾಗ ಲೇಖಕರ ಭಾಷೆ ಎಲ್ಲಿಯೂ ಹದ ತಪ್ಪುವುದಿಲ್ಲ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಕೆಲಸ ಮಾಡಿರುವ ಕಡಿಮೆ ಲೇಖಕರಲ್ಲಿ ಪದ್ಯ ಮತ್ತು ಗದ್ಯ ಬರಹಗಳಲ್ಲಿ ವಿಭಿನ್ನತೆ ತೋರಲು ಸಾಧ್ಯವಾಗಿದೆ. ಅದರಲ್ಲಿ ಡಾ. ಸಿದ್ಧಲಿಂಗಯ್ಯ ಅವರು ಮುಂಚೂಣಿಯಲ್ಲಿ ನಿಲ್ಲುವುದನ್ನು ಗಮನಿಸಬಹುದು.

ಅವರ 'ಹಕ್ಕಿನೋಟ' ವಿಮರ್ಶಾ ಕೃತಿ, ಅವರ ಉಗ್ರ ವೈಚಾರಿಕತೆಯನ್ನು ಬಿಂಬಿಸುವ ಕೃತಿ. ವಚನ ಸಾಹಿತ್ಯದ ಬಗ್ಗೆ, ನಿರಂಜನರ ಸಾಹಿತ್ಯದ ಬಗ್ಗೆ ಸೋಪಜ್ಞತೆಯಿಂದ ಕೂಡಿದ ವಿಚಾರಗಳನ್ನು ಮಂಡಿಸುತ್ತಾರೆ. ಅವರ 'ಹಕ್ಕಿನೋಟ' ಕೃತಿಯಲ್ಲಿ ಬಿಡಿಬರಹಗಳ ವಿಮರ್ಶಾ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಲೇಖನಗಳು ಸಂಕ್ಷಿಪ್ತತೆ, ನಿಖರತೆ, ಸ್ಪಷ್ಟತೆಯಿಂದ ಕೂಡಿರುವುದನ್ನು ಗಮನಿಸಬಹುದು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕ್ರಿಯಾಶೀಲರಾಗಿ ಕೆಲಸವನ್ನು ನಿರ್ವಹಿಸಿ, ಸಮರ್ಥ ಆಡಳಿತಗಾರರಾಗಿ ಹೆಸರನ್ನು ಗಳಿಸುವ ಜೊತೆಯಲ್ಲಿಯೇ ಚಳುವಳಿಗಾರ, ಶೋಷಿತರ ಪರ ಬಂಡಾಯಗಾರ ಮತ್ತು ವಿದ್ಯಾರ್ಥಿ ನಾಯಕರಾಗಿ ಗುರುತಿಸಿಕೊಂಡಿರುತ್ತಾರೆ. ಡಾ.ಸಿದ್ಧಲಿಂಗಯ್ಯ ಅವರ ಬದುಕಿನ ಮೂಲ ಯಶಸ್ಸು ಅಡಗಿರುವುದು ಅವರ ಜಾತ್ಯತೀತ ಮನೋಭಾವ, ಅವರ ಈ ಮನೋಭಾವ ಹುಸಿ ಹಾಗೂ ತೋರಿಕೆಯ ಮನೋಭಾವ ಆಗದೇ ಇರುವುದರಿಂದಲೇ ಕೇರಿಯಿಂದ ವಿಧಾನ ಸೌಧದವರೆಗೂ ಅವರ ಕೀರ್ತಿ ಹರಡಿದ್ದು, ಕಾಲೇಜು ವಿದ್ಯಾರ್ಥಿಯಾಗಿದ್ದಾಗ ತನ್ನ ಜನಾಂಗಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಟ ಮಾಡಲು ಅಣಿಯಾಗುತ್ತಿರುವ ಹೊತ್ತಿಗೇ, ಅವರನ್ನು ಬಹಳಷ್ಟು ಪ್ರಭಾವಿಸಿದ್ದು ಕಾರ್ಲ್‌ಮಾರ್ಕ್ಸ್‌ರ ಚಿಂತನೆಗಳು, ವಿದ್ಯಾರ್ಥಿ ಸಿದ್ಧಲಿಂಗಯ್ಯ ಅವರನ್ನು ಹೊಸ ಎಚ್ಚರದಿಂದ ಸಮಾಜವನ್ನು ನೋಡಬೇಕೆಂಬ ವಿಷನ್ ಸಿಕ್ಕಿತು.

ಡಾ. ಸಿದ್ಧಲಿಂಗಯ್ಯ ಅವರೇ ಒಂದೆಡೆ ಹೇಳಿರುವ ಮತ್ತು ದಾಖಲಾದ ಮಾತುಗಳು **"ಕಾರ್ಲ್‌ಮಾರ್ಕ್ಸ್‌ನ ವಿಚಾರಗಳನ್ನು ನಾನು ಸಮಗ್ರವಾಗಿ ಅಧ್ಯಯನ ಮಾಡದೇ ಇದ್ದರೆ ನಾನು ಅಪ್ಪಟ ಜಾತಿವಾದಿಯಾಗಿ, ಕೂಪಮಂಡೂಕವಾಗುತ್ತಿದ್ದೆ"** ಎನ್ನುವ ಮಾತುಗಳು ಕವಿಯು ಬದುಕನ್ನು ಮುಕ್ತವಾಗಿ ನೋಡುವ ರೀತಿಯಾಗಿ ಮಾರ್ಪಡಿಸಿತು. ಇದು ಸಹ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಾರ್ಕ್ಸ್‌ವಾದವು ಹೇಗೆ ತನ್ನ ಚಲನೆಯನ್ನು ತೋರಿದೆ ಎನ್ನುವುದಕ್ಕೆ ಸ್ಪಷ್ಟವಾದ ನಿದರ್ಶನ.

ಡಾ. ಸಿದ್ಧಲಿಂಗಯ್ಯ ಅವರು **"ದಲಿತರು"** ಎನ್ನುವ ಪದಕ್ಕೆ, ಇಲ್ಲಿಯವರೆಗೂ ಇದ್ದ ಸೀಮಿತವಾದ ಅರ್ಥವನ್ನು ಒಡೆದು **"ಎಲ್ಲಾ ಜಾತಿಯಲ್ಲಿರುವ ಶೋಷಿತರು ದಲಿತರು"** ಎನ್ನುವ ಹೊಸ ವ್ಯಾಖ್ಯಾನವನ್ನು ನೀಡಿದರು. ವೈಚಾರಿಕ ಲೇಖಕರಾದ ಡಾ.ಸಿದ್ಧಲಿಂಗಯ್ಯ ಅವರು ಭಾರತದ ಕಾನೂನು, ಕಟ್ಟಲೆಗಳು ಮಾಡಲಾಗದ ಅನೇಕ ಕೆಲಸಗಳನ್ನು ಶೋಷಿತರ ಪರವಾಗಿ, ಜಾತ್ಯಾತೀತ ನಿಲುವುಗಳಿಂದ ಮಾಡಲು ಹೊರಟಾಗ ಹಲವು ಜಾತ್ಯಾತೀತ ಮನಸ್ಸುಗಳು ಕವಿಯ ಕೆಲಸಕ್ಕೆ ಸಹಕಾರವನ್ನು ನೀಡಿದರು.

ನಾಡೋಜ ಡಾ. ಸಿದ್ಧಲಿಂಗಯ್ಯ ಅವರ ಮತ್ತೊಂದು ಹೆಚ್ಚುಗಾರಿಕೆಯಿರುವುದು ಕನ್ನಡದ ಅತ್ಯುತ್ತಮ ಸಾಹಿತಿಯಾಗಿ, ಕನ್ನಡ ಸಿನಿಮಾದ ಗೀತೆಗಳ ರಚನೆಕಾರರಾಗಿ ಕನ್ನಡ ಸಿನಿಮಾ ಮಾಧ್ಯಮಕ್ಕೆ ತಮ್ಮ ಕಾಣಿಕೆಯನ್ನು ನೀಡಿದ್ದಾರೆ. ಇದು ಕವಿಯ ಮತ್ತೊಂದು ಮುಖದ ಅನಾವರಣ.

ಕನ್ನಡದ ಪ್ರಸಿದ್ಧ ನಿರ್ದೇಶಕರಾದ ದಿವಂಗತ ಪುಟ್ಟಣ ಕಣಗಾಲ್ ಅವರ ಸಿನಿಮಾ **'ಧರಣಿ ಮಂಡಲ ಮಧ್ಯೆದೊಳಗೆ'** ಚಿತ್ರಕ್ಕೆ ಸಿನಿಮಾ ಗೀತೆಯ ರಚನೆಕಾರರಾಗಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ಒಬ್ಬ ಪ್ರತಿಭಾವಂತ, ಕ್ರಿಯಾಶೀಲ ಸಾಹಿತಿ ತಾನು ಆರಿಸಿಕೊಂಡಿರುವ ಕ್ಷೇತ್ರದಲ್ಲಿ ಹೇಗೆ ಯಶಸ್ವಿಯಾಗುತ್ತಾ, ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುತ್ತಾನೆ ಎನ್ನುವ ನಿದರ್ಶನಕ್ಕೆ **'ಧರಣಿ ಮಂಡಲ ಮಧ್ಯೆದೊಳಗೆ'** ಸಿನಿಮಾದಲ್ಲಿ ಬರುವ **'ಕಾಸನ್ನು ಬೀಸಿ', 'ಕಲಿಗಾಲವಯ್ಯ ಇದು ಕಲಿಗಾಲ', ಮೇಲು–ಕೀಳಿನ ಬೇಲಿ ಜಿಗಿದು'** (ಗೆಳತಿ ಓ ಗೆಳತಿ) ಹಾಡುಗಳು ಕವಿಯ ಕಾವ್ಯದ ಆಶಯವೆ ಸಿನಿಮಾಗೀತೆಯಾಗಿ, ಸಾಮಾನ್ಯ ಜನರ ಬಾಯಲ್ಲಿ ಹಾಡಾಗುವುದು ಸಾಮಾನ್ಯ ಸಂಗತಿಯಲ್ಲ. ಇದರಲ್ಲೂ ಅದ್ಭುತವಾದ ಯಶಸ್ಸನ್ನು ಗಳಿಸಿದವರು ಕವಿಗಳು. ಬಂಡಾಯ ಮನೋಧರ್ಮದವರಿಗೆ ವಯೋಸಹಜವಾದ ಪ್ರೀತಿಗಳು ಸಹಜವಾಗಿರುತ್ತದೆ ಎನ್ನುವ ನಿದರ್ಶನಕ್ಕೆ ಕನ್ನಡದ ಕ್ರಿಯಾಶೀಲ ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್ ನಿರ್ಮಿಸಿದ **'ಬಾ ನಲ್ಲೆ ಮಧುಚಂದ್ರಕೆ'** ಸಿನಿಮಾದ **'ಆ ಬೆಟ್ಟದಲ್ಲಿ ಬೆಳದಿಂಗಳಲ್ಲಿ'** ಕವಿತೆಯು ಸಿನಿಮಾದಲ್ಲಿ ಇಂದು ಸಹ ಜನಪ್ರಿಯ ಹಾಡಾಗಿ ಜನಸಾಮಾನ್ಯರ ಬಾಯಲ್ಲಿ ಗುನುಗುತ್ತಿದೆ. ಇದು ಅಪ್ಪಟ, ಮಣ್ಣಿನ ಸೊಗಡಿನ ದೇಸಿ ಕವಿಗೆ ಸಿಗುವ ಜನಸಮುದಾಯದ ಸಾಂಸ್ಕೃತಿಕ ಉಡುಗೊರೆಯೆಂದರೆ ತಪ್ಪಾಗಲಾರದು. ಅವರ ಕವಿತೆಗಳು **'ಬರ', ಏಳು ಸುತ್ತಿನಕೋಟೆ', 'ಪ್ರತಿಭಟನೆ'** ಕನ್ನಡ ಸಿನಿಮಾದಲ್ಲಿ ಅತ್ಯುತ್ತಮ ಚಲನಚಿತ್ರ ಗೀತೆಗಳಾಗಿ ಮೂಡಿಬಂದಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಕನ್ನಡ ಸಾಹಿತಿ – ರಾಜಕಾರಣಿಯಾಗಿದ್ದು, ಧನಾತ್ಮಕವಾಗಿ ಸಾಹಿತ್ಯದಲ್ಲಿ ಡಾ.ಸಿದ್ಧಲಿಂಗಯ್ಯ ಅವರು ಹೇಗೆ ಅತ್ಯುತ್ತಮ ಕವಿಯಾಗಿ, ವೈಚಾರಿಕ ಲೇಖಕರಾಗಿ ಹೆಸರುಗಳಿಸಿದರೋ ಹಾಗೆಯೇ ದಕ್ಷ ಮತ್ತು ಪಾರದರ್ಶಕ ರಾಜಕಾರಣಿಯಾಗಿ ಯಶಸ್ವಿಯಾಗಿದ್ದು ಸುಲಭದ ಮಾತಲ್ಲ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಹು ದೀರ್ಘಕಾಲದ ವಿಧಾನಪರಿಷತ್ತು ಸದಸ್ಯರಾಗಿ, ಸರ್ಕಾರದ ಅನೇಕ ಹುದ್ದೆಗಳಲ್ಲಿ ಸಮರ್ಥವಾಗಿ ಕರ್ತವ್ಯವನ್ನು ನಿರ್ವಹಿಸಿರುವ, ಯಾವುದೇ ಕಪ್ಪು ಚುಕ್ಕೆಯಿಲ್ಲದೆ ಅದು ನಿಜಕ್ಕೂ ಕವಿಯ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ ಸಂದರ್ಭ.

ನಾಡೋಜ ಡಾ. ಸಿದ್ಧಲಿಂಗಯ್ಯರವರ ತಮ್ಮ ಹನ್ನೆರಡು ವರುಷಗಳ ಸುದೀರ್ಘ ಶಾಸಕತ್ವದ ಅವಧಿಯಲ್ಲಿ ಶೋಷಿತರ ಪರವಾಗಿ, ಜಾತ್ಯಾತೀತ ಮನೋಧರ್ಮದ ಧ್ವನಿಯಾಗಿ ಕೆಲಸವನ್ನು ಮಾಡಿದರು. ಉದಾ: ಅಜಲು ಪದ್ಧತಿ, ಅಗ್ನಿಶಾಮಕದಳದವರ ಸಮಸ್ಯೆ, ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹ, ಕಡ್ಡಾಯ ಕನ್ನಡ ಬಳಕೆ ಜಾರಿಗೊಳಿಸುವುದು, ಕೋಲಾರದ ಕಂಬಾಲಪಲ್ಲಿಯ ದುರಂತ..... ಹೀಗೆ ಹಲವಾರು ಜನಸಮುದಾಯದ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಶ್ರೇಷ್ಠವಾದ ಲೇಖಕ–ಲೇಖಕಿಯರು ಸಿಗುತ್ತಾರೆ. ಆದರೆ ಶ್ರೇಷ್ಠ ಲೇಖಕ, ಅತ್ಯುತ್ತಮವಾದ ಸಮಾಜಮುಖಿ ರಾಜಕಾರಣಿ ಸಿಗುವುದು ಅತಿ ವಿರಳ. ಅದರಲ್ಲಿ ಅಗ್ರಪಂಕ್ತಿಯಲ್ಲಿ ಸರಳವಾಗಿ ಮತ್ತು ವಿರಳವಾಗಿ ನಿಲ್ಲುವವರು ಡಾ. ಸಿದ್ಧಲಿಂಗಯ್ಯ.

ಗ್ರೀಕ್ ತತ್ವಜ್ಞಾನಿ ಸಾಕ್ರಟೀಸ್ ಹೇಳುವಂತೆ **"ಪ್ರತಿಭೆ ಗುಡಿಸಲಿನಲ್ಲಿ ಹುಟ್ಟುತ್ತದೆ, ಅರಮನೆಯಲ್ಲಿ ಸಾಯುತ್ತದೆ"** ಎನ್ನುವ ಮಾತಿಗೆ ಅಪವಾದವಾಗಿರುವ ಕವಿಗಳು ತಮಗೆ ಸಮಾಜದಲ್ಲಿ ಅನೇಕ ಸ್ಥಾನಮಾನಗಳು, ಬಿರುದುಗಳು ಸಿಕ್ಕಿವೆಯಾದರೂ, ಊರಲ್ಲಿ (ನಗರ) ವಾಸವಾಗಿದ್ದರೂ ಈಗಲೂ ಅವರ ಮುಖ್ಯ ತುಡಿತವಿರುವುದು ಕೇರಿಯ ಬಗ್ಗೆಯೇ. ಅದೇ ವಿನಮ್ರತೆ, ತಮಗೆ ಸಹಾಯ ಮಾಡಿದ ಪ್ರತಿಯೊಬ್ಬರಲ್ಲಿಯೂ ಕೃತಜ್ಞತಾ ಮನೋಭಾವನೆ ಹೊಂದಿರುವುದು, ತಾಳುವಿಕೆಯ ಗುಣ, ಹತ್ತಿದ ಏಣಿಯನ್ನು ಮರೆಯದ ಗುಣ, ನಿರಂತರವಾದ ತಿರುಗಾಟ–ಹುಡುಕಾಟ (ಹುಡುಗಾಟ)– ಅಧ್ಯಯನಶೀಲತೆ ಇಂದಿಗೂ ಹೊಂದಿರುವುದು ಅತ್ಯಂತ ಸೋಜಿಗದ ಸಂಗತಿ.

ಡಾ. ಸಿದ್ಧಲಿಂಗಯ್ಯ ಅವರ ಬದುಕು–ಬರಹಗಳು ಹೋರಾಟದಿಂದ ಕೂಡಿದ್ದು, ಅವರ ಬರಹಗಳು ಭಾರತೀಯ ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ. ಭಾರತದ ಪ್ರಮುಖ ದಲಿತ ಚಿಂತಕರಲ್ಲಿ ಮುಖ್ಯಸ್ಥಾನವನ್ನು ಪಡೆದಿದ್ದಾರೆ. ಉತ್ತರ–ದಕ್ಷಿಣ ಭಾರತ, ವಿದೇಶಗಳಲ್ಲಿ ಅನೇಕ ಉಪನ್ಯಾಸಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ, ಅತಿಥಿಯಾಗಿ ನಿರಂತರವಾಗಿ ಭಾಗವಹಿಸುತ್ತಾ ತನ್ನ ವೈಚಾರಿಕತೆಯನ್ನು ಜೀವಂತವಾಗಿಟ್ಟುಕೊಂಡು, ತನ್ನ ಚಿಂತನೆಗಳಿಗೆ ಬೇಲಿಯನ್ನು ಹಾಕದೇ, ಅದನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿಸ್ತಾರಗೊಳಿಸುವ, ದೇಶದ ಗಡಿಯ ಆಚೆಗೂ ವಿಸ್ತರಿಸುವ ಪ್ರಯತ್ನವನ್ನು ಮಾಡುತ್ತಾ, ಸದಾ ಕಾಲ ಕ್ರಿಯಾಶೀಲ ವ್ಯಕ್ತಿತ್ವದವರಾಗಿ ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಳ್ಳುತ್ತಿದ್ದಾರೆ.

ಡಾ. ಸಿದ್ಧಲಿಂಗಯ್ಯ ಅವರು ದಿನಕಳೆದಂತೆ ಹೆಚ್ಚೆಚ್ಚು ಮಾಗುತ್ತ, ಪರಿಪಕ್ವತೆಯನ್ನು ಹೊಂದಿ, ವಯೋಸಹಜವಾದ ವೃದ್ಧತೆ, ಪ್ರಖರ ಜ್ಞಾನವೃದ್ಧತೆ ಪಡೆದು, ತಮ್ಮ ಬಾಲ್ಯ, ಯೌವ್ವನ, ಮಧ್ಯವಯಸ್ಕ ಕಾಲಘಟ್ಟದಲ್ಲಿ ಸಮಾಜದ ಹಲವಾರು ತಾರತಮ್ಯದ ವಿರುದ್ಧ ಕವಿಯಾಗಿ, ಬರಹಗಾರರಾಗಿ, ವೈಚಾರಿಕ ಭಾಷಣಕಾರರಾಗಿ ಗುಡುಗು, ಸಿಡಿಲು, ಬೆಂಕಿ–ಮಳೆಯಾಗಿ ಅಬ್ಬರಿಸಿದ್ದಾರೆ ಮತ್ತು ಆರ್ಭಟಿಸಿದ್ದಾರೆ.

ಈಗಲೂ ಅವರ ಅನುಯಾಯಿಗಳು ಮತ್ತು ಅಭಿಮಾನಿಗಳು 'ಮೊದಲಿನ ಹೋರಾಟದ ಸಿದ್ಧಲಿಂಗಯ್ಯನವರು ನಮಗೆ ಬೇಕು' ಎನ್ನುವ ವಾದವನ್ನು ಮಂಡಿಸುತ್ತಿದ್ದಾರೆ. ಅಧಿಕಾರಸ್ಥರ ಹಿಂಬಾಲಕರಾದರು, ತಮ್ಮ ಇತ್ತೀಚಿನ ಕೃತಿಗಳ ಅರ್ಪಣೆಯನ್ನು ರಾಜಕಾರಣಿಗಳಿಗೆ ಮತ್ತು ಅಧಿಕಾರಸ್ಥರಿಗೆ ಮಾಡುತ್ತಿದ್ದಾರೆ ಎನ್ನುವ ಗುರುತರವಾದ ಆರೋಪವನ್ನು ಮಾಡುತ್ತಿದ್ದಾರೆ.

ಇಂದು ನಾಡೋಜ ಡಾ. ಸಿದ್ಧಲಿಂಗಯ್ಯ ಅವರಿಗೆ ವಯೋ ಸಹಜವಾದ, ದೇಹ ಮೃದುತ್ವವನ್ನು ಹೊಂದಿದ್ದರೂ, ಅವರ ಪ್ರಖರ ವೈಚಾರಿಕ ನಿಲುವುಗಳು ಮತ್ತಷ್ಟು ಅವರನ್ನು ಪ್ರಕಾಶಮಾನವಾಗಿ ಮಾಡಿದೆ. ಅವರ ಹೋರಾಟದ ಬದುಕು ತರುಣ ಜನಾಂಗಕ್ಕೆ ಮಾದರಿ. ಅವರಿಂದ ಸಲಹೆ, ಸೂಚನೆ, ಮಾರ್ಗದರ್ಶನ ಮತ್ತು ಸಹಕಾರವನ್ನು ಪಡೆದು ನವಸಮಾಜದ ತರುಣ ಜನಾಂಗ ಸಾಗಬೇಕು ವಿನಹಃ ಮತ್ತೊಮ್ಮೆ ಅವರು ಹೋರಾಟಗಾರರಾಗಲೀ ಎಂದು ಬಯಸುವುದು ಬಾಲಿಶತನವೇ ಸರಿ. ದನಿಯಿಲ್ಲದವರ ದನಿ ಮತ್ತು ದಣಿಯಾಗಿ ಬಡವರ ನಗು ಮತ್ತು ನಡುವಿನ ಶಕ್ತಿಯಾಗಿ, ಬತ್ತದ ಬೆಳದಿಂಗಳಾಗಿ, ಜನಸಂಸ್ಕೃತಿಯ ವಕ್ತಾರನಾದ ನಾಡೋಜ ಡಾ. ಸಿದ್ಧಲಿಂಗಯ್ಯ ಅವರಿಗೆ ಇತ್ತೀಚಿಗೆ ಕರ್ನಾಟಕ ಸರ್ಕಾರ ಕನ್ನಡದ ಪ್ರಥಮ ಆದಿಕವಿ ಬನವಾಸಿಯ ಪಂಪನಿಗೆ ಸಂಬಂಧಿಸಿದ ಪ್ರತಿಷ್ಠಿತ 'ಪಂಪ ಪ್ರಶಸ್ತಿ'ಯನ್ನು ನೀಡಿ ಗೌರವಿಸಿ, ಪ್ರಶಸ್ತಿಯ ಮೌಲ್ಯವನ್ನು ಹೆಚ್ಚಿಸಿದೆ.

ಅವರ ಬದುಕು–ಬರಹಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟವಾದ ದಿಕ್ಸೂಚಿಯಾಗಿದೆ. ಕಾರಣ ಸಮಾಜದ ಅಂಚಿಗೆ ನೂಕಿದ ಅತ್ಯಂತ ಹಿಂದುಳಿದ ದಲಿತ ಜಾತಿಯಲ್ಲಿ ಹುಟ್ಟಿ, ಯಾವುದೇ ಗಾಡ್‌ಫಾದರ್‌ಗಳಿಲ್ಲದೇ, ತನ್ನ ಸ್ವತಃ ಪರಿಶ್ರಮದಿಂದ, ನೆಲಮೂಲ ಸಂಸ್ಕೃತಿಯ ಶ್ರಮದ ವ್ಯಕ್ತಿಯಾಗಿ, ಶಕ್ತಿಯಾಗಿ ಬೆಳೆದು ಸಮಾಜದಲ್ಲಿ ಮಾದರಿ ವ್ಯಕ್ತಿಯಾಗುವುದು ಸಾಮಾನ್ಯವಾದ ಮಾತಲ್ಲ. ತಾನು ಆರಿಸಿಕೊಂಡಿರುವ ಕ್ಷೇತ್ರಗಳಲ್ಲಿ ಜನಪ್ರಿಯವಾಗುವುದು, ನಾಡಿಗೆ ಪ್ರಿಯವಾಗುವುದು ಅಷ್ಟು ಸುಲಭವದ ಮಾತಲ್ಲ.

ಡಾ. ಸಿದ್ಧಲಿಂಗಯ್ಯ ಅವರು ತಾವು ಸವೆಸಿದ ಹಾದಿಯಲ್ಲಿ ಬಂದ ಕಲ್ಲು, ಮುಳ್ಳುಗಳನ್ನು ಸ್ಥಿತಿಪ್ರಜ್ಞತೆಯಿಂದ ನೋಡಿದ್ದಾರೆ. ತನಗೆ ಅಧಿಕಾರಗಳು ಸಿಕ್ಕಾಗ ಸ್ವಾರ್ಥತನವನ್ನು ತೋರದೆ ನಿಸ್ವಾರ್ಥ ಜೀವಿಯಾಗಿ ಕುಟುಂಬ ಕೇಂದ್ರಿತವಾಗಿ ಆಲೋಚಿಸಿದೆ, ಕರ್ನಾಟಕದ ಹಲವಾರು ಜಿಲ್ಲೆಗಳ ಶೋಷಿತರ ಸಮಸ್ಯೆಗಳಿಗೆ ಜೀವದ್ವನಿಯಾಗಿದ್ದಾರೆ ಮತ್ತು ಅವರ ಒಡಲಿನ ದನಿಯೂ ಆಗಿದ್ದಾರೆ.

ಕರ್ನಾಟಕದ ಹಲವಾರು ಪ್ರತಿಭಾವಂತ ತರುಣಜನಾಂಗ, ಅವರು ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಅವರ ಬಳಿ ಬಂದಾಗ ವರ್ಗ, ವರ್ಣ, ಲಿಂಗ ಮತ್ತು ಪ್ರದೇಶಗಳ ತಾರತಮ್ಯ ಮಾಡದೇ ಪ್ರತಿಭಾವಂತ ನಿರುದ್ಯೋಗಿಗಳಿಗೆ ಯಾವುದೇ ಪ್ರತಿಫಲಾಪೇಕ್ಷೆಯನ್ನು ಬಯಸದೇ ಉದ್ಯೋಗವನ್ನು ಕೊಡಿಸಿದ್ದಾರೆ. ಡಾ.ಕೆ.ಶಿವರಾಮಕಾರಂತರು **"ಸಮಾಜವು ನಿನಗೆ ಏನು ನೀಡಿತು ಎಂದು ಪ್ರಶ್ನಿಸುವುದಕ್ಕಿಂತ ಮುಂಚೆ, ನೀನು ಈ ಸಮಾಜದ ಋಣವನ್ನು ಹೇಗೆ ತೀರಿಸುತ್ತೀಯಾ ಎಂದು ಆಲೋಚಿಸು"** ಎನ್ನುವ ನುಡಿಯಂತೆ ನಾಡೋಜ ಡಾ.ಸಿದ್ಧಲಿಂಗಯ್ಯ ಅವರು ಸಮಾಜದಿಂದ ಇಷ್ಟೊಂದು ಗೌರವವನ್ನು ಪಡೆದು, ಸಮಾಜದ ಋಣವನ್ನು ತಮ್ಮ ಬದುಕಿನಲ್ಲಿ ಬಡ್ಡಿಸಮೇತ ತೀರಿಸುತ್ತಿದ್ದಾರೆ. ದಾಸರವಾಣಿಯಂತೆ **"ಕೆರೆಯ ನೀರನ್ನು ಕೆರೆಗೆ ಚೆಲ್ಲಿ"** ಎನ್ನುವ ಮಾತಿನಂತೆ, ಈ ಸಮಾಜದಿಂದ ಸಿಕ್ಕ ಅಧಿಕಾರವನ್ನು ಅಶಕ್ತರಿಗೆ, ನಿರ್ಗತಿಕರಿಗೆ, ದುರ್ಬಲ ಸಮೂಹ, ಶೋಷಿತರ ಏಳ್ಗೆಗೆ ಬಯಸುವುದು ಮುಖ್ಯವೆಂದು ತಿಳಿದವರು.

ಇಲ್ಲಿಯವರೆಗೂ ಕನ್ನಡ ಸಾಹಿತ್ಯ ಪರಂಪರೆಯು ನಾಡೋಜ ಡಾ.ಸಿದ್ಧಲಿಂಗಯ್ಯ ಅವರನ್ನು ಬರೀ ಜನಪ್ರಿಯ ಕವಿಯಾಗಿ ನೋಡುವ ಏಕಮುಖಿ ಮಾದರಿಗಳ ಅಧ್ಯಯನ ನಡೆದಿದೆ. ಅವರ ಬಹುಮುಖಿ ಮಾದರಿಯ ನೋಟ ಕ್ರಮಗಳನ್ನು ಗೌಣವಾಗಿಸಿದೆ. ಇದು ನಿಜಕ್ಕೂ ಕನ್ನಡ ಸಾಹಿತ್ಯ ಪರಂಪರೆಯ ನಿಕಟ ಓದು, ಸಮಗ್ರ ಅಧ್ಯಯನಕ್ಕೆ ಮಾಡುವ ಕಾಲದ ಘೋರ ಚಾರಿತ್ರಿಕ ಅನ್ಯಾಯ. ಇನ್ನಾದರೂ ಕನ್ನಡ ಸಾಹಿತ್ಯ ಪರಂಪರೆಯು ಅವರ ಬಹುಮುಖಿ ಅಧ್ಯಯನದ ಹತ್ತಿರ ಹೊರಳು ನೋಟವನ್ನು ಬೀರಿದರೆ ಅದು ಕವಿಗೇ ನೀಡುವ ಗೌರವ ಮಾತ್ರವಿರದೇ ಕನ್ನಡ ನುಡಿ, ಚಳುವಳಿಗೆ, ಬಂಡಾಯ ಮನೋಧರ್ಮಕ್ಕೆ, ಗೀತೆಗಳ ರಚನೆಕಾರರಿಗೆ, ಅತ್ಯುತ್ತಮವಾದ ವಿಧಾನಪರಿಷತ್ ಪಟು, ಅತ್ಯುತ್ತಮ ನಾಟಕಕಾರ, ವೈಚಾರಿಕಕಾರರಿಗೆ ನೀಡುವ ಸಮಾಜ ಕೇಂದ್ರಿತ ಗೌರವ.

ಪರಾಮರ್ಶನ ಗ್ರಂಥಗಳು

- **ಡಾ.ಅಪ್ಪಗೆರೆ ಸೋಮಶೇಖರ (2012) :** ನೆಲಕೆ ಕಾಲುಗಳು ಬರವಣಿಗೆ, ಮೈಸೂರು ಅಂಬಾರಿ ಪ್ರಕಾಶನ.
- **ಪ್ರ. ಸಂ. ಲಕ್ಷ್ಮೀನಾರಾಯಣ (2006) :** ಬತ್ತದ ಬೆಳದಿಂಗಳು ಡಾ. ಸಿದ್ಧಲಿಂಗಯ್ಯ ನಾಗವಾರ ಬೆಂಗಳೂರು ಮಿಲಿಂದ್ ಪ್ರಕಾಶನ.
- **ಸಂ. ಜಿ. ಶಿವಕುಮಾರ್ (2011) :** ದನಿಯಿಲ್ಲದವರ ದನಿ, ನಾಡೋಜ. ಹೊಸಪೇಟೆ ಡಾ. ಸಿದ್ಧಲಿಂಗಯ್ಯ ದಲಿತ ಅಭಿವೃದ್ಧಿ ಸಂಸ್ಥೆ (ರಿ).
- **ಸಂ.ಎಚ್. ದಂಡಪ್ಪ :** ಬಡವರ ನಗುವಿನ ಶಕ್ತಿ.

■■

ವಿದ್ಯಾ ಪ್ರಕಾಶನ®
ಜೆ.ಟಿ.ಮಠ ರೋಡ, ಗದಗ - 582101
e-mail: vidyaprakashana26@gmail.com
www.shikshansoudha.in

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಾಗಮಂಗಲ ತಾಲ್ಲೂಕಿನ ಶಾಸನೋಕ್ತ ಜೈನ ಸ್ಮಾರಕಗಳು

✍ ಡಾ. ರಕ್ಷಿತ ಡಿ., ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ, ಹುಣಸೂರು ತಾ. ಮೈಸೂರು ಜಿ.

ಜೈನರ ದೇವಾಲಯಗಳಿಗೆ ಬಸದಿ ಎಂದು ಕರೆಯುತ್ತಾರೆ. ಜೈನಧರ್ಮದ ಪ್ರಕಾರ ಜೈನ ಸನ್ಯಾಸಿಗಳು ಮಳೆಗಾಲದ ನಾಲ್ಕು ತಿಂಗಳನ್ನು ಹೊರತುಪಡಿಸಿ ದೇಶದಾದ್ಯಂತ ಸಂಚಾರ ನಡೆಸುತ್ತಾ ಇರಬೇಕು. ಆದರೆ ಕಾಲ ಕ್ರಮೇಣ ಈ ಪದ್ಧತಿ ಕಡಿಮೆಯಾಗುತ್ತಾ ಜೈನ ಸನ್ಯಾಸಿಗಳು ಒಂದೇ ಕಡೆ ನೆಲೆ ನಿಲ್ಲಲು ಆರಂಭಿಸಿದರು. ಜೊತೆಗೆ ಬೌದ್ಧರು, ವೈದಿಕರು ತಮ್ಮ ದೈವಾರಾಧನೆಗಾಗಿ, ಧರ್ಮ ಪ್ರಚಾರಕ್ಕಾಗಿ ಬೌದ್ಧ ಸ್ಥೂಪಗಳನ್ನು, ದೇವಾಲಯಗಳನ್ನು ಕಟ್ಟಲು ಆರಂಭಿಸಿದರು. ಇದರ ಪ್ರಭಾವವು ಜೈನರ ಮೇಲಾಯಿತು. ಈ ಎಲ್ಲಾ ಹಿನ್ನೆಲೆಗಳಿಂದ ಅವರು ಕೂಡ ಬಸದಿಗಳ ನಿರ್ಮಾಣದಲ್ಲಿ ತೊಡಗಿದರು. ಈ ಜೈನರು ತಮ್ಮ ಬಸದಿಗಳಿಗೆ ಪ್ರತ್ಯೇಕವಾದ ವಾಸ್ತುಶಿಲ್ಪ ಶೈಲಿಯನ್ನು ಅಳವಡಿಸಿಕೊಳ್ಳಲಿಲ್ಲ. ಬದಲಾಗಿ ಆಯಾಯ ಪ್ರದೇಶದಲ್ಲಿ ಯಾವ ವಾಸ್ತುಶಿಲ್ಪ ಶೈಲಿ ಬಳಕೆಯಲ್ಲಿತ್ತೋ ಅದನ್ನೇ ಮುಖ್ಯವಾಗಿ ಬಳಸಿಕೊಂಡು ಬಸದಿಗಳ ನಿರ್ಮಾಣದಲ್ಲಿ ತೊಡಗಿದರು ಈ ಬಸದಿಗಳನ್ನು ಚೈತ್ಯಾಲಯ ಎಂದು ಕೂಡ ಕರೆಯುತ್ತಾರೆ.

ದಕ್ಷಿಣ ಕರ್ನಾಟಕದ ಪ್ರಾಂತ್ಯಗಳಲ್ಲಿ ಗಂಗರ ಕಾಲದಲ್ಲಿ ಜೈನ ಬಸದಿಗಳ ನಿರ್ಮಾಣ ಹೆಚ್ಚಾಗಿ ಕಂಡು ಬಂದಿತು. ಇದಕ್ಕೆ ಸಾಕ್ಷಿಯಾಗಿ ಶ್ರವಣಬೆಳಗೊಳದಲ್ಲಿ ಗಂಗರ ರಾಚಮಲ್ಲನ ಮಂತ್ರಿಯಾದ ಚಾವುಂಡರಾಯನು ಗೊಮ್ಮಟೇಶ್ವರ ಮೂರ್ತಿಯನ್ನು ಮತ್ತು ಇನ್ನಿತರ ಬಸದಿಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಸುಮಾರು 700 ವರ್ಷಗಳಷ್ಟು ಕಾಲ ರಾಜ್ಯಭಾರ ಮಾಡಿದ ಗಂಗರ ಗಂಗವಾಡಿ ಪ್ರದೇಶದ ವ್ಯಾಪ್ತಿಯಲ್ಲಿ ಹಲವಾರು ಬಸದಿಗಳು ಕಂಡುಬರುತ್ತವೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನಲ್ಲಿ ಜೈನಧರ್ಮವು ತನ್ನದೇ ಆದ ಮಹತ್ವವನ್ನು ಪಡೆದಿತ್ತು ಎಂಬುದನ್ನು ಅಲ್ಲಿನ ಶಾಸನಗಳು ಮತ್ತು ಬಸದಿಗಳಿಂದ ತಿಳಿಯಬಹುದಾಗಿದೆ. ಅದರಲ್ಲಿಯೂ, ಮುಖ್ಯವಾಗಿ ಹೊಯ್ಸಳರ ಕಾಲದಲ್ಲಿ ಅನೇಕ ಬಸದಿಗಳು ನಿರ್ಮಾಣಗೊಂಡಿದ್ದು, ಜೈನಧರ್ಮವು ರಾಜಾಶ್ರಯವನ್ನು ಪಡೆದಿತ್ತು. ಜೈನರ ಕಾಶಿ ಎಂದೇ ಖ್ಯಾತವಾದಶ್ರವಣಬೆಳಗೊಳದ ಹತ್ತಿರದಲ್ಲೇ ಇರುವ ನಾಗಮಂಗಲ ಪ್ರದೇಶ ಸಹಜವಾಗಿಯೇ ಜೈನರ ಪ್ರಮುಖ ಕೇಂದ್ರವಾಗಿತ್ತು. ಈ ನಾಗಮಂಗಲ ತಾಲ್ಲೂಕಿನಲ್ಲಿರುವ ಶಾಸನೋಕ್ತ ಜೈನ ಸ್ಮಾರಕಗಳ ಮೇಲೆ ಒಂದು ಪಕ್ಷಿನೋಟ ಬೀರುವ ಉದ್ದೇಶ ಈ ಲೇಖನದ್ದಾಗಿದೆ.

ನಾಗಮಂಗಲ ತಾಲ್ಲೂಕಿನ ದೇವರಹಳ್ಳಿಯಲ್ಲಿ ದೊರಕಿರುವ ತಾಮ್ರಶಾಸನ[1]ವೊಂದು, ಗಂಗರ ಅರಸ ಶ್ರೀಪುರುಷನ ಕಾಲದಲ್ಲಿ ನಿರ್ಮಾಣಗೊಂಡ ಜೈನ ಬಸದಿಯ ಬಗ್ಗೆ ತಿಳಿಸುತ್ತದೆ. ಪೃಥ್ವಿ ನೀರ್ಗುಂದ ರಾಜನಾದ ಪರಮಗೂಳನ ಪತ್ನಿಯಾದ ಕುಂದಾಚ್ಚಿಯು ಶ್ರೀಪುರದಲ್ಲಿ ಲೋಕತಿಲಕ ಎಂಬ ಜೈನ ಬಸದಿಯನ್ನು ಕಟ್ಟಿಸಿದಳು ಅದಕ್ಕೆ ಶ್ರೀಪುರುಷನು ನೀರ್ಗುಂದ ವಿಷಯಕ್ಕೆ ಸೇರಿದ ಪೊನ್ನಳ್ಳಿ ಎಂಬ ಗ್ರಾಮವನ್ನು ದಾನವಾಗಿ ನೀಡಿದ್ದಾನೆ. ಆದರೆ ಶಾಸನದಲ್ಲಿ ಹೆಸರಿಸಿರುವ ಈ ಶ್ರೀಪುರ ಮತ್ತು ಬಸದಿ ಯಾವುದು ಎಂದು ಗುರುತಿಸಲು ಸಾಧ್ಯವಾಗಿಲ್ಲ.

ಪಂಚಕೂಟ ಬಸದಿ–ಕಂಬದಹಳ್ಳಿ

ನಾಗಮಂಗಲದಿಂದ ಶ್ರವಣಬೆಳಗೊಳಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿ 18 ಕಿ.ಮೀ ದೂರದಲ್ಲಿರುವ ಕಂಬದಹಳ್ಳಿಯು ಜೈನ ಸ್ಮಾರಕಗಳಿಂದ ಪ್ರಸಿದ್ಧವಾಗಿದೆ. ಇಲ್ಲಿ ದ್ರಾವಿಡ, ನಾಗರ, ವೇಸರ ಶೈಲಿಯ ಸಮ್ಮಿಶ್ರಣದಲ್ಲಿ ಕಲ್ಲಿನಿಂದ ಕಟ್ಟಲಾದ ಏಳು ದೇವಾಲಯಗಳಿವೆ. ಪಂಚಕೂಟ ಬಸದಿ ಮತ್ತು ಅದರ ಪಕ್ಕದಲ್ಲಿ ಶಾಂತೀಶ್ವರ ಪಾಳು ಬಸದಿ ಎಲ್ಲವೂ ಒಂದೇ ಅಂಗಳದಲ್ಲಿವೆ. ಪಂಚಕೂಟ ಬಸದಿಯು ಐದು ಗರ್ಭಗುಡಿಗಳಿರುವ ಬಸದಿಯಾಗಿದೆ. ಮುಖ್ಯ ಬಸದಿ ಮೂಲತಃ ತ್ರಿಕೂಟಾಚಲವಾಗಿದ್ದು ನಂತರದಲ್ಲಿ ಇನ್ನೆರಡು ಗರ್ಭಗುಡಿಗಳ ಬಸದಿ ನಿರ್ಮಾಣಗೊಂಡಿದೆ. ಉತ್ತರಕ್ಕೆ ಅಭಿಮುಖವಾಗಿರುವ ಆದಿನಾಥ ಬಸದಿ ತ್ರಿಕೂಟಾಚಲದ ಮುಖ್ಯ ಬಸದಿಯಾಗಿದೆ. ಅದರ ಪೂರ್ವಕ್ಕೆ ಶಾಂತಿನಾಥ ಬಸದಿ, ಪಶ್ಚಿಮಕ್ಕೆ ನೇಮಿನಾಥ ಬಸದಿಗಳಿವೆ. ಈ ಮೂರು ಬಸದಿಗಳಿಗೂ ಅದರದೇ ಆದ ಅರ್ಧ ಮಂಟಪಗಳಿದ್ದು ಅವೆಲ್ಲವೂ ಸರ್ವಸಮಾನವಾದ ಮಹಾಮಂಟಪಕ್ಕೆ ಹೊಂದಿಕೊಂಡಿವೆ. ದೇವಾಲಯವನ್ನು ಮುಖ ಮಂಟಪದ ಮೂಲಕ ಪ್ರವೇಶಿಸಿದ ನಂತರ ಅಕ್ಕಪಕ್ಕದಲ್ಲಿ ಎರಡು ಗರ್ಭಗುಡಿಗಳಿವೆ ಬಲಭಾಗದ ಗುಡಿಯಲ್ಲಿ ಶಾಂತಿನಾಥನ ವಿಗ್ರಹವಿದೆ. ಇಲ್ಲಿ ಸುಂದರವಾದ ಚಾಮರ ಕನ್ನಿಕೆಯರ ಕೆತ್ತನೆಗಳಿವೆ ಇಲ್ಲಿಯ ನವರಂಗದಲ್ಲಿ ನಾಲ್ಕು ಕಂಬಗಳಿವೆ. ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ಮತ್ತು ಪದ್ಮಾವತಿಯ ಕೆತ್ತನೆಗಳಿವೆ. ಎಡಭಾಗದ ಗರ್ಭಗುಡಿಯಲ್ಲಿ ಆದಿನಾಥನು ಧ್ಯಾನಸ್ಥ ಭಂಗಿಯಲ್ಲಿರುವ ವಿಗ್ರಹವಿದೆ. ಗರ್ಭಗುಡಿಯ ದ್ವಾರದಲ್ಲಿ ಬ್ರಹ್ಮದೇವರು, ಜ್ವಾಲಾಮಾಲಿನಿದೇವಿ, ಪದ್ಮಾವತಿದೇವಿಯ ವಿಗ್ರಹಗಳಿವೆ.

ಮುಖ್ಯ ಆದಿನಾಥನ ಬಸದಿಯಲ್ಲಿ ಗಂಗರ ವಾಸ್ತುಶಿಲ್ಪದ ಪೂರ್ಣ ವಿಕಾಸದೊಂದಿಗೆ ಪಲ್ಲವ ಶೈಲಿಯ ಪ್ರಭಾವವೂ ಕಂಡುಬರುತ್ತವೆ. ಹಾಗಾಗಿ ಇದು ಗಂಗರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯವಾಗಿರ ಬಹುದೆಂದು ಊಹಿಸಬಹುದಾಗಿದೆ. ಈ ವಾಸ್ತು ಶಿಲ್ಪ ಶೈಲಿಯನ್ನು ಗಮನಿಸಿದಾಗ ಸಾಮಾನ್ಯವಾಗಿ ಗಂಗರ ಕಾಲದ ರಚನೆಗಳಲ್ಲಿ ಬಾಗಿಲು ಎತ್ತರ ಕಡಿಮೆಇದ್ದು ಘಂಟಾಕೃತಿಯ ಕಂಬಗಳನ್ನು ಕಡೆದು ನಿಲ್ಲಿಸಿದ್ದು ಅವು ಕುಂಭದ ರೀತಿಯ ರಚನೆಯನ್ನು ಹೊಂದಿರುತ್ತವೆ. ಈ ಎಲ್ಲಾ ಲಕ್ಷಣಗಳು ಪಂಚಕೂಟ ಬಸದಿಯಲ್ಲಿರುವುದನ್ನು ಕಾಣಬಹುದು ಹಾಗಾಗಿ ಈ ಬಸದಿ ಗಂಗರ ಕಾಲದಲ್ಲಿ ನಿರ್ಮಾಣಗೊಂಡಿದೆ. ಅನಂತರ ಹೊಯ್ಸಳರ ಕಾಲದಲ್ಲಿ ಮತ್ತು ಮುಂದೆ ಅನೇಕ ಬಾರಿ ಜೀರ್ಣೋದ್ಧಾರ ಗೊಂಡು ಮತ್ತು ವಿಸ್ತಾರಗೊಂಡಿದೆ ಎಂದು ಹೇಳಬಹುದು. ಇತ್ತೀಚೆಗೆ ಶಿಥಿಲಾವಸ್ಥೆಯಲ್ಲಿದ್ದ ಈ ದೇವಾಲಯವನ್ನು ಜೀರ್ಣೋದ್ಧಾರ ಗೊಳಿಸಲಾಗಿದೆ. ಶಿಲ್ಪಿ ಕಾವ್ಯದಂತಿರುವ ಈ ಬಸದಿ ಸಮುಚ್ಛಯ ನೋಡುಗರ ಮನಸೂರೆಗೊಳ್ಳುವಂತೆ ಮಾಡುತ್ತದೆ.

ಶಾಂತೀಶ್ವರ ಪಾಳು ಬಸದಿ–ಕಂಬದಹಳ್ಳಿ

ಪಂಚಕೂಟ ಬಸದಿಯ ಆವರಣದಲ್ಲಿಯೇ ಶಾಂತೀಶ್ವರ ಬಸದಿಯಿದೆ. ಈ ಬಸದಿಯು ಹೊಯ್ಸಳರ ವಿಷ್ಣುವರ್ಧನ ಕಾಲದಲ್ಲಿ ನಿರ್ಮಾಣ ಗೊಂಡಿದೆ. ಇದನ್ನು ಅಲ್ಲಿರುವ ಶಾಸನಗಳು ದೃಢೀಕರಿಸುತ್ತವೆ. ದ್ರೋಹ ಘರಟ್ಟದ ದಂಡನಾಯಕನಾದ ಗಂಗರಾಜನ ಮಗ ಬೊಪ್ಪದೇವನು ದ್ರೋಹಘರಟ್ಟಾಚಾರಿಯ ಕೈಯಲ್ಲಿ ಹೊಸ ಬಸದಿಯನ್ನು ಕಟ್ಟಿಸಿದ್ದಾನೆ[2].

ಈ ಗಂಗರಾಜ ವಿಷ್ಣುವರ್ಧನನ ದಂಡನಾಯಕನಾಗಿದ್ದ. ಈ ಶಾಂತೀಶ್ವರ ಬಸದಿಯ ಪೂಜಾ ಕಾರ್ಯಕ್ಕೆ ಆಹಾರದಾನಕ್ಕೆ ಎಂದು ವಿಷ್ಣುವರ್ಧನನು ನೀಡಿದ್ದ ದಾನ ಸಾಕಾಗದೆ, ಇವನ ಮಗ ನರಸಿಂಹನು ಮೊದಲಿಯ ಹಳ್ಳಿಯನ್ನು ಶಾಂತಿನಾಥ ದೇವರ ಪೂಜೆಗೆ ಆಹಾರ ದಾನಕ್ಕೆ ಎಂದು ಮರಿಯಾನೆ ಮತ್ತು ಭರತಿಮಯ್ಯ ದಂಡನಾಯಕರಿಗೆ ದಾನ ನೀಡಿದ್ದಾನೆ[3]. ಮುಂದೆ ಈ ಶಾಂತೀಶ್ವರ ಬಸದಿಗೆ 2ನೆಯ ಬಲ್ಲಾಳನ ಸಾಮಂತನಾದ ಭರತೆಯ ನಾಯಕನು ಹಿರಿಯ ಕೆರೆಯ ಉತ್ತರದಿಕ್ಕಿನ ತೂಬಿನ ಮೊದಲ ಏರಿಯಲ್ಲಿರುವ ಖಂಡುಗ ಗದ್ದೆಯನ್ನು ಶಾಂತಿನಾಥ ದೇವರ ಪೂಜೆಗಾಗಿ ದತ್ತಿ ಬಿಟ್ಟಿದ್ದಾನೆ[4]. ಹೀಗೆ ಈ ಬಸದಿಯು ಹೊಯ್ಸಳರ ವಿಷ್ಣುವರ್ಧನನ ಕಾಲದಿಂದ ಹಿಡಿದು 2ನೆಯ ಬಲ್ಲಾಳನ ಕಾಲದವರೆಗೂ ಮತ್ತು ಮುಂದೆಯೂ ಮನ್ನಣೆಯನ್ನು ಗಳಿಸಿತ್ತು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ.

ಈ ಬಸದಿಯ ಹೊರವಲಯದ ಗೋಡೆಗಳ ಮೇಲಿರುವ ಆನೆ, ಕುದುರೆ, ಸಿಂಹ ಮತ್ತು ಯಾಳಿಗಳ ಚಿತ್ರಪಟ್ಟಿಕೆಗಳು ಅಮೋಘ ಕೆತ್ತನೆಯಾಗಿ ದೊಡ್ಡ ಕಲ್ಲಿನ ಮಂಟಪದಲ್ಲಿವೆ. ಇದಕ್ಕೆ ರಕ್ಷಣಾ ಗೋಡೆಗಳಿಲ್ಲ ಇದೊಂದು ಗರ್ಭಗುಡಿಯ ಮುಂದೆ ವಿಶಾಲವಾದ ನವರಂಗವಿದೆ. ಮುಂದೆ ಬಸದಿಯನ್ನು ಎಕ್ಕೋಟಿ ಜಿನಾಲಯವೆಂದು ಹೆಸರಿಟ್ಟು ಭೇರಿಯೂ ಸೇರಿದಂತೆ ಪಂಚಮಹಾಶಬ್ದಗಳನ್ನು ಕೊಟ್ಟರೆಂದು ಅಲ್ಲಿರುವ ಒಂದು ಶಾಸನ[5]ತಿಳಿಸುತ್ತದೆ. ಇದರಿಂದ ಜೈನಧರ್ಮದ ಮೇಲೆ ಉಂಟಾದ ಶೈವ ಧರ್ಮದ ಪ್ರಭಾವವನ್ನು ಕಾಣಬಹುದು. 10ನೇ ಶತಮಾನದಿಂದ ವಿರಾಜಮಾನವಾಗಿದ್ದ ಜೈನಧರ್ಮಕ್ಕೆ 13ನೆಯ ಶತಮಾನದ ಹೊತ್ತಿಗೆ ಪ್ರಬಲ ಪ್ರತಿಸ್ಪರ್ಧಿಗಳು ಹುಟ್ಟಿಕೊಂಡರು ಎಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ.

ತ್ರಿಕೂಟ ಜಿನಾಲಯ–ಯಲ್ಲಾದಹಳ್ಳಿ

ಬೆಳ್ಳೂರು–ನಾಗಮಂಗಲ ರಸ್ತೆಯಲ್ಲಿ ಯಲ್ಲಾದಹಳ್ಳಿ ವ್ಯಾಪ್ತಿಗೆ ಬರುವ ಉತ್ತರದ ಬಂಡೆಯ ಮೇಲೆ ಶಿಥಿಲಾವಸ್ಥೆಯಲ್ಲಿರುವ ತ್ರಿಕೂಟಾಚಲ ಜೈನ ಬಸದಿಯೊಂದು ಕಂಡು ಬರುತ್ತದೆ. ಈ ಜಿನಾಲಯವನ್ನು ಹೊಯ್ಸಳರ ವಿಷ್ಣುವರ್ಧನನ ಮಹಾಪ್ರಧಾನನಾದ ತಂತ್ರ ವೆಗ್ಗಡೆ ಎಂಬ ಅಧಿಕಾರಿಯಾದ ದೇವರಾಜನು ನಿರ್ಮಿಸಿದ್ದಾನೆ. ವಿಷ್ಣುವರ್ಧನನು ಈತನ ಧರ್ಮ ಬುದ್ಧಿಯನ್ನು ಕಂಡು ಗೌರವದಿಂದ ಸೂರನಹಳ್ಳಿ ಎಂಬ ಗ್ರಾಮವನ್ನು ನೀಡಿದನು. ದೇವರಾಜನು ಸೂರನಹಳ್ಳಿಯಲ್ಲಿ ಪಾರ್ಶ್ವಜಿನ ತ್ರಿಕೂಟ ಬಸದಿಯನ್ನು ಕಟ್ಟಿಸಿ ದೇವರ ಅಷ್ಟ ವಿಧಾರ್ಚನೆಗೆ ಮತ್ತು ಆಹಾರ ದಾನಕ್ಕೆಂದು ಸೂರನಹಳ್ಳಿಯ 10 ಹೊನ್ನಿನ ಹುಟ್ಟುವಳಿ ಭೂಮಿಯನ್ನು ಪಾರ್ಶ್ವಪುರ ಎಂದು ಹೆಸರಿಟ್ಟು ಅದನ್ನು ಮುನಿಚಂದ್ರ ಮುನಿಗಳಿಗೆ ದತ್ತಿಯಾಗಿ ನೀಡಿದ್ದಾನೆ.6ಇದೊಂದು ತ್ರಿಕೂಟ ಬಸದಿಯಾಗಿದ್ದು ಬಳಪದ ಕಲ್ಲನ್ನು ತುಂಬಾ ನಯಗೊಳಿಸಿ ನಿರ್ಮಿಸಿದ್ದಾರೆ. ಇದರ ಅಧಿಷ್ಠಾನವು ತುಂಬಾ ವಿಶೇಷವಾಗಿದೆ. ಆದರೆ ಇದರಲ್ಲಿ ನವರಂಗವಿಲ್ಲ. ಇಂದು ಈ ಜಿನಾಲಯದ ಗರ್ಭಗುಡಿ, ಅಂತರಾಳ, ಭಾಗಗಳಷ್ಟೇ ಉಳಿದುಕೊಂಡಿವೆ. ಗರ್ಭಗೃಹಗಳ ಬಾಗಿಲುವಾಡಗಳು ರೇಖಾಲಂಕಾರಗಳಿಂದ ಕೂಡಿದ್ದು, ಲಲಾಟದಲ್ಲಿ ತೀರ್ಥಂಕರನ ಕೆತ್ತನೆಯಿದೆ. ಸರಿಯಾದ ನಿರ್ವಹಣೆ ಮತ್ತು ರಕ್ಷಣೆಯಿಲ್ಲದೆ ಈ ತ್ರಿಕೂಟ ಜಿನಾಲಯವು ಕಾಲಗರ್ಭದಲ್ಲಿ ಜೀರ್ಣಗೊಳ್ಳುತ್ತಾ ಹೋಗುತ್ತಿದೆ.

ವಿಮಲನಾಥ ಬಸದಿ–ಬೆಳ್ಳೂರು

ನಾಗಮಂಗಲದಿಂದ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿರುವ ಬೆಳ್ಳೂರು, ಒಂದು ಹೋಬಳಿ ಕೇಂದ್ರವಾಗಿದೆ. ಇಲ್ಲಿ ವಿಮಲನಾಥ ಬಸದಿಯಿದ್ದು, ಇದನ್ನು ಹುಲಿಕಲ್ಲಿನ ವರ್ತಕರಾದ ಪದುಮಣ ಸೆಟ್ಟರ ಮೊಮ್ಮಗ, ದೊಡ್ಡವಣ್ಣ ಸೆಟ್ಟರ ಮಗ ಶರ್ಕರ (ಸಕ್ಕರೆ) ಸೆಟ್ಟಿ ಎಂಬುವವನು ಕಟ್ಟಿಸಿದ್ದಾನೆಂದು ಅಲ್ಲಿರುವ ಶಾಸನ[7]ದಿಂದ ತಿಳಿದುಬರುತ್ತದೆ. ಈ ಸಕ್ಕರೆ ಸೆಟ್ಟಿಯು ವಿಮಲನಾಥ ಚೈತ್ಯಾಲಯವನ್ನು ಡಿಳ್ಳಿ ಕೊಲ್ಲಾಪುರ ಜಿನ ಕಂಚಿ ಪೆನುಗೊಂಡೆ ಸಿಂಹಾಸನಾಧೀನರಾದ ಲಕ್ಷ್ಮಿಸೇನ ಭಟ್ಟಾರಕರ ಸಲಹೆಯಂತೆ ನಿರ್ಮಿಸಿದನೆಂದು ಮತ್ತು ಈ ಚೈತ್ಯಾಲಯ ನಿರ್ಮಿಸಲು ಮೈಸೂರಿನ ಅರಸು ದೇವರಾಜ ಒಡೆಯರು ಭೂಮಿ ನೀಡಿದ್ದಾರೆಂದು ತಿಳಿದು ಬರುತ್ತದೆ[8]. ಎರಡೂವರೆ ಅಡಿ ಎತ್ತರದ ವಿಮಲನಾಥ ಮೂರ್ತಿ ಗರ್ಭಗುಡಿಯಲ್ಲಿದ್ದು, ಈ ಮೂರ್ತಿಯನ್ನು ಸಮಂತ ಭದ್ರಾಚಾರ್ಯರ ಶಿಷ್ಯ, ಬಸದಿ ನಿರ್ಮಿಸಲು ಪ್ರೇರಕರಾದ ಲಕ್ಷ್ಮಿಸೇನಾಚಾರ್ಯರೇ ಪ್ರತಿಷ್ಠಾಪಿಸಿದ್ದಾರೆ[9]. ಈ ಬಸದಿಯು ದ್ರಾವಿಡ ಶೈಲಿಯಲ್ಲಿ ರಚಿತಗೊಂಡಿದ್ದು ವಿಶೇಷವಾದ ಕೆತ್ತನೆಗಳು ಅಷ್ಟಾಗಿ ಕಂಡುಬಂದಿಲ್ಲ ಪಾಳು ಬಿದ್ದಿದ್ದ ಇದನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ.

ಶ್ರೀಕರಣ ಪಾರ್ಶ್ವನಾಥ ಜಿನಾಲಯ–ಬೋಗಾದಿ

ನಾಗಮಂಗಲದಿಂದ ನೈರುತ್ಯಕ್ಕೆ 16 ಕಿ.ಮೀ ದೂರದಲ್ಲಿರುವ ಬೋಗಾದಿ ಗ್ರಾಮದಲ್ಲಿ ಶ್ರೀಕರಣ ಪಾರ್ಶ್ವನಾಥ ಜಿನಾಲಯ ಪಾಳು ಬಿದ್ದ ಸ್ಥಿತಿಯಲ್ಲಿದೆ. ಹೊಯ್ಸಳರ ಒಂದನೆಯ ನರಸಿಂಹನ ಕಾಲದಲ್ಲಿ ಶ್ರೀಕರಣ ಮಾದಿರಾಜನು ಬೋಗವತಿ (ಬೋಗಾದಿ) ಎಂಬ ಗ್ರಾಮದಲ್ಲಿ ಶ್ರೀಕರಣ ಜಿನಾಲಯವನ್ನು ಕಟ್ಟಿಸಿ ಪಾರ್ಶ್ವನಾಥ ತೀರ್ಥಂಕರರ ಮೂರ್ತಿಯನ್ನು ಪ್ರತಿಷ್ಠಾಪಿಸಿದಾಗ ಅರಸನು ಬೋಗವತಿ ಗ್ರಾಮವನ್ನು ದತ್ತಿಯಾಗಿ ನೀಡಿದ್ದಾನೆ.[10] ಮುಂದೆ ಈ ಜಿನಾಲಯಕ್ಕೆ 2ನೆಯ ಬಲ್ಲಾಳನ ಮಂತ್ರಿ ಮಾಚಿರಾಜನ ಮಾವ ಹೆಗ್ಗಡೆ ಬಲ್ಲಯ್ಯನು ಪಾರ್ಶ್ವದೇವರ ಅಷ್ಟವಿಧಾರ್ಚನೆಗೆಂದು ಕಾಳಬೋವನಹಳ್ಳಿ ಮತ್ತು ಬೋಗವದಿಯಲ್ಲಿರುವ ಸಮಸ್ತ ಸುಂಕವನ್ನು ದಾನವಾಗಿ ನೀಡಿದ್ದಾನೆ.[11] ಈ ರೀತಿ ಹೊಯ್ಸಳ ಅರಸರು ಮತ್ತು ಅಧಿಕಾರಿಗಳಿಂದ ಮನ್ನಣೆ ಪಡೆದಿದ್ದ ಈ ಜಿನಾಲಯವು ಇಂದು ಪಾಳು ಬಿದ್ದಿದೆ. ಇದು ಮೂರು ಪಟ್ಟಿಕೆಗಳನ್ನು ಹೊಂದಿದ್ದು, ಭಿತ್ತಿಯ ಕಲ್ಲುಗಳೆಲ್ಲಾ ದೇವಾಲಯ ಸುತ್ತ ಕುಸಿದು ಬಿದ್ದಿವೆ. ನವರಂಗ ಘಂಟಾಕೃತಿಯ ನಾಲ್ಕು ಕಂಬಗಳನ್ನು ಹೊಂದಿದ್ದು ಒಂಭತ್ತು ಅಂಕಣಗಳನ್ನು ಹೊಂದಿದೆ. ಗರ್ಭಗೃಹ, ಸುಕನಾಸಿ, ಮಂಟಪಗಳನ್ನು ಗುರುತಿಸಲು ಸಾಧ್ಯವಿಲ್ಲ. ಮುಖ ಮಂಟಪದಲ್ಲಿ 16 ಕಂಬಗಳಿದ್ದು ಇವುಗಳಲ್ಲಿ 12 ಕಂಬಗಳು ಸಿಲಿಂಡರಾಕಾರದಲ್ಲಿವೆ. ಈ ಬಸದಿಯ ಮೂರ್ತಿ ಸಂಪೂರ್ಣ ಹಾಳಾಗಿದ್ದು ಪೀಠದೊಂದಿಗೆ ಕೇವಲ ಪಾದಗಳಷ್ಟೇ ಉಳಿದುಕೊಂಡಿವೆ. ಈ ಜಿನಾಲಯವು ಸಂರಕ್ಷಣೆಯಿಲ್ಲದೆ ಪಾಳು ಬಿದ್ದಿದೆ.

ಕಣ್ಮರೆಯಾಗಿರುವ ಶಾಸನೋಕ್ತ ಬಸದಿಗಳು

ಪಾರ್ಶ್ವನಾಥ ಬಸದಿ (ಕಲ್ಲೇಶ್ವರ)–ಕಸಲಗೆರೆ

ದೇವಲಾಪುರ ಹೋಬಳಿಯಲ್ಲಿ ಬರುವ ಕಸಲಗೆರೆಯ ಕಲ್ಲೇಶ್ವರ ಗುಡಿಯ ಮುಂದೆ ಜೈನ ಶಾಸನವಿದ್ದು, ಈ ಶಾಸನದಿಂದ ವಿಷ್ಣುವರ್ಧನನ ಸಾಮಂತನಾದ ಸೋಮನು, ಭಾನುಕೀರ್ತಿ ಸಿದ್ಧಾಂತ ದೇವರ ಶಿಷ್ಯನಾಗಿದ್ದು, ಈತ ಆಳುತ್ತಿದ್ದ ಕಲ್ಕುಣಿ ನಾಡಿನ ಹೆಬ್ಬದಿರುರೂವಾಡಿ ಎಂಬಲ್ಲಿ ಉತ್ತುಂಗವಾದ ಚೈತ್ಯಾಲಯವನ್ನು ಕಟ್ಟಿಸಿ ಅಲ್ಲಿ ಪಾರ್ಶ್ವನಾಥನನ್ನು ಪ್ರತಿಷ್ಠಾಪಿಸಿ, ಈ ದೇವರ ಅಂಗಭೋಗ, ಆಹಾರದಾನ ಹಾಗೂ ಬಸದಿಯ ಜೀರ್ಣೋದ್ಧಾರಕ್ಕೆ ಎಂದು ಅರುಹನಹಳ್ಳಿ ಗ್ರಾಮವನ್ನು ಬ್ರಹ್ಮದೇವ ಎಂಬ ಮುನಿಗೆ ದತ್ತಿಯಾಗಿ ಬಿಟ್ಟಿದ್ದಾನೆ.[12] ಆದರೆ ಈ ಭಾಗದಲ್ಲಿ ಎಲ್ಲಿಯೂ ಪಾರ್ಶ್ವನಾಥ ಬಸದಿ ಕಂಡುಬಂದಿಲ್ಲ. ಬಹುಶಃ ಈ ಕಲ್ಲೇಶ್ವರ ಗುಡಿಯೇ ಹಿಂದೆ ಪಾರ್ಶ್ವನಾಥ ಬಸದಿಯಾಗಿರಬಹುದು ಕಂಬದಹಳ್ಳಿಯ ಶಾಂತೀಶ್ವರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪಾಳು ಬಸದಿ ಎಕ್ಕೋಟಿ ಜಿನಾಲಯವಾದ ಹಾಗೆ ಈ ಬಸದಿಯು ಶೈವರ ಪ್ರಭಾವಕ್ಕೆ ಒಳಗಾಗಿ ಕಲ್ಲೇಶ್ವರ ಗುಡಿಯಾಗಿರಬಹುದು. ಈ ದೇವಾಲಯದ ನವರಂಗದ ಒಂದು ಮೂಲೆಯಲ್ಲಿ ಜೈನಶಾಸನ ಹಾಗೂ ಸೂರ್ಯ ಶಿಲ್ಪಗಳಿವೆ. ಇವು ನಮ್ಮ ಊಹೆಯನ್ನು ಪುಷ್ಟೀಕರಿಸುತ್ತವೆ.

ಪಾರ್ಶ್ವ ಜಿನಾಲಯ–(ವೀರಭದ್ರ ದೇವಾಲಯ) : ಹಟ್ಟಣ

ಹಟ್ಟಣದ ವೀರಭದ್ರ ದೇವಾಲಯದ ಬಳಿಯಿರುವ ಕ್ರಿ. ಶ. 1178 ರ ಕಾಲಘಟ್ಟಕ್ಕೆ ಸೇರಿದ ಶಾಸನ[13]ವೊಂದರಿಂದ ಪಾರ್ಶ್ವ ಜಿನಾಲಯವೊಂದರ ನಿರ್ಮಾಣದ ಬಗ್ಗೆ ತಿಳಿಯುತ್ತದೆ. ಹೊಯ್ಸಳರ ಎರಡನೆಯ ಬಲ್ಲಾಳನ ಸಾಮಂತ ನರಸಿಂಗ ನಾಯಕ ಈತನ ಆಶ್ರಯದಲ್ಲಿ ಸೋವಿಸೆಟ್ಟಿ ಎಂಬುವವನಿದ್ದ. ಈತ ಮೂರು ಕೆರೆಗಳನ್ನು ಒಂದು ಪಾರ್ಶ್ವ ಜಿನಾಲಯವನ್ನು ಕಟ್ಟಿಸಿ, ಈ ದೇವರ ಅಷ್ಟ ವಿಧಾರ್ಚನೆಗೆ ಜೀರ್ಣೋದ್ಧಾರಕ್ಕೆ ಮತ್ತು ಜಿನ ಮುನಿಗಳ ಆಹಾರಕ್ಕೆ ಎಂದು ಬಾಲಚಂದ್ರ ಮುನಿಗಳಿಗೆ ದತ್ತಿಯಾಗಿ ನೀಡಿದ್ದಾನೆ. ಇದಲ್ಲದೆ ಮಹಾಪ್ರಧಾನ ಮಾಧವ ದಂಡನಾಯಕರ ಆದೇಶದಂತೆ ನಾರಣವೆರ್ಗ್ಗಡೆ ನಂದಾದೀವಿಗೆಗೆ ಮತ್ತು ಅಷ್ಟವಿಧಾರ್ಚನೆಗೆ ಎಂದು ಒಂದು ಗಾಣವನ್ನು ಮತ್ತು ಹೇರಿನ ಸುಂಕದ 10ನೆಯ ಒಂದರಷ್ಟನ್ನು ದಾನವಾಗಿ ನೀಡಿದ್ದಾನೆ. ಆದರೆ ಎಲ್ಲಿಯೂ ಈ ಪಾರ್ಶ್ವ ಜಿನಾಲಯ ಕಂಡುಬರುವುದಿಲ್ಲ. ಈ ವೀರಭದ್ರಸ್ವಾಮಿ ದೇವಾಲಯವೇ ಪಾರ್ಶ್ವನಾಥ ಬಸದಿಯಾಗಿತ್ತು ಎಂದು ಆ ದೇವಾಲಯದ ವಾಸ್ತುಶಿಲ್ಪ ರಚನೆಯಿಂದ ತಿಳಿಯಬಹುದಾಗಿದೆ. ಈ ಗುಡಿಯು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಹೊಯ್ಸಳರ ಕಾಲದಲ್ಲಿಯೇ ನಿರ್ಮಾಣಗೊಂಡಿದೆ. ಗರ್ಭಗೃಹದಲ್ಲಿ ತೀರ್ಥಂಕರರ ಪೀಠದ ಮೇಲೆ ಸುಮಾರು 14–15ನೆಯ ಶತಮಾನಕ್ಕೆ ಸೇರಿದ ವೀರಭದ್ರ ದೇವರ ನಾಲ್ಕಡಿಯ ಶಿಲ್ಪವಿದೆ. ಹಾಗಾಗಿ ಇದು ಶಾಸನೋಕ್ತ ಪಾರ್ಶ್ವನಾಥ ಜಿನಾಲಯವಾಗಿದ್ದು ಅನಂತರದಲ್ಲಿ ಇದನ್ನು ವೀರಭದ್ರ ದೇವಾಲಯವಾಗಿ ಪರಿವರ್ತಿಸಿದ್ದಾರೆ ಎಂದು ಊಹಿಸಬಹುದಾಗಿದೆ.

ಲಕ್ಕಮ್ಮನ ಗುಡಿ–ಸುಕದರೆ

ಸುಕದರೆಯ ಲಕ್ಕಮ್ಮನ ಗುಡಿಯ ಬಳಿ ಇದ್ದ ಶಾಸನ[14]ದಿಂದ ವಿಷ್ಣುವರ್ಧನನ ಆಳ್ವಿಕೆಯ ಕಾಲದಲ್ಲಿ ಸುಕದರೆ ಎಂಬ ಗ್ರಾಮದಲ್ಲಿ ಜಕ್ಕಿಸೆಟ್ಟಿ ಎಂಬುವವನು ಒಂದು ಬಸದಿಯನ್ನು ಮತ್ತು ಮಾಚ ಸಮುದ್ರ, ಮಾಕ ಸಮುದ್ರ ಎಂಬ ಎರಡು ಕೆರೆಗಳನ್ನು ಕಟ್ಟಿಸಿ, ಆ ಬಸದಿಯಲ್ಲಿರುವ ಯತಿಗಳಿಗೆ ಆಹಾರಕ್ಕೆಂದು ಮತ್ತು ದೇವರ ಪೂಜೆಗೆಂದು ದಾನವನ್ನು ನೀಡಿದ್ದಾನೆ. ಅಲ್ಲದೇ ತಿಪ್ಪೆಸುಂಕ ಮೊದಲಾದ ತೆರಿಗೆಗಳನ್ನು ಬಸದಿಗೆ ನೀಡಿದ್ದಾನೆ. ಆದರೆ ಸುಕದರೆಯಲ್ಲಿ ಯಾವ ಬಸದಿಗಳು ಇಲ್ಲ. ಇತರ ಜಿನಾಲಯಗಳ ರೀತಿಯಲ್ಲಿ ಈ ಜಿನಾಲಯವೇ ಲಕ್ಕಮ್ಮನ ಗುಡಿಯಾಗಿರಬಹುದೇ ಎಂದು ನೋಡಲು ಇಂದು ಅಲ್ಲಿ ಲಕ್ಕಮ್ಮನ ಗುಡಿಯೂ ಇಲ್ಲ. ಆ ಗುಡಿಯು ಸಂಪೂರ್ಣ ಕುಸಿದು ಹೋಗಿ ಅದರ ಅವಶೇಷಗಳನ್ನು ಒಂದು ಕಡೆಗೆ ತಳ್ಳಿ ಅಲ್ಲಿ ಅಂಗನವಾಡಿಯನ್ನು ಕಟ್ಟಲಾಗಿದೆ.

ಪಂಚ ಬಸದಿ–ದಡಗ

ದಡಗ, ದಡಿಗ, ದಡಿಗನಕೆರೆ ಎಂದೆಲ್ಲಾ ಶಾಸನೋಕ್ತವಾಗಿರುವ ಈ ಊರಿನಲ್ಲಿ ದೊರೆತಿರುವ ವಿಷ್ಣುವರ್ಧನನ ಕಾಲದ ಶಾಸನ[15]ದಲ್ಲಿ ದಡಿಗನ ಕೆರೆಯಲ್ಲಿ ಪಂಚ ಬಸದಿಗಳಿದ್ದವು ಎಂಬ ಮಾಹಿತಿ ದೊರೆಯುತ್ತದೆ. ದಂಡನಾಯಕರಾದ ಮರಿಯಾನೆ ಮತ್ತು ಭರತಿಯಯ್ಯ ಸಹೋದರರು ಮೇಘಚಂದ್ರ ಸಿದ್ಧಾಂತ ಮುನಿಗಳಿಗೆ, ದಡಿಗನ ಕೆರೆಯ ಪಂಚ ಬಸದಿಗೆ ಬಾಹುಬಲಿ ಕೂಟವನ್ನು ದಾನವಾಗಿ ನೀಡಿ, ಮರಿಯಾನೆ ಸಮುದ್ರ ಎಂಬ ಕೆರೆಯ ಕೆಳಗಣ ಭೂಮಿಯನ್ನು ಮತ್ತು ಅಡಕೆ ತೋಟವನ್ನು ದೇಶೀಯ ಗಣದ ನಾಲ್ಕು ಬಸದಿಗಳಿಗೆ ಮತ್ತು ಕಾಣೂರ್ಗಣದ ಒಂದು ಬಸದಿಗೆ ದಾನ ನೀಡಿದ್ದರೆಂದು ತಿಳಿದು ಬರುತ್ತದೆ. ಆದರೆ ಈ ಶಾಸನದಲ್ಲಿ ಉಲ್ಲೇಖಿಸಿರುವ ಪಂಚ ಬಸದಿಗಳು ಈ ಊರಿನಲ್ಲಿ ಇಲ್ಲ. ಇಲ್ಲಿ ಅವು ಇದ್ದವು ಎಂಬುದಕ್ಕೆ ಯಾವ ಆಧಾರಗಳೂ ದೊರೆಯುತ್ತಿಲ್ಲ. ಆದರೆ ಶಾಂತಿನಾಥ ಬಸದಿ ಎಂಬ ಒಂದು ಬಸದಿ ಇಲ್ಲಿದ್ದು ಅದನ್ನು 70ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ಇಲ್ಲಿ ಹಲವಾರು ಜೈನ ಕುಟುಂಬಗಳು ಇವೆ. ಬಹುಶಃ ಆ ಪಂಚ ಬಸದಿಗಳು ಶಿಥಿಲಗೊಂಡು ನಾಶಗೊಂಡಿರ ಬಹುದೆಂದು ಊಹಿಸಬಹುದಾಗಿದೆ.

ತ್ರಿಕೂಟ ರತ್ನತ್ರಯ ಶಾಂತಿನಾಥ ಬಸದಿ–ಕೆಲಗೆರೆ

ಕೆಲಗೆರೆಯ ಶಾಸನ[16]ವೊಂದರಲ್ಲಿ ಹೊಯ್ಸಳರ 3ನೆಯ ನರಸಿಂಹನು ಚಿಕ್ಕಕನ್ನೆಯನಹಳ್ಳಿ ಎಂಬ ಗ್ರಾಮವನ್ನು ತ್ರಿಕೂಟ ರತ್ನತ್ರಯವಾದ ಶಾಂತಿನಾಥ ಬಸದಿಗೆ ದಾನವಾಗಿ ನೀಡಿದ ವಿಷಯ ತಿಳಿದುಬರುತ್ತದೆ. ಆದರೆ ಕೆಲಗೆರೆಯಲ್ಲಿ ಈಗ ಯಾವ ಬಸದಿಯು ಕಂಡುಬರುವುದಿಲ್ಲ. ಈ ಗ್ರಾಮದ ಸಮೀಪದಲ್ಲಿಯೇ ಚಿಕ್ಕಕನ್ನೆಯನಹಳ್ಳಿ ಗ್ರಾಮವಿದೆ ಆದರೆ ಶಾಂತಿನಾಥ ಬಸದಿ ಎಲ್ಲಿತ್ತು ಎಂಬ ಬಗ್ಗೆ ಮಾಹಿತಿಯಿಲ್ಲ.

ಈ ಶಾಸನೋಕ್ತ ಬಸದಿಗಳನ್ನು ಗಮನಿಸಿದಾಗ ನಾಗಮಂಗಲ ತಾಲ್ಲೂಕಿನಲ್ಲಿ ನಿರ್ಮಾಣಗೊಂಡ ಎಲ್ಲಾ ಬಸದಿಗಳು ಹೊಯ್ಸಳರ ಕಾಲದವು. ವಿಷ್ಣುವರ್ಧನನಿಂದ ಹಿಡಿದು 3ನೆಯ ನರಸಿಂಹನ ಕಾಲದವರೆಗೂ ಬಸದಿಗಳನ್ನು ನಿರ್ಮಾಣ ಮಾಡಿ ಅವುಗಳ ನಿರ್ವಹಣೆಗೆ ದಾನ ದತ್ತಿಗಳನ್ನು ನೀಡುತ್ತಾ ಬಂದಿದ್ದಾರೆ. 10ನೆಯು ಶತಮಾನದಿಂದ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಜೈನಧರ್ಮ 13ನೆಯ ಶತಮಾನದ ಹೊತ್ತಿಗೆ ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಾ ಬಂದಿತ್ತು. ಅದಕ್ಕೆ ಸಾಕ್ಷಿಯಾಗಿ ಕಂಬದಹಳ್ಳಿಯ ಶಾಂತೀಶ್ವರ ಬಸದಿ ಶೈವಧರ್ಮದ ಪ್ರಭಾವದಿಂದಾಗಿ ಎಕ್ಕೋಟಿ ಜಿನಾಲಯವೆಂದು ಹೆಸರು ಪಡೆದಿತ್ತು. ಅನಂತರದಲ್ಲಿ ಕಸಲಗೆರೆಯ ಪಾರ್ಶ್ವನಾಥ ಬಸದಿ ಕಲ್ಲೇಶ್ವರ ದೇವಾಲಯವಾಗಿ, ಹಟ್ಟಣದ ಪಾರ್ಶ್ವನಾಥ ಜಿನಾಲಯ ವೀರಭದ್ರ ದೇವಾಲಯವಾಗಿ, ಸುಕದರೆಯ ಬಸದಿ ಲಕ್ಕಮ್ಮನ ಗುಡಿಯಾಗಿ, ಹೀಗೆ ಶೈವ ಪ್ರಭಾವಕ್ಕೆ ಒಳಗಾಗಿ ಬಸದಿಗಳು ಶೈವ ದೇವಾಲಯಗಳಾಗಿ ಮಾರ್ಪಾಡುಗೊಳ್ಳುತ್ತಾ ಬಂದವು. ಇದು ಒಂದು ಕಾರಣವಾದರೆ ಬಸದಿಗಳು ಕಣ್ಮರೆಯಾಗಲು ನಮ್ಮ ಜನರಲ್ಲಿ ಐತಿಹಾಸಿಕ ಪ್ರಜ್ಞೆಯ ಕೊರತೆ, ಸಾಂಸ್ಕೃತಿಕ ತಾಣಗಳನ್ನು ಸಂರಕ್ಷಿಸಬೇಕು ಎಂಬ ಕಾಳಜಿ ಇಲ್ಲದಿರುವುದು ಮತ್ತೊಂದು ಕಾರಣವಾಗಿದೆ. ಇದೇ ರೀತಿಯ ನಿರ್ಲಕ್ಷತನ, ಐತಿಹಾಸಿಕ ಪ್ರಜ್ಞೆಯ ಕೊರತೆಯ ಕಾರಣದಿಂದಾಗಿ ಎಷ್ಟು ದೇವಾಲಯಗಳು, ಶಾಸನಗಳು, ಕೃತಿಗಳು, ಕಾಲಗರ್ಭದಲ್ಲಿ ಹೂತು ಹೋಗಿರುವುದೋ ತಿಳಿಯದು.

ಒಟ್ಟಾರೆಯಾಗಿ ನಾಗಮಂಗಲ ತಾಲ್ಲೂಕು ಪ್ರದೇಶದಲ್ಲಿ ಹಲವಾರು ಬಸದಿಗಳು ನಿರ್ಮಾಣಗೊಂಡು ತಮ್ಮ ಕಾಲದಲ್ಲಿ ರಾಜರಿಂದ ಮನ್ನಣೆ ಗಳಿಸಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಈಗ ಕೆಲವನ್ನು ಹೊರತು ಪಡಿಸಿ ಉಳಿದವು ಕಣ್ಮರೆಯಾಗಿ ಹೋಗಿವೆ.

ಅಡಿ ಟಿಪ್ಪಣಿಗಳು

1. ಎ.ಕ.ಸಂ.7 ನಾ.ಮಂ. 149 ದೇವರಹಳ್ಳಿ ಪು–144–147
2. ಎ.ಕ.ಸಂ.7 ನಾ.ಮಂ. 32 ಕಂಬದಹಳ್ಳಿ ಪು–19
3. ಎ.ಕ.ಸಂ.7 ನಾ.ಮಂ. 30 ಕಂಬದಹಳ್ಳಿ ಪು–18–19
4. ಎ.ಕ.ಸಂ.7 ನಾ.ಮಂ. 29 ಕಂಬದಹಳ್ಳಿ ಪು–18
5. ಎ.ಕ.ಸಂ.7 ನಾ.ಮಂ. 31 ಕಂಬದಹಳ್ಳಿ ಪು–19
6. ಎ.ಕ.ಸಂ.7 ನಾ.ಮಂ. 64 ಯಲ್ಲಾದಹಳ್ಳಿ ಪು–45–49

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

7. ಎ.ಕ.ಸಂ.7 ನಾ.ಮಂ. 93 ಬೆಳ್ಳೂರು ಪು–91
8. ಎ.ಕ.ಸಂ.7 ನಾ.ಮಂ. 94 ಬೆಳ್ಳೂರು ಪು–92
9. ಎ.ಕ.ಸಂ.7 ನಾ.ಮಂ. 92 ಬೆಳ್ಳೂರು ಪು–91
10. ಎ.ಕ.ಸಂ.7 ನಾ.ಮಂ. 183 ಬೋಗಾದಿ ಪು–177–182
11. ಎ.ಕ.ಸಂ.7 ನಾ.ಮಂ. 184 ಬೋಗಾದಿ ಪು–183–185
12. ಎ.ಕ.ಸಂ.7 ನಾ.ಮಂ. 69 ಕಸಲಗೆರೆ ಪು–167–169
13. ಎ.ಕ.ಸಂ.7 ನಾ.ಮಂ. 118 ಹಟ್ಟಣ ಪು–117
14. ಎ.ಕ.ಸಂ.7 ನಾ.ಮಂ. 14 ಸುಕದರೆ ಪು–11–12
15. ಎ.ಕ.ಸಂ.7 ನಾ.ಮಂ. 68 ದಡಗ ಪು–51
16. ಎ.ಕ.ಸಂ.7 ನಾ.ಮಂ. 60 ಕೆಳಗೆರೆ ಪು–32–33

ಪರಾಮರ್ಶನ ಗ್ರಂಥಗಳು

- **ಗೋಪಾಲ್ ಬಾ. ರಾ. (ಸಂ.) (1979) :** ಎಪಿಗ್ರಾಫಿಯ ಕರ್ನಾಟಕ ಸಂಪುಟ 7, ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- **ಗೋಪಾಲ್ ಆರ್. (ಸಂ.) (2008) :** ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.
- **ನಾಗರಾಜು ಎಚ್.ಎಂ. (2012) :** ನಾಗಮಂಗಲ ತಾಲ್ಲೂಕಿನ ಮಹತ್ವದ ಸ್ಥಳಗಳು, ಮೈಸೂರು ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ.
- **ಪಾರ್ಥ ಸಾರಥಿ ಟಿ.ಎ(ಸಂ.) (2003) :** ಮಂಡ್ಯ ಜಿಲ್ಲಾ ಗ್ಯಾಜೆಟಿಯರ್: ಕರ್ನಾಟಕ ಸರ್ಕಾರ.
- **ತೈಲೂರು ವೆಂಕಟಕೃಷ್ಣ (2010) :** ಮಂಡ್ಯ ಜಿಲ್ಲೆಯ ದೇವಾಲಯಗಳು–ಒಂದು ಸಮೀಕ್ಷೆ : ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.

■■

– 24ನೇ ಪುಟದಿಂದ ಮುಂದುವರೆದುದು

ಗ್ರಾಮ ಪಂಚಾಯತಿ ಸಭೆಗಳಲ್ಲಿ ಸರ್ಕಾರದ ನಿಯಮಗಳ ಬಗ್ಗೆ ಸದಸ್ಯರಿಗೆ ಮಾಹಿತಿ ನೀಡಬೇಕು : ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಸದಸ್ಯರು ಅವಿದ್ಯಾವಂತರಾಗಿರುತ್ತಾರೆ. ಇವರಿಗೆ ಪಿಡಿಒಗಳು ಸರ್ಕಾರದ ನಿಯಮ ಮತ್ತು ಕಾಯ್ದೆಗಳ ಬಗ್ಗೆ ಸೂಕ್ತ ಮಾಹಿತಿಯನ್ನು ನೀಡಬೇಕು ಹಾಗೂ ಗ್ರಾಮ ಪಂಚಾಯಿತಿಯು ನಿಯಮ ಬದ್ಧವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು.

ಪಂಚಾಯಿತಿ ಸದಸ್ಯರೊಂದಿಗೆ ಸುಮಧುರ ಸಂಬಂಧವನ್ನಿಟ್ಟು ಕೊಳ್ಳುವುದು : ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿ ಸದಸ್ಯರೊಂದಿಗೆ ಸ್ನೇಹ ಪೂರ್ಣ ಸಂಬಂಧಗಳ ಮೂಲಕ ವ್ಯವಹರಿಸಬೇಕು. ಪಂಚಾಯಿತಿ ಸಭೆಗಳಲ್ಲಿ ಸದಸ್ಯರು ತೀರ್ಮಾನ ಕೈಗೊಳ್ಳುವಾಗ ಅವರಿಗೆ ಸೂಕ್ತ ಸಲಹೆಗಳನ್ನು ನೀಡಬೇಕು.

ನಿಯಮಿತವಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು : ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಪ್ರತಿ ತ್ರೈಮಾಸಿಕದಲ್ಲಿ ಕನಿಷ್ಠ ಒಂದು ಬಾರಿತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಈ ತರಬೇತಿಯು ಅವರಲ್ಲಿ ಕೌಶಲ್ಯವನ್ನು ವೃದ್ಧಿಸುತ್ತದೆ. ಕೆಲಸ ಮಾಡುವ ಮನಸ್ಥಿತಿಯನ್ನು ಹೆಚ್ಚಿಸುತ್ತದೆ. ತರಬೇತಿಯು ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ಕಲಿಸುತ್ತದೆ.

ಸಾರ್ವಜನಿಕರ ಕುಂದು ಕೊರತೆಗಳ ಪರಿಹಾರಕ್ಕೆ ಪ್ರತ್ಯೇಕ ಶಾಖೆಯನ್ನು ತೆರೆಯುವುದು : ಪ್ರತಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಬಗೆಹರಿಸಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಪ್ರತ್ಯೇಕ ಶಾಖೆಯನ್ನು ತೆರೆದು ಸಾರ್ವಜನಿಕರ ಹಿತಾಸಕ್ತಿಗಳನ್ನು ಕಾಪಾಡುವುದು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕಲ್ಯಾಣ ನಿಧಿಯನ್ನು ಸ್ಥಾಪಿಸುವುದು : ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕಲ್ಯಾಣ ನಿಧಿಯನ್ನು ಸ್ಥಾಪಿಸಿ ಆರ್ಥಿಕ ಸೌಲಭ್ಯಗಳು ಮತ್ತು ಸವಲತ್ತುಗಳನ್ನು ನೀಡುವುದು. ಉತ್ತಮವಾಗಿ ಕಾರ್ಯ ನಿರ್ವಹಿಸಿದವರಿಗೆ ಪ್ರೋತ್ಸಾಹ ಮತ್ತು ಪ್ರಶಸ್ತಿಗಳನ್ನು ನೀಡುವುದು.

ಸರ್ಕಾರದ ಯೋಜನೆಗಳಿಗೆ ಸೂಕ್ತ ಅನುದಾನ ನೀಡುವುದು : ಸಾರ್ವಜನಿಕ ಕಾರ್ಯಗಳಿಗೆ ಹಣಕಾಸು ಇಂಧನವಾಗಿದೆ. ಯಾವುದೇ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತರಲು ಆರ್ಥಿಕವಾಗಿ ಸಂಪನ್ಮೂಲಗಳು ಅಗತ್ಯವಾಗಿರುತ್ತದೆ. ಸರ್ಕಾರವು ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಗೆ ಪೂರಕವಾಗಿ ಅನುದಾನವನ್ನು ಬಿಡುಗಡೆ ಮಾಡಬೇಕು.

ಕರ್ನಾಟಕದ ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ, ಜನಪ್ರತಿನಿಧಿಗಳ ಭಾಗವಹಿಸುವಿಕೆ, ಪಿಡಿಒಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳು ಆಡಳಿತದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಮ್ಮ ದೈನಂದಿನ ಕಾರ್ಯಗಳನ್ನು ನಿರ್ವಹಿಸುವಾಗ ಅನೇಕ ಸಮಸ್ಯೆಗಳಿಗೆ ಒಳಗಾಗುತ್ತಾರೆ. ಕಾರ್ಯದ ಒತ್ತಡ, ಸದಸ್ಯರ ರಾಜಕೀಯ ಹಸ್ತಕ್ಷೇಪ, ಮೇಲಧಿಕಾರಿಗಳ ಒತ್ತಡ ಮುಂತಾದ ಕಾರಣಗಳಿಂದ ಮಾನಸಿಕವಾಗಿ ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಆದರೂ ಸಹ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ಗ್ರಾಮಸ್ಥರೊಂದಿಗೆ ಸಮನ್ವಯ ಸಾಧಿಸಿ, ಅವರ ಅಭಿಪ್ರಾಯಗಳನ್ನು ಗೌರವಿಸಿ ಮತ್ತು ಅವರ ಸಕ್ರಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಮೂಲಕ ಸರ್ಕಾರಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುತ್ತಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಪರಿಣಾಮಕಾರಿ ಯಾಗಿ ಕಾರ್ಯನಿರ್ವಹಿಸಿದರೆ ಗ್ರಾಮೀಣ ಪ್ರದೇಶಗಳನ್ನು ಸಮೃದ್ಧ ಗೊಳಿಸಬಹುದು.

ಪರಾಮರ್ಶನ ಗ್ರಂಥಗಳು

- **Ramshray Roy, (1984) :** *Self and Society : A study in Gandhian Thought,* New Delhi, Sage Publications, India Pvt. Ltd., p. 123
- **Sudip Mandal. (2020) :** *Gandhian ideas of grassroot development and Indian development policy in 21st century (special reference of panchayat raj institutions).* International Journal of Research - GRANTHAALAYAH, 8(11), p.100-105.
- **Bharamagoudar M. V. and Angadi J. G. (2015) :** *A Scale to Measure Job Perception of Panchayat Development Officers (PDOs).* Indian Journal of Agricultural Statistics Science, 11(1), 2015, pp. 185-187.
- **Desai V. (1991) :** *Fundamentals of Rural Development.* New Delhi Rawat Publication.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕನ್ನಡ ಪ್ರಗತಿಶೀಲ ಸಾಹಿತ್ಯ : ಶ್ರೀಸಾಮಾನ್ಯನ ಚಿಂತನೆ

✍ **ಡಾ. ಅಶೋಕ ಎಚ್. ಕೆ.** ಕನ್ನಡ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹೊಳೆನರಸೀಪುರ, ಹಾಸನ ಜಿಲ್ಲೆ.
✍ **ಉಷಾ ಎಚ್.ಪಿ.,** ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತಿಪಟೂರು, ತುಮಕೂರು ಜಿಲ್ಲೆ.

ಆಧುನಿಕ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಮನುಷ್ಯತ್ವದ ಪರವಾಗಿ ಹೆಚ್ಚು ಮಾತನಾಡಿದ ಸಾಹಿತ್ಯ ಪಂಥ ಎಂದರೆ ಅದು ಪ್ರಗತಿಶೀಲ ಸಾಹಿತ್ಯ. ಈ ಮಾತು ಅತಿಶಯೋಕ್ತಿಯಿಂದ ಹೇಳಿದ್ದಲ್ಲ. ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಹುಟ್ಟಿದ ಪ್ರಗತಿಶೀಲ ಸಾಹಿತ್ಯವನ್ನು ಆರಂಭದಲ್ಲಿ ಪ್ರಭಾವಿಸಿದ್ದು ವಿದೇಶಿ ಚಿಂತನೆಗಳು. 19ನೆಯ ಶತಮಾನದಲ್ಲಿ ಜಾಗತಿಕವಾಗಿ ಸಮಾಜವಾದದ ವಿಚಾರಧಾರೆ ಹುಟ್ಟಿಕೊಳ್ಳಲು ಪ್ರಮುಖ ಕಾರಣ ಕಾರ್ಲ್‌ಮಾರ್ಕ್ಸ್, ರಾಬರ್ಟ್ ಓವನ್, ಟಾಲ್‌ಸ್ಟಾಯ್, ಮ್ಯಾಕ್ಸಿಂಗಾರ್ಕಿ ಮುಂತಾದವರು. ಬಂಡವಾಳಗಾರರಿಂದ ಶ್ರಮಿಕ ವರ್ಗವು ಅನುಭವಿಸುತ್ತಿರುವ ಹಲವು ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರ ಕಂಡುಕೊಳ್ಳಲು ಕ್ರಾಂತಿಕಾರಕ ಚಿಂತನೆಗಳನ್ನು ತಮ್ಮ ಲೇಖನಗಳ ಮೂಲಕ ಅರಿವು ಮೂಡಿಸಲು ಇವರುಗಳು ಮುಂದಾದರು.

ಬ್ರಿಟಿಷ್ ಮತ್ತು ಭಾರತೀಯ ಬಂಡವಾಳಗಾರರಿಂದ ಕೂಡಿದ ಆಧುನಿಕ ಕೈಗಾರಿಕೋದ್ಯಮಿಗಳ ಕೈಗೆ ಸಿಲುಕಿದ ದುಡಿಯುವ ವರ್ಗ ತೀವ್ರವಾದ ಶೋಷಣೆಗೆ ಒಳಗಾಗಿತ್ತು. ಹೆಚ್ಚು ಕೆಲಸ, ಕಡಿಮೆ ಸಂಬಳ, ನಿಂದನೆ, ಅವಮಾನ ನಿರಂತರವಾಗಿದ್ದವು. ಬಂಡವಾಳಗಾರರ ದಬ್ಬಾಳಿಕೆಯಿಂದ ಅನನುಕೂಲತೆಗಳು ಅಧಿಕವಾಗಿ ಸಮಸ್ಯೆಗಳ ಆಗರವಾಗಿದ್ದವು. ರೈತರ ಬದುಕನ್ನು ಸಂಪೂರ್ಣವಾಗಿ ಕಸಿದುಕೊಳ್ಳುವ ಅಘಾತಕಾರಿ ಕಾಯ್ದೆಗಳನ್ನು ಜಾರಿಗೆ ತರುವ ಸಂದರ್ಭಗಳು ಗೋಚರಿಸಿದವು. ಬ್ರಿಟಿಷ್ ಮತ್ತು ಭಾರತೀಯ ಭೂ ಮಾಲಿಕರು ಜೊತೆಯಾಗಿ ಜಾರಿಗೆ ತಂದ ರೈತವಾರಿ ಪದ್ಧತಿ, ಜಮೀನ್ದಾರಿ ಪದ್ಧತಿ, ಭೂ ಒಡೆತನದ ಹಕ್ಕು, ಖಾಸಗಿಕರಣ, ಭೂಮಿಯ ಮಾರಾಟ, ಮಿತಿಮೀರಿದ ಕಂದಾಯದ ಹೊರೆ, ಅಧಿಕ ನೀರಿನ ತೆರಿಗೆ, ಬರಗಾಲದಲ್ಲಿಯೂ ಕಡ್ಡಾಯ ಕಂದಾಯ ವಸೂಲಿ, ರೈತರ ಉತ್ಪನ್ನಗಳನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳುವುದು, ಕಡಿಮೆ ಕೂಲಿ ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ಇದರಿಂದ ಕೂಲಿಕಾರರು, ಗೇಣಿದಾರರು ಮತ್ತು ಜೀತಗಾರರ ಪರಿಸ್ಥಿತಿಯು ತುಂಬಕೆಟ್ಟದಾಗಿದ್ದಿತು.

ಎಂ.ಎನ್. ರಾಯ್, ಜೆ. ಪಿ. ನಾರಾಯಣ್, ಡಾ.ರಾಮ ಮನೋಹರ ಲೋಹಿಯ, ಡಾ. ಬಿ. ಆರ್.ಅಂಬೇಡ್ಕರ್ ಇವರುಗಳು ಹೊರದೇಶಕ್ಕೆ ವಿದ್ಯಾಭ್ಯಾಸಕ್ಕೆ ತೆರಳಿ ಅಲ್ಲಿ ಶಿಕ್ಷಣ ಪಡೆಯುವುದರ ಜೊತೆಗೆ ಜನಪರವಾದ ಚಳವಳಿ, ಸಮಾಜವಾದ, ಪ್ರಜಾಪ್ರಭುತ್ವ ಹಾಗೂ ಪ್ರಗತಿಪರಚಿಂತನೆಯ ಪ್ರೇರಣೆಗಳಿಗೆ ಒಳಗಾದರು.ಇದರಿಂದ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಬ್ರಿಟಿಷ್ ಮತ್ತು ದೇಶೀಯ ಸಮ್ರಾಜ್ಯಶಾಹಿಗಳ ವಿರುದ್ಧ ಶ್ರಮಿಕವರ್ಗವನ್ನು ಸಂಘಟಿಸುವುದಕ್ಕೆ ಸಾಧ್ಯವಾಯಿತು.

ದೇಶದ ಸ್ವಾತಂತ್ರ್ಯದ ಕನಸುಗಳನ್ನು ಹೊತ್ತು ಹೊರಟ ಜನರಿಗೆ ಸಂಘಟನೆಯಾಗಲು ಹಲವು ಮಾರ್ಗಗಳು ಸಿಕ್ಕವು.ಕೆಲವರು ಶ್ರೀಸಾಮಾನ್ಯನ ಸಮಸ್ಯೆಗಳನ್ನು ಹೆಗಲಿಗೆ ಹಾಕಿಕೊಂಡಂತೆ ಪ್ರಾರಂಭದಲ್ಲಿ ಕಾಣಿಸಿಕೊಂಡರು. ಕೆಲವರು ರಾಜಕೀಯವಾಗಿ ಸಂಘಟನೆಗೆ ಇಳಿದರು.ಇನ್ನೂ ಕೆಲವರು ಸಾಮಾಜಿಕ ಸಂಘಟನೆಗಳನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದರು. ಮತ್ತೆ ಕೆಲವರು ಇವೆಲ್ಲವನ್ನು ಮೀರಿ ಪ್ರಗತಿಶೀಲ ಪರವಾದ ಸಾಹಿತಿಗಳನ್ನು ಒಟ್ಟುಗೂಡಿಸಿ ಆ ಮೂಲಕ ಸಾಮಾನ್ಯ ಜನರ ಆಶಯಗಳನ್ನು ಬರವಣಿಗೆಯೊಳಗೆ ತರುವ ಕೆಲಸ ಮಾಡಲು ಸಂಘಟಿತರಾದರು.

ಕ್ರಿ.ಶ. 1935ರಲ್ಲಿ ಮೊದಲ ಪ್ರಗತಿಶೀಲ ಸಂಘವನ್ನು ಮುಲ್ಕ್‌ರಾಜ್ ಆನಂದ್, ಡಾ. ಘೋಷ್ ಮುಂತಾದವರು ಲಂಡನಿನಲ್ಲಿ ಹುಟ್ಟು ಹಾಕಿದರು. ಇದಕ್ಕೆ ಅಲ್ಲಿನ ಸಾಹಿತ್ಯ ಚಳವಳಿಯ ಆಕರ್ಷಣೆಯೇ ಕಾರಣ. ಕ್ರಿ.ಶ. 1936ರಲ್ಲಿ ಭಾರತದ ಲಕ್ನೋ ನಗರದಲ್ಲಿ 'ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘ' ಸ್ಥಾಪನೆಯಾಗಿ ಮೊದಲ ಅಧಿವೇಶನವು ಪ್ರಸಿದ್ಧ ಕಾದಂಬರಿಕಾರ ಪ್ರೇಮ್‌ಚಂದ್ ಅಧ್ಯಕ್ಷತೆಯಲ್ಲಿ ನಡೆಯಿತು. ಒಂದಷ್ಟು ಜನ ರಾಜಕೀಯ ನಾಯಕರು ಮತ್ತು ಸಾಹಿತಿಗಳ ನೇತೃತ್ವದಲ್ಲಿ 'ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘ'ದ ಮತ್ತೊಂದು ಅಧಿವೇಶನದೆಹಲಿ ಮತ್ತು ಕಲ್ಕತ್ತಾ ನಗರದಲ್ಲಿ ಕ್ರಿ.ಶ 1938ರಲ್ಲಿ ನಡೆದವು. ಈ ಅಧಿವೇಶನದಲ್ಲಿ ಭಾಗವಹಿಸಿದ ಎಲ್ಲರಿಗೂ ಕಾರ್ಲ್‌ಮಾರ್ಕ್ಸ್ ಮತ್ತು ಲೆನಿನ್‌ನ ಚಿಂತನೆಗಳೇ ಪ್ರಮುಖವಾಗಿದ್ದವು.

ಭಾರತದಲ್ಲಿ ಪ್ರಗತಿಶೀಲ ಸಾಹಿತ್ಯದ ಚಿಂತನೆಗಳು ಮೊದಲು ಆರಂಭವಾಗಿದ್ದು ಹಿಂದಿ ಭಾಷಾ ಸಾಹಿತ್ಯದಲ್ಲಿ ಎನ್ನುವುದು ಸತ್ಯವಾದರು, ಇವರುಗಳು ಸಮಾಜವಾದ, ಕಮ್ಯೂನಿಷ್ಟ್ ಹಾಗೂ ಎಡಪಂಥಗಳ ಹಿನ್ನೆಲೆಯಲ್ಲಿ ಸಮಕಾಲೀನ ಸಮಸ್ಯೆಗಳನ್ನು ವಾಸ್ತವತೆಯ ನೆಲಗಟ್ಟಿನ ದೃಷ್ಟಿಯಲ್ಲಿ ನೋಡುವುದಕ್ಕೆ ತೊಡಗಿದರು. ಆಗಾಗಿ ಇವರ ಬರಹಗಳು ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆಯನ್ನು ಒಳಗೊಂಡಿದ್ದವು. ಇದು ಬಹುಕಾಲದವರೆಗೂ ಉಳಿಯುವುದಕ್ಕೆ ಸಾಧ್ಯವಾಗಲಿಲ್ಲ. ಪ್ರಗತಿಶೀಲ ಸಾಹಿತ್ಯ ಸಂಘಟನೆಗಳಲ್ಲೇ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ಇದರಿಂದ ಹೊಸ ದಿಕ್ಕು ಮಸುಕಾಗತೊಡಗಿತು. ಶ್ರೀಸಾಮಾನ್ಯನ ಬದುಕನ್ನು ಚಿತ್ರಿಸ ಹೊರಟವರಿಗೆ ತಮ್ಮ ಒಡಕುಗಳು ಸಹಿಸಿಕೊಳ್ಳದಷ್ಟು ವೇದನೆ ತಂದವು. ಇದರಿಂದ ಲೇಖಕರುಗಳಲ್ಲಿ ಜಾಗೃತ ಪ್ರಜ್ಞೆ ತಪ್ಪಿ ಹೋಯಿತು.ತಾವು ಯಾರ ಪರವಾಗಿ ಮಾತನಾಡಬೇಕಿತ್ತೋ ಅವರನ್ನು ಹೊರಗು ಮಾಡುವ ಘಟನೆಗಳು ಕಾಣಿಸಿಕೊಂಡವು.

ಕರ್ನಾಟಕದಲ್ಲಿ ಪ್ರಗತಿಪರ ಚಿಂತಕರು, ಬರಹಗಾರರು, ಸಾಹಿತಿಗಳು ಅಖಿಲ ಭಾರತ ಮಟ್ಟದ ಸಂಘಟನೆಗಳನ್ನು ನೋಡಿಕೊಂಡು ಕ್ರಿ. ಶ. 1942ರಲ್ಲಿ ಪ್ರಗತಿಶೀಲ ಲೇಖಕರ ಸಂಘದ ಕರ್ನಾಟಕ ಶಾಖೆಯನ್ನು ಕಟ್ಟಿಕೊಂಡರು. ಇದರ ನೇತೃತ್ವವನ್ನು ಕೃಷ್ಣಕುಮಾರ್ ಕಲ್ಲೂರ ವಹಿಸಿದರು. ಇದರಲ್ಲಿ ಅ.ನ. ಕೃಷ್ಣರಾರರು, ತ.ರಾ.ಸುಬ್ಬರಾಯರು, ಬಸವರಾಜ ಕಟ್ಟೀಮನಿ, ನಿರಂಜನ, ಕುಮಾರ ವೆಂಕಣ್ಣ, ನಾಡಿಗೇರ ಕೃಷ್ಣರಾಯರಿದ್ದರು. ಇವರೆಲ್ಲರು ವಿದೇಶಿ ಸಿದ್ಧಾಂತಗಳನ್ನು ಆಧಾರವಾಗಿಟ್ಟುಕೊಂಡು ಪ್ರಗತಿಶೀಲ ಲೇಖಕರ ಕೂಟ ಕಟ್ಟಿದರು. ವಿಪರ್ಯಾಸವೆಂದರೆ ಕನ್ನಡ ನಾಡಿನ ಪ್ರಗತಿಶೀಲ ಲೇಖಕರಿಗೆ ತಮ್ಮದೇ ಆದ ಒಂದು ಹೊಸ ಸಿದ್ಧಾಂತ ಕಟ್ಟಿಕೊಂಡು ಶ್ರೀಸಾಮಾನ್ಯನಿಗೆ ಧ್ವನಿಯಾಗಬೇಕೆಂಬ ಹಂಬಲವಿರಲಿಲ್ಲ. ಕ್ರಿ.ಶ. 1943ರಲ್ಲಿ ಪ್ರಗತಿಶೀಲ ಲೇಖಕರ ಸಂಘವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಅ. ನ. ಕೃಷ್ಣರಾಯರನ್ನು ಅಧ್ಯಕ್ಷರಾಗಿ ನೇಮಕ ಮಾಡಲಾಯಿತು. ಈ ಸಂಘಟನೆಯು ಮಂಗಳೂರು, ಧಾರವಾಡ ಸೇರಿದಂತೆ ಹಲವು ಕಡೆ ತಲೆಯೆತ್ತಿತ್ತಾದರೂ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೊನೆಗೆ ತಮ್ಮ ಒಳ ಸಿದ್ಧಾಂತಗಳ ಒಡಕಿನಿಂದ ಪ್ರಗತಿಶೀಲ ಸಾಹಿತ್ಯದ ಸಂಘಕ್ಕೆ ಕೊಡಲಿ ಪೆಟ್ಟು ಬಿದ್ದು ಬಣಗಳಾದವು.

ಲೇಖಕನೊಬ್ಬನಿಗೆ ಸಾಮಾಜಿಕ ಬದ್ಧತೆ ಅತ್ಯವಶ್ಯಕ. ಆ ಬದ್ಧತೆಯನ್ನು ಶ್ರೀಸಾಮಾನ್ಯನ ಬದುಕಿನಲ್ಲೂ ತೋರಿಸಬೇಕಾಗುತ್ತದೆ. ಸಾಮಾಜಿಕ ಬದ್ಧತೆಯಿಂದ ಕೂಡಿದ ಕಳಕಳಿಯಿಲ್ಲದ ಸಾಹಿತ್ಯವು ಪ್ರಗತಿಯ ಬಗ್ಗೆ ಆಲೋಚಿಸಲಾರದು. ವೈಯಕ್ತಿಕ ನಿಲುವಿನಿಂದ ಪ್ರಗತಿಯನ್ನು ಕಾಣುವುದಕ್ಕೂ ಸಾಮಾಜಿಕ ಸ್ವಾಸ್ಥ್ಯವನ್ನು ಸಿದ್ಧಗೊಳಿಸಿಕೊಂಡು ಕಟ್ಟುವುದಕ್ಕೆ ವ್ಯತ್ಯಾಸವಿದೆ. ಪ್ರಗತಿಶೀಲ ಸಾಹಿತ್ಯದಲ್ಲಿ ಇಂತಹ ಕೆಲವು ಸಿದ್ಧ ಮಾದರಿಗಳು ಬಂದು ಹೋದದ್ದು ಇದೆ. ಪ್ರಗತಿಯೆನ್ನುವುದು ಈಗ ಇರುವ ಸ್ಥಿತಿಗಿಂತ ಮುಂದುವರಿದ ಪ್ರಜ್ಞೆಯಾಗಿರಬೇಕು. ಸಮಾಜದ ಶ್ರೇಣೀಕರಣವನ್ನು ಒಪ್ಪಿಕೊಂಡು ಅದರ ಪರಿಮಿತಿಯೊಳಗೆ ಲೇಖಕ ಸಿದ್ಧಗೊಂಡು ಬರೆಯುವ ಸಾಹಿತ್ಯ ಕೂಡ ನೈತಿಕತೆಗೆ ವಿರೋಧವಾಗಿಯೇ ಕಾಣುತ್ತದೆ.

ಶ್ರೀ ಸಾಮಾನ್ಯನ ಪರವಾದ ನಿಲುವಿನಿಂದ ಕೂಡಿದ ಮೂರು ಮುಖ್ಯ ವಿಚಾರಗಳನ್ನು ಇಟ್ಟುಕೊಂಡು ಪ್ರಗತಿಶೀಲರು ಸಾಹಿತ್ಯ ರಚನೆ ಮಾಡಿದರು.ಇದೊಂದು ಚಳವಳಿಯಾಗಿ ಪರಿಣಮಿಸುವುದಕ್ಕೆ ಅವರ ಪ್ರತಿಭಟನೆ, ಹಠ, ಉತ್ಸಾಹ, ಸ್ವಲ್ಪಮಟ್ಟಿನ ವೈಚಾರಿಕತೆ ಕಾರಣವಾಯಿತು. ಹೊರಗಿನಿಂದ ಬಂದ ಹೊಸ ವಿಚಾರಗಳ ಹಿನ್ನೆಲೆಯಲ್ಲಿ ತಾವು ಕಂಡ ಸಮಾಜದ ವಾಸ್ತವ ದರ್ಶನ ಮೂಡಿಸುವ ಹಠ ಪ್ರಚಾರಶಕ್ತಿಯಾಯಿತೆಂದೇ ಹೇಳಬಹುದು. ಸಮಾಜ ಪರಿವರ್ತನೆಯಲ್ಲಿ ಆದರ್ಶದ ಕಲ್ಪನೆಯೇ ಪ್ರಗತಿಶೀಲ ಸಾಹಿತ್ಯ ಸೃಷ್ಟಿಯ ಕೇಂದ್ರಬಿಂದುವಾಯಿತು.

ಜನಸಾಮಾನ್ಯನನ್ನು ಬಿಟ್ಟು ಬರೆದ ಸಾಹಿತ್ಯಕ್ಕೆ ಬೆಲೆಯಿಲ್ಲ ಎಂಬ ಧೋರಣೆಯಿಂದ ಅ.ನ.ಕೃಷ್ಣರಾಯರು ಕನ್ನಡದ ಪ್ರಗತಿಶೀಲ ಲೇಖಕರ ಸಂಘದ ಅಧ್ಯಕ್ಷರಾಗಿ ನಾಡಿನಾದ್ಯಂತ ಸಂಚರಿಸಿತಮ್ಮ ಪ್ರಖರ ಭಾಷಣಗಳ ಮೂಲಕ ಜನರನ್ನು ಎಚ್ಚರಿಸಿದರು. ಪತ್ರಿಕೆಯಲ್ಲಿ 'ಸಾಹಿತ್ಯ ರತ್ನ', 'ಕನ್ನಡಮ್ಮನ ಗುಡಿಯಲ್ಲಿ' ಮುಂತಾದ ಲೇಖನಗಳನ್ನುಬರೆದರು. ಕತೆ, ಕಾದಂಬರಿಗಳ ಮೂಲಕ ಓದುಗರ ಮನಸ್ಸನ್ನು ಪ್ರಚೋದಿಸಿದರು. ವಾಸ್ತವಿಕತೆ, ಸಮಾಜವಾದ, ಸಮತವಾದ, ಮಾರ್ಕ್ಸ್‌ವಾದ ಮೊದಲಾದ ಶಬ್ದಗಳ ಸುತ್ತ ವಾದ–ವಿವಾದ–ಸಂವಾದಗಳನ್ನು ನಡೆಸಿದರು.

ಈ ಹಿನ್ನಲೆಯಲ್ಲಿ ಪ್ರಗತಿಶೀಲ ಲೇಖಕರು ರಚಿಸಿದ ಕಥೆ, ಕಾದಂಬರಿಗಳಲ್ಲಿ ದೀನ ದುರ್ಬಲರು, ದಲಿತರು, ಕಾರ್ಮಿಕರು ಪ್ರಮುಖ ಪಾತ್ರಗಳಾಗಿ ಬಂದು ಹೋದರು.ಕ್ರೌರ್ಯ, ಶೋಷಣೆ, ಅನ್ಯಾಯ, ಜಾತಿ ವೈಷಮ್ಯ, ದಬ್ಬಾಳಿಕೆಯ ಚಿತ್ರಣಕ್ಕೆ ಕಥೆಯು ಒಂದು ಉತ್ತಮ ಮಾಧ್ಯಮವಾಯಿತು. ವಾಸ್ತವ ಚಿತ್ರಣ, ಆದರ್ಶದ ಕಲ್ಪನೆ ಕನಸಾಗಿ ಉಳಿಯಿತು. ಶ್ರೀಮಂತ, ಒಡೆಯ ಮತ್ತು ಬಲಾಢ್ಯರು ಸಮಾಜ ಮತ್ತು ಶ್ರೀಸಾಮಾನ್ಯನ ಅವನತಿಯ ಹೇತುಗಳಾದರು.

ಪ್ರಗತಿಶೀಲ ಸಾಹಿತ್ಯದ ಕಾಲಘಟ್ಟದಲ್ಲಿ ಪರಿಸರವೇ ಲೇಖಕರ ಪ್ರಜ್ಞೆಯನ್ನು ರೂಪಿಸಿ ಅಸಮಾನತೆಯ ಪರಿಸರವನ್ನು ಬದಲಾಯಿಸಿಕೊಳ್ಳುವ ಕಡೆಗೆ ಲೇಖಕರ ಗಮನ ಇರಬೇಕಿತ್ತು. ಆದರೆ ಅಂತಹ ನಾಯಕತ್ವ ಕಾಣಿಸಲಿಲ್ಲ. ಸಮಕಾಲೀನ ಸಮಸ್ಯೆಗಳನ್ನು ಕಂಡು ಕೇಳಿ ಬರೆಯುವ ಲೇಖಕ ಸಾಮಾಜಿಕ ಸ್ಥಿತಿಗಳ ಕಡೆಯೂ ತನ್ನ ಗಮನವನ್ನು ಹರಿಸುತ್ತಾನೆ. ಆದರೆ ಪ್ರಗತಿಶೀಲ ಲೇಖಕರಲ್ಲಿ ಕೆಲವರು ಶ್ರೀಸಾಮಾನ್ಯನ ಸಮಸ್ಯೆಗಳ ಬಗೆಗೆ ನಿರ್ಲಿಪ್ತತೆಯನ್ನು ತಾಳಿ ಸಮಕಾಲೀನ ಸಮಾಜದ ಬಗ್ಗೆಯೇ ಬರೆಯುತ್ತೇನೆಂದು ಪೊಳ್ಳು ಭಾಷಣವನ್ನು ಮಾಡಿದರು. ಬದ್ಧ ಸಾಹಿತ್ಯ ಯಾವಾಗಲೂ ಲೇಖಕರ ಹುಸಿ ಭ್ರಮೆಗಳನ್ನು ನಾಶಮಾಡುತ್ತದೆ. ಆದರೆ ಇಂತಹ ಬದ್ಧತೆ ಪ್ರಗತಿಶೀಲ ಲೇಖಕರ ಸಾಹಿತ್ಯದಲ್ಲಿ ಸಂಪೂರ್ಣವಾಗಿ ಕಂಡುಬರಲಿಲ್ಲ.

ಪ್ರಗತಿಶೀಲ ಸಾಹಿತ್ಯ ಶ್ರೀಸಾಮಾನ್ಯನ ವೈಚಾರಿಕ ನೆಲಗಳನ್ನು ಕುರಿತು ಚಿಂತಿಸುವ ಬಗೆಗೆ ಹೆಚ್ಚು ಗಮನವಹಿಸಲಿಲ್ಲ. ಒಂದು ನೆಲೆಯಲ್ಲಿ ದ್ವಂದ್ವಗಳನ್ನೇ ಸೃಷ್ಟಿ ಮಾಡಿಕೊಂಡು ಸಾಗಿತ್ತು. ಈ ದ್ವಂದ್ವಗಳು ಜನರಿಗೆ ಅರ್ಥವಾಗಲಿಲ್ಲ. ಸೂಕ್ಷ್ಮ ವಿಚಾರಗಳ ಕಡೆಗೆ ಹೆಚ್ಚು ಒಲವು ತೋರಲಿಲ್ಲ. ರಾಜಕೀಯ ಮತ್ತು ಸಾಮಾಜಿಕ ಚಿಂತನೆಗಳೆಂಬ ಅಬ್ಬರದ ಪ್ರಚಾರದಲ್ಲಿಯೇ ಕಳೆದೊಯ್ತು. ಒಂದು ಕಡೆ ಪ್ರಗತಿಶೀಲ ಸಾಹಿತ್ಯವನ್ನು ಪ್ರಚಾರಕ್ಕಾಗಿ ಲೇಖಕರು ಬಳಸಿದರೇ ಎಂಬ ಅನುಮಾನವೂ ಕಾಡುತ್ತದೆ.

ಪ್ರಗತಿಪರ ದೃಷ್ಟಿಯನ್ನು ಹರಡಲು ಸಣ್ಣಕತೆಯ ವ್ಯಾಪ್ತಿ ಸಾಲದೆಂದು ಕಂಡಾಗ ಹೆಚ್ಚು ವಿಸ್ತಾರದಲ್ಲಿ ಹೇಳಬಹುದಾದ ಕಾದಂಬರಿ ಪ್ರಕಾರವು ಲೇಖಕರಿಗೆ ಅನುಕೂಲವಾಯಿತು. ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ವೇಶ್ಯಾ ಮತ್ತು ರೈತರ ಸಮಸ್ಯೆಗಳನ್ನು ಕುರಿತು ಹೆಚ್ಚು ಕತೆ, ಕಾದಂಬರಿ ಮತ್ತು ನಾಟಕಗಳು ಮಾತನಾಡಿದವು. ಆದರೆ ಅವುಗಳಲ್ಲಿ ಕಟುವಾಸ್ತವೂ ಕಣ್ಮರೆಯಾದಂತೆ ಕಂಡಿತು.ತ.ರಾ.ಸು.ರವರ 'ಮುಂಜಾವಿನಿಂದ ಮುಂಜಾವು', 'ಬಿಡುಗಡೆಯ ಬೇಡಿ', ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ', 'ನಾನು ಪೊಲೀಸನಾಗಿದ್ದೆ', ನಿರಂಜನರ 'ವಿಮೋಚನೆ', 'ಚಿರಸ್ಮರಣೆ' ಕೃತಿಗಳಲ್ಲಿ ಸಮಕಾಲೀನ ತುರ್ತು ಸಮಸ್ಯೆಗಳ ವಿವರಗಳನ್ನು ಕಾಣಬಹುದು. 'ನೀ ನನ್ನ ಮುಟ್ಟಬೇಡ' ಕೃತಿಯಲ್ಲಿ ಹೊಲೆಯರ ಬಾಳಿನ ದುರಂತ, 'ಜನಿವಾರ ಮತ್ತು ಶಿವದಾರ'ದಲ್ಲಿ ಪ್ರೀತಿಗೆ ಜಾತಿಯಿಲ್ಲವೆಂಬ ವಿಚಾರವೂ ಮೂಡಿಬಂತು.

ನಿರಂಜನ ಅವರ 'ಚಿರಸ್ಮರಣೆ' ಬಂಡಾಯದ ಅತ್ಯುತ್ತಮ ಕಾದಂಬರಿ. ಬಸವರಾಜ ಕಟ್ಟೀಮನಿಯವರ 'ಮಾಡಿಮಡಿದವರು', 'ಸ್ವಾತಂತ್ರ್ಯದೆಡೆಗೆ' ಕಾದಂಬರಿಗಳು ಅವತ್ತಿನ ಕಾಲಕ್ಕೆ ವಾಸ್ತವದ ನೆಲಗಟ್ಟನೇ ಪ್ರತಿಬಿಂಬಿಸಿದವು. ನಿರಂಜನ ಅವರ ಸಣ್ಣಕತೆ 'ಕೊನೆಯ ಗಿರಾಕಿ' ಸಮಾಜದ ವಾಸ್ತವತೆಗೆ ಕನ್ನಡಿಯಾಗಿ ಕಾಣಿಸುತ್ತದೆ. ಆರ್ಥಿಕ ಸಮಸ್ಯೆಗೆ ಒಳಗಾದ ಹೆಣ್ಣು ಮಗಳು ನೀಚನೊಬ್ಬನಿಂದ ಬದುಕಿನ ದಾರಿಯನ್ನೇ ಹಾಳು ಮಾಡಿಕೊಂಡ ಚಿತ್ರ ಕಣ್ಣಿಗೆ ಕಟ್ಟಿದಂತೆ ಕಾಡುತ್ತದೆ. ಪುರುಷ ಪ್ರಪಂಚವು ಅಮಾಯಕ ಹುಡುಗಿಯ ಜೊತೆ ನಡೆದುಕೊಂಡ ರೀತಿ ಅಸಹ್ಯ ಹುಟ್ಟಿಸುತ್ತದೆ. ಅಂತವರಿಗೆ ಯಾವ ಶಿಕ್ಷೆ....? ಎನ್ನುವುದೇ ಯಕ್ಷ ಪ್ರಶ್ನೆ. ಇವತ್ತಿಗೂ ಇಂಥ ಘಟನೆಗಳು ಮೇಲಿಂದ ಮೇಲೆ ನಡೆದರೂ ಅನ್ಯಾಯಕ್ಕೆ ಒಳಗಾದ ಹೆಣ್ಣು ಮಕ್ಕಳಿಗೆ ನ್ಯಾಯದ ಮರೀಚಿಕೆ ಈಗಲೂ ಇದೆ. ಇದನ್ನು ಇವತ್ತಿನ ಸಾಹಿತ್ಯ ಕೂಡ ತನ್ನ ಒಳಗಣ್ಣು ತೆರೆದು ನೋಡುತ್ತಿಲ್ಲ.

ಅಪ್ಪು–ಚಿರಕುಂಡ ಎನ್ನುವ ಎರಡು ನೈಜ ಪಾತ್ರಗಳನ್ನು ಕಾದಂಬರಿಯ ಜೀವಾಳವಾಗಿಸಿ ಕೇರಳದ ರೈತರ ಸ್ವಾತಂತ್ರ್ಯಕ್ಕೆ ಹೋರಾಟ ನಡೆಸಿದ ಹುಡುಗರ ಕತೆ 'ಚಿರಸ್ಮರಣೆ' ಕಾದಂಬರಿಯ ವಸ್ತುವಾದರು ನಮ್ಮ ಕರ್ನಾಟಕದ ರೈತರ ಹೋರಾಟಗಳು ಶಕ್ತಿಯುತವಾಗಿ ಮೈದಾಳಲಿಲ್ಲ. ಹಲವಾರು ಸಲ ಜೈಲುವಾಸ ಅನುಭವಿಸಿದ್ದ ಬಸವರಾಜ ಕಟ್ಟಿಮನಿಯವರು ಕ್ರಾಂತಿಕಾರಿಗಳು ಎನ್ನುವುದು ನಿಜ. ಅದನ್ನೇ ಸಾಹಿತ್ಯದಲ್ಲೂ ಒಡಮೂಡಿಸುವ ಸಂದರ್ಭಗಳನ್ನು ಕಾಣುತ್ತೇವೆ. ಸಾಮಾನ್ಯ ಜನರು ಸ್ವಾತಂತ್ರ್ಯ, ಹಸಿವು, ಶೋಷಣೆ, ದೇಶಪ್ರೇಮಕ್ಕಾಗಿ ಹೋರಾಡುವಾಗ ಅನುಭವಿಸುವ ಯಾತನೆಗಳನ್ನು ನೈಜವಾಗಿ ಕಟ್ಟಿಕೊಡುವ ಪ್ರಯತ್ನವನ್ನು 'ಕಾರವಾನ್' ಕತೆಯಲ್ಲಿ ಮಾಡಿದ್ದಾರೆ. ಇವರ ಪ್ರಾರಂಭದ ಎರಡು ಕಾದಂಬರಿಗಳು ಸ್ವಾತಂತ್ರ್ಯಕ್ಕೆ ಸಂಬಂಧಿಸಿದವು. ಆದರೆ ಆನಂತರದ ಕಾದಂಬರಿಗಳಲ್ಲಿ ಶ್ರೀಸಾಮಾನ್ಯನ ಬದುಕನ್ನು ಚಿತ್ರಿಸುವ ಪ್ರಮಾಣಿಕ ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ಕಾರ್ಮಿಕ, ಸ್ತ್ರೀ, ಬಡವ ಮತ್ತು ದಲಿತರ ಮೇಲಿನ ಶೋಷಣೆಯನ್ನು ಕೇಂದ್ರೀಕರಿಸಿದ್ದಾರೆ. ಅಲ್ಲದೆ ರಾಜಕಾರಣಿಗಳು ಮತ್ತು ಜಗದ್ಗುರುಗಳನ್ನು ಬೆತ್ತಲುಗೊಳಿಸಿದ್ದಾರೆ. ಶ್ರೀಸಾಮಾನ್ಯನ ಬದುಕಿಗೆ ಹತ್ತಿರವಾಗಬೇಕೆಂಬ ಕಾರಣದಿಂದಲೆ 'ರೈತ ಕೂಲಿಕಾರರ ಪಕ್ಷ'ವನ್ನು ಕಟ್ಟಿದ್ದರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಾಮಾಜಿಕ ಸಮಸ್ಯೆಗಳನ್ನು ತೀಕ್ಷ್ಣವಾಗಿ ಬರೆಯುತ್ತಿದ್ದ ಕಟ್ಟೀಮನಿಯವರು 'ನೀ ನನ್ನ ಮುಟ್ಟಬೇಡ', ಗೋವಾದೇವಿ, ಪಾತರಗಿತ್ತಿ, ಗೆಳಯನ ಮಡದಿ, ಗ್ರಾಮಸೇವಕಾ, ಮಾಜಿ ಮಂತ್ರಿ, ಹರಿಜನಾಯಣ, ಸೈತಾನ್ ಮುಂತಾದ ಕಾದಂಬರಿಗಳಲ್ಲಿ ಅಂದಿನ ಸಮಾಜದ ಶ್ರೀಸಾಮಾನ್ಯನ ಬದುಕನ್ನು ಚಿತ್ರಿಸಲು ಪ್ರಯತ್ನಿಸಿದ್ದಾರೆ. ಕಟ್ಟೀಮನಿಯವರ 'ಬೀದಿಯಲ್ಲಿ ಬಿದ್ದವಳು', 'ಹೆಣ್ಣು ಮತ್ತು ಮಣ್ಣು', 'ಖಾನಾವಳಿಯ ನೀಲ', 'ಸಾಕ್ಷಾತ್ಕಾರ'. ತ.ರಾ.ಸು.ರವರ 'ಮಸಣದ ಹೂ', 'ಬನಶಂಕರಿ' ಮೊದಲಾದ ಕಾದಂಬರಿಗಳಲ್ಲಿ ಲೈಂಗಿಕತೆಯ ವಿಕೃತ ರೂಪವನ್ನು ಕಾಣಲು ಸಾಧ್ಯವಾಯಿತು. 'ನೀ ನನ್ನ ಮುಟ್ಟಬೇಡ' ಕೃತಿಯಲ್ಲಿ ಹರಿಜನ ಕುಟುಂಬದ ಹೆಣ್ಣುಗಳು ಕಾಮದಾಹಕ್ಕೆ ಬಲಿಯಾಗುವ ದಾರುಣ ಚಿತ್ರಣವಿದೆ.

ಹೆಣ್ಣಿನ ಶೋಷಣೆಗೆ ಸಮಾಜವೇ ಹೊಣೆ ಎಂಬುದನ್ನು ಕಟ್ಟೀಮನಿಯವರು ಉಳಿದವರಿಗಿಂತ ಹೆಚ್ಚು ಕೆಣಕಿ ಮಾತನಾಡುತ್ತಾರೆ. ಹೆಣ್ಣು–ಗಂಡಿನ ಸಂಬಂಧ ಇಂದಿಗೂ ಕಥೆ–ಕಾದಂಬರಿಯ ಪ್ರಧಾನ ವಸ್ತುವಾಗಿದೆ. ಲೈಂಗಿಕ ಆಸಕ್ತಿಗಳು ಅತಿಶಯ ಬಿಕ್ಕಟ್ಟಿನದ್ದಾಗಿ ನವ್ಯ, ಬಂಡಾಯ, ದಲಿತ ಸಾಹಿತ್ಯದಲ್ಲಿ ಪರಿಪರಿಯಾಗಿ ನುಸುಳಿಕೊಂಡಿದೆ. ಲೈಂಗಿಕ ಪ್ರಶ್ನೆಯಿಂದ ಅನಾದಿಕಾಲದ ನರನಾರಿಯರೂ ಮುಕ್ತರಾಗಲಿಲ್ಲ. ಗ್ರಂಥಸ್ಥ ನೀತಿಗೂ, ಶರೀರದ ನೀತಿಗೂ ತಾಳ ಮೇಳವಿಲ್ಲದೆ ಮುಚ್ಚುಮರೆಯ ತೆರೆಯನ್ನು ಕಲ್ಪಿಸುತ್ತಿದ್ದೇವೆ. ಯಾವುದು ಸೂಕ್ಷ್ಮವಾದ ತೀರಗಹನವಾದ ವಿಷಯವೊ ಅವನ್ನು ಅಲ್ಲಗಳೆಯುವುದರಿಂದ ಹಿತವಿಲ್ಲ.ಜಯ, ಮೀನಾಕ್ಷಮ್ಮ, ಕಣ್ಣೀರಿನ ಗೌರಿ, ಕಾಮಾಕ್ಷಿಯವರಂತಹ ಪಾತ್ರಗಳನ್ನು ಅ.ನ.ಕೃ. ಸೃಷ್ಟಿಸಿರುವುದು ಪ್ರಗತಿಶೀಲ ಸಾಹಿತ್ಯದ ಆದರ್ಶವೇ ಆಗಿದೆ.

ಸಾಹಿತ್ಯವು ಜನಸಾಮಾನ್ಯರ ಉಸಿರಾಗಬೇಕು ಎಂಬ ಕಾರಣಕ್ಕೆ ಪ್ರಗತಿಶೀಲ ಕಾವ್ಯವು ಜನರ ನಾಡಿಮಿಡಿತಗಳಿಗೆ ಧ್ವನಿಯಾಗುವಲ್ಲಿ ಸ್ವಲ್ಪವಾದರೂ ಪ್ರಯತ್ನ ಮಾಡಿತು. ಸು.ರಂ. ಎಕ್ಕುಂಡಿ ಅವರ 'ಮೀನುಪೇಟೆ' ಇದಕ್ಕೆ ಉತ್ತಮ ಉದಾಹರಣೆ. ಈ ಕವನದಲ್ಲಿ ಶೋಷಿತರ, ಬಡವರ ದಾರುಣತೆಯ ಸಾಕ್ಷ್ಯವನ್ನು ತೋರಿಸಲಾಗಿದೆ. ಮನುಷ್ಯನ ಕನಿಷ್ಟ ಬದುಕು ಅಭಿವ್ಯಕ್ತಿಗೊಂಡಿದೆ. ಇಂತವರ ಬಗ್ಗೆ ಮಿಡಿಯಬೇಕಾದ್ದು ಅವಶ್ಯಕವಾಗಿದೆ. ಬಿ.ಸಿ. ರಾಮಚಂದ್ರ ಶರ್ಮ ಕೂಡ ಜನಸಾಮಾನ್ಯರ ನೋವು–ಶ್ರಮವನ್ನು ಕಾವ್ಯವಾಗಿಸಿದ್ದರು.

ಪ್ರಗತಿಶೀಲರ ಸಣ್ಣಕತೆಗಳಲ್ಲಿ ಶ್ರೀಸಾಮಾನ್ಯನ ಬದುಕಿನ ಅಭಿವ್ಯಕ್ತಿಯನ್ನು ತೀವ್ರವಾಗಿ ಕಾಣುವುದಕ್ಕೆ ಸಾಧ್ಯವಿದೆ.ಕೊರಡಕ್ಕಲ್ ಶ್ರೀನಿವಾಸರಾಯರ 'ಧನಿಯರ ಸತ್ಯನಾರಾಯಣ' ಹಾಗೂ ಭಾರತೀಪ್ರಿಯರ 'ಮೋಚಿ' ಕತೆ ಇದಕ್ಕೆ ಉತ್ತಮ ಉದಾಹರಣೆ. ಚಪ್ಪಲಿ ಹೊಲೆಯುವ ಕಾಯಕ ಮಾಡುತ್ತಿದ್ದ ಮೋಚಿ ಪ್ರಮಾಣಿಕತೆಯಿಂದ ಬದುಕಿದ್ದು ಮನಸಿನಲ್ಲಿ ಸದಾ ನೆಲೆಸುತ್ತದೆ. ಶ್ರೀಸಾಮಾನ್ಯನ ಹಸಿವು, ಬಡತನ, ಶೋಷಣೆಯ ಮುಖವನ್ನು ಕತೆಗಳು ಅದ್ಭುತವಾಗಿ ದುಡಿಸಿಕೊಂಡಿವೆ. ಅಂಥವರಿಗೆ ಪರಿಹಾರದ ಮಾತುಗಳು ಕಡಿಮೆ ಎಂಬುದೇ ಶೋಚನೀಯ ಸಂಗತಿ.

ಚದುರಂಗ ಅವರ ಭೂತದ ಚೇಷ್ಟೆ, ಶವದ ಮನೆ, ಇಣುಕುನೋಟ ಇತ್ಯಾದಿ ಕತೆಗಳಲ್ಲಿ ಹಳ್ಳಿ ಜನರ ಮುಗ್ಧತೆ, ಭಾವುಕತೆ, ಅಜ್ಞಾನದ ಸಂವೇದನೆಗಳು ಅಭಿವ್ಯಕ್ತಿಗೊಳ್ಳುತ್ತವೆ. ಸ್ತ್ರೀ ಶೋಷಣೆ ಎನ್ನುವುದು ಆರ್ಥಿಕ ಮತ್ತು ಸಾಮಾಜಿಕ ನೆಲೆಯಲ್ಲಿಯೇ ಘಟಿಸಿದ್ದು ಎನ್ನುವುದನ್ನು ನೇರವಾಗಿ ಹೇಳಬೇಕಾಗುತ್ತದೆ.

ಪ್ರಗತಿಶೀಲ ಸಾಹಿತ್ಯದ ಹರಿಕಾರರು ಎಂದು ಕರೆಸಿಕೊಂಡ ಅ.ನ.ಕೃ ಅವರು ನಗ್ನಸತ್ಯ, ಶನಿ ಸಂತಾನ, ಸಂಜೆಗತ್ತಲು ಎನ್ನುವ ಕಾದಂಬರಿಗಳಲ್ಲಿ ವೇಶ್ಯಾ ಸಮಸ್ಯೆಯನ್ನು ಗಂಭೀರವಾಗಿಯೇ ಕಟ್ಟಿಕೊಟ್ಟಿದ್ದಾರೆ. ಭಾರತದಲ್ಲಿ ವೇಶ್ಯಾವೃತ್ತಿ ಕಾನೂನು ಬಾಹಿರವಾಗಿದ್ದರೂ, ಸಣ್ಣ ವಯಸ್ಸಿನ ಹೆಣ್ಣು ಮಕ್ಕಳನ್ನು ಇಂಥ ದಂದೆಗೆ ಇವತ್ತಿಗೂ ತಳ್ಳುತ್ತಿರುವುದು ನಮ್ಮ ಸಮಾಜ ತಲೆ ತಗ್ಗಿಸುವಂತಿದೆ.

ತ.ರಾ. ಸುಬ್ಬರಾಯರು ಐತಿಹಾಸಿಕ ಹಾಗೂ ಸಾಮಾಜಿಕ ವಸ್ತು ವಿಷಯದ ಅನೇಕ ಕಾದಂಬರಿಗಳನ್ನು ಸೃಷ್ಟಿಸಿದರು. ಚಂದವಳ್ಳಿಯ ತೋಟ, ಚಂದನದ ಗೊಂಬೆ, ಜೀತದಾಳು, ಮಸಣದ ಹೂವು ಇದಕ್ಕೆ ಉದಾಹಾರಣೆಯಾಗಿ ಸಿಗುತ್ತವೆ. ದುರ್ಗಾಸ್ಥಮಾನ ಐತಿಹಾಸಿಕ ಕಾದಂಬರಿಯಾದರು ಪಾಳೆಗಾರಿಕೆಯ ಸಂಸ್ಕೃತಿಯನ್ನು ನೈಜವಾಗಿ ತರುತ್ತಾರೆ. ವ್ಯಾಸರಾಯ ಬಲ್ಲಾಳರ 'ಬಂಡಾಯ' ಕಾದಂಬರಿ ಮುಂಬೈ ನಗರದ ಕೊಳಗೇರಿಗಳ ದಾರುಣ ಸ್ಥಿತಿಯನ್ನು ಚಿತ್ರಿಸುತ್ತದೆ. ಸಂಕಟದ ವಿಷಯವೆಂದರೆ ಆ ಕೊಳಗೇರಿ ಈಗಲೂ ಅದೇ ಸ್ಥಿತಿಯಲ್ಲಿದೆ. ನರಕದ ಕೂಪದಂತೆ ಕಾಣುವ ಅದರೊಳಗೆ ಬದುಕುವ ಸಾಮಾನ್ಯರ ಬದುಕು ಮತ್ತೊಂದು ಭಾರತದ ಮುಖವನ್ನು ಪರಿಚಯಿಸುತ್ತದೆ. ಶೋಷಣೆ, ಬೆವರಿಗೆ ಬೆಲೆ ಇಲ್ಲದಿರುವುದು, ಆಳುವವರಿಂದ ನಿರ್ಲಕ್ಷಕ್ಕೆ ಒಳಗಾಗಿರುವುದನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ಪ್ರಗತಿಶೀಲ ಸಾಹಿತ್ಯದಲ್ಲಿ ಮುಖ್ಯವಾಗಿ ಸಾಮಾನ್ಯನ ಬದುಕನ್ನು ಅಸಮಾನ್ಯಗೊಳಿಸುವ ಯಾವ ಪ್ರಯತ್ನವೂ ನಡೆಯಲಿಲ್ಲ. ಆ ದಿಕ್ಕಿನಲ್ಲಿ ಯಾವ ಲೇಖಕರು ಯೋಚಿಸಲಿಲ್ಲ. ಆದರೆ ಶ್ರೀಸಾಮಾನ್ಯನ ಬದುಕನ್ನು ಕಟ್ಟಿಕೊಡುವ ಸಾಮಾಜಿಕ ಬದ್ಧತೆಯನ್ನು ತೋರಿದರು.ಈ ಬದ್ಧತೆ ನಮ್ಮ ಲೇಖಕರಿಗೆ ಬಂದಿದ್ದು ಒಂದು ಕಡೆ ಸಂತೋಷದ ವಿಷಯವಾದರು ಅವರು ಹಸಿವು, ಬಡತನ, ರಾಜಕೀಯ ಹಾಗೂ ಸಾಮಾಜಿಕತೆಯ ಬಗ್ಗೆ ಮಾತನಾಡಿದಷ್ಟು ಆ ಸಂದರ್ಭದಲ್ಲಿ ಜನರಿಗೆ ಬೇಕಾಗಿದ್ದ ಶಿಕ್ಷಣದ ಬಗ್ಗೆ ಯಾವ ಧ್ವನಿಯನ್ನು ಎತ್ತುವುದಿಲ್ಲ. ಅಸಮಾನತೆಗೆ ಶಿಕ್ಷಣವೂ ಒಂದು ಕಾರಣ ಎನ್ನುವುದನ್ನು ಲೇಖಕರು ಯಾಕೆ ? ಮನವರಿಕೆ ಮಾಡಿಕೊಳ್ಳಲಿಲ್ಲ ಎಂಬುದು ಇವತ್ತಿಗೂ ಕಾಡುವ ಪ್ರಶ್ನೆ.

ಶ್ರೀಸಾಮಾನ್ಯ ಈ ದೇಶಕ್ಕೆ ದುಡಿಮೆಯ ಮೂಲಕವೇ ಸೇವೆ ಸಲ್ಲಿಸುತ್ತಾನೆ. ಅಂತಹ ದುಡಿಯುವ ವರ್ಗವನ್ನು ಕಡೆಗಣಿಸುವ ಪ್ರಕ್ರಿಯೆ ಅಂದು ನಡೆದಿತ್ತು ಇಂದು ನಡೆಯುತ್ತಿದೆ. ಉಳ್ಳವರು ಮತ್ತು ಆಳುವವರು ಬೆವರಿಗರಿಗೆ ಕೊಡುತ್ತಿರುವ ಸ್ಥಾನಮಾನ ಶೂನ್ಯವೇ.ರೈತರ ಬದುಕಿನ ಆಸೆ–ಆಕಾಂಕ್ಷೆಗಳನ್ನು ಚಿತ್ರಿಸುವ ಕತೆ–ಕಾದಂಬರಿಗಳು ಪ್ರಗತಿಶೀಲರಿಂದ ದೂರ ಉಳಿದದ್ದು ಆಶ್ಚರ್ಯ. ಕಾರಂತರ 'ಚೋಮನದುಡಿ', ಕೋ.ಚೆನ್ನಬಸಪ್ಪ ಅವರ 'ಮುಕ್ಕಣ್ಣನ ಮುಕ್ತಿ', ಅಣ್ಣಾರಾಯರ 'ನಿಸರ್ಗ' ಗ್ರಾಮೀಣ ಒಲವನ್ನು ತೋರಿಸಿದರೂ, ಪ್ರಗತಿಶೀಲ ಮನೋಭಾವ ಈ ದಿಕ್ಕಿನಲ್ಲಿ ಪರವಾಗಿರಲಿಲ್ಲವೆಂದು ತೋರುತ್ತದೆ.

ನಿರಂಜನರದು ಹೆಚ್ಚು ಪ್ರಗತಿ ಶೀಲತೆಯ ದಾರಿ.ಸಮಾಜ ಸುಧಾರಣೆಯ ಕಡೆಗಿನ ಒಲವಿನಿಂದ, ಸಾಮಾಜಿಕ ಅನ್ಯಾಯಗಳನ್ನು ಬಯಲಿಗೆಳೆಯುವ ಉತ್ಸಾಹದಿಂದ ಕಮ್ಯುನಿಷ್ಟ್ ಧೋರಣೆ ಅವರ ಬರವಣಿಗೆಯ ಶಕ್ತಿಯಾಗಿ 'ಚಿರಸ್ಮರಣೆ', 'ವಿಮೋಚನೆ' ಕಾದಂಬರಿಗಳು ಹೊರಬಂದವು.ಬಸವರಾಜ ಕಟ್ಟೀಮನಿಯವರ ಕಾದಂಬರಿಗಳಲ್ಲಿ ಸ್ವಾನುಭವದಿಂದ ಪಡೆದ ಸಾಮಾಜಿಕ ಸಮಸ್ಯೆ ಹೆಚ್ಚಿನ ವ್ಯಾಪ್ತಿಯನ್ನು ಪಡೆಯಿತು.ಬಡತನ, ಹಳ್ಳಿಯ ಜೀವನದ ಅವನತಿ, ಧಾರ್ಮಿಕ ಅನೀತಿ, ಹೆಣ್ಣಿನ ಶೋಷಣೆ, ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ದೋಷಗಳನ್ನು ಅವರು ತಮ್ಮ ಕೃತಿಗಳಲ್ಲಿ ಸಿಟ್ಟಿನಿಂದಲೇ ವ್ಯಕ್ತಪಡಿಸಿದರು.ಅವರ ಪ್ರಕಾರ ಯಾವುದು ಮನುಷ್ಯನನ್ನು ಪರಿಪೂರ್ಣತೆಯ ಕಡೆಗೆ ಸಾಗಿಸಿ ಕೊಂಡೊಯ್ಯುವುದೋ ಅದೆಲ್ಲವು ಪ್ರಗತಿಶೀಲತೆಯೇ.

ಪ್ರಗತಿಶೀಲ ಸಾಹಿತ್ಯ ಹುಟ್ಟಿದ್ದೇ ಸಣ್ಣ ಕತೆಗಳಿಂದ. ಅ.ನ.ಕೃ. ಕಥಾಂಜಲಿಯು ಸಂಪಾದಕರಾಗಿ, 'ಮಿಂಚು', 'ಅಗ್ನಿಕನ್ಯೆ',

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

'ಕಣ್ಣಾಮುಚ್ಚಾಲೆ'ಯಂತಹ ಕವನ ಸಂಗ್ರಹಗಳನ್ನು ಪ್ರಕಟಿಸಿದರು. ಕತೆಗಾರರಲ್ಲಿ ನಿರಂಜನ, ಕಟ್ಟೀಮನಿ, ಆನಂದ, ಕೋ. ಚೆನ್ನಬಸಪ್ಪ, ತ.ರಾ.ಸು., ವ್ಯಾಸರಾಯ ಬಲ್ಲಾಳ ಒಳ್ಳೆಯ ಕತೆಗಳನ್ನು ಬರೆದರು. ನಿರಂಜನರ 'ಕೊನೆಯ ಗಿರಾಕಿ', ಆನಂದರ 'ನಾನು ಕೊಂದ ಹುಡುಗಿ', ಕಟ್ಟೀಮನಿಯವರ 'ಜೀವನ ಕಲೆ', ಬಲ್ಲಾಳರ 'ಕಾಡುಮಲ್ಲಿಗೆ', ಅ.ನ.ಕೃ. ರವರ 'ಅಗ್ನಿಕನ್ಯೆ' ಪ್ರಗತಿಶೀಲ ದಶಮಾನದ ಉತ್ತಮ ಕತೆಗಳು.ಪ್ರಗತಿಶೀಲ ಸಾಹಿತ್ಯದಿಂದ ಓದುವ ಚಟ, ಭಾಷೆಯ ಅಭಿಮಾನ, ಸಾಹಿತ್ಯಾಸಕ್ತಿಗಳು ಕರ್ನಾಟಕ ಮತ್ತು ಹೊರನಾಡಿನಲ್ಲಿಯೂ ವೃದ್ಧಿಯಾಯಿತು. ಪ್ರಗತಿಶೀಲದಿಂದ ಭಾಷೆಗೆ ಹೊಸ ಕಸುವು ಬಂದಿತು. ಅ.ನ.ಕೃ., ತ.ರಾ.ಸು. ರವರ ಭಾಷೆಯ ಮೋಡಿಗೆ ಅನೇಕರು ವಶವಾದರು. ಬರವಣಿಗೆಯ ಸ್ಪರ್ಧೆಯು ನಡೆಯುವಂತೆ ಬರೆದರು.ಕತೆಗಳಿಗೆ ಪತ್ರಿಕೆಯ, ಕಾದಂಬರಿಗೆ ಪ್ರಕಾಶಕರ ಬೇಡಿಕೆಗಳು ದೊರೆತವು.ಕಠಿಣವಾಗಿದ್ದ ಸಾಹಿತ್ಯ ಸರಳವಾಯಿತು. ಬದುಕಿನ ಅನೇಕ ಮುಖಗಳ ಪರಿಚಯವಾಗಿ ಸಾಮಾಜಿಕ ಪ್ರಜ್ಞೆಯು ಅರಿವು ಉಂಟಾಗುವಂತಾಯ್ತು.

ಇಪ್ಪತ್ತೊಂದನೇ ಶತಮಾನದಲ್ಲೂ ನಾವು ಪ್ರಗತಿಶೀಲ ಸಾಹಿತ್ಯದಲ್ಲಿ ಶ್ರೀಸಾಮಾನ್ಯನ ಬದುಕಿನ ಬಗ್ಗೆ ಮಾತನಾಡುತ್ತೇವೆ ಎಂದರೆ ಅದರ ಮೌಲ್ಯ ನಮಗೆ ಅರ್ಥವಾಗಬೇಕು ಹಾಗೂ ಅಂದಿನ ಸಾಹಿತ್ಯ ಕೃತಿಗಳ ನೈಜತೆ ಇಂದಿನವರಿಗೆ ತಿಳಿಯಬೇಕು. ಇಲ್ಲದಿದ್ದರೆ ಸಾಹಿತ್ಯದ ಚಲನೆ ಸ್ಥಾವರವಾಗಿ ಬಿಡುತ್ತದೆ. ಕುವೆಂಪು ಹೇಳಿದಂತೆ "ಶ್ರೀಸಾಮಾನ್ಯನೇ ಭಗವದ್ ಮಾನ್ಯ"ನಾಗುವುದಕ್ಕೆ ಅನುಕೂಲತೆಗಳು ಸಾಹಿತ್ಯದ ಮೂಲಕವೂ ಸೃಷ್ಟಿಯಾಗಬೇಕೆಂಬುದೇ ನಮ್ಮ ಆಲೋಚನೆ ಮತ್ತು ಆಶಯ.ಒಟ್ಟಿನಲ್ಲಿ ಪ್ರಗತಿಶೀಲ ಸಾಹಿತ್ಯ ಜನಪರವೂ, ಜೀವನಪರವೂ ಆಗಿತ್ತು. ಅರ್ಥಪೂರ್ಣ ಆಸಕ್ತಿಗಳಿಂದ ಕೂಡಿದ ಉತ್ಸಾಹ, ತುರ್ತು ಲೇಖಕರಲ್ಲಿತ್ತು.ಕನಸಿನ ಆದರ್ಶಗಳ ಬೆಂಬಲವಿತ್ತು. ಅಂದಿನ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಉಜ್ವಲ ಭವಿಷ್ಯಕ್ಕೆ ಅದು ಅಗತ್ಯವೂ ಕೂಡ ಆಗಿತ್ತು.

ಪರಾಮರ್ಶನ ಗ್ರಂಥಗಳು

- **ಅ.ನ.ಕೃಷ್ಣರಾಯ (1952) :** ಸಾಹಿತ್ಯ ಮತ್ತು ಕಾಮ ಪ್ರಚೋದನೆ, ಬೆಂಗಳೂರು ವಾಹಿನಿ ಪ್ರಕಾಶನ.
- **ಅಶೋಕ ಟಿ.ಪಿ. (1988) :** ಪ್ರಗತಿಶೀಲತೆ – ಸಾಧನೆ ಮತ್ತು ಕೊಡುಗೆ, ಸಂಕ್ರಮಣ ಪ್ರಕಾಶನ.
- **ಕೀರ್ತಿನಾಥ ಕುರ್ತುಕೋಟಿ (1962) :** ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಧಾರವಾಡ ಮನೋಹರ ಗ್ರಂಥಮಾಲೆ.
- **ಗಿರಡ್ಡಿ ಗೋವಿಂದರಾಜು (1976) :** ಕಾದಂಬರಿ ವಸ್ತು ಮತ್ತು ತಂತ್ರ, ಬೆಂಗಳೂರು ಬಾಪ್ಕೋ ಪ್ರಕಾಶನ.
- **ರಾಘವೇಂದ್ರರಾವ್ ಎಚ್.ಎಸ್. :** ಪ್ರಗತಿಶೀಲತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ.
- **ಲಂಕೇಶ್ ಪಿ. (1970) :** ಅಕ್ಷರ ಹೊಸ ಕಾವ್ಯ, ಸಾಗರ ಅಕ್ಷರ ಪ್ರಕಾಶನ.
- **ಶಿವರುದ್ರಪ್ಪ ಜಿ.ಎಸ್. (1990) :** ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಬೆಂಗಳೂರು ಪ್ರಸಾರಾಂಗ ವಿಶ್ವವಿದ್ಯಾಲಯ.
- **ಹಿರೇಮಠ ಎಸ್.ಎಂ. (1986) :** ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು ಗದಗ ವಿದ್ಯಾನಿಧಿ ಪ್ರಕಾಶನ.

■■

– 9ನೇ ಪುಟದಿಂದ ಮುಂದುವರೆದುದು

17. ರಂಗಶಿಕ್ಷಣ ಬದುಕನ್ನು ಕಲಿಸುತ್ತದೆ ಸ್ನೇಹ, ಶಾಂತಿ–ಸೌಹಾರ್ದತೆ ಬೆಳೆಸುತ್ತದೆ. ಶೇಕ್ಸ್‌ಪಿಯರ್ ಹೇಳಿರುವ ಹಾಗೆ 'ಜೀವನ ಒಂದು ನಾಟಕ ರಂಗ' ಎಂಬಂತೆ ಜೀವನವನ್ನು ನಿಭಾಯಿಸುವುದನ್ನು ಕಲಿಸುತ್ತದೆ.
18. ರಂಗಶಿಕ್ಷಣ ಕೇವಲ ಮನರಂಜನೆ ಅಲ್ಲ ಮನೋವಿಕಾಸ.
19. ಮಕ್ಕಳಿಗೆ ಕಠಿಣವಾದ ಮತ್ತು ಸವಾಲು ಎನಿಸುವ ಭಾವನೆಗಳನ್ನು ರಂಗಭೂಮಿ ಮೂಲಕ ವ್ಯಕ್ತಪಡಿಸಬಹುದು.
20. ರಂಗಭೂಮಿ ಅನುಭೂತಿಯ ವ್ಯಾಯಾಮ ಶಾಲೆ
21. ಎಲ್ಲಾ ಮಕ್ಕಳು ನಟರೇ ಆಗಿರುತ್ತಾರೆ. ಅವರ ಮನೆಯೇ ಅವರ ರಂಗಭೂಮಿ ಮತ್ತು ಪೋಷಕರೇ ಅವರ ನಿರ್ದೇಶಕರು. ಹಾಗಾಗಿ ಶಾಲಾ ಕಾಲೇಜುಗಳಲ್ಲಿ ನಾಟಕವು ಮನೋಚಿಕಿತ್ಸೆಯಾಗಿ ಅಸಮರ್ಪಕ ಮಕ್ಕಳಿಗೆ ಪರಿಣಾಮಕಾರಿಯಾಗಿರುತ್ತದೆ
22. ಇದು ಸಾಮಾನ್ಯ ಜ್ಞಾನವನ್ನು ಕಲಿಸುತ್ತದೆ.
23. ಜೀವನವನ್ನು ಸ್ಮಾರ್ಟ್ ಆಗಿ ಮುನ್ನಡೆಸುತ್ತದೆ.
24. ಜೀವನದ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಶಕ್ತಿಯನ್ನು ನೀಡುತ್ತದೆ. ಇಂತಹ ಬುದ್ಧಿವಂತಿಕೆ ಭಾಷಾಶಾಸ್ತ್ರ, ತಾರ್ಕಿಕ, ಗಣಿತ, ಸ್ಥಳ, ದೃಶ್ಯ, ಧ್ವನಿ, ಲಯ, ಸಂಗೀತ, ಪರಸ್ಪರ ಮತ್ತು ಇಂಟ್ರಾಪರ್ಸನಲ್– ಹೀಗೆ ಹಲವಾರು ವಿಷಯಗಳನ್ನು ತಿಳಿಸುತ್ತದೆ.
25. ಅಲೋಚನಾ ಮನೋಭಾವ, ಸಮೂಹ ಜೀವನ, ನಾಯಕತ್ವ ಗುಣ, ಸಂವಹನ ಕೌಶಲ್ಯ, ಏಕಾಗ್ರತೆ ದೊರೆಯುತ್ತದೆ.

ಹೀಗೆ ಹಲವಾರು ಪ್ರತಿಷ್ಠಿತ ನಗರದ ಬಹುತೇಕ (90%) ಕಾಲೇಜುಗಳು ಇದರ ಉಪಯೋಗಗಳನ್ನು ಪಡೆಯುತ್ತಿವೆ. ಇಂದಿನ "ಯುವ ವಿದ್ಯಾರ್ಥಿ ವರ್ಗ ಅಂಕಗಳಾಧಾರಿತಕ್ಕಿಂತ ಗುಣಾಧಾರಿತ ವ್ಯಕ್ತಿಗಳಾಗಿ" ಬರೀ ಓದು ಅಲ್ಲದೆ ನಾನಾ ಕ್ಷೇತ್ರಗಳಲ್ಲಿ ಸಾಧಿಸುವ ಹಂಬಲವನ್ನು ಹೊಂದಿದ್ದಾರೆ. ವಿದ್ಯಾರ್ಥಿಗಳ ಬುದ್ಧಿಮಟ್ಟದ ಸಮೀಕ್ಷೆಯ ಪ್ರಕಾರ, ಪಠ್ಯಗಳ ಜೊತೆಯೇ ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳ ಜೊತೆಜೊತೆ ಕಲಿಯಲು, ತುಂಬಾ ಆಸಕ್ತಿದಾಯಕರಾಗಿರುತ್ತಾರೆ.ಅಲ್ಲದೇ ಮುಖ್ಯವಾಗಿ ಓದಿನ ಆಸಕ್ತಿಯೆಡೆಗೆ ಕರೆತರಲು ಇಂಥ ಕಾರ್ಯ ಚಟುವಟಿಕೆಗಳು ಬಹಳ ಮುಖ್ಯವಾಗಿರುತ್ತವೆ. ಹದಿಹರೆಯದವರು ನಾನಾ ಒತ್ತಡಗಳಿಂದ ಹೊರಬಂದು ಪಠ್ಯಗಳ ಆಸಕ್ತಿ ಹೊಂದಲು ಸಹಕಾರಿಯಾಗಿದೆ." ಕಾಲೇಜುಗಳು ಸರ್ವತೋಮುಖವಾಗಿ ಉತ್ತುಂಗಕ್ಕೆರಲು ಸಹಕಾರಿಯಾಗುತ್ತದೆ. ಅಲ್ಲದೇ ಶೈಕ್ಷಣಿಕ ವರ್ಷಕ್ಕೆ ಪ್ರವೇಶಾತಿಯನ್ನು ಹೆಚ್ಚು ಮಾಡಲು ಉಪಕಾರಿಯಾಗುತ್ತದೆ. ಇಂದಿನ ತಲ್ಲಣದ ದಿನಗಳಲ್ಲಿ ಒಬ್ಬರನ್ನೊಬ್ಬರು ಮುಖತಃ ನೋಡಲಾಗದ ವಿಲಕ್ಷಣ ಪರಿಸ್ಥಿತಿಯಲ್ಲಿ ಸಾಂಸ್ಕೃತಿಕತೆಯು ಹೊಸ ಹೊಸ ಸಾಧ್ಯತೆಗಳತ್ತ ಮುಖ ಮಾಡಬೇಕಾಗಿದೆ ಎಂಬುದು ತನ್ನ ಅಭಿಪ್ರಾಯವಾಗಿದೆ.

ಪರಾಮರ್ಶನ ಗ್ರಂಥಗಳು

- **ಪ್ರಸನ್ನ, ನಟನೆಯ ಪಾಠಗಳು (2018) :** ಹೆಗ್ಗೋಡು, ಸಾಗರ, ಒಂಟಿದನಿ ಪ್ರಕಾಶನ.
- **ಶಿವರಾಮ ಕಾರಂತ (18963) :** ಯಕ್ಷಗಾನ ಬಯಲಾಟ, ಪುತ್ತೂರು ಹರ್ಷ ಪ್ರಕಟಣಾಲಯ.
- **ಗೊರೂರು ರಾಮಸ್ವಾಮಿ ಅಯ್ಯಂಗಾರ್(2004) :** ಹೇಮಾವತಿ, ಐಬಿಎಚ್ ಪ್ರಕಾಶನ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಲಿಂಗಲೀಲಾ ವಿಲಾಸ ಚಾರಿತ್ರ : ಸಮಕಾಲೀನ ಸಾಹಿತ್ಯದ ಹಿನ್ನೆಲೆ

✍ **ಡಾ. ರಣಧೀರ,** ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ ಎ.ವಿ. ಕಮಲಮ್ಮ ಮಹಿಳಾ ಕಾಲೇಜು, ದಾವಣಗೆರೆ.

ಅವ್ಯವಸ್ಥೆಗೆ ಒಳಗಾದ 12ನೇ ಶತಮಾನದ ಶರಣ ಧರ್ಮವನ್ನು ಪುನರುಜ್ಜೀವನಗೊಳಿಸಿ ಮತ್ತೆ ಸಮಾಜದಲ್ಲಿ ಶರಣರ ಸರ್ವಸಮಾನತೆಯ ನಾಡು ಕಟ್ಟಲು ಒಗ್ಗೂಡಬೇಕಿತ್ತು. ಅದಕ್ಕಾಗಿಯೇ ಧರ್ಮವನ್ನು ಉಳಿಸಿಕೊಳ್ಳಲು 15ನೇ ಶತಮಾನದಲ್ಲಿ ನೂರೊಂದು ವಿರಕ್ತರ ಗಣ ಜನ್ಮ ತಾಳಿತು. ಸಮಾಜದ ಸಮಷ್ಠಿ ಹಿತವನ್ನು ಕಾಯುವಲ್ಲಿ ಶ್ರಮಿಸಿದ ಈ ನೂರೊಂದು ವಿರಕ್ತರು ಶರಣರ ಮಾರ್ಗದಲ್ಲೇ ತಮ್ಮ ನಡೆ–ನುಡಿಯನ್ನು ಚಾಚೂ ತಪ್ಪದೇ ಪಾಲಿಸಿದವರು. ಈ ಕಾಲಘಟ್ಟದ ನೂರೊಂದು ವಿರಕ್ತರಲ್ಲಿ ಒಬ್ಬನಾದವನು ಕಲ್ಲಮಠದ ಪ್ರಭುದೇವ. ವಿರಕ್ತನಾದ ಈತ ಹೊಸ ಸಾಹಿತ್ಯ ಕೃತಿ ರಚನೆ ಮಾಡದಿದ್ದರೂ ಕೂಡ, ಅಮೂಲ್ಯವೆನಿಸಿದ 38 ವಚನಕಾರರ 770 ವಚನಗಳನ್ನು ಮೊಟ್ಟ ಮೊದಲು ಸಂಕಲಿಸಿ ಅವುಗಳಿಗೆ ಅರ್ಥ, ವ್ಯಾಖ್ಯಾನ ಬರೆದಿದ್ದಾನೆ. ಅದೇ **'ಲಿಂಗಲೀಲಾ ವಿಲಾಸ ಚಾರಿತ್ರ'**. ಇದು ಶರಣರ ಲೀಲಾ ವಿಲಾಸದ ಕಥೆಯಾಗಿದೆ. ಇದರಲ್ಲಿ 135 ಕಾಮಿಕಾದಿ ಆಗಮದ ಸಂಸ್ಕೃತ ಶ್ಲೋಕಗಳು 1430ರ ನಂತರದಲ್ಲಿ ಸೇರಿವೆ ಎಂದು ಡಾ.ಎನ್.ಜಿ. ಮಹಾದೇವಪ್ಪ ಅನುಮಾನಿಸಿದ್ದಾರೆ. ಇನ್ನೊಂದು ಕೃತಿ, ಅಲ್ಲಮ ಪ್ರಭುದೇವರು ಸೊನ್ನಲಿಗೆ ಸಿದ್ದರಾಮನಿಗೆ ಬೋಧಿಸಿದ ಷಟ್‌ಸ್ಥಲ ಮಂತ್ರಗೋಪ್ಯಕ್ಕೆ ಟೀಕೆ ಬರೆದಿದ್ದಾನೆ. ಇದರಲ್ಲಿ 27 ಪದ್ಯಗಳಿವೆ. ಪ್ರತಿ ಪದ್ಯಕ್ಕೆ ಮೊದಲು ಶಬ್ದಾರ್ಥ ನಂತರ ಭಾವಾರ್ಥ ಕೊನೆಗೆ ತಾತ್ಪರ್ಯವನ್ನು ಕ್ರಮಬದ್ಧವಾಗಿ ಓದುಗರಿಗೆ ಅರ್ಥವಾಗುವ ರೀತಿಯಲ್ಲಿ ನಿರೂಪಿಸಿದ್ದಾನೆ.

ಈ ರೀತಿಯಲ್ಲಿ ಸಂಕಲನ, ವ್ಯಾಖ್ಯಾನ, ಟೀಕು ಬರೆಯಲು ಅಂದಿನ ವಿರಕ್ತರಿಗೆ ಅನೇಕ ಸವಾಲುಗಳು, ಕಾರಣಗಳಿದ್ದವು. ಇಮ್ಮಡಿ ಪ್ರೌಢದೇವರಾಯನ ಕಾಲದಲ್ಲಿ ನಡೆದ ಒಂದು ಘಟನೆ 'ಅದ್ರೀಶ' ಕವಿ ಬರೆದ 'ಪ್ರೌಢರಾಯನ ಕಾವ್ಯ'ದಲ್ಲಿ ಬರುತ್ತದೆ. ರಾಯನ ಆಸ್ಥಾನದಲ್ಲಿದ್ದ ಮುಕುಂದ ಪೆದ್ದಿ ಒಂದು ದಿನ – **"**ಒಂದು ಕೋಣದ ಕೊಂಬಿನ ಮೇಲೆ 770 ಸೇದಿಭಾವಿ**"** ಎಂಬ ವಚನಕ್ಕೆ ಅಪಾರ್ಥ ಕಲ್ಪಿಸಿ, ಅಲ್ಲಮಪ್ರಭುದೇವರ ಚಾರಿತ್ರ್ಯವನ್ನು ನಿಂದಿಸಿ ನುಡಿದಾಗ, ಅದನ್ನು ಖಂಡಿಸಿ ಜಕ್ಕಣಾರ್ಯ ಆ ವಚನದ ನಿಜಾರ್ಥವನ್ನು ಬಿಡಿಸಿ ಹೇಳಿ; ಸಭಿಕರು ತಲೆದೂಗುವಂತೆ ಮಾಡಿದನೆಂದು ತಿಳಿದು ಬರುತ್ತದೆ. ಈ ಘಟನೆ ಅಂದಿನ ಸಂಕೀರ್ಣ ಸಮಾಜದ ವ್ಯವಸ್ಥೆಯನ್ನು ಪರಿಚಯಿಸುತ್ತದೆ. ಅಂದು ವೈದಿಕಶಾಹಿಗಳು ಶರಣರ ವಿಚಾರಧಾರೆಗಳಿಗೆ ಅಪಾರ್ಥ ಕಲ್ಪಿಸಿ ಜನಮಾನಸದಿಂದ ಲಿಂಗಾಯತ ಧರ್ಮ ಕಡೆಗಣನೆಗೆ ಒಳಗಾಗುವಂತೆ ಮಾಡುತ್ತಿದ್ದರು. ಅಂತಹ ಸನ್ನಿವೇಶದಲ್ಲಿ ಈ ವಿರಕ್ತರು, ಕವಿಗಳು ತಮ್ಮ ಧರ್ಮದ ಅಸ್ತಿತ್ವವನ್ನು ಕಾಪಾಡಿಕೊಳ್ಳಲು, ಶರಣರ ವಚನಗಳಿಗೆ ಅರ್ಥ, ವ್ಯಾಖ್ಯಾನ, ತಾತ್ಪರ್ಯ, ಟೀಕು ಬರೆಯುತ್ತ, ಹೊಸ ಸಾಹಿತ್ಯ ರಚನೆಗೆ ತೊಡಗಿದರು. ಅಲ್ಲದೇ ತಮ್ಮ ಧರ್ಮದ ತತ್ವಗಳು–ಸಿದ್ಧಾಂತಗಳು–ಆಚಾರಣೆಗಳನ್ನು ದರ್ಶನದ ನೆಲೆಯಲ್ಲಿ ಸ್ತೋತ್ರ, ಸ್ವರವಚನ, ಪುರಾಣ, ಕಾವ್ಯ, ಶತಕ, ತ್ರಿಪದಿ, ರಗಳೆ, ಸಂಪಾದನ ಇತ್ಯಾದಿ ಕೃತಿಗಳ ಮೂಲಕ ಧರ್ಮ ಪ್ರಚಾರ ಮಾಡಬೇಕಾದ ಅನಿವಾರ್ಯತೆಯೂ ಇತ್ತು. ಹಾಗಾಗಿ ಹೊಸ–ಹೊಸ ಬದಲಾವಣೆಗಳು ಈ ಕಾಲದ ಸಾಹಿತ್ಯದಲ್ಲಿ ಪ್ರಯೋಗಗೊಂಡವು. ಆ ಸಾಹಿತ್ಯ ಕೃತಿಗಳ ಮುಖಾಂತರ ತಮ್ಮ ಹಿರಿಯರು ಮತ್ತು ಅವರ ಸಾಹಿತ್ಯ, ಯಾವ ಕೃತಿಗಳಿಗೂ ಕಡಿಮೆಯೇನು ಅಲ್ಲವೆಂದು ತೋರಿಸತೊಡಗಿದರು. ವೈದಿಕಶಾಹಿ ಪ್ರಭಾವ ಹೆಚ್ಚಾಗುತ್ತಿದ್ದ ಸನ್ನಿವೇಶದಲ್ಲಿ ಶರಣರ ಮಾರ್ಗದಲ್ಲಿ ಬಂದ ಕವಿಗಳು, ವಿರಕ್ತರು ವೈದಿಕ ಮತದ ದಬ್ಬಾಳಿಕೆಗೆ ಒಳಗಾಗದೆ ತಡೆಗೋಡೆಯಾಗಿ ನಿಂತರು. ಡಾ. ವೀರಣ್ಣ ರಾಜೂರ ಅವರು ಗುರುತಿಸಿರುವ ಪ್ರಕಾರ– 1430ರ ಅವಧಿಯಲ್ಲಿ 26 ಕವಿಗಳಿಂದ ಒಟ್ಟು 65ಕ್ಕೂ ಹೆಚ್ಚು ಕೃತಿಗಳು ರಚನೆಗೊಂಡಿವೆ.

ಈ ಕಾಲಘಟ್ಟದಲ್ಲಿ ಬಂದ ಸಾಹಿತ್ಯ

ಡಾ. ಶಿವಾನಂದ ವಿರಕ್ತಮಠ ಅವರು ವಿಭಾಗಿಸಿದಂತೆ ಸರಳೀಕರಿಸಿ ದಾಖಲಿಸುವುದಾದರೆ –

1. ವಚನ ಸಾಹಿತ್ಯ

1.1 ವಚನ ಸಂಕಲನ ಗ್ರಂಥಗಳು

ಕಲ್ಲಮಠದ ಪ್ರಭುದೇವ : 16 ಸ್ಥಲ ಪರಿಕ್ರಮ ಲಿಂಗಾಂಗ ಸಾಮರಸ್ಯಕ್ಕೆ ಅನುಕೂಲವಾಗುವಂತೆ ವಿಂಗಡಿಸಿದ್ದಾನೆ.

ಮಹಾಲಿಂಗದೇವ : 44 ಅಂಗಸ್ಥಲ 57 ಲಿಂಗಸ್ಥಲ.

ಜಕ್ಕಣಾರ್ಯ– ಪಿಂಡಸ್ಥಲಾದಿಯಾಗಿ 101 ಸ್ಥಲ.

ಗುಬ್ಬಿಯ ಮಲ್ಲಣ್ಣ : ಶರಣರು ನುಡಿದ ನುಡಿಗಳು ಸ್ಥಲಭಿನ್ನವಾಗಿದ್ದರಿಂದ ಕಂಠಮಾಲೆಯಾಗಿ ಪೋಣಿಸಿದ್ದೇನೆಂದು ಹೇಳಿದ್ದಾನೆ.

1.2 ಟೀಕೆ ಮತ್ತು ವ್ಯಾಖ್ಯಾನ ಗ್ರಂಥಗಳು

ಕುಮಾರ ಬಂಕನಾಥ : 'ಷಟ್‌ಸ್ಥಲೋಪದೇಶ' ಹೆಸರಿನಲ್ಲಿ ಅಲ್ಲಮರ 698 ವಚನ ಸಂಕಲನದ ಜೊತೆಗೆ ಟೀಕೆ ವ್ಯಾಖ್ಯಾನ ಬರೆದಿರುವನು.

ಕಲ್ಲಮಠದ ಪ್ರಭುದೇವ : 'ಲಿಂಗಲೀಲಾವಿಲಾಸ ಚಾರಿತ್ರ' ಹೆಸರಲ್ಲಿ ವಚನ ಸಂಕಲನದ ಜೊತೆಗೆ ಟೀಕೆ ವ್ಯಾಖ್ಯಾನ ಬರೆದಿರುವನು.

1.3 ಸಂಕಲನ ಗ್ರಂಥಗಳು

ಶಿವಗಣ ಪ್ರಸಾದಿ ಮಹದೇವಯ್ಯ : ಮೊದಲ ಶೂನ್ಯಸಂಪಾದನೆ

ಹಲಗೆಯಾರ್ಯ : ಎರಡನೇ ಶೂನ್ಯಸಂಪಾದನೆ

1.4. ಸ್ವತಂತ್ರ ವಚನಗಳು/ ಸ್ವರವಚನಗಳು

ಮಗ್ಗೆಯ ಮಾಯಿದೇವ, ಗುರುಬಸವಾರ್ಯ, ಕರಸ್ಥಲ ವೀರಣ್ಣೊಡೆಯ, ಕರಸ್ಥಲ ನಾಗೀದೇವ, ನಿರ್ವಾಣಿ ಬೋಳೇಶ, ಬತ್ತಲೇಶ್ವರ, ತೋಂಟದ ಸಿದ್ಧಲಿಂಗಯತಿ ಇತ್ಯಾದಿ ವಚನಕಾರರು ವಚನ ರಚಿಸಿದರು.

2. ತತ್ವಪ್ರತಿಪಾದನ ಕೃತಿಗಳು

ಲಕ್ಕಣ್ಣ ದಂಡೇಶ (ಶಿವತತ್ತ್ವ ಚಿಂತಾಮಣಿ), ಮಗ್ಗೆಯ ಮಾಯಿದೇವ, ಕರಸ್ಥಲ ವೀರಣ್ಣೊಡೆಯ, ಕರಸ್ಥಲ ನಾಗೀದೇವ, ಸಪ್ತಕಾವ್ಯದ ಗುರುಬಸವ (ಮನೋವಿಜಯಂ, ಶಿವಯೋಗಾಂಗ ವಿಭೂಷಣ, ವೃಷಭ ಗೀತೆ, ಕಲ್ಯಾಣೇಶ್ವರ, ಅವಧೂತ ಗೀತೆ, ಸ್ವರೂಪಾಮೃತ, ಸದ್ಗುರು ರಹಸ್ಯ), ನಿಜಗುಣ ಶಿವಯೋಗಿ ಇತ್ಯಾದಿ ಮಹನೀಯರು ಕೃತಿ ರಚಿಸಿದರು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

3. ಪುರಾಣ ಮತ್ತು ಕಾವ್ಯಗಳು

ಭೀಮಕವಿಯ ಬಸವಪುರಾಣ, ಚಾಮರಸನ ಪ್ರಭುಲಿಂಗ ಲೀಲೆ, ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ಇತ್ಯಾದಿ.

4. ಶತಕ

ಭಕ್ತಿ, ಜ್ಞಾನ, ವೈರಾಗ್ಯ ಪ್ರತಿಪಾದನೆಗಾಗಿ ಮಗ್ಗೆಯ ಮಾಯಿದೇವ–ಶಿವಾಧವ ಶತಕ, ಶಿವವಲ್ಲಭ ಶತಕ, ಐಪುರೀಶ್ವರ ಶತಕ ಮತ್ತು ಕರಸ್ಥಲ ವೀರಣ್ಣ–ನಿಃಕಲ ಶತಕ ಹಾಗೂ ನಾಗೀದೇವ–ಶಾಂತ ಶತಕ ರಚಿಸಿರುವುದು ಕಾಣುತ್ತೇವೆ.

5. ಕಾಲಜ್ಞಾನ ಪದಗಳು

ಕರಸ್ಥಲ ವೀರಣ್ಣೊಡೆಯ, ಕರಸ್ಥಲ ನಾಗೀದೇವ ಇತ್ಯಾದಿ ಕಾಲಜ್ಞಾನ ಪದಕಾರರು ಕಂಡುಬರುತ್ತಾರೆ.

6. ಸಂಕೀರ್ಣ ಸಾಹಿತ್ಯ

ತಾರವಳಿ, ನಾಂದ್ಯ, ರಗಳೆ, ತ್ರಿಪದಿ, ಮಂತ್ರಗೋಪ್ಯ, ಸ್ತೋತ್ರ, ಚೌಪದಿ ಇತ್ಯಾದಿ ಪ್ರಕಾರದಲ್ಲಿ ಸಾಹಿತ್ಯ ರಚನೆಗೊಂಡವು.

ಹೀಗೆ ಅನೇಕ ಕೃತಿಗಳು ಈ ಕಾಲಘಟ್ಟದಲ್ಲಿ ಜನ್ಮತಾಳಿದವು. ಈ ಸಂದರ್ಭದಲ್ಲಿ ಕೆಲವು ಕೃತಿಗಳ ಕುರಿತು ಚಾರಿತ್ರಿಕವಾಗಿ ಚರ್ಚಿಸುವುದಾದರೆ, ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾ ಮಂಜರಿ' (ವೈದಿಕ ಮತ ಪ್ರಭಾವ) ಮತ್ತು ಚಾಮರಸನ 'ಪ್ರಭುಲಿಂಗ ಲೀಲೆ' (ಲಿಂಗಾಯತ ಧರ್ಮ ಪ್ರಭಾವ) ಎರಡು ಕೃತಿ ಮಹತ್ವದವುಗಳಾಗಿವೆ.

ಕುಮಾರವ್ಯಾಸನು ತನ್ನ ಮತದ ಅಸ್ತಿತ್ವಕ್ಕಾಗಿ ಮಹಾಭಾರತ ಕಥೆಯನ್ನು ವಸ್ತುವಾಗಿ ಪಡೆದರೂ ಸಹ ಭೀಮನನ್ನಾಗಲಿ, ಅರ್ಜುನನನ್ನಾಗಲಿ, ಆಶ್ರಯದಾತರನ್ನಾಗಲಿ ಈ ಹಿಂದಿನ ಕವಿಗಳ ಹಾಗೆ ಅಲ್ಲಿ ನಾಯಕರನ್ನಾಗಿ ಮಾಡಿಕೊಳ್ಳದೆ; ತನ್ನ ಆರಾಧ್ಯದೈವ ವೀರನಾರಾಯಣನನ್ನು ಅಂದರೆ ಶ್ರೀಕೃಷ್ಣನನ್ನೇ ನಾಯಕನಾಗಿ ಮಾಡಿ–

"ತಿಳಿಯ ಹೇಳುವೆ ಕೃಷ್ಣ ಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮ ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ॥
ಹಲವು ಜನ್ಮದ ಪಾಪರಾಶಿಯ
ತೊಳೆವ ಜಲವಿದು ಶ್ರೀಮದಾಗಮ
ಕುಲಕೆ ನಾಯಕ ಭಾರತ ಕೃತಿ ಪಂಚಮ ಶ್ರುತಿಯ॥"

ಎನ್ನುತ್ತಾ, ಸಮಕಾಲೀನ ಅನೇಕ ಮತ–ಪಂಥಗಳ ನಡುವೆ ವೈದಿಕ ಮತವನ್ನು ಪ್ರಚಾರ ಮಾಡಲು ನಿಂತ. ಅಷ್ಟೇ ಅಲ್ಲದೆ ತನ್ನ ಕಾವ್ಯವು ಎಲ್ಲಾ ವರ್ಗದವರಿಗೆ ಸಲ್ಲುತ್ತದೆ ಎಂದು ಹೇಳುವ ಆತನ ನುಡಿಗಳು ಹೀಗಿವೆ–

"ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ॥
ವಿರಹಿಗಳ ಶೃಂಗಾರ ವಿದ್ಯಾ
ಪರಿಣಿತರಲಂಕಾರ ಕಾವ್ಯಕ್ಕೆ
ಗುರುವಾಗಲು ರಚಿಸಿದ ಕುಮಾರವ್ಯಾಸ ಭಾರತವನು॥"

ಈ ಪದ್ಯದಲ್ಲಿ ಅರಸರು, ಪುರೋಹಿತರು, ಯೋಗಿಗಳು (ವಿರಕ್ತಮುನಿಗಳು–ಸಾದು–ಸಂತರು), ಮಂತ್ರಿಗಳು, ಪ್ರೇಮ ವಿರಹಿಗಳು, ವಿದ್ಯಾ ಪರಿಣಿತರೆಲ್ಲರೂ ತನ್ನ ಕಾವ್ಯವನ್ನು ಓದಿ ಈ ಮತದ ಅನುಯಾಯಿಗಳಾಗಿ ಪರಿವರ್ತಿತರಾಗಬೇಕು ಎನ್ನುವ ತುಡಿತ ಅವನಲ್ಲಿದೆ ಎಂಬುದು ಕಾಣುತ್ತದೆ. ಹಾಗಾಗಿಯೇ ಈ ಹಿಂದಿನ ಎಲ್ಲಾ ಕಾವ್ಯಗಳಿಗೆ ತನ್ನ 'ಗದುಗಿನ ಭಾರತ' ಗುರುವಾಗಿದೆ ಎಂದು ಹೇಳಿ; ಅವರನ್ನು ತನ್ನ ಮತದೆಡೆಗೆ ಸೆಳೆದು, ಎಲ್ಲರಲ್ಲಿಗೆ ಕೃಷ್ಣನನ್ನು ಕರೆದುಕೊಂಡು ಕುಮಾರವ್ಯಾಸ ಹೋದನು. ಇದನ್ನು ಗಮನಿಸುತ್ತಿದ್ದ ಸಮಕಾಲೀನ ಚಾಮರಸ ಕವಿ–

"ಅಲ್ಲಮಪ್ರಭು ಸಂಪ್ರದಾಯ
ಸಲ್ಲಲಿತ ಸನ್ಮಾರ್ಗವನು ನಾ
ನೆಲ್ಲರರಿವಂದದಲಿ ಪೇಳುವೆನುಚಿತ ವಚನದಲಿ॥
ಸೊಲ್ಲಿನೊಳಗಣ ಸೊಂಪನಿಂಪನು
ಬಲ್ಲವರು ಭಾವುಕರು ಭಕ್ತಿಯ
ಬಲ್ಲಿದರು ಲಾಲಿಸುವುದೀ ಪ್ರಭುಲಿಂಗಲೀಲೆ॥"

ಎಂದು ಹೇಳುತ್ತಾ.....

"ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮದ
ಕತ್ತಲೆಗೆ ಸಿಲುಕುವರ ಸೀಮೆಯ ಹೊಲಬು ತಾನಲ್ಲ॥
ಹೊತ್ತು ಹೋಗದೆ ಪುಂಡರಾಲಿಪ
ಮತ್ತಮತಿಗಳ ಗೋಷ್ಠಿಯಲ್ಲಿದು
ಸತ್ಯ ಶರಣರು ತಿಳಿವುದೀ ಪ್ರಭುಲಿಂಗ ಲೀಲೆಯನು॥"

ಎಂದು ಹೇಳಿದ. ಚಾಮರಸನು ಕರ್ಮಫಲವನ್ನು ನಂಬಿ ಜನನದ ಕುತ್ತದಲಿ ಕುದಿದು ಕರ್ಮದ ಕತ್ತಲೆಗೆ ಸಿಲುಕುವವನು ತಾನಲ್ಲ ಎಂದು ಹೇಳುತ್ತಾ, ವೈದಿಕರನ್ನು ತರಾಟೆಗೆ ತೆಗೆದುಕೊಂಡಿರುವನು. ಕಾಯಕ ಮಾಡದೆ ಕೇವಲ ಕುಳಿತು ತಿನ್ನುತ್ತ, ಹೊತ್ತು ಹೋಗದೆ ಗೋಷ್ಠಿಯ ರೂಪದಲ್ಲಿ ಪುರಾಣಗಳನ್ನು, ಮಹಾಕಾವ್ಯಗಳನ್ನು ಪಾರಾಯಣ ಮಾಡುತ್ತ ದಿನದೂಡುವ ಜನರಿಗೆ ತನ್ನ ಕಾವ್ಯ ಸಲ್ಲದು ಎಂದು ಖಾರವಾಗಿ ನುಡಿದಿದ್ದಾನೆ. ಅಲ್ಲಿ ಕುಮರವ್ಯಾಸ ತನ್ನ ಕಾವ್ಯ ಎಲ್ಲರಿಗೂ ಸಲ್ಲುತ್ತದೆಂದು ಹೇಳಿದರೆ, ಇಲ್ಲಿ ಚಾಮರಸ ತನ್ನ ಕಾವ್ಯ ಸತ್ತವರ ಕಥೆಯಲ್ಲವೆಂದು ಸತ್ಯ ಶರಣರ ಕಥೆಯೆಂದು ಇದು ಮತ್ತಮತಿಗಳಿಗೆ (ಧರ್ಮದ ಅಮಲು ಹಿಡಿದವರು) ಸಲ್ಲುವುದಿಲ್ಲವೆಂದು ಹೇಳಿದ್ದಾನೆ. ಇದು ಚಾಮರಸನ ಕಾಲದಲ್ಲಿದ್ದ ಸಾಂಸ್ಕೃತಿಕ ತಲ್ಲಣವೇನೆಂದು ಖಾತರಿ ಪಡಿಸುತ್ತದೆ. ಇದಕ್ಕೆ ಸಪ್ತಕಾವ್ಯದ ಗುರುಬಸವ ವಿರಕ್ತಕವಿ ಹೊರತಲ್ಲ.

ಇನ್ನು ಲಕ್ಕಣ್ಣ ದಂಡೇಶನು 'ಶಿವತತ್ತ್ವ ಚಿಂತಾಮಣಿ' ಕಾವ್ಯದಲ್ಲಿ–

"ವಿತತ ವೇದಾಗಮ ಪುರಾತನೋಕ್ತಿಗಳ ಸ
ಮೃತ ಸಾರಾಯ ಶಿವತತ್ವ ಚಿಂತಾಮಣಿಯ
ಕೃತಿಯ ವಿಸ್ತರಿಸುವೆಂ ಶಿವಭಕ್ತತತಿಕೇಳ್ದು ಮೆಚ್ಚಿ ಕೃತಕೃತ್ಯರಹುದು॥"

"ಗುರುವಚನದಮೃತಮಂ ಶ್ರುತಿ ಪುರಾಣಾಗಮದ
ಪರಮಾರ್ಥದಮೃತಮಂ ವರ ಪುರಾತನ ವಚನ
ಪರಿಯಾದಮೃತಮಂಶಿವತಾಂತ್ರಿಕರು–
–ಪೇಳ್ದ ಸಿದ್ಧಾಂತವೆನಿಪಮೃತಮಂ॥
ಪರಮಾನುಭಾವದನುಭವ ಗೋಷ್ಠಿಯಮೃತದೊಳು
ಬೆರೆಸಿ ಮಥನಿಸಿ ಪಡೆದ ಲಕ್ಕಣ್ಣದಂಡೇಶ
ಧರಿಸಿರ್ಪ ಶಿವತತ್ತ್ವ ಚಿಂತಾಮಣಿಯನರಿವವರ ಚರಣಾಂಬುಜಕ್ಕೆ–
– ಶರಣು ॥"

ಇಲ್ಲಿ ಶ್ರುತಿ, ಗುರುವಚನ, ಪುರಾಣ, ಆಗಮ, ಪುರಾತನ ಪರಿ, ಶಿವ ತಾಂತ್ರಿಕರ ಸಿದ್ಧಾಂತ, ಪರಮಾನುಭಾವದ ಅನುಭವ ಗೋಷ್ಠಿಯ ಅಮೃತ ಬೆರೆಸಿ ಕಡೆದು ತೆಗೆದ ನವನೀತವೇ ಈ ಕೃತಿಯೆಂದು ಹೇಳಲು ಕಾರಣವುಂಟು. ಆ ಕಾಲಸಂದರ್ಭಕ್ಕೆ ಎಲ್ಲಾ ಸಾಹಿತ್ಯದ ಮೂಲವನ್ನು ವೇದ–ಆಗಮ–ಪುರಾಣ–ಶೃತಿಗಳಲ್ಲಿ ಇಣುಕಿ ನೋಡಲಾಗುತ್ತಿತ್ತು ಮತ್ತು ಅನಿವಾರ್ಯವಾಗಿ ಇತರೆ ಶೈವ ಮತಗಳು (ಕಾಪಾಲಿಕ, ಕಾಳಾಮುಖ

– 110ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಹಿಳೆ ಮತ್ತು ಸ್ವಾವಲಂಬನೆ

✍ **ಡಾ. ಎಂ. ಕೆಂಪಮ್ಮ ಕಾರ್ಕಹಳ್ಳಿ,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು.

✍ **ಡಾ. ಕುಮಾರ,** ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ದಾರ್ಥನಗರ, ಮೈಸೂರು.

ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಸ್ವಾವಲಂಬಿಗಳಾಗಿ ಸ್ವಾತಂತ್ರ್ಯದಿಂದ ಬದುಕು ನಡೆಸಬೇಕೆಬುಂದು ಮಹಾತ್ಮ ಗಾಂಧೀಜಿಯವರ ಆಶಯವಾಗಿತ್ತು. ಆ ನಿಟ್ಟಿನಲ್ಲಿ ಗಾಂಧೀಜಿಯವರ ಆಶಯದಂತೆ ಕರ್ನಾಟಕದಾದ್ಯಂತ ಇರುವ ಎಲ್ಲಾ ಗಾಂಧೀ ಭವನ, ಅಧ್ಯಯನ ಕೇಂದ್ರ, ಆಶ್ರಮಗಳು ಸ್ತ್ರೀ ಪುರುಷರಿಗೆ ಅದರಲ್ಲೂ ಮಹಿಳೆಯರಿಗೆ ಸ್ವ ಉದ್ಯೋಗ ಕೈಗೊಳ್ಳಲು ಬೇಕಾದ ವಿವಿಧ ಕೌಶಲ್ಯಗಳ ಬಗ್ಗೆ ನಿರಂತರವಾಗಿ ತರಬೇತಿ ನೀಡಿ ಅವರನ್ನು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತಿರುವುದು ಮಹತ್ವದ ಸಂಗತಿ. ಅಭಿವೃದ್ಧಿಶೀಲ ದೇಶಗಳಲ್ಲಿ ಮಹಿಳೆಯರಿಗೆ ಉದ್ಯೋಗವಕಾಶಗಳು ಪುರುಷರಿಗಿಂತ ಕಡಿಮೆ. ಜೊತೆಗೆ ದುಡಿಯುವ ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಯನ್ನಾಗಿ ಪರಿಗಣಿಸಲಾಗಿದೆ. ಮಹಿಳೆಯು ದುಡಿಮೆಯ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದು 21ನೇ ಶತಮಾನದ ಅತ್ಯದ್ಭುತವೇನಲ್ಲ. ಸಮಾಜ ಜೀವನ ಎಂದು ಆರಂಭವಾಯಿತೋ ಅಂದಿನಿಂದಲೂ ಪುರುಷನಿಗೆ ಸರಿ ಸಮಾನವಾಗಿ ದುಡಿಯುತ್ತಿದ್ದಾಳೆ. ಬೇಟೆ ಸಂಸ್ಕೃತಿಯ ಕಾಲಘಟ್ಟದಲ್ಲಿ ಮಾತೃಪ್ರಧಾನ ಸಮಾಜದಲ್ಲಿ ಹೆಣ್ಣಿಗೆ ಹೆಚ್ಚಿನ ಸ್ವಾತಂತ್ರ್ಯ ಸಮಾನ ಸ್ಥಾನಮಾನವಿತ್ತು. ಕೃಷಿಸಂಸ್ಕೃತಿಯ ಸಮಾಜಕ್ಕೆ ಹೊರಳಿದ ಮೇಲೆ ಕೃಷಿ ಆರಂಭಿಕಳು ಹೆಣ್ಣೇ ಆದರೂ ಆಸ್ತಿ ಪರಿಕಲ್ಪನೆ, ಕೃಷಿಯಲ್ಲಿ ನೇಗಿಲು, ಪ್ರಾಣಿ ಬಳಕೆ ಬಂದ ಮೇಲೆ ಕೃಷಿ ಚಟುವಟಿಕೆಗಳಲ್ಲಿ ಗಂಡಿನ ಪಾತ್ರ ಮೇಲಾಗುತ್ತಿದ್ದಂತೆ ಹೆಣ್ಣು ಎರಡನೇ ಸ್ಥಾನಕ್ಕಿಳಿದಳು. ಆಧುನಿಕವಾಗಿ ಮಹಿಳೆ ವಿವಿಧ ಶ್ರಮವರ್ಗಗಳಲ್ಲಿ, ವಿವಿಧ ಸ್ತರದ ಉದ್ಯೋಗಗಳಲ್ಲಿ ಗುರುತಿಸಿಕೊಳ್ಳುತ್ತಿದ್ದಾಳೆ. ಹುಟ್ಟಿನಿಂದ ಸಾಯುವವರೆಗೂ ಮಾನವ ಸಮಾಜದಲ್ಲಿ ಮಹಿಳೆಯೂ ಕೂಡ ಬದುಕಬೇಕಾಗಿರುವುದರಿಂದ ಅವಳು ದುಡಿಯುವ ರಂಗವನ್ನು ಪ್ರವೇಶ ಮಾಡಿದ್ದಾಳೆ.

ಬಂಡವಾಳಶಾಹಿಯ ಬೆಳವಣಿಗೆ ಹಾಗೂ ಶ್ರಮದ ಅವಶ್ಯಕತೆಗಾಗಿ, ಜೊತೆಗೆ ಕುಟುಂಬಗಳ ಪೋಷಣೆಯ ಸಲುವಾಗಿ ಮಹಿಳೆಯರನ್ನು ದುಡಿಮೆಗೆ ಆಹ್ವಾನಿಸಿದ್ದರೂ ಮಹಿಳೆ ಉತ್ಪಾದನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವುದು ಹೊರನೋಟಕ್ಕೆ ಕಾಣುತ್ತಿದ್ದರೂ ಮಹಿಳೆಯರು ಸ್ವತಂತ್ರರಲ್ಲ. ದುಡಿಮೆಯಲ್ಲಿ ಸಮಪಾಲನ್ನು ಹೊಂದಿರುವ ಮಹಿಳೆ ಆರ್ಥಿಕವಾಗಿ ಸಮಪಾಲನ್ನು ಹೊಂದಿಲ್ಲ. ದುಡಿಮೆಯ ಸ್ವಾತಂತ್ರ್ಯವಿದ್ದ ಮಾತ್ರಕ್ಕೆ ಆರ್ಥಿಕ ಸ್ವಾತಂತ್ರ್ಯ ದಕ್ಕಿದೆ ಎಂದರ್ಥವಲ್ಲ. ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆ ಪುರುಷರಿಗೆ ಸರಿಸಮಾನವಾಗಿ ಕಾಣಿಸಿಕೊಂಡರೂ ಕೂಡ ನಮ್ಮ ದೇಶದಲ್ಲಿ ಅಸ್ತಿತ್ವದಲ್ಲಿರುವ ಸಂಪ್ರದಾಯ, ರೂಢಿ, ಪದ್ಧತಿ, ಪರಂಪರೆಗಳು ಮಹಿಳೆ ಪುರುಷನ ಅದೀನಳೆಂಬ ಭಾವನೆಗಳನ್ನು ಜಾಗೃತಗೊಳಿಸುತ್ತಾ ಬಂದಿವೆ. ಹೀಗಾಗಿ ಮಹಿಳೆ ಪುರುಷಾಧೀನ ಬದುಕನ್ನೇ ನಡೆಸಬೇಕೆಂಬ ಸಮಾಜದ ಸನಾತನ ವಿಚಾರಗಳು ಇಂದಿಗೂ ಸತ್ವ ಕಳೆದುಕೊಂಡಿಲ್ಲ. ಈವರೆಗೂ ಮಹಿಳೆಯನ್ನು ವ್ಯಕ್ತಿಯಾಗಿ, ಸಮಾಜದ ಶಕ್ತಿಯಾಗಿ, ನೋಡಲು ಸಾಧ್ಯವೇ ಆಗಿಲ್ಲವೆಂಬುದು ಇಂದಿನ ಕಟುವಾಸ್ತವ. ಮಹಿಳೆಯರು ಎಷ್ಟೇ ದೊಡ್ಡ ಸಾಧನೆಗಳನ್ನು ಮಾಡಿದರೂ ಪುರುಷನಿಂದ ಹೊರತುಪಡಿಸಿ ನೋಡಲು ಸಾಧ್ಯವಾಗಿಲ್ಲ.

ಉದಾ : ಕಛೇರಿಯಲ್ಲಿ ಕಸಗುಡಿಸುವ ಸಾಮಾನ್ಯ ಕೆಲಸಗಾರ ಮನೆಗೆ ಬಂದ ಕೂಡಲೇ ಯಜಮಾನನಾಗುತ್ತಾನೆ. ಅದೇ ಕಛೇರಿಯಲ್ಲಿ ಅಧಿಕಾರಿಯಾಗಿ ದುಡಿಯುವ ಮಹಿಳೆ ಮನೆಗೆ ಬಂದ ಕೂಡಲೇ ಪುರುಷಾಧೀನಳಾಗುತ್ತಾಳೆ.

ಮಹಿಳೆಯರಿಗೆ ಸಂವಿಧಾನದಲ್ಲಿ ಲಿಂಗ ಭೇದವಿಲ್ಲ. ಸಮಾನವಾಗಿ ಬದುಕುವ ಹಕ್ಕಿದೆ. ಇಂದಿನ ವಾಸ್ತವ ಸಂಗತಿಯೆಂದರೆ ಮಹಿಳೆ ಬಾಲ್ಯದಿಂದ ಮುಪ್ಪಿನವರೆಗೆ ಕುಟುಂಬದ ಆರೈಕೆಯಲ್ಲಿ ಜೀವನ ಸವೆಸುತ್ತ ದೇಶದ ಆರ್ಥಿಕ ಬೆಳವಣಿಗೆಯ ಪಾಲುದಾರಳಾಗಿದ್ದರೂ ಆಕೆಯ ಸಮಾನತೆಯ ಹೋರಾಟ ನಿಂತಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದರೂ 'ಪರಾವಲಂಬಿ' ಎಂಬ ಸಾಮಾಜಿಕ ಸಂಕೋಲೆಯಿಂದ ಆಕೆ ಮುಕ್ತಳಾಗ ಬೇಕೆನ್ನುವುದು ಜಾಗತಿಕ ಕಾಳಜಿಯೂ ಆಗಿದೆ. ಆದರೆ ಗ್ರಾಮೀಣ ಸಂಸ್ಕೃತಿ, ಸಾಂಪ್ರದಾಯಿಕ ಕೆಲವು ನೀತಿ–ನಿಯಮಗಳು ವೇಗದ ನಗರ ಜೀವನ, ಪಾಶ್ಚಿಮಾತ್ಯ ಸಂಸ್ಕೃತಿಯ ನೈತಿಕ ದಾಳಿಯ ನಡುವೆ ಮಹಿಳೆಯರು ಸ್ವಾವಲಂಬಿಗಳಾಗಲು ಇರುವ ಮಾರ್ಗಗಳೇನೆಂಬುದರ ಬಗ್ಗೆ ಚರ್ಚಿಸ ಬೇಕಾಗಿದೆ. ತಾನು ಮಗಳಾಗಿದ್ದಾಗ ಸ್ವಾವಲಂಬಿ ಜೀವನಕ್ಕಾಗಿ ಹೋರಾಡುವ ಹೆಣ್ಣು ನಂತರದಲ್ಲಿ ತಾಯಿಯಾದಾಗ ತನ್ನ ಮಗಳ ಸ್ವಾವಲಂಬಿ ಬದುಕಿನ ಹೋರಾಟದ ಬಗ್ಗೆ ಆತಂಕಕ್ಕೆ ಒಳಗಾಗುತ್ತಾಳೆ. ಮಿಗಿಲಾಗಿ ಮಗನ ಭವಿಷ್ಯಕ್ಕೆ ಹೆಚ್ಚು ಒತ್ತುಕೊಡುತ್ತಾಳೆ. ಗ್ರಾಮೀಣ ಮಹಿಳೆಯರಿಗೆ ಮನೆಗಳಲ್ಲಿರುವ ಇಂಥ ಮನಸ್ಥಿತಿಗಳು ಮಹಿಳಾ ಸಬಲೀಕರಣಕ್ಕಿರುವ ದೊಡ್ಡ ಸವಾಲುಗಳು. ಮಹಿಳೆ ಉದ್ಯೋಗ ಪಡೆದಳೆಂದರೆ ಅಥವಾ ಶಿಕ್ಷಣ ಪಡೆದಾಕ್ಷಣ ಮಹಿಳಾ ಸಶಕ್ತೀಕರಣ ಆಗುವುದಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿಯೂ ಮಹತ್ವದ ಪಾಲುದಾರಿಕೆ ಪಡೆದುಕೊಳ್ಳಬೇಕು.

ಮಹಿಳಾ ಸಮಾನತೆ ಅಂತ ಮಾತನಾಡುತ್ತೀವಲ್ಲ ಅದು ಮೊದಲು ಮನೆಯಿಂದ ಶುರುವಾಗಬೇಕು. ಲಿಂಗ ತಾರತಮ್ಯ ತೊಲಗಬೇಕು. ಶ್ರೇಷ್ಠ–ಕನಿಷ್ಠವೆಂಬ ಮನಸ್ಥಿತಿ ಇರಬಾರದು. ಮಹಿಳೆ ಅಡುಗೆ ಮನೆಗಷ್ಟೇ ಸೀಮಿತವಲ್ಲ ಎನ್ನುವ ಯೋಚನೆಗಳು ಬಂದಾಗ ಮಹಿಳಾ ಸಶಕ್ತೀಕರಣ ಬೆಳೆಯಲು ಸಾಧ್ಯ. ಹೆಣ್ಣು ದುರ್ಬಲಳಲ್ಲ ಎಂಬ ತಿಳುವಳಿಕೆಯನ್ನು ಪಾಲಕರು ಮತ್ತು ಮಕ್ಕಳಲ್ಲಿ ಮೂಡಿಸಬೇಕಾಗಿದೆ. ಇಂದಿಗೂ ಗ್ರಾಮಗಳಲ್ಲಿ ಶೇ. 28 ರಿಂದ 70 ರಷ್ಟು ಮಹಿಳೆಯರೇ ದುಡಿಯುತ್ತಿದ್ದಾರೆ ಎಂಬುದು ಸಮೀಕ್ಷೆಯೊಂದರ ದಾಖಲೆ. ಮಹಿಳೆಯರು ದೇಶದಲ್ಲಿ ಆದಾಯ ಗಳಿಕೆ ಆರಂಭಿಸಿದಾಗ ಸಬಲೀಕರಣವಾಗುತ್ತದೆ. ನೋಡಿ ಹೆಣ್ಣು ಬಾಲ್ಯದಿಂದ ಮುಪ್ಪಿನವರೆಗೆ ಕುಟುಂಬದಲ್ಲಿ ವಿಶ್ರಾಂತಿ ಇಲ್ಲದೆ ದುಡಿಯುತ್ತಾಳೆ. ಆದರೆ ಇಂದಿಗೂ ಪುರುಷ ಸಮಾಜ ಅದನ್ನು ದುಡಿಮೆಯೆಂದು ಪರಿಗಣಿಸಿಲ್ಲ, ಬದಲಾಗಿ ಕರ್ತವ್ಯವೆಂದು ಪಕ್ಕಕ್ಕಿಡುತ್ತಾರೆ.

ಇಂದು ಸಾಮಾಜಿಕ ಜಾಲತಾಣ ಮತ್ತು ಡಿಜಿಟಲ್ ಮಾರ್ಕೆಟಿಂಗ್ ವ್ಯವಸ್ಥೆಯಿಂದ ಮಹಿಳೆಯರಿಗೆ ಹೆಚ್ಚು ಉದ್ಯೋಗವಕಾಶಗಳು ಸೃಷ್ಟಿಯಾಗುತ್ತಿವೆ. ಅದನ್ನು ಧನಾತ್ಮಕವಾಗಿ ಬಳಸಿಕೊಳ್ಳಬೇಕು. ಮಹಿಳೆಯರು ಸ್ವಾವಲಂಬಿಗಳಾಗುವ ನಿಟ್ಟಿನಲ್ಲಿ ಸ್ಫೂರ್ತಿದಾಯಕ ವ್ಯಕ್ತಿಗಳನ್ನು ಅವರಿಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪರಿಚಯಿಸಬೇಕು. ಆ ಮೂಲಕ ಮಾನಸಿಕ ಧೈರ್ಯ ತುಂಬಿದಾಗ ಮಹಿಳೆಯರು ಮನೆಯಿಂದ ಹೊರಬಂದು ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಸಾಧ್ಯ. ಸ್ವಾವಲಂಬಿಗಳಾಗಬೇಕಾದರೆ ಮೊದಲು ಮಹಿಳೆಯರು ಸಂಘಟಿತರಾಗಬೇಕು. ನಮ್ಮಲ್ಲಿ ಗ್ರಾಮೀಣ ಸ್ತ್ರೀಶಕ್ತಿ ಸಂಘಗಳು ಬಂದ ಮೇಲೆ ಮಹಿಳೆಯರು ಸಂಘಟಿತರಾಗತೊಡಗಿದರು. ಸ್ವಾವಲಂಬಿಗಳಾಗಿ ಜೀವನ ನಡೆಸಲು ತಕ್ಕಮಟ್ಟಿಗೆ ಸಾಧ್ಯವಾಗಿದೆ. ಅಲ್ಲದೆ ಇಂಥ ಸಂಘಟನೆಗಳಿಂದ ಮುಖ್ಯವಾಹಿನಿಯಲ್ಲಿ ಕಾರ್ಯನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ. ನಾಲ್ಕು ಗೋಡೆಗಳ ನಡುವೆ ಒಬ್ಬಳಾಗಿರುತ್ತಿದ್ದ ಮಹಿಳೆ ಇಂದು ತನ್ನ ಕಾಲಮೇಲೆ ನಿಂತು ಕುಟುಂಬವನ್ನು ನಿಭಾಯಿಸುತ್ತಿದ್ದಾಳೆ. ಅಲ್ಲದೆ ಸಂಘ–ಸಂಸ್ಥೆಗಳು ಮಹಿಳೆಯರಿಗೆ ಶಿಸ್ತು, ನಿಯಮ, ಸಮಯಪಾಲನೆ, ವ್ಯವಹಾರ ಜ್ಞಾನ ಕಲಿಸುವ ಜೊತೆಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತೊಡಗಿಸಿಕೊಳ್ಳುವ ಆತ್ಮಸ್ಥೈರ್ಯ ತಂದುಕೊಟ್ಟಿವೆ. ಆರ್ಥಿಕ ಸ್ವಾವಲಂಬನೆ ಹೊಂದಲು ಅನೇಕ ಅವಕಾಶಗಳಿವೆ. ಈ ನಿಟ್ಟಿನಲ್ಲಿ ಯುವಜನತೆ ಮತ್ತು ಮಹಿಳೆಯರನ್ನು ಸ್ವಾವಲಂಬಿಗಳಾಗಿ ಮಾಡುವಲ್ಲಿ ಸಹಕಾರಿ ಸಂಘಗಳು ಮಹತ್ವದ ಪಾತ್ರ ನಿರ್ವಹಿಸುತ್ತಿವೆ. ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲಕರ ರೀತಿಯಲ್ಲಿ ಸಾಲ–ಸೌಲಭ್ಯ ನೀಡುತ್ತಿವೆ. ಇಂಥ ಅವಕಾಶಗಳನ್ನು ಬ್ಯಾಂಕ್, ಸಹಕಾರಿ ಸಂಘಗಳ, ಸಂಘ–ಸಂಸ್ಥೆಗಳ ನೆರವು ಪಡೆದು ತಮ್ಮಲ್ಲಿರುವ ಕೌಶಲ್ಯವನ್ನು ಬಳಸಿ ಅನೇಕ ರೀತಿಯಲ್ಲಿ ಸ್ವ–ಉದ್ಯೋಗ ಕಂಡುಕೊಂಡು ಸ್ವಾವಲಂಬಿಗಳಾಗಿ ಬದುಕಲು ಸಾಕಷ್ಟು ಅವಕಾಶಗಳಿವೆ. ಅವುಗಳ ಬಗೆಗಿನ ಜ್ಞಾನಪಡೆಯಬೇಕು. ತಮಗಿರುವ ಸೌಲಭ್ಯಗಳು, ಅವಕಾಶಗಳನ್ನು ಪಡೆಯುವ ವಿಧಾನಗಳ ಬಗ್ಗೆ, ಅರ್ಹತೆಗಳ ಬಗ್ಗೆ ಅರಿವು, ತರಬೇತಿ ಹೊಂದಿದ್ದರೆ ಸ್ವಾವಲಂಬಿಗಳಾಗಿ, ಸ್ವಾಭಿಮಾನಿಗಳಾಗಿ ಆತ್ಮಾಭಿಮಾನದಿಂದ ಯಾರಿಗೂ ಹೊರೆಯಾಗದಂತೆ ಬದುಕುವ ಸಾಮರ್ಥ್ಯವನ್ನು ತಮಗೆ ತಾವೇ ಗಳಿಸಿಕೊಳ್ಳಬಹುದಾಗಿದೆ.

ಇಂದು ಮಹಿಳೆಯರು ಸ್ವತಂತ್ರವಾಗಿ ಉದ್ಯಮಗಳನ್ನು ನಡೆಸುವಷ್ಟು ಸಶಕ್ತರಾಗಿದ್ದಾರೆ. ಸಮಾಜದಲ್ಲಿರುವ ಸೌಲಭ್ಯ ತನ್ನ ಸ್ವಂತ ಶಕ್ತಿ ಬಳಸಿಕೊಂಡು ಆಧುನಿಕ ಸವಾಲಿನ ಸಮಾಜದಲ್ಲಿ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು. ಉದಾ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಗಳ ಮೂಲಕ ಕೊಪ್ಪಳ ಜಿಲ್ಲೆಯಲ್ಲಿ 'ಸವಿರುಚಿ ಕ್ಯಾಂಟಿನ್'ನನ್ನು ಪ್ರಾಯೋಗಿಕವಾಗಿ ಮಹಿಳೆಯರೇ ನಡೆಸುತ್ತಿದ್ದಾರೆ. ಹಾಗೆ ಗುಲ್ಬರ್ಗಾದ ಮಹಿಳಾ ಸೂಪರ್ ಮಾರ್ಕೆಟ್ ನೂರಾರು ಮಹಿಳೆಯರು ಆರ್ಥಿಕವಾಗಿ ಸಬಲರಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಆ ಭಾಗದ ಸ್ವ–ಸಹಾಯ ಸಂಘಗಳು "ಉದ್ಯಮಿಯಾಗು ಉದ್ಯೋಗ ನೀಡು" ಎಂಬ ಮಂತ್ರ ಜಪಿಸುತ್ತಿದ್ದಾರೆ. ದಿನವಿಡೀ ಸಂಗೋಪನಾ ಆರ್ಥಿಕತೆಯಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರು ಆರ್ಥಿಕ ಅಭಿವೃದ್ಧಿಗಾಗಿ ರಾಜ್ಯದಲ್ಲೇ ಮೊದಲ ಬಾರಿಗೆ ಸ್ಥಾಪಿಸಲಾಗಿರುವ ಈ ಮಾರ್ಕೆಟ್ ಉತ್ತಮ ವಹಿವಾಟು ನಡೆಸುತ್ತ ಮಹಿಳೆಯರ ಪಾಲಿನ ಆಶಾಕಿರಣವಾಗಿ ಹೊರಹೊಮ್ಮಿದೆ. ಗುಲ್ಬರ್ಗಾದ ಜನತಾ ಬಜಾರ್‌ನಲ್ಲಿರುವ 70 × 70 ಅಡಿ ಉದ್ದಗಲದ ವಾಣಿಜ್ಯ ಸಂಕೀರ್ಣದಲ್ಲಿರುವ ಒಟ್ಟು 9 ಮಳಿಗೆಗಳಲ್ಲಿ ಆಹಾರ ಪದಾರ್ಥಗಳು, ಕರಕುಶಲ, ಕಸೂತಿ ಹಾಗೂ ಅಲಂಕಾರಿ ವಸ್ತುಗಳು, ವಿವಿಧ ಬಗೆಯ ರೊಟ್ಟಿ, ಹೋಳಿಗೆ, ನೂರಾರು ಬಗೆಯ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಇದರಿಂದ ಅಲ್ಲಿನ ಮಹಿಳೆಯರಲ್ಲಿ ಹೊಸ ಚೈತನ್ಯ ಮೂಡಿದೆ. ಬಿದಿರು ಬಹುಪಯೋಗಿ ವಸ್ತು. ಅದರಿಂದ ನೂರಾರು ಬಗೆಯ ಜನೋಪಯೋಗಿ ವಸ್ತುಗಳನ್ನು ತಯಾರಿಸಲು ಸಾಧ್ಯವಿದೆ.

ಹುಟ್ಟುತ್ತ ಹುಲ್ಲಾದೆ ಬೆಳೆಯುತ್ತ ಮರವಾದೆ
ಸುಂದರ ಸ್ತ್ರೀಯರಿಗೆ ಕೇರುವ ಮೊರವಾದೆ ನೀನ್ಯಾರಿಗಲ್ಲದವಳು ಬಿದಿರಮ್ಮ
ತಾಯಿಕೇಳೆ ನೀನ್ಯಾರಿಗಲ್ಲದವಳು
ಅಂಬಿಗನಿಗೆ ಹುಟ್ಟು ಆದೆ ಮ್ಯಾದಗೆ ಬುಟ್ಟಿಯಾದೆ,
ಹತ್ತುವವನಿಗೆ ಏಣಿಯಾದೆ
ಸತ್ತವರಿಗೆ ಚಟ್ಟವಾದೆ ನೀನ್ಯಾರಿಗಲ್ಲದವಳು....

ಎಂಬ ಗೀತೆಯಲ್ಲಿ ಜನಪದರು ಹೇಳಿರುವಂತೆ ಬಿದಿರು ಹುಟ್ಟಿನಿಂದ ಸಾವಿನವರೆಗೆ ಮನುಷ್ಯನು ಬದುಕಿನ ಅವಿಭಾಜ್ಯ ಅಂಗವಾಗಿದೆ. ಇಂತಹ ಬಿದಿರನ್ನೇ ನಂಬಿ ಬದುಕಿರುವ ಅಲೆಮಾರಿ ಜನಾಂಗ ಮೇದರು. ಬುಟ್ಟಿ, ಮೊರ, ಚಾಪೆ ಮೊದಲಾದವನ್ನು ತಯಾರಿಸಿ ಜೀವನ ನಡೆಸುತ್ತಿದ್ದ ಇವರಿಗೆ ಪ್ಲಾಸ್ಟಿಕ್ ವಸ್ತುಗಳು ಬಂದ ಮೇಲೆ ಬದುಕು ದುಸ್ತರವಾಯಿತು. ಇದನ್ನು ಸವಾಲಾಗಿ ಸ್ವೀಕರಿಸಿದ ಹುಬ್ಬಳ್ಳಿಯ ಧಾರವಾಡ ಜಿಲ್ಲಾ ಗಿರಿಜನ ವಿವಿದೊದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಯಲ್ಲಪ್ಪ ಕಾಮಣ್ಣ ಮೊದಲಾದವರು ಈ ಜನಾಂಗಕ್ಕೆ ನೆಲೆ ಕಲ್ಪಿಸುವ ಯೋಜನೆ ರೂಪಿಸಿದ್ದಾರೆ. ಅದೇನೆಂದರೆ ಆಧುನಿಕ ಶೈಲಿಯ ಬಿದಿರು ಉತ್ಪನ್ನಗಳ ತಯಾರಿಕೆ. 3 ತಿಂಗಳು ಅವರಿಗೆ ಉಚಿತ ತರಬೇತಿ ನೀಡಿ ಅವರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದಾರೆ. 90 ಮಹಿಳೆಯರು ತರಬೇತಿ ಪಡೆದು ಉತ್ಪನ್ನದಲ್ಲಿ ತೊಡಗಿದ್ದಾರೆ. ಉದಾ : ಕೀಚೈನ್, ಓಲೆ, ಬಳೆ, ಲ್ಯಾಂಪ್, ಬ್ಯಾಸ್ಕೆಟ್ ಮೊದಲಾದವನ್ನು ಮಾರುಕಟ್ಟೆಗೆ ನೀಡಿ ಹಣಗಳಿಸಿ ಸ್ವಾವಲಂಬಿಗಳಾಗುತ್ತಿದ್ದಾರೆ.

ಹಿಂದೆ ಹಳ್ಳಿಯ ಮಹಿಳೆಯರು ಅನೇಕ ಕರಕುಶಲ ವಸ್ತುಗಳನ್ನು ಮನೆಯಲ್ಲಿ ತಯಾರಿಸುತ್ತಿದ್ದರು. ಕಸೂತಿ ಮಾಡುತ್ತಿದ್ದರು. ಅಂತಹ ನಮ್ಮ ಪಾರಂಪರಿಕ ಕಸುಬುಗಳನ್ನು ಇಂದು ಮರೆತಿದ್ದೇವೆ. ಈ ನಿಟ್ಟಿನಲ್ಲಿ ಇಂದು ಮಹಿಳೆ ಸ್ವತಂತ್ರವಾಗಿ ತನ್ನ ಬುದ್ಧಿಕೌಶಲ್ಯ ಬಳಸಿ ತಾನೇ ಉದ್ಯೋಗ ಕಂಡುಕೊಂಡು ಬೇರೆಯವರಿಗೂ ಕೆಲಸ ಕೊಡುವ ಅವಕಾಶಗಳು ಬೇಕಾದಷ್ಟಿವೆ. ಈ ನಿಟ್ಟಿನಲ್ಲಿ ದೇಶದ ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾದುದಾಗಿದೆ. ಅಂತೆಯೇ ಕುಟುಂಬ ನಿರ್ವಹಣೆ, ಪಾಲನೆ, ಪೋಷಣೆಯಲ್ಲಿಯೂ ಅವರೇ ಮೇಲುಗೈ ಆದರೆ ಇಂದಿಗೂ ಬಹುತೇಕ ಕುಟುಂಬಗಳಲ್ಲಿ ಮಹಿಳೆಯರು ಹಣಕಾಸು ವಹಿವಾಟಿನಿಂದ ದೂರವೇ ಉಳಿದಿದ್ದಾರೆ. ಅಷ್ಟೇ ಅಲ್ಲ ಪ್ರತಿ ಸಂದರ್ಭದಲ್ಲಿಯೂ ಹಣಕ್ಕಾಗಿ ಗಂಡಂದಿರ ಬಳಿ ಕೈಚಾಚುವಂಥ ಪರಿಸ್ಥಿತಿ ಇದ್ದೇ ಇದೆ. ಸಮಾಜದ ನಿರಂತರ ಪ್ರಕ್ರಿಯೆಗೆ ಮಹಿಳೆ ಮತ್ತು ಪುರುಷರಿಬ್ಬರೂ ಅಗತ್ಯ ಮತ್ತು ಅನಿವಾರ್ಯತೆ ಇರುವುದರಿಂದ ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು; ಒಂದೇ ರಥದ ಎರಡು ಗಾಲಿಗಳು. ರಥದ ಚಲನೆ ಏರುಪೇರಾದಾಗ ರಥ ಬಹಳ ಮುಂದೆ ಸಾಗದು. ಸ್ವಾತಂತ್ರ್ಯ, ಸ್ವಾಭಿಮಾನ, ಸಮಾನತೆ, ಸ್ವಾವಲಂಬನೆ, ಗಂಡಿನಷ್ಟೇ ಸರಿಸಮಾನವಾಗಿ ಹೆಣ್ಣಿಗೆ ದೊರೆಯುವಂತಾಗಬೇಕು.

ಹಿಂದಿಗಿಂತಲೂ ಇಂದಿನ ಮಹಿಳೆಯರು ಬುದ್ಧಿವಂತರಾಗಿ, ಸುಶಿಕ್ಷಿತರಾಗಿ, ಉದ್ಯೋಗಸ್ಥರೂ ಆಗಿದ್ದಾರೆ. ಉದ್ದಿಮೆಗಳನ್ನು ಸ್ಥಾಪಿಸಿ ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ. ಸಮಾಜದ ಎಲ್ಲಾ ಜವಾಬ್ದಾರಿಯುತ ಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೆ ಮತ್ತೊಂದು ಕಡೆ ಶೋಷಣೆಗೆ ಒಳಪಟ್ಟು ಅತ್ಯಾಚಾರ, ದೌರ್ಜನ್ಯ, ಕಿರುಕುಳದಂಥ ಸಂಕಷ್ಟಗಳನ್ನು ಕೌಟುಂಬಿಕವಾಗಿ, ಸಾಮಾಜಿಕವಾಗಿ ಅನುಭವಿಸುತ್ತಲೇ, ಎಲ್ಲವನ್ನು ಎದುರಿಸುತ್ತಲೇ ಮೇಲೆ ಬರಬೇಕಾದ ಪರಿಸ್ಥಿತಿಯೂ ಇದೆ. ಮೊದಲು ಮಹಿಳೆಯರು ಸನಾತನ ಧರ್ಮದಲ್ಲಿನ ಮೌಢ್ಯ ಅಂಧಶ್ರದ್ಧೆಯಿಂದ ಹೊರಬರಬೇಕಾಗಿದೆ. ಕುವೆಂಪು ಅವರು –

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು ?

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ?
ನಿನ್ನೆದೆಯ ದನಿಯೇ ಋಷಿ ! ಮನು ನಿನಗೆ ನೀನು !
ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,
ಅವರ ಶಾಸ್ತ್ರವು ಅವರ ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ
ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ !

ಎಂಬ ಮಾತುಗಳನ್ನು ನಾವು ಸದಾ ಮೆಲುಕು ಹಾಕುತ್ತಿರಬೇಕು. ಸಮಾನತೆಯ ಪರಿಸರ ನಿರ್ಮಿಸುವ ಸ್ವಾಭಿಮಾನಿ ಸ್ವಾವಲಂಬಿಯಾಗಿ ಗೌರವದಿಂದ ಬದುಕಲು ಪೂರಕವಾದ ಶಿಕ್ಷಣವ್ಯವಸ್ಥೆ ಬರಬೇಕು, ಅದನ್ನು ನಮ್ಮದಾಗಿಸಿಕೊಳ್ಳಬೇಕು ಮತ್ತು ಮಹಿಳೆ ಇದನ್ನು ಅರಿತು ಸ್ವಯಂಪ್ರೇರಣೆಯಿಂದ ಶಿಕ್ಷಿತಳಾಗಲು ಮುಂದಾಗುವುದೇ ನಿಜವಾದ ಪರಿಹಾರ. ಆಗಲೇ ಅವಳಿಗೆ ಸೂಕ್ತ ಸ್ಥಾನಮಾನ ಸಿಗಲು ಸಾಧ್ಯವಾಗುವುದು.

ಶಿಕ್ಷಣ ಮತ್ತು ಸಂಸ್ಕಾರ
ಬದುಕಿನ ಮೂಲಮಂತ್ರ
ಶಿಕ್ಷಣ ಎಂದಿಗೂ ಎಡವಲು ಬಿಡುವುದಿಲ್ಲ
ಸಂಸ್ಕಾರ ಕೆಡಲು ಬಿಡುವುದಿಲ್ಲ.

ಮಹಿಳಾ ಸಬಲೀಕರಣ, ಸ್ವಾತಂತ್ರ್ಯ ಸಮಾನತೆ, ಸ್ವಾವಲಂಬನೆಗಾಗಿ ಬೇರೇನನ್ನು ಮಾಡಬೇಕಿಲ್ಲ. ನಮ್ಮ ಸಮಾಜ ಹೆಣ್ಣನ್ನು ನೋಡುತ್ತಿರುವ, ಭಾವಿಸಿರುವ, ನಡೆಸಿಕೊಳ್ಳುತ್ತಿರುವ ನಡೆ–ನುಡಿಗಳಲ್ಲಿ ಬದಲಾವಣೆಗಳಾಗ ಬೇಕು. ಪರಸ್ಪರ ಗೌರವದ ಭಾವನೆ ಎಲ್ಲರಿಗೂ ಬೇಕು. ಹೆಣ್ಣಿನ ಅನುಭವ, ಕೌಶಲ್ಯತೆಯನ್ನು ಗೌರವಿಸುವ, ಪ್ರೋತ್ಸಾಹಿಸುವ ಸೂಕ್ತ ಅವಕಾಶಗಳನ್ನು ಹೊಂದಲು ಮುಕ್ತವಾದ ವಾತಾವರಣ ನಿರ್ಮಿಸಬೇಕು.

ಪ್ರತಿಯೊಬ್ಬ ವ್ಯಕ್ತಿಯ ಉಲ್ಲಾಸಕರ ಸಾರ್ಥಕ ಬದುಕಿಗೆ ಪ್ರೀತಿ, ನಂಬಿಕೆ ಎಷ್ಟು ಮುಖ್ಯವಾದ ಅಂಶಗಳೋ ಸ್ವಾವಲಂಬನೆಯೂ ಸಕಾರಾತ್ಮಕ ಗುಣವೂ ಕೂಡ ಬಹಳ ಮುಖ್ಯವಾದ ಅಂಶಗಳು. ಪ್ರತಿಯೊಬ್ಬರ ಜೀವನ ಬೇರೆ ಬೇರೆಯಾಗಿಯೇ ರೂಪುಗೊಂಡಿರುತ್ತದೆ. ಅದನ್ನು ಉತ್ತಮವಾಗಿಟುಟ್ಟಕೊಳ್ಳುವುದು ನಾವು ಹೇಗೆ ಬದುಕುತ್ತೇವೆ ಎಂಬುದರ ಮೇಲೆ ನಿಂತಿರುತ್ತದೆ. ಸ್ವಾವಲಂಬನೆ ಅದಕ್ಕೆ ತಳಪಾಯವಾಗಿರುತ್ತದೆ. ಅವಲಂಬನೆಯ ಜೀವನ ದೈಹಿಕವಾಗಿ, ಮಾನಸಿಕವಾಗಿ ನ್ಯೂನ್ಯತೆಗಳನ್ನು ಹೊಂದಿದವರಿಗೆ ಕೆಲವೊಂದು ಬಾರಿ ಅನಿವಾರ್ಯವಾಗಿರುತ್ತದೆ. ಆದರೆ ಅವರಲ್ಲೂ ಸ್ವಾವಲಂಬಿಯಾಗಿ ಬದುಕುವ ಆಸೆಗಳಿದ್ದೇ ಇರುತ್ತದೆ. ಕೆಲವೊಬ್ಬರು ಅದನ್ನು ಸಾಕಾರಗೊಳಿಸಿಕೊಳ್ಳುತ್ತಾರೆ. ಆದರೆ ಅವಲಂಬನೆ ನಮ್ಮ ಸ್ವಾರ್ಥಕ್ಕೆ ಉಪಯೋಗವಾಗಬಾರದು. ಅತ್ಯಗತ್ಯ ವಿಷಯಗಳಿಗೆ ಮಾತ್ರ ಮತ್ತೊಬ್ಬರ ಬಳಿ ನೆರವು ಪಡೆಯೋದನ್ನು ರೂಢಿಸಿಕೊಳ್ಳಬೇಕು.

'ಸ್ವಯಂ ಅವಲಂಬನೆ', 'ಸ್ವಾವಲಂಬನೆ' ಎಂದರೆ ನಮಗೆ ಸಾಧ್ಯವಿರುವ ಕೆಲಸಗಳನ್ನು ನಾವೇ ನಿರ್ವಹಿಸುವ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ. ಮಹಿಳೆಯರು ಸ್ವಾವಲಂಬಿಗಳಾಗುವುದೆಂದರೆ ತಮಗಿರುವ ಶಕ್ತಿ ಸಾಮರ್ಥ್ಯಗಳನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಗಟ್ಟಿಯಾಗುವುದು. ಅದರಲ್ಲೂ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುವುದರ ಬಗ್ಗೆ ನಿರಂತರವಾಗಿ ಚರ್ಚೆಗಳು ನಡೆಯುತ್ತಲೇ ಇವೆ. ಮಹಿಳೆಯ ಆರ್ಥಿಕ ಸ್ವಾವಲಂಬನೆ ಎನ್ನುವುದು ವಸ್ತುನಿಷ್ಠವಾದದ್ದು ಮತ್ತು ಒಬ್ಬೊಬ್ಬರಿಗೂ ಒಂದೊಂದು ರೀತಿ ಗ್ರಹಿಕೆಯಾಗಬಹುದು. ಉದ್ಯೋಗಸ್ಥ ಮಹಿಳೆಗೆ ತನ್ನ ಹಣಕಾಸು ನಿರ್ಧಾರವನ್ನು ಮಾಡುವುದು ಅಥವಾ ಆರ್ಥಿಕವಾಗಿ ಸುಸ್ಥಿರಳಾಗುವುದು ಎಂದಾಗಿರಬಹುದು. ಗೃಹಿಣಿಯರಿಗೆ ತಾನು ಬಯಸಿದಾಗ ಹಣವನ್ನು ಖರ್ಚು ಮಾಡುವುದು, ನಿರ್ಧಾರ ಕೈಗೊಳ್ಳುವಲ್ಲಿ ಸಮಾನವಾದ ಸ್ಥಾನಮಾನ ಎಂದಿರಬಹುದು. ಪ್ರಾಥಮಿಕ ಹಂತದಲ್ಲಿ ಮಹಿಳೆ ಆರ್ಥಿಕ ಸ್ವಾವಲಂಬನೆ ಪಡೆಯುವುದರಿಂದಾಗಿ ಹೆಚ್ಚು ಸುರಕ್ಷಿತ ಭಾವನೆ ತಳೆಯುತ್ತಾಳೆ ಮತ್ತು ತನ್ನ ಸಾಮಾಜಿಕ, ಆರ್ಥಿಕ, ಹಿನ್ನೆಲೆ ಏನೇ ಇದ್ದರೂ ಗೌರವ ಪಡೆಯುತ್ತಾಳೆ. ಆ ಮೂಲಕ ಆಕೆಯ ಕುಟುಂಬ, ಸಮಾಜ ಮತ್ತು ದೇಶದ ಮೇಲೂ ಪರಿಣಾಮ ಬೀರುತ್ತದೆ. ಆರ್ಥಿಕ ಸ್ವಾವಲಂಬನೆಯುಳ್ಳ ಮಹಿಳೆಯರು ಹೆಚ್ಚಾದಷ್ಟು ಸಮಾಜ ಪ್ರಗತಿದಾಯಕ ವಾಗಿರುತ್ತದೆ. ಆರ್ಥಿಕ ಸಬಲತೆಯಿಂದ ಅಡ್ಡಪರಿಣಾಮಗಳು ಇಲ್ಲವೆಂದಲ್ಲ, ಹೆಣ್ಣಾಗಲಿ, ಗಂಡಾಗಲಿ ಸ್ವೇಚ್ಛಾರಕ್ಕೆ ಎಡೆಮಾಡಿಕೊಡುವ ಸಾಧ್ಯತೆಗಳು ಇದ್ದೇ ಇರುತ್ತವೆ. ಆರೋಗ್ಯಕರ, ಸುರಕ್ಷಿತ ವಾತಾವರಣ ಉಂಟಾಗಿ ಕಡಿಮೆ ತಾರತಮ್ಯವನ್ನು ಹೊಂದುತ್ತಾರೆ. ಆ ಮೂಲಕ ನಮ್ಮ ಸಂಸ್ಕೃತಿಯಲ್ಲಿ ಸನಾತನ ಕಾಲದಿಂದಲೂ ಆಳವಾಗಿ ಬೇರೂರಿ ಹೋಗಿರುವ ಲಿಂಗ ತಾರತಮ್ಯವನ್ನು ಹಂತಹಂತವಾಗಿ ಕಡಿಮೆಗೊಳಿಸಲು ನೆರವಾಗುತ್ತದೆ. ಇದಕ್ಕೆ ಹಿನ್ನೆಲೆಯಾಗಿ ಮಹಿಳೆಯರಲ್ಲಿನ ಕೀಳರಿಮೆ, ಹಿಂಜರಿಕೆ, ಸಂಕುಚಿತ ಮನೋಭಾವವನ್ನು ದೂರಮಾಡಿಕೊಂಡಾಗ ಮಾತ್ರ ಸ್ವಾವಲಂಬಿಗಳಾಗಲು ಸಾಧ್ಯ.

ಮಹಿಳೆಯರು ತಮ್ಮ ಜೀವನದಾಗೆ ಸಹಬಾಳ್ವೆ ಶಿಸ್ತುಬದ್ಧ ಜೀವನದ ಜೊತೆಗೆ ಸ್ವಾವಲಂಬಿಗಳಾಗಿ ತಮ್ಮ ಬದುಕನ್ನು ಕಟ್ಟಿಕೊಂಡಾಗ ಮಾತ್ರ ಆತ್ಮವಿಶ್ವಾಸದಿಂದ ಬದುಕಲು ಸಾಧ್ಯ. ಅದಕ್ಕೆ ಆರ್ಥಿಕವಾಗಿ ಸಬಲರಾಗುವುದರೊಂದಿಗೆ ಶೈಕ್ಷಣಿಕವಾಗಿ, ಸಾಮಾಜಿಕ, ರಾಜಕೀಯವಾಗಿ ಸಮಾನತೆ ಸಾಧಿಸಲು ಮುಂದಾಗಬೇಕು. ಜೊತೆಗೆ ಆತ್ಮಾಭಿಮಾನವನ್ನು ಬೆಳೆಸಿಕೊಳ್ಳಬೇಕು. ಇದಾಗಬೇಕೆಂದರೆ ಅಸಹಾಯಕತೆ ಹಾಗೂ ಕೀಳರಿಮೆ ತೊರೆದು ವೃತ್ತಿಕೌಶಲ ಹೆಚ್ಚಿಸಿಕೊಳ್ಳಬೇಕು. ತಮಗಿರುವ ಹಕ್ಕುಗಳು ಹಾಗೂ ಕಾನೂನುಗಳನ್ನು ತಿಳಿದುಕೊಂಡು ಸಿಗುವ ಸೌಲಭ್ಯ ಪಡೆಯಲು ಸಂಘಟನಾತ್ಮಕವಾಗಿ ಮುಂದೆ ಬರಬೇಕು. ಒಗ್ಗಟ್ಟಿನಲ್ಲಿ ಬಲ ವಿದ್ದೆವಿರುತ್ತದೆ. ಏಕೆಂದರೆ

ಪರಿಶ್ರಮವಿದಲ್ಲದೆ ಯಶಸ್ಸನ್ನು
ಬಯಸುವುದು ಅಂದರೆ
ಬೀಜಗಳನ್ನು ಬಿತ್ತದೆ
ಫಲವನ್ನು ಬಯಸಿದಂತೆ

"ಸರಿಯಾದ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಕೌಶಲ್ಯ ಬೇಕು. ಅದೇ ವೇಳೆ ತೆಗೆದುಕೊಳ್ಳುವ ನಿರ್ಧಾರವನ್ನು ಸರಿದಾರಿಯಲ್ಲಿ ಪೂರೈಸುವುದು ಕೂಡ ನಿಜವಾದ ಕೌಶಲ್ಯ". ಏಕೆಂದರೆ "ಹೊರಗಿನ ಸವಾಲುಗಳನ್ನು ಗೆಲ್ಲುವುದಕ್ಕಿಂತ ನಮ್ಮೊಳಗಿರುವ ನ್ಯೂನ್ಯತೆಗಳನ್ನು ಗೆಲ್ಲುವುದು ಬಹಳ ಮುಖ್ಯ. ಅವಕಾಶಗಳಿಗಾಗಿ ನಾವು ಕಾಯುತ್ತಾ ಕುಳಿತುಕೊಳ್ಳುವುದಕ್ಕಿಂತ ನಾವೇ ಅವಕಾಶಗಳನ್ನು ಸೃಷ್ಟಿಮಾಡಿಕೊಳ್ಳುವ ನೈಪುಣ್ಯತೆ ಬೆಳೆಸಿಕೊಳ್ಳುವುದು ಇಂದಿನ ಸಂದರ್ಭದಲ್ಲಿ ಅತ್ಯಾವಶ್ಯಕ.

■■

ವಿದ್ಯಾ ಪ್ರಕಾಶನ®
ಜೆ.ಟಿ.ಮಠ ರೋಡ, ಗದಗ - 582101
e-mail: vidyaprakashana26@gmail.com
www.shikshansoudha.in

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆಯ್ದ ನವ್ಯ ಕಥೆಗಳಲ್ಲಿ ಅಸ್ತಿತ್ವವಾದಿ ನೆಲೆಗಳು

✍ ಲಕ್ಷ್ಮಿ ಎ. ಎಂ., ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಚಿತ್ರದುರ್ಗ.

ನವ್ಯ ಕಥೆಗಾರರೆಲ್ಲ ಬಹುತೇಕ ಮಧ್ಯಮ ವರ್ಗ ಕುಟುಂಬಗಳಿಂದ ಬಂದವರು. ಪಾಶ್ಚಿಮಾತ್ಯ ಚಿಂತನೆಗಳ ಪ್ರಭಾವಕ್ಕೊಳಗಾದವರು. ನವ್ಯ ಲೇಖಕರು ಬೌದ್ಧಿಕವಾಗಿ ತೀಕ್ಷ್ಣ ಸ್ವಭಾವದವರು, ತೀವ್ರ ಸಂವೇದನಾ ಶೀಲರು, ಅಂತರ್ಮುಖಿಗಳು. ಈ 'ಅಂತರ್‌ಮುಖತೆ'ಯೇ ಅಸ್ತಿತ್ವವಾದದ ಮೂಲತತ್ವಗಳಲ್ಲಿ ಒಂದು. ನವ್ಯಕಾಲ ಘಟ್ಟದ ಸಂದರ್ಭದ ನಗರೀಕರಣ, ಆಧುನಿಕತೆ, ಹಳೆ ಮೌಲ್ಯಗಳ ಕುಸಿತ, ಹೊಸ ಮೌಲ್ಯಗಳ ಶೋಧ ಮೊದಲಾದವು ಮಾನವನಲ್ಲಿ ಏಕಾಕೀತನ, ಅನಾಥತೆಗಳನ್ನು ಉಂಟುಮಾಡಿ, ತನ್ನಲ್ಲಿಯೇ ಸಂಘರ್ಷಕ್ಕೆ ಒಳಗು ಮಾಡಿ ತನ್ನ ಅಂತಸತ್ವವನ್ನು ಕಂಡುಕೊಳ್ಳಬೇಕಾದ ದ್ವಂದ್ವಕ್ಕೆ ಒಳಗಾಗಿದ್ದಾನೆ. ಈ ಅನಾಥತೆ, ಪರಕೀಯ ಭಾವನೆಗಳನ್ನು ನಿವಾರಿಸಿಕೊಳ್ಳದೆ ವ್ಯಕ್ತಿತ್ವದ ಶೋಧ ಸಾಧ್ಯವಿಲ್ಲ.

"ಮನುಷ್ಯನಿಗೆ ಅಸ್ತಿತ್ವ ಮೊದಲು, ತಾನು ಬದುಕಿದ್ದೇನೆ ಎಂಬ ಪ್ರಜ್ಞೆ, ಅಸ್ತಿತ್ವದ ಅರಿವು ಇರಬೇಕಾದದ್ದು ಅವಶ್ಯ. ತನ್ನನ್ನು ತಾನು ಮೊದಲು ತಿಳಿದುಕೊಳ್ಳಬೇಕು. ತಾನು ಮಾಡುವ ಆಯ್ಕೆಗಳ ಮೂಲ, ತನ್ನ ನಿರ್ಧಾರಗಳ ಮೂಲಕ, ತನ್ನ ವ್ಯಕ್ತಿತ್ವವನ್ನು, ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ". ಈ ಹಿನ್ನೆಲೆಯಲ್ಲಿ ನವ್ಯ ಕಾಲಘಟ್ಟದಲ್ಲಿ ಬರುವಆಯ್ದ ಕಥೆಗಳನ್ನು ಅಸ್ತಿತ್ವವಾದಿ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಅಣ್ಣಯ್ಯನ ಮಾನವಶಾಸ್ತ್ರ

ಅಣ್ಣಯ್ಯನು ಮೈಸೂರಿನಒಂದು ಮಧ್ಯಮ ವರ್ಗ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ ಬೆಳೆದವನು. ಉನ್ನತ ವ್ಯಾಸಂಗಕ್ಕೆಂದು ವಿದ್ಯಾರ್ಥಿ ವೇತನದ ಮೇಲೆ ಅಮೆರಿಕಾಗೆ ಹೋಗಿ ಚಿಕಾಗೋದಲ್ಲಿ ಮಾನವಶಾಸ್ತ್ರದ ಮೇಲೆ ಸಂಶೋಧನೆಕೈಗೊಂಡಿರುತ್ತಾನೆ. ಇವನು ಮೈಸೂರಿಲ್ಲಿದ್ದಾಗಓದಿದ್ದೆಲ್ಲ ಪಾಶ್ಚಾತ್ಯರ ಬಗ್ಗೆ. ಅದೇ ಪಾಶ್ಚಾತ್ಯದೇಶದಲ್ಲಿ ಇವನು ಸಂಶೋಧನೆಗಾಗಿ ಅಧ್ಯಯನ ಮಾಡುತ್ತಿರುವುದು ಹಿಂದೂ ಸಂಸ್ಕೃತಿ, ಸಂಪ್ರದಾಯಗಳ ಬಗ್ಗೆ. 1967–68 ರಲ್ಲಿ ಸ್ಟೀವನ್ ಫರ್ಗುಸನ್ ಮೈಸೂರಿಗೆ ಭೇಟಿ ನೀಡಿ ಸಂಗ್ರಹಿಸಿದ ಹಿಂದೂಧರ್ಮದ ವಿವರಗಳನ್ನೊಳಗೊಂಡ "Hinduism: Custom and Ritual"ಎಂಬ ಕೃತಿಯ ಮೂಲಕ ಮಾನವಶಾಸ್ತ್ರದ ಸಂಶೋಧನೆ ವಿದ್ಯಾರ್ಥಿಯಾಗಿದ್ದಾನೆ. ಈ ದ್ವಂದ್ವವೇ ಕತೆಯ ಕೇಂದ್ರ ಆಶಯವಾಗಿವೆ. ಎರಡು ದ್ವಂದ್ವ ಸಂಸ್ಕೃತಿಗಳ ತೊಡಕಿನಲ್ಲಿರುವ ಅಣ್ಣಯ್ಯನು ತನ್ನ ಅಂತರಂಗದ ಶೋಧನೆಗೆ ಒಳಗಾಗುತ್ತಾನೆ. "ಅಮೆರಿಕಕ್ಕೆ ಬರಬೇಕು ಆತ್ಮಜ್ಞಾನಕ್ಕೆ. ಮಹಾತ್ಮರು ಜೈಲಿನಲ್ಲಿ ಕೂತು ಕಂಬಿ ಮಧ್ಯ ಆತ್ಮಚರಿತ್ರೆ ಬರೆದ ಹಾಗೆ. ನೆಹರು ಇಂಗ್ಲಂಡಿಗೆ ಹೋಗಿ ಸ್ವದೇಶ ಕಂಡುಕೊಂಡ ಹಾಗೆ ದೂರದಲ್ಲಿದ್ದರೇ ಬೆಟ್ಟ"? ಎಂಬ ಅಂತರಂಗದ ಮಾತುಗಳ ಮೂಲಕ ಅಣ್ಣಯ್ಯನ ದ್ವಂದ್ವದ ಸ್ವರೂಪವನ್ನು ಕಂಡುಕೊಳ್ಳಬಹುದು.

ಜಿ. ಹೆಚ್. ನಾಯಕ ಅವರು ತಮ್ಮ ಕೃತಿ "ಕನ್ನಡ ಸಣ್ಣಕತೆಗಳು"ಯ ಪ್ರಸ್ತಾವನೆಯಲ್ಲಿ ಅಣ್ಣಯ್ಯನ ಮಾನವಶಾಸ್ತ್ರದ ಬಗ್ಗೆ ಹೀಗೆ ವಿಶ್ಲೇಷಿಸಿದ್ದಾರೆ. "ಈ ಕಥೆ ಸುಸಂಬದ್ಧ ನಿರೂಪಣೆಯ ಗತಿಯಲ್ಲಿಯೇ ಒಂದುಅಸಂಬದ್ಧ ಸ್ಥಿತಿಯನ್ನು ಸಮರ್ಥವಾಗಿ ಎದುರು ನಿಲ್ಲಿಸುತ್ತದೆ. ಅಣ್ಣಯ್ಯನ ಅಪ್ಪನ ಸಾವು ಹಿಂದೂ ಧರ್ಮದ ಸತ್ತ ಸ್ಥಿತಿಯನ್ನು ಧ್ವನಿಸಿದರೆ, ಆತನ ತಾಯಿಯ ವೈಧವ್ಯದ ಚಿತ್ರ ಆ ಸತ್ತದ್ದನ್ನು ನಂಬಿ ಬದುಕುತ್ತಿರುವ ವಾಸ್ತವ ಸ್ಥಿತಿಯ ಕ್ರೌರ್ಯವನ್ನೂ ಅದರ ಅಸಂಬದ್ಧ ಸ್ಥಿತಿಯನ್ನೂ ಧ್ವನಿಸುತ್ತದೆ. ಜೊತೆಗೆ ಆತನ ತಾಯಿಯ ವೈಧವ್ಯದ ಸ್ಥಿತಿಗೂ ಹಿಂದೂ ಧರ್ಮದ ಅರ್ಥ ಕಳೆದುಕೊಂಡ ಧರ್ಮಸೂತ್ರಗಳ ಅಧ್ಯಯನದಲ್ಲಿ ಶಿಕಾಗೋದಲ್ಲಿ ತೊಡಗಿರುವ ಅಣ್ಣಯ್ಯನ ಸ್ಥಿತಿಗೂ ಸಂಬಂಧ ಏರ್ಪಡಿಸುವ ಒಳದನಿಯೂ ಇರುವಂತಿದೆ. ಸುಂದರರಾಯನಿಗೆ ಹಿಂದೂ ಧರ್ಮ ಮಾರಾಟ ಸಾಮಗ್ರಿ. ಇವನ ವ್ಯಾಪಾರ ಬುದ್ದಿಗೆ ಅಣ್ಣಯ್ಯನು ರೋಸಿ ಹೋಗಿದ್ದಾನೆ. ಸುಂದರರಾಯನು ಹಿಂದೂ ಧರ್ಮವನ್ನು ಮಾರಿದರೆ, ಅಣ್ಣಯ್ಯ ಬೇರೊಂದು ಅರ್ಥದಲ್ಲಿ ಖರೀದಿಸುತ್ತಿದ್ದಾನೆ. ಚಿಕಾಗೋದಲ್ಲಿ ಧರ್ಮಶಾಸ್ತ್ರಗಳನ್ನು ಓದುತ್ತಿರುವ ಅಣ್ಣಯ್ಯನಿಗೆ ಎಂಜಲು, ಮಲ ಮೊದಲಾದವು ಮೈಲಿಗೆ ಎಂಬುದು ಫರ್ಗ್ಯುಸನ್ ನ ಎಂಜಲು ವ್ಯಾಖ್ಯಾನವೇಎಂಬುದು ಹೊಳೆಯುವುದಿಲ್ಲ."?

ಕತೆಯಲ್ಲಿನ ಮತ್ತೊಂದು ಮಹತ್ವದತಿರುವೆಂದರೆ ಅಣ್ಣಯ್ಯನಿಗೆ ತನ್ನ ತಂದೆಯ ಸಾವು, ತಾಯಿಯ ವೈಧವ್ಯ ಸ್ಥಿತಿ ತಿಳಿದು ಬರುವುದು ಫರ್ಗ್ಯುಸನ್‌ನ ಕೃತಿಯಿಂದಲೇ. ಅಣ್ಣಯ್ಯನು ಪಾಶ್ಚಾತ್ಯ ಮತ್ತು ಪೌರಾತ್ಯ ಸಂಸ್ಕೃತಿಗಳ ನಡುವೆ ತೊಳಲಾಡುವ ಮನಸ್ಸಿನ ದ್ವಂದ್ವವನ್ನು ಗುರುತಿಸಬಹುದು. ಅಲ್ಲದೆ ಅಣ್ಣಯ್ಯನು ಒಂದು ಮಗ್ಗುಲಲ್ಲಿ ತನ್ನದೇ ಸಂಸ್ಕೃತಿಗೆ ಅಪರಚಿತನಾಗಿಯೂ, ಮತ್ತೊಂದು ಕಡೆ ಅಮೆರಿಕಾದ ಸಂಸ್ಕೃತಿಗೆ ಪರಕೀಯನೂ ಆಗಿ ಉಳಿಯಬೇಕಾಗುತ್ತದೆ. ನಿಜವಾಗಿಯೂ ತನ್ನ ಅಸ್ತಿತ್ವ ಎಲ್ಲಿ ಎಂಬುದರ ಹುಡುಕಾಟದಲ್ಲಿದ್ದಾನೆ. ಒಂದು ರೀತಿ ಎಲ್ಲಿಯೂ ಬೇರೂ ಬಿಡದ ಬೇರು ರಹಿತ ಸ್ಥಿತಿ ಅಣ್ಣಯ್ಯನದು.

'ಅಣ್ಣಯ್ಯನ ಮಾನವಶಾಸ್ತ್ರ'ದ ಅಣ್ಣಯ್ಯನಿಗೂ, 'ಕ್ಲಿಪ್‌ಜಾಯಿಂಟ್'ನ ಕೇಶವನಿಗೂ ಸಾದೃಶ್ಯಗಳನ್ನು ಗುರುತಿಸಬಹುದಾಗಿದೆ. ಇಬ್ಬರೂ ಸಹ ಭಾರತೀಯ ಸಂಸ್ಕೃತಿಗೆ ಬೆನ್ನು ಮಾಡಿ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಬದಕಲು ಹೊರಟವರು. ತಮ್ಮ ಸಮಾಜದ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುತ್ತಾ, ಆಧುನಿಕತೆಯ ಹೊಸ ಮೌಲ್ಯಗಳ ಹುಡುಕಾಟ ಮಾಡಿದವರು. ತಮ್ಮನ್ನು ಎಲ್ಲಿ ಸ್ಥಾಪಿಸಿಕೊಳ್ಳಬೇಕು ಎಂಬ ಅಸ್ತಿತ್ವದ ಪ್ರಶ್ನೆ ಇಬ್ಬರಿಗೂ ಕಾಡಿರುವುದು ಗುರುತಿಸಬಹುದು. ಎ.ಕೆ. ರಾಮಾನುಜನರು ಈ ದ್ವಂದ್ವ ಸಂಸ್ಕೃತಿಗಳಲ್ಲಿ ಬಾಳಿದವರು. ಹಾಗಾಗಿ ದ್ವಂದ್ವ ಸಂಸ್ಕೃತಿಯ ಅರಿವು ಕ್ರಿಯಾಶೀಲವಾಗಿ ಪ್ರಕಟಗೊಂಡಿರುವುದನ್ನು ಈ ಕತೆಯಲ್ಲಿ ಗುರುತಿಸಬಹುದು.

ಕ್ಲಿಪ್ ಜಾಯಿಂಟ್

ಸಾಂಸ್ಕೃತಿಕ ಭಿನ್ನತೆಗಳನ್ನು, ಭಿನ್ನ ಜೀವನ ಕ್ರಮಗಳನ್ನು, ತೋರಿಸುವ ಹಲವು ಸಣ್ಣಕಥೆಗಳಲ್ಲಿ ಅನಂತ ಮೂರ್ತಿಯವರ 'ಕ್ಲಿಪ್ ಜಾಯಿಂಟ್' ಕಥೆಗೆ ಮಹತ್ವದ ಸ್ಥಾನವಿದೆ. ಇಲ್ಲಿ ಪರಸ್ಪರ ವಿರುದ್ಧವಾಗಿರುವ ಎರಡು ಜೀವನ ಕ್ರಮಗಳನ್ನು, ಪಾಶ್ಚಾತ್ಯ ಮತ್ತು ಪೌರಾತ್ಯ ಸಂಸ್ಕೃತಿಗಳನ್ನು ಎದುರು ಬದುರಾಗಿಸುವುದರ ಮೂಲಕ ಯಾವುದು ಹೆಚ್ಚು ಅರ್ಥಪೂರ್ಣವಾದದ್ದು ಎಂಬುದರ ಶೋಧಿಸುವಿಕೆ ಕಂಡುಬರುತ್ತದೆ.

ತನಗೆ ಇಚ್ಛಿಸಿದ ಹಾಗೇ ಜೀವಿಸುವ ಹಾಗೂ ಬಯಸಿದ ಅನುಭವಗಳನ್ನು ಪಡೆಯಲು ಇರುವ ಅಡೆತಡೆಗಳಿಂದ ಅತೃಪ್ತವಾಗಿರುವ ಕೇಶವನಿಗೆ 'ಸಂಪ್ರದಾಯ ಭಾರತೀಯ ಸಮಾಜ' ಆಪ್ಯಾಯಮಾನವಾಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಂಡುಬರುವುದಿಲ್ಲ. ಕೇಶವನು ತಪ್ತ ಮನಸ್ಸಿನ ಯುವಕರ ಪ್ರತಿನಿಧಿಯಾಗಿ ಕಾಣಬರುತ್ತಾನೆ. ವಯಸ್ಸು 32 ಆದರೂ ಇನ್ನೂ ತನಗೆ ಮದುವೆಯಾಗದ, ತನ್ನ 4 ಜನ ಮದುವೆಯಾಗದ ತಂಗಿಯರು, ಇಬ್ಬರು ಸಹೋದರರು ಹಾಗೂ ತಾಯಿಯನ್ನು ಸಾಕುವ 'ದೊಡ್ಡಕುಟುಂಬ'ದ ಜವಾಬ್ದಾರಿ ಹೊತ್ತಿರುವನಾಗಿ, ವೃತ್ತಿಯಲ್ಲಿಉಪನ್ಯಾಸಕನಾಗಿ ಕಂಡುಬರುವ ಕೇಶವನಿಗೆ ಭಾರತೀಯ ಸಮಾಜದಲ್ಲಿ ತನ್ನಿಚ್ಛೆಯಿಂತೆ ಬಾಳಲು ಸಾಧ್ಯವಿಲ್ಲ ಎಂಬುದನ್ನು ಅನುಭವದ ಮೂಲಕ ಕಂಡುಕೊಂಡಿರುವ ಸತ್ಯವಾಗಿದೆ. ಅವನಿಗೆ ಯಾವುದರಲ್ಲೂ ತೃಪ್ತಿಯಿಲ್ಲ. ಇಚ್ಛಿಸಿದ ಅನುಭವಗಳ ಶೋಧನೆಗೆ ಭಾರತೀಯ ಸಮಾಜದಿಂದ ಇಂಗ್ಲೆಂಡಿಗೆ ಬಂದಿದ್ದಾನೆ. ಎರಡು ವಿಭಿನ್ನ ಸಂಸ್ಕೃತಿಗಳಲ್ಲಿ ತನ್ನ ಅಸ್ತಿತ್ವದ ಹುಡುಕಾಟ ಮಾಡುತ್ತಿದ್ದಾನೆ. 'ಭೂತ'ದಿಂದ ತಪ್ಪಿಸಿಕೊಂಡು 'ವರ್ತಮಾನ'ದಲ್ಲಿ ಬದುಕುತ್ತಿದ್ದರೂ ಅವನು ತನ್ನ 'ಭೂತ'ದಿಂದ ಬಿಡುಗಡೆ ಹೊಂದಲಾರ.

ಇಂಗ್ಲೆಂಡಿನಲ್ಲಿಯೇ ಹುಟ್ಟಿ ಬೆಳೆದ ಸ್ಟುವರ್ಟ್‌ನು ಭಾರತೀಯ ಸಂಸ್ಕೃತಿಯನ್ನು ಪ್ರೀತಿಸುವವ. ಜೀವನಕ್ಕೊಂದು ಉದ್ದೇಶವಿರಬೇಕು ಎಂದು ಸದಾ ಬಯಸುವವ,. ಸ್ಟುವರ್ಟ್‌ನೇ ಹೇಳುವ ಪ್ರಕಾರ "ಜೀವನದಲ್ಲಿ ತಿಕ್ಕಾಟ ಬೇಕು, ಸಲೀಸಾಗಿ ಜಾರಿ ಬಿಡೋದಲ್ಲ. Oh ! I am bore'd terribly bored ? ಇಂಗ್ಲೆಂಡಿನಲ್ಲಿ ಜೀವವಿಲ್ಲ – ಈ ಸುಖಿ ಸಮಾಜದಲ್ಲಿಜೀವನಕ್ಕೊಂದುಉದ್ದೇಶ ಇಲ್ಲ" ? ಎಂಬ ಮಾತುಗಳ ಮೂಲಕ ಕೇಶವನು ಬಯಸುತ್ತಿರುವ ಹಾಗೂ ತಾನು ಪ್ರಸ್ತುತ ಅನುಭವಿಸುತ್ತಿರುವ "ಸುಖ" ದ ಬಗ್ಗೆ ಸ್ಟುವರ್ಟ್ ಪ್ರತಿಕ್ರಿಯಿಸುತ್ತಾನೆ. ಕೇಶವನಿಗೆ ಯಾವುದು ಆಕರ್ಷಕವಾಗಿ ಕಾಣುತ್ತಿದೆಯೋ ಸ್ಟುವರ್ಟ್‌ನಿಗೆ ಅದು ನಿಸ್ಸಾರವಾಗಿ ಕಾಣುತ್ತಿದೆ. ಹೊಸ ಅನುಭವಗಳ ಶೋಧನೆಗೆ ಭಾರತೀಯ ಸಮಾಜದಿಂದ ಕಾಲ್ಕಿತ್ತಿರುವ ಕೇಶವನಿಗೆ ಪಾಶ್ಚಾತ್ಯ ಸಮಾಜದಲ್ಲಿಯೂ ಇಚ್ಛಿಸಿದ ಅನುಭವಗಳನ್ನು ಪಡೆಯಲು, ತನ್ನ ಅಸ್ತಿತ್ವವನ್ನು ಕಂಡುಕೊಳ್ಳಲು ಹೆಣಗಾಡುತ್ತಾನೆ. ಇದಕ್ಕೆ ಕಾರಣತನ್ನಲ್ಲಿರುವ ದ್ವಂದ್ವಗಳನ್ನು ತಾನುಅರಿಯುವಲ್ಲಿ ಸೋಲುವುದು. ವಿಮರ್ಶಕರ ಪ್ರಕಾರ "ಕೇಶವನು ತನ್ನ ಭೂತವನ್ನು ನಿವಾರಿಸಿಕೊಳ್ಳದೇ ತೊಳಲಾಡುತ್ತಾನೆ"?

ತನ್ನ "ವ್ಯಕ್ತಿತ್ವದಲ್ಲಿರುವ ದ್ವಂದ್ವಗಳನ್ನು ಬಿಡಿಸಿಕೊಳ್ಳಲಾರದೆ ಹೊಸ ಅನುಭವಗಳನ್ನು ಹುಡುಕಿಕೊಂಡು ಬೇರೊಂದು ದೇಶಕ್ಕೆ ಹೋಗಿ ವಿಫಲಗೊಳ್ಳುವುದಕ್ಕೆ ಕಾರಣ ಪರಂಪರೆಯನ್ನು ಗುರುತಿಸುವ ವಿಮರ್ಶಕರು"? ಕೇಶವನು ದೈಹಿಕವಾಗಿ ದೂರದ ಊರಿಗೆ ಹೋಗಿದ್ದರೂ ಅವನು ಮಾನಸಿಕವಾಗಿ ತನ್ನ ಭೂತವನ್ನು ನಿವಾರಣೆ ಮಾಡಿಕೊಳ್ಳದೇ ತೊಳಲಾಡುತ್ತಾನೆ. ಮದುವೆಯಾಗದಿರುವ ತಂಗಿಯರು, ಕೆಲಸವಿಲ್ಲದ ತಮ್ಮಂದಿರು, ದುಡಿದು ತಾನೊಬ್ಬನೇ ಮನೆಯನ್ನು ನಿಭಾಯಿಸುತ್ತಿದ್ದೇನೆ ಎಂಬ ಅಹಂ, ತಮಗೆ ಸರಿ ಎನಿಸಿದ ಬದುಕಿನ ಹಾದಿಯನ್ನು ಹಿಡಿದ ಕಕ್ಕಂದಿರು, ಹೀಗೆ ಅವನ ಭೂತ ಪ್ರಪಂಚವೆಲ್ಲಾ ಅವನ ಬೆನ್ನ ಹಿಂದೆಯೇಇದೆ. ಅದರಿಂದ ಹೊರಬರಲಾರದವನಾಗಿದ್ದಾನೆ. ಕೇಶವನೇ ಹೇಳುವಂತೆ "ಭಾರತದ ಅಸಂಖ್ಯಾತ ಯುವಕರಂತೆ ನನಗೆ ಬುಡ ಭದ್ರವಿಲ್ಲ"? ಎನ್ನುವ ಮಾತಿನಲ್ಲಿ ಇಂದಿನ ಯುವಕರ ಮಾನಸಿಕ ಹೊಯ್ದಾಟವನ್ನು ಗುರುತಿಸಬಹುದು. ಕೇಶವನು ಕೊನೆಗೆ ಕಂಡುಕೊಳ್ಳುವುದು "ಪ್ರಾಯಶಃ ಯಾವ ಸಮಾಜದ ಸ್ಥಿತಿಯಲ್ಲೂ ಮನುಷ್ಯನಿಗೆ ಸುಖವಿಲ್ಲ, ಚಡಪಡಿಸುತ್ತಿರುವುದು ಮನುಷ್ಯನ ಅನಾದಿ ಅನಂತ ಅವಶ್ಯಕತೆಯಿರಬಹುದು" ಎಂಬ ಮಾತುಗಳಲ್ಲಿ ಕೇಶವ ಮತ್ತು ಸ್ಟುವರ್ಟ್ ಇವರಿಬ್ಬರಲ್ಲಿಯೂ ಒಂದು ರೀತಿಯ "ಆಧ್ಯಾತ್ಮಿಕ ಚಡಪಡಿಕೆ ಕಂಡು ಬರುವುದು" ? ಎಂದು ವಿಮರ್ಶಕರು ಗುರುತಿಸುತ್ತಾರೆ

'ಕ್ಲಿಪ್‌ಜಾಯಿಂಟ್ನ'ನ ಕೇಶವ ಮತ್ತು' ಅಣ್ಣಯ್ಯನ ಮಾನವಶಾಸ್ತ್ರ'ದ ಅಣ್ಣಯ್ಯ ಇಬ್ಬರೂ ವರ್ತಮಾನದಲ್ಲಿದ್ದರೂ ಸಹಭೂತದಿಂದ ಬಿಡುಗಡೆ ಹೊಂದಲಾರದ ಸ್ಥಿತಿಯಲ್ಲಿದ್ದಾರೆ. ಅಣ್ಣಯ್ಯನು 10,000 ಮೈಲಿದೂರದ ಚಿಕಾಗೋವಿನಲ್ಲಿದ್ದರೂ, ಅವನ ಚಿಂತನೆ ಹರಿಯುವುದು ಮೈಸೂರಿಗೆ, ಕೇಶವನೂ ಸಹ ಹೊಸ ಅನುಭವಗಳ ಹುಡುಕಿಕೊಂಡು ಇಂಗ್ಲೆಂಡಿಗೆ ಬಂದರೂಸಹಭಾರತೀಯ ಸಮಾಜದ ನೆನಪುಗಳಿಂದ ಅವನು ಬಿಡುಗಡೆಗೊಳ್ಳಲಾರ. ಇಬ್ಬರೂತಪ್ತರೇ. ತಮ್ಮಅಂತರಂಗದ ದ್ವಂದ್ವಗಳನ್ನು ನಿವಾರಿಸಿಕೊಳ್ಳದೇ ಎಲ್ಲಿಯೂ ಅಸ್ತಿತ್ವವನ್ನು ಕಂಡುಕೊಳ್ಳಲಾರರು. ಒಂದು ರೀತಿಯಲ್ಲಿ ಬೇರು ಬಿಡದ ಬೇರು ರಹಿತ ಸ್ಥಿತಿ ಅವರದುಎನ್ನಬಹುದು.

ಕ್ಷಿತಿಜ

'ಕ್ಷಿತಿಜ' ಶಾಂತಿನಾಥ ದೇಸಾಯಿಯವರ ಯಶಸ್ವಿ ಕಥೆಗಳಲ್ಲಿ ಒಂದು. ಪಾಶ್ಚಿಮಾತ್ಯ ಮತ್ತು ಪೌರಾತ್ಯ ದೇಶಗಳ ಎರಡು ವಿಭಿನ್ನ ಸಂಸ್ಕೃತಿಗಳ ಮುಖಾಮುಖಿಯೊಂದಿಗೆ ಮಂದಾಕಿನಿಯ ವ್ಯಕ್ತಿತ್ವದಲ್ಲಿ ಉಂಟಾಗುವ ಬದಲಾವಣೆಗಳನ್ನು ಅಸ್ತಿತ್ವವಾದಿ ನೆಲೆಯಲ್ಲಿ ಕಥೆಯಲ್ಲಿ ಶಾಂತಿನಾಥ ದೇಸಾಯಿಯವರು ಚಿತ್ರಿಸಿರುತ್ತಾರೆ.

"ಮಂದಾಕಿನಿಯ ವಯಸ್ಸು 28–29 ಆಗಿದ್ದರೂ ಸಹ 25 ಎಂದೇ ಹೇಳುವ ಮಂದಾಕಿನಿಗೆ ತಾನು ನಿಜಕ್ಕೂ ಮುದುಕಿಯಾಗಿದ್ದಾಳೆಂದೇ ಆಕೆಯ ಭಾವನೆ. ತನ್ನ ಇಡೀ ಜೀವನ ಕಲಿಯುವುದರಲ್ಲಿ, ನಂತರ ನೌಕರಿಯಲ್ಲಿ, ತಾಯಿಯನ್ನೂ, ತಮ್ಮಂದಿರನ್ನು ನೋಡಿಕೊಳ್ಳುವುದರಲ್ಲಿ, ಎಲ್ಲ ವೆಚ್ಚವಾಗಿ ಹೋಯಿತಷ್ಟೇ !? ಮಂದಾಕಿನಿಯು ಮಧ್ಯಮ ಕುಟುಂಬದಿಂದ ಬಂದ ಹೆಣ್ಣು ಮಗಳಾಗಿದ್ದು, ಆಕೆಗೆ ತನ್ನ ಸಮಸ್ಯೆಗಳ ಅರಿವುಇದೆ. ತನ್ನ ಮೇಲಿನ ಕೌಟುಂಬಿಕ ಜವಾಬ್ದಾರಿಗಳ ಹೊರೆಯಿಂದ ತನ್ನ ವೈಯಕ್ತಿಕ ಬದುಕನ್ನು ತ್ಯಾಗ ಮಾಡುವ ನಿರ್ಧಾರ ತೆಗೆದುಕೊಂಡವಳು. ತನ್ನಹಡಗಿನ ಪ್ರಯಾಣದಲ್ಲಿ ಆಕೆಯ ಪರಿಚಯಕ್ಕೆ ಬರುವ ಹಲವು ವ್ಯಕ್ತಿಗಳು "ಡಾ. ಮುಖರ್ಜಿ, ಹ್ಯಾರಿಮೆಕಾರ್ಥಿ, ಪಾಲ್‌ಲೆಗ್ವಿ" ಇವರ ಮೂಲಕ ಮಂದಾಕಿನಿಯು ತನ್ನ ಅಸ್ತಿತ್ವಕ್ಕೆ ಮುಖಾಮುಖಿಯಾಗುತ್ತಾಳೆ.

ಕಥೆಯ ಆರಂಭದಲ್ಲಿ ಬರುವ "ಬಿ ಡೆಕ್ಕಿನ ಮೇಲೆ ನಿಂತು ಮಂದಾಕಿನಿ ಸಮುದ್ರದ ತೆರೆಗಳನ್ನು, ಇದ್ದಲ್ಲಿಯೇ ಇದ್ದಂತೆ ಕಾಣುವ ಕ್ಷಿತಿಜವನ್ನುಎಷ್ಟೋ ಹೊತ್ತು ನೋಡುತ್ತ ನಿಂತಿದ್ದಾಳೆ" ಎಂಬಲ್ಲಿ ಬರುವ 'ಕ್ಷಿತಿಜ'ವು ಇದ್ದಲ್ಲಿಯೇ ಇರುವ ಅಥವಾ ಇನ್ನೇನು ಸಿಕ್ಕೀತೂ ಎನ್ನುವಷ್ಟರಲ್ಲಿಯೇ ಮತ್ತೆ ದೂರ ಸರಿಯುವುದರ ಸಂಕೇತವಾಗಿಬಂದರೆ, ಸಮುದ್ರದ ತೆರೆಗಳು ಚಲನೆಯ ಸಂಕೇತವಾಗಿ ? ಬಂದಿದೆ. ಕುಟುಂಬದ ಜವಾಬ್ದಾರಿಯನ್ನು ಹೆಗಲೇರಿಸಿಕೊಂಡ ಮಂದಾಕಿನಿಯು ತನ್ನ ವೈಯಕ್ತಿಕ ಸುಖವನ್ನು ತ್ಯಜಿಸಿರುವುದು ಆಕೆಯ ಸ್ಥಿತಿಯ ಸಂಕೇತವಾದರೆ, ಸ್ಕಾಲರ್ ಶಿಪ್ ಪಡೆದು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹಡಗು ಪ್ರಯಾಣ ಬೆಳೆಸುವುದು ಚಲನೆಯ ಸೂಚಕವಾಗಿ ಕಥೆಯಲ್ಲಿ ಗುರುತಿಸಬಹುದು. ಭಾರತೀಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ಮುಖಾಮುಖಿಯಾದಾಗ ಆಕೆ ಆಘಾತಕ್ಕೊಳಗಾಗುವುದನ್ನು ಗುರುತಿಸಬಹುದು. ತನ್ನ ಭೂತವನ್ನು ಬಿಟ್ಟು ಆಕೆ ವರ್ತಮಾನದಲ್ಲಿದ್ದರೂ ಸಹ ತನ್ನ ವರ್ತಮಾನವನ್ನು ಸುಖಿಸಲಾಗದೇ ತನ್ನಲ್ಲಿ ಅಸ್ತಿತ್ವದ ಘರ್ಷಣೆಯನ್ನು ಹೊಂದುತ್ತಾಳೆ.

ಎರಡು ದಿನಗಳ ಪ್ರಯಾಣದಲ್ಲಿ ಮಂದಾಕಿನಿಯನ್ನು ಸೂಕ್ಷ್ಮವಾಗಿ ಗಮನಿಸಿರುವ ಮೆಕಾರ್ಥಿಯು ಮಂದಾಕಿನಿಯನ್ನು ಕುರಿತು ಹೇಳುವ "ಇಂಡಿಯನ್ನರಲ್ಲಿ ಬಹಳ ಜನರಿಗೆ ಜೀವನ ಉಪಭೋಗಿಸುವುದೇ ಗೊತ್ತಿಲ್ಲವೆಂದು ಕಾಣಿಸುತ್ತದೆ. ಸಂಕೋಚ, ನಾಚಿಕೆ, ಅಧೈರ್ಯ, ಮೈಚಳಿ ಬಿಟ್ಟು ಆಡುವುದು, ನಗುವುದು, ನಲಿಯುವುದು ಗೊತ್ತೇ ಇಲ್ಲವೇನೋ ಇವರಿಗೆ" ಮೂಲಕ ಆಕೆಯನ್ನು ಹೊಸ ಬದುಕಿನ ಕ್ರಮಕ್ಕೆ ಒಡ್ಡಲು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರಯತ್ನಿಸಿದರೂ, ಅದು ಯಶಸ್ವಿಯಾಗುವುದಿಲ್ಲ. "ನೋಡಿ ನಾನು ಇಂಡಿಯನ್ ಹೆಣ್ಣು, ಹಿಂದೂ ಹೆಂಗಸು. ನಾವು ಈಗ ತಾನೇಅಡಿಗೆ ಮನೆಯಿಂದ ಸ್ವಲ್ಪ ಹೊರಗೆ ಬಂದಿದ್ದೇವೆ. ಇದೆಲ್ಲ ನಮಗೆ ಒಂದು ಹೊಸ ವಿಶ್ವ" ಎಂಬ ಮಾತುಗಳ ಮೂಲಕ ತನ್ನ ಸಂಪ್ರದಾಯ ಮೌಲ್ಯಗಳಿಗೆ ಜೋತು ಬಿದ್ದವಳಾಗಿ ಕಾಣಿಸುತ್ತಾಳೆ. ಆದರೆ ಮಂದಾಕಿನಿಯ ಬದುಕು ನಿಜವಾಗಿ ಅರಳಲು ಪ್ರಾರಂಭವಾಗುವುದು ಪ್ಯಾರಿಸ್ ನ 'ಪಾಲ್‌ಲೆಗ್ವಿ'ಯ ಪರಿಚಯವಾದ ನಂತರವೇ. ಭಾರತದ ಬಗ್ಗೆ ಲೆಗ್ವಿಗಿರುವ ಅಭಿಮಾನ, ಅವನ ಪ್ರೀತಿಯ ಮಾತುಗಳು, 'ಗಾಲಾರಾತ್ರಿ'ಯ ದಿನ ಲೆಗ್ವಿ ಮಾಡಿದ ಕಾಳಜಿ, ಇವೆಲ್ಲವೂ ನಿಧಾನವಾಗಿ ಮಂದಾಕಿನಿಯನ್ನು ಲೆಗ್ವಿಯ ಪ್ರೀತಿಯತ್ತ ವಾಲಿಸುತ್ತವೆ. ಆದಾಗ್ಯೂ ಆ ಹೊಸ ಅನುಭವಕ್ಕೆ ತನ್ನನ್ನು ಮುಕ್ತವಾಗಿ ತೆರೆದುಕೊಳ್ಳುವುದು ಮಂದಾಕಿನಿಗೆ ಸಾಧ್ಯವಾಗುವುದೇ ಇಲ್ಲ. ಈ ಬಗ್ಗೆಇದ್ದ ಅಳುಕು "ಅವನ ರೇಶಿಮೆ ತುಟಿಗಳಿಗೆ ಅವಳು ಕೊಟ್ಟದ್ದು ಬರಿ ಕಂದಿದಗಲ್ಲ, ಅವನ ತೋಳುಗಳಿಗೆ ಕೊಟ್ಟದ್ದು ಆಕೆಯ ಪಶ್ಚಾತ್ತಾಪದ ಮಾತುಗಳ ಮೂಲಕ ತಿಳಿಯಬಹುದು. ಹಾಗಾಗಿ ಇಂಗ್ಲೆಂಡಿಗೆ ಹೋಗಿ ಅಲ್ಲಿರಲು ತಾನು ಅಯೋಗ್ಯಳೆಂಬ ಭಾವನೆ ಅವಳಲ್ಲಿ ಕಾಡಿತು. ದೂರ ಸರಿದು ಹೋಗುವ ಕ್ಷಿತಿಜದಂತೆ ಮಂದಾಕಿನಿಯ ಬಯಕೆಗಳೂ ಸಹ ದೂರ ಸರಿಯುತ್ತಾ ನಿರಾಶೆಯಾಗಿ ಪರಿಣಮಿಸುವುದನ್ನು ಕಥೆಯು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಶ್ರಾದ್ಧ

ರಾಘವ ಟಿ.ಜಿ. ಅವರು ಕತೆಗಳನ್ನು ಬರೆಯತೊಡಗಿದ್ದು ಹಳೆಯ ಮೌಲ್ಯಗಳಲ್ಲಿ ನಂಬಿಕೆ ಹೋಗಿ ಹೊಸ ಮೌಲ್ಯಗಳ ಹುಡುಕಾಟದಲ್ಲಿದ್ದಂತಹ ಘಟ್ಟದಲ್ಲಿ. ಇವರ 'ಶ್ರಾದ್ಧ'ಕತೆ ಅಸ್ತಿತ್ವವಾದಿ ನೆಲೆಯಲ್ಲಿ ಮಹತ್ವದ್ದಾಗಿದೆ. ತನ್ನ "ಮನೋಗತವನ್ನು ಇನ್ನೊಬ್ಬನಿಗೆ ಮುಟ್ಟಿಸಲಾರದೆ, ಸ್ವಗತದಲ್ಲಿ ನಡೆಯುವ ದ್ವಂದ್ವದ ನಾಟಕ ಇದರ ಕಥಾವಸ್ತು. ಕಥಾನಾಯಕನಿಗೆ ತಂದೆಯ ಮರಣದನಂತರ ತಂದೆ ಬಗ್ಗೆ ಮನಸ್ಸಿನಲ್ಲಿ ಉಳಿದಿರುವುದು ಕಹಿನೆನಪುಗಳು ಮಾತ್ರ".

ಶ್ರಾದ್ಧದಲ್ಲಿ ನಂಬಿಕೆ ಇರದ ನಾಯಕನು ಒಂದು ಕಡೆಯಾದರೆ, ಶ್ರಾದ್ಧದಲ್ಲಿ ತುಂಬಾ ಶ್ರದ್ಧೆಯಿಂದ ಭಾಗವಹಿಸಿರುವವರ ಕುಟುಂಬದ ಸದಸ್ಯರ ಗುಂಪು ಒಂದುಕಡೆ. ನಾಯಕನು ಮಾತ್ರ ಈ ಆಚರಣೆಗಳಿಂದ ಹೊರಗುಳಿಯುತ್ತಾನೆ. ಆದಾಗ್ಯೂ ತನ್ನ ಮನಸ್ಸಿನ ಸ್ತರದಲ್ಲಿ ಹಲವಾರು ತಿಕ್ಕಾಟಗಳಿಗೆ ಒಳಗಾಗುತ್ತಾನೆ. ತನ್ನ ಅಸ್ತಿತ್ವ ಮೊದಲು ಎಂದು ಹೇಳುವ ಅಸ್ತಿತ್ವವಾದಲ್ಲಿ ಯಾವುದೋ ನಂಬಿಕೆ, ಕುರುಡು ಆಚರಣೆಗೆ ಒಳಗಾಗಿ ಬದುಕುವುದು ಒಂದು ರೀತಿಯ ತನ್ನ ಅಸ್ತಿತ್ವವನ್ನು ಮರೆತಂತೆಯೇ ಸರಿ. ತನ್ನ ಅಸ್ತಿತ್ವದ ಬಗ್ಗೆ ಶೋಧಿಸಿಕೊಳ್ಳುವ ನಾಯಕನಿಗೆ ಹಲವಾರು ತೊಡಕುಗಳಿವೆ. ಅವುಗಳಿಂದ ಹೀಗೆ ಶೋಧಿಸಿಕೊಳ್ಳುವ ಸಂದರ್ಭದಲ್ಲಿ ಅವನಿಗೆ ಎದುರಾಗುವ ಸ್ಥಿತಿಗಳನ್ನು ಕಥೆಯು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಕಥೆಯ ಕೊನೆಯಲ್ಲಿ ನಾಯಕನಿಗೆ ಬರುವ ಕನಸಿನಲ್ಲಿ ಕಂಡು ಬರುವ ಶಿಶ್ನದ ರೂಪ ಅವನಿಗೆ ಪಾಪ ಪ್ರಜ್ಞೆಯ ಸಂಕೇತವಾಗಿಯೂ, ಭೂತ ಮತ್ತು ಭವದಿಂದ ಬಿಡುಗಡೆ ಹೊಂದಿದ ಸಂಕೇತವಾಗಿಯೂ ಕಂಡು ಬಂದಿದೆ.

'ಕ್ಷಿತಿಜ'ದ ಮಂದಾಕಿನಿ, 'ಅಣ್ಣಯ್ಯನ ಮಾನವಶಾಸ್ತ್ರ'ದ ಅಣ್ಣಯ್ಯನು, 'ಕ್ಲಿಪ್‌ಜಾಯಿಂಟ್'ನ ಕೇಶವ – ಈ ಮೂವರು ಎರಡು ವಿಭಿನ್ನ ಸಂಸ್ಕೃತಿಗಳ ನಡುವೆ ಇದ್ದು ತಮ್ಮ ಅಸ್ತಿತ್ವದ ಹುಡುಕಾಟ ಮಾಡಿದರೆ, 'ಶ್ರಾದ್ಧ'ದಲ್ಲಿ ತನ್ನದೇ ಪರಿಸರದಲ್ಲಿ ಹೊಸ ಮೌಲ್ಯಗಳ ಹುಡುಕಾಟಕ್ಕೆ ಹೊರಟಿರುವ ಕಥಾನಾಯಕನು ತನ್ನ ಅಸ್ತಿತ್ವ ಕಂಡುಕೊಳ್ಳಲು ಹೆಣಗಾಡುತ್ತಾನೆ. ಇಲ್ಲಿನ ನವ್ಯ ಕಥೆಗಳ ನಾಯಕ ಮಧ್ಯಮ ತರಗತಿಯವ, ಸುಶಿಕ್ಷಿತ, ಸಂವೇದನಾಶೀಲ, ದುರ್ಬಲ, ಅಂತರ್ಮುಖಿ ತರುಣ. ಸಂಪ್ರದಾಯ ಸಮಾಜ ಹೇರಿರುವ ನಂಬಿಕೆಗಳು ಮತ್ತು ಅಂತರಂಗದ ನಂಬಿಕೆಗಳ ಸಂಘರ್ಷದಲ್ಲಿ ತನ್ನ ನಂಬಿಕೆಗಳನ್ನು ಸ್ಪಷ್ಟಪಡಿಸಿಕೊಳ್ಳಲಾಗದ ದೌರ್ಬಲ್ಯವನ್ನು ಈ ಪಾತ್ರಗಳು ಪ್ರತಿನಿಧಿಸುತ್ತವೆ.

ಪರಾಮರ್ಶನ ಗ್ರಂಥಗಳು

- ಸಿ. ಆರ್. ಯರವಿನತೆಲಿಮಠ (2019) : ಪಾಶ್ಚಾತ್ಯ ಸಾಹಿತ್ಯವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ, ಅಸ್ತಿತ್ವವಾದ, ಪು.ಸಂ. 191
- ಎ. ಕೆ. ರಾಮಾನುಜನ್ (2011) : ಸಮಗ್ರ, ಅಣ್ಣಯ್ಯನ ಮಾನವಶಾಸ್ತ್ರ, ಮನೋಹರಗ್ರಂಥಮಾಲಾ, ಧಾರವಾಢ, ಪು.ಸಂ 381
- ಜಿ. ಹೆಚ್. ನಾಯಕ (1978) : ಕನ್ನಡ ಸಣ್ಣಕತೆಗಳು, 1978, ಪ್ರಸ್ತಾವನೆ
- ಯು. ಆರ್. ಅನಂತಮೂರ್ತಿ : ಐದು ದಶಕದ ಕಥೆಗಳು, ಕ್ಲಿಪ್ ಜಾಯಿಂಟ್, ಪು.ಸಂ. 212
- ಗಿರಡ್ಡಿ ಗೋವಿಂದರಾಜು : ಸ.ವಿ–ಸಂಪುಟ 2, ಸಣ್ಣಕತೆಯ ಹೊಸ ಒಲವುಗಳು, ಪು.ಸಂ.380
- ಗಿರಡ್ಡಿ ಗೋವಿಂದರಾಜು : ಸ.ವಿ–ಸಂಪುಟ 2, ಸಣ್ಣಕತೆಯ ಹೊಸ ಒಲವುಗಳು, ಪು.ಸಂ.380
- ಯು.ಆರ್. ಅನಂತಮೂರ್ತಿ : ಐದುದಶಕದ ಕಥೆಗಳು, ಕ್ಲಿಪ್‌ಜಾಯಿಂಟ್, ಪು.ಸಂ 229
- ಅಶೋಕ ಟಿ. ಪಿ. : ಅನಂತಮೂರ್ತಿ ವಾಙ್ಮಯ, ಪು.ಸಂ.52
- ಡಾ. ಶಾಂತಿನಾಥ ದೇಸಾಯಿ : ಸಮಗ್ರ ಕಥೆಗಳು, ಪು.ಸಂ. 85
- ಜಿ. ಎಸ್. ಆಮೂರ್ : ಕನ್ನಡಕಥನ ಸಾಹಿತ್ಯ–ಸಣ್ಣಕಥೆ, ಪು.ಸಂ. 224
- ಡಾ. ಶಾಂತಿನಾಥದೇಸಾಯಿ : ಸಮಗ್ರ ಕಥೆಗಳು, ಪು.ಸಂ. 84
- ಜಿ. ಹೆಚ್. ನಾಯಕ (1978) : ಸಂ. ಕನ್ನಡ ಸಣ್ಣಕತೆಗಳು, ಪ್ರಸ್ಥಾವನೆ.
- ಅನಂತಮೂರ್ತಿ ಯು. ಆರ್. : ಐದುದಶಕದ ಕಥೆಗಳು,
- ಆಮೂರ ಜಿ. ಎಸ್. (2022) : ಕನ್ನಡಕಥನ ಸಾಹಿತ್ಯ : ಸಣ್ಣಕಥೆ, ಬೆಂಗಳೂರು ಪ್ರಿಯದರ್ಶಿನಿ ಪ್ರಕಾಶನ.
- ನಾಗಭೂಷಣಸ್ವಾಮಿ ಓ.ಎಲ್. (2019) : ವಿಮರ್ಶೆಯ ಪರಿಭಾಷೆ.
- ನರಹಳ್ಳಿ ಬಾಲಸುಬ್ರಹ್ಮಣ್ಯ (2019) : ನವ್ಯತೆ, ಬೆಂಗಳೂರು ಅಭಿನವ ಪ್ರಕಾಶನ,
- ನಾಯಕ ಜಿ. ಹೆಚ್.(ಸಂ.) (1978) : ಕನ್ನಡ ಸಣ್ಣಕತೆಗಳು,1978
- ರಾಮಾನುಜನ್ ಎ. ಕೆ. (2011) : ಸಮಗ್ರ, ಧಾರವಾಡಮನೋಹರ ಗ್ರಂಥಮಾಲಾ,
- ಶಾಂತಿನಾಥ ದೇಸಾಯಿ (2013) : ಸಮಗ್ರ ಕಥೆಗಳು, ಬೆಂಗಳೂರು ಸಪ್ನ ಬುಕ್ ಹೌಸ್,
- ಯರವಿನತೆಲಿಮಠ ಸಿ. ಆರ್. (2019) : ಪಾಶ್ಚಾತ್ಯ ಸಾಹಿತ್ಯವಾದಗಳು ಮತ್ತು ಕನ್ನಡ ಸಾಹಿತ್ಯ ಸಂದರ್ಭ.

■■

ವಿದ್ಯಾ ಪ್ರಕಾಶನ®
ಜೆ.ಟಿ.ಮಠ ರೋಡ, ಗದಗ - 582101
e-mail: vidyaprakashana26@gmail.com
www.shikshansoudha.in

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಭೂಮಿಯ ಉಳಿಸಲು ಭೂಮಿಗೆ ಇಳಿದ ದೇವತೆ ಗ್ರೇತಾಥನ್ ಬರ್ಗ್

✍ ಡಾ. ಮಹದೇವಪ್ರಸಾದ್ ಎನ್.ಎಸ್., ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂಜನಗೂಡು.

"ಮಾನವ ಪೃಥ್ವಿಯ ಕೇಂದ್ರವಾಗಬಾರದು : ಸಕಲ ಜೀವಿಗಳು ಪೃಥ್ವಿಯ ಕೇಂದ್ರವಾಗಬೇಕು : ಈ ಪೃಥ್ವಿ ಹಾಳಾಗದಂತೆ ನೋಡಿ ಕೊಳ್ಳುವುದು ಮಾನವನ ಕರ್ತವ್ಯವಾಗಿದೆಎಂದು ಬಸವಣ್ಣನವರು ಸೂಚಿಸಿದ್ದಾರೆ".

ನಮ್ಮ ಈ ಬ್ರಹ್ಮಾಂಡದಲ್ಲಿ ಜೀವ ವೈವಿದ್ಯತೆ ಇರುವ ಜೀವಿಗಳು ಜೀವಿಸಲು ಯೋಗ್ಯವಾಗಿರುವ ಏಕೈಕ ಗ್ರಹವೆಂದರೆ ಭೂಮಿ, ಅತೀ ಪುಟ್ಟ ಜೀವಿಗಳಿಂದ ಹಿಡಿದು ಅತ್ಯಂತ ದೊಡ್ಡ ಜೀವಿಗಳವರೆಗೂ ಜೀವಿಸಲು ಬೇಕಾದ ವಾತಾವರಣ ಅನುಕೂಲ ಎಲ್ಲವೂ ಈ ಭೂಮಿಯಲ್ಲಿದೆ ಎಲ್ಲಾ ಜೀವಿಗಳಿಗೂ ಭೂಮಿ ತಾಯಿ ಆಶ್ರಯದಾತೆ ಯಾಗಿದ್ದಾಳೆ.

"ನೂರುಕೋಟಿ ಜನ, ಮೂರು ಕೋಟಿ ಜೀವ ಪ್ರಭೇದಗಳ ಒಂದು ದೊಡ್ಡ ಕುಟುಂಬ ಈ ಭೂಮಿ ರಾಷ್ಟ್ರದಲ್ಲಿ ಗಡಿಗಳು ಎಷ್ಟೆ ಇದ್ದರೂ ಈ ಕುಟುಂಬ ಮಾತ್ರ ಒಂದೇ ಇಂತಹ ಭೂಮಿಗೆ ಸಂಕಷ್ಟ ಬಂದರೆ ನಮಗೆಲ್ಲರಿಗೂ ಬಂದ ಹಾಗೇ ನಮಗೆಲ್ಲರಿಗೂ ಒಂದೇ ಭವಿಷ್ಯ ಕಾದಿದೆ ನಾವೆಲ್ಲಾ ಒಂದಾದರೆ ಮಾತ್ರ ನಾಳಿನ ಭೂಮಿ ಜೀವಂತವಾಗಿರಲು ಸಾಧ್ಯ" ಎನ್ನುತ್ತಾಳೆ ಕೆನಡಾದ ಸೆವರ್ನ ಸುಝುಕಿ.

ಆದರೆ ಇಂದಿನ ಕಲಿಯುಗ ಕಾಲದಲ್ಲಿ ಈ ಭೂಮಿಗೆ ಇಲ್ಲಿನ ಜೀವರಾಶಿಗಳಿಗೆ ಮಾನವನಿಂದ ಆಗಬಾರದಂತಹ ತೊಂದರೆಗಳು ಆಗುತ್ತಿವೆ. ಎಷ್ಟೂ ಜೀವ ಸಂಕುಲಗಳು ನಶಿಸಿ ಹೋಗುತ್ತಿವೆ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಭೂಮಿಯನ್ನು ಎಲ್ಲಾ ಕಡೆಗಳಿಂದಲೂ ಕಿತ್ತು ತಿನ್ನುತ್ತಿದ್ದಾನೆ. ಭೂಮಾಲಿನ್ಯ, ಮಾಯುಮಾಲಿನ್ಯ ಜಲಮಾಲಿನ್ಯ ಇತ್ಯಾದಿಗಳಿಂದ ತನ್ನ ಸ್ವಾರ್ಥ, ಹಣಗಳಿಗೆ ದುರಾಸೆಯ ಬುದ್ಧಿಮತ್ತೆಯಿಂದ ಭೂಮಿಯನ್ನು ಶೋಷಣೆಗೆ ಗುರಿಯಾಗಿಸಿಕೊಂಡಿದ್ದಾನೆ.

ಈ ಶೋಷಣೆಯಿಂದ ಮುಂದಿನ ಪೀಳಿಗೆಯ ಮಕ್ಕಳ ಭವಿಷ್ಯವನ್ನು ನಾಶ ಮಾಡುತ್ತಿದ್ದಾನೆ ಇಂತಹ ಮಕ್ಕಳ ಭವಿಷ್ಯಕ್ಕಾಗಿ ಹಾಗೂ ಜಗತ್ತಿನ ಜೀವರಾಶಿಗಳ ರಕ್ಷಣೆಗಾಗಿ ಭೂಮಿಯನ್ನು ಉಳಿಸಲು ಭೂಮಿಗೆ ಇಳಿದ ದೇವತೆಯೇ "ಗ್ರೇತಾಥನ್ ಬರ್ಗ್"

ಈಕೆ ಸ್ವೀಡನ್ನಿನ ರಾಜಧಾನಿ ಸ್ಟಾಕ್ ಹೋಮ್ ನಲ್ಲಿ 2003ರ ಜನವರಿ 3ರಂದು ಜನಿಸಿದಳು ಇವಳ ಪೂರ್ಣ ಹೆಸರು " ಗ್ರಿಯೆತಾಟಿನ್‌ಟಿನೆಲಿಯಾ ನೂರಾತುನ್ ಬರಿ ಎರ್ನ್‌ಮನ್" ಅಪ್ಪನ ಹೆಸರು ಸ್ವಾಂತಿತುನ್ ಬರಿ, ವೃತ್ತಿಯಲ್ಲಿ ನಟ, ಅವಳ ತಾಯಿ ಮಲೇನಾ ಎರ್ನ್‌ಮನ್. ಈಕೆ ಪ್ರಶಸ್ತಿ ವಿಜೇತೆ ಒಪೇರಾ ಸಿಂಗರ್ ಗ್ರೇತಾಳ ತಂಗಿ ಬಿಯೆತಾ ಕೂಡ ಅಮ್ಮನ ಹಾಗೇ ಗಾಯಕಿ

ಈಗಿನ ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಕಿಶೋರಾವಸ್ಥೆಯ ಮಕ್ಕಳು ಮೊಬೈಲ್, ಟಿವಿ ಮುಂತಾದ ಸಂಪರ್ಕ ಮಾಧ್ಯಮಗಳನ್ನು ಸದುಪಯೋಗ ಮಾಡಿಕೊಳ್ಳುವುದಕ್ಕಿಂತ ಹೆಚ್ಚು ದುರುಪಯೋಗ ಮಾಡಿಕೊಂಡು ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಆದರೆಗ್ರೇತಾ ಸಂಪರ್ಕ ಮಾಧ್ಯಮಗಳನ್ನು ತನ್ನ ಪ್ರೌಢಶಾಲೆಯ ಹಂತದಲ್ಲೇ ಫೇಸ್‌ಬುಕ್, ಇನ್ಸಾಗ್ರಾಮ್, ವಾಟ್ಸಾಪ್ ಇತ್ಯಾದಿಗಳನ್ನು ಬಳಸಿಕೊಂಡು ಭೂಮಿಗೆ ಹಿಡಿದಿರುವ ಕಾಯಿಲೆಗೆ ಕಾರಣವಾದ ಆಧುನಿಕ ಆಟೋಪಗಳಿಗೆ ಕೆಂಬಾವುಟ ತೋರಿಸುತ್ತಾ ಮಕ್ಕಳ ಭವಿಷ್ಯಕ್ಕಾಗಿ ಮೂಲನಿವಾಸಿಗಳ ಮತ್ತು ಜೀವ ಜಗತ್ತಿನ ಪ್ರತಿನಿಧಿಯಾಗಿ ಹಲವು ದೇಶಗಳ ಶಾಲೆಯ ಮಕ್ಕಳು ಯುವಜನತೆ ಪರಿಸರವಾದಿಗಳು ನಾಗರಿಕರು ಹಲವು ಪ್ರಸಿದ್ಧ ವ್ಯಕ್ತಿಗಳನ್ನು ಭೂಮಿಯ ರಕ್ಷಣೆಗೆ ಹುರಿದುಂಬಿಸುತ್ತಾಳೆ ಈ ದಿಸೆಯಲ್ಲಿ ಸಾಮಾಜಿಕ ಮಾಧ್ಯಮಗಳನ್ನು ಎಚ್ಚರಿಸುತ್ತಾಳೆ.

ಗ್ರೇತಾಳಿಗೆ ತನ್ನ 8 ನೇ ವಯಸ್ಸಿಗೆ ಪರಿಸರ ಸಂರಕ್ಷಣೆ ಹಾಗೂ ಭೂಮಿಯ ತಾಪಮಾನ ಏರುತ್ತಿರುವ ಬಗ್ಗೆ ಗ್ರಹಿಕೆ ಇರುತ್ತದೆ. ಹಾಗೆಯೇ ಶಾಲೆಯಲ್ಲಿ ಗ್ರಂಥಾಲಯದಲ್ಲಿ ಟಿ.ವಿ. ವರದಿ ವಿಡಿಯೋ ಚರ್ಚೆಗಳನ್ನು ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನು ನೋಡುತ್ತಿದ್ದಳು. ಇದರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸುತ್ತಿದ್ದಳು. ಇದರಚಿಂತೆಯಲ್ಲೇ ಇದ್ದ ಗ್ರೇತಾಗೆ " ಆಟಿಸಂ ಸ್ಪೆಕ್ಟ್ರಮ್ ಅಂದರೆ ರೋಹಿತ ಎಂಬ ಕಾಯಿಲೆಗೆ ಗುರಿಯಾಗುತ್ತಾಳೆ ಆಕೆಯ ತಂದೆ ತಾಯಿ ವೈದ್ಯರ ಸಲಹೆ ಪಡೆದು ಆಕೆಗೆ ಭೂಮಿಯ ಸಂಕಷ್ಟಗಳ ನಿವಾರಣೆ ಕುರಿತ ಚರ್ಚೆ ವಿಜ್ಞಾನಿಗಳು ಪತ್ರಿಕೆಗಳಲ್ಲಿನ ತಜ್ಞರ ಅಭಿಪ್ರಾಯಗಳನ್ನು ಓದಿ ಭೂಮಿ ಸರಿಹೋಗುತ್ತದೆ ಎಂಬ ನಿರೀಕ್ಷೆಯಲ್ಲಿ ಅವಳ ಕಾಯಿಲೆಗಳೆಲ್ಲ ಕ್ರಮೇಣ ವಾಸಿಯಾಗುತ್ತಾ ಬರುತ್ತವೆ. ಮನೆಯ ಹಿರಿಯರಾದ ತಂದೆ ತಾಯಿಗಳಿಗೆ ಈಕೆಯ ಮೊದಲ ಪಾಠ ಪ್ರಾರಂಭ ನೀರಿನ ಬಳಕೆಯನ್ನು ಮಿತಿಗೊಳಿಸಿದಳು ಮಾಂಸಹಾರ ತ್ಯಜಿಸಿದಳು ವಿಮಾನದಿಂದ ಹೆಚ್ಚು ಕಾರ್ಬನ್ ವಾತಾವರಣ ಸೇರುತ್ತದೆ ಎಂಬ ಕಾರಣಕ್ಕೆತಾಯಿ ವಿಮಾನ ಹಾರುವುದನ್ನು ಬಿಡಿಸಿದಳು.

ಅಂದು ಅಗಸ್ಟ್ 30 ಇಸವಿ 2018 9ನೇ ತರಗತಿಯ ಈ ಹುಡುಗಿ ಸ್ವೀಡನ್ನಿನ ಸಂಸತ್ ಭವನದ ಬಳಿ ತಾನೇ ಕೈಯಾರೇ ಬರೆದುತಂದಿದ್ದ ಸ್ಕೂಲ್ ಸ್ಟ್ರೈಕ್ ಫಾರ್‌ಕ್ಲೈಮೇಟ್‌ಗಾಗಿ ಶಾಲಾ ಮುಷ್ಕರ ಎಂಬ ಫಲಕವನ್ನು ಹಾಕಿ ತನ್ನ ಮೊದಲ ಮುಷ್ಕರ ಪ್ರಾರಂಭಿಸುತ್ತಾಳೆ ಅಲ್ಲಿಗೆ ಬರುವವರಿಗೆಲ್ಲಾ ತಾನೇ ಬರೆದ ಕರಪತ್ರಗಳನ್ನು ಹಂಚುವುದು, ಸೆಲ್ಫಿತೆಗೆದು ಎಲ್ಲರಿಗೂ ರವಾನಿಸುತ್ತಾಳೆ ಪತ್ರಕರ್ತರೂ ಸಾಮಾಜಿಕ ಜಾಲತಾಣಗಳ ಮೂಲಕ ಈ ಮುಷ್ಕರ ಲಕ್ಷಾಂತರ ಜನರನ್ನು ತಲುಪುತ್ತದೆ. ಅವಳ ಕರಪತ್ರದಲ್ಲಿನ ಒಂದು ವಾಕ್ಯ

"ಹಿರಿಯರೇ ನೀವೆಲ್ಲಾ ಸೇರಿ ನಮ್ಮ ಭವಿಷ್ಯದ ಮೇಲ ಕಕ್ಕ ಮಾಡಿದ್ದಿರೀ ಎಂಬ ವಾಕ್ಯ ವಿವಿಧ ಮಾಧ್ಯಮಗಳಲ್ಲಿ ಪ್ರತಿಧ್ವನಿಸುತ್ತದೆ. ಮುಂದೆ ಈ ಮುಷ್ಕರ ಇನ್ನೂ ಹೆಚ್ಚಾಗಿ ಹಲವು ಶಾಲೆಗಳು ಮತ್ತು ಯುವಜನತೆಯನ್ನು ತಲುಪುತ್ತದೆ. ಸಂಸತ್ ಭವನದ ಹೊರಗಡೆ ಪ್ರತಿದಿನವೂ ಮುಷ್ಕರಕೂತ ಈ ಹುಡುಗಿ ಇಡೀ ದೇಶದ ಗಮನ ಹರಿಯತೊಡಗುತ್ತದೆ., ತೀವ್ರ ಸೆಕೆ, ಅರಣ್ಯಕ್ಕೆ ಬೆಂಕಿ ಹಿಮಸಾರಂಗಗಳ ಸಾವು ಇವೆಲ್ಲವುಗಳ ಮಧ್ಯ ಈಕೆಯ ಮುಷ್ಕರದ ಬಗ್ಗೆ ಕುರಿತೇ ಮಾಧ್ಯಮಗಳು ಹೆಚ್ಚು ಮಾತಾಡುತ್ತವೆ ಚರ್ಚಿಸುತ್ತವೆ ಅಕ್ಕಪಕ್ಕದ ದೇಶಗಳಿಂದ ಟಿ.ವಿ. ಮಾಧ್ಯಮ ಪ್ರತಿನಿಧಿಗಳು ಇವಳ ಸಂದರ್ಶನವನ್ನು ಮಾಡುತ್ತಾರೆ.

ತನ್ನ ಶಾಲೆಯೊಂದೇ ಅಲ್ಲ ದೇಶದ ಎಲ್ಲ ಶಾಲೆಗಳಲ್ಲೂ ಪ್ರತಿ ಶುಕ್ರವಾರ ಮುಷ್ಕರ ನಡೆಯಲಿ ಎಂದು ಕೋರುತ್ತಾಳೆ ಫಲಕಗಳಲ್ಲಿ "ಭವಿಷ್ಯಕ್ಕಾಗಿ ಶುಕ್ರವಾರ "ಪ್ರೈಡೇ ಫಾರ್ ಫ್ಯೂಚರ್ ಎಂದು ಬರೆದಿರಬೇಕು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂಬ ಸಂದೇಶ ಕಳುಹಿಸುತ್ತಾಳೆ. ವಿಜ್ಞಾನಿಗಳು ಭೂಮಿಗೆ ಬಂದ ಕಾಯಿಲೆಗೆ ಬಿಸಿ ಪ್ರಳಯ "ಗ್ಲೋಬಲ್ ವಾರ್ಮಿಂಗ್ ಎನ್ನುತ್ತಾರೆ ಇದಕ್ಕೆ ಕಾರಣಗಳನ್ನು ಹೇಳಿದ್ದಾರೆ.

- ಭೂಮಿಯು ಆಳದಲ್ಲಿ ಹೂತಿದ್ದ ಕಲ್ಲಿದ್ದಲು ಮತ್ತು ಪೆಟ್ರೋಲಿಯಂನ್ನು ಮೇಲಕ್ಕೆತ್ತಿ ಸುಡುತ್ತಿದ್ದೇವೆ.
- ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲು ಅಥವ ಲಿಗ್ನೈಟ್ ಎಂಬ ಕಚ್ಚಾ ಕಲ್ಲಿದ್ದಲನ್ನು ದೊಡ್ಡ ಪ್ರಮಾಣದಲ್ಲಿ ಉರಿಸುತ್ತೇವೆ
- ನಮ್ಮ ಎಲ್ಲಾ ಬಗೆಯ ಕೃಷಿ ಕೆಲಸಗಳಿಗೆ ಫಾಸಿಲ್ ಇಂಧನಗಳೇಬೇಕು
- ಅರಣ್ಯಗಳ ಭಾರೀ ಪ್ರಮಾಣದ ನಾಶ

ಈ ಎಲ್ಲಾ ಕಾರಣಗಳಿಂದ ಭೂಮಿಯು ಸಂಕಷ್ಟಕ್ಕೀಡಾಗಿದೆ ಜಗತ್ತಿನ ಯಾವ ಸರಕಾರವು ಭೂಮಿಯ ಸಂಕಟವನ್ನು ತಗ್ಗಿಸಬಲ್ಲ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆತರಲಿಲ್ಲ ಜಗತ್ತಿನಎಲ್ಲಾ ಮುತ್ಸದ್ದಿಗಳಿಗೂ ತಂತಮ್ಮದೇಶವನ್ನು ಇನ್ನಷ್ಟು ಶ್ರೀಮಂತಗೊಳಿಸಲು ಹಂಬಲವೇ ವಿನಾ ಯಾರಿಗೂಇಡೀ ಭೂಮಿಯ ಕ್ಷೇಮದ ಬಗ್ಗೆ ಚಿಂತೆ ಇಲ್ಲ ನಾಳಿನ ಪೀಳಿಗೆಯ ಬಗ್ಗೆ ಯಾರಿಗೂ ಲಕ್ಷ್ಯವೇ ಇಲ್ಲ ಇದೆಲ್ಲಾ ಗೊತ್ತಾಗಿ ನಾಳಿನ ಪೀಳಿಗೆಯ ಪ್ರತಿನಿಧಿಯಾಗಿ ಈಗ ಗ್ರೇತಾ ಎದ್ದು ನಿಂತಿದ್ದಾಳೆ

ಜಗತ್ತಿನ ಮಹಾನ್ ಮುತ್ಸದ್ದಿಗಳ ಎದುರು ಭಾಷಣ ಮಾಡಲೆಂದು ವಿಶ್ವ ಸಂಸ್ಥೆಯ ಆಹ್ವಾನದ ಮೇರೆಗೆ ಈಕೆ ವಿಮಾನದಲ್ಲಿ ಪ್ರಯಾಣ ಮಾಡಬೇಕಾಗುತ್ತದೆ. ಆದರೇ ಗ್ರೇತಾ ವಿಮಾನದಲ್ಲಿ ಹೋಗಲಿಲ್ಲಾ ಹೊಗೆ ಉಗುಳುವ ಹಡಗಿನಲ್ಲೂ ಹೋಗುವುದಿಲ್ಲ ವಿಮಾನದಲ್ಲಿ ಹೋದರೆ ಭಾರೀ ಪ್ರಮಾಣದಲ್ಲಿ ಫಾಸಿಲ್ ಇಂಧನವನ್ನು ಸುಡುವುದರಿಂದ 1000 ಕಿ.ಗ್ರಾಂ. ನಷ್ಟು ಕಾರ್ಬನ್ ಡೈಆಕೈಡ್ ವಾಯುಮಂಡಲಕ್ಕೆ ಸೇರುತ್ತದೆ. ಎಂಬ ಕಾರಣಕ್ಕೆ 5 ಸಾವಿರ ಕಿ.ಮೀ ದೂರ ಸೂರ್ಯ ಮತ್ತು ಗಾಳಿಯ ನೆರವಿನಿಂದಓಡಬಲ್ಲ ಸೌರನೌಕೆಯಲ್ಲಿ ಸಾಗರಯಾನ ಕೈಗೊಳ್ಳುತ್ತಾಳೆ ಈ ಸೌರನೌಕೆಯು "ಭವಿಷ್ಯಕ್ಕಾಗಿ ಶುಕ್ರವಾರ ಎಂಬ ಷೋಷ ವಾಕ್ಯದೊಂದಿಗೆ 14 ದಿನಗಳ ಸುದೀರ್ಘ ಪ್ರಯಾಣ ಮಾಡಿ ನ್ಯೂಯಾರ್ಕ ತಲುಪುತ್ತದೆ. ಈಕೆಯ ಸ್ವಾಗತಕ್ಕೆ ವಿಶ್ವಸಂಸ್ಥೆ "ಸುಸ್ಥಿರ ಅಭಿವೃದ್ದಿ ಗುರಿ" ಎಂಬ 17 ವಿಷಯಕ್ಕೆಒಂದೊಂದು ಲಾಂಛನ ಒಂದೊಂದು ಬಣ್ಣ ನಿಗದಿಪಡಿಸಿ 17 ದೋಣಿಗಳಿಗೆ ಅದೇ ಬಣ್ಣಗಳಿದ್ದವು ಗ್ರೇತಾಳಿಗೆ ಇದು ಅಪರೂಪದ ಸ್ವಾಗತ.

ಈ ಒಂದು ವರ್ಷದಲ್ಲಿ ನೂರಾರು ವೇದಿಕೆಗಳಲ್ಲಿ ಭಾಷಣ ಮಾಡಿದ ಗ್ರೇತಾ 2019 ರ ಸೆಪ್ಟಂಬರ್ 23 ರಂದು ವಿಶ್ವಸಂಸ್ಥೆಯಲ್ಲಿ ಮಾತಾನಾಡುವಾಗ ಮಾತ್ರ ಅವಳ ದೇಹ ಭಾಷೆ ಭೂಮಾತೆಯ ಅವತಾರದಂತಿತ್ತು. ನಿರ್ಭಾವುಕ ಮತ್ತು ಆತ್ಮವಿಶ್ವಾಸದ ಗದ್ಗದ ಕಂಠದಿಂದ ಈ ಕಿಶೋರಿ ವಿಶ್ವನಾಯಕರನ್ನು ಉದ್ದೇಶಿಸಿ ನಿಖಿರ ಅಂಕಿ ಆಂಶಗಳನ್ನು ಮುಂದಿಡುತ್ತಾ ಮತ್ತೆ ಮತ್ತೆ "ನಿಮಗೆಷ್ಟು ದೈರ್ಯ" ಎಂದು ಕೇಳಿದ್ದು ಜಗತ್ತಿನಎಲ್ಲಾ ಮಾಧ್ಯಮಗಳಲ್ಲು ಪ್ರತಿಧ್ವನಿಸಿತು.

ವಿಶ್ವ ಸಂಸ್ಥೆಯ ವೇದಿಕೆ ಏರಿಎಲ್ಲಾ ಮಹಾನ್ ನಾಯಕರುಗಳಿಗೆ ಸವಾಲು ಎಸೆದಿದ್ದಾಳೆ ನಮ್ಮ ಭವಿಷ್ಯ ಕತ್ತಲಿಗೆ ದೂಡಲು ನಿಮಗೆಷ್ಟು ಧೈರ್ಯಎಂದು ಅಬ್ಬರಿಸಿದ್ದಾಳೆ. ನೀವು ಹಣ ಹಣ ಎಂದು ಮೇಲಾಟ ನಡೆಸುತ್ತಾ ನಿರಂತರ ಅಭಿವೃದ್ದಿಯ ಕಟ್ಟುಕತೆಗಳನ್ನು ಹೆಣೆಯುತ್ತಿದ್ದೀರಿ ಆದರೇ ಇದರಿಂದ ಇಡೀ ಜೀವಜಾಲವೇ ಧ್ವಂಸ ಆಗುತ್ತದೆ. ನಿಮಗೆಷ್ಟು ಧೈರ್ಯ ಎಂದು ಗುಡುಗುವ ಮೂಲಕ ಪೆಟ್ರೋಧನಿಕರಿಗೆ ಕಾಡುವದು, ಸ್ವಪ್ನವಾಗುತ್ತಾಳೆ ಇದರಿಂದಾಗಿ ಅವಳು ಹಲವು ಧನಿಕರಜಗತ್ತಿನ ಮಹಾನ್ ವ್ಯಕ್ತಿಗಳ ಟೀಕೆಗಳಿಗೆ ಗುರಿಯಾಗುತ್ತಾಳೆ ಮುಗ್ಧ ಮುಖಕ್ಕೆ ತರಾವರಿ ಮಸಿ ಬಳಿಯುವ ಕೆಲಸವೂ ಆಗುತ್ತದೆ.

ತೀರ ಇತ್ತೀಚೆಗೆ ರಷ್ಯಾ ದೇಶದ ಅಧ್ಯಕ್ಷ ವ್ಲಾಡಿಮೀರ್ ಪುಟಿನ್‌ಕೂಡ ಇವಳನ್ನು ಇದೇ ದಾಟಿಯಲ್ಲಿ ಟೀಕಿಸಿ ಎಳೆಯರನ್ನು ಹೋರಾಟಕ್ಕೆ ತಳ್ಳದಂತೆ ಎಚ್ಚರವಹಿಸಬೇಕು ಎಂದಿದ್ದು ದಾಖಲಾಗಿದೆ. ಇಷ್ಟೆಲ್ಲಾ ಟೀಕೆ ಟಿಪ್ಪಣಿಗಳ ನಡುವೆಯೂ ಗ್ರೇತಾ ತನ್ನ ಪರಿಸರದ ತುಡಿತದ ಭಾಷಣ ಚರ್ಚೆ ಸಂವಾದಗಳಿಂದ ಜಗತ್ತಿನಾದ್ಯಂತ ಜನಪ್ರಿಯತೆಯನ್ನು ಗಳಿಸುತ್ತಾಳೆ ಅಲ್ಲದೇ ಹಲವಾರು ಪ್ರಶಸ್ತಿ ಪ್ರಧಾನಗಳಿಗೆ ಪಾತ್ರಳಾಗುತ್ತಾಳೆ.

ಈಕೆಗೆ ಇಂಟರನ್ಯಾಷಿನಲ್ ಸಂಘಟನೆಯ ಪ್ರತಿಷ್ಠಿತ "ಆತ್ಮಸಾಕ್ಷಿಯ ರಾಜಧೂತ ಪ್ರಶಸ್ತಿ, ಗೆಡ್ಡಿಸ್ ಪರಿಸರ ಪದಕ ಸ್ವೀಡನ್ ದೇಶದರೈಟ್ ಲೈವಿಹುಡ್ ಪ್ರಶಸ್ತಿ ಅಲ್ಲದೇ ಬೆಲ್ಜಿಯಂ ಮಾನ್ಸ್ ವಿಶ್ವವಿದ್ಯಾಲಯ ಇವಳಿಗೆ ಗೌರವಡಾಕ್ಟರೇಟ್ ಪದವಿಯನ್ನು ನೀಡುತ್ತದೆ. ಐರೋಪ್ಯ ಸಂಘದ "ನಾರ್ಡಿಕ್ ಕೌನ್ಸಿಲ್ ಪ್ರಶಸ್ತಿಯನ್ನು ಘೋಷಿಸಲಾಗುತ್ತದೆ. ಈ ಎಲ್ಲಾ ಪ್ರಶಸ್ತಿಯ ಕೀರ್ತಿಯನ್ನೆಲ್ಲಾ ಎಳೆಯ ಪರಿಸರ ಸತ್ಯಾಗ್ರಹಿಗಳಿಗೆ ತಾನು ಆರಂಭಿಸಿದ ಫ್ರೈಡೇ ಫ್ಯೂಚರ್ ಸಂಘಟನೆಗೆ ಸಲ್ಲಬೇಕು ಎನ್ನುತ್ತಾಳೆ ಗ್ರೇತಾ, ಅಮೆರಿಕಾದ ರೆಡ್‌ಇಂಡಿಯನ್ ಸ್ಯೂ ಮೂಲ ನಿವಾಸಿಗಳು ಈಕೆಗೆ "ಮ್ಹಾಪಿಯಾ ಇತಾವನ್ ಹಿವಿ" ಸ್ವರ್ಗದಿಂದ ಬಂದವಳು ಎಂಬ ಹೊಸ ಹೆಸರು ನೀಡುತ್ತಾರೆ.

ಗ್ರೇತಾಳಿಗಿಂತಲೂ ಮುಂಚೆ ಭೂಮಿಯ ರಕ್ಷಣೆಯ ಕುರಿತು ವಿಶ್ವವೇದಿಕೆಯಲ್ಲಿ ದನಿ ಎತ್ತಿದ ಇನ್ನಿಬ್ಬರು ಕಿಶೋರಿಯರು ಕೆನಡಾದ "ಸೆವರ್ನ್ ಸುಝುಕಿ ಮತ್ತು ಭಾರತೀಯ ಮೂಲದ ಅಂಜಲಿ ಅಪ್ಪಾದುರೈ ಹೀಗೇ ನಾವು ಕೂಡ ಭೂಮಿಯ ರಕ್ಷಣೆಗೆ ಹಾಗೂ ನಮ್ಮ ಮುಂದಿನ ಪೀಳಿಗೆಯ ಉಳಿವಿಗಾಗಿ ದನಿ ಎತ್ತಲೇಬೇಕಾದ ಪರಿಸ್ಥಿತಿ ಬಂದಿದೆ ಏಕೆಂದರೆ ಹಿಂದಿನ ಎಲ್ಲಾ ದಾಖಲೆಗಳನ್ನು ಮೀರಿ ಇಂದು ವಾಯುಮಂಡಲದಲ್ಲಿ ಇಂಗಾಲದ ಭಸ್ಮದ (ಸಿಓಟು) ಪ್ರಮಾಣ ಸತತವಾಗಿ ಏರುತ್ತಿದೆ. ನೂರು ವರ್ಷಗಳ ಹಿಂದೆ ಗಾಳಿಯಲ್ಲಿ ಸಿಓಟು 360 ಪಿಪಿಎಂ ಇತ್ತು ಅದು 380ದಾಟಿ 400 ದಾಟಿ ಈಗ 408ಕ್ಕೆ ಬಂದಿದೆ ಕಳೆದ ಎಂಟು ಲಕ್ಷ ವರ್ಷಗಳ ಭೂ ಚರಿತ್ರೆಯಲ್ಲಿ ಇದು ದಾಖಲೆ ಪ್ರಮಾಣದ ಹೆಚ್ಚಳ ಅದರ ಪರಿಣಾಮವಾಗಿ ವಾಯುಮಂಡಲದ ಸರಾಸರಿ ಸೆಕೆಯ ಪ್ರಮಾಣವೂ ಸತತವಾಗಿ ಏರುತ್ತಿದೆ. ಸದ್ಯದ ಭವಿಷ್ಯದಲ್ಲೇ ಭೂಮಿ "ಟಿಪ್ಪಿಂಗ್ ಪಾಯಿಂಟ್" ಗೆ ಬರಲಿದೆ ಎಂದು ಐಪಿಸಿಸಿ ತಜ್ಞರು ಹೇಳುತ್ತಾರೆ. ಕನ್ನಡದಲ್ಲಿ ಪಲ್ಟಿ ಬಿಂದು ಎನ್ನಬಹುದು. ಅಂದರೆ ಹಿಂದಿರುಗಿ ಬರಲಾರದ ಸ್ಥಿತಿ.

ಆದಕಾರಣ ನಾವು ಕೂಡ ಗ್ರೇತಾಳಂತೆ ಶಾಲೆಯ ಹಂತದಲ್ಲೇ ಮಕ್ಕಳಿಗೆ ಪರಿಸರ ಕಾಳಜಿ ಮೂಡಿಸಿದರೆ ಪ್ರತಿಯೊಂದು ಮಕ್ಕಳು ತಮ್ಮತಮ್ಮ ಕುಟುಂಬಗಳಲ್ಲಿ ಪರಿಸರದ ಬಗ್ಗೆ ಅರಿವು ಮೂಡಿಸಿ ಆರ್ಥೈಸುತ್ತಾರೆ ಕಾಲೇಜು ಹಂತದಲ್ಲೂ ಯುವಜನತೆಗೆ ಕಾರ್ಯಗಾರ ಚರ್ಚೆ ಸಂವಾದಗಳ ಮೂಲಕ ಭೂಮಿಗೆ ಬಂದಿರುವ ಸಂಕಷ್ಟಗಳ ಬಗ್ಗೆ ಅರಿವು ಮೂಡಿಸಿ ಅದಕ್ಕೆ ವಿಜ್ಞಾನಿಗಳು ಕೊಟ್ಟಿರುವ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲೇ ಬೇಕಾದ ಅವಶ್ಯಕತೆಗಳನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕು ಹಾಗೂ ಸಾಮಾಜಿಕ ಜಾಲತಾಣಗಳನ್ನು, ಸಾಮಾಜಿಕ ಮಾಧ್ಯಮಗಳನ್ನು ಪರಿಸರದ ಈ ಉದ್ದೇಶಗಳಿಗೊಸ್ಕರ ಪರಿಣಾಮಕಾರಿಯಾಗಿ ಬಳಸಿಕೊಂಡು ಕೋಟಿ ಕೋಟಿ ಮಾನವ ಕುಲಕ್ಕೆ ಹಾಗೂ ಕೋಟಿ ಕೋಟಿ ಜೀವ ಪ್ರಭೇಧಗಳಿಗೆ ಜೀವನ ಕಟ್ಟಿಕೊಟ್ಟಿರುವ ಈ ಭೂಮಿ ತಾಯಿಯ ರಕ್ಷಣೆ ಮಾಡಬೇಕು

ಈ ನಿಟ್ಟಿನಲ್ಲಿ ಜಗತ್ತಿನ ವಿವಿಧ ದೇಶಗಳ ಸರಕಾರಗಳು ಹಾಗೂ ಧನಿಕ ರಾಷ್ಟ್ರಗಳ ಗೌರವಾನ್ವಿತ ಪ್ರತಿನಿಧಿಗಳು ಕೆಲಸ ಮಾಡಲೇಬೇಕಾದ ಅನಿವಾರ್ಯತೆ ಇದೆ " ಮುಂದಿನ ಪೀಳಿಗೆಯ ಭವಿಷ್ಯ " ನಿಮ್ಮ ಕೈಯಲ್ಲಿದೆ ಎಚ್ಚರ.

– 83ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಡಿ. ವಿ. ಗುಂಡಪ್ಪನವರ ನಾಟಕಗಳು : ಪ್ರಜಾಪ್ರಭುತ್ವದ ಸ್ವರೂಪ

✍ **ಉಷಾ ಜಿ. ಎನ್.** ಸಂಶೋಧನಾರ್ಥಿ, ಡಿ. ವಿ. ಜಿ. ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.

ಡಿ.ವಿ. ಗುಂಡಪ್ಪನವರು ನವೋದಯ ಸಾಹಿತ್ಯದ ಸಂದರ್ಭದಲ್ಲಿ ಗುರುತಿಸಿಕೊಂಡ ನಮ್ಮೊಡನೆ ಇದ್ದ ಒಬ್ಬ ಅದ್ಭುತ ತತ್ತ್ವಜ್ಞಾನಿ, ರಾಜಕೀಯ ಚಿಂತಕ, ವಿದ್ವಾಂಸ ಈ ಎಲ್ಲಾ ಮಗ್ಗುಲುಗಳಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಮೂಲಕ ತಮ್ಮದೇ ಛಾಪು ಮೂಡಿಸಿದವರು. ಹೀಗಾಗಿ ಪ್ರಸ್ತುತ ಲೇಖನದಲ್ಲಿ ಅವರ ಗದ್ಯ ಸಾಹಿತ್ಯದ ಭಾಗವಾಗಿ ಮೂಡಿ ಬಂದ ನಾಟಕಗಳನ್ನು ಕೂಲಂಕುಷವಾಗಿ ಅಧ್ಯಯನಕ್ಕೊಳಪಡಿಸುವುದಾಗಿದೆ. ಹೀಗಾಗಿ ಇಂತಹ ವಿಭಿನ್ನವಾದ ನಾಟಕಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಲು ಇವರಿಗೆ ಭಿನ್ನವಾಗಿ ದೊರಕಿದ ರಾಜಕೀಯ ಕಾರಣಗಳು ಮತ್ತು ಸಂದರ್ಭಗಳು ಯಾವುವು ? ಈ ಪ್ರಶ್ನೆಗಳು ಮೈಸೂರು ಸಂಸ್ಥಾನದ ಒಟ್ಟಾರೆ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಹಿನ್ನೆಲೆಯಲ್ಲಿ ಇವರ ನಾಟಕಗಳನ್ನು ಅಧ್ಯಯನಕ್ಕೆ ಒಳಪಡಿಸಲು ನೆರವಾಗುತ್ತವೆ. ಈ ಹಿನ್ನೆಲೆಯಲ್ಲಿ ಇವರ ನಾಟಕಗಳ ಅಧ್ಯಯನವನ್ನು ಕುರಿತು ವಿಜಯಕುಮಾರ ಎಂ ಬೋರಟ್ಟಿ ಅವರು ಒಂದು ಊಹಾ ಸಿದ್ಧಾಂತವನ್ನು ತಿಳಿಸುತ್ತಾರೆ. "ಡಿ.ವಿ.ಜಿ ಯವರ ನಾಟಕಗಳು ಅಂದಿನ ಮೈಸೂರು ಸಂಸ್ಥಾನದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ದ್ವಾರ–ಮಾರ್ಗಗಳಾಗಿವೆ"[1] ಎನ್ನುತ್ತಾರೆ ಈ ಹಿನ್ನೆಲೆಯಲ್ಲಿ ಇವರ ನಾಟಕಗಳು ಸಮಾಜೊ–ರಾಜಕೀಯ ಇತಿಹಾಸವನ್ನು ಹಿಡಿದಿಟ್ಟುಕೊಳ್ಳುವುದರ ಜೊತೆಗೆ ಅವರ ಸಾಹಿತ್ಯದ ಒಲವು–ನಿಲುವುಗಳನ್ನು ಅವಲೋಕಿಸಲು ಪ್ರೇರೇಪಿಸುತ್ತವೆ. ಜೊತೆಗೆ ಅವರ ರಾಜಕೀಯ ಮತ್ತು ಸಾಮಾಜಿಕ ನಿಲುವುಗಳನ್ನು ಅಧಿಕೃತಗೊಳಿಸುವ ರೂಪಕಗಳಾಗಿ ಗೋಚರಿಸುತ್ತವೆ. ಹೀಗಾಗಿ ಈ ಮೇಲಿನ ಕೆಲವು ಪ್ರಾತಿನಿಧಿಕ ಪ್ರಶ್ನೆಗಳನ್ನು ಇಟ್ಟುಕೊಂಡು ಪ್ರಸ್ತುತ ಲೇಖನವನ್ನು ವಿಸ್ತರಿಸಲು ಮುಂದಾಗಿದ್ದೇನೆ.

ಡಿ.ವಿ. ಗುಂಡಪ್ಪನವರು ಸುಮಾರು ಹತ್ತು ನಾಟಕಗಳನ್ನು ಬರೆಯುತ್ತಾರೆ. ಆದರೆ ನಾನು ಇಲ್ಲಿ ಎಂಟು ನಾಟಕಗಳನ್ನು ಅಧ್ಯಯನಕ್ಕೊಳಪಡಿಸಲು ಮುಂದಾಗಿದ್ದೇನೆ.

ಕನಕಾಲುಕ : ಪ್ರಜಾಪ್ರತಿನಿಧಿ ಸಭೆ

ಡಿ. ವಿ. ಗುಂಡಪ್ಪನವರ ಮೊದಲ ನಾಟಕ **'ಕನಕಾಲುಕ' (ಬಂಗಾರದ ಬಟ್ಟಲು)** ಇದನ್ನು 1911ರಲ್ಲಿ ಅಂದರೆ, ತಮ್ಮ 24ನೇ ವಯಸ್ಸಿನಲ್ಲಿ ಬರೆದರು. ಆ ಸಂದರ್ಭದಲ್ಲಿದ್ದ ಮೈಸೂರಿನ ಸ್ಥಿತಿಗತಿಗಳಾದ ರಾಜಕೀಯ ನಂಬಿಕೆ ಹಾಗೂ ಪ್ರಜಾಪ್ರಭುತ್ವದ ಆದರ್ಶಗಳು ಈ ನಾಟಕಕ್ಕೆ ಪ್ರಚೋದನೆಯಾಗಿವೆ ಎನ್ನಬಹುದು. ಈ ನಾಟಕಕ್ಕೂ ಮತ್ತು ಡಿ. ವಿ ಗುಂಡಪ್ಪನವರ ಇತರೇ ರಾಜಕೀಯ ಬರಹಗಳಿಗೂ ಇರುವ ಸಾಮ್ಯತೆ ಎಂತಹದ್ದು? ಎಂಬ ಪ್ರಶ್ನೆ ಈ ಸಂದರ್ಭದಲ್ಲಿ ಎದುರಾಯಿತು. ಈ ನಿಟ್ಟಿನಲ್ಲಿ ಈ ನಾಟಕದ ಅಧ್ಯಯನವನ್ನು ಚರ್ಚಿಸಿದ್ದೇನೆ. 'ಕನಕಾಲುಕ' ಎಂದರೆ ಬಂಗಾರದ ಬಟ್ಟಲು, ಸ್ವರ್ಣಪಾತ್ರೆ, ಚಿನ್ನದ ಗಿಂಡಿ– ಎಂದರ್ಥ. ಈ ನಾಟಕದ ಕತೆಯಲ್ಲಿ ಬಟ್ಟಲಿನಿಂದ ವಿಷ ಕುಡಿದಿದ್ದು ಮುಖ್ಯ ವಿಷಯವಾದ ಕಾರಣ ಇದಕ್ಕೆ 'ಬಟ್ಟಲು' (The Cup) ಎಂದು ಹೆಸರು. ಈ ನಾಟಕ ಟೆನಿಸನ್ ಕವಿಯ **'ದಿ ಕಪ್'** ನಾಟಕದ ರೂಪಾಂತರ. ಇದು ಟೆನಿಸನ್‌ನಿಂದ 1880ರಲ್ಲಿ ಬರೆಯಲ್ಪಟ್ಟು 1881ನೆಯ ಜನವರಿಯಲ್ಲಿ ಆಡಲ್ಪಟ್ಟಿತು. ಈತ ಬರೆದ ನಾಟಕಗಳಲ್ಲೆಲ್ಲಾ ಇದೇ ಜನರ ಮೆಚ್ಚುಗೆಗೆ ವಿಶೇಷವಾಗಿ ಪಾತ್ರವಾಯಿತು. ಆತನ ಕಾಲದಲ್ಲಿ ಸುಮಾರು 130 ಬಾರಿ ಅಭಿನಯಿಸಲ್ಪಟ್ಟಿತು.

ಈ ನಾಟಕದಲ್ಲಿ ಬರುವ "ಗೆಲೇಷಿಯಾ" ಅಥವಾ "ಕಲಶಪುರಿ"ಯು ವಿಷ್ಯಾಕ್ಕೆ ಹೊಂದಿಕೊಂಡತೆ ಇತ್ತು. ಆ ದೇಶವು ಅರೇಬಿಯಾ ದೇಶಕ್ಕೆ ಉತ್ತರದಲ್ಲಿ, ಕಪ್ಪುಸಮುದ್ರ ಭೂಮಧ್ಯ ಸಮುದ್ರಗಳ ನಡುವೆ ಇದೆ. ಈ ದೇಶವು ಪುರಾತನವಾದುದು ಮತ್ತು ಚರಿತ್ರೆಯಲ್ಲಿ ಪ್ರಸಿದ್ಧವಾದುದು. ಈ "ಗೆಲೇಷಿಯನ್" ಜನರಲ್ಲಿಯೂ–ರೋಮಕರಲ್ಲಿಯೂ ಸಹ ನಮ್ಮಲ್ಲಿರುವಂತೆಯೇ ವಿಗ್ರಹಾರಾಧನೆಯೂ, ವ್ರತಪೂಜಾದಿಗಳೂ, ಪುರಾಣ ಪುಣ್ಯ ಕಥೆಗಳೂ ಇದ್ದವೆಂದು ಗೊತ್ತಾಗುತ್ತದೆ.

"ಈ ನಾಟಕದ ವಸ್ತು ಇಂಡಿಯಾ ದೇಶದಲ್ಲಿ, ನಾವು ನಮ್ಮ ಕಾಲದಲ್ಲಿ, ಇಂಗ್ಲೇಂಡ್ ದೇಶವು ತನ್ನ ಜನರ ಸಹಾಯದಿಂದಲೋ, ಯುಕ್ತಿಯಿಂದಲೋ ದೂರ–ದೂರದಲ್ಲಿ ಅನ್ಯ ಜನರನ್ನು ಸ್ವಾಧೀನ ಮಾಡಿಕೊಂಡು ಅವರ ರಾಜ ಪಾಳೆಗಾರರುಗಳನ್ನು ಸಾಮಂತರನ್ನಾಗಿ ಮಾಡಿಕೊಂಡು, ಸಾಮ್ರಾಜ್ಯ ಸ್ಥಾಪನೆ ಮಾಡಿದ್ದನ್ನು ನೋಡಿದ್ದೆವಲ್ಲವೇ? ಹೀಗೆ ಸಾಮಂತರಾದ ರಾಜರೂ ಪಾಳೆಗಾರರೂ ಸಾರ್ವಭೌಮ ಸರ್ಕಾರಕ್ಕೆ ಅತ್ಯಂತ ವಿಧೇಯರಾಗಿದ್ದುಕೊಂಡು, ತಮ್ಮ ತಮ್ಮ ಪ್ರಜೆಯ ವಿಷಯದಲ್ಲಿ ಸ್ವೇಚ್ಛೆಯಿಂದ ನಡೆಯುತ್ತಿದ್ದುದನ್ನು ಕಂಡಿದ್ದೇವಷ್ಟೇ ! ಪುರಾತನ ರೋಮ್ ಚಕ್ರಾಧಿಪತ್ಯದಲ್ಲೂ ಹಾಗೆ ಆಗಿದ್ದಿರಬೇಕು ಅದೇ ಈ ಕತೆಯ ಸಂದರ್ಭ ಎಂದು ಈ ನಾಟಕದ ಪ್ರವೇಶಕ್ಕೊಂದು ಹಿನ್ನೆಲೆಯನ್ನು ಡಿ.ವಿ ಗುಂಡಪ್ಪನವರು ಒದಗಿಸುತ್ತಾರೆ"[2] ಈ ನಾಟಕ ಪ್ರಾಚೀನ ರೋಮ್ ಚಕ್ರಾಧಿಪತ್ಯಕ್ಕೆ ಸಂಬಂಧಿಸಿದ ಒಂದು ಪ್ರಸಂಗವನ್ನು ಇದು ಆಧರಿಸಿದೆ. ರೋಮ್ ಸಾಮ್ರಾಜ್ಯದ ಸಾಮಂತ ರಾಜ್ಯಗಳಲ್ಲಿರುವ ರಾಜಕೀಯ ಮತ್ತು ಆಡಳಿತಾತ್ಮಕ ನಿರಂಕುಶ ಪ್ರಭುತ್ವವನ್ನು ಇದು ಚಿತ್ರಿಸುತ್ತದೆ. ಜನ–ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದ ಈ ಸಾಮಂತ ರಾಜ್ಯಗಳಲ್ಲಿ ಒಬ್ಬ ಸೈನಿಕನಾಗಿದ್ದ ಗೆಲಿಶಿಯಾದ ಸುವರ್ಣಾಕ್ಷ ಎಂಬ ಒಬ್ಬ ರೋಮಕನ ಕಥೆಯನ್ನು ಈ ನಾಟಕ ಹೇಳುತ್ತದೆ. ರಾಜನಾಗಬೇಕೆಂಬ ಅವನ ಮಹದಾಸೆ, ಸ್ತ್ರೀವ್ಯಾಮೋಹ ಮತ್ತು ಕುತಂತ್ರದ ಸುತ್ತ ಈ ನಾಟಕದ ಕತೆ ಸಾಗುತ್ತದೆ.

ನಾಟಕದ ಕತೆಯನ್ನು ಈ ರೀತಿ ವಿವರಿಸಬಹುದು– ಕುಶಲಪುರಿಯ ರಾಜನಾದ ವಸುನಾಥ ಒಬ್ಬ ದೇಶಭಕ್ತ, ಧಾರ್ಮಿಕ ಮನೋಭಾವವುಳ್ಳವನು ಮತ್ತು ಸದ್ಗುಣಿ. ಸುಂದರಿ ಮತ್ತು ಸದ್ಗುಣಿಯಾದ ಕಮಲಿನಿ ಆತನ ಪತ್ನಿ. ದೇಶಭ್ರಷ್ಟನಾಗಿ ಮತ್ತು ತನ್ನ ಸಾಮಂತ ರಾಜ್ಯವನ್ನು ಮತ್ತೆ ಮರಳಿ ಪಡೆಯುವ ಪ್ರಯತ್ನ ಮಾಡುತ್ತಿರುವ ಸುವರ್ಣಾಕ್ಷ ರೋಮಕ ಸಾಮ್ರಾಜ್ಯದ ದಂಡಾಧಿಪತಿ ಅನಂತಸೇನನ ಸಹಾಯವನ್ನು ಯಾಚಿಸುತ್ತಾನೆ. ವಸುನಾಥನನ್ನು ಪದಚ್ಯುತಿಗೊಳಿಸಿ ತಾನೇ ರಾಜನಾಗುವ ಕುತಂತ್ರವಿದು. ದಂಡಾಧಿಪತಿ ಸುವರ್ಣಾಕ್ಷನ ಮಹದಾಸೆಗೆ ನೀರೆರೆದು, ಅವನ ಕುತಂತ್ರದಲ್ಲಿ ಭಾಗಿಯಾಗುತ್ತಾನೆ. ಇದೇ ಸಂದರ್ಭದಲ್ಲಿ ಆಕಸ್ಮಿಕವಾಗಿ ಕಮಲಿನಿಯನ್ನು ನೋಡಿದ ಸುವರ್ಣಾಕ್ಷ ಅವಳಲ್ಲಿ ಅನುರಕ್ತನಾಗುತ್ತಾನೆ. ಅವಳನ್ನು ತನ್ನವಳನ್ನಾಗಿಸಿಕೊಳ್ಳುವ ಸಲುವಾಗಿ ಅವಳಿಗೆ ಕನಕಕಾಲುಕವನ್ನು ಕಾಣಿಕೆಯಾಗಿ ನೀಡುತ್ತಾನೆ. ಅವಳನ್ನು ಭೇಟಿಯಾಗಬೇಕೆಂದು ತೋಟದ ಬಳಿ ಇರುವ ದೇವಸ್ಥಾನದ ಹತ್ತಿರ ಬರುವಂತೆ ಕಮಲಿನಿಯನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮನವೊಲಿಸುವಲ್ಲಿ ಸುವರ್ಣಾಕ್ಷ ಯಶಸ್ವಿಯಾಗುತ್ತಾನೆ. ಆಕೆ ದೇವಸ್ಥಾನದ ಹತ್ತಿರ ಬರುತ್ತಿದ್ದ ಹಾಗೆ ಸುವರ್ಣಾಕ್ಷ ಅವಳನ್ನು ಅಲ್ಲಿಂದ ಅಪಹರಿಸಲು ಪ್ರಯತ್ನಿಸುತ್ತಾನೆ. ಕಮಲಿನಿ ಹಾಗೂ ಸುವರ್ಣಾಕ್ಷರಿಗೆ ಗೊತ್ತಾಗದ ಹಾಗೆ ಹಿಂಬಾಲಿಸುತ್ತಿದ್ದ ವಸುನಾಥ ಕಮಲಿನಿಯ ಅಪಹರಣವನ್ನು ತಪ್ಪಿಸಲು ಪ್ರಯತ್ನಿಸುತ್ತಾನೆ. ಆದರೆ ಸುವರ್ಣಾಕ್ಷ ಅವನನ್ನು ತನ್ನ ಖಡ್ಗದಿಂದ ಹಿರಿದು ಕೊಲ್ಲುತ್ತಾನೆ. ಈಗ ಕಮಲಿನಿ ಅಸಹಾಯಕ ಹೆಣ್ಣು, ಬೇರೆ ದಾರಿಯಿಲ್ಲದೆ ಸುವರ್ಣಾಕ್ಷನನ್ನು ಮದುವೆಯಾಗಲು ಒಪ್ಪಿಕೊಳ್ಳುತ್ತಾಳೆ. ಆದರೆ ಬದಲಾಗಿ ಅವಳು ಸುವರ್ಣಾಕ್ಷನಿಗೆ ಪಟ್ಟಾಭಿಷೇಕ ಆಗುವವರೆಗೂ ಮದುವೆಯಾಗುವುದಿಲ್ಲ ಎಂಬ ಷರತ್ತು ಹಾಕುತ್ತಾಳೆ. ಸುವರ್ಣಾಕ್ಷ ಈ ಷರತ್ತಿಗೆ ಒಪ್ಪುತ್ತಾನೆ. ಮದುವೆಯ ದಿನಗಳು ಸಮೀಪಿಸುತ್ತಿದ್ದಂತೆ ಒಂದು ದಿನ ಕಮಲಿನಿಯು ದೇವತೆಯ ಪ್ರಸಾದವನ್ನು ಕನಕಾಲುಕದಲ್ಲಿ ಇಟ್ಟು ಸುವರ್ಣಾಕ್ಷನಿಗೆ ತಿನ್ನಲು ಕೊಡುತ್ತಾಳೆ. ಆಕೆಯೂ ಆ ಪ್ರಸಾದವನ್ನು ಸೇವಿಸುತ್ತಾಳೆ. ಮೊದಲೇ ಯೋಜಿಸಿದಂತೆ ಆ ಪ್ರಸಾದದಲ್ಲಿ ವಿಷವನ್ನು ಸೇರಿಸಿರಲಾಗಿರುತ್ತದೆ. ಸ್ವರ್ಗದಲ್ಲಿ ತನ್ನ ಪತಿಯನ್ನು ಸೇರುವ ಆಸೆಯಿಂದ ಕಮಲಿನಿ ಪ್ರಸಾದವನ್ನು ತಿಂದು ಸಾಯುತ್ತಾಳೆ. ಸುವರ್ಣಾಕ್ಷನೂ ಕೂಡ ವಿಷಪೂರಿತ ಪ್ರಸಾದವನ್ನು ಸೇವಿಸಿದ್ದರಿಂದ ಸಾಯುತ್ತಾನೆ. ಅವನ ಸಾವಿನೊಂದಿಗೆ ಈ ನಾಟಕ ಮುಗಿಯುತ್ತದೆ.

ಈ ನಾಟಕದಲ್ಲಿ ಡಿ. ವಿ ಗುಂಡಪ್ಪನವರು ಉದ್ದೇಶಪೂರ್ವಕವಾಗಿ ಸೇರಿಸಿರುವ ಎರಡು ಹೊಸ ಭಾಗಗಳಿವೆ. ಅವುಗಳೆಂದರೆ, ಒಂದು ಡಿ.ವಿ ಗುಂಡಪ್ಪನವರ ರಾಜಕೀಯ ನಂಬಿಕೆ. ಎರಡು, ಇವರ ಪ್ರಜಾಪ್ರಭುತ್ವದ ಆದರ್ಶಗಳನ್ನು ಪರಿಚಯಿಸುತ್ತದೆ. ಹೀಗಾಗಿ ಡಿ. ವಿ ಗುಂಡಪ್ಪನವರು ಈ ನಾಟಕದ ಮೂಲಕ ಕನ್ನಡ ನಾಡಿನಜನತೆಗೆ 'ಪ್ರಜಾಪ್ರತಿನಿಧಿ ಸಭೆ'ಯ ಪರಿಚಯವನ್ನು ಮಾಡುವ ಮೂಲಕ ಅದನ್ನು ಕನ್ನಡದ ಸಂದರ್ಭದಲ್ಲಿ ಸ್ಥಾಪಿಸಲು ಮುಂದಾಗಿದ್ದರು.

ಡಿ.ವಿ. ಗುಂಡಪ್ಪನವರು ಈ ನಾಟಕದಲ್ಲಿ ರೋಮಕರನ್ನು ಶೂರ, ದೇಶಭಕ್ತ, ಬುದ್ಧಿವಂತ ಮತ್ತು ಜ್ಞಾನಿಗಳು ಎಂದು ವರ್ಣಿಸಿದ್ದಾರೆ. ಅವರ ಈ ಗುಣಗಳು ತಮ್ಮ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಸಹಾಯ ಮಾಡಿದವು ಎಂದು ಅವರು ತೋರಿಸುತ್ತಾರೆ. ಇದರೆ ಜೊತೆಗೆ ಮತ್ತೊಂದು ವಿಷಯದ ಕಡೆ ಗಮನ ಹರಿಸುತ್ತಾರೆ. "ಒಂದು ಇದೇ ನಾಟಕವನ್ನು ಡಿ.ವಿ.ಜಿ. ಯವರು ರೂಪಾಂತರಿಸಲು ಕಾರಣವೇನು ? ಅವರೇ ಹೇಳುವ ಹಾಗೆ ಈ ನಾಟಕಕ್ಕೆ ಇರುವ ಎರಡು ಅರ್ಹತೆಗಳು ಅದನ್ನು ರೂಪಾಂತರಿಸಲು ಪ್ರೇರೇಪಿಸಿದವು. ಮೊದಲನೇಯದು ರಾಣಿ ವಿಕ್ಟೋರಿಯಾ ಕಾಲದಲ್ಲಿ ಟೆನ್ನಿಸನ್ ಗೆ ದೊರೆತ ಸ್ಥಾನ– ಮಾನ. ಆತನು ಸ್ವತಃ ರಾಣಿಯ ಆಶ್ರಯದಲ್ಲೇ ಇದ್ದರೂ ಕೂಡ ಜನರಿಂದ ದೂರವಾಗಲಿಲ್ಲ. ಅವನು ರಾಣಿಯ ಹೊಗಳುಭಟ್ಟನಾಗದೇ ಜನರ ಕಷ್ಟಗಳಿಗೆ ಸ್ಪಂದಿಸಿದ. ಹೀಗಾಗಿ ಆತ ಜನರ ಕವಿಯಾದ. ನಂತರ ಇವರು ಕೊಡುವ ಎರಡನೇ ಕಾರಣ, ಕನ್ನಡ ಸಾಹಿತ್ಯದಲ್ಲಿ ಜನರ ಕಾವ್ಯ ಇಲ್ಲದಿರುವುದಕ್ಕೆ ಅವರ ಕಾಲದಲ್ಲಿದ್ದ ಕನ್ನಡ ಕಾವ್ಯದ ಸ್ವರೂಪವನ್ನು ಟೀಕಿಸುತ್ತಾರೆ."[4] ಹೀಗೆ ಪ್ರಸ್ತುತ ನಾಟಕವು ಮುಖ್ಯವಾಗಿ ಕರ್ನಾಟಕದಲ್ಲಿ ಅಂದಿನ ಸಂದರ್ಭ ಹಾಗೂ ಪ್ರಸ್ತುತ ದಿನಗಳಲ್ಲೂ ಸಹ ನಮ್ಮ ನಡುವೆ ಇರಬೇಕಾದ ರಾಜಕೀಯ ನಂಬಿಕೆ ಮತ್ತು ಪ್ರಜಾಪ್ರಭುತ್ವದ ಆದರ್ಶಗಳನ್ನು ತಿಳಿಸುತ್ತದೆ.

ತಿಲೋತ್ತಮೆ : ಸ್ವನಾಶ ಕುಲ ಮತ್ತು ಆದರ್ಶ ವ್ಯಕ್ತಿತ್ವ

ಡಿ.ವಿ. ಗುಂಡಪ್ಪನವರ ಮತ್ತೊಂದು ನಾಟಕ 'ತಿಲೋತ್ತಮೆ' ಈ ನಾಟಕವನ್ನು ತಾನು ಯಾಕೆ ಬರೆದೆ ಎಂಬ ಬಗ್ಗೆ ಡಿ. ವಿ ಗುಂಡಪ್ಪನವರು ಎಲ್ಲಿಯೂ ಹೇಳಿಲ್ಲ. ಈ ನಾಟಕವು ಮೊದಲು ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆಯ 1921 ರ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾಯಿತು. ಇದನ್ನು ಡಿ. ವಿ ಗುಂಡಪ್ಪನವರು ಯಾಕೆ ರಚಿಸಿದರು ? ಎಂಬ ಪ್ರಶ್ನೆಗೆ ಈ ಸಂದರ್ಭದಲ್ಲಿ ನನಗೆ, 'ಮೈಸೂರಿನಲ್ಲಿ ಆ ಸಂದರ್ಭದಲ್ಲಿ ಉಂಟಾದ ಸಮಾಜೋ–ರಾಜಕೀಯ ಸಂದರ್ಭದ ಹಿನ್ನೆಲೆ, ಡಿ. ವಿ ಗುಂಡಪ್ಪನವರಲ್ಲಿ ಮೂಲತಃ ಇದ್ದ ಕೆಲವು ನಂಬಿಕೆಗಳಾದ ಚಾತುರ್ವರ್ಣ ಪದ್ಧತಿಯ ಬಗ್ಗೆ ಇದ್ದ ನಂಬಿಕೆ, ಆಧುನಿಕ ಜಾತಿ ವ್ಯವಸ್ಥೆಯ ಬಗ್ಗೆ ಇದ್ದ ತಿರಸ್ಕಾರ ಹಾಗೂ ಮನುಷ್ಯರ ಆಂತರಿಕ ಸಾಮರ್ಥ್ಯದ ಬಗ್ಗೆ ಇದ್ದ ನಂಬಿಕೆ' ಈ ನಾಲ್ಕು ತಾತ್ವಿಕ ಅಂಶಗಳು ಕಾರಣವಾಗುವ ಮೂಲಕ ಆಗಿನ ಸಂದರ್ಭದ ಮೈಸೂರಿನಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರ ನಡುವೆ ಸರ್ಕಾರಿ ಸೌಲಭ್ಯಗಳನ್ನ ಪಡೆದುಕೊಳ್ಳುವಲ್ಲಿ ಉಂಟಾದ ಹೋರಾಟಗಳು ಮುಖ್ಯವಾಗಿ ಪರಿಣಮಿಸುವ ಮೂಲಕ ಇವರು ಈ ನಾಟಕವನ್ನು ರಚಿಸಿರಬಹುದು ಎಂಬ ಆಧಾರಗಳ ಮೇಲೆ ಈ ನಾಟಕವನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಈ ನಾಟಕದ ರಚನೆಯನ್ನು ಕುರಿತು ವಿಜಯಕುಮಾರ ಎಂ ಬೋರಟ್ಟಿಯವರು ಹೇಳಿರುವಂತೆ "ಮಿಲ್ಲರ್ ಕಮಿಟಿಯ ಶಿಫಾರಸ್ಸುಗಳು, ಅದು ಸೃಷ್ಟಿಸಿದ ಸಾಮಾಜಿಕ ಮತ್ತು ರಾಜಕೀಯ ವಿವಾದಗಳು ಹಾಗೂ ಹೊಸ ದಿವಾನರ ನೇಮಕ ಇವುಗಳ ಹಿನ್ನೆಲೆಯಲ್ಲಿ ಡಿ. ವಿ. ಜಿಯವರ ತಿಲೋತ್ತಮೆ ಅವರ ಅಸಮಾಧಾನ ಮತ್ತು ಅಸಂತೋಷವನ್ನು ಕಾಲ್ಪನಿಕವಾಗಿ ಅಭಿವ್ಯಕ್ತಿಸುವ ಮಾಧ್ಯಮವಾಗಿ ಗೋಚರಿಸುತ್ತದೆ[5] ಎಂದಿದ್ದಾರೆ.

ತೀಲೋತ್ತಮೆ ದೇವಲೋಕದ ಒರ್ವ ಅಪ್ಸರೆ. ಹಿಂದೂಪುರಾಣಗಳ ಪ್ರಕಾರ ಅವಳು ಬ್ರಹ್ಮನ ಆಶಯದಂತೆ ವಿಶ್ವಕರ್ಮನ ಕೌಶಲ್ಯದಿಂದ ಸೃಷ್ಟಿಯಾದವಳು. ಆಕೆ ಎಷ್ಟೊಂದು ಸುಂದರಿಯಾಗಿದ್ದಳೆಂದರೆ ಸ್ವತಃ ಶಿವ ಮತ್ತು ಇಂದ್ರರು ಅವಳ ಸೌಂದರ್ಯಕ್ಕೆ ಆಕರ್ಷಿತರಾಗಿ ಚಂಚಲರಾಗುತ್ತಿದ್ದರು ಎಂದು ಪುರಾಣಗಳು ಹೇಳುತ್ತವೆ. ಡಿ. ವಿ ಗುಂಡಪ್ಪನವರು ಈ ಕಥನವನ್ನು ತಮ್ಮ ನಾಟಕಕ್ಕೆ ಬಳಸಿಕೊಂಡು, ಸುಂದ–ಉಪಸುಂದ ಎಂಬ ಇಬ್ಬರು ರಾಕ್ಷಸರು ಇವಳ ಸೌಂದರ್ಯದ ದೆಸೆಯಿಂದ ಹೇಗೆ ಹತರಾದರು ಎಂದು ಚಿತ್ರಿಸಿದ್ದಾರೆ. ಈ ನಾಟಕದಲ್ಲಿ ಒಂಭತ್ತು ದೃಷ್ಯಗಳಿವೆ. ಸುಂದ–ಉಪಸುಂದ ಎಂಬ ಇಬ್ಬರು ರಾಕ್ಷಸ ಸಹೋದರರ ಸುತ್ತಾ ಈ ನಾಟಕದ ಕಥೆ ಹೆಣೆದುಕೊಂಡಿದೆ. ನಾಟಕದ ಪ್ರಾರಂಭದಲ್ಲಿ ದೇವಲೋಕದಲ್ಲಿ ಇಂದ್ರ, ಉಪೇಂದ್ರ, ಅಗ್ನಿ ಮತ್ತು ಇತರ ದೇವತೆಗಳು ರಂಭೆ, ಊರ್ವರ್ಶಿಯರ ನೃತ್ಯವನ್ನು ವೀಕ್ಷಿಸುತ್ತಿದ್ದಾರೆ. ಆಗ ಇಂದ್ರ ಮತ್ತು ಉಪೇಂದ್ರರ ನಡುವಿನ ಸಂಭಾಷಣೆಯಲ್ಲಿ ಒಂದು ವಿಷಯ ತಿಳಿಯುತ್ತದೆ. ಭೂಮಿಯಲ್ಲಿ ಮನುಷ್ಯರು ಕಷ್ಟಪಟ್ಟು, ಅನೇಕ ಆಚರಣೆಗಳ ಮೂಲಕ ದೇವಲೋಕದ ದೇವತೆಗಳಿಗೆ ಸಮನಾಗಿ ನಿಲ್ಲಲು ಪ್ರಯತ್ನಿಸುತ್ತಿರುವ ಅಂಶ ಇಲ್ಲಿ ಅವರ ಸಂಭಾಷಣೆಯ ವಸ್ತು. ದೇವಲೋಕದ ಪ್ರಾಪ್ತಿಗಾಗಿ ಅವರು ಅಪಾರ ಹಣವನ್ನೂ ವ್ಯಯ ಮಾಡುತ್ತಿರುವ ವಿಷಯವು ನಮಗೆ ತಿಳಿಯುತ್ತದೆ. ಇವರಿಬ್ಬರ ನಡುವೆ ಸಂಭಾಷಣೆ ನಡೆಯುತ್ತಿರುವಾಗ ನಾರದ ಮುನಿಯ ಆಗಮನವಾಗುತ್ತದೆ. ಭೂಮಿಯಲ್ಲಿ ನಡೆಯುತ್ತಿರುವ ಸಂಗತಿಯನ್ನು ದೇವತೆಗಳಿಗೆ ತಿಳಿಸಿ, ಅವರೆಲ್ಲರೂ ಎಚ್ಚರದಿಂದಿರಬೇಕೆಂದು ತಿಳಿ ಹೇಳುತ್ತಾನೆ. ಸುಂದ–ಉಪಸುಂದರ ಘೋರ ತಪ್ಪಸ್ಸಿನ ಪರಿಣಾಮಗಳನ್ನು ಅವರಿಗೆ ತಿಳಿಸಿ ಮೂರು ಲೋಕಗಳನ್ನು ವಿಶೇಷವಾಗಿ ಇಂದ್ರಲೋಕವನ್ನು ಅವರು ಆಕ್ರಮಿಸುವ ಸಾಧ್ಯತೆಯನ್ನು ವಿವರಿಸುತ್ತಾನೆ. ಮೊದ, ಮೊದಲು ಇಂದ್ರ ನಾರದನ ಮಾತುಗಳಿಗೆ ಅಷ್ಟೊಂದು ಗಮನ ಕೊಡುವುದಿಲ್ಲ. ಆದರೆ ಕ್ರಮೇಣ ನಾರದ ಹೇಳಿದುದರಲ್ಲಿ ನಿಜವಿದೆ ಎಂಬುದು ಅವನಿಗೆ ಅರಿವಾಗುತ್ತದೆ. ಸುಂದ– ಉಪಸುಂದರಿಂದ ದೇವಲೋಕಕ್ಕೆ ಉಂಟಾಗುವ ಅಪಾಯದ ಬಗ್ಗೆ ದೇವಲೋಕದ ದೇವತೆಗಳಿಗೆ ಮನದಟ್ಟಾಗುತ್ತದೆ. ಇತ್ತ ಕಡೆ ಸುಂದ–ಉಪಸುಂದರು ಬ್ರಹ್ಮನನ್ನು ಕುರಿತು ಘೋರ ತಪಸ್ಸು ಮಾಡಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅವನಿಂದ ಮೂರುಲೋಕವನ್ನು ಪಡೆಯುವ ವರವನ್ನು ಪಡೆಯುತ್ತಾರೆ. ಇದಕ್ಕೆ ಮೊದಲು ದೇವತೆಗಳು ಈ ತಪಸ್ಸನ್ನು ಹಾಳು ಮಾಡಲು ಅನೇಕ ಉಪಾಯಗಳನ್ನು ಹೂಡುತ್ತಾರೆ. ಇವರ ತಪಸ್ಸನ್ನು ಹಾಳು ಮಾಡಲು ನಾಟಕದ ಆರಂಭದ ಒಂದು ದೃಶ್ಯದಲ್ಲಿ ಚಿತ್ರ ಮತ್ತು ವಿಚಿತ್ರ ರೆಂಬ ಇಬ್ಬರು ಯಕ್ಷರು ದೇವಲೋಕದ ದೇವತೆಗಳ ಆಜ್ಞೆಯಂತೆ ಭೂಮಿಗೆ ಬಂದು ಸುಂದ–ಉಪಸುಂದರ ತಪಸ್ಸನ್ನು ಹಾಳು ಮಾಡಲು ಪ್ರಯತ್ನಿಸುತ್ತಾರೆ. ಮೊದಲಿಗೆ ವಿಚಿತ್ರನ ಸರದಿ. ಆದರೆ ಅವನು ತನ್ನ ಪ್ರಯತ್ನದಲ್ಲಿ ವಿಫಲನಾಗುತ್ತಾನೆ. ಆಗ ಚಿತ್ರ ಸುಂದ–ಉಪಸುಂದರ ತಪಸ್ಸನ್ನು ಹಾಳು ಮಾಡಲು ಒಂದು ಉಪಾಯದಿಂದ ಮಾತ್ರ ಸಾಧ್ಯ ಎಂದು ಹೇಳುತ್ತಾನೆ.

ಚಿತ್ರ : ವಿಚಿತ್ರ, ಸುಂದೋಪಸುಂದರ ರಾಕ್ಷಸರು, ಉಗ್ರ ಸ್ವಭಾವದವರು. ಅವರಲ್ಲಿ ರಂಭಾದಿಗಳ ಶೃಂಗಾರ ಚೇಷ್ಟೆಯು ಗುಡ್ಡದ ಮೇಲೆ ಬಿದ್ದ ಮಳೆಯಂತೆ ವ್ಯರ್ಥವಾದುದು ಆಶ್ಚರ್ಯವಲ್ಲ. ಆದರೆ ಅವರು ಅತಿಶಯವಾದ ಕುಲಾಭಿಮಾನವುಳ್ಳವರು. ಅವರೀಗ ತಪಸ್ಸು ಮಾಡುತ್ತಿರುವುದು ಸ್ವಜಾತಿಯ ಉದ್ಧಾರಕ್ಕೋಸ್ಕರವಾಗಿಯೇ. ಅಂಥವರಿಗೆ ನಾವು ಅವರ ಪೂರ್ವಿಕರಂತೆಯೇ ಕಾಣಿಸಿಕೊಂಡು ಹಠವನ್ನು ಬಿಟ್ಟು ತಪಸ್ಸನ್ನು ನಿಲ್ಲಿಸಿರೆಂದು ಬುದ್ಧಿ ಹೇಳಬೇಕು[6]. ಇಲ್ಲಿ ಚಿತ್ರನ ಪ್ರಕಾರ ಸುಂದೋಪಸುಂದರ ಜಾತಿಗೆ ಸೇರಿದವರು ಮಾತ್ರ ಅವರಿಗೆ ತಪಸ್ಸನ್ನು ಬಿಡುವಂತೆ ಬುದ್ಧಿ ಹೇಳಲು ಸಾಧ್ಯ. ಹೊರಗಿನವರಿಂದ ಅದು ಅಸಾಧ್ಯ. ಹಾಗಾಗಿ ಚಿತ್ರ–ವಿಚಿತ್ರರು ಸುಂದೋಪಸುಂದರ ಪೂರ್ವಿಕರಾದ ಹಿರಣ್ಯಕಶಪು ಮತ್ತು ನಿಕುಂಭರ ವೇಷವನ್ನು ಧರಿಸುತ್ತಾರೆ. ತಮ್ಮನ್ನು ಬಡತನ ಮತ್ತು ದೇವತೆಗಳ ಉಪಟಳದಿಂದ ಕಾಪಾಡು ಎಂದು ಆ ರಾಕ್ಷಸರನ್ನು ಬೇಡುತ್ತಾರೆ. ಈ ಕುತಂತ್ರವೂ ಕೈಕೊಡುತ್ತದೆ[7]. ಇವರಿಬ್ಬರ ಪ್ರಯತ್ನದ ಬಳಿಕ ಸುಂದೋಪಸುದರು ತಮ್ಮ ತಪಸ್ಸನ್ನು ಮುಂದುವರಿಸಿ ಬ್ರಹ್ಮನಿಂದ ಮೂರು ಲೋಕಗಳನ್ನು ಗೆಲ್ಲುವ ವರವನ್ನು ಪಡೆದುಕೊಳ್ಳುತ್ತಾರೆ. ವರವನ್ನು ಪಡೆದಾದ ಮೇಲೆ ದೇವಲೋಕವನ್ನು ಜಯಿಸುವುದರ ಮೂಲಕ ತಮ್ಮ 'ಕುಲಕ್ರಮಾಗತ ವೈರ'ವನ್ನು ಮುಂದುವರಿಸಿ, 'ಜಾತಿಗೌರವ'ವನ್ನು ಕಾಪಾಡುವ ಪ್ರತಿಜ್ಞೆ ಮಾಡುತ್ತಾರೆ. ನಾಟಕದ ಅಂತ್ಯದಲ್ಲಿ ಬ್ರಹ್ಮ ಮತ್ತು ಇಂದ್ರರ ನಡುವೆ ನಡೆಯುವ ಸಂಭಾಷಣೆಯಲ್ಲಿ ಸುಂದೋಪಸುಂದರ ತಪಸ್ಸನ್ನು–ಭಂಗ ಮಾಡುವ ಎಲ್ಲಾ ಪ್ರಯತ್ನಗಳು ವಿಫಲವದಾಗ ದೇವಲೋಕದ ಇಂದ್ರ ಬ್ರಹ್ಮನನ್ನು ಭೇಟಿಯಾಗಿ, ಪರಿಹಾರವನ್ನು ಯಾಚಿಸುತ್ತಾನೆ. ಬ್ರಹ್ಮನಿಗೆ ನಮಸ್ಕರಿಸುತ್ತಾ 'ಸುಂದೋಪಸುಂದರಿಂದ ಕೇವಲ ದೇವಲೋಕ ಮಾತ್ರ ಅಪಾಯಕ್ಕೊಳಗಾಗಿಲ್ಲವೆಂದು, ಯಾವ ವೇದಗಳಿಗೆ ತಾವೇ ಜನ್ಮಸ್ಥಾನವೋ, ಯಾವ ಶಸ್ತ್ರಾಜಾಲಕ್ಕೆ ತಾವೇ ಮೂಲಾಧಾರವೋ, ಯಾವ ಕ್ರತುವ್ರತಗಳಿಗೆ ತಾವೇ ಅಧಿದೇವತೆಯೋ, ಯಾವ ತಪೋನುಷ್ಠಾನಗಳಿಗೆ ತಮ್ಮ ಪರಮಾನುಗ್ರಹವೇ ಪ್ರಯೋಜನವೋ, ಆ ಬ್ರಾಹ್ಮಣ ವಿದ್ಯಾಧರ್ಮಗಳೆಲ್ಲವೂ ಸುಂದೋಪಸುಂದರ ದೌರಾತ್ಯದಿಂದ ಖಿಲವಾಗುತ್ತಿವೆಯಲ್ಲವೇ[8] ಎಂದು ಬೇಡಿಕೊಳ್ಳುತ್ತಾನೆ. ಈ ಸಂಭಾಷಣೆಯ ನಂತರ ಇಂದ್ರ ತಿಲೋತ್ತಮೆಯನ್ನು ಸುಂದೋಪಸುಂದರ ಬಳಿಗೆ ಕಳುಹಿಸುತ್ತಾನೆ. ಅವಳ ಸೌಂದರ್ಯ ಮತ್ತು ಕಾಮುಕ ವೈರಾಗ್ಯಕ್ಕೆ ಸೋತ ಈ ಇಬ್ಬರು ರಾಕ್ಷಸರು ಅವಳನ್ನು ತಮ್ಮ ತಮ್ಮ ಭೋಗ್ಯವಸ್ತುವನ್ನಾಗಿಸುವ ಸಲುವಾಗಿ ಸ್ಪರ್ಧೆಗಿಳಿಯುತ್ತಾರೆ. ಈ ಸ್ಪರ್ಧೆಯಲ್ಲಿ ಒಬ್ಬರನ್ನೊಬ್ಬರು ಕೊಲ್ಲುತ್ತಾರೆ. ಹೀಗೆ ಆ ರಾಕ್ಷಸರಿಬ್ಬರೂ ದೇವಲೋಕವನ್ನು ಗೆಲ್ಲುವ ಅಪಾಯವನ್ನು ತಿಲೋತ್ತಮೆ ತಪ್ಪಿಸುತ್ತಾಳೆ. ಅದೇ ರೀತಿ ನಾಟಕದ ಆರನೇ ದೃಷ್ಯದಲ್ಲಿ ದೇವಲೋಕದಲ್ಲಿರುವ ಅಧಿಕಾರಶಾಹಿಯ ಶ್ರೇಣೀಕರಣದ ಬಗ್ಗೆ ಟೀಕೆಗಳಿವೆ. ಹೀಗೆ ಈ ನಾಟಕದಲ್ಲಿ ಸ್ವನಾಶಕುಲ ಹಾಗೂ ಆದರ್ಶವ್ಯಕ್ತಿತ್ವವನ್ನು ಕುರಿತು ವಿವರಿಸಿದ್ದೇನೆ.

ಶ್ರೀ ವಿದ್ಯಾರಣ್ಯ ವಿಜಯ : ಹಿಂದೂ ರಾಷ್ಟ್ರೀಯತೆ ಮತ್ತು ಪ್ರಜಾಪ್ರಭುತ್ವ

ಶ್ರೀ ವಿದ್ಯಾರಣ್ಯ ವಿಜಯವು ಐತಿಹಾಸಿಕ ನಾಟಕ ಎನ್ನುವುದಕ್ಕಿಂತ ಐತಿಹಾಸಿಕ ದೃಶ್ಯೋತ್ಸವ ಎಂದು ಹೇಳಬಹುದು. ಡಿ.ವಿ. ಗುಂಡಪ್ಪನವರು ವಿದ್ಯಾರಣ್ಯರನ್ನು ಒಬ್ಬ ರಾಜಕೀಯ ಹರಿಕಾರ ಮತ್ತು ಆದರ್ಶಗುರು ಎಂದು ಪ್ರಸ್ತುತ ನಾಟಕದಲ್ಲಿ ಚಿತ್ರಿಸಿದ್ದಾರೆ. ಈ ನಾಟಕವನ್ನು ಬರೆಯುವುದಕ್ಕಿಂತ ಮೊದಲು ಡಿ. ವಿ ಗುಂಡಪ್ಪನವರು ವಿದ್ಯಾರಣ್ಯರ ಚರಿತ್ರೆಯನ್ನು ಮೂರು ಸಂಪುಟಗಳ ಸಂಶೋಧನಾ ಕೃತಿಗಳನ್ನು ಬರೆದಿದ್ದರು.9 ಈ ನಾಟಕದಲ್ಲಿ ನಾಲ್ಕು ಭಾಗಗಳಿವೆ. ಭಾಗ–1 ಪ್ರೇರಣೆ (ಐದು ದೃಶ್ಯ) ಭಾಗ–2 ಸಂಧಾನ (ಐದು ದೃಶ್ಯ) ಭಾಗ–3 ಅಂಕುರ (ಆರು ದೃಶ್ಯ) ಭಾಗ–4 ಫಲ (ಐದು ದೃಶ್ಯ) ಮೊದಲನೇ ಭಾಗದಲ್ಲಿ ವಿಜಯನಗರ ಸಾಮ್ರಾಜ್ಯ ಪ್ರಜಾಪ್ರಭುತ್ವದ ರಾಜಕೀಯ ಜೀವನವನ್ನು ಅವರು ಅನಾವರಣಗೊಳಿದ್ದಾರೆ. ಈ ನಾಟಕವನ್ನು ಡಿ. ವಿ ಗುಂಡಪ್ಪನವರು ಬರೆಯಲು ಮುಖ್ಯ ಕಾರಣ ಏನು ? ಎಂಬ ಪ್ರಶ್ನೆ ಹಾಕಿಕೊಂಡ ನನಗೆ ಈ ನಾಟಕ್ಕಿಂತ ಮೊದಲು ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಸಂಬಂಧಿಸಿದಂತೆ ದೊರೆಯುವ ಆಕರಗಳು ಶ್ರವಣಬೆಳಗೊಳದ ಬುಕ್ಕರಾಯನ ಶಾಸನ ಹಾಗೂ ಕಲ್ಯಾಣ ಪಟ್ಟಣದ ಶಾಸನ ಇವುಗಳಲ್ಲಿನ ವಸ್ತು ಹಾಗೂ ಈ ನಾಟಕದ ವಸ್ತು ಎರಡೂ ಒಂದೇ ಆಗಿರುವುದರಿಂದ ಡಿ.ವಿ. ಗುಂಡಪ್ಪನವರು ಈ ಶಾಸನಗಳ ಪ್ರೇರಣೆಯಿಂದ ಈ ನಾಟಕವನ್ನು ರಚಿಸಿದ್ದಾರಾ ? ಅಥವಾ ಈ ನಾಟಕದಲ್ಲಿ ಬುಕ್ಕರಾಯನ ಮುಂದೆ ಆಗುವ ಕೋಮು ಸಾಮರಸ್ಯದ ವಿಚಾರ ಆಗಿನ ಮೈಸೂರು ಪ್ರಾಂತ್ಯದಲ್ಲೂ ಅಂತಹ ಘಟನೆಗಳು ಆಗಿದ್ದವಾ ? ಅದನ್ನು ಪರಿಹರಿಸಲು ಈ ನಾಟಕವನ್ನು ರಚಿದ್ದಾರೆಯೇ? ಎಂಬಂತಹ ಪ್ರಶ್ನೆಗಳ ಮೂಲಕ ಈ ನಾಟಕವನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಪ್ರಜಾಪರವಾದ ರಾಜಕೀಯ ವ್ಯವಸ್ಥೆಗೆ ವಿದ್ಯಾರಣ್ಯರ ಸಮರ್ಥ ಬೋಧನೆ ಮತ್ತು ಮಾರ್ಗದರ್ಶನಗಳೇ ಮುಖ್ಯ ಕಾರಣ ಎಂಬುದನ್ನು ಈ ಭಾಗದಲ್ಲಿ ತಿಳಿಯಲಾಗುತ್ತದೆ. ವಿದ್ಯಾರಣ್ಯರು ವಿಜಯನಗರ ಸಾಮ್ರಾಜ್ಯ ಸ್ಥಾಪಿಸುವ ಉದ್ದೇಶ ತುಷ್ಕರ (ಮುಸ್ಲಿಂ) ಹಾವಳಿಯನ್ನು ತಡೆಗಟ್ಟುವ ಸಲುವಾಗಿ. ಈ ಉದ್ದೇಶವನ್ನು ಅವರು ಹಕ್ಕ–ಬುಕ್ಕರೆಂಬ ಇಬ್ಬರು ದಂಡಾಧಿಪತಿಗಳ ಸಹಾಯದಿಂದ ಈಡೇರಿಸಿ ಕೊಂಡರು. ಅಷ್ಟೇ ಅಲ್ಲದೇ ಸ್ಥಾಪಿತಗೊಂಡ ಸಾಮ್ರಾಜ್ಯ ತಮ್ಮ ಮಾರ್ಗದರ್ಶನದಲ್ಲಿ ಸುವ್ಯವಸ್ಥೆಯಿಂದ ಆಳಲ್ಪಡುತ್ತಿದೆಯೇ ಎಂದು ಮುತುವರ್ಜಿ ವಹಿಸಿದರು. ಪ್ರಜೆಗಳಿಗೋಸ್ಕರ ಯಾವ ಯಾವ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯ ಎಂದು ಅವರು ಸದಾ ಚಿಂತಿಸಿದರು. ನಾಟಕದ ಅಂತ್ಯದಲ್ಲಿ ಒಮ್ಮೆ ವಿಜಯನಗರದ ಜನರು ಉತ್ಸಾಹ ಮತ್ತು ಸಂಭ್ರಮದಿಂದ ಇರುವುದನ್ನು ಕಂಡು ವಿದ್ಯಾರಣ್ಯರು ನೆಮ್ಮದಿಯಿಂದ ಎರಡನೇ ಹರಿಹರನ(ಬುಕ್ಕನ ನಂತರ ಆಳಿದ ರಾಜ) ಆಳ್ವಿಕೆಯನ್ನು ಪ್ರಶಂಸಿಸುತ್ತಾರೆ.

ವಿದ್ಯಾರಣ್ಯ : ಯಾವ ರಾಜ್ಯದಲ್ಲಿ ಪ್ರಜಾಗಣವು ಹೀಗೆ ಉತ್ಸಾಹ ಶಾಲಿಯಾಗಿ ಹಬ್ಬಹರಿದಿನಗಳಲ್ಲಿ ಸಂಭ್ರಮಪಡುತ್ತಿರುವುದೋ ಅಲ್ಲಿ ರಾಜ್ಯದ ಅಂಗಾಂಗಗಳೆಲ್ಲವೂ ತಮ್ಮ ತಮ್ಮ ಕಾರ್ಯಗಳನ್ನು ಯಥಾವಿಧಿಯಾಗಿ ಆಚರಿಸುತ್ತಿರುವರೆಂಬುದು ಸ್ವತಃಸಿದ್ಧವಾಗುತ್ತದೆ. ಬ್ರಾಹ್ಮಣರ ವಿದ್ಯಾ ವೈದುಷ್ಯಗಳಿಗೂ ಕ್ಷತ್ರಿಯರ ಐಶ್ವರ್ಯ ಪ್ರತಾಪಗಳಿಗೂ ವೈಶ್ಯರ ಚಾತುರ್ಯ ವೈಭವಗಳಿಗೂ ಜನಪದ ಸಂತೃಪ್ತಿಯೊಂದೇ ಪ್ರಮಾಣವು ಎಲ್ಲ ಶಕ್ತಿ ಎಲ್ಲ ಸಂಪತ್ತುಗಳಿಗೂ ಪ್ರಜಾಸಂತುಷ್ಟಿಯೊಂದೇ ಸಾರ್ಥಕತೆ. ಎಲ್ಲ ಪ್ರತಿಭೆ ಪ್ರಕಾರಗಳಿಗೂ ಜವಜೀವನಾಂಗಣವೇ ರಂಗಭೂಮಿ..... ಇನ್ನು ನಾನು ರಾಜಕೀಯದಿಂದ ವಿರಮಿಸಬಹುದಲ್ಲವೆ?[10] ವಿದ್ಯಾರಣ್ಯರ ಈ ಪ್ರಶಂಸೆ ಮತ್ತು ಪ್ರಜಾ–ಪರ ವಿಚಾರಗಳು ನಾಟಕದಾದ್ಯಂತ ಅಲ್ಲಲ್ಲಿ ಕಾಣಿಸಿಗುತ್ತವೆ. ರಾಜಕೀಯದ ಜೊತೆಗೆ ನಿಜವಾದ ಧರ್ಮವೆಂದರೆ ವರ್ಣಾಶ್ರಮ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪದ್ಧತಿಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವುದು ಎಂದು ವಿದ್ಯಾರಣ್ಯರು ಹೇಳುವ ಮೂಲಕ ಈ ನಾಟಕ ಕೊನೆಗೊಳ್ಳುತ್ತದೆ. ರಾಜ್ಯದ ಕಲ್ಯಾಣ ಗುಣಗಳಿಗೆ ಕಾರಣಕರ್ತನಾದವನು ರಾಜ ಎಂದು ಒಪ್ಪಿಕೊಳ್ಳದ ಡಿ. ವಿ ಗುಂಡಪ್ಪನವರು 'ಎಲ್ಲಿಯವರೆಗೂ ರಾಜನ ಬಲ ಮತ್ತು ಅಧಿಕಾರ ಆ ಪರಮೇಶ್ವರ ಮತ್ತು ಪ್ರಜೆಗಳಿಂದ ಅಂಗೀಕೃತವಾಗುವುದಿಲ್ಲವೋ ಅಲ್ಲಿಯವರೆಗೂ ಆತನ ಕರ್ತವ್ಯ ಮತ್ತು ಆಡಳಿತ ಅಪೂರ್ಣ' ಎಂದು ಅವರು ಅಭಿಪ್ರಾಯ ಪಡುತ್ತಾರೆ. ವಿದ್ಯಾರಣ್ಯರು ಆಡುವ ಪ್ರಶಂಸೆಯ ಮಾತುಗಳಿಗೆ ಕಾರಣ ಎರಡನೇ ಹರಿಹರ ಪ್ರಜೆಗಳ ಕಲ್ಯಾಣವನ್ನು ಬಯಸಿದ್ದು ಮಾತ್ರವಲ್ಲ, ಅವನ ಆಳ್ವಿಕೆಯನ್ನು ಪ್ರಜೆಗಳು ಉತ್ಸಾಹದಿಂದ ಅಂಗೀಕರಿಸಿದ್ದು. ಇದಕ್ಕೆ ಮತ್ತೊಂದು ಸಂದರ್ಭದಲ್ಲಿ ಮೊದಲನೇ ಹರಿಹರ ವಿದ್ಯಾರಣ್ಯರ ಆಶೀರ್ವಾದ ಪಡೆಯಲು ಬಂದಾಗ ವಿದ್ಯಾರಣ್ಯರು ಅವನಿಗೆ ಪ್ರಜೆಗಳನ್ನು ಸಂತಸದಿಂದಿಡಲು ಮತ್ತು ಅವರ ಕಲ್ಯಾಣಕ್ಕಾಗಿ ಸಮರ್ಥ ಆಡಳಿತಗಾರರನ್ನು ನೇಮಕ ಮಾಡಲು ಕಿವಿಮಾತನ್ನು ಹೇಳುತ್ತಾರೆ. ಉತ್ತಮ ಆಡಳಿತಕ್ಕಾಗಿ ನೇಮಕವಾಗುವ ಅಧಿಕಾರಿಗಳು ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ನಿಸ್ವಾರ್ಥ ಮತ್ತು ಧಾರ್ಮಿಕತೆಯಿಂದ ಕೂಡಿರಬೇಕೆಂದು ಅವರು ಬಯಸುತ್ತಾರೆ. ಅದೇ ರೀತಿ ಕೋಮು ಸೌಹಾರ್ದತೆಗೆ ಸಂಬಂಧಿಸಿದಂತೆ ಬುಕ್ಕರಾಯನ ನಿಲುವು ಈ ನಾಟಕದಲ್ಲಿ ಪ್ರಸ್ತುತ ರಾಜಕಾರಣಿಗಳಿಗೆ ಆದರ್ಶದಂತಿದೆ. ಜೈನರು ಮತ್ತು ವೈಷ್ಣವರು ಕಲಹ ಮಾಡಿಕೊಂಡು ಬುಕ್ಕನ ಬಳಿ ಪರಿಹಾರಕ್ಕಾಗಿ ಬಂದಾಗ ಎರಡೂ ಕಡೆಯವರ ವಾದ ಆಲಿಸಿದ ಮೇಲೆ ಬುಕ್ಕರಾಯ ಕೋಮು ಸೌಹಾರ್ದತೆ ಮತ್ತು ಸಮಾನತೆಯ ಬಗ್ಗೆ ಅವರಿಗೆ ಉಪದೇಶ ನೀಡುತ್ತಾನೆ. ಸಾಮ್ರಾಜ್ಯದಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಕಾಣಲು ಎಲ್ಲರ ಸಹಕಾರ ಮತ್ತು ಸಹಬಾಳ್ವೆ ಅಗತ್ಯ ಎಂದು ಅವನು ಹೇಳುತ್ತಾನೆ. ಹೀಗೆ ಹೇಳುವಾಗ ಬುಕ್ಕರಾಯ ಸಾಮ್ರಾಜ್ಯದ ಸಮುದಾಯಗಳನ್ನು ಮೂರು ಮತಗಳಿಂದ ಗುರುತಿಸುತ್ತಾನೆ. ಹಿಂದೂಗಳೆಲ್ಲಾ ಚಾತುರ್ವರ್ಣದಲ್ಲಿ ನಂಬಿಕೆ ಇಟ್ಟಿದ್ದರೆ, ಜೈನ, ಬೌದ್ಧ ಮತ್ತು ಮೊಹಮದರು ತಮ್ಮದೇ ಆದ ತತ್ತ್ವದಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ಅವರವರ ತತ್ತ್ವಗಳನ್ನು ಇತರರು ಗೌರವಿಸಿದರೆ ಎಲ್ಲರಿಗೂ ಒಳ್ಳೆಯದು ಎಂಬುದು ಬುಕ್ಕನ ಅಭಿಮತ. ಹೀಗೆ ಪ್ರಸ್ತುತ ನಾಟಕವನ್ನು ರಾಜಕೀಯ, ರಾಜಧರ್ಮ, ಪ್ರಜೆಗಳ ಯೋಗಕ್ಷೇಮ ಮತ್ತು ಕೋಮು ಸೌಹಾರ್ದತೆ ವಿಷಯಗಳನ್ನು ಚರ್ಚಿಸುವ ವೇದಿಕೆಯಾಗಿ ಬಳಸಿಕೊಂಡಿದ್ದಾರೆ. ಹೀಗಾಗಿ ಈ ನಾಟಕವನ್ನು ಕೋಮುಸೌಹಾರ್ದತೆ, ಭಾರತೀಯ ಮೂಲ ಪರಂಪರೆ ಹಾಗೂ ಪ್ರಜಾಪ್ರಭುತ್ವದ ಅನುಷ್ಠಾನ ಈ ವಿಷಯಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದೇನೆ.

ಪರುಶುರಾಮ : ನಿರಂಕುಶಾಧಿಕಾರದ ಪ್ರಶ್ನೆ

ಡಿ.ವಿ. ಗುಂಡಪ್ಪನವರು ಪರುಶುರಾಮ ನಾಟಕ ನಿರಂಕುಶಾಧಿಕಾರದ ಮೇಲೆ ಕೊಡುವ ಬಲವಾದ ಕೊಡಲಿ ಪೆಟ್ಟಿನಂತೆ ರಚನೆಯಾಗಿದೆ. ಈ ನಾಟಕ 1940ರ ಸಂದರ್ಭದಲ್ಲಿ ರಚನೆಯಾಗಿದ್ದರೂ ಅದು ಪ್ರಕಟವಾಗಿದ್ದು 1974ರಲ್ಲಿ ಇದನ್ನು ಗಮನಿಸಿದಾಗ ಈ ನಾಟಕ ಬರೆದ ಸಂದರ್ಭದಲ್ಲಿ ಮೈಸೂರು ಸಂಸ್ಥಾನವನ್ನು ಆಳ್ವಿಕೆ ಮಾಡುತ್ತಿದ್ದ ಅರಸ ನಾಲ್ವಡಿ ಕೃಷ್ಣರಾಜ ಒಡೆರ್ ಆದ್ದರಿಂದ ಅವರನ್ನು ಹಾಗೂ ಅವರ ಕಾರ್ಯವೈಖರಿಗಳನ್ನು ಕುರಿತು ಈ ನಾಟಕವನ್ನು ಬರೆದಿರಬಹುದೇ ? ಅಂದರೆ, ಈ ವೇಳೆಗೆ ಮೈಸೂರಿನ ಬ್ರಾಹ್ಮಣ ಪತ್ರಿಕೆಗಳಲ್ಲಿ ಕ್ಷತ್ರಿಯ ರಾಜರು ಟೀಕೆಗೊಳಗಾಗಿದ್ದರು[11] ಎಂಬ ಪ್ರಶ್ನೆಗಳು ಈ ಸಂದರ್ಭದಲ್ಲಿ ಉಂಟಾಗುವುದರಿಂದ ಈ ವಿಚಾರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಈ ನಾಟಕವನ್ನು ಅಧ್ಯಯನಕ್ಕೊಳಪಡಿಸಲಾಗುತ್ತದೆ. ಪರುಶುರಾಮನನ್ನು ಪ್ರಜೆಗಳ ಮೇಲೆ ತನ್ನ ನಿರಂಕುಶಾಧಿಕಾರವನ್ನು ಚಲಾಯಿಸುವ ರಾಜನನ್ನು ಕಟುವಾಗಿ ಪ್ರಶ್ನಿಸುವ ಪಾತ್ರವಾಗಿ ಚಿತ್ರಿಸಿದ್ದಾರೆ. ಭೂಮಿಯ ಮೇಲಿರುವ ಸಮಸ್ತ ವಸ್ತುಗಳ ಮೇಲೆ ರಾಜನಾದವನಿಗೆ ಅಧಿಕಾರವಿದೆ ಎಂದು ಸಮರ್ಥಿಸಿಕೊಂಡು, ತನ್ನ ತಂದೆ ಜಮದಗ್ನಿಯ ಆಶ್ರಮದಿಂದ ಕಾಮಧೇನುವನ್ನು ಬಲವಂತವಾಗಿ ಕೊಂಡೊಯ್ಯುವ ಕ್ಷತ್ರಿಯ ರಾಜ ಕಾರ್ತವೀರ್ಯಾರ್ಜುನನನ್ನು ಪರಶುರಾಮ ಕೊಲ್ಲುತ್ತಾನೆ. ಅನಂತರ ಪರಶುರಾಮ ಇಲ್ಲದಿರುವ ಸಮಯ ನೋಡಿಕೊಂಡು, ಕಾರ್ತವೀರ್ಯಾರ್ಜುನನ ಮಗ ಜಮದಗ್ನಿಯನ್ನು ಕೊಂದು ಸೇಡು ತೀರಿಸಿಕೊಳ್ಳುತ್ತಾನೆ. ನಾಟಕದ ಮುಂದಿನ ಭಾಗದಲ್ಲಿ ದುಷ್ಟ ಕ್ಷತ್ರಿಯರನ್ನು ನಾಶ ಮಾಡುವ ಪರಶುರಾಮನ ಪರಾಕ್ರಮ ಮತ್ತು ಘೋರ ಪ್ರತಿಜ್ಞೆಯ ವಿವರಗಳಿವೆ. ಅವನು ಅಹಂಕಾರಿ ಕ್ಷತ್ರಿಯ ರಾಜನನ್ನು ಕೊಂದ ನಂತರ ಪಡೆದುಕೊಂಡ ಭೂಮಿಯನ್ನು ಬ್ರಾಹ್ಮಣರಿಗೆ ಹಂಚುತ್ತಾನೆ. ವಿಷ್ಣುವಿನ ಇನ್ನೊಂದು ಅವತಾರವಾದ ರಾಮನನ್ನು ಭೇಟಿ ಮಾಡಿದ ಮೇಲಷ್ಟೇ ಪರಶುರಾಮನು ತನ್ನ ಉಗ್ರ ಪ್ರತಿಜ್ಞೆ ಮತ್ತು ಕ್ಷತ್ರಿಯರ ಮೇಲಿನ ಯುದ್ಧವನ್ನು ಹಿಂದೆಗೆದುಕೊಳ್ಳುತ್ತಾನೆ. 'ಕೆಟ್ಟ' ಕ್ಷತ್ರಿಯ ರಾಜನನ್ನು ಕೊಂದು 'ಒಳ್ಳೆಯ' ಕ್ಷತ್ರಿಯ ರಾಜನನ್ನು ಹರಸುವ ಮೂಲಕ ತಾನು ಸ್ಥಾಪನೆ ಮಾಡಿದ ಧರ್ಮ ಮಾರ್ಗವನ್ನು ಮುಂದುವರಿಸಬೇಕೆಂದು ಪರಶುರಾಮ ರಾಮನನ್ನು ಕೇಳಿಕೊಳ್ಳುತ್ತಾನೆ. ಈ ಮೂಲಕ ನಾಟಕವು ಮುಕ್ತಾಯವಾಗುತ್ತದೆ. ಹೀಗಾಗಿ ಈ ನಾಟಕದಲ್ಲಿ ಬರುವ ಪರಶುರಾಮನ ಪಾತ್ರವು ರೌದ್ರವಾಗಿಯೂ, ಪ್ರೀತಿ, ವಾತ್ಸಲ್ಯಗಳನ್ನುಳ್ಳ ವ್ಯಕ್ತಿಯಾಗಿಯೂ ಕಟ್ಟಿಕೊಟ್ಟಿದ್ದಾರೆ

ಇದುವರೆಗೂ ನೋಡಿದ ಡಿ.ವಿ. ಗುಂಡಪ್ಪನವರ ನಾಟಕಗಳು ಪ್ರಜಾಪ್ರಭುತ್ವವನ್ನು ಒಂದು ರೀತಿಯಲ್ಲಿ ಜಾರಿಗೊಳಿಸುವಂತೆ ಕಂಡು ಬಂದಿದ್ದು ಗಾರ್ದಭ ವಿಜಯ ಮತ್ತು ಜಾಕ್ ಕೇಡ್ ಇವುಗಳಲ್ಲಿ ಪ್ರಜಾಪ್ರಭುತ್ವದ ಆಚರಣೆಯ ಬಗ್ಗೆ ಭ್ರಮನಿರಸನಗೊಳ್ಳುತ್ತಾರೆ. ಕಾರಣ ಆಧುನಿಕ ಪರಿಸ್ಥಿತಿಯಲ್ಲಿ ಪಡೆದುಕೊಂಡಿರುವ ಪ್ರಜಾಪ್ರಭುತ್ವವನ್ನು ಸರಿಯಾಗಿ ಬಳಸಿಕೊಳ್ಳದೆ ಅದನ್ನು ಭ್ರಷ್ಟಗೊಳಿಸುವ ಜನ ಹೆಚ್ಚಾಗಿದ್ದಾರೆ. ಇಂತಹ ಸಂದರ್ಭಗಳಲ್ಲಿ ಬಂದ ನಾಟಕಗಳು ಇವೆರಡು. ಗಾರ್ದಭ ವಿಜಯದಲ್ಲಿ ಕತ್ತೆಗಳೆಲ್ಲಾ ಸೇರಿಕೊಂಡು ಒಂದು ಸಭೆ ನಡೆಸುತ್ತವೆ ಕಾರಣ ಮನುಷ್ಯ ಪ್ರಜಾರಾಜ್ಯವನ್ನು ಕಟ್ಟಿಕೊಂಡಿರುವುದರಿಂದ ಆಧುನಿಕ ಮನೋಭಾವ ದವನಾಗಿ ಸಾಮಾನ್ಯ ಪ್ರಾಣಿಗಳು ಬದುಕಲೂ ಸಹ ಸ್ಥಳವಿಲ್ಲದಂತೆ ಮಾಡಿದ್ದಾನೆ. ಅದಕ್ಕಾಗಿ ಅವುಗಳೆಲ್ಲಾ ಒಂದು ಕಡೆ ಸೇರಿಕೊಂಡು ಬ್ರಹ್ಮನ ಬಳಿ ಹೋಗಿ ನ್ಯಾಯವನ್ನು ಕೇಳಲು ಮುಂದಾಗುತ್ತವೆ.

ಹೀಗಾಗಿ ಡಿ.ವಿ. ಗುಂಡಪ್ಪನವರ ನಾಟಕಗಳ ಅಧ್ಯಯನ ಹಾಗೂ ಅವುಗಳ ಹಿಂದಿರುವ ಸಮಾಜೋ–ಸಾಂಸ್ಕೃತಿಕ, ರಾಜಕೀಯ ನಿಲುವುಗಳನ್ನು ಸಂಕ್ಷಿಪ್ತವಾಗಿ ಅವಲೋಕಿಸಲಾಗಿದೆ. ಇವರು ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಬರೆದ ಈ ಎರಡು ನಾಟಕಗಳು ಪ್ರಜಾಪ್ರಭುತ್ವದ ಸ್ವೇಚ್ಛಾಚಾರದ ಬಳಕೆಯನ್ನು ನಮ್ಮ ಮುಂದಿಡುತ್ತವೆ. ಹೀಗೆ ಪ್ರಸ್ತುತ ಲೇಖನದಲ್ಲಿ ಡಿ.ವಿ. ಗುಂಡಪ್ಪನವರ ನಾಟಕಗಳ ಸುತ್ತಾ ಹೆಣೆದುಕೊಂಡಿರುವ ವಿಚಾರಧಾರೆಗಳನ್ನು ಕೂಲಂಕುಷವಾಗಿ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಅವುಗಳ ಹಿಂದಿರುವ ಸಮಾಜೋ–ಸಾಂಸ್ಕೃತಿಕ, ರಾಜಕೀಯ ನಿಲುವುಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಅಡಿ ಟಿಪ್ಪಣಿಗಳು

1. ಲೋಕಜ್ಞಾನ ಪುಟ 25
2. ಡಿವಿಜಿ ಕೃತಿಶ್ರೇಣಿ ಸಂಪುಟ–3 ನಾಟಕ ಪುಟ 15
3. ಡಿವಿಜಿ ಕೃತಿಶ್ರೇಣಿ ಸಂಪುಟ–3 ನಾಟಕ ಪುಟ 15
4. ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ: ಡಿ. ವಿ. ಜಿಯವರ ನಾಟಕಗಳ ಒಂದು ಅಧ್ಯಯನ ಪುಟ. 46–47

– 122ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಲಂಕೇಶರ ಕತೆಗಳಲ್ಲಿ ಆಧುನಿಕತೆ

✍ ಡಾ. ಮೃತ್ಯುಂಜಯ ಎಚ್. ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶ್ರೀನಿವಾಸಪುರ ಕೋಲಾರ ಜಿಲ್ಲೆ.

ಸ್ವಾತಂತ್ರ್ಯ ಪೂರ್ವದ ತುಡಿತಗಳನ್ನು ಕುವೆಂಪು, ಕಾರಂತ, ಬೇಂದ್ರೆ, ಮಾಸ್ತಿಯರಲ್ಲಿ ಕಂಡರೆ ಸ್ವಾತಂತ್ರ್ಯೋತ್ತರ ತುಡಿತಗಳನ್ನು ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಪಿ. ಲಂಕೇಶ್, ಗಿರೀಶ್ ಕಾರ್ನಾಡ್ ಮೊದಲಾದವರಲ್ಲಿ ಕಾಣುತ್ತೇವೆ. ಆದರೆ ಪಿ.ಲಂಕೇಶ್ ತನ್ನ ಸಮಕಾಲೀನರಿಗಿಂತ ಭಿನ್ನವಾಗಿ ಕಾಣುತ್ತಾರೆ. ಸ್ವಾತಂತ್ರ್ಯಾನಂತರದ ಸಂದರ್ಭದಲ್ಲಿನ ರಾಜಕೀಯ ಮತ್ತು ಸಾಂಸ್ಕೃತಿಕ ಬದಲಾವಣೆಗಳನ್ನು ಲಂಕೇಶರಷ್ಟು ತೀವ್ರವಾಗಿ, ಅತ್ಯಂತ ನಿಷ್ಠೂರವಾಗಿ ತಮ್ಮ ಸಾಹಿತ್ಯದಲ್ಲಿ ಮೂಡಿಸಿದವರು ಮತ್ತೊಬ್ಬರಿಲ್ಲ. ಲಂಕೇಶ್ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಕಂಡ ವಿಶಿಷ್ಟ ಪ್ರತಿಭೆ. ಸಮಕಾಲೀನ ಸಮಾಜ, ಸಂಸ್ಕೃತಿ, ಮನುಷ್ಯ ಸಂಬಂಧಗಳ ಕುರಿತು ಸೂಕ್ಷ್ಮವಾಗಿ ಚಿಂತಿಸಿ, ತೀವ್ರತೆಯಿಂದ ಬರೆದವರು. ತನ್ನ ಕಾಲದ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ವಿದ್ಯಮಾನಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದವರು. ಸಾಹಿತ್ಯದ ಸಾಧ್ಯತೆಗಳನ್ನು ಅರಿತವರು. ಮನುಷ್ಯನ ಮೂಲಭೂತ ಸಮಸ್ಯೆಗಳನ್ನು ಕಂಡುಕೊಂಡು ಅವುಗಳ ಪರಿಹಾರದ ಮಾರ್ಗಗಳಿಗೋಸ್ಕರ ಪರಿತಪಿಸುವ ಲಂಕೇಶ್ ನಿಜಕ್ಕೂ ತಮ್ಮ ಬರಹಗಳಲ್ಲಿ ತಲೆಮಾರಿನ ತಲ್ಲಣಗಳನ್ನು ದಾಖಲಿಸುತ್ತಾರೆ. ಈ ಹಿನ್ನೆಲೆಯಲ್ಲಿ ಲಂಕೇಶ್ ತನ್ನ ಕತೆಗಳಲ್ಲಿ ಆಧುನಿಕ ದೃಷ್ಟಿಕೋನವನ್ನು ಭಿನ್ನ ನೋಟ–ನೆಲೆಗಳಲ್ಲಿ ಚಿತ್ರಿಸುತ್ತಾರೆ.

ಪಶ್ಚಿಮ ರಾಷ್ಟ್ರಗಳಲ್ಲಿ ಮೊದಲಿಗೆ ಈ ಆಧುನಿಕತೆಯ ಪರಿಕಲ್ಪನೆ ಉದಯಿಸಿತು. 'ಆಧುನಿಕತೆ' ಎಂಬುದು ಒಂದು ಜೀವನಕ್ರಮ. ಒಂದು ಪ್ರಜ್ಞೆ ಮತ್ತು ಮನಸ್ಥಿತಿ ಕೂಡಾ ಹೌದು. ಐರೋಪ್ಯ ರಾಷ್ಟ್ರಗಳು ಹದಿನೈದನೆ ಶತಮಾನದಲ್ಲಿ ಪ್ರಾರಂಭವಾದ ಪುನರುಜ್ಜೀವನ ಚಳುವಳಿಯ ಕಾರಣದಿಂದ ಹಳೆಯ ಸಾಂಪ್ರದಾಯಿಕ ನಡೆಗಳನ್ನು ತಿರಸ್ಕರಿಸಿ ನವನಾಗರೀಕತೆಯೆಡೆಗೆ ಸಾಗಿದವು. ಶಿಕ್ಷಣ, ಕಲೆ, ಸಂಸ್ಕೃತಿ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ತೀವ್ರತರವಾದ ಬದಲಾವಣೆಗಳಾದವು. ವೈಜ್ಞಾನಿಕ ಸಂಶೋಧನೆಗಳು, ಯಂತ್ರಗಳ ಆವಿಷ್ಕಾರದಿಂದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತೀವ್ರತರವಾದ ಪಲ್ಲಟಗಳಾದವು. ಮನುಷ್ಯ ಸಂಬಂಧ, ಬದುಕಿನ ರೀತಿನೀತಿ, ಆಡಳಿತ, ಕಾನೂನು ಹೀಗೆ ಎಲ್ಲದರಲ್ಲೂ ಹೊಸ ಪ್ರಜ್ಞೆ ಮೂಡಿತು. ಇದರ ಪ್ರಭಾವದಿಂದ ಸಂಪ್ರದಾಯಬದ್ಧ ಆಚರಣೆಗಳಿರುವ ಭಾರತೀಯ ಸಮಾಜದಲ್ಲಿ ಹೊಸತರ ಬೆಳವಣಿಗೆಯಾಯಿತು. ಪಾರಂಪರಿಕವಾಗಿ ಬಂದಿದ್ದ ಆಚರಣೆಗಳನ್ನು ತಿರಸ್ಕರಿಸುವ ಅಥವಾ ಮುರಿದು ಕಟ್ಟುವ ಕ್ರಿಯೆ ಪ್ರಾರಂಭವಾಯಿತು. ಇದರಿಂದ ಭಾರತೀಯ ಸಮಾಜದಲ್ಲೂ ಕೂಡಾ ಶಿಕ್ಷಣ, ಧರ್ಮ, ಸಂಸ್ಕೃತಿ, ಕಲೆ, ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾದವು. ಆಧುನಿಕತೆ ಭಾರತದಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿತು. ಜಾತಿ–ಜನಾಂಗ, ವರ್ಗ, ವರ್ಣ, ಮೇಲು–ಕೀಳುಗಳಿಂದ ತೊಳಲಾಡುತ್ತಿದ್ದ ಭಾರತೀಯ ಸಮಾಜದಲ್ಲಿ ಸಮಾನತೆ ಸಾಧ್ಯತೆಯಾಗಿ ಆಧುನಿಕತೆ ಕಂಡಿತು. ದಲಿತರು, ಸ್ತ್ರೀಯರು, ದಮನಿತರು, ಅವಮಾನಿತರು ತಳ ಸಮುದಾಯಗಳು ಬಿಡುಗಡೆ ಪಡೆವ ಶಕ್ತಿಯಾಗಿ ಈ ಆಧುನಿಕತೆ ಸಹಾಯ ಮಾಡಿತು. ಈ ಆಧುನೀಕತೆಯಿಂದ ಧನಾತ್ಮಕ ಪರಿಣಾಮಗಳ ಜೊತೆ ಜೊತೆಗೆ ಋಣಾತ್ಮಕ ಪರಿಣಾಮಗಳು ಆದವು. ನಮ್ಮ ಗ್ರಾಮ ಸಮಾಜದ ಸಾವಯವ ಸಾಂಸ್ಕೃತಿಕ ಸ್ವರೂಪ ವಿಘಟನೆಯಾಯಿತು. ನಮ್ಮ ಸನಾತನ ಪರಂಪರೆ, ಸಾಂಸ್ಕೃತಿಕ ಹಿರಿಮೆಯ ಬಗೆಗೆ ನಮಗಿದ್ದ ಜ್ಞಾನ ವಿಸ್ಮೃತಿಗೊಳಗಾಗಿದ್ದು ಈ ಆಧುನಿಕತೆಯ ಕೊಡುಗೆಯ ಕಾರಣದಿಂದ. ತಡೆಯಿಲ್ಲದೆ ಬೆಳೆದ ನಗರಗಳು, ಕೊಳ್ಳುಬಾಕ ಸಂಸ್ಕೃತಿ, ಸಂಕೀರ್ಣವಾದ ಬದುಕು, ಗ್ರಾಮ ಮತ್ತು ನಗರಗಳ ನಡುವಿನ ಅಂತರ ಇವೆಲ್ಲಾ ಆಧುನಿಕತೆಯ ಪರಿಣಾಮವೇ ಆಗಿದೆ. ಇಪ್ಪತ್ತನೇ ಶತಮಾನದಲ್ಲಿ ಆಧುನಿಕ ಬದುಕಿಗೆ ಬಹಳ ತೀವ್ರವಾಗಿ ಪ್ರತಿಕ್ರಿಯಿಸಿದ್ದು ನವ್ಯ ಸಾಹಿತ್ಯ. ನವ್ಯ ಸಾಹಿತ್ಯದಲ್ಲಿ ಬರುವ ಆಧುನಿಕ ಬದುಕಿನ ಚಿತ್ರಣ ಆಧುನಿಕತೆಗೆ ವಿರೋಧಾತ್ಮಕ ಪ್ರತಿಕ್ರಿಯೆಯೇ ಆಗಿದೆ.

ಈ ಹಿನ್ನೆಲೆಯಲ್ಲಿ ಲಂಕೇಶರ ಕಥಾ ಸಾಹಿತ್ಯವನ್ನು ಗಮನಿಸಿದಾಗ ಅವರು ಆಧುನಿಕತೆಯ ಅಗತ್ಯತೆಯನ್ನ ಒಪ್ಪಿಕೊಳ್ಳುತ್ತಾರೆ. ಜಾತೀಯತೆಯ ಸಮಾಜ, ಶ್ರೇಣೀಕರಣ ವ್ಯವಸ್ಥೆ, ಧರ್ಮಾಂಧತೆ, ಅಜ್ಞಾನ, ಅಂಧಕಾರ, ಮೂಢನಂಬಿಕೆಯಿಂದ ವಿಮುಕ್ತಿ ಪಡೆಯಲು ಆಧುನಿಕ ಪ್ರಜ್ಞೆ ಅಗತ್ಯವೆಂದು ಲಂಕೇಶ್ ನಂಬಿದ್ದರು. ಜೊತೆಗೆ ಈ ಆಧುನಿಕತೆಯೊಂದಿಗೆ ಜೊತೆ ಜೊತೆಯಾಗಿ ಬಂದ ಮನುಷ್ಯ ಸಂಬಂಧಗಳ ನಡುವಿನ ಬಿಕ್ಕಟ್ಟು, ಕಾಡುವ ಅಭದ್ರತೆ, ನಗರ ಜೀವನದ ಒತ್ತಡಗಳು, ಮನುಷ್ಯನ ಗೋಸುಂಬೆತನ, ಇತ್ಯಾದಿಗಳ ಬಗ್ಗೆ ಆತಂಕವನ್ನು ಕೂಡಾ ವ್ಯಕ್ತಪಡಿಸುತ್ತಾರೆ. ಒಟ್ಟಾರೆ ಆಧುನೀಕತೆಯನ್ನು ಭಾರತೀಯ ಸಮಾಜದ ಶುದ್ಧತೆಯ ಕಾರಣಕ್ಕಾಗಿ ಸ್ವೀಕರಿಸುವ ಆಸಕ್ತಿಯನ್ನು ತೋರಿಸುತ್ತಾರೆ. ಮೊದಮೊದಲು ಲಂಕೇಶರ ಕಥೆಗಳು ನಗರ ಕೇಂದ್ರಿತ ನೆಲೆಯಲ್ಲಿ ಇದ್ದರೂ, ಆನಂತರ ಅವರ ಮನೋಧರ್ಮ ಗ್ರಾಮೀಣ ಪರಿಸರದತ್ತ ವಾಲುವುದನ್ನು ಕಾಣಬಹುದು. ಅವರ 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ' ಕತೆಯಲ್ಲಿ ಆಧುನೀಕತೆಯನ್ನು ವಿರೋಧಿಸುವ ನೆಲೆಯನ್ನು ಗುರುತಿಸಬಹುದು. ನಗರದಿಂದ ಕಲಿತು ಬರುವ ಪರಮೇಶನ ಇಂಗ್ಲೀಷ್ ಪದಗಳು, ಆಧುನಿಕವಾದ ನಡೆ, ನುಡಿ, ಉಡುಗೆ, ವ್ಯಾನಿಟಿ ಬ್ಯಾಗ್ ಎಲ್ಲವೂ ಗೌರಿಯಿಂದ ಅಂತರ ಕಾಯ್ದುಕೊಳ್ಳವಂತೆ ಮಾಡುತ್ತವೆ. ದೇಸಿ ಪ್ರತಿಭೆಯಾದ ಶಿವರುದ್ರುವಿನ ಮುಂದೆ ಸೋಲುತ್ತವೆ. ಸಮಾಜದ ಪಾರಂಪರಿಕ ಮೌಲ್ಯಗಳನ್ನು ಧಿಕ್ಕರಿಸಿ ಮನೆಗೆಲಸದವನಾದ ಶಿವರುದ್ರುವನ್ನು ಪಡೆಯುತ್ತಾಳೆ. ಗೌರಿ ತನ್ನ ಆಯ್ಕೆಯ ಸ್ವಾತಂತ್ರ್ಯವನ್ನು ಬಳಸಿಕೊಡು ಶಿವರುದ್ರನನ್ನು ಒಲಿಯುತ್ತಾಳೆ. ಬಯಸಿದ ವ್ಯಕ್ತಿತ್ವವನ್ನು ಒಲಿಯುವಾಗ ಸಮಾಜದ ನಂಬಿಕೆಗಳನ್ನು ಮೀರುತ್ತಾಳೆ. ಅಂತಸ್ತು, ಬಣ್ಣ, ಜಾತಿ ಇವೆಲ್ಲಾ ಗೌರಿಗೆ ನಗಣ್ಯ. "ತನ್ನ ಮಾವ ಪರಮೇಶ ಜಗನ್ಮೋಹಿನಿ ಸಿನಿಮಾದಲ್ಲಿ ಮಾಡಿದ ಹಾಗೆ ಪ್ರೇಮ ವ್ಯಕ್ತಪಡಿಸಲು ಬಂದಾಗ ಅಸಹ್ಯವಾಗಿ ವಾಕರಿಕೆ ಬಂದರೂ ತೋರಿಸದೆ ಕೃತಕವಾಗಿ ನಕ್ಕವಳೂ"[1] "ತನ್ನ ಸೀರೆಗೆ ಬೆಂಕಿ ಬಿದ್ದಾಗ ನಂದಿಸಲು ಬಂದ ಶಿವರುದ್ರುವಿನ ಕೊರಳನ್ನು ಅಪ್ಪಿ ತುಟಿಯ ಮೇಲೆ ತುಟಿಯಿಟ್ಟು, ಎದೆಯನ್ನು ಬೆಚ್ಚಗೆ ಒತ್ತಿಕೊಂಡು ಬಿಡಬ್ಯಾಡ ಎನ್ನುತ್ತಾಳೆ"[2]. ಒಪ್ಪಿತ ಸಮಾಜದ ನೀತಿ–ನಿಯಮಗಳನ್ನು ಭಗ್ನಗೊಳಿಸುವ ಆಧುನಿಕ ಹೆಣ್ಣಾಗಿ ಗೌರಿ ಕಂಡುಬರುತ್ತಾಳೆ. ಸುಶಿಕ್ಷಿತನಾದರೂ ತನ್ನೆಲ್ಲಾ ರಾಜಕಾರಣ, ಆರೆಸ್ಸೆಸ್ ನಂಟುಗಳನ್ನು ಬಿಟ್ಟು, ಸ್ವಾಭಿಮಾನಿಯಾಗಿ ಹೂವಿನ ವ್ಯಾಪಾರದಲ್ಲಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ತೊಡಗುವ 'ಡಿಸೋಜಾನ ಊವಿನ ವೃತ್ತಿ' ಕತೆಯ ಡಿಸೋಜ ದೇಸಿಯತೆಯ ಪರವಾಗಿದ್ದಾನೆ. ಆಧುನಿಕತೆಯ ಸಂಕೇತವಾದ ಶರ್ಟು, ಶರಾಯಿ ಹಾಕಿಕೊಂಡು ಹೂವಿನ ವ್ಯಾಪಾರ ಮಾಡುತ್ತಿದ್ದ ಡಿಸೋಜನನ್ನ ಶೇಷಗಿರಿ "ಈ ಪಂಚೆ, ಟವಲು, ಅಂಗಿ ಹಾಕಿಕೋ. ನಿನ್ನ ಶರ್ಟು ಶರಾಯಿಗಳನ್ನು ಬ್ಯಾಗಲ್ಲಿ ಇಟ್ಟುಕೋ. ಮಲ್ಗೇ ಹೂವು, ಮಲ್ಲಿಗೆ ಹೂವು, ಕಾಕಡಾ ಮೊಲ್ಗೆ ಎಂದ ಆದಷ್ಟು ಹಳ್ಳಿಯವರ ತರ ಸಾವಂತಿಗೆ ಗುಲಾಬೀ, ಗುಲ್ ಗುಲ್ ಗುಲಾಬೀ ಅಂತ ಕೂಗು"[3]. ಎಂದು ಹೇಳಿ ಕೊಡುವಲ್ಲಿ ಲಂಕೇಶರ ಆಧುನಿಕತೆ ವಿರೋಧಿ ನೆಲೆಗಳನ್ನ ಗುರುತಿಸಬಹುದು. ಈ ಶರ್ಟು, ಶರಾಯಿ ಆಧುನಿಕತೆಯನ್ನು ಸಂಕೇತಿಸಿದರೆ, ಪಂಚೆ, ಟವಲು, ಅಂಗಿ ದೇಸಿಯತೆಯನ್ನ ಪ್ರತಿನಿಧಿಸುತ್ತವೆ. 'ಶಾರದೆಯ ಪುಟ್ಟ ಸಾಹಸ' ಕತೆಯ ಶಾರದೆ ನಗರಬದುಕಿನ ಕುತಂತ್ರಗಳಿಂದ ಬೇಸತ್ತು ತನ್ನ ಹಳ್ಳಿಗೆ ವಾಪಾಸಾಗುವುದರ ಮೂಲಕ ಆಧುನಿಕತೆಯನ್ನು ನಿರಾಕರಿಸುತ್ತಾಳೆ. ಇಲ್ಲೆಲ್ಲಾ ಲಂಕೇಶರು ಆಧುನೀಕತೆಯ ವಿರೋಧವಾಗಿ ಕಂಡರೆ, ಮಾರಲಾಗದ ನೆಲ, ಕಲ್ಲು ಕರಗುವ ಸಮಯ, ಮುಟ್ಟಿಸಿಕೊಂಡವನು, ಸಹಪಾಠಿ ಮುಂತಾದ ಕಥೆಗಳಲ್ಲಿ ಆಧುನಿಕತೆಯ ಪರವಾಗಿ ಕಾಣುತ್ತಾರೆ. ಏಕೆಂದರೆ ಜಾತಿ–ಜನಾಂಗ, ವರ್ಗ, ವರ್ಣ, ಮೇಲು–ಕೀಳುಗಳಿಂದ ತೊಳಲಾಡುತ್ತಿದ್ದ ಭಾರತೀಯ ಸಮಾಜದಲ್ಲಿ ಸಮಾನತೆಯ ಸಾಧ್ಯತೆಯಾಗಿ ಆಧುನಿಕತೆ ಕಂಡಿತು. ದಲಿತರು, ಸ್ತ್ರೀಯರು, ದಮನಿತರು, ಅವಮಾನಿತರು ತಳ ಸಮುದಾಯಗಳು ಬಿಡುಗಡೆ ಪಡೆವ ಶಕ್ತಿಯಾಗಿ ಈ ಆಧುನೀಕತೆ ಸಹಾಯ ಮಾಡಿತು. ಪಾರಂಪರಿಕ ಚೌಕಟ್ಟುಗಳ ಗೋಡೆಗಳನ್ನು ನಿರ್ಮಿಸಿಕೊಂಡು ತಾನು ಹಾಗೂ ತನ್ನ ಸುತ್ತಮುತ್ತಲಿನ ಜನರನ್ನು ನಾಗರೀಕತೆಯ ನವಗಾಳಿಯ ಸೋಂಕಿಗೆ ಬೆರೆಯದೆ ಬದುಕುತ್ತಿದ್ದ ದಲಿತರ ಧಮನಿತರ ಶೋಷಣೆ ಮಾಡುತ್ತಿದ್ದ ಬಸವೇಗೌಡನನ್ನು ಅವನ ಅಸಹ್ಯ ಬದುಕಿಗೆ ಮುಕ್ತಿ ಹಾಡಿದ್ದು ನಗರದಿಂದ ಬಂದ ಸುಶಿಕ್ಷಿತ ಸಾಹಿತಿ ಭಗವಾನ್. "ಬಸವೇಗೌಡ ನೀರು ಹಾಕಿ ಶಿವಪ್ಪನ ಕಾಲು ತೊಳೆಯುತ್ತಿದ್ದಂತೆ ಜನ ಹತ್ತಿರ ಹತ್ತಿರಕ್ಕೆ ಒತ್ತಿಕೊಂಡು ಬರತೊಡಗಿದರು. ಅವರ ಉಸಿರು ನನಗೆ, ಬಸವೇಗೌಡನಿಗೆ ತಾಕುತ್ತಿದ್ದಂತೆ ಇತ್ತು. ಶಿವಪ್ಪ ಕೂಡಾ ನಾಚಿಕೆ, ಭಯದಿಂದ ನಡುಗುತ್ತಿದ್ದ. ಸಾವು ನಮ್ಮನ್ನೆಲ್ಲಾ ಸುತ್ತುವರಿದಂತಿತ್ತು. ಇದು ನನ್ನ ಕೊನೆಗಾಲ ಅನ್ನಿಸಿತು"[4]. ಸಾವಿರಾರು ವರ್ಷಗಳಿಂದ ಸಮಾಜ ಒಪ್ಪಿತ ಪಾರಂಪರಿಕ ಮೌಲ್ಯಗಳನ್ನು ತತ್‌ಕ್ಷಣ ಮುರಿದಾಗ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನ ಲಂಕೇಶ್ ಅಭಿವ್ಯಕ್ತಿಸುತ್ತಾರೆ. ಇಂತಹ ಕೆಲಸಕ್ಕೆ ಕೈ ಹಾಕುವುದು ನಗರದಿಂದ ಬಂದ ಭಗವಾನ್. ಭಗವಾನ್ ಆಧುನೀಕತೆಯ ಸಂಕೇತವಾಗಿದ್ದಾನೆ. ಗುಣಮುಖ ನಾಟಕದ ನಾದಿರ್‌ಷಾನ ನಿಲುವುಗಳನ್ನು ಬದಲಿಸುವ ಅಲಾವಿಖಾನ್ ಆಗಲಿ, ಸಂಕ್ರಾಂತಿ ನಾಟಕದ ಬಿಜ್ಜಳನ ನಿಲುವುಗಳನ್ನು ಬದಲಿಸಲು ಹೊರಟ ಬಸವಣ್ಣರಾಗಲಿ ಹೊಸತನವನ್ನು ತುಂಬುವ ಸುಧಾರಕರೇ ಆಗಿದ್ದಾರೆ. ಅಂದರೆ ಸ್ಥಗಿತಗೊಂಡ ಸಮಾಜಕ್ಕೆ ಹೊಸ ವಿಚಾರಗಳನ್ನು ಬಿತ್ತರಿಸುವ ಪ್ರತಿಯೊಬ್ಬರೂ ಆಧುನೀಕತೆಯ ಸಂಕೇತವಾಗಿಯೇ ನಿಲ್ಲುತ್ತಾರೆ. ಈ ರೀತಿಯ ಸಂದರ್ಭಗಳಲ್ಲಿ ಲಂಕೇಶರು ಮತ್ತೆ ಮತ್ತೆ ಆಧುನೀಕತೆಯನ್ನು ಬಯಸುತ್ತಾರೆ. 'ಮಾರಲಾಗದ ನೆಲ' ಕಥೆಯಲ್ಲಿ ಹಳ್ಳಿಗಳಲ್ಲಿರುವ ಮೌಢ್ಯ, ಕಂದಾಚಾರಗಳನ್ನು ಧಿಕ್ಕರಿಸುವಾಗ ಲಂಕೇಶರು ಆಧುನೀಕತೆಯ ಪರ ನಿಲ್ಲುತ್ತಾರೆ. 'ಮುಟ್ಟಿಸಿಕೊಂಡವನು' ಕತೆಯಲ್ಲೂ ಕೂಡಾ ಜಾತಿಯನ್ನು ನಿರಾಕರಿಸುವ ಪ್ರಗತಿಪರರ ಧೋರಣೆಯನ್ನು ಅನುಸರಿಸುತ್ತಾರೆ. "ಸ್ಪರ್ಶ, ಕೇವಲ ಸ್ಪರ್ಶ ಮಾತ್ರ ಮೈ ಮನಸ್ಸನ್ನು ಹತ್ತಿರಕ್ಕೆ ತರಬಲ್ಲ ಸ್ಪರ್ಶ ಮಾತ್ರ ಜಾತಿ ಸಮಾಜಕ್ಕೆ ವಿಮೋಚನೆ ತರಬಲ್ಲದು. ತನ್ನನ್ನೇ ಮುಟ್ಟಿದ ವೈದ್ಯ ತಿಮ್ಮಪ್ಪ ಅಸ್ಪೃಶ್ಯ ಜಾತಿಗೆ ಸೇರಿದವನೆಂದ ಸವರ್ಣೀಯ ಬಸಲಿಂಗಪ್ಪ ಅನುಭವಿಸುವ ತಲ್ಲಣದ ಮೂಲಕ ಲಂಕೇಶ್ ಇಡೀ ಸಮಾಜದ ಸ್ವರೂಪವನ್ನು ಕಾಣಿಸುತ್ತಾರೆ. ದಲಿತನ ಸ್ಪರ್ಶ ಮಾತ್ರ ಈ ತಲ್ಲಣವನ್ನು ಉಂಟುಮಾಡುತ್ತದೆ ಎಂದರೆ ವರ್ಣ ಸಂಬಂಧಗಳ ಸ್ವರೂಪ ಎಷ್ಟು ಸಂಕೀರ್ಣ ಎಂಬುದನ್ನು ಊಹಿಸಬಹುದು"[5]. ಬಸಲಿಂಗ ಮತ್ತು ತಿಮ್ಮಪ್ಪರ ಮೂಲಕ ಸಾಮಾಜಿಕ ಜಾತಿವ್ಯವಸ್ಥೆಯ ಕಟ್ಟುಪಾಡುಗಳನ್ನು ಚಿತ್ರಿಸುವ ಮೂಲಕ ಮನುಷ್ಯ ಜಾತಿ ಒಂದೇ ಎನ್ನುವ ಈ ಕತೆ ದೇಹ ಮತ್ತು ಮನಸ್ಸುಗಳ ದ್ವಂದ್ವತೆಯನ್ನು ತಿಳಿಸುತ್ತದೆ. ಬಸಲಿಂಗ ಮತ್ತು ತಿಮ್ಮಪ್ಪರ ಮೂಲಕ ಜಾತಿವ್ಯವಸ್ಥೆಯ ಕಟ್ಟುಪಾಡುಗಳನ್ನು ಚಿತ್ರಿಸುವ ಮೂಲಕ ಮನುಷ್ಯ ಜಾತಿ ಒಂದೇ ಎನ್ನುವ ಲಂಕೇಶರು ಆಧುನೀಕತೆಯ ಪರವಾಗಿದ್ದಾರೆ. ಇಲ್ಲಿ ದಲಿತ ವೈದ್ಯ ತಿಮ್ಮಪ್ಪ ಆಧುನಿಕತೆಯ ಸಂಕೇತವಾಗಿದ್ದಾನೆ. ಇನ್ನೊಂದು ಮುಖ್ಯ ಕಥೆಯಾದ 'ಕಲ್ಲುಕರಗುವ ಸಮಯ' ಕಥೆಯನ್ನು ಇಲ್ಲಿ ಗಮನಿಸಬೇಕು. ಕ್ರೌರ್ಯವೇ ತುಂಬಿದ್ದ ಊರಲ್ಲಿ ಮನೆಯವರ, ಊರಿನವರ, ಮಠ, ಜಗದ್ಗುರುಗಳ ಹಾಗೂ ಸಮಾಜದ ವಿರುದ್ಧವಾಗಿ ಹೋರಾಡಿ ಬೇಡರ ತಿಪ್ಪಣ್ಣನನ್ನು ಮದುವೆ ಆಗುವ 'ಕಲ್ಲು ಕರಗುವ ಸಮಯ' ಕತೆಯ ಶ್ಯಾಮಲ ದಿಟ್ಟ ಹೆಣ್ಣಾಗಿ ಕಂಡುಬರುತ್ತಾಳೆ. "ಅದೊಂದು ವೀರಾವೇಷದ, ಮಾರಾಮಾರಿಯ ಊರು. ಹೆಂಡತಿ ವ್ಯಭಿಚಾರ ಮಾಡಿದರೆ ಗಂಡನ ವಾದವಾಗಲಿ, ಗುಪ್ತವಾಗಿ ವ್ಯಸನ ಪಡುವುದಾಗಲಿ ಆ ಊರಲ್ಲಿ ಇರಲಿಲ್ಲ; ವ್ಯಭಿಚಾರ ಮಾಡಿದವಳು ಮತ್ತು ಆಕೆಯ ಪ್ರಿಯಕರ ಇಬ್ಬರ ಕೊಲೆಯೂ ಒಂದೇ ಗಳಿಗೆಯಲ್ಲಿ ಆಗುತ್ತಿತ್ತು. ಕೊಟ್ಟ ಹಣ ಹಿಂದಿರುಗಿಸದೆ ಇದ್ದರೆ ಕೂಡ. ಕಂಬಕ್ಕೆ ಕಟ್ಟಿ ಹೊಡೆದು ಜೀತ ಮಾಡಿಸುವುದು. ಸಂಪ್ರದಾಯ. ಕುಟುಂಬಗಳ ಜಿದ್ದೂ ಹಾಗೆಯೇ. ಎರಡರಲ್ಲಿ ಒಂದು ಕುಟುಂಬ ಧಪನ್ ಆದಂತಯೇ. ಪಂಚಾಯಿತಿಗಳೆಂದರೆ ತಪ್ಪು ಮಾಡಿದವರನ್ನು ಬೆಂಕಿಗೆ ಇಕ್ಕುವ ಸಂದರ್ಭಗಳು"[6]. ಈ ರೀತಿಯ ಕ್ರೂರತೆಯೇ ತುಂಬಿದ್ದ ಊರಲ್ಲಿ ಲಿಂಗಾಯಿತ ಜಾತಿಗೆ ಸೇರಿದ ಶ್ಯಾಮಲಾ ಬೇಡರ ಜಾತಿಗೆ ಸೇರಿದ ತಿಪ್ಪಣ್ಣನನ್ನು ಪ್ರೀತಿಸುತ್ತಾಳೆ. ಮೇಲ್ವರ್ಗ–ಕೆಳವರ್ಗವೆಂಬ ಸಮಾಜದಲ್ಲಿ ಕಟ್ಟುಪಾಡುಗಳಿರುವ ಹಳ್ಳಿಗಳಲ್ಲಿ ಇವಳ ವರ್ತನೆ ಹೊಸ ಅಲೆಯನ್ನು ಸೃಷ್ಟಿಸಿಬಿಡುವುದಂತು ಸತ್ಯ. ಕಥೆಯ ಮುಖ್ಯ ಭೂಮಿಕೆಯಲ್ಲಿ ಕಾಣುವ ಪಾತ್ರಗಳಾದ ಶ್ಯಾಮಲ ಲಿಂಗಾಯಿತ ಜಾತಿ, ತಿಪ್ಪಣ್ಣ ಬೇಡರ ಜಾತಿಗೆ ಸೇರಿದವನಾಗಿರುತ್ತಾನೆ. ಯುವ ಪ್ರೇಮಿಗಳಾದ ಇವರು ಮದುವೆಯಾಗುವ ಮೂಲಕ ಸಾಮಾಜಿಕ ಕಟ್ಟುಪಾಡುಗಳನ್ನು ಮೀರುತ್ತಾರೆ. ಈ ಮೀರುವಿಕೆ ಹೇಗೆ ಸಂಘರ್ಷಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಈ ಕಥೆ ಅಭಿವ್ಯಕ್ತಿಸುತ್ತದೆ. ಶ್ಯಾಮಲ ಜಾತಿಯ ಕಟ್ಟಪಾಡುಗಳನ್ನು ಮೀರಿ ಕೆಳಸಮುದಾಯದ ತಿಪ್ಪಣ್ಣನನ್ನು ಪ್ರೀತಿಸುವಲ್ಲಿ ಅವಳ ಎದೆಗಾರಿಕೆಯನ್ನು ಮೆಚ್ಚಬಹುದು. ಶುದ್ಧ ಪ್ರೇಮ ಸಂಬಂಧದಲ್ಲಿ ಮಾನವತೆಯಷ್ಟೆ ಮುಖ್ಯ ಎಂಬುದನ್ನು ಈ ಕಥೆ ಪ್ರತಿಪಾದಿಸುತ್ತದೆ. ಆಧುನಿಕತೆಯ ಆಗಮನದಿಂದ ಯುವ ಸಮುದಾಯಗಳು ಪಾರಂಪರಿಕ ಮೌಲ್ಯಗಳನ್ನು ಮೀರುತ್ತಿರುವ ಸೂಚನೆಗಳನ್ನು ಲಂಕೇಶರು ನೀಡುತ್ತಿದ್ದಾರೆ. ಈ ಮೂಲಕ ಆಧುನೀಕತೆಯನ್ನು ಪ್ರತಿಪಾದಿಸುತ್ತಿದ್ದಾರೆ.

ಹೀಗೆ ಕಥೆ ಕಾದಂಬರಿ, ಕಾವ್ಯ, ನಾಟಕ, ಸಿನಿಮಾ, ಈ ಎಲ್ಲಾ ರಂಗಗಳಲ್ಲೂ ತನ್ನ ಚಾಪನ್ನು ಮೂಡಿಸಿರುವ ಮೂಲಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಭಿನ್ನ ಬರಹಗಾರರಾಗಿರುವ ಲಂಕೇಶರು ಆಧುನಿಕತೆಯ ಭಿನ್ನ ನೋಟ–ನೆಲೆಗಳಲ್ಲಿ ಸೃಷ್ಟಿಸುವುದರ ಜೊತೆಗೆ ಸೃಜನಾತ್ಮಕವಾದ ಸಾಮಾಜಿಕ ಕಳಕಳಿಯನ್ನು ಅಭಿವ್ಯಕ್ತಿಸುತ್ತಾರೆ. ಇವರು ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಬರೆದರೂ ಕೂಡಾ ಇಡೀ ಭಾರತೀಯ ಸಮಾಜದ ಮುಖ್ಯ ಚಹರೆಗಳನ್ನು ಮತ್ತು ಅವುಗಳು ರೂಪುಗೊಳ್ಳುವ ಸಂದರ್ಭದ ಚಾರಿತ್ರಿಕ ಒತ್ತಡಗಳನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ದೇಶಕ್ಕೆ ಬಿಡುಗಡೆ ಸಿಗುವ ಮೊದಲಿದ್ದ ಧ್ಯೇಯೋದ್ದೇಶಗಳು, ನಿರೀಕ್ಷೆಗಳೆಲ್ಲಾ ಸ್ವಾತಂತ್ರ್ಯ ಪಡೆದ ನಂತರದ ಕಾಲದಲ್ಲಿ ಹುಸಿಯಾದದನ್ನು ವಿವೇಚಿಸುವಾಗ

– 0ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪೌರಾಣಿಕ ನಾಟಕಗಳ ಒಂದು ಅವಲೋಕನ

✍ ನಾಗಮ್ಮ ಹೆಚ್. ಭಂಗರಗಿ, ಕನ್ನಡ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಭಾಲ್ಕಿ.

ರಂಗಭೂಮಿಯ ಇತಿಹಾಸದುದ್ದಕ್ಕೂ ಪೌರಾಣಿಕ ನಾಟಕಗಳು ಒಂದಿಲ್ಲೊಂದು ವಿಧದಲ್ಲಿ ಗಾಢ ಸಂಬಂಧ ಇಟ್ಟುಕೊಂಡು ಬಂದಿರುವುದನ್ನು ಕಾಣುತ್ತೇವೆ. ಇದಕ್ಕೆ ಜನಸಾಮಾನ್ಯರಲ್ಲಿಯ ಧಾರ್ಮಿಕ ಭಾವನೆ, ಭಕ್ತಿ, ಅತಿಮಾನುಷ ಘಟನೆಗಳ ಬಗೆಗಿರುವ ಅವರ ಕುತೂಹಲ ಕಾರಣವೆನ್ನಬೇಕು. ಧಾರ್ಮಿಕ ಆರಾಧನೆಯ ಉಗಮವಾಗಿಯೆ ರಂಗಭೂಮಿ ಅಸ್ತಿತ್ವಕ್ಕೆ ಬಂದಿತೆಂಬುದನ್ನು ಗಮನಿಸಿದರೆ ಪುರಾಣ ಕೃತಿಗಳಿಗೂ ರಂಗಭೂಮಿಗೂ ಇರುವ ನಿಕಟ ಸಬಂಧ ಸ್ಪಷ್ಟವಾಗುತ್ತದೆ. ವೃತ್ತಿರಂಗಭೂಮಿಯ ಪ್ರಾರಂಭ ಪ್ರಗತಿಯ ಕಾಲವನ್ನು ಪೌರಾಣಿಕ ನಾಟಕಗಳ ಸುಗ್ಗಿಯ ಕಾಲವೆಂದು ಪರಿಗಣಿಸಲಾಗಿದೆ. ಪ್ರಾರಂಭದಲ್ಲಿ ನಮ್ಮ ನಾಟಕಕಾರರಿಗೆ ಮನರಂಜನೆ ಹಾಗೂ ನಿರಾಯಾಸದ ಬರವಣಿಗೆಗಾಗಿ ಪುರಾಣ ಪ್ರಪಂಚ ತುಂಬಾ ನೆರವಿಗೆ ಬಂದಿತೆನ್ನಬೇಕು. ಮಹಾಭಾರತ, ರಾಮಾಯಣ, ವಿಷ್ಣು ಪುರಾಣ, ಶಿವಪುರಾಣ ಮುಂತಾದ ಇತಿಹಾಸ ಪುರಾಣ ಕಾವ್ಯಗಳಿಂದಾಯ್ದ ಘಟನೆಗಳನ್ನಾಧರಿಸಿ ಅಸಂಖ್ಯಾತ ನಾಟಕಗಳು ರಚನೆಗೊಂಡವು. ವೃತ್ತಿರಂಗಭೂಮಿಯ ನಾಟಕಕಾರರು ಪುರಾಣ ವಸ್ತುವನ್ನು ಜನಪದ ರಂಗಭೂಮಿಗಿಂತ ಬೇರೆಯಾಗಿ ಸ್ವೀಕರಿಸಿದರು. ನಾಟಕೀಯ ಅಂಶಗಳಿರುವ ಪುರಾಣ ಕಥೆಗಳನ್ನೆತ್ತಿಕೊಂಡು ಸನ್ನಿವೇಶಗಳಲ್ಲಿ ವಿಭಜಿಸಿ ವಸ್ತುವನ್ನು ಹೆಚ್ಚು ಖಚಿತವಾಗಿ ನಿರೂಪಿಸುವ ಪ್ರಯತ್ನಕ್ಕಿಳಿದರು. ನಟರ ಪ್ರಾಧಾನ್ಯತೆಯಿಂದ ಪಾತ್ರರಚನೆಗೆ ಮತ್ತು ಜನರ ಆಕರ್ಷಣೆಗಾಗಿ ದೃಶ್ಯಗಳ ವೈಭವೀಕರಣಕ್ಕೆ ಹೆಚ್ಚು ಮಹತ್ವ ನೀಡಿದರು. 'ದುಷ್ಟ ಶಿಕ್ಷೆ, ಶಿಷ್ಟ ರಕ್ಷೆ', ಈ ನಾಟಕಗಳ ಸರಳ ಸೂತ್ರವಾಯಿತು. ಭಕ್ತಿ ಮತ್ತು ನೀತಿಯ ಬದುಕನ್ನು ಪ್ರತಿಪಾದಿಸುವುದರ ಜೊತೆಗೆ ಸುಮಧುರ ಸಂಗೀತ, ರಮ್ಯಾದ್ಭುತ ಸನ್ನಿವೇಶಗಳ ನಿರ್ಮಾಣಕ್ಕೆ ಅವಕಾಶವನ್ನೀಯುವ ಪುರಾಣ ಕಥೆಗಳು ವೃತ್ತಿರಂಗಭೂಮಿಯ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸಿದವು.

ಮೊದಲ ನಾಟಕಕಾರರಲ್ಲಿ ಅಗ್ರಗಣ್ಯರಾದ ಶಾಂತಕವಿಗಳು ೨೫ಕ್ಕೂ ಹೆಚ್ಚು ಪೌರಾಣಿಕ ನಾಟಕಗಳನ್ನು ರಚಿಸಿದ್ದಾರೆಂದು ತಿಳಿಯುತ್ತದೆ. ಉಷಾಹರಣ, ವತ್ಸಲಾಹರಣ, ಕೀಚಕವಧಾ, ಸಿರಿಯಾಳ ಸತ್ವ ಪರೀಕ್ಷಾ, ಚಂದ್ರಾವಳಿ, ಸೀತಾರಣ್ಯ ಪ್ರದೇಶಕ, ಸುಂದೋಪಸುಂದ, ಸೀತಾ ಸ್ವಯಂವರ ಇವೆಲ್ಲ ಪ್ರದರ್ಶನಕ್ಕಾಗಿಯೆ ರಚನೆಯಾದ ನಾಟಕಗಳು, ಕೃತಪುರ ಮಂಡಳಿ, ನರಗುಂದ ಮಂಡಳಿ, ಶಿರಹಟ್ಟಿ, ಗುಳೇದಗುಡ್ಡ, ರಾಣೇಬೆನ್ನೂರ ನಾಟಕ ಮಂಡಳಿಗಳಿಂದ ಈ ಬಹುತೇಕ ನಾಟಕಗಳು ಪ್ರದರ್ಶನ ಕಂಡಿವೆ. ಗಿರಿಜಾ ಕಲ್ಯಾಣ, ವತ್ಸಲಾಹರಣ, ಕೀಚಕವಧೆ, ಮೊದಲಾದ ನಾಟಕಗಳಲ್ಲಿ ರಚನಾ ಕೌಶಲ್ಯ ಅಷ್ಟಾಗಿ ಕಂಡುಬರುವುದಿಲ್ಲ. ಶಾಂತಕವಿಗಳದು ಪ್ರಾರಂಭಿಕ ಹಾಗೂ ಪ್ರಾಯೋಗಿಕ ಹಂತವಾಗಿದ್ದರಿಂದ ಅವರ ರಚನೆಗಳಲ್ಲಿ ಶಿಥಿಲತೆ ಎದ್ದು ತೋರುವುದು ಸ್ವಾಭಾವಿಕ. ಆದರೂ ಅವರ ಕೃತಿಗಳು ನಿರಾಭರಣವಾದ ಸುಂದರ ಶೈಲಿ, ಸ್ವಾರಸ್ಯಪೂರ್ಣ ಮತ್ತು ಹಿತಮಿತವಾದ ಸಂಭಾಷಣೆಯಿಂದ ಅಂದು ಜನಮನ ಗೆದ್ದುದು ಮರೆಯುವಂತಿಲ್ಲ.

'ಲಲಿತ ಭಾಷಣವಿಹುದು ತಿಳಿ ಗಾನವು ಇಹುದು
ಬೆಳೆದ ಭಕುತರ ಮಹಿಮೆಯಿದಿಹುದು ಹರಿಹರಗಾಢ ಲೀಲಾಮಾಯೆಯ;
ಭಳಿರೆ ಇಹಪರವಮಗೆ ಸಾಧಿಸುವದೊಂದಿರುಳ್'

ಎಂದು ಜನರು ಸಂತೋಷದಿಂದ ಕುಣಿದಾಡಿದ್ದನ್ನು ಹಾಗೂ ಹರುಷದ ಉದ್ಗಾರದಿಂ, ಕನ್ನಡದೊಳಿಹ ಸವಿಯನು ಅರಿಯದಲೆ ಅದನ್ನು ಪಳಿದ ದೋಷಿಗಳು ತಾವೆಂದು, ಜನರು ತಮ್ಮ ನಿರ್ಲಕ್ಷ್ಯದ ಬಗ್ಗೆ ಪಶ್ಚಾತ್ತಾಪ ಪಟ್ಟದ್ದನ್ನು ಶಾಂತಕವಿಗಳು ತಮ್ಮ ಪದ್ಯದಲ್ಲಿ ಹೇಳಿಕೊಂಡಿದ್ದು ಅವರ ನಾಟಕಗಳ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಶಾಂತಕವಿಗಳ ರಚನಾ ಕೌಶಲ್ಯ, ಔಚಿತ್ಯ ಅನೌಚಿತ್ಯಗಳ ಬಗೆಗೆ ತ.ಸು. ಶಾಮರಾಯರು ಹೀಗೆ ಬರೆದಿದ್ದಾರೆ, "ಶ್ರೀಮಾನ್ ಶಾಂತಕವಿಗಳು ಬರೆದಿರುವ 'ಚಂದ್ರಾವಳಿ ಚರಿತ್ರೆ' ಭಾಗವತದಿಂದ ಎತ್ತಿಕೊಂಡುದು. ಪುಷ್ಕಹೃದಯ, ರಮ್ಯ ಭಾಷಣದೊಂದಿಗೆ ಶ್ರೀಕೃಷ್ಣನು ಕಾಳಿಂದಿಗೆ ಬಂದು ಹೆಣ್ಣುಗಳಿಗಾಗಿ ಹೊಂಚುಹಾಕುತ್ತಾನೆ. ಅಲ್ಲಿಗೆ ಚಂದ್ರಾವಳಿ, ನಕ್ಷತ್ರ ಮಾಲಿಕಾ, ರಮೆಯರೊಡನೆ ವೈಯ್ಯಾರದಿಂದ ಬರುತ್ತಾಳೆ. 'ವನದಲ್ಲಿದ್ದ ದುಂಬಿಗಳನ್ನು ನಕ್ಷತ್ರಮಾಲಿಕೆ ವಿರಹಿಗಳನ್ನು ಎಳೆ ಎಳೆದು ತರಲಿಕ್ಕೆ ವಾರಂಟು ಕೊಟ್ಟು ಮಾರ ಮ್ಯಾಜಿಸ್ಟ್ರೇಟನು ಕಳಿಸಿದ ಕರಿ ಅಂಗಿಯವರು ಹಿಂಡೋ' ಎಂಬ ವರ್ಣನೆ ನಾಟಕಕಾರರ ಕಲ್ಪನಾಶಕ್ತಿಗೆ ಪ್ರಶ್ನಾರ್ಥಕ ಚಿಹ್ನೆಯನ್ನು ತೊಡಿಸುತ್ತದೆ. ಆದರೆ ಉತ್ತರ ರಾಮಾಯಣದಿಂದ ಎತ್ತಿಕೊಂಡಿರುವ 'ಸೀತಾರಣ್ಯ ಪ್ರವೇಶ' ಇಂತಹ ಅಭ್ಯಾಸಗಳೇನು ಇಲ್ಲದ ನಿರ್ದುಷ್ಟವಾದ ನಾಟಕ, ಗರ್ಭಿಣಿಯಾಗಿದ್ದ ಸೀತೆಯ ಬಯಕೆ ಮತ್ತು ಸಂದೋಪಸುಂದ ನಾಟಕಗಳೂ ಸಾಹಿತ್ಯ ದೃಷ್ಟಿಯಿಂದ ಅಷ್ಟೇನೂ ಸುಂದರ ಕೃತಿಗಳಲ್ಲದಿದ್ದರೂ ರಂಗಸ್ಥಳದಲ್ಲಿ ಶೋಭಿಸಬಲ್ಲವು. ಜನರ ದಿನಬಳಕೆಯ ಭಾಷೆಯಲ್ಲಿ ಸರಳವಾಗಿ ಬರೆದ ಸೀತಾರಣ್ಯ ಪ್ರವೇಶ, ಅಥವಾ ಸೀತಾ ವನವಾಸವು ಅವರ ನಾಟಕ ಕಲಾಶಕ್ತಿಯ ಪರಾಕಾಷ್ಠತೆಗೆ ಒರೆಗಲ್ಲು"

ಶಾಂತಕವಿಗಳ ನಂತರ ಮರಾಠಿ ನಾಟಕಗಳ ಅನುವಾದ ಕಾರ್ಯ ತೀವ್ರಗೊಂಡಿತು. ಶಾಂತ ಕವಿಗಳ ಜಾಗೃತಿಯಿಂದ ಜನರಲ್ಲಿ ಕನ್ನಡ ನಾಟಕಗಳ ಬಗ್ಗೆ ಒಲವು ಮೂಡಿತ್ತಾದರೂ ಮರಾಠಿ ನಾಟಕಗಳ ಬಗೆಗಿನ ಮೋಹ ಕಡಿಮೆಯಾಗಿರಲಿಲ್ಲ. ಇದನ್ನು ಗಮನಿಸಿದ ವಾಮನರಾವ ಮಾಸ್ತರರು ಮರಾಠಿ ಕೃತಿಗಳನ್ನು ಕನ್ನಡಕ್ಕೆ ರೂಪಾಂತರಿಸಿದರು. ಪಾರ್ವತೀ ಸತ್ವಪರೀಕ್ಷಾ, ಕೃಷ್ಣಾರ್ಜುನರ ಯುದ್ಧ, ಭಕ್ತ ಪ್ರಹ್ಲಾದ, ದ್ರೌಪದಿ ವಸ್ತ್ರಾಪಹರಣ, ವೀರ ಅಭಿಮನ್ಯು ಇವರಿಂದ ರೂಪಾಂತರ ಗೊಂಡ ಪೌರಾಣಿಕ ನಾಟಕಗಳು. ಮರಾಠಿ ಭಾಷೆ ಚೆನ್ನಾಗಿ ಬರುತ್ತಿದ್ದ ವಾಮನರಾಯರು ನಾಟಕದ ಶಿಲ್ಪ ನಿರೂಪಣ ತಂತ್ರವನ್ನು ಯಥಾರೀತಿ ಸ್ವೀಕರಿಸಿ, ಅಲ್ಲಿಯ ಭಾಷೆಗೆ ತಕ್ಕಂತೆ ಸೊಗಸಾದ ಕನ್ನಡವನ್ನೂ ಅಳವಡಿಸಿದರು. ಲಲಿತಮಯ ರಂಗಗೀತೆಗಳ ರಚನೆಯಿಂದಲೂ ಈ ನಾಟಕಗಳು ಭಾರೀ ಯಶಸ್ಸನ್ನು ಕಂಡವು.

ನಾಟ್ಯ ಸಂಘಗಳ ಮಾಲಿಕರ ಬಿನ್ನಹದ ಮೇರೆಗೆ ಶ್ರೀನಿವಾಸ ನರಸಿಂಹ ಹುಜರಾತ, ಶ್ರೀನಿವಾಸ ಶ್ಯಾಮಜಿ ಬಾಲೆಹೊಸೂರ, ಅಡಬಡ್ಡಿ ಸುಬ್ಬಣ್ಣಾಚಾರ್, ಹುಬ್ಬಳ್ಳಿಯ ಭೀಮಾಚಾರ್ಯ ಮಾಸ್ತರ, ಜಿ. ಜಿ. ಹೆಗಡೆ, ಮದ್ದರಾಜ್ ದೇಶಪಾಂಡೆ ಮುಂತಾದವರು ಕೆಲವು ಮರಾಠಿ ಕೃತಿಗಳನ್ನು ರೂಪಾಂತರಿಸಿದರು. ಇದಕ್ಕೂ ಮೊದಲು ಮೈಸೂರ ಆಸ್ಥಾನವಿದ್ವಾಂಸ ತಿರುಮಲೆ ವೆಂಕಟಾಚಾರ್ಯರು ಬರೆದ ಅನಸೂಯಾ, ಪ್ರಹ್ಲಾದ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಲಂಕಾದಹನ, ಶ್ರೀಕೃಷ್ಣಲೀಲಾ ಮುಂತಾದ ಕೃತಿಗಳು ಉತ್ತರ ಕರ್ನಾಟಕದ ಮಂಡಳಿಗಳಿಗೆ ಲಭ್ಯವಾದವು. ಇದರಿಂದ ಅನುವಾದದ ಜೊತೆಗೆ ಸ್ವತಂತ್ರವಾಗಿಯೂ ಪುರಾಣ ವಸ್ತುವನ್ನು ಬಳಸಿ ಹೊಸ ಹೊಸ ನಾಟಕಗಳ ರಚನಾಕಾರ್ಯ ಮುಂದುವರಿಯಿತು.

ಮೈಸೂರು ಭಾಗದ ವೃತ್ತಿ ರಂಗಭೂಮಿಗಾಗಿ ಪೌರಾಣಿಕ ನಾಟಕಗಳನ್ನು ರಚಿಸಿದವರಲ್ಲಿ ಬೆಳ್ಳಾವ ನರಹರಿಶಾಸ್ತ್ರಿ ಪ್ರಮುಖ ಹೆಸರು. ರಂಗಸಾಹಿತ್ಯ ಮತ್ತು ಸಂಗೀತದ ಅಭ್ಯಾಸದಿಂದಾಗಿ ಶಾಸ್ತ್ರಿಗಳ ನಾಟಕಗಳು ಪ್ರದರ್ಶನ ಯೋಗ್ಯವೆನಿಸಿದ್ದವು. ಗುಬ್ಬಿ ಕಂಪನಿಗಾಗಿಯ ನಲವತ್ತು ಕೃತಿಗಳನ್ನು ರಚಿಸಿದ್ದಾರೆ. ಒಟ್ಟು ಅವರ ನಾಟಕಗಳ ಸಂಖ್ಯೆ ಐವತ್ತೊಂದು, ಅವರ ನಾಟಕಗಳ ರಂಗಪ್ರಜ್ಞೆ, ಸಂಗೀತ ಸಂಬಂಧ, ಪಾತ್ರ ರಚನೆಯ ಕೌಶಲ, ಸಂಭಾಷಣೆಗಳ ರಮ್ಯತೆಯಿಂದ ಭಾಮಾಪರಿಣಯ, ರುಕ್ಮಿಣಿ ಸ್ವಯಂವರ ನಾಟಕಗಳು ಪ್ರೇಕ್ಷಕರಿಂದ ಅಭೂತಪೂರ್ವ ಸ್ವಾಗತವನ್ನು ಪಡೆದವು. ಶೃಂಗಾರ, ಹಾಸ್ಯಗಳ ನೆರವಿನಿಂದ ತಮ್ಮ ನೈತಿಕ ಗುರಿಯನ್ನು ಮುಟ್ಟುತ್ತಿದ್ದ ಅವರ ನಾಟಕಗಳು ಆಧುನಿಕರಿಗೆ ರಂಜಿಸದೇ ಹೋಗಬಹುದು. ಆದರೆ ನೂರಕ್ಕೆ ತೊಂಬತ್ತೊಂಭತ್ತು ಭಾಗ ಅನಕ್ಷರಸ್ಥರಿದ್ದ ಕನ್ನಡ ನಾಡಿನ ಸಾಂಸ್ಕೃತಿಕ ಪರಿಸರದಲ್ಲಿ ಇಂತಹ ನಾಟಕಗಳ ಮಹತ್ವವನ್ನು ಗುರುತಿಸಬೇಕಾಗುತ್ತದೆ. ದಾಮಾಜಿ ಪಂತ, ಮಹಾತ್ಮಾ ಕಬೀರ ದಾಸ, ಮಹಾತ್ಮಾ ಬಸವೇಶ್ವರ, ಸಾಧು ತುಕಾರಾಮ, ಪುರಂದರ ದಾಸ ಮುಂತಾದ ಸಂತರು ಮತ್ತು ಸಮಾಜ ಸುಧಾರಕರ ಜೀವನವನ್ನು ಚಿತ್ರಿಸುವ ಅವರ ನಾಟಕಗಳಲ್ಲಿ ಪ್ರತಿಪಾದಿತವಾಗಿರುವ ಸಾಮಾಜಿಕ ಮೌಲ್ಯಗಳು ಉದಾರವಾದ ಭಕ್ತಿ ಪರಂಪರೆಯ ನಂಬಿಕೆಗಳು, ಬಸವೇಶ್ವರ ನಾಟಕದಲ್ಲಿ ಮೇಲಿಂದ ಮೇಲೆ ಪವಾಡಗಳ ಮೂಲಕ ಕಥಾ ನಾಯಕನ ಮಹತ್ವವನ್ನು ಸ್ಥಾಪಿಸಲು ಪ್ರಯತ್ನಿಸುವ ಬೆಳ್ಳಾವೆಯವರ ನಾಟಕೀಯ ತಂತ್ರ, ಸೂಕ್ಷ್ಮ ಹಾಗೂ ಸಂಕೀರ್ಣ ಮಾದರಿಯದಲ್ಲ ವೆಂಬುದೇನೂ ನಿಜ, ವಾಚ್ಯವಾದ ನೆಲೆಯಲ್ಲಿ ಬಸವಣ್ಣನವರ ವಚನಗಳನ್ನೂ ನಾಟಕಕ್ಕೆ ಅವರು ಅಳವಡಿಸಿಕೊಂಡಿದ್ದಾರೆ. ಆದರೂ ಅವಿದ್ಯಾವಂತ ಜನಸಮೂಹಕ್ಕೆ ರಂಗಭೂಮಿಯ ಮೂಲಕ ವಚನ ಚಳುವಳಿಯ ಆಶಯಗಳನ್ನು ಪ್ರಸಾರ ಮಾಡುವ ಜಾಣ್ಮೆಯನ್ನೂ ಅಲ್ಲಿ ಗುರುತಿಸಬೇಕಾಗುತ್ತದೆ. ಹರಳಯ್ಯ ದೇವರಗುಡಿ ಅರ್ಚಕರ ನಡುವೆ ನಡೆಯುವ ಸಂಭಾಷಣೆಯ ಮೂಲಕ ಪುರೋಹಿತ ಶಾಹಿಯ ದರ್ಪ ಮತ್ತು ಮೌಢ್ಯವನ್ನು ಬಯಲಿಗೆಳೆಯುವ ಬೆಳ್ಳಾವೆಯವರೂ ಪ್ರಗತಿಪರವಾದದವರೇ ಎಂಬುದರಲ್ಲಿ ಸಂದೇಹವಿಲ್ಲ.'

ಪೌರಾಣಿಕ ನಾಟಕಗಳ ಬೆಳವಣಿಗೆಯಲ್ಲಿ ಗರುಡ ಸದಾಶಿವರಾಯರ ಸಾಧನೆ ವೈಶಿಷ್ಟ್ಯ ಪೂರ್ಣವಾದುದು. ಪೌರಾಣಿಕ ನಾಟಕಗಳಲ್ಲಿ ಸಂಗೀತ ಹುಚ್ಚು ಹೊಳೆಯಾಗಿ ಹರಿಯುತ್ತಿದ್ದಾಗ ಇವರು ಸಾಹಿತ್ಯಕ್ಕೆ ಪ್ರಾಮುಖ್ಯತೆ ನೀಡಿದರು. ರಂಗಕ್ಕೆ ಸಂಬಂಧಿಸಿದ ಬೇರೆ ಬೇರೆ ಪ್ರವೃತ್ತಿಗಳನ್ನೆಲ್ಲ ಅಭಿನಯ ಸೂತ್ರಕ್ಕೆ ಅಳವಡಿಸಲು ಯತ್ನಿಸಿ ಯಶಸ್ವಿಯಾದರು. ಹೀಗಾಗಿ ಇವರ ನಾಟಕಗಳ ರಚನೆ ಅಭಿನಯ ಮುಖವಾಗಿ ಹರಿಯಿತು. ಚವತಿಚಂದ್ರ, ಸಾವಿತ್ರಿ ಸತ್ಯವಾನ, ದುರಾತ್ಮ ರಾವಣ, ಸೌಭದ್ರ, ಭಸ್ಮಾಸುರ ಮೋಹಿನಿ, ಶಕ್ತಿವಿಲಾಸ, ಪ್ರಹ್ಲಾದ, ಶ್ರೀನಿವಾಸ ಕಲ್ಯಾಣ, ಶ್ರೀಕೃಷ್ಣ ಸುಧಾಮ, ಶ್ರೀಕೃಷ್ಣಲೀಲಾ, ಕಂಸವಧೆ, ಅನಸೂಯಾ, ಧರ್ಮ ಸಾಮ್ರಾಜ್ಯ ಮುಂತಾಗಿ ಇಪ್ಪತ್ತಕ್ಕೂ ಹೆಚ್ಚು ಪೌರಾಣಿಕ ಕೃತಿಗಳನ್ನೂ ಇವರು ರಚಿಸಿದ್ದಾರೆ. ಇವುಗಳಲ್ಲಿ ಮರಾಠಿ ರಂಗಭೂಮಿಯ 'ರಾಮರಾಜ್ಯ ವಿಯೋಗ' ನಾಟಕವನ್ನು ಅನುವಾದಿಸಿ ಬರೆದ 'ಪಾದುಕಾ ಪಟ್ಟಾಭಿಷೇಕ' ಅಪೂರ್ವ ಯಶಸ್ಸನ್ನು ಕಂಡ ಕೃತಿ. ಗರುಡರು ಪೌರಾಣಿಕ ವಸ್ತುವಿನ ನಿರೂಪಣೆ ಅಭಿನಯಗಳಲ್ಲಿ ಹೆಚ್ಚಿನ ಆಸಕ್ತಿ ಜಾಗರೂಕತೆ ವಹಿಸಿದ್ದರು. ಅವರ ಮೊದಲ ನಾಟಕ 'ಮಾರ್ಕಂಡೇಯ' ಎಂದು ಮೊದಲೇ ಹೇಳಿದೆ. ಗರುಡರಿಂದ ಸ್ಫೂರ್ತಿ ಪಡೆದು ಅನೇಕ ಸಂದರ್ಭಗಳಲ್ಲಿ ಅವರ ಶಿಷ್ಯರಾಗಿದ್ದವರು ನಡೆಸಲ್ಪಟ್ಟ ವೃತ್ತಿನಾಟಕ ಸಂಸ್ಥೆಗಳು ಗೊತ್ತಾದ ಪರಿಮಿತಿಯಲ್ಲಿ ಈ ಸೂತ್ರಗಳನ್ನು ಪಾಲಿಸುತ್ತ ಬಂದಿದ್ದರಿಂದ, ಉತ್ತರ ಕರ್ನಾಟಕದ ಪೌರಾಣಿಕ ನಾಟಕಗಳು ಇಡೀ ಕರ್ನಾಟಕದಲ್ಲಿ ಯಶಸ್ಸು ಗಳಿಸಲು ಸಮರ್ಥವಾಯಿತು. ಮೈಸೂರ ಪ್ರಾಂತದ ಪೌರಾಣಿಕ ಕಂಪನಿ ನಾಟಕಗಳಿಗಿಂತ ಸಾಹಿತ್ಯ, ಅಭಿನಯ, ಪ್ರಯೋಗಗಳಲ್ಲಿ ಶ್ರೇಷ್ಠ ಮಟ್ಟದ್ದಾಯಿತು.

ಬೆಳ್ಳಾವೆಯವರ ನಂತರ ಪೌರಾಣಿಕ ನಾಟಕಗಳ ರಚನೆಯಲ್ಲಿ ಸಿದ್ಧಿ ಪಡೆದ ಮೈಸೂರು ಭಾಗದ ಮತ್ತೊಬ್ಬ ನಾಟಕಕಾರ ಬಿ. ಪುಟ್ಟಸ್ವಾಮಯ್ಯ, ಪೌರಾಣಿಕ ವಸ್ತು, ರಚನೆಯಲ್ಲಿ ಬೆಳ್ಳಾವೆಯವರಿಗಿಂತ ಇವರದು ವಿಶಾಲದೃಷ್ಟಿ, ಸಂಭಾಷಣಾಶೈಲಿ ಅಲಂಕಾರಿಕವಾದುದು. 'ಯಾಜ್ಞಸೇನಿಯ' ಪ್ರಥಮ ದೃಶ್ಯದಲ್ಲಿ ಭೀಷ್ಮನು ದ್ರೋಣರನ್ನು ಕುರಿತು ಹೇಳುವ ಮಾತು ಆಚಾರ್ಯರೇ, ಜಗದ್ವಿಖ್ಯಾತ ನಾದ ಭರತವಂಶದ ಕಂದಗಳನ್ನು ನಿಮ್ಮ ವಿದ್ಯೆಯ ಮಹಿಮೆಯಿಂದ ಅವುಗಳನ್ನು ಪ್ರಜ್ವಲಿಸಿ ಭಾರತವನ್ನು ಬೆಳೆಸುವ ಕ್ಷಾತ್ರತೇಜದ ನೂರೈದು ಪುಣ್ಯಾಗ್ನಿಗಳನ್ನಾಗಿ ಮಾಡಿದಿರಿ....." ಇಂಥ ಸಂಭಾಷಣಾ ಶೈಲಿಯಿಂದ ನಟನ ವ್ಯಕ್ತಿತ್ವಕ್ಕೆ ಹೆಚ್ಚಿನ ತೂಕ ಒದಗುತ್ತಿತ್ತು. ನಟನು ನಾಟಕದ ಮುಖ್ಯ ಭಾಗವಾಗಿ ಬೆಳೆಯಲು ಪೂರಕವಾಗುತ್ತಿತ್ತು.

ಇವರ ಕುರುಕ್ಷೇತ್ರ, ದಶಾವತಾರ ನಾಟಕಗಳು ಗುಬ್ಬಿ ಕಂಪನಿಯಲ್ಲಿ ಅದ್ಭುತ ಯಶಸ್ಸು ಸಾಧಿಸಿದವು. ಗೌತಮಬುದ್ಧ ಮತ್ತು ಷಾಜಹಾನ್ ಕೃತಿಗಳು ಮಹಮ್ಮದ ಪೀಠ ಅವರ ಅಭಿನಯದಿಂದ ಕೀರ್ತಿಯ ಉತ್ತುಂಗಕ್ಕೇರಿದವು. ಇವರು ಬರೆದ ಇತರ ನಾಟಕಗಳೆಂದರೆ ಸತೀತುಳಸಿ, ಬಭ್ರುವಾಹನ, ತಾರಕವಧೆ, ಪ್ರಚಂಡ ಚಾಣಿಕ್ಯ, ಬಿಡುಗಡೆಯ ಬಿಚ್ಚುಗತ್ತಿ, ಅಭಿನೇತ್ರಿ, ರಾಣಿ, ಸಂಪೂರ್ಣ ರಾಮಾಯಣ, ಪ್ರಭುದೇವ, ಅಕ್ಕಮಹಾದೇವಿ, ಚಿರಕುಮಾರಸಭಾ, ಭಾಷಾ ಪ್ರಯೋಗ ತಾಂತ್ರಿಕ ಪ್ರಯೋಗ, ಪಾತ್ರಗಳ ಸಾಮಾಜೀಕರಣ ದೃಷ್ಟಿಯಿಂದ ಪುಟ್ಟಸ್ವಾಮಯ್ಯನವರ ನಾಟಕಗಳು ಅಭ್ಯಾಸ ಯೋಗ್ಯವಾಗಿವೆ.

ಪೌರಾಣಿಕ ನಾಟಕಕಾರರ ಸಾಲಿನಲ್ಲಿ ಕಂದಗಲ್ ಹನುಮಂತ ರಾಯರದೇ ಒಂದು ವಿಶಿಷ್ಟ ಸ್ಥಾನ. ಸಂಗೀತದಲ್ಲಿ ಮುಳುಗಿದ್ದ ನಾಟಕಗಳನ್ನು ಗದ್ಯಕ್ಕೆ ಹೊರಳಿಸಿದ ಶ್ರೇಯಸ್ಸು ಇವರದು. ಪ್ರಾಸಯುಕ್ತ ಭಾಷೆ, ಉಪಮೆ, ಉಪಮಾನಗಳನ್ನು ಸಾಲುಸಾಲಾಗಿ ಬಳಸಿ, ಸನ್ನಿವೇಶಕ್ಕೆ ಗಾಂಭೀರ್ಯ ತುಂಬುವ ರಚನಾ ಕೌಶಲ್ಯ ಇವರ ವಿಶೇಷತೆ. ಇವರು ಪಾತ್ರ ರಚನೆಗೆ ಹೆಚ್ಚು ಮಹತ್ವ ನೀಡಿದ್ದರಿಂದ ಮಹಾಭಾರತಕ್ಕೆ ಸಂಬಂಧಿಸಿದ ಪ್ರಮುಖ ಪಾತ್ರಗಳು ರಂಗದ ಮೇಲೆ ವಿಜೃಂಭಿಸು ವಂತಾಯಿತು. ಇವರ ನಾಟಕಗಳ ಪ್ರದರ್ಶನದಿಂದ ಉತ್ತರ ಕರ್ನಾಟಕದಲ್ಲಿ ನಾಟಕ ಪರಂಪರೆ ಯೊಂದು ನಿರ್ಮಾಣವಾಯಿತು

ಕಂದಗಲ್‌ರ ನಂತರ ಪೌರಾಣಿಕ ನಾಟಕಗಳ ರಚನೆಯಲ್ಲಿ ಹೆಸರಾದವರು ನಲವಡಿ ಶ್ರೀಕಂಠಶಾಸ್ತ್ರಿಗಳು. ಇವರು ಮೂಲತಃ ಕವಿಗಳು. ಹೀಗಾಗಿ ಸಂಭಾಷಣೆಗಿಂತ ಹಾಡುಗಳ ರಚನೆಗೆ ಪ್ರಾಮುಖ್ಯತೆ ದೊರೆಯಿತು. ವಿಚಿತ್ರ ವಿಲಾಸ, ಶೈವ ಶಾಂತಿ, ಸಂತ ಸಂಗ, ಶಾಪ ವಿಮೋಚನೆ, ಭಕ್ತ ಸುಧನ್ವ, ಲಂಕಾದಹನ, ಹಿರಣ್ಯಕಶ್ಯಪ ಇವರ ಪೌರಾಣಿಕ ರಚನೆಗಳು. ಇವರ ಪ್ರಪಂಚ ಪರೀಕ್ಷೆ ಜನಪ್ರಿಯ ನಾಟಕ, ನಿಯಮಿತ ಪಾತ್ರಗಳು ಲಲಿತ, ಪದಗಳು, ಸರಳ ಭಾಷೆಯಿಂದ ಇವರ ನಾಟಕಗಳು ಪ್ರೇಕ್ಷಕರ ಮೆಚ್ಚುಗೆ ಪಡೆದವು.

ಪರಾಮರ್ಶನ ಗ್ರಂಥಗಳು

- **ಡಾ. ಕೆ. ಎಚ್. ರಂಗನಾಥ್ (2014) :** ಕರ್ನಾಟಕ ರಂಗಭೂಮಿ, ಬೆಂಗಳೂರು ಹೇಮಂತ ಸಾಹಿತ್ಯ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

- **ಕೀರ್ತಿನಾಥ ಕುರ್ತುಕೋಟಿ (1989) :** ವಿಮರ್ಶೆಯ ವಿನಯ ನಾಟಕ ಧಾರವಾಡ ಮನೋಹರ ಗ್ರಂಥಮಾಲೆ.
- **ಕೆ. ಮರುಳಸಿದ್ದಪ್ಪ (2013) :** ಆಧುನಿಕ ನಾಟಕ, ಬೆಂಗಳೂರು ಅಂಕಿತ ಪುಸ್ತಕ.
- **ಗಿರಡ್ಡಿ ಗೋವಿಂದ ರಾಜ (1985) :** ನಾಟಕ ಸಾಹಿತ್ಯ ಮತ್ತು ರಂಗಭೂಮಿ ಹೆಗ್ಗೋಡು ಅಕ್ಷರ ಪ್ರಕಾಶನ.
- **ಮನ್ವಂತರ ನಾಟಕ (1988) :** ಧಾರವಾಡ ಮನ್ವಂತರ ಪ್ರಕಾಶನ
- **ತ. ಸು. ಶಾಮರಾವ (2004) :** ಕನ್ನಡ ನಾಟಕ ಮೈಸೂರು ಡಿ.ವಿ.ಕೆ. ಮೂರ್ತಿ ಪ್ರಕಾಶನ.
- **ಎಸ್. ಅನಂತ ನಾರಾಯಣ(1999) :** ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಬೆಂಗಳೂರು ಸಪ್ನ ಬುಕ್ ಹೌಸ್.

■■

– 31ನೇ ಪುಟದಿಂದ ಮುಂದುವರೆದುದು

ರಸ್ತೆಯಲ್ಲಿ ಟೆಲಿಗ್ರಾಪ್ ತಂತಿಯನ್ನು ಕತ್ತರಿಸಲಾಯ್ತು, ಇದೇ ತಿಂಗಳ 22 ರಂದು ಸವಣೂರು ಸ್ಟೇಷನ್ನಿಗೆ ಬೆಂಕಿ ಹಚ್ಚಲಾಯಿತು. ನವಂಬರ್ 26 ನೇ ತಾರೀಖಿನಂದು 300 ಅಡಿ ಉದ್ದದ ರೈಲ್ವೆಹಳಿ ಕತ್ತರಿಸಿ, ರೈಲುಗಾಡಿಯಲ್ಲಿನ ಪ್ರಯಾಣಿಕರ ಸುರಕ್ಷತೆಗಾಗಿ ರೈಲುಗಾಡಿ ಹಳಿ ತಪ್ಪದ್ದಂತೆ ಮಾಡಲು ಎಚ್ಚರಿಕೆ ಬೋರ್ಡು ನಿಲ್ಲಿಸಲಾಗಿತ್ತು. ಡಿಸೆಂಬರ್ ತಿಂಗಳಿನಲ್ಲಿ ಹಾವೇರಿಯ ಸುತ್ತ–ಮುತ್ತಲಿನ ಗ್ರಾಮಗಳಲ್ಲಿ ಈಚಲು ಮರಗಳನ್ನು ಕತ್ತರಿಸಲಾಯ್ತು. ಈ ರೀತಿಯ ಮಹದೇವಪ್ಪನವರ ಕಾರ್ಯಗಳಿಂದಾಗಿ ಇವರೊಡನೆ ಕೆಲಸಮಾಡಲು ಯುವಕರ ತಂಡ ಸದಾ ಸಿದ್ಧವಾಗಿರುತ್ತಿತ್ತು.

ಮಹಾದೇವಪ್ಪ ಮತ್ತು ಅವರ ತಂಡವನ್ನು ಹಿಡಿಯಲು ಪೋಲೀಸರು ನಿರಂತರವಾಗಿ ಪ್ರಯತ್ನಿಸುತ್ತಿದ್ದರು. ಮಹಾದೇವರ ಕುಟುಂಬದವರಿಗೆ ಅವರ ಸುಳಿವು ನೀಡುವಂತೆ ಹಿಂಸಿಸುತ್ತಿದ್ದರು. ಮಾರ್ಚ್ 30ರಂದು ಕಂದಾಯ ವಸೂಲಿಯ ಕಡೆ ದಿನ. ಅಂದು ಹೊಸರಿತ್ತಿ ಗ್ರಾಮದ ಸುತ್ತಾ–ಮುತ್ತಲಿನ ಗ್ರಾಮಗಳ ತೆರಿಗೆ ವಸೂಲಿ ಮಾಡಿಕೊಂಡು ಹಣವನ್ನು ಹಾವೇರಿಗೆ ಎತ್ತಿನಗಾಡಿಯಲ್ಲಿ ಬಂದೂಕುಧಾರಿ ಪೋಲೀಸರ ರಕ್ಷಣೆಯಲ್ಲಿ ಸಾಗಿಸಲಾಗುತ್ತಿತ್ತು. ಈ ಹಣವನ್ನು ಹೇಗಾದರು ಮಾಡಿ ದೋಚಬೇಕೆಂದು ತೀರ್ಮಾನಿಸಿದ ಮಹಾದೇವಪ್ಪನವರು ತಿರುಕಪ್ಪ ಮಡಿವಾಳ, ವೀರಯ್ಯ ಹಿರೇಮಠ, ಗೋಣಿಪ್ಪ, ಚಾಂದಸಾಬ, ಮುದುಕಪ್ಪ, ಪೀರಸಾಬಾ, ವೆಂಕಾರೆಡ್ಡಿ ಮತ್ತು ಇತರರೊಂದಿಗೆ ಒಟ್ಟು 18 ಜನ ಸದಸ್ಯರ ತಂಡವನ್ನು ಯೋಜಿಸಿ ಸಿದ್ಧಮಾಡಿಕೊಂಡರು. ಸಂಗ್ರಹವಾಗಿದ್ದ ತೆರಿಗೆಯ ಹಣದೊಂದಿಗೆ 5 ಜನ ಬಂದೂಕುಧಾರಿ ಪೋಲೀಸರು ಮತ್ತು ಕೆಲವು ಸಾಮಾನ್ಯ ಪೋಲೀಸರೊಂದಿಗೆ ಹಾವೇರಿಗೆ ತೆರಳುವಾಗ ಕತ್ತಲೆಯಾದ್ದರಿಂದ ಹೊಸರಿತ್ತಿಯ ಗ್ರಾಮದ ವೀರಭದ್ರ ದೇವಾಲಯದಲ್ಲಿ ಸಂಗ್ರಹವಾಗಿದ್ದ ತೆರಿಗೆಯ ಹಣದೊಂದಿಗೆ ಬೀಡುಬಿಟ್ಟರು.

ಮರು ದಿನ ಬೆಳಗ್ಗೆ ಸೂರ್ಯೋದಯದ ನಂತರ ಮೂವರು ಪೋಲೀಸರನ್ನು ಬಿಟ್ಟು ಉಳಿದವರು ಮುಖ ತೊಳೆಯಲು ಹೊಳೆಯ ಕಡೆಗೆ ತೆರಳಿದರು. ಈ ವೇಳೆಗಾಗಲೇ ವೀರಭದ್ರ ದೇವಾಲಯದ ಬಳಿ ಅಡಗಿ ಕುಳಿತಿದ್ದ ಮಹಾದೇವಪ್ಪ ಮತ್ತು ಅವರ ಸಂಗಡಿಗರು ಇದೆ ಸರಿಯಾದ ಸಮಯ ಎಂದು ಇಬ್ಬರು ಪೋಲೀಸರ ಮೇಲೆ ದಾಳಿ ಮಾಡಿ ಅವರನ್ನು ನೆಲಕ್ಕೆ ಕೆಡವಿದರು. ಮತ್ತೊಬ್ಬ ಪೋಲೀಸ್ ವೀರಭದ್ರ ದೇವರ ವಿಗ್ರಹದ ಹಿಂದೆ ಅಡಗಿರುವುದನ್ನು ಗಮನಿಸದೇ ಹಣದ ಪೆಟ್ಟಿಗೆ ಸಾಗಿಸಲು ಮಹಾದೇವಪ್ಪ ಮತ್ತು ಅವರ ಸಂಗಡಿಗರು ಪ್ರಯತ್ನಿಸುತ್ತಿದ್ದಂತೆ, ವಿಗ್ರಹದ ಹಿಂದೆ ಅಡಗಿಕೊಂಡೆ ಗುಂಡು ಹಾರಿಸಿದ, ಮೊದಲ ಗುಂಡು ಮಹಾದೇವಪ್ಪರ ಕಾಲಿಗೆ, ಮತ್ತೊಂದು ಗುಂಡು ಅವರ ಎದೆಗೆ ತಾಗಿತು. ಒಟ್ಟು ನಾಲ್ಕು ಗುಂಡುಗಳು ಮಹದೇವಪ್ಪರ ದೇಹ ಸೇರಿ ಪ್ರಾಣ ಹೋಯಿತು. ಮಹದೇವಪ್ಪರ ಜೊತೆಗಾರರಾದ ತಿರುಕಪ್ಪ ಮಡಿವಾಳ, ವೀರಯ್ಯ ಹಿರೇಮಠ ಕೂಡ ಹುತಾತ್ಮರಾರು.

ಹೀಗೆ ವೀರಭದ್ರ ದೇವಾಲಯದ ಬಳಿ ಹಣಪೆಟ್ಟಿಗೆ ಕಸಿಯಲು ಹೋಗಿ ಮೈಲಾರ ಮಹದೇವಪ್ಪನವರು ತಮ್ಮ 32ನೇ ವಯಸ್ಸಿನಲ್ಲಿ ಪೋಲೀಸರ ಗುಂಡೇಟಿನಿಂದ ಹುತಾತ್ಮರಾದರು. ಇವರ ಶವವನ್ನು ಹಾವೇರಿಯ ಹೊರಭಾಗದಲ್ಲಿ ಅಂತ್ಯಕ್ರಿಯೆ ನಡೆಸಲಾಯ್ತು. ಇವರ ಹೋರಾಟಗಳಿಂದ ಸ್ಫೂರ್ತಿಪಡೆದು ಸಾವಿರಾರು ಹೋರಾಟಗಾರರು ರಾಜ್ಯದಲ್ಲಿ ಹುಟ್ಟಿಕೊಂಡರು. ಮುಂದೆ ಸರ್ಕಾರ ಮೈಲಾರ ಮಹದೇವಪ್ಪನವರ ಅಂತ್ಯಕ್ರಿಯೆ ನಡೆದ ಸ್ಥಳದಲ್ಲಿ ವೀರಸೌಧ ನಿರ್ಮಿಸಿತು. ಹಾವೇರಿ ಜಿಲ್ಲಾಡಳಿತವು ಮೈಲಾರ ಮಹದೇವ ಟ್ರಸ್ಟ್ ರಚಿಸಿಕೊಂಡು ಅವರ ಧ್ಯೇಯಗಳನ್ನು ಜಾರಿಗೆ ತರುತ್ತಿದೆ. ಇವರ ಸ್ಮರಣಾರ್ಥ ಕೇಂದ್ರ ಸರ್ಕಾರ 2018 ರಲ್ಲಿ ಅಂಚೆಚೀಟಿ ಬಿಡುಗಡೆ ಮಾಡಿದೆ. 2020ರಲ್ಲಿ ಹಾವೇರಿ ರೈಲು ನಿಲ್ದಾಣಕ್ಕೆ ಮೈಲಾರ ಮಹದೇವ ರೈಲು ನಿಲ್ದಾಣ ಎಂದು ಮರುನಾಮಕರಣ ಮಾಡಿದೆ. ರಾಜ್ಯ ಮತ್ತು ರಾಷ್ಟ್ರೀಯ ಪಠ್ಯಪುಸ್ತಕಗಳಲ್ಲಿ ಮೈಲಾರ ಮಹದೇವಪ್ಪನವರ ದೇಶಪ್ರೇಮ ಹಸಿರಾಗಿ ಉಳಿದಿದೆ.

ಪರಾಮರ್ಶನ ಗ್ರಂಥಗಳು

- **ಸೂರ್ಯನಾಥ ಕಾಮತ್, (ಸಂ.) (1974, 1977, 1980) :** ಸ್ವಾತಂತ್ರ ಸಂಗ್ರಾಮದ ಸ್ಮೃತಿಗಳು, ಸಂಪುಟ 1, 2, 3, ಬೆಂಗಳೂರು.
- **ಸೂರ್ಯನಾಥ ಕಾಮತ್ (1992) :** ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ, ಹುಬ್ಬಳ್ಳಿ –ಬೆಂಗಳೂರು ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ.
- **ನಾರಾಯಣರಾವ್ ವಿ.ಎಸ್. (1978) :** ಸ್ವತಂತ್ರ ಸಂಗ್ರಾಮದಲ್ಲಿ ಶ್ರೀಸಾಮಾನ್ಯ ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ.
- **ಸುರೇಂದ ದಾನ್ರಿ (1988) :** ಸ್ವಾತಂತ್ರ ಹೋರಾಟದ ಹಲವು ಮುಖಗಳು, ಹುಬ್ಬಳ್ಳಿ ಬುರ್ಲಿ ಬಿಂದು ಮಾಧವ ಸ್ಮಾರಕ ಪ್ರತಿಷ್ಠಾನ,
- **ಬಾಬು ಕೃಷ್ಣಮೂರ್ತಿ (2016) :** ಸ್ವಾತಂತ್ರ ಹೋರಾಟದ ಹೀರೋಗಳು (ಸಂ 1), ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ.
- **ಎಂ. ವಿ. ಕೃಷ್ಣರಾವ್ ಮತ್ತು ಹಾಲಪ್ಪ ಜಿ. ಎಸ್. (1964) :** ಮೈಸೂರು ಫ್ರೀಡಂ ಮೂಮೆಂಟ್ ಇನ್ ಕರ್ನಾಟಕ (ಸಂ. 2),
- **ಬಿ. ಆರ್. ಪ್ರಾಣೇಶ ರಾವ್ (1999) :** ಭಾರತದ ಸ್ವಾತಂತ್ರ್ಯ ಹೋರಾಟದ ಮೇರು ವ್ಯಕ್ತಿಗಳು, ಮೈಸೂರು ನವಭಾರತೀ ಪ್ರಕಾಶನ.
- **ವಿಜಯ ಕರ್ನಾಟಕ** ದಿನಪತ್ರಿಕೆ, ದಿನಾಂಕ 27/03/2012, ದಿನಾಂಕ 22/07/2017
- **ಈಟಿವಿ ಭಾರತ,** ದಿನಾಂಕ : 30/03/2021

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಜನಪದ ಸಾಹಿತ್ಯದಲ್ಲಿ ಮಳೆಯ ಸ್ವರೂಪ

✍ **ಸತೀಶ್ ಎ ಎಸ್.,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಚ್. ಪಿ. ಪಿ. ಪಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.

ಜನಪದ ಸಾಹಿತ್ಯವು ಗ್ರಾಮೀಣ ಜನ ಜೀವನದ ಪ್ರತಿಬಿಂಬವಾಗಿದ್ದು, ಬದುಕಿನ ಅನುಭವ, ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು ಎಲ್ಲವನ್ನೂ ಒಳಗೊಂಡಿರುವ ಸಮಷ್ಟಿ ಜ್ಞಾನವಾಗಿದೆ. ಜನಪದರ ಬದುಕಿನಲ್ಲಿ ಮಳೆಯು ಕೇಂದ್ರಸ್ಥಾನ ಪಡೆದ ಪ್ರಕೃತಿತತ್ತ್ವವಾಗಿದೆ. ಕೃಷಿ ಪ್ರಧಾನ ಸಮಾಜದಲ್ಲಿ ಜೀವನ, ಸಂಸ್ಕೃತಿ, ನಂಬಿಕೆ, ಭಾವನೆ ಮತ್ತು ಆರ್ಥಿಕತೆಯೊಂದಿಗೆ ಮಳೆಯು ಅವಿನಾಭಾವ ಸಂಬಂಧ ಹೊಂದಿದೆ. ಜನಪದ ಗೀತೆಗಳು, ಗಾದೆಗಳು, ಕಥೆಗಳು, ಆಚರಣೆಗಳು ಮತ್ತು ನಂಬಿಕೆಗಳಲ್ಲಿ ಮಳೆಯ ಸ್ವರೂಪ ಅದ್ಭುತವಾಗಿ ವ್ಯಕ್ತವಾಗಿದೆ. ಮಳೆ ದೈವತ್ವ, ಭಯ, ನಿರೀಕ್ಷೆ, ಹಬ್ಬ, ಶ್ರಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಮತ್ತು ಮಾನವ–ಪ್ರಕೃತಿ ಸಂಬಂಧಗಳ ಸಂಕೇತವಾಗಿ ರೂಪು ಗೊಂಡಿರುವುದನ್ನು ಮನಗಾಣಬಹುದು.

ಜನಪದ ಸಾಹಿತ್ಯವು ಶಿಷ್ಟ ಸಾಹಿತ್ಯಕ್ಕಿಂತಲೂ ವಿಶೇಷವಾಗಿ, ಮಾತಿನ ಮೂಲಕ ಪೀಳಿಗೆಗಳಿಂದ ಪೀಳಿಗೆಗಳಿಗೆ ಸಾಗಿದ ಸಾಹಿತ್ಯರೂಪವಾಗಿದೆ. ಜನಸಾಮಾನ್ಯರ ಅನುಭವ, ಬದುಕು, ದುಃಖ–ಸಂತೋಷಗಳೇಇದರ ಪ್ರಧಾನವಸ್ತು. ಇಂತಹ ಜನಪದ ಸಾಹಿತ್ಯದಲ್ಲಿ ಮಳೆ ಅತ್ಯಂತ ಪ್ರಮುಖ ಪ್ರಕೃತಿ ಅಂಶವಾಗಿದೆ. ಭಾರತ ವಿಶೇಷವಾಗಿ ಕರ್ನಾಟಕದಂತಹ ಕೃಷಿ ಪ್ರಧಾನ ಪ್ರದೇಶಗಳಲ್ಲಿ, ಮಳೆ ಬದುಕಿನ ನಿರ್ಣಾಯಕ ಶಕ್ತಿಯಾಗಿದೆ. ಹೀಗಾಗಿ ಮಳೆಕುರಿತ ಭಾವನೆಗಳು, ನಂಬಿಕೆಗಳು, ಪ್ರಾರ್ಥನೆಗಳು ಜನಪದ ಸಾಹಿತ್ಯದಲ್ಲಿ ಸಮೃದ್ಧವಾಗಿಕಂಡುಬರುತ್ತವೆ.

ಜನಪದ ಗೀತೆಗಳಲ್ಲಿ ಮಳೆ : ಜನಪದ ಗೀತೆಗಳಲ್ಲಿ ಮಳೆಯನ್ನು ಅತಿಮಾನುಷ ಶಕ್ತಿಯೆಂಬಂತೆ ಭಾವಿಸಿ ಪುರುಷ ಸ್ಥಾನವನ್ನು ನೀಡಿ 'ಮಳೆರಾಜ' , 'ಮಳೆರಾಯ', 'ಮಳೆದೇವ' ಎಂದು ಸ್ತುತಿಸಿದ್ದಾರೆ. ಮಳೆ ನಿರೀಕ್ಷೆಯ ಸಂಕೇತವಾಗಿದೆ. ಮಳೆಯ ಬರುವಿಕೆಯನ್ನು ಸ್ವಾಗತಿಸುವ, ಆರಾಧಿಸುವ, ಸಂಭ್ರಮಿಸುವ ಬಹಳಷ್ಟು ಗೀತೆಗಳು ಕಂಡುಬರುತ್ತವೆ.

"ಬಾರೋ ಮಳೆರಾಯಾ, ಬಾರೋ ಮಳೆರಾಯಾ
ಬಾಳೆ ತೋಟಕೆ ನೀರಿಲ್ಲ
"ಹುಯ್ಯೋಹುಯ್ಯೋ ಮಳೆರಾಯಾ
ಹೂವಿನ ತೋಟಕೆ ನೀರಿಲ್ಲ"

ಇಂತಹ ಗೀತೆಗಳಲ್ಲಿ ಮಳೆ ದೇವರಂತೆ ಪೂಜನೀಯವಾಗಿದೆ. ಹೂ ಮತ್ತು ಹಣ್ಣು ಫಲವಂತಿಕೆಯ ಸಂಕೇತ. ಮಳೆ ಇಲ್ಲದೇ ಆಗಿರುವ ಅವಾಂತರ, ಬೇಸರ, ದುಃಖ ವ್ಯಕ್ತಪಡಿಸುವ ಹಾಗೂ ಆಹ್ವಾನಿಸುವ ರೀತಿ ವಿಶಿಷ್ಟವಾಗಿದೆ.

ಮಳೆಯಪ್ಪ ಮಳೆರಾಯ ಕರೆಯುತಾರೋ ನಿನ್ನ
ಮೊದಲು ಕೂರಿಗೆಯ ರೈತಾರೋ; ಹೊಲದಾಗ
ಬೆಳೆ ಎದ್ದು ಕೈ ಮುಗಿದಾವ.

ರೈತರು ಪ್ರೀತಿ, ಗೌರವ ಮತ್ತು ಪೂಜನೀಯ ಭಾವದಿಂದ ಕಾಣುವರು. ಮೊದಲ ಕೂರಿಗೆ ಇಡುವ ಮುನ್ನ ಬಿತ್ತುವ ಬೀಜಗಳನ್ನು ದೇವರ ಮುಂದಿಟ್ಟು ಈ ವರ್ಷ ಮಳೆ ಬೆಳೆ ಉತ್ತಮವಾಗಿ ಆಗಲಿ ಎಂದು ಮತ್ತು ವಿಶೇಷವಾಗಿ ಮಳೆರಾಯನನ್ನು ವಿಧೇಯತೆಯಿಂದ ಪ್ರಾರ್ಥಿಸುವ ಇವರು ನಂತರ ಚಿಗುರೊಡೆದ ಬೆಳೆಯೇ, ತೆನೆ ತೂಗಿಸುತ್ತಾ ಮಳೆಯನ್ನು ಆಹ್ವಾನಿಸುವ ಕ್ರಿಯೆ ಮನಮೋಹಕವಾಗಿದ್ದು, ಪ್ರಕೃತಿಯ ಕೃತಜ್ಞತಾ ಭಾವವನ್ನು ಸಾರುತ್ತದೆ.

ಗುರ್ಚಿಗುರ್ಚಿಎಲ್ಲಾಡಿ ಬಂದೆ
ಹಳ್ಳ ಕೊಳ್ಳ ತಿರುಗ್ಯಾಡಿ ಬಂದೆ
ಕಾರಮಳೆಯೇ ಕಪ್ಪು ಮಳಿಯೇ
ಸುರಿ ಮಳೆಯೇ ಸುರಿ ಮಳೆಯೇ

ಮಳೆರಾಯನಿಗೆ ಮುನಿಸು ಬಂದಾಗ ಜನಪದರು ಅವನನ್ನು ಒಲಿಸಿಕೊಳ್ಳಲು ವಿಧ ವಿಧವಾದ ಆಚರಣೆಗಳನ್ನು ಮಾಡುತ್ತಾರೆ. ಕತ್ತೆಗಳ ಮದುವೆ ಮಾಡಿಸುವ , ಕಪ್ಪೆಗಳ ಮದುವೆ ಮಾಡಿಸುವ ಪದ್ಧತಿ ಸೇರಿದಂತೆ ಸಗಣಿಯ ಉಂಡೆಯ ರೂಪದಲ್ಲಿ ಮಳೆರಾಯನನ್ನು ಮಾಡಿ ಅದಕ್ಕೆ ಜೋಳದ ಸಸಿ ಅಥವಾ ಗರಿಕೆ ಚುಚ್ಚಿ ಪೂಜಿಸಿ ಮನೆ ಮನೆಗೆ ಹೋಗಿ ಹಾಡುತ್ತಾ ಪೂಜೆ ಸ್ವೀಕರಿಸಿ, ಧಾನ್ಯಗಳನ್ನು ಪಡೆಯುವ ಮೂಲಕ ಮಳೆಯನ್ನು ಪ್ರಾರ್ಥಿಸುವರು.

ಹೆತ್ತವ್ವ ಹಿಟ್ಟು ಕೊಡಲೊಲ್ಲಳು ಶಿವರಾಯ
ಉತ್ತರೆಯ ಮಳೆ ಕರುಣಿಸು
ಬಂದೆತ್ತು ನಿಮಗೆ ಹಿಂಡತ್ತು ಆಗಲೋ
ಸೇರಿದ ಭೂಮಿ ಬೆಳೆಯಲಿ ಜೋಕುಮಾರಣ್ಣನ
ನಾರೆರು ಕೊಟ್ಟ ಹರಕೆಯಎಂದು ಹಾಡುವರು.

ಮಾತೃ ಪ್ರಧಾನ ಸಮಾಜ ವ್ಯವಸ್ಥೆಯ ಕಾಲದಲ್ಲಿ ಮತ್ತು ಕೃಷಿಯ ಬೆಳವಣಿಗೆಯಲ್ಲಿ ಮಹಿಳೆಯರು ಪ್ರಧಾನ ಪಾತ್ರವಹಿಸಿದ್ದು, ಭೂಮಿ ಫಲವತ್ತಾಗಿರಲು, ಬೆಳೆ ಸಮೃದ್ಧಿಯಾಗಿರಲು ವಿಶೇಷ ಸಂಪ್ರದಾಯಗಳನ್ನು ಹಬ್ಬದ ಆಚರಣೆಯಾಗಿ ಮುಂಗಾರಿನಲ್ಲಿ ಕಾಮನ ಹಬ್ಬವನ್ನು, ನಂತರ ಹಿಂಗಾರಿನ ಸಂದರ್ಭದಲ್ಲಿ ಜೋಕುಮಾರ ಹಬ್ಬವನ್ನು ಆಚರಿಸುವುದನ್ನು ಗಮನಿಸಬಹುದು.

ಮಾಯಾದಂಥ ಮಳೆ ಬಂತಣ್ಣ
ಮದಗಾದಕೆರೆಗೆ, ಅಂಗೈ ಅಗಲ ಮೋಡನಾಡಿ,
ಭೂಮಿ ತೂಕದ ಗಾಳಿ ಬೀಸಿ
ಗುಡುಗಿ ಗುಡಾಡಿ ಚೆಲ್ಲಿದಾಳೋ
ಗಂಗಮ್ಮ ತಾಯಿ.

ಮಳೆಯ ಅತಿವೃಷ್ಟಿ ಮತ್ತು ಅನಾವೃಷ್ಟಿ ಸಂದರ್ಭದಲ್ಲಿ ಬೇರೆ ಬೇರೆ ರೀತಿಯಲ್ಲಿ ಮಳೆ ರಾಜನನ್ನು ಸ್ತುತಿಸಿದ್ದಾರೆ. ಭೂಮಿ ಹಾಗೂ ಮುಗಿಲಿನ ಸಂಬಂಧ ಸಾವಯವವಾದದ್ದು. ಅನಿರೀಕ್ಷಿತವಾಗಿ ಮಳೆ ಸುರಿಯುವ ಚೆಂದ ಮತ್ತು ಅಲ್ಲಿನ ನಿನಾದ ಅದ್ಭುತವಾಗಿ ವರ್ಣಿಸಿರುವುದನ್ನು ಜನಪದರ ಸೃಜನಶೀಲತೆಗೆ ಸಾಕ್ಷಿಯಾಗಿದೆ.

ಸೊಲಗಿ ಹಿಟ್ಟಿನಾಗ ಮಳಿರಾಜ ಅವರು
ಸುಣ್ಣನ್ನುಕೂಡಿಸ್ಯಾರ ಮಳಿರಾಜ
ಹಸ್ತು ಬಂದಕೇರಿ ಗಪಗಪನೆ ತಿಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬಿದ್ದಾಡಿ ಸತ್ತಾರ ಮಳಿರಾಜ.
ಅಪ್ಪುವನ್ನುಕೂಡ್ಯಾರ ಮಳಿರಾಜ
ಸಣ್ಣ ಕೂಸಿಗೆ ಮನ್ನಿಸಿ ಉಣಿಸ್ಯಾರ
ಕಣ್ಣನ್ನು ಮುಚ್ಯಾವ ಮಳಿರಾಜ.

ಹಾಗೆಯೇ ಕ್ಷಾಮ ತಲೆದೋರಿದಾಗ ಆತ್ಮಹತ್ಯೆ ಮಾಡಿಕೊಳ್ಳುವ ಅಥವಾ ಮಕ್ಕಳು ತಿನ್ನುವ ಅನ್ನಕ್ಕೆ ವಿಷ ಬೆರೆಸಿ ಕೊಲ್ಲುವಂತಹ ಭೀಕರತೆಯನ್ನು ಸಾರುವ ಮತ್ತು ಮಳೆರಾಜನಿಗೆ ತನ್ನ ನೋವನ್ನು ನಿವೇದಿಸುವಲ್ಲಿ ಜನಪದರು ತೀವ್ರ ಸಂಕಟಗಳನ್ನು ಅಭಿವ್ಯಕ್ತಿಸುವ ಪರಿಕರುಣಾಜನಕವಾಗಿದೆ.

'ಯಾತಕ್ಕೆ ಮಳೆ ಹೋದಾವೋ ಶಿವ ಶಿವ, ಲೋಕ ತಲ್ಲಣಿಸಿತಾದೋ' ಎಂಬ ಕವನದಲ್ಲಿ ಮಳೆಯ ಅಭಾವದಿಂದಇಡೀ ಲೋಕದಲ್ಲಿನ ಸಕಲ ಜೀವರಾಶಿಗಳಿಗೆ ಒದಗಿರುವ ಸಂಕಟಗಳನ್ನು ನಿವೇದಿಸುವುದರೊಂದಿಗೆ, ಬೆಂಕಿಯ ಮಳೆಯನ್ನಾದರೂ ಸುರಿಸಿ ನಮ್ಮನ್ನು ಈ ಹಸಿವು ಸಂಕಟಗಳಿಂದ ಪಾರು ಮಾಡಲು ಸಾವೇ ಕೊನೆಯ ದಾರಿ ಎಂಬಂತೆ ಅಸಹಾಯಕರಾಗಿ ಜನರು ಮಳೆ ದೇವನನ್ನು ಸ್ತುತಿಸಿದ್ದಾರೆ.

ನಡೆದರೆಜ್ಜೋಲಿ ಹೊಡೆಯುತ್ತಲೇ
ಪಟ್ಟಾದಾನೆಯಂಥ ಸ್ತ್ರೀಯರು ಸೊರಗಿ
ಸೀರೆ ನಿಲ್ಲದಾಗಿದೆ ಸೊಂಟದಲ್ಲೇಲೆ
ಹಸುಗೂಸು ಹಸಿವಿಗೆ ತಾಳದಲೆ
ಅಳುತಾವೆ ರೊಟ್ಟಿ ಕೇಳಿ ಕೇಳಿ

ಮಳೆ ಸಮೃದ್ಧಿಯ ಸಂಕೇತವೆಂಬುದನ್ನು ಹಾಡುತ್ತಾ, ದುಡಿಯುವ ಮಹಿಳೆಯ ಸೌಖ್ಯ, ಆರೋಗ್ಯ ಸೇರಿದಂತೆ ಸರ್ವಸ್ವವೂ ನಾಶವಾಗಿರುವ ಭೀಕರತೆಯನ್ನು ರೂಪಕಗಳೊಂದಿಗೆ ಮಳೆಯಿಲ್ಲದೇ ಸೊರಗಿರುವ ಹೆಣ್ಣುಮಕ್ಕಳ ಯಾತನೆ, ಚಿಕ್ಕ ಮಕ್ಕಳ ಹಸಿವಿನ ನಿಕೃಷ್ಟತೆಯನ್ನು ನಿವೇದಿಸಿದ್ದಾರೆ.

ಬಹುಪಾಲು ಜನಪದ ಗೀತೆಗಳಲ್ಲಿ ಮಳೆ ಮತ್ತು ಸ್ತ್ರೀ ಭಾವ ಪರಸ್ಪರ ಸಂಬಂಧ ಹೊಂದಿವೆ. ಭೂಮಿ ಸ್ತ್ರೀ ರೂಪಕ, ಮಳೆ ಪುರುಷ ಶಕ್ತಿಯ ಸಂಕೇತವಾಗಿಕಾಣುತ್ತದೆ. ಇದು ಫಲವತ್ತತೆಯ ಕಲ್ಪನೆಯನ್ನು ಸೂಚಿಸುತ್ತದೆ.

ಜನಪದ ಗಾದೆಗಳು : ಗಾದೆಗಳು ಅನುಭವದ ಸಾರವನ್ನು ಹೇಳುತ್ತವೆ. ತೀಕ್ಷ್ಣತೆಯಿಂದ ಕೂಡಿದ್ದು, 'ಹಲವರ ಜ್ಞಾನ, ಒಬ್ಬನ ವಿವೇಕ' ಎಂಬುದನ್ನು ಪುಷ್ಟೀಕರಿಸುತ್ತವೆ. ಗಾದೆಗಳಲ್ಲಿ ಕೃಷಿ, ಕಸುಬು, ಸಂಪ್ರದಾಯ, ಆಚರಣೆ, ಸಂಬಂಧಗಳ ಮಹತ್ವ, ಆರೋಗ್ಯದ ಗುಟ್ಟು, ಆಹಾರ, ಅಡುಗೆ, ವೈದ್ಯ ವಿಜ್ಞಾನ ಕುರಿತ ಹಲವು ಅಂಶಗಳನ್ನು ಒಳಗೊಂಡಿವೆ. ಮಳೆ ಮತ್ತು ಬೇಸಾಯ ಜೊತೆ ಜೊತೆ ಸಾಗುವಂತಹ ಪ್ರಕ್ರಿಯೆಗಳಾಗಿವೆ. ಬಿತ್ತನೆಯ ಸಂದರ್ಭದಿಂದ ಹಿಡಿದು ರಾಶಿ ಮಾಡುವವರೆಗೆ ಯಾವ ಯಾವ ಮಾಸದಲ್ಲಿ ಮಳೆಗಳು ಹೇಗೆ ಬೀಳುತ್ತವೆ, ಅವುಗಳು ಬೆಳೆಯ ಮೇಲೆ ಬೀರುವ ಪರಿಣಾಮದ ಕುರಿತು ಅನೇಕ ಗಾದೆಗಳು ಜನಪದರ ವೀಕ್ಷಣಾ ಶಕ್ತಿಯನ್ನು ತೋರಿಸುತ್ತವೆ. ಈ ಗಾದೆಗಳು ಮಳೆ ಮತ್ತು ಮಾನವ ಬದುಕಿನ ಅವಿನಾಭಾವ ಸಂಬಂಧವನ್ನು ಸ್ಪಷ್ಟಪಡಿಸುತ್ತವೆ.

"ಮಳೆ ಬಂದ್ರೆಕೇಡಲ್ಲ, ಮಗ ಉಂಡ್ರೆಕೇಡಲ್ಲ" : ಮಳೆಯನ್ನು ಮನೆಯ ಮಗನೊಂದಿಗೆ ದೃಷ್ಟಾಂತೀಕರಿಸಿ ಹೇಳುವ ಈ ಗಾದೆ ಮಳೆ ಬಂದಷ್ಟೂ ಬೆಳೆಗಳಿಗೆ, ಅಂತರ್ಜಲ ಹೆಚ್ಚಳದಿಂದ ಇಡೀಜೀವಸಂಕುಲಕ್ಕೆ ಸಹಕಾರಿ ಎಂಬುದನ್ನು ಧ್ವನಿಸುತ್ತದೆ.

'ರೋಣಿ ಮಳೆ ಹುಯ್ದರೆ ಓಣ್ಯಲ್ಲಾ ಜ್ವಾಳ' : ಮೇ ತಿಂಗಳಲ್ಲಿ ಬರುವರೋಹಿಣಿ ಮಳೆಯು ಜೋಳ ಬಿತ್ತನೆ ಮಾಡಲು ಸೂಕ್ತವಾಗಿದ್ದು, ಸಮೃದ್ಧ ಫಸಲು ಮತ್ತು ಇಳುವರಿ ಬರಲು ಉತ್ತಮ ಎಂಬುದನ್ನು ಅನುಭವದ ಮೂಲಕ ಅರಿತಿದ್ದಾರೆ. ತದ ನಂತರದಲ್ಲಿ ಬಿತ್ತಿದರೆ ತೆನೆ ಕೊಯ್ಲಿನ ಸಮಯಕ್ಕೆ ಹುಳು ಬಾಧೆಗೆ ಸಿಲುಕುವ ಸೂಚನೆಯೂಇದೆ.

'ಆದ್ರಿ ಮಳೆಯಲ್ಲಿ ಹಚ್ಚಿದರೆಆರು ಕಾಯಿ ಹೆಚ್ಚು' : ಆರಿದ್ರಾ ಮಳೆಯು ಮೆಣಸಿನ ಸಸಿ ನಾಟಿ ಮಾಡಲು ಉತ್ತಮವಾಗಿದ್ದು, ಹೆಚ್ಚಿನ ಇಳುವರಿ ನೀಡುತ್ತದೆಎಂಬುದನ್ನು ತಿಳಿಸುತ್ತದೆ.

'ಉತ್ತರೆ ಮಳೆ ಬಂದರೆ ಬಿತ್ತದ್ದೆಲ್ಲ ಫಲ' : ಉತ್ತರೆ ಮಳೆಯು ಹಿಂಗಾರು ಬೆಳೆಗೆ ಅತ್ಯವಶ್ಯಕವಾಗಿದ್ದು, ಹೂ ಕಾಯಿಯಾಗುವ ಸಂದರ್ಭದಲ್ಲಿ ಬರುತ್ತದೆ. ಈ ಮಳೆಯು ಹುಸಿ ಹೋಗದಿದ್ದರೆಉತ್ತಮ ಫಲ ದೊರೆಯುತ್ತದೆ ಎಂಬ ಪ್ರತೀತಿ.

ಹುಬ್ಬೆ ಮಳೆಗೆ ಸಂಬಂಧಿಸಿದಂತೆ ವಿವಿಧ ಉಕ್ತಿಗಳನ್ನು ಹೇಳುವ ಜನ ವ್ಯಂಗ್ಯದ ರೀತಿಯಲ್ಲೂ ಮತ್ತು ಅತಿವೃಷ್ಟಿಗೆ ಕಾರಣವಾಗಬಹುದು ಎಂಬ ಸೂಚನೆಯನ್ನೂ ನೀಡುತ್ತಾರೆ. 'ಹುಬ್ಬೆ ಮಳೆಗೆ ಗುಬ್ಬಿ ಪುಕ್ಕ ಸಹ ತೋಯಲ್ಲ' ಎಂಬಲ್ಲಿ ವ್ಯಂಗ್ಯವಿದ್ದರೆ , ' ಹುಬ್ಬೆ ಮಳೆ ಉಬ್ಬುಬ್ಬಿ ಬಂದರೆ ಆನೆ ಕಣ್ವರೆಗೂ ಬರುತ್ತದೆ' ಎಂಬಲ್ಲಿ ಅದರ ರಭಸಕ್ಕೆ ಹಳ್ಳ ಕೊಳ್ಳಗಳು ಮೈದುಂಬಿ ಹರಿಯುವುದನ್ನುಉಲ್ಲೇಖಿಸುತ್ತಾರೆ.

'ಸ್ವಾತಿ ಮಳೆ ಆದ್ಮೇಲೆಯಾತರ ಮಳೆ' : 'ಸ್ವಾತಿ ಮಳೆ ಹೇತೆನೆಂದರೂ ಬಿಡದು', ಎಂಬ ಗಾದೆಗಳು ಸ್ವಾತಿ ಮಳೆಯೇ ಪೈರಿಗೆ ಅನುಕೂಲವಾಗುವ ಮತ್ತು ಚೆನ್ನಾಗಿ ಸುರಿಯುವ ಮಳೆಯಾಗಿದ್ದು ತದ ನಂತರ ಮಳೆ ಕ್ಷೀಣಿಸುತ್ತದೆ ಎಂಬುದರ ದ್ಯೋತಕವಾಗಿದೆ.

'ಅಸಲಿ ಮಳೆ ಬಿಸಿಲಿಗೆ ಹೋತು' : 'ಅಸಲೆ ಮಳೆಗೆ ಎಸಲೆಲ್ಲಾ ಭತ್ತ' ಮತ್ತು 'ಅಸಲಿ ಮಳೆಗೆ ಭೂಮೆಲ್ಲಾ ಹಚ್ಚಗೆ' ಅಂದರೆ ಆಶ್ಲೇಷಾ ಮಳೆ ಬರುವಾಗ ಮೋಡಕವಿದ ವಾತಾವರಣವಿರಬೇಕು ಇಲ್ಲದಿದ್ದರೆ ಮಳೆ ಹುಸಿಯಾಗುತ್ತದೆ. ಈ ಮಳೆಯು ಭತ್ತದ ಫಸಲಿಗೆಅತೀಅವಶ್ಯಕ ಮಳೆಯಾಗಿದ್ದು ಉತ್ತಮವಾಗಿತೆನೆಕಟ್ಟಿ ಇಳುವರಿ ಬರುತ್ತದೆ.

'ಮಘೆ ಮಳೆ ಬಂದರೆ ಮಗ ಉಂಡಷ್ಟೇ ಒಳ್ಳೆದು' : 'ಮಗಿ ಮಳೆಯಾದರೆ ಮಗೆ ಗಾತ್ರದ ತೆನೆ' ಎಂಬ ಮಾತುಗಳು ಹಿಂಗಾರು ಬೆಳೆಗಳಿಗೆ ಮಾಘ ಮಳೆಯು ತುಂಬಾ ಅವಶ್ಯಕವಾಗಿದ್ದು ಹೂವಾಗುವ ಮತ್ತು ಕಾಯಿ ಕಟ್ಟುವ ಸಮಯವಾಗಿದೆ. ಆದ್ದರಿಂದ ಹೆತ್ತವರಿಗೆ ಮಗನ ಮೇಲಿನ ಪ್ರೀತಿಯಿದ್ದಂತೆ, ಬೆಳೆಗಳಿಗೆ ಈ ಮಳೆಯು ಅತ್ಯಗತ್ಯವಾಗಿದೆ.

ಜನಪದ ಕಥೆಗಳಲ್ಲಿ ಮಳೆ ಕೆಲವೊಮ್ಮೆ ವರದಾನ, ಕೆಲವೊಮ್ಮೆ ಶಾಪವಾಗಿ ಬರುತ್ತದೆ. ಅತಿವೃಷ್ಟಿ, ಅನಾವೃಷ್ಟಿ ಎರಡೂ ಕಥೆಗಳ ವಿಷಯವಾಗಿವೆ. ಮಳೆ ದೇವನನ್ನು, ಕೋಪಗೊಳಿಸಿದರೆ ಬರ, ಸಂತೋಷಪಡಿಸಿದರೆ ಸಮೃದ್ಧಿ ಎಂಬ ಕಲ್ಪನೆಗಳು ಇಲ್ಲಿ ಕಂಡು ಬರುತ್ತವೆ.

ಜನಪದರಲ್ಲಿ ಮಳೆಯ ಕುರಿತು ಅನೇಕ ನಂಬಿಕೆಗಳಿವೆ. ಕಪ್ಪೆ ಕೂಗಿದರೆ ಮಳೆ, ಮುಂಗಾರು ಮೊದಲು ಹಾವು ಕಾಣಿಸಿದರೆ ಶುಭ, ಕೆಲವು ಹಬ್ಬ–ವ್ರತಗಳಿಂದ ಮಳೆ ಬೀಳುತ್ತದೆ ಎಂಬನಂಬಿಕೆಗಳು ವಿಜ್ಞಾನಾಧಾರಿತ ವಾಗಿರದಿದ್ದರೂ ಜನರ ಪ್ರಕೃತಿ ಅವಲೋಕನದ ಫಲವಾಗಿದೆ.

ಮಳೆಗಾಗಿ ವಿಶೇಷ ಆಚರಣೆಗಳು ನಡೆದಿರುವುದನ್ನು ಜನಪದ ಸಾಹಿತ್ಯ ಹೇಳುತ್ತದೆ. **"ಮಳೆ ಹಬ್ಬ", "ಮಳೆ ತರುಆಚರಣೆ", "ಕಪ್ಪೆ ಮದುವೆ"** ಮುಂತಾದವುಗಳು ಪ್ರಕೃತಿಯನ್ನು ಪ್ರಾರ್ಥಿಸುವ ಮಾನವನ ಮನೋಭಾವವನ್ನು ತೋರಿಸುತ್ತವೆ. ಜನಪದ ಸಾಹಿತ್ಯದಲ್ಲಿ ಮಳೆ ದೇವತ್ವದ ರೂಪ ಪಡೆದುಕೊಳ್ಳುತ್ತದೆ. ಮಳೆಯು ಜೀವನದ ಸಂಕೇತ, ಸಮೃದ್ಧಿಯ ಸೂಚಕ, ಭರವಸೆಯ ಪ್ರತೀಕವಾಗಿದೆ.

ಆಧುನಿಕ ಯುಗದಲ್ಲಿಯೂ ಮಳೆಯ ಕುರಿತ ಜನಪದ ಭಾವನೆಗಳು ಸಂಪೂರ್ಣ ನಶಿಸಿಲ್ಲ. ಬರ, ಹವಾಮಾನ ಬದಲಾವಣೆಗಳು ಮಳೆಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಹತ್ವವನ್ನು ಇನ್ನಷ್ಟು ಹೆಚ್ಚಿಸಿವೆ. ಜನಪದ ಸಾಹಿತ್ಯವು ಪರಿಸರ ಸಂರಕ್ಷಣೆಯ ಸಂದೇಶವನ್ನು ನೀಡುತ್ತದೆ.

ಜನಪದ ಸಾಹಿತ್ಯದಲ್ಲಿ ಮಳೆ ಕೇವಲ ಪ್ರಕೃತಿ ಘಟನೆ ಅಲ್ಲ; ಅದು ಜನ ಜೀವನದ ಆತ್ಮವಾಗಿದೆ. ಮಳೆ ಇಲ್ಲದೆಜನಪದ ಸಾಹಿತ್ಯವನ್ನು ಕಲ್ಪಿಸಲಾಗದು. ಮಳೆ ಕುರಿತ ಗೀತೆಗಳು, ಗಾದೆಗಳು, ನಂಬಿಕೆಗಳು ಮಾನವ–ಪ್ರಕೃತಿ ಸಹಜ ಸಂಬಂಧವನ್ನು ಪ್ರತಿಪಾದಿಸುತ್ತವೆ. ಈ ಅಧ್ಯಯನವು ಜನಪದ ಸಾಹಿತ್ಯದ ಪರಿಸರ ಸಂವೇದನೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

ಪರಾಮರ್ಶನ ಗ್ರಂಥಗಳು

- **ಅರ್ಕಸಾಲಿ ವೃಷಭೇಂದ್ರಚಾರ್ :** ಮಳೆರಾಯ ಪರಂಪರೆ, ಪ್ರಸಾರಾಂಗ, ಹಂಪಿ ಕವಿವಿ.
- **ಸೋಮಣ್ಣ :** ವ್ಯವಸಾಯ ಸಂಬಂಧಿ ಆಚರಣೆಗಳು, ಪ್ರಸಾರಂಗ, ಹಂಪಿ ಕವಿವಿ.
- **ಈಶ್ವರಪ್ಪ ಎಂ. ಜಿ.** : ಚಿತ್ರದುರ್ಗ ಜಿಲ್ಲೆಯ ಕೃಷಿ ಜಾನಪದ, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.
- **ಡಾ. ರಾಗೌ :** ನಮ್ಮ ಗಾದೆಗಳು, ಮೈಸೂರು ಡಿ ವಿ ಕೆ ಮೂರ್ತಿ ಪ್ರಕಾಶನ.

■■

– 26ನೇ ಪುಟದಿಂದ ಮುಂದುವರೆದುದು

ಕೇಸ್ ಸ್ಟಡಿ 3 : ಉದ್ಯಮಶೀಲತೆಯಲ್ಲಿ ಕೃತಕ ಬುದ್ದಿಮತ್ತೆ

ಕೀನ್ಯಾದಲ್ಲಿ, ಸ್ವಯಂ–ಚಾಲಿತ ಮೈಕ್ರೋಫೈನಾನ್ಸ್ ಪ್ಲಾಟ್‌ಫಾರ್ಮ್‌ಗಳು ಸಾಲಗಳು ಮತ್ತು ಹಣಕಾಸು ನಿರ್ವಹಣಾ ಸಾಧನಗಳಿಗೆ ಅತ್ಯುತ್ತಮ ಹಾದಿಯನ್ನು ಒದಗಿಸುವ ಮೂಲಕ ಮಹಿಳಾ ಉದ್ಯಮಿಗಳಿಗೆ ಅಧಿಕಾರ ನೀಡಿವೆ. ತಾಲಾ ಮತ್ತು ಬ್ಯಾಂಚ ಉಪಕರಗಳಂತಹ ಪ್ಲಾಟ್‌ಫಾರ್ಮ್‌ಗಳು ಕ್ರೆಡಿಟ್ ಅರ್ಹತೆಯನ್ನು ನಿರ್ಣಯಿಸಲು ಮತ್ತು ವೈಯಕ್ತಿಕಗೊಳಿಸಿದ ಆರ್ಥಿಕ ಸಲಹೆಯನ್ನು ನೀಡಲು ಕೃತಕ ಬುದ್ದಿಮತ್ತೆಯನ್ನು ಬಳಸುತ್ತವೆ, ಮಹಿಳೆಯರು ತಮ್ಮ ವ್ಯವಹಾರಗಳನ್ನು ಬೆಳೆಸಿ ಉದ್ಯಮ ಶೀಲರನ್ನಾಗಿ ಮಾಡಲು ಕೃತಕ ಬುದ್ದಿಮತ್ತೆಯು ಅನುವು ಮಾಡಿಕೊಡುತ್ತದೆ.

ಸವಾಲುಗಳು ಮತ್ತು ನೈತಿಕ ಪರಿಗಣನೆಗಳು

ಕೃತಕ ಬುದ್ದಿಮತ್ತೆಯು ಮಹಿಳೆಯರ ಸ್ವಾವಲಂಬನೆಗಳಿಗೆ ಅಗಾಧವಾದ ಸಾಮರ್ಥ್ಯವನ್ನು ಒದಗಿಸುತ್ತದೆ, ಇದು ಎದುರಿಸಬೇಕಾದ ಸವಾಲುಗಳನ್ನು ಸಹ ತಿಳಿಸಿಕೊಡುತ್ತದೆ. ಬಳಕೆದಾರರ ಸೂಕ್ಷ್ಮ ಮಾಹಿತಿಯನ್ನು ರಕ್ಷಿಸಲು ಡೇಟಾ ಗೌಪ್ಯತೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯ. ಇದಲ್ಲದೆ, ಲಿಂಗ ತಾರತಮ್ಯವನ್ನು ಮತ್ತು ಪಕ್ಷಪಾತಗಳನ್ನು ತಡೆಗಟ್ಟಲು ಅಲ್ಗಾರಿಥಮ್‌ಗಳು ಸಹಾಯ ಮಾಡುತ್ತವೆ ಮತ್ತು ಕೃತಕ ಬುದ್ದಿಮತ್ತೆಯ ವ್ಯವಸ್ಥೆಗಳಲ್ಲಿ ಪಾರದರ್ಶಕತೆಯನ್ನು ಉತ್ತೇಜಿಸುವುದು ಬಹಳ ಮುಖ್ಯ. ನೀತಿ ನಿರೂಪಕರು, ಟೆಕ್ ಕಂಪನಿಗಳು ಮತ್ತು ಶಿಕ್ಷಣ ಸಂಸ್ಥೆಗಳು ಮಹಿಳೆಯರ ಹಕ್ಕುಗಳು ಮತ್ತು ಭಾಗವಹಿಸುವಿಕೆಗೆ ಆದ್ಯತೆ ನೀಡುವ ನೈತಿಕ ಚೌಕಟ್ಟುಗಳನ್ನು ರಚಿಸಲು ಸಹಕರಿಸಬೇಕು.

ಉಪಸಂಹಾರ

ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿಸುವ ಮೂಲಕ, ಉದ್ಯೋಗಿಗಳ ಸೇರ್ಪಡೆಯನ್ನು ಉತ್ತೇಜಿಸುವ, ಆರೋಗ್ಯವನ್ನು ಬೆಂಬಲಿಸುವ, ಸುರಕ್ಷತೆಯನ್ನು ಖಾತ್ರಿಪಡಿಸುವ, ಉದ್ಯಮಶೀಲತೆಯನ್ನು ಉತ್ತೇಜಿಸುವ ಮತ್ತು ಸಾಂಸ್ಕೃತಿಕ ಮಾನದಂಡಗಳನ್ನು ಸವಾಲು ಮಾಡುವ ಮೂಲಕ ಮಹಿಳೆಯರ ಜೀವನವನ್ನು ಪರಿವರ್ತಿಸುವ ಶಕ್ತಿಯನ್ನು ಕೃತಕ ಬುದ್ದಿಮತ್ತೆಯ ತಂತ್ರಜ್ಞಾನವು ಹೊಂದಿದೆ. ಆದಾಗ್ಯೂ, ಈ ಸಾಮರ್ಥ್ಯವನ್ನು ಅರಿತುಕೊಳ್ಳಲು ಜೊತೆಗೆ ಅನುಷ್ಠಾನಕ್ಕೆ ಸಂಬಂಧಿಸಿದ ನೈತಿಕ ಮತ್ತು ಪ್ರಾಯೋಗಿಕ ಸವಾಲುಗಳನ್ನು ಪರಿಹರಿಸಲು ಸಂಘಟಿತ ಪ್ರಯತ್ನದ ಅಗತ್ಯವಿದೆ. ಕೃತಕ ಬುದ್ದಿಮತ್ತೆಯ ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ಮೂಲಕ, ನಾವು ಹೆಚ್ಚು ಸಮಾನವಾದ ಮತ್ತು ಅಂತರ್ಗತ ಸಮಾಜಕ್ಕೆ ದಾರಿ ಮಾಡಿಕೊಡಬಹುದು, ಅಲ್ಲಿ ಮಹಿಳೆಯರು ಅಭಿವೃದ್ಧಿ ಹೊಂದಬಹುದು ಮತ್ತು ಜಾಗತಿಕ ಅಭಿವೃದ್ಧಿಗೆ ಕೊಡುಗೆ ನೀಡಬಹುದು.

ಕೃತಜ್ಞತೆಗಳು

ಈ ಸಂಶೋಧನಾ ಪ್ರಕ್ರಿಯೆಗೆ ಸಾಕಷ್ಟು ಸೌಲಭ್ಯವನ್ನು ಒದಗಿಸಿದ ಪ್ರಾಂಶುಪಾಲರು, ಸಪ್ರದಮಹಿಳಾ ಕಾಲೇಜು ಧಾರವಾಡ, ಪ್ರಾಂಶುಪಾಲರು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು ಮತ್ತು ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಲೇಖಕರು ಅತ್ಯಂತ ಪ್ರಾಮಾಣಿಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ.

ಪರಾಮರ್ಶನ ಗ್ರಂಥಗಳು

- **Dr. Pooja Ramchandani (2024) :** "The influence of artificial intelligence on women's empowerment" a global journal of humanities", volume - vii issue ii April – June.
- **Dr. Smt. Kavita H Kulkarni (2023) :** "AI And Women's Empowerment", International International Journal of Creative Research Thoughts (IJCRT), Volume 11, Issue 11 November.
- **Hafizullah Shahbazi, Musawer Hakimi, Helena Ulusi (2024) :** "Exploring the Impact of Artificial Intelligence on Women's Empowerment: A Comprehensive Survey" June, journal of community service and society empowerment 2(03):278-293.
- Https://unu.edu/article/now-our-chance-govern-ai-womens-empowerment.
- https://www.unwomen.org/en/articles/explainer/artificial-intelligence-and-gender-equality.
- **Manasi sharma (2024) :** -https://www.forbes.com/councils/forbestechcouncil/2024/12/16/the-future-of-ai-and-the-role-of-women-in-shaping-it/ dec 16.
- **Ms Sukhpreet Kaur (2024) :** "The A.I Revolution and its Impact on Women's Life" , The Academic International Journal of Multidisciplinary Research, Volume 2 | Issue 12 | December, pg 59-69.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

'ಹೈವೇ 63' ಕಾದಂಬರಿಯಲ್ಲಿನ ಮಹಿಳೆಯರು – ಒಂದು ನೋಟ

✍ ಡಾ. ಶರ್ಮಿಳಾ ವಿ.ಎನ್., ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಾಗಮಂಗಲ.

ಸುನಂದಾ ಕಡಮೆ ಅವರ ಕಾದಂಬರಿ 'ಹೈವೇ 63' ಕಾಡಿನ ಜೀವನಾಧಾರಿತ ಕಥೆಯನ್ನೊಳಗೊಂಡಿದೆ. ಈ ಕಾದಂಬರಿಯನ್ನು ಓದುವಾಗ ನೆನಪಾಗುವ ಮತ್ತೊಂದು ಕಾದಂಬರಿ ಎಂದರೆ ಪೂರ್ಣಚಂದ್ರ ತೇಜಸ್ವಿ, ಅವರ ಜುಗಾರಿ ಕ್ರಾಸ್. ಅಲ್ಲಿ ಕಾಡಿನ ಎಲ್ಲ ಚಟುವಟಿಕೆಗಳ ಪ್ರಮುಖ ಕೇಂದ್ರಸ್ಥಳ ಜುಗಾರಿಕ್ರಾಸ್ ಆಗಿತ್ತೋ ಹಾಗೆ ಇಲ್ಲಿಯೂಕೂಡ ಉತ್ತರ ಕನ್ನಡದ ಅರೆಬೈಲು ಕಾಡಿನ ಹೈವೇ 63 ರಲ್ಲಿ ನಿರ್ಮಾಣವಾದ ಡಾಬವೇ ಕೇಂದ್ರಿಯ ಸ್ಥಳವಾಗಿದೆ. ಹೈವೇ 63ರ ಅಕ್ಕ–ಪಕ್ಕ ಎರಡು ಕುಟುಂಬಗಳ ಚಿತ್ರಣದ ಜೊತೆ ಜೊತೆಗೆ ನಿಗೂಢ ಕಾಡು, ಆ ಕಾಡಿನೊಳಗೆ ಮನುಷ್ಯರ ದುರಾಸೆಯಿಂದ ಅದಿರು, ಕಾಡುಮರಗಳ ಕಳ್ಳ ಸಾಗಾಣಿಕೆಗಳು, ಕಾನೂನು ಬಾಹಿರವಾಗಿ ನಡೆಯುವ ಅವ್ಯವಹಾರಗಳು, ಗುಪ್ತ ಚಟುವಟಿಕೆಗಳು ಎಲ್ಲವೂ ಕೇಂದ್ರಿಕೃತವಾಗಿದೆ. ಹೀಗೆ ಕೌಟುಂಬಿಕ ಮತ್ತು ಸಾಮಾಜಿಕ ಪರಿಸರಗಳಲ್ಲಿ ಸಂಬಂಧಗಳ ಹುಡುಕಾಟವೇ ಹೈವೇ 63 ಕಾದಂಬರಿ.

ಕಾದಂಬರಿ ಇಡೀ ಕಾಡಿನಲ್ಲಿ ನಡೆಯುವ ಹಲವಾರು ವಿಷಯಗಳನ್ನು ಒಳಗೊಂಡಿದ್ದು, ಇಲ್ಲಿ ಮುಖ್ಯ ಮಹಿಳಾ ಪಾತ್ರಗಳ ಬಗ್ಗೆ ಮಾತ್ರ ವಿವರವನ್ನು ಕಾಣಬಹುದಾಗಿದೆ. ಅವುಗಳೆಂದರೆ ನಳಿನಿ, ನಂದಿನಿ ಮತ್ತುಜಲಜ.

ಮೊದಲನೇಯದಾಗಿ ನಳಿನಿ ಈಕೆ ಅರೆಬೈಲು ಹೆಗ್ಗಾಡು ಕಣಿವೆಯಲ್ಲಿ ಆಶಾ ಕಾರ್ಯಕರ್ತೆಯಾಗಿದ್ದು, ತಂದೆ ಮಾದೇವ ಗಾಂವ್ಕಾರ ಮತ್ತು ತಂಗಿ ನಂದಿನಿ ಜೊತೆ ಹೈವೇ 63 ರ ಪಕ್ಕದಲ್ಲಿ ವಾಸವಾಗಿರುತ್ತಾಳೆ. ಈಕೆ ಕೇವಲ ಮನುಷ್ಯರ ಆರೋಗ್ಯ ಮಾತ್ರವಲ್ಲ ಸಾಮಾಜಿಕ ಆರೋಗ್ಯವನ್ನು ಕಾಪಾಡುವುದಕ್ಕಾಗಿ ಹೋರಾಡುವ ಗಟ್ಟಿಗಿತ್ತಿ ಹೆಂಗಸು. ಕೆಲವು ತಿಂಗಳು ಹಿಂದೆ ಅಪಘಾತದಲ್ಲಿ ಗಂಡನನ್ನು ಕಳೆದು ಕೊಂಡಿದ್ದ ನಳಿನಿ ಕೊಂಡದಗಲ್ಲಿಯ ವಿಶ್ವನಾಥನ ಹೆಂಡತಿ ಆರು ತಿಂಗಳ ಗರ್ಭಿಣಿ ಶಾಲಿನಿಗೆ ಮಾತ್ರೆಕೊಡಲು ಹೊರಡುವುದರೊಂದಿಗೆ ಕಥೆ ಆರಂಭವಾಗಿ ಅವಳಿಗೆ ಹೆರಿಗೆಯಾಗಿ ಮಗುವಿನ ಹುಟ್ಟಿನ ಜೊತೆಗೆ ಮುಕ್ತಾಯವಾಗುತ್ತದೆ. ಅಂದರೆ ಮೂರು ತಿಂಗಳ ಕಥೆಯನ್ನು ಒಳಗೊಂಡಿದೆ.

ನಳಿನಿ ಕೇವಲ ಆಶಾ ಕಾರ್ಯಕರ್ತೆ ಮಾತ್ರವಲ್ಲ ಪರಿಸರ ಪ್ರೇಮಿಯು ಆಗಿದ್ದಳು.ಪರಿಸರದ ಉಳಿವಿಗಾಗಿ ತನ್ನ ಗುರುಗಳಾದ ಸಮಾಜ ಸುಧಾರಕ, ಪರಿಸರ ಪ್ರೇಮಿ ಮಾಳಸೇಕರ್‌ರ ಜೊತೆ ಸೇರಿಹೋರಾಟ, ನಡೆಸುತ್ತಿರುತ್ತಾಳೆ. ಇದಲ್ಲದೆತನ್ನ ಸುತ್ತಮುತ್ತಲಿನವರ ಕಷ್ಟಕ್ಕೂ ನೆರವಾಗುತ್ತಿರುತ್ತಾಳೆ. ಮತ್ತು ಎಲ್ಲರ ದುಃಖಕ್ಕೆ ಮರುಗುತ್ತಿರುತ್ತಾಳೆ. ಗಂಡನನ್ನು ಕಳೆದುಕೊಂಡ ದುಃಖದಲ್ಲಿದ್ದರು ಧೃತಿಗೆಡದೆ ಕಾಡಿನೊಳಗೆ ಒಬ್ಬಳೇ ಧೈರ್ಯದಿಂದ ತಿರುಗಾಡುತ್ತ ಒಬ್ಬ ಹೋರಾಟಗಾರ್ತಿಯಾಗಿ ಕಾಣುತ್ತಾಳೆ.

ನಳಿನಿ ಮನೆ ಪಕ್ಕದಲ್ಲಿಯೇ ಬಾಲ್ಯದಿಂದಲೂ ಪರಿಚಯವಿದ್ದ ದಾಮೋದರ ಖೇಣಿ ಮತ್ತು ಅವರ ಮಗ ವಿನಾಯಕ ಖೇಣಿ ಹೈವೇ 63 ರಲ್ಲಿ ಒಂದು ಡಾಬಾ ತೆರೆದಿದ್ದು ಅದಕ್ಕೆ ಹೈವೇ 63 ಎಂಬ ಹೆಸರನ್ನಿಡುತ್ತಾನೆ. ವಿನಾಯಕ ಖೇಣಿಗೆ ನಳಿನಿ ಮೇಲೆ ಪ್ರೀತಿ ಯುಂಟಾಗುತ್ತದೆ. ಆದರೆ ನಳಿನಿ ತಂದೆ ಮಾದೇವ ಗಾಂವ್ಕರ್‌ಗೆ ತನ್ನ ಎರಡನೇ ಮಗಳು ನಂದಿನಿಯನ್ನು ವಿನಾಯಕನ ಜೊತೆ ಮದುವೆ ಮಾಡಿಸಲು ಆಸೆ. ಆದರೆ ನಂದಿನಿ ವೆಂಕಟ ಎಂಬಾತನನ್ನು ಪ್ರೀತಿಸಿ ಅವನ ಜೊತೆ ಓಡಿ ಹೋಗಿ ಒಂದು ರಾತ್ರಿ ಕಳೆದು ವಾಪಸ್ ಬಂದಿರುತ್ತಾಳೆ. ಆದ್ದರಿಂದ ಆಕೆಗೆ ವಿನಾಯಕನನ್ನು ಕಂಡರೆ ಇಷ್ಟವಿಲ್ಲ ಮತ್ತು ಈಗಲೂ ನಂದಿನಿಯು ವೆಂಕಟನ ಜೊತೆ ಮದುವೆಯಾಗುವ ಕನಸು ಕಾಣುತ್ತಿರುತ್ತಾಳೆ.

ವಿನಾಯಕ ತನ್ನ ಡಾಬಾದಲ್ಲಿ ಸಸ್ಯಾಹಾರದ ಅಡುಗೆಯ ಮೇಲುಸ್ತುವಾರಿಯನ್ನು ನಳಿನಿಗೆ ವಹಿಸಿ ಅವಳ ಜೊತೆ ಹೆಚ್ಚು ಸಮಯ ಕಳೆಯಲು ಇಷ್ಟಪಡುತ್ತಾನೆ. ತನ್ನ ಪ್ರೀತಿಯನ್ನು ಹೇಳಿಕೊಳ್ಳಲು ಸಮಯ ಕಾಯುತ್ತಿದ್ದ ವಿನಾಯಕ ನಳಿನಿ ಆಶಾ ಸಂಘಟನೆಯ ಸಮಾವೇಶಕ್ಕೆ ಕಾರವಾರಕ್ಕೆ ಹೊರಟಾಗ ಅವನು ಕೂಡ ಅವಳ ಜೊತೆ ಹೋಗುತ್ತಾನೆ. ಬಸ್ಸಿನಲ್ಲಿ ಹೋಗುವಾಗ ಬರುವಾಗತನ್ನ ಕುಟುಂಬದ ಮತ್ತು ನಳಿನಿ ಬಗ್ಗೆ ಇರುವ ಪ್ರೀತಿಯ ವಿಷಯಗಳನ್ನು ಹೇಳುತ್ತ ನಳಿನಿಯ ಮುಂದೆ ಮದುವೆಯಾಗುವ ಪ್ರಸ್ತಾಪ ಮುಂದಿಡುತ್ತಾನೆ ಮತ್ತು ಅವಳ ಹಸ್ತವನ್ನು ಹಿಡಿದು ಚುಂಬಿಸುತ್ತಾನೆ. ಇದ್ಯಾವುದನು ನಿರಾಕರಿಸದ ನಳಿನಿ ಆತನಿಗೆ ನೇರವಾಗಿ ಉತ್ತರ ಕೊಡದಿದ್ದರೂ ಅವನ ನಡೆಯನ್ನು ನಿರಾಕರಿಸುವುದಿಲ್ಲ ಮತ್ತು ಎಲ್ಲೋ ಒಂದು ಕಡೆ ಅವಳ ಮನಸ್ಸು ಅವನಿಗೆ ಸೋತಿರುತ್ತದೆ. ಇಲ್ಲಿ ವಿನಾಯಕ ಅವಳ ಬಳಿ ಎಲ್ಲ ಹೇಳಿದ್ದರೂ ಆತ ಹಿಂದೆ ಮನೆಬಿಟ್ಟು ಹೋಗಿದ್ದಾಗ ಅಲ್ಲಿ ಏನು ನಡೆದಿತ್ತು ಎಂಬುದನ್ನು ಹೇಳಿರುವುದಿಲ್ಲ.

ನಂತರ ನಳಿನಿಯನ್ನು ಮದುವೆಯಾಗಬೇಕೆನ್ನುವ ವಿಷಯವನ್ನು ಆಕೆಯ ತಂದೆಯ ಬಳಿ ಪ್ರಸ್ತಾಪಿಸುತ್ತಾನೆ. ಇದರ ಮಧ್ಯೆದಲ್ಲಿ ಇಡೀ ಕಾಡಿನಲ್ಲಿ ನಡೆಯುವ ಎಲ್ಲ ಕಳ್ಳಸಾಗಾಣಿಕೆ, ಕಾಳ್ಗಿಚ್ಚು ಹಬ್ಬಲು ಕಾರಣನಾಗುವ ಮತ್ತು ಈ ಕಾಳ್ಗಿಚ್ಚಿಗೆ ಬಲಿಯಾಗುವ ಅರಣ್ಯ ರಕ್ಷಕ ದತ್ತಾರಾಮ, ನಂತರ ಆತನ ಹೆಂಡತಿ ಮಲ್ಲಿಯ ಆತ್ಮಹತ್ಯೆ. ನಳಿನಿಯ ಗಂಡನ ಸುಧಾಕರ ಸಾವಿಗೂ ಕಾರಣ.... ಹೀಗೆ ಎಲ್ಲದರ ಹಿಂದೆ ಇರುವ ಕಾಣದ ಕೈ ಆದರೆ ಸಮಾಜದ ಎದುರಿಗೆ ಸತ್ಯ ನಾಗರೀಕನಾಗಿರುವ ಮಂಜುನಾಥ. ಈತ ವಿನಾಯಕನ ಬಾಲ್ಯ ಸ್ನೇಹಿತ. ವಿನಾಯಕನನ್ನುತನ್ನ ಸ್ವಾರ್ಥಕ್ಕೆ ಬಳಸಿಕೊಂಡು ಮಂಜುನಾಥ ಆತನನ್ನು ಪರಿಸರವಾದಿ ಎಂದು ಬಿಂಬಿಸಿ ಅವನನ್ನು ಪರಿಸರ ಉಳಿಸುವ ಚಳುವಳಿಗೆ ಕರೆದುಕೊಂಡು ಹೋಗುತ್ತಾನೆ. ಆದರೆ ಅಲ್ಲಿ ಪೊಲೀಸರು ಕಾಳ್ಚಿಚ್ಚು ಮತ್ತು ಕಳ್ಳ ಮಾಲಿಗೆ ಸಂಬಂಧಪಟ್ಟಂತೆ ವಿನಾಯಕನನ್ನು ಅರೆಸ್ಟ್ ಮಾಡುವುದರ ಮೂಲಕ ಅವನನ್ನು ಬಲಿಪಶು ಮಾಡುತ್ತಾನೆ. ಆದರೆ ಮಂಜುನಾಥ ಇದನ್ನೆಲ್ಲ ಮರೆಮಾಚಿ ವಿನಾಯಕ ಹಿಂದೆ ಮನೆಯಿಂದ ಓಡಿ ಹೋಗಿದ್ದಾಗ ನೀರಾ ಎಂಬ ಹುಡುಗಿಯ ಜೊತೆಯಲ್ಲಿದ್ದು ಆದರೆ ಈಗ ಆಕೆ ಮರಣ ಹೊಂದಿದ್ದರಿಂದಇದಕ್ಕೆ ವಿನಾಯಕನೇ ಕಾರಣ ಎಂದು ಅಲ್ಲಿಯವರು ಕಂಪ್ಲೆಂಟ್ ಕೊಟ್ಟಿದ್ದಾರೆ.... ಎಂಬ ಕಾರಣಗಳನ್ನು ವಿನಾಯಕನ ತಂದೆಗೆ ಕೊಡುತ್ತಾನೆ. (ಆದರೆ ಗಾಂವ್ಕಾರ್ ಬಳಿ ಪೊಲೀಸ್ ನಿಜವಾದ ಕಾರಣ ಕೊಟ್ಟಿರುತ್ತಾರೆ.) ಆದರೆ ವಿನಾಯಕ ಇದನ್ನು ನಿರಾಕರಿಸುತ್ತಾನೆ. ಒಟ್ಟಿನಲ್ಲಿ ವಿನಾಯಕ ಜೈಲಿಗೆ ಸೇರುತ್ತಾನೆ.

ಈ ವಿಷಯ ಎಲ್ಲ ಕೊನೆಗೆ ನಳನಿಗೆ ಗೊತ್ತಾಗಿ ಬೇಸತ್ತಿದ್ದರೂ ಜೀವನೋತ್ಸಾಹ ಕಳೆದುಕೊಳ್ಳುವುದಿಲ್ಲ. ಆಗ ಶಾಲಿನಿಯ ಗಂಡ ವಿಶ್ವನಾಥ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೂಡ ಅರೆಸ್ಟ್ ಆದ ಎಂಬ ವಿಷಯ ಗೊತ್ತಾಗಿ ನಳಿನಿ ಮತ್ತಷ್ಟು ಗಾಬರಿ ಆಗುತ್ತಾಳೆ. ಅಷ್ಟರಲ್ಲಿ ಶಾಲಿನಿಗೆ ಹೆರಿಗೆ ನೋವು ಆರಂಭವಾಗಿದ್ದು. ಶಾಲಿನಿಯ ತಂದೆ ಶಾಲಿನಿಯನ್ನು ಮಳೆಯಲ್ಲಿಯೆ ಹೈವೇ 63ರ ಬಳಿಗೆ ಕರೆತರುತ್ತಾರೆ. ಆದರೆ ಅವಳನ್ನು ಇಡಗುಂದಿ ಪ್ರಾಥಮಿಕ ಆಸ್ಪತ್ರೆಗೆ ಕರೆದೊಯ್ಯಲು ಯಾವ ಗಾಡಿಗಳು ಸಿಗುವುದಿಲ್ಲ. ಎಲ್ಲರೂ ಚಿಂತಾಕ್ರಾಂತರಾಗಿದ್ದಾಗ ಅಲ್ಲಿ ಯಾವಾಗಲೂ ಅಪಾಯಕಾರಿಯಾಗಿ ಓಡಾಡುತ್ತಿದ್ದ ಒಬ್ಬ ಹೆಂಗಸು ಕಾರಿನಲ್ಲಿ ಬಂದು ಶಾಲಿನಿಗೆ ಹೆರಿಗೆ ಮಾಡಿಸಿ ಹೋಗುತ್ತಾಳೆ. ಆಗ ನಳಿನಿ ಮಗುವಿನ ಬಿಗಿದ ಮುಷ್ಠಿಯನ್ನು ನೋಡುತ್ತ ಹೊಸ ಬೆರಗಿಗಾಗಿ ಕಾಯುತ್ತ ಕುಳಿತುಕೊಳ್ಳುತ್ತಾಳೆ.

ಮತ್ತೊಂದು ಪಾತ್ರವೇನೆಂದರೆ ನಂದಿನಿ ಪಾತ್ರ ಗಮನ ಸೆಳೆಯುವಂತದ್ದು ಮೊದಮೊದಲು ಬೇಜವಾಬ್ದಾರಿಯ, ಯಾವುದಕ್ಕೂ ತಲೆಕೆಡಿಸಿಕೊಳ್ಳದ ನಂದಿನಿ ತಾನು ಪ್ರೀತಿಸುತ್ತಿದ್ದ ವೆಂಕಟನ ಜೊತೆ ಓಡಿ ಹೋಗಿ ಒಂದು ರಾತ್ರಿ ಕಳೆದು ವಾಪಸ್ ಮನೆಗೆ ಬಂದಿರುತ್ತಾಳೆ. ವೆಂಕಟ ಮಂಜುನಾಥನ ಬಲಗೈ ಬಂಟನಾಗಿದ್ದು, ಆತನಿಗೆ ಈಗಾಗಲೇ ಮದುವೆಯಾಗಿ ಹೆಂಡತಿಯನ್ನು ಬಿಟ್ಟರುತ್ತಾನೆ ಮತ್ತು ಹಲವಾರು ದುಶ್ಚಟಗಳಿರುತ್ತವೆ. ಇದೆಲ್ಲ ಗೊತ್ತಿದ್ದರೂ ಇದ್ಯಾವುದನ್ನು ಮನಸ್ಸಿಗೆ ತಂದುಕೊಳ್ಳದೇ ಅವನನ್ನೇ ಮದುವೆಯಾಗುತ್ತೇನೆಂದು ಹಠ ಹಿಡಿಯುತ್ತಾಳೆ. ಕೊನೆಗೆ ತಂದೆಯು ಆತ್ಮಹತ್ಯೆ ಬೆದರಿಕೆ ಹಾಕಿದಾಗ ಅಸಹಾಯಕಳಾಗಿ ವೆಂಕಟನ ಮೇಲೆ ಅತ್ಯಾಚಾರ ಕೇಸು ಹಾಕಿದ ಪತ್ರಕ್ಕೆ ಸಹಿ ಹಾಕಿ ತನ್ನ ಪಾಡಿಗೆತಾನು ನಿರ್ಲಿಪ್ತಳಾಗಿರುತ್ತಾಳೆ. ಆದರೆ ಕೊನೆಯಲ್ಲಿ ದಾಮೋದರ ಖೇಣಿಯ ಜೊತೆ ವೆಂಕಟನ ವಿಷಯ ಮಾತನಾಡಿದ ನಂತರ ಒಬ್ಬಳೇ ಇದ್ದಾಗಅಂದುರಾತ್ರಿ ವೆಂಕಟನ ಜೊತೆಯಲ್ಲಿ ಕಳೆದ ರಾತ್ರಿಯನ್ನು ನೆನಪಿಸಿಕೊಳ್ಳುತ್ತಾಳೆ. ಅಂದು ಹೆಂಡತಿ ಬಿಟ್ಟ ವೆಂಕಟನ ಜೊತೆ ಮದುವೆಗೆ ಅಪ್ಪ ನಿರಾಕರಿಸಿದಾಗ ನಂದಿನಿ ಅವನ ಜೊತೆ ಮನೆ ಬಿಟ್ಟು ಹೋಗುತ್ತಾಳೆ. ಅಲ್ಲಿಅವರು ಭಯಂಕರ ಕಾಡಿನೊಳಗೆ ಹೋಗುತ್ತಾರೆ. ಆ ರಾತ್ರಿ ನಂದಿನಿ ಬೇಡವೆಂದರು ವೆಂಕಟ ಅವಳ ಮೇಲೆ ಅತ್ಯಾಚಾರ ಮಾಡುತ್ತಾನೆ. ಆಗಲೂ ಅವಳಿಗೆ ಅವನ ಮೇಲೆ ಸಿಟ್ಟು ಬರುವುದಿಲ್ಲ. ಅವನ ಗೋಸುಂಬೆಯ ಪ್ರೀತಿಗೆ ಸೋಲುತ್ತಾಳೆ ಮತ್ತು ಇದುವರೆಗೂ ಅವನನ್ನು ನಂಬಿಕೊಂಡೇ ಅವನ ಜೊತೆ ಮದುವೆಯಾಗುವ ಕನಸು ಕಾಣುತ್ತಿರುತ್ತಾಳೆ.

ಆದರೆ ಇಂದು ನಂದಿನಿ ಅದನ್ನೆಲ್ಲ ನೆನಪಿಸಿಕೊಂಡು ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾಳೆ. ಇಷ್ಟು ದಿನ ಅವನನ್ನು ಮದುವೆಯಾಗಲೇಬೇಕೆಂಬ ಧ್ಯಾನದಲ್ಲಿ ಅವನ ಆ ಅತ್ಯಾಚಾರವನ್ನು ಮರೆಯಲು ಯತ್ನಿಸುತ್ತಿದ್ದು ಇಂದು ಯೋಚಿಸುತ್ತ ಯೋಚಿಸುತ್ತ ಮನಸ್ಸುಕಲ್ಲಾಗುತ್ತದೆ. ಅದು ಕ್ರಮೇಣ ನನಗೆ ವೆಂಕಟ ಬೇಡ, ಮದುವೆಯೊಂದೇ ಜೀವನದ ಪರಮ ಗುರಿಯಲ್ಲ ಎಂಬ ಸ್ವ ಅರಿವುಂಟಾಗಿ ಕಿಟಕಿಯಿಂದಾಚೆಗೆ ನೋಡಿದಾಗ ಜಗತ್ತು ತುಂಬಾ ಸುಂದರವಾಗಿ ಕಾಣತೊಡಗುತ್ತದೆ. ಆಗ ವೆಂಕಟನ ಫೋನ್ ಬಂದರೂ ಅದನ್ನು ಸ್ವೀಕರಿಸದೇ ತನ್ನ ನಿಲುವಿಗೆ ಅಂಟಿಕೊಳ್ಳುತ್ತಾಳೆ.

ಅದೇ ರೀತಿ ದಾಮೋದರ ಖೇಣಿಯವರ ಮಗಳು ಜಲಜ ಅವರ ಮನೆಯ ಬೀದಿಯಲ್ಲಿದ್ದ ಕೊನೆಯ ಮನೆಯ ಆತ್ಮರಾಮ ಸಿದ್ದಿಯನ್ನು ಪ್ರೀತಿಸಿ ಮನೆಯಲ್ಲಿ ಒಪ್ಪದ ಕಾರಣ ತನ್ನ ಪರಿಶುದ್ಧವಾದ ಪ್ರೀತಿಯನ್ನು ಉಳಿಸಿಕೊಳ್ಳಲು ಅವನ ಜೊತೆ ಓಡಿ ಹೋಗಿ ಮದುವೆಯಾಗಿ ಕಿರವತ್ತಿಲ್ಲಿ ಸಂಸಾರ ನಡೆಸುತ್ತಿರುತ್ತಾಳೆ. ಖೇಣಿಯವರು ಪತ್ನಿ ತೀರಿಹೋದ ನಂತರಕಿರವತ್ತಿ ಬಿಟ್ಟು ಹೈವೇ 63 ರಲ್ಲಿ ಬಂದು ನೆಲೆಸಿರುತ್ತಾರೆ. ಇತ್ತೀಚೆಗೆ ತಮ್ಮ ಡಾಬದ ಬಳಿ ಧರ್ಮಸ್ಥಳಕ್ಕೆ ಹೋಗುವ ಬಸ್ಸಿನಲ್ಲಿ ಜಲಜೆಯನ್ನು ನೋಡುತ್ತಾರೆ ಮತ್ತು ಅವಳು ನೋಡಿ ಕೈ ಬೀಸುತ್ತಾಳೆ. ಆದರೆ ಅವಳಿಗೂ ಅಪ್ಪನನ್ನು ಮಾತನಾಡಿಸಲು ಭಯವಿರುತ್ತದೆ. ಇದಾದ ನಂತರ ಖೇಣಿಯವರಿಗೆ ಮಗಳ ಮೇಲೆ ಮತ್ತೇ ಪ್ರೀತಿ ಹುಟ್ಟಿ ಈ ಎಲ್ಲ ವಿಷಯವನ್ನು ನಳಿನಿ ಬಳಿ ಹೇಳಿಕೊಂಡು ಅವಳನ್ನು ಭೇಟಿಯಾಗುವ ಆಸೆ ವ್ಯಕ್ತಪಡಿಸುತ್ತಾರೆ. ಇದರಿಂದ ನಳಿನಿ ಜಲಜಳನ್ನು ಹುಡುಕುವ ಪ್ರಯತ್ನ ಮಾಡುತ್ತಿದ್ದಾಗ ಗೆಳತಿ ಆಶಾ ಕಾರ್ಯಕರ್ತೆ ಶಕುಂತಲಾ ಮೂಲಕ ಅವಳ ವಿಳಾಸ ಕಂಡು ಹಿಡಿದು ತಾನೇ ಖುದ್ದಾಗಿ ಹೋಗಿ ಬಸುರಿಯಾಗಿದ್ದ ಜಲಜೆಯನ್ನು ಕಂಡು ಮಾತನಾಡಿಸಿ ಜಲಜೆ ಮತ್ತು ಅವಳ ಗಂಡನನ್ನು ಮನೆಗೆ ಆಹ್ವಾನಿಸುತ್ತಾಳೆ ಮಾರನೇ ದಿನ ಜಲಜ ಮತ್ತು ಆತ್ಮರಾಮ ಸಿದ್ದಿ ಖೇಣಿ ಮನೆಗೆ ಬಂದು ಅವರನ್ನು ಮಾತನಾಡಿಸುವುದರೊಂದಿಗೆ ತಂದೆ–ಮಗಳ ಸಂಬಂಧ ಮತ್ತೆ ಚಿಗುರೊಡೆಯುತ್ತದೆ.

ಇಲ್ಲಿಯೂ ಅಷ್ಟೇ ಜಲಜತಾನು ಸಿದ್ದಿ ಜನಾಂಗದ ಹುಡುಗನನ್ನು ಪ್ರೀತಿಸಿ ಅವನ ಜೊತೆ ಆನಂದದಿಂದ ಸಂಸಾರ ಮಾಡುವುದು ಕೂಡ ತನ್ನ ಪರಿಶುದ್ಧ ಪ್ರೀತಿಯನ್ನು ದಕ್ಕಿಸಿಕೊಳ್ಳುವುದರ ಜೊತೆಗೆ ತನ್ನ ಬದುಕಿನ ಆಯ್ಕೆಯ ಬಗ್ಗೆ ಸ್ಪಷ್ಟ ನಿಲುವು ತಾಳಿರುವುದನ್ನು ಕಾಣಬಹುದಾಗಿದೆ.

ಹೀಗೆ ಕಾದಂಬರಿಯಲ್ಲಿನ ಜಲಜ ಮತ್ತು ಅಕ್ಕ–ತಂಗಿಯರಿಬ್ಬರ ವೈಯಕ್ತಿಕ ಬದುಕನ್ನು ಗಮನಿಸಿದಾಗ ಹಲವಾರು ಅಂಶಗಳು ಕಾಣಸಿಗುತ್ತವೆ. ಇಲ್ಲಿ ನಳಿನಿ ಮತ್ತು ನಂದಿನಿಯ ಹೆಣ್ಣುಮಕ್ಕಳ ಅನನ್ಯತೆ ಮತ್ತು ಸಂಬಂಧಗಳ ಸಂಕೀರ್ಣತೆಯಲ್ಲಿ ತನ್ನನ್ನು ತಾನು ಹುಡುಕುವ ಪ್ರಯತ್ನವನ್ನು ಕಾಣಬಹುದಾಗಿದೆ. ಇಲ್ಲಿ ಗಂಡು ಹೆಣ್ಣಿನ ಸಂಬಂಧದ ಬಗ್ಗೆ ಮತ್ತು ಬದುಕಿನ ಅರ್ಥವನ್ನು ಕುರಿತು ಮರುಶೋಧ ಮಾಡಿರುವುದನ್ನು ಗಮನಿಸಬಹುದಾಗಿದೆ.

ಇಡೀ ಕಾದಂಬರಿಯಲ್ಲಿ ಕಾಡಿನ ಮಧ್ಯೆ ಪರಿಸರವಾದ, ಆಧುನಿಕತೆಯಿಂದಾಗುವ ಬದಲಾವಣೆಗಳು, ನಿಗೂಢ ಕಾಡಿನ ರಹಸ್ಯಗಳು ಇತ್ಯಾದಿಗಳೆಲ್ಲವೂ ನಳಿನಿಯ ಕಣ್ಣಿನ ಗ್ರಹಿಕೆಯಿಂದಲೇ ನಡೆಯುವುದು ಮತ್ತು ಇದೆಲ್ಲ ಗೊತ್ತಿದ್ದೂ ಗೊತ್ತಿಲ್ಲದೆಯೋ ನಳಿನಿಯ ಸುತ್ತ ಸುತ್ತವೇ ನಡೆಯುತ್ತಿದ್ದರೂ ತುಂಬ ತಾಳ್ಮೆಯ ವ್ಯಕ್ತಿತ್ವದ ನಳಿನಿ ಗಂಡನನ್ನು ಕಳೆದುಕೊಂಡರು ಧೃತಿಗೆಡದೆ ಜೀವನ ನಡೆಸುವಾಗ ಅವಳ ಜೀವನಕ್ಕೆ ವಿನಾಯಕನ ಪ್ರವೇಶ–ಅವನ ಮೇಲೆ ಪ್ರೀತಿ ಮೊಳಕೆಯೊಡುವ ಸಂದರ್ಭದಲ್ಲಿ ಆತ ಜೈಲಿಗೆ ಹೋಗುವುದು ಅದಕ್ಕೆ ಕಾರಣಗಳಲ್ಲಿ ಸ್ಪಷ್ಟತೆಯಿಲ್ಲದಿದ್ದರೂ ಆತ ಮನೆ ಬಿಟ್ಟು ಹೋಗಿದ್ದಾಗ ಅಲ್ಲಿ ನೀರಾ ಎಂಬ ಹುಡುಗಿ ಜೊತೆಯಿದ್ದ ವಿಷಯ ಖುದ್ದಾಗಿ ವಿನಾಯಕ ನಳಿನಿ ಜೊತೆ ಮುಚ್ಚಿಟ್ಟಿದ್ದು, ನಂತರ ಅದು ಬೇರೆಯವರ ಮೂಲಕ ಗೊತ್ತಾಗಿ ಅವಳಿಗೆ ಈಗ ಈ ಸಂಬಂಧದ ಬಗ್ಗೆ ರೇಜಿಗೆ ಹುಟ್ಟಿಸುತ್ತದೆ. ಬಹುಶಃ ನಳಿನಿ ವಿನಾಯಕನ ಬಗ್ಗೆ ನಂದಿನಿ ರೀತಿತನ್ನ ನಿರ್ಧಾರವನ್ನು ಸ್ಪಷ್ಟಪಡಿಸದಿದ್ದರೂ ಕೂಡ ಶಾಲಿನಿಯ ಪುಟ್ಟ ಮಗುವಿನ ಕೈ ಹಿಡಿದು ಹೊಸ ಬದುಕಿಗಾಗಿ ಕಾಯುತ್ತಾ ಕುಳಿತುಕೊಳ್ಳುವುದರೊಂದಿಗೆ ಕಾದಂಬರಿ ಅಂತ್ಯವಾಗುತ್ತದೆ.

ಅದೇ ರೀತಿ ನಂದಿನಿಯ ಪಾತ್ರವನ್ನು ಗಮನಿಸಿದಾಗ ಆರಂಭದ ನಂದಿನಿಗೂ ಕೊನೆಯ ನಂದಿನಿಗೂ ತುಂಬಾ ವ್ಯತ್ಯಾಸವನ್ನು ಕಾಣಬಹುದು. ವೆಂಕಟನ ಮೇಲಿನ ಸೆಳೆತ ಆತನ ಬಲಾತ್ಕಾರವು ಅವಳ ದೇಹ ಮತ್ತು ಮನಸ್ಸುಗಳ ಮೇಲೆ ವೆಂಕಟನು ಮಾಡಿದ ನಂಬಿಕೆಯ ಮೇಲಿನ ದ್ರೋಹವನ್ನು ನಂದಿನಿ ಶೋಧಿಸುತ್ತ ಹೋಗುತ್ತಾಳೆ. ಅವಳಿಗೆ ಮೊದಲಿಗೆ ಗೊಂದಲಗಳಿದ್ದರೂ ಕೊನೆಯಲ್ಲಿ ನಾ ಬಯಸಿದ ಬದುಕು ಇದೇನಾ ? ಎಂದು ಆಲೋಚಿಸುತ್ತ ನನ್ನ ಬದುಕು ನನ್ನ ಕೈಯಲ್ಲಿದೆ, ಅದು ವೆಂಕಟನ ಜೊತೆಯ ಬದುಕಿಗಿಂತಲೂ ಸುಂದರವಾಗಿದೆ ಎಂದು ನಿರ್ಧರಿಸಿ ವೆಂಕಟನನ್ನು ವಿರೋಧಿಸುವ ದೃಢ, ಸ್ಪಷ್ಟ, ನಿರ್ಧಾರಕ್ಕೆ ಬರುತ್ತಾಳೆ ನಂದಿನಿ.

– 114ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕ್ರಿಪ್ಟೋ ಕರೆನ್ಸಿ ಬಗ್ಗೆ ಒಂದು ಚರ್ಚೆ

✍ **ಶಿವಕುಮಾರ ಬಿ. ಉಪವಾಸಿ,** ಉಪನ್ಯಾಸಕರು ವಾಣಿಜ್ಯ ವಿಭಾಗ, ಎಸ್ ಕೆ ಎನ್ ಜಿ, ಸರಕಾರಿ ಪ್ರಥಮದರ್ಜೆ ಕಾಲೇಜು, ಗಂಗಾವತಿ.

ಸಾರಲೇಖ

ಕ್ರಿಪ್ಟೊಕರೆನ್ಸಿ ಎಂದ ತಕ್ಷಣ ಹೂಡಿಕೆದಾರರು ಕ್ರಿಪ್ಟೋ ಯುಗವನ್ನೇ ಪ್ರವೇಶಿಸುತ್ತಾರೆ. ಕಳೆದು ಹತ್ತು ವರ್ಷಗಳಲ್ಲಿ ಸಾಕಷ್ಟು ಹಣಗಳಿಸಿದವರು ಹಾಗೂ ಹಣವನ್ನು ಕಳೆದುಕೊಂಡವರು ಇದರ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಇಲ್ಲಿ ಹೂಡಿಕೆಗೆ ಸಾಕಷ್ಟು ಅವಕಾಶಗಳಿದ್ದು, ಇದು ಯಾವುದೇ ದೇಶದ ಹಣಕಾಸು ಅಥವಾ ತೆರಿಗೆ ಕಾನೂನಿನ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿಲ್ಲಾ. ಇದೊಂದು ಪರ್ಯಾಯ ವ್ಯವಸ್ಥೆಯಾಗಿದ್ದು ಯಾರಾದರು ಇದರ ವಹಿವಾಟನ್ನು ಮಾಡಬಹುದಾಗಿದೆ. ಉಗ್ರವಾದ, ಮಾದಕ ವಸ್ತುಗಳ ಬಳಕೆಗೆ, ಸಾಮಾಜಿಕ ಗಲಭೆಗಳಿಗೆ ಕಪ್ಪು ಹಣ ಚಲಾವಣೆ ಇತ್ಯಾದಿಗಳಿಗೆ ಅನುಕೂಲಕರವಾಗಿದ್ದು,ಇದುಜಾಗತಿಕವಾಗಿ ಪ್ರತಿ ರಾಷ್ಟ್ರವನ್ನು ಒಂದಲ್ಲಾ ಒಂದು ರೀತಿ ಹಣಕಾಸು ಇಕ್ಕಟ್ಟಿಗೆ ಕಾರಣವಾಗಿದೆ. ಒಂದು ವರದಿಯ ಪ್ರಕಾರ ಕ್ರಿಪ್ಟೊ ಸ್ವತ್ತುಗಳ ಮೊತ್ತ $ 1.04 ಟ್ರಿಲಿಯನ್ ಆಗಿದ್ದು ಬರುವ ದಿನಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹೆಚ್ಚು ಹೆಚ್ಚು ಹೂಡಿಕೆದಾರರನ್ನು ಹೊಂದುವದಾಗಿ ಸಮೀಕ್ಷೆಗಳಿಂದ ಬಹಿರಂಗಗೊಂಡಿದೆ. ಈ ಲೇಖನದ ಮೂಲ ಉದ್ದೇಶ ಕ್ರಿಪ್ಟೊ ಕರೆನ್ಸಿಯ ಜನನ, ತಂತ್ರಗಾರಿಕೆ, ವಹಿವಾಟು, ಜಾಗತಿಕ ಕಾನೂನು ಹಾಗು ಇತರ ಅಂಶಗಳನ್ನು ಚರ್ಚೆ ಮಾಡುವುದಾಗಿರುತ್ತದೆ.

ಪ್ರಮುಖ ಪದಗಳು : ಕ್ರಿಪ್ಟೊ ಕರೆನ್ಸಿ, ಹೂಡಿಕೆ, ಜಾಗತಿಕ ಕಾನೂನು, ಭಾರತ

ಪೀಠಿಕೆ

ಜನೇವರಿ 2009ರಲ್ಲಿ ಒಬ್ಬ ಕಂಪ್ಯೂಟರ ಪೊಗ್ರಾಮರ್ ಸಠೋಶಿ ನಾಕಾಮೋಟೂ ಎಂಬ ವ್ಯಕ್ತಿ ಇದರ ಕರ್ತೃ ಎಂಬ ಉಲ್ಲೇಖವಿದ್ದು ಆದರೆ ಯಾವುದೇ ಪುರಾವೆಗಳು ಇಲ್ಲಾ ಎಂದು ಹೇಳಲಾಗುತ್ತಿದೆ. ಬಿಟಕಾಯನ್ ಎಂಬ ಕ್ರಿಪ್ಟೊ ಕರೆನ್ಸಿಯು ವಿಶ್ವದ ವಹಿವಾಟಿನಲ್ಲಿ ಮುಂಚೂಣಿಯಲ್ಲಿದ್ದು ಇದನ್ನು ಪಡೆಯಲು ಬಿಟ್‌ಕಾಯಿನ್ ಗಣಿಗಾರಿಕೆ (Bitcoin Mining) ಮುಖಾಂತರ ಉತ್ಪಾದಿಸುಲಾಗುತ್ತದೆ. ಈ ಗಣಿಕಾರಿಕೆಯನ್ನು ಬ್ಲಾಕಚೈನ್ (Block chain) ತಂತ್ರಜ್ಞಾನದಿಂದ ನಡೆಸಿಕೊಂಡು ಹೋಗಲಾಗುತ್ತದೆ. ಒಂದು ಅಂಕಿ ಹಾಗು ಅಕ್ಷರವನ್ನು ಎಂದರೆ ಅಲ್ಫಾನ್ಯೂಮರಿಕ್ (Alphanumeric), ಸತತ ಗಣಿಗಾರಿಕೆಯಿಂದ ಇದನ್ನು ಕಂಡು ಹಿಡಿಯಲಾಗುತ್ತದೆ. ಈ ಒಂದು ಅಂಕಿ ಹಾಗು ಅಕ್ಷರಗಳನ್ನು ಹೊಂದಿರುವುದು ಒಂದು ಹೊಸ ಸಂಖ್ಯೆಯಾಗಿರುತ್ತದೆ ಹಾಗೂ ಇದನ್ನು ಸೃಷ್ಟಿಸಲು ಹಗಲಿರುಳ ಸಾಕಷ್ಟು ಜನ ಕೆಲಸ ಮಾಡುತ್ತಾರೆ. ಒಂದು ಹೊಸ ಬಿಟ್‌ಕಾಯಿನ್ ಮಾರುಕಟ್ಟೆಗೆ ಬರಬೇಕಾದಲ್ಲಿ ಇದನ್ನು ಕೆಲವು ಕಂಪನಿಗಳು ಸತತವಾಗಿ ಗಣಿಗಾರಿಕೆ ಎಂದರೆ ಸಾಕಷ್ಟು ಜನ ಶ್ರಮವಹಿಸಿದ ನಂತರ ಇದು ಚಲಾವಣೆಗೆ ಬರುತ್ತದೆ.

2007 ಮತ್ತು 2008 ರಲ್ಲಿ ಜಾಗತಿಕ ಆರ್ಥಿಕ ಸಂಕಷ್ಟವನ್ನು ನಿಭಾಯಿಸಲು ಒಂದು ಹೊಸ ಕರೆನ್ಸಿಯನ್ನು ಪ್ರಯೋಗ ಮಾಡಿದರು. ಪೇಪರನಲ್ಲಿ ಬರೆದಿದನ್ನು Distributed Ledger technology (D27) ಮೂಲಕ ಒಂದು ಕರೆನ್ಸಿಯಾಗಿ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸಿ ಬ್ಲಾಕಚೈನ್ ಮೂಲಕ ಇದನ್ನು ವಹಿವಾಟಿನಲ್ಲಿ ತರಲಾಯಿತು. ಬಿಟ್‌ಕಾಯಿನ್ ಒಂದು ಪರ್ಯಾಯ ಕರೆನ್ಸಿಯಾಗಿದ್ದು ಚಲಾವಣೆಯಲ್ಲಿರುವ ಡಾಲರ ಅಥವಾ ಪೌಂಡಿಗೆ ಇದು ಸ್ಪರ್ಧಾತ್ಮಕ ಕರೆನ್ಸಿಯಾಗಿ ಹೊರಹೊಮ್ಮಿದ ನಂತರ ಬೇಡಿಕೆಯು ಹೆಚ್ಚಾಯಿತು. ವಿಶ್ವದಾದ್ಯಂತ ಇದನ್ನು ಕಂಡು ತಮ್ಮ ವಹಿವಾಟನ್ನು ನಡೆಸಲು ಮುಂದಾದರು. ಕ್ರಿಪ್ಟೊ ಕರೆನ್ಸಿ ಎಂಬುವುದು ಒಂದು ಕಂಪ್ಯೂಟರಿನಿಂದ ಸೃಷ್ಟಿಸಲಾದ ಸಂಖ್ಯೆ ಆದರೆ ಈ ಒಂದು ಅಂಕಿ ಹಾಗು ಅಕ್ಷರವುಳ್ಳ ಸಂಖ್ಯೆ ಯಾವುದೇ ಆದರೂ ಅದು ಹೊಸದಾಗಿರಬೇಕು. ಬ್ಲಾಕ ಚೈನ್‌ಗಳ ಸಹಾಯದಿಂದ ಇದನ್ನುಗೌಪ್ಯವಾಗಿ ಸಂಗ್ರಹಿಸಿ ಇಡಬಹುದು. ಕೊಂಡವರಿಗೆ ಮಾತ್ರ ಒಂದು ಪಾಸವರ್ಡ ನೀಡಲಾಗುತ್ತದೆ. ಇದಕ್ಕೆ Public Key ಹಾಗೂ Private Key ಎಂಬ ಎರಡು ಅಂಶಗಳಿದ್ದು Public Key ಬಹಿರಂಗ ಪಡಿಸುವದಾಗಿದೆ ಮತ್ತು Private Key ಕೊಳ್ಳುವರಿಗೆ ಮಾತ್ರ ಇದರ ಬಗ್ಗೆ ಮಾಹಿತಿ ಇರುತ್ತದೆ. ಕ್ರಿಪ್ಟೋ ವಿನಿಮಯ ಕೇಂದ್ರಗಳ (Crypto Exchanges) ಸಹಾಯದಿಂದ ಇದರ ಮಾರುಕಟ್ಟೆ ಬೆಲೆ ನಿರ್ಧರಿಸಲಾಗುತ್ತದೆ. ನಾವು ಸ್ಟಾಕ ಎಕ್ಸಚೇಂಜಗಳಾದ NSE, BSE ಯಲ್ಲಿ ಯಾವ ರೀತಿ ವಹಿವಾಟು ನಡೆಸುತ್ತೇವೋ ಅದೇ ರೀತಿ ಇದರ ವಹಿವಾಟು ನಡೆಯುತ್ತದೆ.

ಮಾಹಿತಿ ವಿಶ್ಲೇಷಣೆ

ಕಾಯಿನ್ (Coin) ಎಂದರೆ ನಾಣ್ಯ ಹಾಗೂ ಟೋಕನ್ (token) ಗಳನ್ನು ಒಳಗೊಂಡ ಕ್ರಿಪ್ಟೊ ಕರೆನ್ಸಿಗಳು ನಾಲ್ಕುಸಾವಿರ ಕ್ರಿಪ್ಟೊ ಕರೆನ್ಸಿಗಳಿದ್ದು ಇವುಗಳಲ್ಲಿ ಬಿಟ್‌ಕಾಯಿನ್ ಹಾಗು ಇಥೇರಿಯಮ ಜನಪ್ರಿಯವಾಗಿವೆ.

1. ಬಿಟ್‌ಕಾಯಿನ್ (Bitcoin)
2. ಯು.ಎಸ್.ಡಿ.ಸಿ. (USDC)
3. ಡಿ.ಎ.ಐ. (DAI an investment token)
4. ಗಾಲಾ (GALA, a game token)
5. ಬಿ.ಎ.ವೈ.ಸಿ. (BAYC a non- fungible token)

ಒಂದು ಬಿಟಕಾಯಿನ್ ಉದಾಹರಣೆಗೆ 00002 ejud 60 acj 324 0 sdreozij ಹೀಗೆ ಒಂದು ಹೊಸ ಸಂಖ್ಯೆಯನ್ನು ನಿರ್ಮಿಸಿ ಇದನ್ನು ಒಂದು ಬ್ಲಾಕ್ ಎಂದು ಕರೆಯುತ್ತಾರೆ ಹಾಗೂ ಒಂದು ಗುಂಪಿಗೆ ಇದನ್ನು ಸೇರಿಸಿದಾಗ ಚೈನ್ (chain) ಎಂದು ಹಾಗೂ ಬ್ಲಾಕ್‌ಚೈನ್ ಎಂದು ಸಂಭೋದನೆ ಮಾಡಲಾಗುತ್ತದೆ. ಅದನ್ನು ಚಲಾವಣೆಗೆ ತಂದು ವಿನಿಮಯ ಕೇಂದ್ರಗಳ ಮೂಲಕ ವಹಿವಾಟು ನಡೆಸಲಾಗುತ್ತದೆ.

ಇದನ್ನು ನಿರ್ಮಿಸುವ ತಂತ್ರಜ್ಞಾನ (Computer advanced Programme)

1. GPU (graphics processing unit)
2. FPGA (field programmable gate array)
3. ASIC (application specific integrated circuit)

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿಶ್ವದ ಮೇಲೆ ಇದು ಯಾವ ರೀತಿ ಪರಿಣಾಮ ಬೀರುತ್ತದೆ ?

- ಕಪ್ಪು ಹಣಚಲಾವಣೆ ಕಾನೂನಾತ್ಮಕವಾಗಿ ಇಂದಿಗೂ ಇದಕ್ಕೆ ಸ್ಥಾನಮಾನಗಳಿಲ್ಲಾ.
- ಸರ್ಕಾರಕ್ಕೆ ನಷ್ಟ, ಇದನ್ನು ತೆರಿಗೆ ರಹಿತ ಚಲಾವಣೆ ಮಾಡಬಹುದು.
- ಯಾರದರು ಭಾಗವಹಿಸಬಹುದು – ಯಕೊಚಿತ ವ್ಯಕ್ತಿ ಇದನ್ನು ಕೊಳ್ಳಬಹುದು.
- ವಂಚನೆಗೆ ನಾಂದಿ – ಯಾರದರು ವಂಚನೆ ಮಾಡಬಹುದು, ಕೊಂಡ ಹಣಕ್ಕೆ ಮಾರಾಟ ಮಾಡುವುದು ಕಷ್ಟವಾಗಬಹುದು.

ಜಾಗತಿಕ ಬೆಳವಣಿಗೆಗಳು

1. Security Exchange Comission (SEC) ಇದು ಯುನೈಟೆಡ್ ಸ್ಟೇಟ್ಸನ ಒಂದು ಸರ್ಕಾರಿ ಸಂಸ್ಥೆಯಾಗಿದ್ದು, ಶೇರು ವಿನಿಮಯ ಕೇಂದ್ರಗಳಲ್ಲಿ ವಹಿವಾಟು ಮಾಡಲು ಪರವಾನಿಗೆ ನೀಡುತ್ತದೆ. ಶೇರು ವಿನಿಮಯ ಕೇಂದ್ರಗಳಲ್ಲಿ ವಹಿವಾಟು ನಡೆಸುವ ಸಂಸ್ಥೆಗಳಿಗೆ ಮತ್ತು ಹೂಡಿಕೆದಾರರಿಗೆ ಅನ್ವಯವಾಗುವ ಷರತ್ತುಗಳು ಕ್ರಿಪ್ಟೊ ಕರೆನ್ಸಿ ವಹಿವಾಟುದಾರರಿಗೆ ಅನ್ವಯಿಸುತ್ತವೆ ಎಂದು ಸೂಚಿಸಿದೆ.

2. ಭಾರತ, ಬ್ರೇಜಿಲ್ ಹಾಗೂ ಹಲವಾರ ದೇಶಗಳು ಇದಕ್ಕೆ ಪರ್ಯಾಯವಾಗಿ Central Bank Digital Currency (CBDC) ಕೇಂದ್ರ ಬ್ಯಾಂಕಿನಿಂದ ಹೊಸ ಕರೆನ್ಸಿಯನ್ನು ಆನ್ ಲೈನ್ ವಹಿವಾಟಿಗೆ ಸಿದ್ದಪಡಿಸುವ ನಿಟ್ಟಿನಲ್ಲಿ ಸಕಾರಾತ್ಮವಾಗಿ ತೊಡಗಿದ್ದಾವೆ ಹಾಗೂ ಕೆಲವೊಂದು ಪ್ರಯೋಗಳನ್ನು ಕೂಡಾ ಮಾಡಿದ್ದಾರೆ.

3. ಜರ್ಮನಿ ಬಿಟಕಾಯಿನ್ ಹಾಗೂ ಇದೇ ರೀತಿಯ ಕ್ರಿಪ್ಟೋ ಸ್ವತ್ತುಗಳನ್ನು ತೆರಿಗೆ ರಹಿತ ಮಾಡಿದ್ದಾರೆ. ಆದರೆ ಭಾರತವು ಕ್ರಿಪ್ಟೊಕರೆನ್ಸಿಯ ಪ್ರತಿ ವಹಿವಾಟಿಗೆ (Transaction) 30% ತೆರಿಗೆ ಅನ್ವಯವಾಗುವ ಕಾನೂನು ತಂದಿದೆ.

4. 2022ರಲ್ಲಿ ಸೌತ ಕೋರಿಯಾದಲ್ಲಿ $ 600 ಬಿಲಿಯನಷ್ಟು ಒಂದು ಕಂಪನಿ ಹೂಡಿಕೆದಾರರಿಗೆ ವಂಚನೆ ಮಾಡಿದೆ.

5. Peoples Bank of China ಇದು ಚೈನಾದ ಕೇಂದ್ರ ಬ್ಯಾಂಕಾಗಿದ್ದು ಕ್ರಿಪ್ಟೊ ಕರೆನ್ಸಿಯ ವಹಿವಾಟನ್ನು 2021 ರಿಂದ ಇದರ ಮೇಲೆ ನಿರ್ಭಂದ ಹೇರಿದೆ.

ಓ.ಇ.ಸಿ.ಡಿ : ಕ್ರಿಪ್ಟೋ ಆಸ್ತಿ ವರದಿ ಮಾಡುವ ಚೌಕಟ್ಟು (OECD-CRYPTO ASSET REPORTING FRAMEWORK)

ಕ್ರಿಪ್ಟೊ ಆಸ್ತಿಗಳನ್ನು ವಾಸ್ತವ ಆಸ್ತಿ (virtual asset) ಎಂದು ಪರಿಗಣಿಸಿದ್ದು ಈ ಒಂದು ಕರೆನ್ಸಿಯನ್ನು ಅದರದೇ ಯಾದ ಕರೆನ್ಸಿಯಲ್ಲಿ ವಹಿವಾಟು ನಡೆಸುವ ಅನಿವಾರ್ಯತೆ ಎದುರಾಗಿದೆ ಎಂದು ಘೋಷಣೆ ಮಾಡಿದೆ. Common Reporting Standards (CRS) ನ್ನು ಅಳವಡಿಸಿಕೊಂಡರೆ ಇದರಲ್ಲಿ ಪಾರದರ್ಶಕತೆ ತರುವ ಸಾಧ್ಯತೆಗಳಿವೆ ಎಂದು ಅಭಿಪ್ರಾಯಪಟ್ಟಿರುತ್ತದೆ.

ಅಂತರಾಷ್ಟ್ರೀಯ ಹಣಕಾಸು ನಿಧಿ (IMF - International Monetery Fund)

ಗುಣಮಟ್ಟವನ್ನು ಸ್ಥಾಪಿಸಿದ ಸಂಸ್ಥೆಗಳಾದ ಈ FSB, BCBS,CPMI-IOSCO ಮತ್ತು ಈ AT ಈ ವಿಶ್ವದಾದ್ಯಂತ ಹೂಡಿಕೆದಾರರ ಸಂಪತನ್ನು ಕ್ರಿಪ್ಟೊ ಕರೆನ್ಸಿಯಲ್ಲಿ ತೊಡಗಿಸಿರುವ ಹಿನ್ನಲೆಯಲ್ಲಿ ಹೊಸ ನಿಯಮಗಳನ್ನು ಮತ್ತೆ ಭದ್ರತೆ ವಹಿಸುವ ಕೆಲಸವನ್ನು ಮಾಡುತ್ತಿವೆ. Emerging Markets and Developing Economics (EMDE), ಭಾರತ ಮತ್ತು ಚೈನಾದಂತ ದೇಶಗಳಲ್ಲಿ ಹೆಚ್ಚು ಹೂಡಿಕೆದಾರರನ್ನು ನಾವು ನಿರೀಕ್ಷಿಸಬಹುದು ಎಂದು ಅಭಿಪ್ರಾಯ ಪಟ್ಟಿರುತ್ತದೆ. ಈ ಒಂದು ವ್ಯವಸ್ಥೆಗೆ ಬಹಳಷ್ಟು ಜನ ಆಕರ್ಷಿತರಾಗಲು ಕಾರಣಅದರ ವಿನ್ಯಾಸ, ತಂತ್ರಜ್ಞಾನ ಹಾಗು ವಹಿವಾಟಿಗೆ ಅನುಸರಿಸುವ ಬಗೆಯಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಆನ್‌ಲೈನ್ ಪಾವತಿಯಿಂದ ಅಪಾಯಕಾರಿ ಅಂಶಗಳು ಹೆಚ್ಚಾಗಿವೆ ಎಂದು ಸೂಚಿಸಿದೆ.

ಭಾರತದಲ್ಲಿ ಇತ್ತೀಚಿನ ಬೆಳವಣಿಗೆಗಳು (Recent Developments in India)

ಜಿ–20 ಶೃಂಗ ಸಭೆಯಲ್ಲಿ ಕ್ರಿಪ್ಟೊ ಕರೆನ್ಸಿಯ ಕಾನೂನು ಜಾರಿ ಮಾಡಲು ಸಾಕಷ್ಟು ಬೆಳವಣಿಗೆಗಳು ನಡೆದಿವೆ. OECO ತಯಾರಿಸಿದ CARF ನ್ನು ಬುನಾದಿಯಾಗಿ ಇಟ್ಟುಕೊಂಡು ಕ್ರಿಪ್ಟೊ ಕಾನೂನು ವ್ಯವಸ್ಥೆ ಜಾರಿಗೆ ತರಬೇಕಾಗಿದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ. IMF-FSB Synthesis paper ದಿಕ್ಸೂಚಿಯಾಗುವುದರ ಬಗ್ಗೆ ಸಕಾರಾತ್ಮವಾಗಿ ಸ್ಪಂದನೆ ದೊರೆತಿರುತ್ತದೆ ಎಂಬ ವರದಿಗಳು ಪ್ರಕಟವಾಗಿವೆ. CBDC ಯನ್ನು ಭಾರತೀಯ ರಿಜರ್ವ ಬ್ಯಾಂಕ ಪರಿಚಯಿಸುವ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಶೀಲವಾಗಿದ್ದು ಇವುಗಳ ಪ್ರಯೋಗಗಳು ಪ್ರಾರಂಭವಾಗಿದ್ದಾವೆ. CBDC ಯನ್ನು ಕ್ರಿಪ್ಟೊ ಕರೆನ್ಸಿಗೆ ಪರ್ಯಾಯ ಮತ್ತು ಸ್ಪರ್ಧಾತ್ಮಕ ಉದ್ದೇಶದಿಂದ ರೂಪಗೊಳಿಸಲಾಗಿದೆ. ತೆರಿಗೆ ಪ್ರಾಧಿಕಾರ, ಹಣಕಾಸು ಬುದ್ದಿವಂತಿಕೆ, ಕಸ್ಟಂ ಪ್ರಾಧಿಕಾರ ಮತ್ತು ಬ್ರಷ್ಟಾಚಾರಿ ವಿರೋಧಿ ಸಂಸ್ಥೆಗಳು ಸೇರಿ ಕೆಲಸ ಮಾಡಬೇಕೆಂದು ನಿರ್ಧರಿಸಲಾಗಿದೆ. ಕೇವಲ 30% ತೆರಿಗೆ ವಿಧಿಸಿರುವ ಒಂದು ಕಾನೂನಿಂದ ಹೂಡಿಕೆದಾರರ ರಕ್ಷಣೆ ಸಾಧ್ಯವಿಲ್ಲ ಹಾಗೂ CBDC ಯ ಪ್ರಯೋಗದಿಂದ ತಕ್ಕ ಮಟ್ಟಿಗೆ ಪ್ರಯೋಜನವಾಗ ಲಾರದು ಎಂಬ ಅಭಿಪ್ರಾಯಗಳು ಸಂಗ್ರಹಿಸಲಾಗಿದೆ. ಜಾಗತೀಕಮಟ್ಟದ ಕಾನೂನುಗಳಿಂದ ಭಾರತದ ಹಾಗೂ ಬೇರೆ ದೇಶದ ಹೂಡಿಕೆದಾರರನ್ನು ರಕ್ಷಣೆ ಮಾಡಬಹುದೆಂದು ಅಭಿಪ್ರಾಯ ಸಂಗ್ರಹಿಸಲಾಗಿದೆ.

ಶೋಧನೆಗಳು

1) ಕ್ರಿಪ್ಟೊ ಕರೆನ್ಸಿಗಳು ಜಾಗತೀಕವಾಗಿ ಪರ್ಯಾಯ ವ್ಯವಸ್ಥೆ ಸೃಷ್ಟಿಸಿದ್ದು ಬರುವ ದಿನಗಳಲ್ಲಿ ಹಣಕಾಸು ವ್ಯವಸ್ಥೆಗಳ ಸಂರಕ್ಷಣೆ ಮಾಡುವುದು ದೊಡ್ಡ ಸವಾಲಾಗಿದೆ.

2) ಉಗ್ರವಾದ ಹಾಗೂ ಗಲಭೆಗಳ ಹಿನ್ನಲೆ ಕ್ರಿಪ್ಟೊ ಕರೆನ್ಸಿಯಾಗಿದೆ ಎಂದು ಹಾಗೂ ಹಣಕಾಸನ್ನು ಸರಳವಾಗಿ ಈ ರೀತಿ ಕೆಲಸಗಳಿಗೆ ಬಳಸುವ ಸಾಧ್ಯತೆಗಳು ಹೆಚ್ಚುತ್ತವೆಎಂದು ಅಭಿಪ್ರಾಯಗಳು ವ್ಯಕ್ತವಾಗಿವೆ.

3) ಜಾಗತೀಕವಾಗಿ ಹೂಡಿಕೆದಾರರು ಆರ್ಥಿಕವಾಗಿ ತೊಡಗಿಸಿರುವ ಸಂಪತ್ತು IMF ಪ್ರಕಾರ ನವೆಂಬರ್ 2021 ಕ್ಕೆ $ 3.04 ಟ್ರಿಲಿಯನ್ ಆಗಿದೆ ಎಂದು ತನ್ನ ವರದಿಯಲ್ಲಿ ಬಹಿರಂಗಪಡಿಸಿದೆ.

4) CBDC ಕೇಂದ್ರ ಡಿಜಿಟಲ್ ಕರೆನ್ಸಿಯನ್ನು ಬಹಳಷ್ಟು ದೇಶಗಳು ಪರಿಚಯಿಸುತ್ತವೆ. ಆದರೆ ಕೇವಲ ಹಣ ಪಾವತಿಸಲು ಇವುಗಳ ಬಳಕೆಯಾಗಬಹುದು ಹೊರತು ಹೂಡಿಕೆಗಲ್ಲ ಎಂಬ ಅಭಿಪ್ರಾಯಗಳು ಹೊರ ಹೊಮ್ಮಿವೆ.

5) ಜಾಗತೀಕ ಕಾನೂನು ಜಾರಿಯಾಗುವ ಅನಿವಾರ್ಯತೆ ಇರುವ ಹಿನ್ನಲೆಯಲ್ಲಿ ಹೂಡಿಕೆದಾರರು ಹಾಗೂ ಕಾರ್ಯ ನಿರ್ವಹಿಸುತ್ತಿರುವ ಜನರ ಸಂರಕ್ಷಣೆಯು ಒಂದು ಬೃಹತ್ ಸವಾಲಾಗಿದೆ.

– 79ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಆಚಾರ ವಿಚಾರಗಳ ಸಂಸ್ಕೃತಿಯ ಮುಖಾಮುಖಿ

✍ ಡಾ. ಸುವರ್ಣಮ್ಮ ಡಿ., ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀಮತಿ ಅಲ್ಲಂ ಸುಮಂಗಳಮ್ಮ ಸ್ಮಾರಕ ಮಹಿಳಾ ಮಹಾವಿದ್ಯಾಲಯ, ಬಳ್ಳಾರಿ.

ಈ ಪ್ರಪಂಚದಲ್ಲಿ ಮಾನವ ಜನಾಂಗವು ಸೃಷ್ಟಿಯಾದಗಲೇ ಸಂಸ್ಕೃತಿಯು ಸೃಷ್ಟಿಯಾಯಿತು. ಜನಪದವೆಂಬುದು ಒಂದು ಸಾಂಸ್ಕೃತಿಕ ವಿಚಾರವಾಗಿದ್ದು, ಅದರಲ್ಲಿ ಭೌತಿಕ ಮತ್ತು ಅಭೌತಿಕ ಆಲೋಚನೆಗಳ ಜೊತೆಗೆ ಜೀವನದ ಎಲ್ಲಾ ವೈಲಕ್ಷಣಗಳನ್ನು ಒಳಗೊಂಡಿರುತ್ತವೆ. ಕಲೆ, ಸಂಗೀತ, ಶಿಲ್ಪ, ನಂಬಿಕೆ, ಸಂಪ್ರದಾಯ, ಆಚರಣೆ, ಉಡುಗೆ, ತೊಡುಗೆ, ಆಹಾರ, ಊಟ ಇವೆಲ್ಲವನ್ನು ಒಳಗೊಂಡಿರುತ್ತವೆ. ಸಂಸ್ಕೃತಿ ಎಂದರೆ ಒಂದು ನಾಡಿನ ಅಥವಾ ಒಂದು ಜನಾಂಗದ ಜೀವನದ ಶೈಲಿಯಾಗಿದೆ. ಅದು ಸಮಸ್ತ ಬದುಕಿನ ವಿಧಾನವನ್ನು ಒಳಗೊಂಡಿರುತ್ತದೆ. ಕರುನಾಡು ವಿಭಿನ್ನ ಸಂಸ್ಕೃತಿಯ ಆಯಾಮಗಳನ್ನು ಒಳಗೊಂಡಿದೆ. ಮಹಾನವಮಿ ಮತ್ತು ದೀಪಾವಳಿಗಳು ನಮ್ಮಲ್ಲಿ ಬಹಳ ದೊಡ್ಡ ಹಬ್ಬಗಳು. "ನಿನಗೆ ಮಾನಾಮಿಯಂ ದೀವಳಿಗೆಯಂ ಮಾಡನೆ" ಎಂಬ ಲೋಕೋಕ್ತಿಯು ಪಂಪನ ಭಾರತದಲ್ಲಿ ಬಂದಿದೆ. ಇವು ಸಾವಿರಾರು ವರ್ಷಗಳಿಂದಲೂ ನಡೆದು ಬಂದ ನಮ್ಮ ನಾಡಿನ ಹಬ್ಬಗಳು ಸುಮಾರಾಗಿ ಇವೆರಡೂ ಒಂದೇ ಹಬ್ಬ. ಒಂದಕ್ಕೊಂದು ಹೊಂದಿಕೊಂಡ ಹಬ್ಬ. ದೀಪಾವಳಿಗೆ ಜಾನಪದ ಪರಿಭಾಷೆಯಲ್ಲಿ ಹಟ್ಟಿಯ ಹಬ್ಬವೆಂದು ಹೆಸರು. ಹಟ್ಟಿಯೆಂದರೆ ದನಕರಗಳ ಬೀಡು; ಹಟ್ಟಿಕಾರರೆಂದರೆ ಜೀವಧನಗಳನ್ನು ಸಾಕಿ ಬದುಕುವನು. ಆದುದರಿಂದ ಹಟ್ಟಿಯ ಹಬ್ಬವೆಂದರೆ ಹಟ್ಟಿಕಾರರ ಹಬ್ಬ. ದನಕರುಗಳ ಹಬ್ಬ. ಈ ಬಗೆಯ ಹಟ್ಟಿಯ ಹಬ್ಬದಲ್ಲಿ ಗೋಪೂಜೆಯಷ್ಟೇ ಅಲ್ಲ; ಕುರಿಗಳ ಪೂಜೆಯೂ ನಡೆಯುವುದು. ರೈತರು ಎತ್ತುಗಳನ್ನು ಸಿಂಗರಿಸಿ ಊರಲ್ಲಿ ಮೆರೆಯಿಸುವುದುಂಟು. ಈ ಹಬ್ಬದಲ್ಲಿ ದನಕರಗಳ ಪೂಜೆ ನಡೆಯುವ ಮನೆಯೇ ದೊರೆಯುವುದಿಲ್ಲ. ಇದು ಮೊಟ್ಟ ಮೊದಲಿಗೆ ದನಗಾರರ ಹಬ್ಬ. ದನವು ದನಗಾರರಿಂದ–ಮೇಟಿ–ಒಕ್ಕಲರ–ಕೈಯಿಂದ ಜಾರಿ ವರ್ತಕರಲ್ಲಿ ಸೇರುತ್ತಲೇ ಹಟ್ಟಿ ಹಬ್ಬವು ದೀವಳಿಗೆಯಾಯಿತು. ಅದಕ್ಕೆ ಈಗಿನ ಸ್ವರೂಪವೇ ಪ್ರಾಪ್ತವಾಯಿತು. ಖಾಸಗೀಕರಣ, ಜಾಗತೀಕರಣದ ಪ್ರಭಾವಕ್ಕೆ ಸಿಲುಕಿ ಅವುಗಳ ಸ್ವರೂಪವೇ ಬದಲಾವಣೆಯಾಗಿರುವುದನ್ನು ಕಾಣುತ್ತೇವೆ. ನಾಡ ಹಬ್ಬಗಳ ಮೂಲ ಮತ್ತು ಅವುಗಳ ಬದಲಾವಣೆಯನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ. ಒಟ್ಟು ಸಂಸ್ಕೃತಿಯೇ ನಮ್ಮ ಕಣ್ಣು ಮುಂದೆ ಬಂದು ನಿಲ್ಲುವಂತೆ ಅವುಗಳ ಮೂಲವನ್ನು ಶೋಧಿಸಲಾಗಿದೆ. ಪ್ರಾಚೀನ ಸಾಹಿತ್ಯದ ಪಂಪನಿಂದ ಮೊದಲುಗೊಂಡು ಉಲ್ಲೇಖವಾದ ಹಬ್ಬಗಳ ಕುರಿತಾಗಿ ಇಂದಿನವರೆಗಿನ ಹಬ್ಬಗಳನ್ನು ಪರಿಚಯಿಸುವ ಅಂದರೆ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಹಬ್ಬಗಳ ಹಲವಾರು ಮಜಲುಗಳನ್ನು ತಿಳಿಸಲಾಗಿದೆ.

"ನಮ್ಮ ಅನೇಕ ಆಚರಣೆಯ ಹಿಂದೆ ಸಂಸ್ಕೃತಿಯು ಉಳಿಸಿಕೊಂಡಿರುವ ಹಲವಾರು ಅವಶೇಷಗಳಿವೆ. ಮದುವೆಯ ದಿನ ಕರಿ ಉಣ್ಣಿಯ ದಾರವನ್ನು ಕಂಕಣವನ್ನಾಗಿ ಕಟ್ಟಿಕೊಳ್ಳುವುದು; ಹುಡುಗಿ ಮೈನೆರೆದಾಗ ಹಸಿರುಗುಡ್ಲು ಹಾಕುವುದು; ಈ ಬಗೆಯ ನೆಲೆಗಳುಂಟು. ಇವುಗಳೊಡನೆ ಶ್ರುತಿ–ಸ್ಮೃತಿಗಳಲ್ಲಿ ಉಕ್ತವಾದ ಆಚರಣಾ ಮೂಲದ ನೆಲೆಗಳನ್ನು ತಾಳೆಯಾಗಿ ನೋಡುವುದಕ್ಕೆ ಸಾಧ್ಯತೆಗಳಿವೆ." ಮದುವೆ ಸಂದರ್ಭದಲ್ಲಿ ಒಳ್ಳುಕಲ್ಲು ಪೂಜೆ ಮಾಡುವುದು, ಹಾಲುಗಂಬ ತರುವುದು, ಹಸೆ ಬರೆಯುವುದು, ಸುರುಗಿ ಸುತ್ತುವುದು, ಕರಿಕಂಬಳಿಯ ಮೇಲೆ ವಧು–ವರರನ್ನು ಕೂಡಿಸುವುದು ಹೀಗೆ ಮುಂತಾದ ಸಂದರ್ಭಗಳಲ್ಲಿ ಹಿರಿಯರು ಹಾಡುಗಳನ್ನು ಹೇಳುವುದರ ಮೂಲಕ ಮನರಂಜನೆಯನ್ನು ಮಾಡುತ್ತಿದ್ದರು. ಬಳ್ಳಾರಿ ಭಾಗದಲ್ಲಿ ಮದುವೆಯ ಸಂದರ್ಭದಲ್ಲಿ ಮೂಹರ್ತಕ್ಕಿಂತ 15 ದಿನ ಮುಂಚೆ 'ಇರ್ಲ' ಎಂಬ ಆಚರಣೆಯನ್ನು ಮಾಡುವ ಪದ್ಧತಿ ಇದೆ. ಎರಡು ಕುರಿಗಳನ್ನು ಮನೆಯ ದೇವರಿಗೆ ಬಲಿ ಕೊಟ್ಟು, ನಂತರ ದೇವರಿಗೆ ಎಡೆ ಹಾಕಿ ಎಲ್ಲಾರು ಊಟ ಮಾಡುವುದು. ನಂತರ ಮದುವೆಗೆ ಸಂಬಂಧಪಟ್ಟ ಎಲ್ಲಾ ಕಾರ್ಯಗಳನ್ನು ಆರಂಭಿಸುವುದು. ಈ ಪದ್ಧತಿ ತಳಸಮುದಾಯದಲ್ಲಿ ಇಂದಿಗೂ ಇದೆ. ಆದರೆ ಶಿಕ್ಷಣ ಕಲಿತ ಯುವ ಪೀಳಿಗೆಯು ಈ ಪದ್ಧತಿಯನ್ನು ನಿರಾಕರಿಸಿ, ಮನೆ ದೇವರಿಗೆ ಸಿಹಿ ಅಡುಗೆ ಮಾಡಿ ಎಡೆ ಹಾಕಿ, ನಂತರ ಊಟ ಮಾಡುವ ಆಚರಣೆಯನ್ನು ಜಾರಿಗೆ ತಂದರು. ಆಧುನಿಕತೆಯ ಜೀವನ ಶೈಲಿ ಬೆಳೆದಂತೆಲ್ಲಾ ಪ್ರಾಚೀನ ಕಾಲದ ಆಚಾರ–ವಿಚಾರಗಳು ಮತ್ತು ಆಧುನಿಕ ಆಚಾರ–ವಿಚಾರಗಳು ಮುಖಾಮುಖಿಯಾಗಿರುವುದನ್ನು ನಾವು ಕಾಣಲು ಸಾಧ್ಯವಿದೆ. ಆಚಾರ–ವಿಚಾರಗಳು ಜನತೆಯ ಸರ್ವತೋಮುಖ ಅಭಿವ್ಯಕ್ತಿಯಾಗಿದ್ದರಿಂದ ಇದು ಜೀವನದ ಅನೇಕ ಅಂಶಗಳನ್ನು ನೇಯ್ದ ಸೀರೆಯಂತೆ ಹಾಸುಹೊಕ್ಕಾಗಿ ಸೇರುತ್ತವೆ ಎಂಬುವುದನ್ನು ನಾವು ಗಮನಿಸಬೇಕು. ದೇವರನ್ನು ಕುರಿತ ಭಕ್ತಿ, ಊರಿನ ಬಗ್ಗೆ ಇರುವ ಪ್ರೇಮ, ಮನೆಯ ಬಗ್ಗೆ ಕಾಳಜಿ, ತಾಯಿಯ ಸಂತೋಷ, ತವರಿನ ಹಂಬಲ, ಬಡತನದ ಒಡಲುರಿ, ಸಿರಿತನದ ಸಿಂಗಾರ, ಹೀಗೆ ಸಾವಿರಾರು ಬಗೆಯ ವಿಸ್ತಾರ ಲೋಕದ ಬಹುಸಂಸ್ಕೃತಿಯನ್ನು ಒಳಗೊಂಡ ನಾಡು ಇದಾಗಿದೆ.

"ಸೂರ್ಯ, ಚಂದ್ರ, ನಕ್ಷತ್ರ, ಹೂವು, ಮರ, ಗಿಡ, ಬಳ್ಳಿ, ಅಬ್ಬಿ, ಬೃಹದ್ಬಂಡೆ ಇವೆಲ್ಲ ಅವರ ಆರಾಧನೆಯ ವಸ್ತುಗಳೇ. ಇವು ಲೋಕದ ಇಂದ್ರಿಯ ಗಮ್ಯ ವಸ್ತುಗಳು; ಆದರೆ ಅವರ ಕಾವ್ಯದಲ್ಲಿ ಇಂದ್ರಿಯಾತೀತ ನೆಲೆಗೆ ಅವು ತಲುಪುತ್ತವೆ. ಒಂದು ವಿಶಿಷ್ಟ ದೈವೀ ಅನುಭವವಾಗಿ ಅವು ಪರಿವರ್ತಿತಗೊಳ್ಳುತ್ತವೆ. ಈ ದೈವೀ ಅನುಭವವು ಮಾನವ ಮತ್ತು ನಿಸರ್ಗದ ಜತೆಗಿನ ಸಾಂಸ್ಕೃತಿಕ ಒಡನಾಟವನ್ನು ರೂಪಿಸುತ್ತವೆ." ಎಂದು ಕಾಳೇಗೌಡ ನಾಗವಾರ ರವರ ಹೇಳಿಕೆ ಸಮಂಜಸವಾಗಿದೆ. ಪ್ರಾಚೀನ ಕಾಲದಿಂದಲೂ ನಿಸರ್ಗದ ಪ್ರತೀಮೆಗಳನ್ನು ಆರಾಧಿಸುವ ರೂಢಿಯಿದೆ. ನಿಸರ್ಗದೊಡನೆ ಮಾನವನ ಒಡನಾಟ ಅತ್ಯಂತ ಪ್ರಮುಖವಾಗಿದೆ. ಸೂರ್ಯ, ಚಂದ್ರ, ಮರ, ಗಿಡ, ಬಳ್ಳಿ ಇವು ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿವೆ. ಮತ್ತು ನಮ್ಮ ಸಂಸ್ಕೃತಿಯನ್ನು ಪ್ರತಿಪಾದಿಸುತ್ತವೆ. ನಾಡಿನ ಸಂಸ್ಕೃತಿಯ ಪರಂಪರೆಯನ್ನು ಕನ್ನಡ ಕವಿಗಳು ತಮ್ಮ ಕವಿತೆಗಳ ಮೂಲಕ ಹೇಗೆ ಉಳಿಸಿಕೊಂಡು ಬಂದಿದ್ದಾರೆ ಎಂಬುವದು ಪ್ರಮುಖವಾಗಿದೆ. ಪ್ರತಿ ವರ್ಷವೂ ಕೆಲವು ಮಾಸಗಳಲ್ಲಿ ಮಹಿಳೆಯರು ಒಟ್ಟಾಗಿ ಸೇರಿ ಪೂಜೆ ಮಾಡಿ ಹಾಡುವ ವಿಶಿಷ್ಟ ಸಂಪ್ರದಾಯಗಳು ಕರ್ನಾಟಕದ ಅನೇಕ ಕಡೆಗಳಲ್ಲಿ ರೂಢಿಯಲ್ಲಿವೆ. ಇವುಗಳಲ್ಲಿ ಕೊಂತಿ ಪೂಜೆ, ಶೀಗೀಗೌರಿ ಪೂಜೆ, ಬಸವನ ಪೂಜೆ, ಗುಳ್ಳವ್ವನ ಪೂಜೆ, ಜೋಕುಮಾರನ ಪೂಜೆ ಮುಂತಾದವು ತುಂಬಾ ಪ್ರಸಿದ್ಧವಾದವುಗಳಾಗಿವೆ. ತಾವು ನಂಬುವಂತಹ ದೇವತೆಗಳು ತಮ್ಮ ಬದುಕಿನ ಎಲ್ಲಾ ಗಳಿಗೆಗಳಲ್ಲೂ ಕರುಣೆಯಿಂದ ನಡೆದುಕೊಂಡು ತಮಗೆ ಒಳ್ಳೆಯದನ್ನು ಉಂಟು ಮಾಡಲಿ ಎನ್ನುವ ನಮ್ಮ ನಾಡಿನ ಜನಪದರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮನೋಭಾವನೆಗಳು, ಚಿಂತನೆಗಳು, ಆಲೋಚನೆಗಳು ಈ ಮೇಲಿನ ಎಲ್ಲಾ ಸಂಪ್ರದಾಯಗಳಲ್ಲಿ ಅಡಗಿವೆ ಎಂಬುದನ್ನು ನಾವು ಪ್ರಸ್ತುತ ನೆಲೆಗಟ್ಟಿನಲ್ಲಿ ಯೋಚಿಸಬೇಕಾದ ಸಂಗತಿಯಾಗಿದೆ. ಈ ಚಿಂತನೆಗಳಿಗೆ ನಮ್ಮ ಹೊಸಗನ್ನಡ ಕವಿಗಳು ಸಹ ಹೊರತಾಗಿಲ್ಲ. ಕುವೆಂಪು ಅವರ 'ಸುಗ್ಗಿ ಬರುತಿದೆ' ಎಂಬ ಕವನದಲ್ಲಿ ಸುಗ್ಗಿಯ ವೈಭವವನ್ನು ವ್ಯಕ್ತಪಡಿಸಲಾಗಿದೆ.

"ಬನದ ಬಿನದದಿನೆದು ನಿನದ ಮನದೊಳಾಡುತಿರುವುದು !
ಬಂಡನುಂಡ ದುಂಬಿವಿಂಡು ಹಾಡುತಿಹವು ಹಾರತ,
ಮತ್ತ ಮಧುಮಾಸವಿದು ಬನ್ನಿರೆಂದು ಸಾರುತ
ಜಾರುತಿಹುದು ಮಾಗಿ ಚಳಿ,
ಕುಸುಮಿಸಿರುವ ಲತೆಗಳಲಿ
ಮೊರೆಯುತಿಹದು ಸೊಕ್ಕಿದಳಿ
ಮುಕ್ತ ಜೀವರಂದದಿ!
ಉಲಿಯೆ ಪಿಕ, ಗಳವೆ ಶುಕ, ಸುಗ್ಗಿ ಬಂದಿ ತಂದದಿ !

"ನಿಸರ್ಗ ವ್ಯಾಪಾರವನ್ನು ಬದಲಿಸುತ್ತಾ ಬರುತ್ತಿರುವ ಸುಗ್ಗಿಯ ವೈಭವವನ್ನು ಕಂಡು ಕವಿ ಇಲ್ಲಿ ಸಂಭ್ರಮಿಸಿದ್ದಾನೆ. ಈ ಸಂಭ್ರಮದಲ್ಲಿ ಅತ್ಯುಕ್ತಿ, ಭಾವಾತಿರೇಕಗಳವೆ. ನೋವು, ದುಃಖ, ಜಾಡ್ಯ, ಜಟಿಲಗಳಿಗೆ ಇಲ್ಲಿ ಆಸ್ಪದವೇ ಇಲ್ಲ. ಇದು ಸರಳವಾದ ಸುಂದರವಾದ ಆದರೆ ಅವಾಸ್ತವವೆನ್ನಲಾಗದ ಪ್ರಪಂಚ. ಸ್ಪಷ್ಟವಾದ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಾ ಬರುವ ಸುಗ್ಗಿಯಿಂದಾಗಿ ಭೂಮಿ ಹಿಗ್ಗುತ್ತದೆ. ಮತ್ತು ಅದು ಸ್ವರ್ಗದ ಸುಖವನ್ನು ತರುತ್ತದೆ. ಎಲ್ಲವನ್ನು ಆವರಿಸಿಕೊಳ್ಳುವ ಸುಗ್ಗಿಯ ವಿಭಿನ್ನ ಸ್ವಭಾವ, ಕಣಿವೆ, ತರು, ಬನ ಎಲ್ಲದರಲ್ಲೂ ಅದರದರ ಭಾವಕ್ಕೆ ತಕ್ಕಂತೆ ಹರಡಿಕೊಳ್ಳುತ್ತದೆ." ಎಂಬ ಪ್ರೊ. ಮಲ್ಲೇಪುರಂರವರು ಹೇಳಿಕೆ ಉಪಯುಕ್ತವಾದದ್ದು. ಕಾರಣ ನಮ್ಮ ಜನಪದರು ಪ್ರತಿ ವರ್ಷ ಜನವರಿ ತಿಂಗಳಲ್ಲಿ 'ಚರಗ' ಎಂಬ ಹಬ್ಬವನ್ನು ಆಚರಿಸುವ ವಾಡಿಕೆಯಿದೆ. ಸಜ್ಜೆ ಹಿಟ್ಟು ಮತ್ತು ಬೆಲ್ಲದಿಂದ ಸಿಹಿಯನ್ನು ಮಾಡಿ, ಹೊಲಕ್ಕೆ ಹೋಗಿ ಐದು ಕಲ್ಲುಗಳನ್ನು ತೆಗೆದುಕೊಂಡು ಅವುಗಳನ್ನು ಸುಚಿಗೊಳಿಸಿ ಪಾಂಡವರೆಂದು ಭಾವಿಸಿಕೊಂಡು ವಿಭೂತಿ, ಕುಂಕುಮ ಅರಿಸಿ, ಹೂಗಳಿಂದ ಅಲಂಕಾರಗೊಳಿಸಿ ಪೂಜೆಯನ್ನು ಮಾಡಿ ನಂತರ ಊಟವನ್ನು ಮಾಡುವ ಪದ್ಧತಿಯಿದೆ. ರೈತನ ಸಂಭ್ರಮದ ಕ್ಷಣಗಳನ್ನು ಕುರಿತು ಇಲ್ಲಿ ವಿಶ್ಲೇಷಿಸಿದ್ದಾರೆ. ರೈತನು ತಾನು ಕಷ್ಟಪಟ್ಟು ಬೆಳೆದ ಬೆಳೆಯನ್ನು ರಾಶಿ ಮಾಡುವ ಸಂದರ್ಭದಲ್ಲಿ ಪೂಜೆ ಮಾಡುವ ಪದ್ಧತಿ ಅನಾದಿ ಕಾಲದಿಂದಲೂ ಬೆಳೆದುಕೊಂಡು ಬಂದಿದೆ. ನಿಸರ್ಗದೊಡನೆ ಮಾನವನ ಸಂಬಂಧ ಅಷ್ಟು ಗಟ್ಟಿಯಾದದ್ದು. ರಾಶಿಗೆ ರೈತನು ಸಲ್ಲಿಸುವ ಪೂಜಾ ವಿಧಾನಗಳು ಅವನ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತವೆ, ತಾನು ಬೆಳೆದುದರಲ್ಲಿಯೇ ಇತರರಿಗೆ ದಾನ ಮಾಡುವುದು. ಇದು ಅತಿದೊಡ್ಡ ಮೌಲ್ಯವಾಗಿದೆ. ರೈತನ ಕೃಷಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಇಲ್ಲಿ ವ್ಯಕ್ತವಾಗಿರುವುದು ಗಮನಾರ್ಹ ವಾಗಿದೆ. ಇದೇ ರೀತಿ ಮೇರುಕವಿಯಾದ ಪು.ತಿ.ನ, ಅವರ 'ರಂಗವಲ್ಲಿ' ಎಂಬ ಕಥನ ಕಾವ್ಯದಲ್ಲಿ ರೈತನ ಜೀವನದ ಒಂದು ಭಾಗವಾದ ಕೃಷಿಯ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ.

"ಮಾಗಿ ಬಂದು, ಗಿರಿಗೆ ಹಗಲು
ಹಿತದ ಬಿಸಿಲ ಹೊದಿಸಿದಂದು
ಹಸುಳೆಗೂಡಿ ಬೆಟ್ಟತುದಿಯ
ಗುಡಿಗೆ ನಡೆದೆನು
ಬಾಲ ಕೊಳಕು ಕಲ್ಲನೆಸೆದು
ಸುಳಿಯ ರಚಿಸಿ, ನಲಿವ ತೆರದಿ,
ಹಗಲ ಮೌನಕೆಸೆಯುತ್ತಿತ್ತು
ಹಕ್ಕಿ ಹಾಡನು.
ಗಿರಿಯ ತುದಿಯ ಗುಡಿಯಸೇರಿ
ಹಸುಳೆಗೂಡಿ ನಿಂತೆನಂದು
ಮಂದಿಯೊಬ್ಬರಿಲ್ಲವಲ್ಲ
ಮೌನವಾಳಿತು."

"ಆ ಗುಡಿಯಲ್ಲಿ ದೈವ ಕೇವಲ ಬೊಂಬೆ ಮಾತ್ರ. ಆದರೆ ಮುದುಕಿ ಬರೆದಿರುವ ಹಸೆಯೇ ಸೋಜಿಗ. ಪೂಜೆ ಒಂದು ಆಟ. ಭಕ್ತಿ ಮಾತ್ರ ಸೋಜಿಗ. ಆ ದೇವರು ಇದ್ದಾನೋ ಇಲ್ಲವೋ ತಿಳಿಯದು. ಈ ಪ್ರಶ್ನೆಗಳ ಜಿಜ್ಞಾಸೆ ಇಂದು ನಿನ್ನೆಯದಲ್ಲ. ದೇವರು ಇರುವಿಕೆಯ ಬಗ್ಗೆ ನೂರಾರು ಕಥೆಗಳಿವೆ. ಅದೊಂದು ನಂಬಿಕೆ. ಬಹುಶಃ ಈ ನಂಬಿಕೆ ನಮ್ಮ ಹಿರಿಯರಿಂದಲೇ ಹುಟ್ಟಿರುವಂತದ್ದು. 'ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ ಎಳ್ಳು–ಜೀರಗಿ ಬೆಳೆಯೊಳ ಭೂಮಿತಾಯಿ ಎದ್ದೊಂದು ಗಳಿಗೆ ನೆನೆದೆನೆ' ಎನ್ನುತ್ತಾ ಅವರ ದಿನ ಶುರುವಾಗುವುದೇ ದೇವರ ಸ್ಮರಣೆಯಿಂದ. ಆದರೆ ಸಂಕಟಗಳನ್ನು ಸಂತವಿಡುವ ಒಬ್ಬನು ನಮ್ಮೊಡನೆ ಇದ್ದಾನೆ. ಈ ಅಚಲ ಭಕ್ತಿಯೇ ದಿಟ ಮತ್ತು ಸೋಜಿಗ." ಪೂಜೆಯ ಮೂಲ ಉದ್ದೇಶವೇ ತಮಗೆ ಯಾವುದೇ ರೀತಿಯ ಕಷ್ಟಗಳು ಬರಬಾರದು ಎಂಬುವುದು. ಬಂದರೆ ಆ ಕಷ್ಟಗಳನ್ನು ದೇವರ ಎದುರಿಗೆ ಹೇಳಿಕೊಳ್ಳುವುದು. ಇದು ಮಾನವನ ಸಹಜಗುಣವಾಗಿದೆ. ಭಕ್ತಿಯನ್ನು ಪ್ರತಿಬಿಂಬಿಸಲು ರಂಗವಲ್ಲಿ ಯನ್ನು ಒಂದು ಪ್ರತಿಮೆಯಾಗಿ ಬಳಸಿಕೊಳ್ಳಲಾಗಿದೆ. ಈ ರಂಗವಲ್ಲಿಯೂ ಸಂಸ್ಕೃತಿಯ ಜೀವನಾಡಿಯಾಗಿದೆ ಎಂಬುವುದನ್ನು ನಾವು ಮರೆಯುವಂತಿಲ್ಲ. ಕಷ್ಟ ಸುಖಗಳಲ್ಲಿ ಭಾಗವಹಿಸುವ ಬಂಧುಗಳ ರೀತಿಯಲ್ಲಿ ನಮ್ಮ ಜನಪದರು ದೇವರುಗಳನ್ನು ಕಾಣುತ್ತಾರೆ. ಆದ್ದರಿಂದ ಏನೇ ಕಷ್ಟ ಬಂದರೂ ಪೂಜೆ ಮಾಡುವದು. ಹೋಗಲು ಆಗದಿದ್ದರೆ ಬರಲಾಗದ ತಮ್ಮ ತೊಂದರೆಯನ್ನು ದೇವರಿಗೆ ಹೇಳಿ ಕೂತಲ್ಲೇ ನೆನೆಯುತ್ತಾರೆ. ಸಮಾಜವು ನಗರ ಜೀವನದ ಅಥವಾ ಯಾಂತ್ರಿಕ ಜೀವನವನ್ನು ಅಳವಡಿಸಿಕೊಂಡಿದೆ. ಇದರ ನೆರಳಿನಲ್ಲಿಯೇ ಮಾನವ ತನ್ನ ಜೀವನವನ್ನು ರೂಪಿಸಿಕೊಂಡಿದ್ದಾನೆ. ಇದರಿಂದಾಗಿಯೇ ಕೆಲವು ಆಚರಣೆಗಳು ಅಳಿವಿನಂಚಿನಲ್ಲಿವೆ. ಆದರೆ ಹಳ್ಳಿಗಳಲ್ಲಿ ಇಂದಿಗೂ ಸಹ ಆಯಾ ಋತುಮಾನಗಳಿಗೆ ಸಂಬಂಧಿಸಿದಂತೆ ಅನೇಕ ಸಂಪ್ರದಾಯವಾದ ಆಚರಣೆಗಳನ್ನು ಸಂಭ್ರಮದೊಂದಿಗೆ ಐಕ್ಯತಾ ಭಾವನೆಯೊಂದಿಗೆ ಆಚರಿಸುತ್ತಾರೆ. ಜಾಗತೀಕರಣದ ಹಾವಳಿಯಲ್ಲಿಯೂ ಇಂತಹ ಆಚರಣೆಗಳು ನಾಡಿನ ಸಂಸ್ಕೃತಿಯನ್ನು ಗಟ್ಟಿಗೊಳಿಸುತ್ತವೆ. ಭಕ್ತಿಯನ್ನು ಪ್ರತಿಬಿಂಬಿಸಲು ರಂಗವಲ್ಲಿಯನ್ನು ಒಂದು ಪ್ರತಿಮೆಯಾಗಿ ಬಳಸಿಕೊಳ್ಳಲಾಗಿದೆ. ಈ ರಂಗವಲ್ಲಿಯೂ ಸಂಸ್ಕೃತಿಯ ಜೀವನಾಡಿಯಾಗಿದೆ ಎಂಬುದನ್ನು ನಾವು ಮರೆಯುವಂತಿಲ್ಲ.

ಬೆಟಗೇರಿ ಕೃಷ್ಣಶರ್ಮ ಅವರ 'ಸೀಗಿ ಹುಣ್ಣಿವಿ' ಎಂಬ ಕವಿತೆಯಲ್ಲಿ ಜನಪದರ ಆಚರಣೆಗಳು ಯಾವ ರೀತಿ ವ್ಯಕ್ತವಾಗಿವೆ ಎಂಬುವುದನ್ನು ತಿಳಿಸಲಾಗಿದೆ.

"ಅನ್ನ ಕುಮಾರನ ಬಸುರಿಯದಾಳೌ ನಮ್ಮ ಭೂಮಿದೇವಿ
ಬಯಕಿಯ ಊಟಾ ಉಣಿಸಬೇಕ ಬಂದೈತಿ ಸೀಗಿಹುಣಿವಿ!
ಮುಂಗಾರಿನನಿಲ ಹೊಂದೆನಿದಂಟಿನ ಹಂದರ ಹಾಕಯ್ತೆ
ಹೆಸರು ಹುರುಳಿ ಅಲಸಂದಿ ಅವರಿಬಳ್ಳಿ ತ್ವಾರಣ ಬಿಗಿದಯ್ತೆ
ಹುಚ್ಚೆಳ್ಳಿನ ಹೊಲ ಹೂಗಳ ಅರಳಿಸಿ ಕುಚ್ಚನು ಕಟ್ಟಯ್ತೆ
ಉಡಿಯ ತುಂಬಲಾಕ ಮಾಗಿ ಬಾಗಿ ನಿಂತಾವ ನವಣಿ–ಸಾವಿ
ಅನ್ನ ಕುಮಾರನ ಬಸುರಿಯದಾಳೌ ನಮ್ಮ ಭೂಮಿದೇವಿ!"

ಸೀಗಿ ಹುಣ್ಣಿಮೆಯು ಉತ್ತರ ಕರ್ನಾಟಕದಲ್ಲಿ ನಮ್ಮ ಜನಪದರು ಆಚರಣೆ ಮಾಡುವ ಸಂಭ್ರಮದ ಹಬ್ಬವಾಗಿದೆ. ಈ ಹಬ್ಬವು ಜನಪದರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನೋವು–ನಲಿವು, ದುಃಖ–ಸುಖಗಳನ್ನು ಸಂಭ್ರಮದಿಂದ ಆಚರಿಸುವ ಹಬ್ಬವಾಗಿದೆ. ಪ್ರಕೃತಿಯಲ್ಲಿ ಬರುವ ಹಂದರ, ಭೂಮಿಯಿಂದ ಬರುವ ಸುಗಂಧ ಬರಿತವಾದ ವಾಸನೆ, ಹಕ್ಕಿಗಳ ಚಿಲಿಪಿಲಿ, ಹರಿಯುವ ಹೊಳೆ, ಕಲ್ಮಶವಿಲ್ಲದ ನಕ್ಷತ್ರಗಳಿಂದ ತುಂಬಿದ ಬಿಳಿಮೋಡ, ಕಡಬು ಕರ್ಜಿಕಾಯಿಯ ಸವಿ ಮುಂತಾದ ಪ್ರತಿಮೆಗಳ ಮೂಲಕ ನಾಡಿನ ಜೀವನವನ್ನು ಕುರಿತು ವಿವರಿಸಲಾಗಿದೆ. ರೈತರು ಭೂಮಿ ತಾಯಿಗೆ ಸಲ್ಲಿಸುವ ಪೂಜೆ ಅದ್ಭುತವಾದದ್ದು. ಭೂಮಿ ತಾಯಿಗೆ ಇಷ್ಟವಾದ ಪದಾರ್ಥಗಳನ್ನು ನೈವೇದ್ಯಮಾಡಿ ಪೂಜೆ ಮಾಡುವುದು. ಇದೊಂದು ಜನಪದರಿಗೆ ಸಂಭ್ರಮದ ಹಬ್ಬವಾಗಿದೆ. ತಮ್ಮ ಕುಟುಂಬ ಸಹಿತವಾಗಿ ಅಕ್ಕ ಪಕ್ಕದವರನ್ನು ಅಕ್ಕರೆಯಿಂದ ಕರೆದುಕೊಂಡು ಹೊಲಕ್ಕೆ ಹೋಗಿ ತಮ್ಮ ಸಂಭ್ರಮದ ಕ್ಷಣಗಳನ್ನು ಹಂಚಿಕೊಳ್ಳುತ್ತಾರೆ. ಇದರಿಂದ ಎಲ್ಲರ ಮನಸ್ಸಿಗೂ ನೆಮ್ಮದಿ ಸಿಗುತ್ತದೆ. ನಮ್ಮ ಜನಪದರಿಗೆ ಇಷ್ಟಲ್ಲದೇ ಮತ್ತೇನು ಬೇಕು? ನಾವು ಆಧುನಿಕರಣದಲ್ಲಿ ಸಿಲುಕಿಕೊಂಡಿದ್ದರಿಂದ ನಮ್ಮ ನಾಡಿನ ಆಚರಣೆಗಳು ಮರುರೂಪವನ್ನು ಪಡೆದುಕೊಂಡಿವೆ. ಮತ್ತು ಈ ಜಗತ್ತು ಇರುವವರಿಗೂ ಮರುಸೃಷ್ಟಿಯನ್ನು ಪಡೆಯುತ್ತಲೇ ಇರುತ್ತವೆ ಎನ್ನುವುದಕ್ಕೆ ಹಲವಾರು ನಿದರ್ಶನಗಳಿವೆ.

ಉತ್ತರ ಕರ್ನಾಟಕದಲ್ಲಿ ಬೆಳದಿಂಗಳ ಹಾಡುಗಳೆಂದು ಪ್ರಸಿದ್ಧವಾಗಿರುವ ಗಂಗೆ ಮತ್ತು ಗೌರಿಗೆ ಸಂಬಂಧಪಟ್ಟ ಹಾಡುಗಳು. ಗೌರಿ ಹಬ್ಬದ ಸಂದರ್ಭದಲ್ಲಿ ಹಾಡುಗಳನ್ನು ಹೇಳುತ್ತಾ ಆಚರಣೆಯನ್ನು ಮಾಡುವುದು ರೂಢಿಯಾಗಿತ್ತು. ಈ ಎಲ್ಲಾ ಹಾಡುಗಳು ತವರು ಮನೆಗೆ, ಗಂಡನಿಗೆ, ಅತ್ತೆ–ಮಾವ, ನಾದಿನಿ, ಮೈದುನ, ಅಕ್ಕ–ತಂಗಿ, ಗೆಳತಿ ಹೀಗೆ ಇಡೀ ಸಂಸಾರಿಕ ಜೀವನಕ್ಕೆ ಸಂಬಂಧ ಪಟ್ಟಿರುತ್ತಿದ್ದವು. ಪ್ರತಿಯೊಂದು ಹಳ್ಳಿಯೊಂದರಲ್ಲಿ ಗೌರಿ ಹಬ್ಬ ಬಂತೆಂದರೆ ಸಾಕು ಮಹಿಳೆಯರಿಗೆ ಎಲ್ಲಿಲ್ಲದ ಸಂಭ್ರಮ ಮತ್ತು ಉತ್ಸಾಹ. ಕೋಲಾಟ, ಜಡೆಕೋಲು, ಒಗಟು, ಗಾದೆ ಇನ್ನು ಮುಂತಾದವುಗಳನ್ನು ಹಾಡುವುದರ ಮೂಲಕ ಹಬ್ಬವನ್ನು ಯಾವುದೇ ಸ್ವಾರ್ಥ ಭಾವನೆ ಇಲ್ಲದೇ ಆಚರಣೆ ಮಾಡುತ್ತಿದ್ದರು. ಆದರೆ ಈಗ ಪ್ರಸ್ತುತ ಸಂದರ್ಭದಲ್ಲಿ ಮೇಲಿನ ಎಲ್ಲಾ ಅಂಶಗಳು ಕಡಿಮೆ ಪ್ರಮಾಣದಲ್ಲಿ ಆಚರಣೆಯಲ್ಲಿದ್ದು, ಆಧುನಿಕ ಸಲಕರಣೆಗಳನ್ನು ಉಪಯೋಗಿಸಿಕೊಂಡು ಹಬ್ಬಗಳನ್ನು ಆಚರಿಸುವ ಪರಿಸ್ಥಿತಿ ಉಂಟಾಗಿದೆ. ಹೀಗೆ ಮನುಷ್ಯನೊಂದಿಗೆ ಹುಟ್ಟಿದ ನಮ್ಮ ಆಚಾರ–ವಿಚಾರಗಳು ಮನುಷ್ಯ ವೈಜ್ಞಾನಿಕವಾಗಿ, ತಂತ್ರಜ್ಞಾನಿಕವಾಗಿ ಬೆಳೆದಂತೆಲ್ಲಾ ಅನೇಕ ಬದಲಾವಣೆಗಳಾದವು. ಆಗ ಮನುಷ್ಯನ ಪರಿಕಲ್ಪನೆಗೆ ಬಾರದೇ ಆಚಾರ–ವಿಚಾರಗಳಲ್ಲಿಯೂ ಅನೇಕ ಬದಲಾವಣೆಗಳು ಉಂಟಾಗಿ ಇಂದು ಅವು ಮುಖಾಮುಖಿಯಾಗಿ ನಿಂತಿರುವುದನ್ನು ನಾವು ಕಾಣುತ್ತೇವೆ.

ಪರಾಮರ್ಶನ ಗ್ರಂಥಗಳು

- **ಕಾಳೇಗೌಡ ನಾಗವಾರ :** ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ
- **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ :** ಕಾವ್ಯ ಕಥನ
- **ಡಾ. ಸ.ಚಿ. ರಮೇಶ (ಸಂಪಾದಕರು) :** ಅಲೆಮಾರಿಗಳ ಸ್ಥಿತಿಗತಿ
- **ಪ್ರೊ. ಕಾಳೇಗೌಡ ನಾಗವಾರ :** ವೈಚಾರಿಕ ಲೇಖನಗಳು
- **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ :** ಕಥನ ಕಾರಣ

■■

– *76ನೇ ಪುಟಕ್ಕೆ ಮುಂದುವರೆದುದು*

6) ಕ್ರಿಪ್ಟೊ ಕರೆನ್ಸಿ ಗಣಿಗಾರಿಕೆಯಿಂದ ಶಕ್ತಿ ಬಳಕೆಯ ಪರಿಣಾಮವು ಪರಿಸರಕ್ಕು ದಕ್ಕೆಯಾಗುತ್ತಿದೆ.

7) ಕ್ರಿಪ್ಟೊ ಕರೆನ್ಸಿ ಕಾನೂನಿನ ಕುರಿತಾಗಿ ವಿಶ್ವ ಮಟ್ಟದಲ್ಲಿ ಎಲ್ಲಾ ದೇಶಗಳು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು.

ಸಲಹೆಗಳು

1) ಭಾರತದ ಮಟ್ಟದಲ್ಲಿ ಈ ಸಮಸ್ಯೆ ಬಗೆಹರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಜಾಗತೀಕ ಕಾನೂನುಗಳ ಅನಿವಾರ್ಯತೆ ಹಾಗು ಅವಶ್ಯಕತೆ ಇರುತ್ತದೆ.
2) IMF ಪಾತ್ರ ಇದರಲ್ಲಿ ವಿಶೇಷ ತೂಕವನ್ನು ಹೊಂದಿರುತ್ತದೆ.
3) ಪರ್ಯಾಯ ಹಣಕಾಸು ವ್ಯವಸ್ಥೆಯನ್ನು ರೂಪಿಸುವ ಕ್ರಿಪ್ಟೊ ಕರೆನ್ಸಿ ಕಾನೂನು ಬಾಹಿರವಾಗಿದ್ದು ಇದರ ಬಗ್ಗೆ ತಿಳುವಳಿಕೆ ಮೂಡಿಸುವುದು ಹಾಗೂ ಆಮಿಷಗಳಿಗೆ ಜನರು ಮುಂದಾಗ ಬಾರದು ಎಂದು ಜಾಗೃತಿಗೊಳಿಸುವ ಕೆಲಸ ನಡೆಯಬೇಕು.
4) ಜಾಗತಿಕ ಮಟ್ಟದಲ್ಲಿ ಹೂಡಿಕೆದಾರರ ಸಂಪತ್ತನ್ನು ಸಂರಕ್ಷಣೆ ಮಾಡಬೇಕಾಗಿದೆ.
5) ವಿಶ್ವ ಸಂಸ್ಥೆಯ ನಾಯಕತ್ವ ಅನಿವಾರ್ಯ ಹಾಗೂ ಅವಶ್ಯಕ.

ಉಪಸಂಹಾರ

ಕ್ರಿಪ್ಟೋ ಆಸ್ತಿಗಳಲ್ಲಿ ಹೂಡಿಕೆ ಹಾಗೂ ಅದರ ವಹಿವಾಟನ್ನು ನಿಯಂತ್ರಿಸಲು ಕಾನೂನಿನ ಅನಿವಾರ್ಯತೆ ಹಾಗೂ ಅವಶ್ಯಕತೆ ಇದೆಯೆಂದು ಅಭಿಪ್ರಾಯ ಸಂಶೋಧಕರದಾಗಿದೆ. ಜಾಗತಿಕವಾಗಿ ಕಾನೂನುಗಳು ರೂಪಗೊಂಡಾಗ ಮಾತ್ರ ನಿಯಂತ್ರಣ ಸಾಧ್ಯ. ಮುಂದುವರೆದಂತೆ ಹಣಕಾಸು ಉಗ್ರವಾದದ ಪ್ರತಿರೂಪ ಕ್ರಿಪ್ಟೋ ಆಸ್ತಿಗಳ ವಹಿವಾಟು ಆಗಿದ್ದು ಮತ್ತುಕಪ್ಪು ಹಣ ಚಲಾವಣೆಗೆ ತುಂಬಾ ಸರಳ ವ್ಯವಸ್ಥೆಯನ್ನು ಇವು ಮಾಡಿಕೊಟ್ಟಿರುತ್ತವೆ. ಆದ್ದರಿಂದ ಇವುಗಳನ್ನು ಕಾನೂನಿನ ನಿಯಂತ್ರಣದಲ್ಲಿ ತರುವುದು ಅನಿವಾರ್ಯವಾಗಿದೆ.

ಪರಾಮರ್ಶನ ಗ್ರಂಥಗಳು

- **The Basics of Bitcoins and Blockchains :** An Introduction to Cryptocurrencies and the Technology that Powers Them by Antony Lewis.
- OECD Report on CARF -2022
- G-20 Report, Macrofinancial Implications of Crypto Assets, 2021
- https://indianexpress.com/article/business/banking-and-finance/rbi-banks-plan-new-features-boost-digital-currency-transactions-8934317/
- https://www.forbes.com/advisor/investing/cryptocurrency/cryptocurrency-regulations-around-the-world/
- https://www.imf.org/en/Publications/fandd/issues/2022/09/Regulating-crypto-Narain-Moretti
- https://www.oecd.org/newsroom/oecd-presents-new-transparency-framework-for-crypto-assets-to-g20.htm

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಚನಕಾರರು ಮತ್ತು ಪ್ರಜಾಸತ್ತಾತ್ಮಕ ಚಿಂತನೆಗಳು

✍ **ಡಾ. ತಿಪ್ಪೇರುದ್ರ ಸಂಡೂರು,** ಮುಖ್ಯಸ್ಥರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುರುಗೋಡು, ಬಳ್ಳಾರಿ ಜಿಲ್ಲೆ

ಶಿವಶರಣ ದುಂಬಿಗಳು ಭವದೊಳಗೆ ಹಾರ್ದಾರಿ
ಶಿವಮತದ ಹುಟ್ಟು ಕಟ್ಟಿದವು । ವಚನಗಳು
ಸವೆಯದುಳಿದಿರುವ ಹೊಸ ಜೇನು ॥

"ಶಿವಶರಣರು ಎಂಬ ದೇವದುಂಬಿಗಳು, ಸುತ್ತಲಿನ ಭವಜಗತ್ತು ಎಂಬ ವನದೊಳಗೆ ಹಾರಾಡಿದವು, ಶಿವಮತದ ಹುಟ್ಟನ್ನು ಪುನಃ ಕಟ್ಟಿದವು, ವಚನ ಸಾಹಿತ್ಯವು ಸವೆಯದೆ ಉಳಿದಿರುವ ನಿತ್ಯ ನೂತನವೂ, ಸಾರ್ವಕಾಲಿಕವೂ ಆಗಿರುವ ಹೊಸಜೇನು" ಎಂದು ಜನಪದರು ಶಿವಶರಣರನ್ನು ಕುರಿತು ಮನದುಂಬಿ ಹಾಡಿದ್ದಾರೆ.

ಕನ್ನಡ ಸಾಹಿತ್ಯಕ್ಕೆ ವಸ್ತು, ಭಾಷೆ, ಶೈಲಿ ಮೊದಲಾದ ಆಯಾಮಗಳಲ್ಲಿ ಅರ್ಥವಂತಿಕೆಯನ್ನು ತಂದುಕೊಟ್ಟ ಸಾಹಿತ್ಯದ ವಿಶಿಷ್ಟರೂಪವೇ ವಚನ ಸಾಹಿತ್ಯ.ಜಾತಿಭೇದ, ವರ್ಗಭೇದ, ವರ್ಣಭೇದ, ಲಿಂಗಭೇದ ಮೊದಲಾದ ನೆಲೆಗಳಲ್ಲಿ ಸಮಾನತೆಯನ್ನು ತಂದ ಚಳುವಳಿಯಾಗಿದೆ.

ವಚನ ಸಾಹಿತ್ಯವು ವ್ಯಕ್ತಿತ್ವ ನಿರ್ಮಾಣ ಹಾಗೂ ಸಮಾಜಪರ ಚಿಂತನೆಗಳಿಗೆ ಸಮರ್ಥ ವಾಹಕವಾಗಿದ್ದು, ಕನ್ನಡ ಸಾಹಿತ್ಯ ಪರಂಪರೆಯ ಅಪೂರ್ವ ಸಾಹಿತ್ಯಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಸಂಪತ್ತಾಗಿದೆ. ಬಸವಾದಿ ಶರಣರು ತಮ್ಮ ವಚನಗಳಲ್ಲಿ ಕಾಯಕ, ದಾಸೋಹ, ಸಮತೆ ಮೊದಲಾದ ಸಾರ್ವಕಾಲಿಕ ಜೀವನ ಮೌಲ್ಯಗಳನ್ನು ಪ್ರಸಾರ ಮಾಡಿದರು. ಕಲ್ಯಾಣದ ನಿಯಮದಂತೆ ತಮಗೆ ಒಗ್ಗುವ ಒಂದೊಂದು ವೃತ್ತಿಯನ್ನು ಆರಿಸಿಕೊಂಡು ಅದನ್ನು ನಿಷ್ಠೆಯಿಂದ, ಸತ್ಯಶುದ್ಧವಾಗಿ ಮಾಡುತ್ತಾ ಕಾಯಕಜೀವಿಗಳಾದರು. ವಿವಿಧ ವರ್ಗ, ಜಾತಿ, ಪ್ರದೇಶ, ವೃತ್ತಿ ಮತ್ತು ಕಾಯಕಗಳನ್ನೊಳಗೊಂಡ ಏಳುನೂರ ಎಪ್ಪತ್ತಕ್ಕೂ ಹೆಚ್ಚಿನ ಶರಣರೆಲ್ಲರೂ ಸೇರಿ ಸಮಾನತೆಯ ಸಮಾಜವನ್ನು ಕಟ್ಟಲು ಹುಟ್ಟುಹಾಕಿದ ಆಂದೋಲನದಲ್ಲಿ ಭಾಗಿಯಾದವರು. ಹೀಗೆ ಅನುಭಾವ ಜನ್ಯ ಸಾಹಿತ್ಯವನ್ನು ಸೃಷ್ಟಿಸಿ ಸಮಾನತೆ–ಸರ್ವೋದಯ ಚಳುವಳಿಗೆ ನಾಂದಿ ಹಾಡಿದ ಶರಣರ ಕೊಡುಗೆ ವಿಶಿಷ್ಟವಾದುದು.

ಬಸವಾದಿ ಶರಣರ ವಚನ ಸಾಹಿತ್ಯವು ಸಂಜೀವಿನಿಯಾಗಿದ್ದು, ಸಮಾಜವನ್ನು ಸೂಕ್ಷ್ಮವಾಗಿ ಗಮನಿಸಿ ಪ್ರಜಾಸತ್ತಾತ್ಮಕ ಚಿಂತನೆಗಳನ್ನು ಪ್ರತಿಪಾದಿಸಿದರು. 12ನೇ ಶತಮಾನದಲ್ಲಿ ರಾಜಾಳ್ವಿಕೆ ಇರುವಾಗ ವಚನಗಳ ಮೂಲಕ ಪ್ರಜಾಪ್ರಭುತ್ವವನ್ನು ಪ್ರತಿಷ್ಠಾಪಿಸಿದವರು ವಚನಕಾರರು. ಅಂದಿನ ಅನುಭವಮಂಟಪವು ಇಂದಿನ ಸಂಸತ್ತಿನ ಮೂಲಸ್ವರೂಪವಾಗಿದೆ.

ವಚನಕಾರರು ಪ್ರತಿಪಾದಿಸಿದ ಅನೇಕ ಚಿಂತನೆಗಳಲ್ಲಿ ಪ್ರಜಾಸತ್ತಾತ್ಮಕ ಚಿಂತನೆಗಳು ಪ್ರಮುಖವಾಗಿದ್ದು, ಇವು ಪ್ರಜಾಪ್ರಭುತ್ವ ವ್ಯವಸ್ಥೆಯ ಜೀವಾಳವಾಗಿವೆ. ಸ್ವಾತಂತ್ರ, ಸಮಾನತೆ, ಭ್ರಾತೃತ್ವ, ಜಾತ್ಯಾತೀತತೆ, ಸಮಾಜವಾದಿ ಇತ್ಯಾದಿ ಅಂಶಗಳು ಆ ಕಾಲದ ಜನರಲ್ಲಿ ಜಾಗೃತ ಪ್ರಜ್ಞೆಯನ್ನು ಮೂಡಿಸಲು ಸಹಾಯಕವಾದವು. ನಮ್ಮ ಸಂವಿಧಾನದ ಪ್ರಜಾಸತ್ತಾತ್ಮಕ ಚಿಂತನೆಗಳ ಮೂಲ ಬೇರನ್ನು ವಚನಕಾರರ ವಚನಗಳಲ್ಲಿ ಕಾಣಬಹುದಾಗಿದೆ. ಸಮಸಮಾಜದ ನಿರ್ಮಾಣಕ್ಕೆ ಅಗತ್ಯವಾದ ಚಿಂತನೆಗಳಿಗೆ ವಚನಕಾರರು ಆದ್ಯತೆ ನೀಡಿದರು. ಸಂವಿಧಾನದ ಆಶಯಗಳಿಗೆ ಅನುಗುಣವಾಗಿ, ಪ್ರಸ್ತಾವನೆಯಲ್ಲಿ ಪ್ರಸ್ತಾಪವಾದ ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಪರವಾಗಿ ಅವರ ಅನೇಕ ವಚನಗಳಿವೆ.

'ಬಸವಣ್ಣ ಸ್ಥಾಪಿಸಿದ ಅನುಭವ ಮಂಟಪವೇ ಮೊದಲ ಪಾರ್ಲಿಮೆಂಟ್. ಎಂಟುನೂರು ವರ್ಷಗಳ ಹಿಂದೆಯೇ ಪ್ರಜಾಪ್ರಭುತ್ವದ ಬೀಜ ಬಿತ್ತಿದವ ಬಸವಣ್ಣ' ಇಂಗ್ಲೆಂಡಿನ ಇತಿಹಾಸಕಾರನಾದ ರಿಚರ್ಡ್ ಬರ್ಟನ್ ಹೇಳಿರುವುದು ಬಸವಣ್ಣನವರ ಪ್ರಜಾಸತ್ತಾತ್ಮಕ ಚಿಂತನೆಗಳ ಪ್ರತೀಕವಾಗಿದೆ.

ಬುದ್ಧನ ಸಂಘ ರಚನೆಯ ಕಲ್ಪನೆಯ ಮೂಲಕ ಸಂಸದೀಯ ಪ್ರಜಾಪ್ರಭುತ್ವದ ಪರಿಕಲ್ಪನೆ ಬಂತು. ಆನಂತರ, ಬಸವಣ್ಣನವರು ಸ್ಥಾಪಿಸಿದ ಅನುಭವಮಂಟಪದ ಮೂಲಕ ಶಿವಶರಣರ ವಿಚಾರಗಳು ಮನುಕುಲದ ಉದ್ಧಾರ, ಸಮಾಜ ಸುಧಾರಣೆ, ಸಮಾನತೆ, ಕಾಯಕ, ಧರ್ಮ ಸಮನ್ವಯ ಮೊದಲಾದ ಪ್ರಜಾಸತ್ತಾತ್ಮಕ ಆಶಯಗಳನ್ನೊಳಗೊಂಡ ವಚನಗಳನ್ನು ಬರೆದರು. ನಂತರ, 1949ರಲ್ಲಿ ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ ಬಿ.ಆರ್.ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನವನ್ನು ಶಾಸನವಾಗಿ ವಿಧಿಸಿಕೊಳ್ಳಲಾಯಿತು.

ಹೀಗೆ "ಬೇರೆ ಬೇರೆ ಕಾಲದಲ್ಲಿ ಜೀವಿಸಿದ್ದ, ಭೌಗೋಳಿಕವಾಗಿ ವಿಭಿನ್ನ ಪ್ರದೇಶಗಳಲ್ಲಿ ಜೀವಿಸಿದ್ದ ಮಹಾನ್ ವ್ಯಕ್ತಿಗಳು ಒಂದೇ ರೀತಿಯ ಆಲೋಚನಾ ಕ್ರಮವನ್ನ ಹೊಂದಿರುತ್ತಾರೆ" ಎನ್ನುವ ಹೇಳಿಕೆಯಂತೆ ಪ್ರಜಾಸತ್ತಾತ್ಮಕ ಚಿಂತನೆಗಳು ಮೊದಲು ಮೊಳಕೆಯೊಡೆದದ್ದು ಬುದ್ಧನ ಉಪದೇಶಗಳಲ್ಲಿ, ನಂತರ ಲಿಪಿರೂಪದಲ್ಲಿ ಅಭಿವ್ಯಕ್ತಿ ಪಡೆದದ್ದು ಬಸವಾದಿ ಶರಣರ ವಚನಗಳಲ್ಲಿ, ತದನಂತರ ಕಾನೂನಿನ ಸ್ವರೂಪ ಪಡೆದದ್ದು ಅಂಬೇಡ್ಕರ್‌ರವರ ನೇತೃತ್ವದಲ್ಲಿ ರಚಿಸಿದ ಸಂವಿಧಾನದಲ್ಲಿ. ಮಾತು, ಬರಹವಾಗಿ ನಂತರ ಕಾನೂನಿನ ಸ್ವರೂಪವನ್ನು ಪಡೆದುಕೊಂಡದ್ದು ಸಂವಿಧಾನದಲ್ಲಿಯೇ ಅನ್ನುವ ಅಂಶವನ್ನು ಇಲ್ಲಿ ಗಮನಿಸಬೇಕು. **ಬುದ್ಧ, ಬಸವ, ಅಂಬೇಡ್ಕರ್** ಈ ಮೂವರನ್ನು **'ಪ್ರಜಾಸತ್ತಾತ್ಮಕ ಚಿಂತನೆಗಳ ತ್ರಿಮೂರ್ತಿ'**ಗಳೆಂದು ಕರೆಯಬಹುದು.

ಬಸವಣ್ಣನವರು ಕಂಡ ಆಧ್ಯಾತ್ಮಿಕ ಸತ್ಯಗಳ, ಜೀವನಾನುಭವ ಹಾಗೂ ತಾತ್ವಿಕ ವಿಚಾರಗಳ ಅಭಿವ್ಯಕ್ತಿಗೆ ವಚನಗಳು ಮಾಧ್ಯಮವಾದವು. ಅವರ ರಚನೆಗಳಲ್ಲಿ ಪ್ರಜಾಸತ್ತಾತ್ಮಕ ಚಿಂತನೆಯ ವಚನಗಳು ಹೇರಳವಾಗಿವೆ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ.
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

'ನೈತಿಕ ಮೌಲ್ಯಗಳ ಸಪ್ತಸೂತ್ರಗಳನ್ನೊಳಗೊಂಡ ಬಸವಣ್ಣನವರ ಈ ವಚನ ಬಹುಪ್ರಸಿದ್ಧವಾಗಿದ್ದು, 'ಇಂಡಿಯನ್ ಪೇನಲ್ ಕೋಡ್‌ನ ತಳಹದಿ' ಎಂದು ಸಹ ಕರೆಯುತ್ತಾರೆ. ಇದನ್ನು ನಾನು **'ಮಾನವೀಯತೆಯ ಮಹಾಮಂತ್ರ'** ಅಥವಾ **'ಪ್ರಜಾಸತ್ತಾತ್ಮಕ ಚಿಂತನೆಯ ಬೀಜಮಂತ್ರ'** ಎಂದು ಕರೆಯಬಹುದು. ಈ ವಚನವೊಂದನ್ನು ಮಾನವ ಸಮಾಜ ಅನುಸರಿಸಿದಲ್ಲಿ ಕಾನೂನುಗಳ ಅಗತ್ಯವಿಲ್ಲ ಎನ್ನುವುದನ್ನು ಬಸವಣ್ಣನವರು ಬಹಳ ಸೊಗಸಾಗಿ ಹೇಳಿದ್ದಾರೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಇವನಾರವ, ಇವನಾರವ,
ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ,
ಇವ ನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ
ನಿಮ್ಮ ಮನೆಯ ಮಗನೆಂದೆನಿಸಯ್ಯಾ.

ಜಾತಿ, ಕುಲ, ಲಿಂಗಭೇದವಿಲ್ಲದೇ ಎಲ್ಲರನ್ನು ಒಪ್ಪಿಕೊಳ್ಳುವ, ಎಲ್ಲರನ್ನೂ ಅಪ್ಪಿಕೊಳ್ಳುವ ಸಂದೇಶವನ್ನು ಈ ವಚನದಲ್ಲಿ ಸಾರಿದ್ದಾರೆ.

ಅಜ್ಞಾನದ ತಾಮಸ ನಿದ್ರೆಯಲ್ಲಿ ನಿದ್ರಿಸುತ್ತಿದ್ದ ಸಮಾಜವನ್ನು ಜ್ಞಾನದ ಹೊಂಬಿಸಿಲಿನಿಂದ ಎಚ್ಚರಿಸಿದವರು 12ನೇ ಶತಮಾನದ ಮಹಾ ಮಾನವತಾವಾದಿ, ಶ್ರೇಷ್ಠ ಸಮಾಜಚಿಂತಕ ಗುರು ಬಸವಣ್ಣನವರು. ಸಮಾಜಸುಧಾರಕರಾದ ಗುರು ಬಸವಣ್ಣನವರು ಮನುಕುಲದ ಸಮಗ್ರ ಸಮಾನತೆಯ ಹಕ್ಕಿಗಾಗಿ ಸತ್ಯ–ಅಹಿಂಸೆ ಮತ್ತು ಮಾನವೀಯತೆಯ ಅಸ್ತ್ರ ಹಿಡಿದು ಹೋರಾಡಿದರು.

ಸಕಲ ಜೀವಾತ್ಮರಿಗೆ ಲೇಸು ಬಯಸುವ ಮತ್ತು ಪ್ರತಿಯೊಬ್ಬ ವ್ಯಕ್ತಿಯ ಬೆಳವಣಿಗೆಯೇ ಸಮಾಜದ ಬೆಳವಣಿಗೆ ಎಂಬ ಸೂತ್ರದಡಿಯಲ್ಲಿ ಶಿವಶರಣರೆಲ್ಲರೂ ಆದರ್ಶ ಕಲ್ಯಾಣ ಸಮಾಜ ನಿರ್ಮಾಣದ ಕನಸು ಕಂಡು ಅನುಭವಮಂಟಪದಡಿ ಚರ್ಚೆ ಮಾಡಿದರು. ಪ್ರಜಾಸತ್ತಾತ್ಮಕ ತತ್ವಗಳ ಪ್ರತೀಕವಾದ ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ಪ್ರಜಾಪ್ರಭುತ್ವ ಮೌಲ್ಯಗಳಿಗೆ ಮುನ್ನುಡಿ ಬರೆದ ಬಸವಣ್ಣನವರು ಅಂದಿನ ರಾಜಕೀಯ ವ್ಯವಸ್ಥೆ ಮೇಲೂ ಪ್ರಜಾಪ್ರಭುತ್ವದ ಬೆಳಕನ್ನು ಹರಿಸಿದ್ದಾರೆ. ಅಂದು ವಚನಕಾರರು ಆಚರಿಸಿಕೊಂಡು ಪ್ರತಿಪಾದಿಸಿದ ಪ್ರಜಾಪ್ರತಿನಿಧಿಯ ನೈತಿಕಮೌಲ್ಯಗಳು ಪ್ರತಿಯೊಬ್ಬ ಪ್ರಜಾಪ್ರತಿನಿಧಿಗೂ ಆದರ್ಶಮಯವಾದದ್ದು.

ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೆ
ಧರೆ ಹೊತ್ತಿ ಉರಿದರೆ ನಿಲಬಹುದೆ?
ಏರಿ ನೀರುಂಬಡೆ, ಬೇಲಿ ಕೈಯ ಮೇವೊಡೆ
ನಾರಿ ತನ್ನ ಮನೆಯಲ್ಲಿ ಕಳುವೊಡೆ,
ತಾಯಿ ಮೊಲೆವಾಲು ನಂಜಾಗಿ ಕೊಲುವಡ
ಇನ್ನಾರಿಗೆ ದೂರವೆನಯ್ಯಾ ಕೂಡಲಸಂಗಮದೇವಾ?

ಪ್ರಜಾಪ್ರತಿನಿಧಿ ಮತ್ತು ಆಡಳಿತ ವ್ಯವಸ್ಥೆಯ ಶಕ್ತಿಯೇ ಸಡಿಲಗೊಂಡರೆ ಮತ್ಯಾರಿಗೆ ದೂರುವುದು? ಎನ್ನುವ ನುಡಿಗಳನ್ನು ಬಸವಣ್ಣನವರು ಹೇಳಿದ್ದಾರೆ. ಅಧಿಕಾರಸ್ಥ ವ್ಯಕ್ತಿ ನೈತಿಕ ಆದರ್ಶ ಮೌಲ್ಯಗಳ ಆರಾಧಕನಾಗಿರಬೇಕು.ಆ ತನು ರಾಜಕೀಯ ಅಧಿಕಾರ ಯಾವುದೇ ಸ್ವಲಾಭಕ್ಕೆ ಬಳಸದೆ ಪ್ರಜೆಗಳ ಯೋಗಕ್ಷೇಮಕ್ಕಾಗಿಯೇ ಮೀಸಲಾಗಿರಬೇಕು. ಯಾವುದೇ ಕಾರಣಕ್ಕೂ ಸರ್ವಜನತೆಯ ಹಣವನ್ನು ದುಂದುವೆಚ್ಚ ಮಾಡದೆ ರಾಜ್ಯ–ರಾಷ್ಟ್ರದ ಪ್ರಗತಿಗೆ ಅದು ವಿನಿಯೋಗವಾಗಬೇಕೆಂದು ಕರೆ ನೀಡಿದ್ದಾರೆ.

ಶರಣರ ನುಡಿಗಳು ಸರ್ವಕಾಲಕ್ಕೂ ಸರ್ವರಿಗೂ ಅನ್ವಯ ಹಾಗೂ ಆದರ್ಶಮಯವಾಗಿವೆ. ಸರ್ವಜನರ ಕಲ್ಯಾಣದ ಸಮಗ್ರ ವಿಕಾಸಕ್ಕೆ ಪೂರಕವಾದ ಪ್ರಜಾಸತ್ತಾತ್ಮಕ ಚಿಂತನೆಗಳನ್ನು ಸಮಾಜಕ್ಕೆ ನೀಡಿದ್ದಾರೆ.

ಹೊನ್ನಿನೊಳಗೊಂದೊರೆಯ
ಸೀರೆಯೊಳಗೊಂದೆಳೆಯ
ಅನ್ನದೊಳಗೊಂದಗುಳ ಇಂದಿಂಗೆ
ನಾಳಿಂಗೆ ಬೇಕೆಂದೆನಾದಡೆ,
ನಿಮ್ಮಾಣೆ, ನಿಮ್ಮ ಪುರಾತರಾಣೆ !
ನಿಮ್ಮ ಶರಣರಿಗಲ್ಲದೆ ಮತ್ತೊಂದಕ್ಕೆ ಈಯೆನು;
ಕೂಡಲಸಂಗಮದೇವಾ, ನಿಮ್ಮಾಣೆ !

ಪ್ರಜಾತಂತ್ರದ ಇನ್ನೊಂದು ಚಿಂತನೆಯೆಂದರೆ ಅದು ಸಮಾನ ಹಂಚಿಕೆ. ಪ್ರಜಾಪ್ರತಿನಿಧಿಗಳು ಧನಸಂಗ್ರಹ ಪ್ರವೃತ್ತಿಯನ್ನ ಬಿಟ್ಟು ಸಾರ್ವಜನಿಕ ಹಿತ ಕಾಪಾಡುವಂತಹ ಹೊಣೆ ಹೊರಬೇಕು. ಸಾರ್ವಜನಿಕ ಪರಿಶ್ರಮದ ಪ್ರತೀಕವಾದ ಹಣದ ಒಂದೆಳೆಯೂ ಸ್ವಾರ್ಥಕ್ಕೆ ಬಳಕೆಯಾಗದೆ ಸಮಾಜದ ಕಲ್ಯಾಣಕ್ಕಾಗಿಯೇ ಸಲ್ಲುವಂತೆ ನೋಡಿಕೊಳ್ಳುವ ಕರ್ತವ್ಯಪ್ರಜ್ಞೆ ಸದಾ ಪ್ರಜಾಪ್ರತಿನಿಧಿಯಲ್ಲಿ ಜಾಗೃತವಿರಬೇಕೆಂದು ತಿಳಿಸಿದ್ದಾರೆ.

ಹರಿವ ಹಾವಿಂಗಂಜೆ,
ಉರಿಯ ನಾಲಿಗೆಗಂಜೆ
ಸುರಗಿಯ ಮೊನೆಗಂಜೆ!
ಒಂದಕ್ಕಂಜುವೆ, ಒಂದಕ್ಕಳುಕುವೆ;
ಪರಸ್ತ್ರೀ–ಪರಧನವೆಂಬ ಜೂದಿಂಗಂಜುವೆ!
ಮುನ್ನೆಂಜದ ರಾವಣನೇವಿಧಿಯಾದ ಕಾರಣ
ಅಂಜುವೆನಯ್ಯಾ, ಕೂಡಲಸಂಗಮದೇವಾ.

ಪ್ರಜಾಪ್ರತಿನಿಧಿ ಮತ್ತು ಅಧಿಕಾರಸ್ಥ ವ್ಯಕ್ತಿ ಪರಧನ ಮತ್ತು ಪರಸ್ತ್ರೀಯರಿಂದ ದೂರವಿರಬೇಕು.ಆತನು ಅಂತರಂಗ–ಬಹಿರಂಗದೊಳಗೊಂದು ವೇಷಧರಿಸಿ ಜೀವಿಸಬಾರದೆಂಬ ಸಂದೇಶ ನೀಡುವ ಬಸವಣ್ಣನವರು ನಿರ್ವಂಚನೆಯ ಚಿತ್ತದಿಂದ ಸಾರ್ವಜನಿಕ ಹಿತಕಾರ್ಯಗಳನ್ನು ಮಾಡಬೇಕೆನ್ನುತ್ತಾರೆ. ಅಧಿಕಾರ ಲಾಲಸೆ–ಅಹಂಕಾರ ಸಂಪತ್ತಿನ ಅತಿಸಂಗ್ರಹ–ಮೋಸ–ಕೀರ್ತಿವಾರ್ತೆ ಮುಂತಾದವುಗಳ ಉದ್ದೇಶದಿಂದ ಮಾಡುವ ಪ್ರತಿಯೊಂದು ಕೆಲಸಕಾರ್ಯ ಹಾಗೂ ಹಣ ವ್ಯರ್ಥ ಎಂದು ಈ ವಚನದಲ್ಲಿ ತಿಳಿಸಿದ್ದಾರೆ.

ಏನಿ ಬಂದಿರಿ, ಹದುಳವಿದ್ದರೆ ಎಂದಡೆ
ನಿಮ್ಮಸಿರಿ ಹಾರಿ ಹೋಹುದೆ?
ಕುಳ್ಳಿರೆಂದಡೆ ನೆಲ ಕುಳಿ ಹೋಹುದೆ?
ಒಡನೆ ನುಡಿದರೆ ಸಿರ, ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ
ಮೂಗ ಕೊಯ್ದುದ ಮಾಬನೆ ಕೂಡಲಸಂಗಮದೇವಯ್ಯ?

ಈ ವಚನ ಅನುಸಂಧಾನದ ಮಹತ್ವವನ್ನು ಹೇಳುತ್ತಿದೆ.ಒಬ್ಬರು ಮತ್ತೊಬ್ಬರ ಜೊತೆಯಲ್ಲಿ ವ್ಯವಹರಿಸುವ ಅಗತ್ಯವನ್ನು, ವಾದ–ಸಂವಾದ ಮಾಡುವ ಕ್ರಮವನ್ನು, ಅದರ ಗುಣವನ್ನು ಇಲ್ಲಿ ಬಸವಣ್ಣ ಹೇಳಿದ್ದಾನೆ. ಅನುಸಂಧಾನಕ್ಕೆ ಅನೇಕ ಸಾಮಾಜಿಕ ಕಟ್ಟುಪಾಡುಗಳಿದ್ದುದು ಇದರಿಂದ ಸ್ಪಷ್ಟವಾಗುತ್ತದೆ. ಈ ಬಗೆಯ ಸಾಮಾಜಿಕ ವ್ಯವಸ್ಥೆಯಲ್ಲಿ ಪ್ರಜಾಸತ್ತೆಯು ನೆಲೆಗೊಳ್ಳುವುದು ಸಾಧ್ಯವಿಲ್ಲ. ವಚನಕಾರರು ಕಟ್ಟಿದ ಚಳುವಳಿಯೇನಿದೆ ಅದು ಪ್ರಜಾಸತ್ತಾತ್ಮಕವಾಗಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸಂವಿಧಾನದ 14 ರಿಂದ 18ನೇ ವಿಧಿಗಳು ಸಮಾನತೆಯ ಹಕ್ಕನ್ನು ಪ್ರತಿಪಾದಿಸುತ್ತವೆ. ಬಸವಣ್ಣನವರ ಈ ವಚನದಲ್ಲಿ 'ಸರ್ವರೂ ಸಮಾನರು' ಎನ್ನುವ ಪ್ರಜಾಸತ್ತಾತ್ತಕ ಚಿಂತನೆಯ ಎಳೆಯನ್ನು ಕಾಣಬಹುದು.

ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಶನ ಮುಕ್ತಿಗೆ
ನೆಲವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರ ಒಂದೇ ಎಂಬೆ

ಹೀಗೆ ಬಸವಣ್ಣನವರು ಪ್ರಜಾಪ್ರಭುತ್ವ ವೃಕ್ಷ ನಿಂತಿರುವುದೇ ಸಮಾನತೆಯ ತತ್ವದ ಮೇಲೆ ಎಂಬ ಅರಿವನ್ನು ತಮ್ಮ ವಚನಗಳಲ್ಲಿ ನೀಡಿದ್ದಾರೆ. ಅವರು ಪ್ರತಿಪಾದಿಸಿದ ಪ್ರಜಾಸತ್ತಾತ್ಮಕ ಚಿಂತನೆಗಳು ದಿವ್ಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಂತ್ರೋಪದೇಶಗಳಾಗಿದ್ದು, ನಮ್ಮ ಸಂವಿಧಾನವು ಸಹ ಈ ಮೌಲ್ಯಗಳನ್ನೇ ಪ್ರತಿಪಾದಿಸುವುದನ್ನು ಕಾಣಬಹುದು.

ಶರಣ ಚಳುವಳಿಯ ಪ್ರಮುಖಳಾಗಿ, ಸ್ತ್ರೀವಾದಿ ಚಳವಳಿಯ ಪ್ರತಿಪಾದಕಿಯಾಗಿ, ಸ್ವಾಭಿಮಾನದ ಪ್ರತೀಕವಾಗಿದ್ದ ಶರಣ ಸಂಕುಲದ ಅಕ್ಕಮಹಾದೇವಿ ಬಹಳ ಮೌಲಿಕ ವಚನಗಳನ್ನು ರಚಿಸಿದ್ದಾಳೆ.

ಉಸುರಿನ ಪರಿಮಳವಿರಲು
ಕುಸುಮದ ಹಂಗೇಕಯ್ಯಾ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇಕಯ್ಯಾ?
ಲೋಕವೆ ತಾನಾದ ಬಳಿಕ
ಏಕಾಂತದ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನಾ?

ಕುಂದುಕೊರತೆಗಳನ್ನು ಟೀಕಿಸುವುದಷ್ಟೇ ಅಲ್ಲ ಅದನ್ನು ಸುಧಾರಿಸುವ, ಬದಲಿಸುವ ಮನೋಧೋರಣೆಯನ್ನು ವ್ಯಕ್ತಿ ಹೊಂದಬೇಕು. ಆಗ ಜಗತ್ತು ಸುಂದರವಾಗುತ್ತದೆ ಎನ್ನುವ ಕರ್ತವ್ಯ ಮನೋಭಾವದ ಆಶಯವನ್ನು ಈ ವಚನದಲ್ಲಿ ಅಕ್ಕ ವ್ಯಕ್ತಪಡಿಸಿದ್ದಾಳೆ.

ಬಸವಣ್ಣನವರ ಸಮಸಮಾಜದ ಪರಿಕಲ್ಪನೆಗೆ ಮಾರುಹೋಗಿ ಸೌರಾಷ್ಟ್ರದಿಂದ ಬಂದ ಆದಯ್ಯ ಕನ್ನಡದ ಪ್ರಮುಖ ವಚನಕಾರರಲ್ಲೊಬ್ಬ. ಈತನ ವಚನಗಳಲ್ಲಿ ಧರ್ಮತತ್ವಗಳ ವಿವೇಚನೆ ಹೆಚ್ಚಾಗಿ ಕಂಡು ಬರುವ ಅಂಶವಾಗಿದೆ. **'ಪ್ರಜಾಸತ್ತಾತ್ಮಕ ಚಿಂತನೆಗಳ ಕೈಗನ್ನಡಿ'**ಯಂತಿರುವ ಆದಯ್ಯನ ವಚನ ಮನುಷ್ಯ ಉನ್ನತ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಕರೆಯನ್ನು ನೀಡುತ್ತದೆ.

ಸತ್ಯವೆ ಜಲ, ಸಮತೆಯೆ ಗಂಧ, ಅರಿವೆ ಅಕ್ಷತೆ,
ಭಾವ ಕುಸುಮ, ಸ್ವತಂತ್ರ ಧೂಪ, ನಿರಾಳ ದೀಪ,
ಸ್ವಾನುಭಾವ ನೈವೇದ್ಯ, ಸಾಧನಸಾಧ್ಯ ಕರ್ಪುರವೀಳೆಯ.
ಇವೆಲ್ಲವ ನಿಮ್ಮ ಪೂಜೆಗಂದನ್ನಕರಣಂಗಳು ಪಡೆದಿರಲು
ಹೃದಯಮಧ್ಯದಲ್ಲಿದ್ದು ಗಮ್ಮನೆ ಕೈಕೊಂಡೆಯಲ್ಲಾ
ಸೌರಾಷ್ಟ್ರ ಸೋಮೇಶ್ವರಾ.

ಆದಯ್ಯ ಈ ವಚನದ ಮೂಲಕ ಮನುಷ್ಯ ಉನ್ನತ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದ್ದಾನೆ. ಪ್ರಸ್ತುತ ವಚನ ಪರಿಪೂರ್ಣ ವ್ಯಕ್ತಿತ್ವದ ಆಶಯವನ್ನು ಹೊಂದಿದ್ದು, **'ಮರೆತು ಮಾನವನಾಗುವುದಕ್ಕಿಂತ ಅರಿತು ಶರಣ'**ನಾಗಿ ಬಾಳುವ ಸಂದೇಶವನ್ನು ನೀಡುತ್ತದೆ.

ಸಗರನಾಡಿನ ತಿಂಥಿಣಿಯ ಮೌನೇಶ್ವರರು ಸರ್ವಧರ್ಮ ಸಮನ್ವಯ ವಚನಕಾರರಾಗಿದ್ದಾರೆ. 16ನೇ ಶತಮಾನದಲ್ಲಿ ಬರುವ ವಚನಕಾರರ ಸಾಲಿನ ಪ್ರಮುಖ ವಚನಕಾರರಾದ ಇವರು 'ಬಸವಣ್ಣ'ನೆಂಬ ಅಂಕಿತದೊಂದಿಗೆ ಸುಮಾರು 800ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ.

ಊರೆಲ್ಲ ನೆಂಟರು ಕೇರೆಲ್ಲ ಬಳಗ
ಧಾರುಣಿಯೆಲ್ಲ ಕುಲದೈವ, ಇದರೊಳಗೆ
ಯಾರನು ಬಿಟ್ಟು ಯಾರನು ಹಿಡಿಯಲಿ, ಬಸವಣ್ಣ

'ಸಾಮರಸ್ಯವೇ ಇವರ ವಚನಗಳ ಜೀವಾಳ'ವಾಗಿದ್ದು, ಊರೆಲ್ಲ ಬಂಧುಗಳು, ಕೇರಿಯ ತುಂಬಾ ಬಳಗವೆಲ್ಲಾ ಆವರಿಸಿರುವಾಗ ಇದರಲ್ಲಿ ಯಾರನು ಬಿಡಲಿ ಎಲ್ಲರೂ ನನ್ನವರೆ ಎನ್ನುವಲ್ಲಿ ಜಾತಿ, ಧರ್ಮ, ಕುಲ ಎನ್ನುವ ಭೇದ ಮೀರಿದ ಅಖಂಡ ಪ್ರಜ್ಞೆಯನ್ನು ಈ ವಚನದಲ್ಲಿ ಮೌನೇಶ್ವರರು ಪ್ರತಿಪಾದಿಸುತ್ತಾರೆ.

'ಜಾತಿ ಜಾತಿಗೆಲ್ಲ ಪೋತರಾಜನೇ ಗುರು, ಮಾತಂಗಿ
ಸುತನಾದ ಪರಬ್ರಹ್ಮನ ಗೋತ್ರ ಕೇಳುವವನ
ಕುಲವೇನು, ಹಾರವನ ಮೋರೆ ಕಂಡರೆ ಅಪಶಕುನ ಬಸವಣ್ಣ'

ಎನ್ನುವ ಮೂಲಕ ಜಾತಿ ವಿಜಾತಿಗಳ ಭೇದವನ್ನು ಮೌನೇಶ್ವರರು ಖಂಡಿಸುತ್ತಾರೆ.

ವಚನ ವಾಙ್ಮಯದ ಮೂರನೆ ಘಟ್ಟದ ಪ್ರಮುಖ ವಚನಕಾರನಾದ ಷಣ್ಮುಖಸ್ವಾಮಿ. ನಿಶ್ಚಿತ ಶಾಸ್ತ್ರಜ್ಞಾನ ಯೋಗಸಿದ್ಧಿ, ಅನುಭಾವದ ದಿವ್ಯ ತೇಜಸ್ಸನ್ನು ಹೊಂದಿದ್ದ ವಚನಕಾರ.

ಪರಧನವ ಹಿಡಿಯದೆ,
ಪರಸ್ತ್ರೀಯರ ಮುಟ್ಟದೆ,
ಪರದೈವವ ಪೂಜಿಸದೆ,
ಪರಹಿಂಸೆಯ ಮಾಡದೆ,
ಪರಲೋಕದ ಫಲಪದವ ಬಯಸದೆ,
ಪರನಿಂದೆಯ ಕೇಳದೆ,
ಗರ್ವಾಹಂಕಾರದಲ್ಲಿ ಬೆರೆಯದೆ,
ಕರಣಾದಿ ಗುಣಂಗಳಲ್ಲಿ ಹರಿಯದೆ,
ಗುರುಭಕ್ತಿ ಲಿಂಗಪೂಜೆ
ಜಂಗಮದಾಸೋಹವ ಮರೆಯದೆ,
ಸತ್ಯಸದಾಚಾರವ ತೊರೆಯದೆ,
ಸರ್ವಾಚಾರಸಂಪನ್ನನಾದ ಮಹಾತ್ಮನೆ
ಅನಾದಿಗುರುಪಟ್ಟಕ್ಕೆ ಯೋಗ್ಯನು.
ಆ ಮಹಾತ್ಮನೆ ಪರಮಘನಲಿಂಗದೇವರೆಂಬೆನು
ಆ ಮಹಾತ್ಮನೆ ಭವಕೆ ಘನವಾದ
ಮಹಾಘನ ಪರಶಿವಮೂರ್ತಿಯೆಂಬೆನಯ್ಯಾ ಅಖಂಡೇಶ್ವರಾ.

"ಪ್ರಜಾಸತ್ತಾತ್ಮಕ ಚಿಂತನೆಗಳ ಅರಿವಿನ ಸೆಲೆ"ಯಂತಿರುವ ಈ ವಚನದಲ್ಲಿ ಪ್ರಜಾಪ್ರತಿನಿಧಿಯಾದವನು ಅನುಸರಿಸಬೇಕಾದ ಮಾರ್ಗದರ್ಶಿ ಸೂತ್ರಗಳನ್ನು ಷಣ್ಮುಖಸ್ವಾಮಿ ಕೊಟ್ಟಿದ್ದಾನೆ.

ಅಲಕ್ಷಿತ ವಚನಕಾರ್ತಿಯರಲ್ಲಿ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಪ್ರಮುಖ ವಚನಕಾರ್ತಿ.

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ;
ಸತ್ಯಶುದ್ಧವಿಲ್ಲದುದು ಕಾಯಕವಲ್ಲ;
ಆಸೆಯೆಂಬುದು ಭವದ ಬೀಜ;
ನಿರಾಸೆಯೆಂಬುದು ನಿತ್ಯಮುಕ್ತಿ.
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣಾವ್ವಾ.

ಭೂಮಿಯ ಮೇಲೆ ಹುಟ್ಟಿದ ಯಾವುದೇ ಮನುಷ್ಯನಿಗೆ ಆಸೆಯೆಂಬುದು ಭವದ ಬೀಜವಾಗುತ್ತದೆ. ನಿರಾಸೆಯೆಂಬುದು ನಿತ್ಯಮುಕ್ತಿಯಾಗಿದ್ದು, ಸತ್ಯ ಶುದ್ಧವಾಗಿರದ ಕಾಯಕ ಎಂದಿಗೂ ಕಾಯಕವಾಗುವುದಿಲ್ಲ. ಭಕ್ತರ ಮನಸ್ಸು ಹಾಗೂ ಕಾಯಕ ಪರಿಶುದ್ಧತೆಯಿಂದ, ಪರಿಪೂರ್ಣತೆಯಿಂದ ಕೂಡಿರಬೇಕು. ಆಗ ಸುಂದರ ಸಮಾಜ ನಿರ್ಮಾಣವಾಗುತ್ತದೆ ಎನ್ನುವ ಆಶಯವನ್ನು ಈ ವಚನ ಹೊಂದಿದೆ. ಹೀಗೆ ಸಾಮಾನ್ಯಳಾದ ಹೆಂಗಸು ಸ್ಥಾಪಿತ ವ್ಯವಸ್ಥೆಯ ಎದುರು ದಿಟ್ಟತನದಿಂದ ಅಭಿಪ್ರಾಯ ವ್ಯಕ್ತಪಡಿಸಿರುವುದು ವಚನಕಾರರ ಆಂತರಿಕ ಪ್ರಜಾಪ್ರಭುತ್ವಕ್ಕೆ ಜೀವಂತ ಸಾಕ್ಷಿಯಾಗಿದೆ.

ಬದುಕನ್ನು ಸಮತೋಲನದಲ್ಲಿರುವುದು ಕಾಯಕ. ಶರಣರೆಲ್ಲರೂ ಕಾಯಕಕ್ಕೆ ಮಹತ್ವ ನೀಡಿದರು.ಅಂದಿನ ಸಮಾಜವ್ಯವಸ್ಥೆಯಲ್ಲಿದ್ದ ಅನೇಕ ರೀತಿಯ ವೃತ್ತಿಗಳಲ್ಲಿದ್ದ ಮೇಲು–ಕೀಳು ಭಾವನೆಗಳನ್ನು ಹೋಗಲಾಡಿಸಿ ವೃತ್ತಿಗಳಲ್ಲಿ ಸಮಾನತೆಯನ್ನು ತಂದು ದುಡಿಮೆಗೆ ಆದ್ಯತೆ ನೀಡಿದರು. ಇದು ಕುಲ–ಜಾತಿಗಳನ್ನು ಅಳಿಸಿಹಾಕಿ ಸಮಾನತೆಯ ಸಮಾಜವನ್ನು ಕಟ್ಟುವ ಅಸ್ತ್ರವಾಯಿತು.

"ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದಡೂ ಮರೆಯಬೇಕು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು."

ಎಂದು ಆಯ್ದಕ್ಕಿ ಮಾರಯ್ಯ ಹೇಳುವಲ್ಲಿ ಕಾಯಕದ ಮಹತ್ವದ ಪರಾಕಾಷ್ಠೆಯನ್ನು ಹೇಳಿದ್ದಾನೆ. ಕಾಯಕದ ಮೂಲಕ ಸಾಮಾಜಿಕ ಸಮಾನತೆಯನ್ನು ತಂದರು.

ವ್ಯಕ್ತಿಯ ಸರ್ವಾಂಗೀಣ ಪ್ರಗತಿಗೆ ಪ್ರಜಾತಂತ್ರವೇ ಸೂಕ್ತವಾದುದು. ಸಮಾಜಕ್ಕೆ ಮಾಡದವರನ್ನು ಕುರಿತು ಸಿದ್ಧರಾಮನು ಹೀಗೆ ಹೇಳಿದ್ದಾನೆ.

ಮಾಡಿದರು ಮಾಡಿದರು ತಮ್ಮ ಹಿತಕ್ಕಲ್ಲದೇ
ಮತ್ತಾರ ಹಿತಕ್ಕಲ್ಲ ನೋಡಯ್ಯಾ
ತನ್ನ ಬಿಟ್ಟನ್ಯ ಹಿತವ ನೋಡಿದಡೆ
ಕೂಡಿಕೊಂಬ ನಮ್ಮ ಕಪಿಲಸಿದ್ಧ ಮಲ್ಲಯ್ಯ

ಅನ್ಯಹಿತವೇ ಸಮಾಜದ ಹಿತ.ಸಮಾಜ ಹಿತದಲ್ಲಿ ದೊರೆಯುವ ಆನಂದ ಪರಮಾನಂದ. ಸಮಾಜದ ಎಲ್ಲ ಜನತೆಯು ಸಂತೃಪ್ತಿಯಿಂದ ಬದುಕಬೇಕೆಂಬ ಧೋರಣೆ ಈ ವಚನದಲ್ಲಿದೆ.

ಭಾರತದ ಸಂವಿಧಾನ ಆಶಯಗಳು ಹಾಗೂ ಶರಣರು ಪ್ರತಿಪಾದಿಸಿದ ತತ್ವಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ವಚನಕಾರರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿದ್ದು, ಸಮ ಸಮಾಜ, ಸಮಾನತೆ ಹಾಗೂ ಜಾತ್ಯಾತೀತ ಮನೋಭಾವಗಳನ್ನು ಸಂವಿಧಾನದಲ್ಲಿ ಅಳವಡಿಸಲಾಗಿದೆ. ವಚನಗಳಲ್ಲಿ ಇರುವ ಎಲ್ಲಾ ಅಂಶಗಳು ಸಂವಿಧಾನದಲ್ಲಿವೆ. ವಚನ ಮತ್ತು ಸಂವಿಧಾನ ಬೇರೆ ಬೇರೆ ಅಲ್ಲ. ಸಂವಿಧಾನದ ತತ್ವಗಳು ಮತ್ತು ವಚನ ಸಾಹಿತ್ಯದ ಸಂಗತಿಗಳನ್ನು ಪ್ರತಿಯೊಬ್ಬನು ಅಳವಡಿಸಿಕೊಂಡಾಗ ಮಾತ್ರ ದೇಶದ ಪ್ರಗತಿ ಸಾಧ್ಯ.

ಸಮಾಜ ಸುಧಾರಕ ಬಸವೇಶ್ವರರ ವಚನಗಳ ಮೂಲಭೂತ ತತ್ವಗಳು ಸಂವಿಧಾನದ ಆಶಯಕ್ಕೆ ಪೂರಕವಾಗಿವೆ. ದಿನನಿತ್ಯದ ಜೀವನದಲ್ಲಿ ವಚನಗಳ ತತ್ವಗಳನ್ನು ಅರ್ಥಮಾಡಿಕೊಂಡರೆ ಮತ್ತು ಅಳವಡಿಸಿಕೊಂಡರೆ ಸಂವಿಧಾನದ ಆಶಯಗಳನ್ನು ಈಡೇರಿಸಲು ಅವು ಖಂಡಿತವಾಗಿಯೂ ಸಹಾಯ ಮಾಡುತ್ತವೆ. ವಚನಗಳು ಮತ್ತು ಸಂವಿಧಾನದ ಆಶಯಗಳು ಮತ್ತು ಬಸವೇಶ್ವರರು ಯಾವುದೇ ರೀತಿಯ ತಾರತಮ್ಯದಿಂದ ಮುಕ್ತವಾದ ನ್ಯಾಯಯುತ ಸಮಾಜವನ್ನು ಪ್ರಚಾರ ಮಾಡಿದ್ದು ಮಾತ್ರವಲ್ಲದೆ ಭ್ರಷ್ಟ ಆಚರಣೆಗಳಿಂದ ಮುಕ್ತವಾದ ಶುದ್ಧ ಜೀವನವನ್ನು ನಡೆಸುವ ಜನರಿಗೆ ಒತ್ತು ನೀಡಿದ್ದಾರೆ ಎಂಬುದು ವಚನಗಳಿಂದ ಸ್ಪಷ್ಟವಾಗಿದೆ.

ಪ್ರಜಾಸತ್ತೆ ಅಂದರೆ 'ಅನುಸಂಧಾನಾತ್ಮಕ ಸರ್ಕಾರ' ಎಂಬ ಅರ್ಥವೂ ಇದೆ.ವಚನಕಾರರು ಅನುಭವಮಂಟಪದಲ್ಲಿ ಚರ್ಚೆ, ವಿಚಾರ ವಿನಿಮಯ, ಸಂವಾದ, ಅನುಸಂಧಾನ, ಮಾತುಕತೆಗಳನ್ನು ಮಾಡುತ್ತಾ ಆಂತರಿಕ ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ರೂಪಿಸಿದರು.ಪ್ರಜಾಸತ್ತೆಯ ಬಹುಮುಖ್ಯ ಸಂಗತಿಯೆಂದರೆ ಅನುಸಂಧಾನ. ಗದ್ಯ–ಪದ್ಯಗಳ ಮಧ್ಯದ ವಿನ್ಯಾಸ ಹೊಂದಿರುವ ವಚನ ಪ್ರಕಾರವು ವಿಚಾರ ವಿನಿಮಯದ, ಸಂವಾದದ, ಅನುಸಂಧಾನಕ್ಕೆ ಅವಕಾಶ ನೀಡುವ ಕ್ರಮವಾಗಿತ್ತು. ಈ ಕಾರಣದಿಂದಾಗಿ ಅನುಭವ ಮಂಟಪದಲ್ಲಿ ಮಾದಾರ ಚೆನ್ನಯ್ಯ, ದಾಸಿಮಯ್ಯ, ಕಕ್ಕಯ್ಯ, ಹರಳಯ್ಯ, ಬಸವಣ್ಣ, ಅಕ್ಕಮಹಾದೇವಿ, ನುಲಿಯ ಚಂದಯ್ಯ, ಸತ್ಯಕ್ಕ, ಮಡಿವಾಳ ಮಾಚಿದೇವ, ಮಾದಾರ ಧೂಳಯ್ಯ, ಆಯ್ದಕ್ಕಿ ಲಕ್ಕಮ್ಮ, ಕದಿರೆ ರೆಮ್ಮವ್ವೆ ಮುಂತಾದವರು ಒಟ್ಟಿಗೆ ಅನುಭವ ಮಂಟಪದಲ್ಲಿ ಸೇರಿ ವಿಚಾರ ವಿನಿಮಯ ನಡೆಸುತ್ತಿದ್ದರು.

ಸ್ವಾತಂತ್ರ್ಯ–ಸಮಾನತೆ ಮತ್ತು ಸಹೋದರತ್ವಗಳು ಪ್ರಜಾಪ್ರಭುತ್ವದ ಅಡಿಗಲ್ಲುಗಳಾಗಿದ್ದು, ಲಿಂಗ–ವರ್ಗ–ವರ್ಣಗಳ ತಾರತಮ್ಯ ನಿವಾರಣೆ, ಸಮಾನ ಹಂಚಿಕೆ, ಕಾಯಕ ಮತ್ತು ದಾಸೋಹ ಮೊದಲಾದ ಪ್ರಜಾತಂತ್ರ ಚಿಂತನೆಗಳನ್ನು ಜನತೆಯ ಸಮಗ್ರ ಅಭಿವೃದ್ಧಿಗಾಗಿ ವಚನಕಾರರು ಪ್ರತಿಪಾದಿಸಿ **'ನಾವೆಲ್ಲ ಒಂದು ವಿಶ್ವವೆಲ್ಲಾ ಬಂಧು'** ಎನ್ನುವ ಪ್ರಜಾತಂತ್ರ ಪ್ರಜ್ಞೆಯನ್ನು ನೀಡಿದ್ದಾರೆ.

ಪರಾಮರ್ಶನ ಗ್ರಂಥಗಳು

- **ಡಾ. ಟಿ.ಆರ್. ಚಂದ್ರಶೇಖರ (ಜುಲೈ, 2015) :** ಅನುಭವ ಮಂಟಪ ಮತ್ತು ಅನುಸಂಧಾನಾತ್ಮಕ ಪ್ರಜಾಸತ್ತೆ, ಬಸವಪಥ, ಬೆಂಗಳೂರು ಸಂ. ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳವರು.
- **ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು (ಸಂ.) (2020) :** ಆತ್ಮಕಲ್ಯಾಣ, ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾಸಂಘ (ರಿ).
- **ಜನಪ್ರಿಯ ಆವೃತ್ತಿ ಸಮಗ್ರ ವಚನ ಸಂಪುಟಗಳು (2021) :** ಕರ್ನಾಟಕ ಸರ್ಕಾರ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ,
- **ಬಸವರಾಜ ಸ್ವಾಮಿ, (2012) :** ಬಯಲ ಬೀಜಗಳು, ರಾಯಚೂರು ಶ್ರೀ ಬಸವ ಸೇವಾ ಪ್ರತಿಷ್ಠಾನ,
- **ಶ್ರೀ ಯೋಗೀಶ್ ನಿರ್ವಿಕಲ್ಪ (ಮೇ, 2000) :** ಬಸವಣ್ಣನವರ ಸಂದೇಶದಲ್ಲಿ ಪ್ರಜಾಪ್ರತಿನಿಧಿಯ ನೈತಿಕ ಮೌಲ್ಯಗಳು, ಬೆಂಗಳೂರು ಬಸವಪಥ ಸಂ. ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳವರು.
- **ವಚನ ಚಿಂತನ ಮಾಲೆಯ ಸಂಪುಟಗಳು (2015) :** ಬಸವ ಅಧ್ಯಯನ ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
- **ಡಾ.ಎಂ.ಬಿ.ಹೂಗಾರ (ಡಿಸೆಂಬರ್ 2016) :** ವಚನ ಸಾಹಿತ್ಯದಲ್ಲಿ ಪ್ರಜಾತಾಂತ್ರಿಕ ಮೌಲ್ಯಗಳು, ಬೆಂಗಳೂರು ಸಂ. ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳವರು.
- **ಡಾ. ಬಸವರಾಜ ಸಾದರ (2020) :** ಶರಣ ಕ್ರಾಂತಿ ವಿಭಿನ್ನ ಪ್ರತಿಕ್ರಿಯೆಗಳು, ಗದಗ ಲಡಾಯಿ ಪ್ರಕಾಶನ.
- **ಡಾ. ವೀರಣ್ಣ ರಾಜೂರ (2003) :** ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು, ಸಂ. ಶ್ರೀ ಮುರಗೋಡ ಮಹಾಂತ ಶಿವಯೋಗೀಶ್ವರ ಶತಮಾನೋತ್ಸವ ಸ್ಮಾರಕ ಧಾರವಾಡ ಶ್ರೀ ಬಸವೇಶ್ವರ ಪೀಠ, ಡಾ. ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
- **ಡಾ. ಎಚ್. ಎನ್. ಮುರಳೀಧರ (2020) :** ಸುಳಿವ ಜಂಗಮ, ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.

■■

– 60ನೇ ಪುಟದಿಂದ ಮುಂದುವರೆದುದು

ಪರಾಮರ್ಶನ ಗ್ರಂಥಗಳು

- **ನಾಗೇಶ ಹೆಗೆಡೆ :** ಮೂಕ ಪೃಥ್ವಿಗೆ ಮಾತು ಕೊಟ್ಟ ಕಿಶೋರಿ" ಗ್ರೇತಾಥನ್ ಬರ್ಗ್".
- **ಬಸವಣ್ಣನವರ ದೇವರು :** ರಂಜಾನ್ ದರ್ಗಾ.
- **ಬಿ.ಎ. ಸನದಿ :** ಮಹಾತ್ಮಗಾಂಧಿ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಶ್ರೀ ಹಡಪದ ಅಪ್ಪಣ್ಣನವರ ಜೀವನ ಕಥನ

✍ **ಡಾ. ನಾಗಪ್ಪ ಟಿ. ಗೋಗಿ,** ಕನ್ನಡ ಸಹ ಪ್ರಾಧಾಪಕರು, ಸರಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಕಲಬುರಗಿ.

ಭಕ್ತಿ ಭಂಡಾರಿ ಬಸವಣ್ಣನವರ ಆಪ್ತ ಕಾರ್ಯದರ್ಶಿ, ಅನುಭವ ಮಂಟಪದ ಮಹಾನುಭಾವಿ ದಿವ್ಯಶಕ್ತಿ ಹಡಪದ ಅಪ್ಪಣ್ಣನವರು, ಹನ್ನೆರಡನೆಯ ಶತಮಾನದ ಶರಣಜೀವಿ. ಸಮಕಾಲಿನರಲ್ಲಿ ಹಿಂದುಳಿದ ವರ್ಗದಿಂದ ಬಂದ ಶರಣ ಸಮೂಹದಲ್ಲಿ ಎದ್ದು ಕಾಣುವ ವ್ಯಕ್ತಿತ್ವ ಹೊಂದಿದವರು ಅಪ್ಪಣ್ಣನವರು. ಭಕ್ತಿ, ಜ್ಞಾನ ಮತ್ತು ವೈರಾಗ್ಯಗಳಲ್ಲಿ ಅಲ್ಲಮಪ್ರಭುಗಳಿಗೆ ಸರಿಸಮಾನರಾದ ಮರುಳ ಶಂಕರದೇವರು ಹಡಪದ ಅಪ್ಪಣ್ಣನವರನ್ನು **"ಎನ್ನ ಮಹಾತ್ಮನ ಚೇತನವಯ್ಯಾ ಸಂಗನಬಸವಣ್ಣನ ನಿಜಸುಖಿ ಅಪ್ಪಣ್ಣ"** ಎಂದು ಹೊಗಳಿದ್ದಾರೆಂದರೆ ಅಪ್ಪಣ್ಣನವರ ಸ್ಥಾನಮಾನ ಎಂತಹದು ಎಂಬುದು ಅರಿವಾಗುತ್ತದೆ.

ಹಡಪದ ಅಪ್ಪಣ್ಣನವರ ಜನನ, ಬೆಳವಣಿಗೆ ಹಾಗೂ ಕಲ್ಯಾಣಕ್ಕೆ ಯಾವಾಗ ಬಂದರು ಎಂಬುದರ ಬಗ್ಗೆ ಯಾವುದೇ ಕಾವ್ಯ ಮತ್ತು ಪುರಾಣಗಳಲ್ಲಿ ಉಲ್ಲೇಖವಾಗಿಲ್ಲ ಇತ್ತೀಚೆಗೆ ದೇವದುರ್ಗದ ದೊಡ್ಡಪ್ಪತಾತ ಇವರಲ್ಲಿ ದೊರೆತಿರುವ ಕಾಗದ ಪ್ರತಿಯಲ್ಲಿನ ಮಾಹಿತಿ ಪ್ರಕಾರ ಶ್ರೀ ಮನ್ಮಪ ಶಾಲಿವಾಹನ ಶಕೆ 1134 ನೇ ಶಾರ್ವರಿ ನಾಮ–ಸಂವತ್ಸರ ವೈಶಾಖ ಮಾಸೇ ಕೃಷ್ಣ ಪಕ್ಷ ಪಂಚಮಿ ರವಿವಾರ ಬೆಳಗಿನ ಜಾವ 4 ನೇ ಚರಣದಲ್ಲಿ ಜೀವಣ್ಣ ಎಂಬ ಜನ್ಮನಾಮದಿಂದ ಅಪ್ಪಣ್ಣನವರು ಚೆನ್ನವೀರಪ್ಪ ಮತ್ತು ದೇವಮ್ಮರವರ ಏಕೈಕ ಪುತ್ರರಾಗಿ ಜನಿಸಿದರು ಆ ಪುಣ್ಯ ದಂಪತಿಗಳು ಕರ್ನಾಟಕ ರಾಜ್ಯದ ವಿಜಯಪೂರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನಲ್ಲಿ ಮಸಬಿನಾಳ ಎಂಬ ಗ್ರಾಮದ ನಿವಾಸಿಗಳು ಬಾಲಕ ಅಪ್ಪಣ್ಣ ಮಸಬಿನಾಳ ಗ್ರಾಮದ ಶಿವಶಂಕ್ರಯ್ಯ ಸ್ವಾಮಿ ಹಿರೇಮಠ ಇವರಲ್ಲಿ ಮೊದಲಿಗೆ ವಿದ್ಯಾಭ್ಯಾಸ ಪಡೆದರು. ಇವರು ಬಾಲ್ಯದಲ್ಲಿಯೇ ಬಹಳ ತೀಕ್ಷ್ಣ ಬುದ್ಧಿಯುಳ್ಳವರಾಗಿದ್ದು ಮೂರು ವರ್ಷ ಅವರ ಬಳಿ ಅಧ್ಯಯನ ಮಾಡಿದ ಬಳಿಕ ವಿಜಯಪುರದ ಗಣಾಚಾರಿ ಮಠದ ಈಶ್ವರಯ್ಯನವರ ಬಳಿ ಹೆಚ್ಚಿನ ಓದಿಗಾಗಿ ಸೇರಿ ಅಲ್ಲಿ ಓದಿನ ಜೋತೆಗೆ ಶಿವಭಕ್ತಿಯನ್ನು ರೂಢಿಸಿಕೊಂಡರು ಅಪ್ಪಣ್ಣನವರ ತಂದೆ ಓದು ಸಾಕೆಂದು ಮಸಬಿನಾಳಕ್ಕೆ ಕರೆತಂದು ವ್ಯವಸಾಯಕ್ಕೆ ಹಚ್ಚುತ್ತಾರೆ. ಬಾಲ್ಯದಲ್ಲಿ ಪೂಜಾ ಸಂಸ್ಕಾರ ರೂಢಿಸಿಕೊಂಡಿದ್ದರಿಂದ ಅಪ್ಪಣ್ಣನವರಿಗೆ ವ್ಯವಸಾಯ ಅಡ್ಡಿಯಾಯಿತು. ಈ ಕೆಲಸವನ್ನು ವಾಲೀಕಾರ ಭೀಮಪ್ಪನಿಗೆ ಒಪ್ಪಿಗೆ ಪೂಜಾನುಷ್ಟಾನದಲ್ಲಿ ತೊಡಗುತ್ತಾರೆ. ಹೊಲದಲ್ಲಿದ ಜಮ್ಮೆ ಮರದ ಕೆಳಗೆ ಹಗಲು ಆರು ಗಂಟೆ ರಾತ್ರಿ ಆರು ಗಂಟೆ ಅನುಷ್ಠಾನ ಮಾಡುತ್ತಾ ಹಾಗೇ ಯೌವನಾಸ್ಥೆಗೆ ಕಾಲಿಡುತ್ತಾರೆ ಮಗ ಯಾವಗಲೂ ಶಿವಭಕ್ತಿ ರೂಢಿಸಿಕೊಂಡು ಪೂಜಾ ಕೈಂಕರ್ಯದಲ್ಲಿ ಸಂಪೂರ್ಣ ತೊಡಗಿಸಿಕೊಂಡು ತಲ್ಲೀನವಾಗಿರುವುದನ್ನು ಕಂಡು ಚಿಂತಿತರಾದ ತಂದೆ–ತಾಯಿಗಳು ಮಗನ ತಲ್ಲೀನವಾಗಿರುವುದನ್ನು ಕಂಡು ಚಿಂತಿತರಾದ ತಂದೆ–ತಾಯಿಗಳು ಮಗನ ವಿವಾಹ ಮಾಡಲು ತೀರ್ಮಾನಿಸಿ ವಿಜಯಪುರ ಈಶ್ವರಯ್ಯ ಗುರುಗಳ ಬಳಿ ಹೋಗಿ ಮಾತನಾಡುತ್ತಾರೆ. ಗುರುಗಳು ಅಪ್ಪಣ್ಣನನ್ನು ವಿಚಾರಿಸಲಾಗಿ ಆತ ಪೂಜಾ ಅನುಷ್ಠಾನದ ಸಂದರ್ಭದಲ್ಲಿ ಕಂಡ ಪ್ರಸಂಗವನ್ನು ಗುರುಗಳಿಗೆ ತಿಳಿಸುತ್ತಾರೆ ಅವನ ಮನದ ಅಭೀಪ್ಸೆಯಂತೆ ಹಂಪೆಯಲ್ಲಿ ಇದ್ದ ಲಿಂಗಮ್ಮಳನ್ನು ಕಂಡು ವಿವಾಹ ಮಾಡಿಸುತ್ತಾರೆ. ಅಪ್ಪಣ್ಣ ಮತ್ತು ಲಿಂಗಮ್ಮ ಇಬ್ಬರಿಗೂ ಬಾಲ್ಯದಲ್ಲಿಯೇ ಹಂಪಿ ಪೀಠಾಧೀಶರಾಗಿದ್ದ ಶ್ರೀ ಚೆನ್ನಮಲ್ಲೇಶ್ವರರಲ್ಲಿ ಶಿವದೀಕ್ಷೆಯಾಗಿತ್ತು. ಇವರಿಬ್ಬರು ತಮ್ಮ ವಚನಗಳಲ್ಲಿ ಚೆನ್ನಮಲ್ಲೇಶ್ವರರನ್ನು ಸುತ್ತಿಸುವುದರಿಂದ ಬಾಲ್ಯದಲ್ಲಿ ಗುರುಗಳಾಗಿದ್ದರು ಎಂಬುದು ತಿಳಿಯುತ್ತದೆ. ಬಸವಣ್ಣನವರ ಆಪ್ತರಾಗಿ ಅಪ್ಪಣ್ಣ ನಡೆದು ಬಂದ ರೀತಿ ಈ ಕೆಳಗಿನ ವಚನದಲ್ಲಿ ಕಾಣಬಹುದು.

ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು
ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು
ಎನ್ನರಿವು ನಿಮ್ಮ ಘನದೊಳಗೆ ಸವೆದು
ನಿಶ್ಚಲ ನಿಜೈಕ್ಯವಾಗಿ
ಬಸವಪ್ರಿಯ ಕೂಡಲ ಚೆನ್ನಸಂಗಯ್ಯಾ
ನೀ ನಾನೆಂಬುದೇನಾಯಿತ್ತೆಂದರಿಯೆನು.

ಅಪ್ಪಣ್ಣನವರು ಬಸವಣ್ಣನವರಿಗೆ ತಮ್ಮ ತನು ಮನವನ್ನು ಅರ್ಪಿಸುವುದರ ಜೊತೆಗೆ ಕಾಯಾ ವಾಚಾ ಮನಸಾ ಏಕೈಕ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದರು. ಅವರಲ್ಲಿರುವ ಜ್ಞಾನವನ್ನು ಬಸವಣ್ಣನವರ ನೆನೆಯುವುದಕ್ಕೆ ಬಳಸಿಕೊಳ್ಳುತ್ತೇವೆ ಎಂದು ಈ ವಚನದಲ್ಲಿ ಹೇಳುವುದರ ಮೂಲಕ ಇಡೀ ತಮ್ಮ ಶರೀರವೇ ಬಸಮಯವಾಗಿಸಿಕೊಂಡಿರುವುದನ್ನು ಕಾಣುವುದರ ಜೊತೆಗೆ ತಮ್ಮ ವಚನದ ಅಂಕಿತದಲ್ಲಿ ಬಸವಪ್ರೀಯ ಪದ ಬಳಕೆ ಮಾಡಿರುವುದು ಬಸವಣ್ಣನವರ ಬಗ್ಗೆ ಹೊಂದಿದ್ದ ಭಕ್ತಿ ಮತ್ತು ಪ್ರೀತಿಯ ಬಗ್ಗೆ ತಿಳಿಯುತ್ತದೆ.

ಅಪ್ಪಣ್ಣನವರು ಕಾಯಕದ ಬಗ್ಗೆ ಹೊಂದಿದ್ದ ಗೌರವವನ್ನು ಕಂಡು ಬಸವಣ್ಣನವರು ಅಪ್ಪಣ್ಣನವರನ್ನು ತಮ್ಮ ಆಪ್ತ ಸಹಾಯಕರನ್ನಾಗಿ ಮಾಡಿಕೊಂಡಿದ್ದರು ಜೊತೆಗೆ ಮಹಾಮನೆ ಮತ್ತು ಅನುಭವಮಂಟಪದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ತಮ್ಮ ಪಾಲಿನ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಿದ್ದರು ಬಸವಣ್ಣನವರನ್ನು ಕಾಣಲು ಮಹಾಮನೆಗೆ ಯಾರಾದರೂ ಜಂಗಮರು ಬಂದರೆ ಮೊದಲು ಹಡಪದ ಅಪ್ಪಣ್ಣನವರನ್ನು ಭೇಟಿಯಾಗಿ ನಂತರ ಬಸವಣ್ಣನವರನ್ನು ಕಾಣುತ್ತಿದ್ದರು ಯಾರೇ ಜಂಗಮರು ಬಂದರೆ ಅವರನ್ನು ಪರೀಕ್ಷಿಸುತ್ತಿದ್ದರು ಎಂಬುದಕ್ಕೆ ಕೆಳಗೆ ಸೂಚಿಸಿರುವ ಅವರ ವಚನಗಳೇ ಸಾಕ್ಷಿಯಾಗಿವೆ.

"ಅಂತರಂಗದಲ್ಲಿ ಆಸೆ, ಬಹಿರಂಗದಲ್ಲಿ ಕ್ರೋಧ
ಭಾವಕ್ಕೆ ವೇಷ, ಪ್ರಾಣಕ್ಕೆ ರೋಷ, ಕಾರ್ಯಕ್ರಮದ
ಇಂತಿವನಿಂಬಿಟ್ಟುಕೊಂಡು ನಾವು ಜಂಗಮವೆಂದು ಸುಳಿದರೆ
ಹೇಯವಿಲ್ಲದ ಭಕ್ತರು ವೇಷವಕಂಡು ಪೂಜೆಯ ಮಾಡಿದರೆ
ಆಶನಕ್ಕೆ ಅನ್ನವನಿಕ್ಕಿದರೆ, ಶೀತಕ್ಕೆ ರಗಟೆಯಕೊಟ್ಟರೆ ಅವರಿಗದೆ ಸಹಜ
ನಿಮ್ಮ ನೀವು ನೋಡಲಿಲ್ಲವೆ ?
ನಾವು ದೇವರಾದೆವೆಂದು ವಿಚಾರಿಸಿ ನೋಡಿ, ಉಭಯವ ಮೆಟ್ಟಿನಿಂದು
ಅಭವನೆಂಬ ಹೆಸರಿಗೆ ಸಂದವರಿಗೆ ಸುಲಭದಿಂದ ಜಗವೆಲ್ಲವು
ನಮೋ ನಮೋ ಎಂಬುದು
ಬಸವಪ್ರೀಯ ಕೂಡಲಚೆನ್ನಬಸವಣ್ಣ

ಈ ಉಭಯದ ಭೇದವ ನೀವೆ ಬಲ್ಲಿ ಎಂದು ಹೇಳುವುದರ ಮೂಲಕ ಜಂಗಮರ ನಡೆ ನುಡಿಗಳ ಬಗ್ಗೆ ಎಚ್ಚರಿಸುತ್ತಿದ್ದರು.

ಅಪ್ಪಣ್ಣನವರು ಹಡಪದ ಕಾಯಕ ಮಾಡುತ್ತಿದ್ದರು ಹಡಪ ಎಂಬ ಪದಕ್ಕೆ ಎರಡು ರೀತಿ ಅರ್ಥವಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

1. ಎಲೆ ಅಡಿಕೆಗಳನ್ನು ಇಟ್ಟುಕೊಳ್ಳುವ ಚೀಲ,

2. ಕ್ಷೌರಿಕನ ಸಾಮಾನುಗಳ ಕೈ ಪೆಟ್ಟಿಗೆ.

ಇವೆರಡರಲ್ಲಿ ಯಾವ ಕಾಯಕವನ್ನು ಮಾಡುತ್ತಿದ್ದರು ಎಂದು ನಿರ್ಣಯಿಸುವುದು ಕಷ್ಟ ಆದರೂ ಅವರ ಒಂದು ವಚನ ಇಂತಿದೆ.

"ದೇವ ದೇವ ಮಹಾಪ್ರಸಾದ
ನಿಮ್ಮ ಶರಣರ ಮನೆಗೆ ಸವಿಗೆಯ ಬಂಟ ನಾನಲ್ಲಯ್ಯಾ
ತನುಮನಧನವ ಹಿಂದಿಕ್ಕಿಕೊಂಡಿಪ್ಪ ವಂಚಕ ನಾನಯ್ಯ
ನಿಮ್ಮ ಶರಣರು ಎನ್ನಿಚ್ಚೆಗೆ ಬಪ್ಪರೆ ?
'ತಮಭಿದತ್ತೋ ಶೃತಿರಪಿ" ಎನಲು
ಎನ್ನ ನುಡಿ ನಿಮ್ಮ ಶರಣ ತಾಗ ಬಲ್ಲುದೆ ?
ಹಣೆಯ ಹೊಣೆಯ ತೋರಿ ಉದರವ ಹೊರೆವಂತೆ
ನಿಮ್ಮ ಮರೆಯಲಡಗಿರ್ಪ ಹಡಪಿಗ ನಾನಯ್ಯಾ
ಬಸವಪ್ರಿಯ ಕೂಡಲಚೆನ್ನಸಂಗನ ಶರಣರು ಎನ್ನ ಮಾತಿಗೆ
ನೀವೆ ಹೋಗಿ ಬಿಜಯಂಗೈಸಿಕೊಂಡು ಬಾರಾ ಸಂಗನ ಬಸವಣ್ಣಾ

ಈ ವಚನದಲ್ಲಿ ಉಲ್ಲೇಖವಾಗಿರುವ **"ಹಡಪಿಗ"** ಎಂಬ ಶಬ್ದವು ಅಪ್ಪಣ್ಣನವರ ಕಾಯಕವನ್ನು ಸೂಚಿಸುತ್ತದೆ ಎಂದು ಹೇಳಬಹುದು ಈ ಆಧಾರದಿಂದ ಬಸವಣ್ಣನವರಿಗೆ ಮತ್ತು ಬಸವಾದಿ ಪ್ರಮಥರ ಕ್ಷೌರ ಮಾಡುವ ಕಾಯಕ ಅವಲಂಬಿಸಿದ್ದರೆಂದು ನಂಬಬಹುದಾಗಿದೆ. ಹಡಪದ ಅಪ್ಪಣ್ಣನವರು ಜೀವನದ ಸಾರ್ಥಕತೆಗೆ ಬೇಕಾಗುವ ಪಂಚ ಸೂತ್ರಗಳನ್ನು ತಮ್ಮೊಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

ವಂದನೆಗೆ ನಿಲ್ಲಬೇಡ, ನಿಂದೆಗಂಜಿ ಓಡಲಿಬೇಡ
ಹಿಂದುಮುಂದು ಆಡಲಿಬೇಡ, ಸಂದೇಹಗೊಳಲಿ ಬೇಡ
ದ್ವಂದ್ವಬುದ್ದಿಯ ಕಳೆದು ನಿಂದಿರೆ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ

ಹೊಗಳಿಕೆಗೆ ಉಬ್ಬಿಮಾರು ಹೋಗಿ ಸಾಧನಾ ಮಾರ್ಗವನ್ನು ಬಿಡಬೇಡ, ಸ್ಥಿತಪ್ರಜ್ಞನಾಗಿರು, ಸುಖ ಬಂದಾಗ ಉಬ್ಬುವುದು, ದುಃಖ ಬಂದಾಗ ಕುಗ್ಗುವುದು ಸರಿಯಲ್ಲ ಯಾರದರೂ ನಿಂದಿಸಿದರೆ ಹೆದರಬೇಡ ಅದಕ್ಕೆ ಪ್ರತ್ಯುತ್ತರ ಕೊಡು ನಿಂದೆಯಿಂದ ಎಚ್ಚೆತ್ತು ಸರಿ ಮಾರ್ಗದಲ್ಲಿ ನಡೆ, ನಿಂದಿಸಿದರೆಂದು ನೀನು ಮಾಡುವ ಕಾಯಕ ಬಿಡಬೇಡ ಹಿಂದು ಮುಂದು ಮಾತಾಡುವುದು, ಹೊಗಳುವುದು, ತೆಗಳುವುದು ಶರಣರ ಲಕ್ಷಣವಲ್ಲ ತುಂಬಿದ ಕೊಡ ತೂಳಕದು ಎಂಬಂತೆ ಇರಬೇಕು ಮುಖ ನೋಡಿ ಮಣೆ ಹಾಕುವ ಪದ್ಧತಿ ಇಂದು ಎಲ್ಲೆಡೆ ಚಾಲ್ತಿಯಲ್ಲಿದೆ ಹೀಗೆ ಮಾಡಬಾರದೆಂದು ಬದುಕಿನ ಸಾರ್ಥಕತೆಗೆ ಬೇಕಾದ ಐದು ಸೂತ್ರಗಳನ್ನು ಇಲ್ಲಿ ಅಪ್ಪಣ್ಣನವರು ನೀಡಿದ್ದು ಇಂದಿಗೂ ಆದರ್ಶ ಪ್ರಾಯವಾಗಿದೆ ಅನುಕರಣ ಯೋಗ್ಯವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯ ಪಟ್ಟಣವಾಗಿದ್ದು ಕಲ್ಯಾಣವನ್ನು ಇಂದು ಬಸವ ಕಲ್ಯಾಣವೆಂದು ಕರೆಯಲಾಗುತ್ತದೆ. ಇದು ಅಂದು ಕಲ್ಯಾಣ ಚಾಲುಕ್ಯರ ರಾಜಧಾನಿಯಾಗಿತ್ತು ಇಲ್ಲಿ ಹಡಪದ ಅಪ್ಪಣ್ಣನವರ ಗುಹೆ ಇದ್ದು ಬಸವಣ್ಣನವರ ಮಹಾಮನೆಯ ಪಕ್ಕದಲ್ಲಿದೆ ಅಪ್ಪಣ್ಣನವರು ಆಯುಷ್ಯ, ಭಾಷೆ ಸಾಯುವ ಮುನ್ನವೆ ನಿಷ್ಪತೆಯಾಗಬೇಕೆಂಬುದು ಬಯಸುವ ವಚನ ಇಂತಿದೆ.

'ಆಗುತಿವೆ ಉದಯ ಮಧ್ಯಾಹ್ನ ಅಸ್ತಮಾನ
ಹೋಗುತಿವೆ ದಿನವಾರ ಮಾಸ ಸಂವತ್ಸರ
ಸಾವುತಿವೆ ಆಯುಷ್ಯ ಭಾಷೆ
ಇವರೊಳು ಬೇಗದಿ ತಿಳಿದು ನೀಗಿ ನಿಷ್ಪತ್ತಿಯಾದರೆ
ಬಸವಪ್ರೀಯ ಕೂಡ ಕೂಡಲ ಚೆನ್ನಬಸವಣ್ಣ"

ಅಪ್ಪಣ್ಣ ಅಳಿಮನದವನಲ್ಲ. ದೃಡಸ್ವಭಾವ ಯಾವುದನ್ನೇ ಆಗಲಿ ಸಮಾನಾಗಿ ಸ್ವೀಕರಿಸಿ ಸಾಧಿಸುವುದು ಆತನ ಹುಟ್ಟಿಗುಣ ಹಾಗಾಗಿ ಆಸೆಯನ್ನು ಅಳಿದ ವೇಷವನ್ನು ಮರೆದ, ಜಗದ ಹೇಸಿಯಾಟವನ್ನು ತೊರೆದೇ ಮನವನ್ನು ಲಿಂಗಕ್ಕೆ ಮೀಸಲು ಮಾಡಿದ ಗುರು ಲಿಂಗ ಜಂಗಮ ಈ ತ್ರಿವಿಧವನ್ನು ಏಕವೆಂದು ಭಾವಿಸಿ ಆಚರಿಸಿ ನಿಜಸುಖಿಯಾಗುತ್ತಾನೆ.

ಹಡಪದ ಅಪ್ಪಣ್ಣನವರ 251 ವಚನಗಳು ಮತ್ತು ಅವರ ಪುಣ್ಯಸ್ತ್ರೀ ಲಿಂಗಮ್ಮನ 114 ವಚನಗಳು ಸಿಕ್ಕಿವೆ ಹಡಪದ ಅಪ್ಪಣ್ಣನವರ ಕೆಲವೊಂದು ವಚನಗಳು ಸಂಗಮೇಶ್ವರದ ಅಪ್ಪಣ್ಣನವರ ವಚನಗಳಲ್ಲಿ ಸೇರಿಹೋಗಿವೆ ಎಂದು ಕೆಲವು ವಿದ್ವಾಂಸರು ತಿಳಿಸಿದ್ದಾರೆ ಅಪ್ಪಣ್ಣನವರ ಅಲ್ಲಗಳೆಯಲಿಕ್ಕಾಗದು.

ಇವರ ವಚನಗಳಲ್ಲಿ ಸರಳತೆ, ಸಹಜತೆ ಹಾಗೂ ಕಥನಶೈಲಿಯನ್ನು ಕಾಣಬಹುದು ಅವರ ವಚನಗಳಲ್ಲಿ ಕೆಲವು ವಚನಗಳ ನಿರ್ವಚನವನ್ನು ಕಾಣಬಹುದು ಅಪ್ಪಣನವರು ಶಿವಕಳೆಯ ಬಗ್ಗೆ ಈ ಕೆಳಗಿನ ವಚನದಲ್ಲಿ ಪ್ರಸ್ತಾಪಿಸಿದ್ದಾರೆ.

"ಶರಣನ ಅಂಗವು ಎಂತಿಪ್ಪುದೆಂದರೆ
ವಾರಿಕಲ್ಲು ನೀರೊಳಗೆ ಬಿದ್ದಂತೆ
ಸಾರ ಒಲಿದು ಶರಧಿಯ ಕೂಡಿದಂತೆ
ಅರಗಿನ ಬೊಂಬೆಗೆ ಉರಿಯಸರವ ಮಾಡಿದಂತೆ
ಪರಿಮಳವ ಕೂಡಿದ ವಾಯುವಿನಂತೆ
ಆಡಂಬರವ ಮಾಡಿ ತೋರಿದ ಆಕಾಶದಂತೆ
ಇದೀಗ ಶರಣರಂಗ ಇಧರಂದವ ತಿಳಿದರೆ ಐಕ್ಯ
ಇದರೊಳು ನಿಶ್ಚಿಂತನಾದರೆ ನಿರವಯವು
ಬಸವಪ್ರಿಯ ಕೂಡಲಚೆನ್ನಬಸವಣ್ಣಾ"

ಶರಣನ ಹಿರಿಮೆಯನ್ನು ಈ ವಚನದಲ್ಲಿ ಪ್ರಶಂಶಿಸಲಾಗಿದೆ ಶರಣರಾದವರ ದೇಹ ಇತರರ ದೇಹದಂತೆ ಇರದೆ ಶಿವನಲ್ಲಿ ಬೆರೆತ ದೇಹವಾಗಿರುತ್ತದೆ. ಶರಣನ ಅಂಗವು ಹೇಗಿರುವುದೆಂದರೆ ಆಣೆಕಲ್ಲು ನೀರೊಳಗೆ ಬಿದ್ದು ನೀರಲ್ಲಿ ಒಂದಾದಂತೆ ಭೂಮಿಯೊಳಗಿನ ಜೀವಪೋಷಕ ದ್ರವ್ಯಗಳಾದ ನೀರು ಹಾಲು ಮುಂತಾದ ದ್ರವಗಳು ಹರಿದು ಬಂದು ಸಾಗರದಲ್ಲಿ ಒಂದಾದಂತೆ, ಮೇಣದ ಬೊಂಬೆಗೆ ಅನ್ನಿಯ ಸರವ ಹಾಕಿದಾಗ ಮೇಣಕರಗಿ ಉರಿಯಲ್ಲಿ ಬೆರತಂತೆ, ಪರಿಮಳವು ತನ್ನ ಸುತ್ತಮುತ್ತಲಿನ ವಾಯುವಿನಲ್ಲಿ ಬಂದಾದಂತೆ ವಿಶಾಲವಾದ ಅಖಂಡ ಬಳ್ಳಿ ಬಯಲಿನ ಆಕಾಶದಂತೆ, ಈ ರೀತಿಯಲ್ಲಿ ಲಿಂಗದಲ್ಲಿ ಲೀನವಾಗಿದೆ ಶರಣರ ಅಂಗ ಇದರ ರಹಸ್ಯವನ್ನು ಅರಿಯುವುದೆ ನಿಶ್ಚಂತನಾದರೆ ಮೇಲಿನ ಮೂಲವಸ್ತುಗಳು ಮತ್ತೊಂದರಲ್ಲಿ ನಿರಾಕಾರನಾಗಿ ಶಿವಕಳೆ ಹೊಂದುವನು ಸನ್ಮಾರ್ಗದ ಬದುಕಿನ ಕ್ರಮವೇ ಭಕ್ತಿ. ಇದನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮುಕ್ತಿಗೆ ಶರಣರ ಜೀವನದಲ್ಲಿ ಸರಸ– ವಿರಸಗಳು ಇದ್ದರೂ ಸಂಸಾರದಲ್ಲಿದ್ದು ಸಂಸಾರವನ್ನು ಗೆದ್ದವರು. ಅಂತಹ ಶರಣರ ನೆಲೆಯ ನಿಜವಾದ ನೆಲೆ.

ಹಡಪದ ಅಪ್ಪಣ್ಣನವರು ಲೌಕಿಕವಾಗಿ ಮಾತ್ರವಲ್ಲದೇ ಪಾರಮಾರ್ಥಿಕವಾಗಿಯೂ ಅಪಾರ ಜ್ಞಾನ ಪಡೆದಿದ್ದರು ಎಂಬುದಕ್ಕೆ ಅವರು ರಚಿಸಿರುವ ವಚನಗಳೇ ಸಾಕ್ಷಿ. ಅವರ ವಚನಗಳು ವಿಚಾರವಂತಿಕೆ ಆಚಾರವಂತಿಕೆಯಿಂದ ಕೂಡಿ ಸುಸಂಸ್ಕೃತ ಸಮಾಜದ ನಿರ್ಮಾಣಕ್ಕೆ ಕಾರಣವಾಗಿವೆ.

ಅಪ್ಪಣ್ಣನು 12 ನೇ ಶತಮಾನದಲ್ಲಿ ಬಸವಾದಿ ಶರಣರ ಒಡನಾಡಿಯಾಗಿ ಬದುಕಿದ ಶ್ರೇಷ್ಠ ಶರಣ ವಚನಕಾರನಾಗಿದ್ದು, ಬಸವಣ್ಣನರು ನಡೆಸುವ ದಾಸೋಹದ ಮನೆಯಲ್ಲಿ ಈತನದೇ ಉಸ್ತುವಾರಿ ಈತನೇ ಎಷ್ಟೋ ಸಂದರ್ಭಗಳಲ್ಲಿ ಬಸವಣ್ಣನವರಿಗೆ ಸೂಚನೆಗಳನ್ನು ಮಾರ್ಗದರ್ಶನವನ್ನು ನೀಡುತ್ತಿದ್ದ ಈತನ ಸೂಚನೆಗಳನ್ನು ಬಸವಣ್ಣ ಮಾನ್ಯ ಮಾಡುತ್ತಿದ್ದ ಹರಳಯ್ಯ ಮಧುವಯ್ಯಗಳ ಪ್ರಸಂಗದಿಂದ ಕ್ರಾಂತಿಯಿಂದ ಬಸವಣ್ಣನವರೊಡನೆ ಕೂಡಲಸಂಗಮದವರೆಗೆ ಹೋಗಿ

– 101ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕುರುಬ ಮಹಿಳೆ : ಡಾ. ಚನ್ನಪ್ಪ ಕಟ್ಟಿ ಅವರ ಸಂಶೋಧನೆ

✍ **ಡಾ. ರಾಜಶ್ರೀ ಎಸ್. ಮಾರನೂರ,** ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ನವಬಾಗ ವಿಜಯಪುರ.

ಜಗತ್ತಿನ ಮಹತ್ವದ ತತ್ವಜ್ಞಾನಿಗಳಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರು 'A society can not develop only by the men but it needs women power too' ಎಂದಿದ್ದಾರೆ. ಅಂದರೆ ಒಂದು ಕುಟುಂಬ, ಒಂದು ಸಮುದಾಯ ಅಥವಾ ಸಂಸ್ಕೃತಿಯು ಕೇವಲ ಪುರುಷನಿಂದ ಮಾತ್ರ ನಿರ್ಮಿತವಾಗುವುದಿಲ್ಲ. ಹಾಗೆಯೇ ಅದರ ಬೆಳವಣಿಗೆ, ಯಶಸ್ಸು ಕೇವಲ ಪುರುಷನಿಗೆ ಸೀಮಿತವಲ್ಲ. ಸಮಾಜದ ಪ್ರತಿಯೊಂದು ಘಟಕದಲ್ಲಿ ಪುರುಷ ಮತ್ತು ಮಹಿಳೆ ತಮ್ಮದೇ ಆದ ಪಾತ್ರ ನಿರ್ವಹಿಸುತ್ತಾರೆ. ಆದರೆ ಅದನ್ನು ಅಭಿವ್ಯಕ್ತಿಪಡಿಸುವಾಗ ಹೆಣ್ಣನ್ನು ನಿರಾಕರಿಸಿ ಕೇವಲ ಪುರುಷ ಸ್ಥಾಪಿತ ವಿಚಾರಗಳನ್ನು ಮಾತ್ರ ಪ್ರಚುರಪಡಿಸಿ ನಿರಂತರವಾಗಿ ಹೆಣ್ಣನ್ನು ಶೋಷಿಸುತ್ತಾ, ಹೀಯಾಳಿಸುತ್ತಾ ಪುರುಷ ವರ್ಗ ಮೇಲುಗೈ ಸಾಧಿಸಿದೆ. ಯಾವುದೇ ಒಂದು ಸಂಸ್ಕೃತಿಯ ಮೂಲ ನೆಲವೇ ಹೆಣ್ಣು. ಆದರೆ ಮೂಲವನ್ನೇ ಗೌಣಗೊಳಿಸುವಂಥ ಪ್ರಕ್ರಿಯೆಗಳು ಶತಮಾನ ದಿಂದಲೂ ಎಲ್ಲ ಸಮುದಾಯಗಳಲ್ಲಿ, ಸಂಸ್ಕೃತಿಗಳಲ್ಲಿ ನಿರಾಂತಕವಾಗಿ ನಡೆದಿದೆ. ಹೀಗೆ ನಿರ್ದಿಷ್ಟ ಸಮುದಾಯ ಒಂದರ ಸ್ತ್ರೀಲೋಕವನ್ನು ಸಂಶೋಧಿಸಿ ಅನಾವರಣಗೊಳಿಸುವ ಕಾರ್ಯವನ್ನು ವಿದ್ವಾಂಸರು ಆಗಾಗ ಅಲ್ಲಲ್ಲಿ ಮಾಡುತ್ತಾರೆ. ಅಕ್ಷರ ಲೋಕದ ತೀವ್ರ ಬೆಳವಣಿಗೆಯಿಂದ ಹಲವಾರು ಸಂಶೋಧನಾ ಪ್ರಬಂಧಗಳು ಮಂಡನೆಗೊಂಡು ಸ್ತ್ರೀ ಶಕ್ತಿಯ ಸತ್ಯಾಂಶವನ್ನು ಲೋಕಕ್ಕೆ ತಿಳಿಸುವ ಕಾರ್ಯ ಸಾಗಿವೆ. ಆ ದಿಶೆಯಲ್ಲಿ ನಾಡಿನ ಪ್ರಮುಖ ಸಂಶೋಧಕರಾದ ಸಿಂದಗಿಯ ಡಾ. ಚನ್ನಪ್ಪ ಕಟ್ಟಿ ಅವರು ಬಹಳ ನಿರ್ದಿಷ್ಟ ವಿಷಯಗಳ ಮೇಲೆ ನಿಖರವಾದ ಸಂಶೋಧನೆ ಮಾಡಿ ಪ್ರಕಟಿಸುವಲ್ಲಿ ನಿಸ್ಸೀಮರು. ಅವರು ಹಾಲುಮತಕ್ಕೆ ಕೊಟ್ಟ ಹಲವಾರು ಕಾಣಿಕೆಗಳಲ್ಲಿ 'ಕುರುಬ ಮಹಿಳೆ' ಎಂಬ ಸಂಶೋಧನಾ ಪ್ರಬಂಧಗಳ ಸಂಕಲನವೂ ಒಂದು. ವಿಶೇಷವಾಗಿ ಡಾ. ಚನ್ನಪ್ಪ ಕಟ್ಟಿ ಅವರು ತಮ್ಮ ಸಮಗ್ರ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಮತ್ತು ಪ್ರತಿ ಹಂತದಲ್ಲಿ ಅವಳು ನಿರ್ವಹಿಸುವ ಕೆಲಸ ಜೊತೆಗೆ ಅವಳು ಹೇಗೆ ಈ ಸಮಾಜದ ಚಲನೆಗೆ ಪೂರಕ ಮತ್ತು ಪರಿಪೂರಕ ಎಂಬುದನ್ನುಅಭಿವ್ಯಕ್ತಿ ಮಾಡುತ್ತಾ ಅವಳ ಕೃತತ್ವ ಶಕ್ತಿಯ ಅನಾವರಣ ಮಾಡಿದ್ದಾರೆ. ಸ್ತ್ರೀ ಲೋಕದ ವಿಷಯಕ್ಕೆ ಹೆಚ್ಚು ಒತ್ತು ಕೊಟ್ಟ ನಮ್ಮ ನಾಡಿನ ಮಹತ್ವದ ಸಾಹಿತಿಗಳಾಗಿದ್ದಾರೆ. ಈ 'ಕುರುಬ ಮಹಿಳೆ' ಎಂಬ ನಿರ್ದಿಷ್ಟ ಸಮುದಾಯದ ಮಹಿಳೆ ಮತ್ತು ಅವಳ ಹಿಂದೆ ಅಡಗಿರುವ ಕರಾಳ ಕಥೆಯೇ ಈ ಸಂಶೋಧನೆಗೆ ಪ್ರೇರಣೆ ಆಗಿರಬಹುದು ಎಂಬುದು ಈ ಕೃತಿ ಓದಿದ ಬಳಿಕ ಅರಿವಿಗೆ ಬರುತ್ತದೆ.

"ಯಾವುದೇ ಸಮುದಾಯದ ಸಾಂಸ್ಕೃತಿಕ ಅಧ್ಯಯನವು ಅದರ ಕ್ರಿಯಾಶೀಲ ಭಾಗವಾದ ಮಹಿಳೆಯರೇ ಆಗಿರುತ್ತಾರೆ**"** ಎಂಬ ಸತ್ಯದಡಿಯಲ್ಲಿ ಡಾ. ಚನ್ನಪ್ಪ ಕಟ್ಟಿ ಅವರು ಕುರುಬ ಸಮುದಾಯದಲ್ಲಿ ಮಹಿಳೆಯೊಬ್ಬಳನ್ನು ಹೇಗೆ ಗೌಣಗೊಳಿಸುತ್ತಾ ಅವಳನ್ನು ದಮನ ಮಾಡಲು ಯಾವರೀತಿ ನಿರಂತರ ಪ್ರಯತ್ನ ನಡೆಯುತ್ತದೆ ಎಂಬುದನ್ನು **'ಕುರುಬ ಮಹಿಳೆ'** ಎಂಬ ಗ್ರಂಥದಲ್ಲಿ ಸತ್ಯದ ಒರೆಗಲ್ಲಿಗೆ ಹಚ್ಚಿ ತೋರಿಸಿದ್ದಾರೆ. ಡಾ.ಎಂ.ಎಂ ಕಲಬುರ್ಗಿಯವರ ಕನಸಿನ ಕೂಸಾದ ಹಂಪಿ ವಿಶ್ವ ವಿದ್ಯಾಲಯ ಈ ಕೃತಿಯನ್ನು ಪ್ರಕಟಿಸಿದೆ. ವಿಶ್ವ ವಿದ್ಯಾಲಯದ ರಜತ ಮಹೋತ್ಸವ ಹಾಗೂ ಹಾಲುಮತ ಅಧ್ಯಯನ ಪೀಠದ ದಶಮಾನೋತ್ಸವ ಸಂದರ್ಭದಲ್ಲಿ ಈ ಕೃತಿ ಲೋಕಾರ್ಪಣೆಗೊಂಡಿದೆ. ಒಂದು ನೂರು ಪುಟಗಳುಳ್ಳ, ಒಂಬತ್ತು ಪ್ರಮುಖ ಅಧ್ಯಾಯಗಳನ್ನು ಒಳಗೊಂಡ ಈ ಕೃತಿಯು ನೇರವಾಗಿ ಅಧ್ಯಯನದ ಪ್ರಮುಖ್ಯಾಂಶ 'ಕುರುಬ ಮಹಿಳೆ' ಎಂಬ ಶೀರ್ಷಿಕೆ ನೀಡಲಾಗಿದೆ. ಹಾಗೂ ಕುರಿಗಳನ್ನು ಕಾಯುತ್ತಿರುವ ಹೆಣ್ಣುಮಗಳ ಆಕರ್ಷಕ ಮುಖಪುಟವನ್ನು ಹೊಂದಿದೆ. 2017 ರಲ್ಲಿ ಪ್ರಕಟವಾದ ಈ ಕೃತಿಗೆ ಅಂದಿನ ಕುಲಪತಿಗಳಾದ ಡಾ. ಮಲ್ಲಿಕಾ ಘಂಟಿ ಮುನ್ನುಡಿ, ಬೆನ್ನುಡಿಗಳನ್ನು ಬರೆದಿದ್ದಾರೆ. ಅಂತಹ ಅಪರೂಪದ ಕಾರ್ಯಕ್ರಮದಲ್ಲಿ ಲೋಕಾರ್ಪಣೆ ಗೊಂಡ ಈ ಕೃತಿಯು ಡಾ. ಚನ್ನಪ್ಪ ಕಟ್ಟಿಯವರ ಅತ್ಯಂತ ನಿಷ್ಟುರ ಸಂಶೋಧನೆಯೊಂದು ಪ್ರಕಟವಾಗಿ ಕುರುಬ ಮಹಿಳೆಯ ಬಗ್ಗೆ ಸತ್ಯ ತಿಳಿಯಲು ಸಾಧ್ಯವಾಗಿದೆ. ಕುರುಬ ಮಹಿಳೆಯ ಬಗ್ಗೆ ಮಾಡಿದ ಸಂಶೋಧನೆಯು ಬಹು ವಿಧಗಳಲ್ಲಿ ಪರಾಮರ್ಶೆ ಮಾಡಿದ್ದಾರೆ. ಹಾಲುಮತಕ್ಕೆ ಸಂಬಂಧಿಸಿದ ಪುರಾಣ ಕಥನಗಳಲ್ಲಿ, ಚರಿತ್ರೆಯಲ್ಲಿ, ಹಾಲುಮತ ಸಮಾಜದಲ್ಲಿ, ಸಂಪ್ರದಾಯಗಳಲ್ಲಿ, ಕುಟುಂಬದಲ್ಲಿ, ಧಾರ್ಮಿಕ ಮತ್ತು ಶೈಕ್ಷಣಿಕ, ಕಲೆ ವಾಸ್ತು ಶಿಲ್ಪ, ರಾಜಕೀಯ ಕ್ಷೇತ್ರಗಳಲ್ಲಿ ಹೆಣ್ಣಿನ ಅಸ್ತಿತ್ವವನ್ನು ಮತ್ತವಳ ಮೇಲಾದ ಶೋಷಣೆ, ದಬ್ಬಾಳಿಕೆಯನ್ನು ಕಟ್ಟಿಕೊಡುವುದರ ಮೂಲಕ ಆಧುನಿಕ ಸಮಾಜದ ಕಣ್ಣು ತೆರೆಸುವ ಕಾರ್ಯ ಮಾಡಿದ್ದಾರೆ. ಹೆಣ್ಣಿಗೆ ಮೊಲೆ ಮುಡಿ ಬಂದಿದ್ದೆ ತಪ್ಪಾ ? ಎಂದು ಪ್ರಶ್ನಿಸುವ ಮೂಲಕ ಪ್ರಾರಂಭಗೊಳ್ಳುವ ಈ ಪ್ರಬಂಧಗಳು ಓದುಗನ ಮನಸ್ಸನ್ನು ತೀವ್ರತರವಾಗಿ ಕಾಡುತ್ತವೆ. ಜೊತೆಗೆ ಕಾರಣವಿಲ್ಲದೇ ಅದು ಹೇಗೆ ಹೆಣ್ಣೊಬ್ಬಳು ಶತಶತಮಾನಗಳಿಂದ ಅಪಮಾನಕ್ಕೆ ಈಡಾಗುತ್ತಲೇ ಇರುವುದು ಹಾಗೂ ಅದು ಅಪಮಾನವೇ ಅಲ್ಲ ಎನ್ನುವ ಗಂಡಿನ ಮನಸ್ಥಿತಿಯ ಬಗ್ಗೆ ಮರುಕ ಪಡುತ್ತಾರೆ. ಯಾವುದೇ ಮುಲಾಜಿಲ್ಲದೇ ಸಂಶೋಧಕನ ಅನ್ವೇಷಣಾ ಬುದ್ಧಿ ಮತ್ತು ಚಿಕಿತ್ಸಕ ಚಿಂತನೆ ನಿರ್ಭೀಡೆಯಿಂದ ಕೆಲಸ ಮಾಡಿದೆ ಎಂದು ಹೇಳಬೇಕು. ಇಂಥ ಸಂಶೋಧನೆಗಳು ಇಂದಿನ ಪೀಳಿಗೆಗೆ ಅಗತ್ಯ ಮತ್ತು ವಿಶ್ವ ವಿದ್ಯಾಲಯದ ಮಟ್ಟದಲ್ಲಿ ನಿರಂತರವಾಗಿ ವಿದ್ಯಾರ್ಥಿಗಳಿಗೆ ಓದಲು ಸಿಗಬೇಕಾದ ಮಹತ್ವದ ಕೃತಿಯಾಗಿದೆ.

ಮಹಿಳೆಯನ್ನು ಅಧ್ಯಯನ ಮಾಡಬೇಕಾದರೆ ಅವಳ ಅಸ್ತಿತ್ವದ ಪ್ರತಿ ಕ್ಷೇತ್ರವನ್ನು ಹಾಗೂ ಅವಳ ಭಾವಲೋಕವನ್ನು ತಟ್ಟುವ ಪ್ರತಿ ವಿಭಾಗವನ್ನು ಅಭ್ಯಸಿಸಲೇಬೇಕು. ಸಮಾಜದ ಸಾಂಸ್ಕೃತಿಕ ಐತಿಹಾಸಿಕ, ರಾಜಕೀಯ ಆಧ್ಯಾತ್ಮಿಕ ಹಾಗೆಯೇ ಪರಂಪರೆ ಕುಟುಂಬ, ವ್ಯವಸ್ಥೆ ಮುಂತಾದ ಕ್ಷೇತ್ರಗಳ ಇತಿಹಾಸ ಅರಿತಾಗ ಅವಳ ಸ್ಥಾನ ಮಾನ ಹಾಗೂ ಅವಳಿಗೆ ಮಾಡಿದ ಅಪಮಾನಗಳ ಲೆಕ್ಕ ಹತ್ತುತ್ತದೆ. ಆ ದಿಶೆಯಲ್ಲಿ ಚನ್ನಪ್ಪ ಕಟ್ಟಿ ಅವರು ಕುರುಬ ಸಮುದಾಯದ ಮಹಿಳೆಯ ಜೀವನದ ಪ್ರತಿ ಘಟಕವನ್ನು ಹಾಗೂ ಸಮಾಜದ ಪ್ರತಿ ನಿಯೋಗವನ್ನು ಅದರಲ್ಲಿಯ ಮಹಿಳೆಯನ್ನು ತೌಲನಿಕವಾಗಿ ಹಾಗೂ ತಲಸ್ಪರ್ಷಿಯಾಗಿ ಸಂಬಂಧಿಸಿದ ಗ್ರಂಥಗಳ ಅಧ್ಯಯನ ಹಾಗೂ ಅವುಗಳ ಮೇಲೆ ತಮ್ಮದೇ ಆದ ಚಿಂತನೆ ಮಾಡಿ ನಿರ್ಣಯಗಳನ್ನು ಮಾಡಿದ್ದಾರೆ.

'ನಾವು ಎಂತಿರುತ್ತೇವೆಯೋ ಅದು ನಮ್ಮ ಸಂಸ್ಕೃತಿ' ಎಂಬುದು ಸಮಾಜಶಾಸ್ತ್ರೀಯ ವ್ಯಾಖ್ಯೆಯಾಗಿದೆ. ಹಾಗೆಯೇ ಸಂಶೋಧಕನು ತಾನು ಅಧ್ಯಯನ ಮಾಡುವ ವಿಷಯ ವಸ್ತುವಿನ ಬಗೆಗೆ ಬಹಳ ನಿರ್ದಿಷ್ಟವಾಗಿ

ಹಾಲುಮತ ಜನಾಂಗದ ಪರಂಪರೆಯ ಜನರು ಕುರುಬ, ಗೊರವ, ಗೊಂಡ, ಯಾದುವಲ್, ಗಡಾಲಿಯಾ, ಅಹೀರ, ಧನಗರ, ಬರೇಲ, ಬಿಲ್ರಾ, ಕಲನಾಲಿಯಾ, ಗೊದಾರಿ, ಗೊಡಿ, ರಾಜಗೊಂಡ, ಹತಗಾರ, ಭಾಗ್ಲಾ ಮುಂತಾದ ಹೆಸರುಗಳಿಂದ ಗುರುತಿಸುವ ಜನರು ವಿಭಿನ್ನ ಸಂಸ್ಕೃತಿಯಲ್ಲಿ ಅದು ಹೇಗೆ ದೇಶದ ಉದ್ದಗಲಕ್ಕೂ ಚದುರಿದ್ದಾರೆ ಮತ್ತು ಈ ದೇಶದ ಮೂಲೆ ಮೂಲೆಯಲ್ಲಿ ಅವರು ನೆಲೆಸಿದ್ದಾರೆ ಎಂಬುದರ ಮೇಲೆ ಬೆಳಕು ಚೆಲ್ಲಿ ಆ ಸಮುದಾಯದಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಹೇಗೆ ಸ್ತ್ರೀ ಪಾತ್ರ ರಚಿಸಲ್ಪಟ್ಟಿದೆ ಮತ್ತು ಅದನ್ನು ಹೇಗೆ ಗೌಣಗೊಳಿಸಲಾಗುತ್ತದೆ ಎಂಬುದನ್ನು ಒರೆಗೆ ಹಚ್ಚುವ ಕಾರ್ಯವನ್ನು ಸಂಶೋಧಕರು ಬಹಳ ಶ್ರದ್ಧೆಯಿಂದ ಮಾಡಿದ್ದಾರೆ. ಅದರಲ್ಲಿ ಕುರುಬ ಸಮುದಾಯ ಮತ್ತು ಹಾಲುಮತ ಜನಾಂಗದ ಮೌಖಿಕ ಸಾಂಸ್ಕೃತಿಕ ಪರಂಪರೆಗಳಾದ ಪುರಾಣ, ಮಹಾಕಾವ್ಯಗಳಲ್ಲಿ ಮಹಿಳೆಗೆ ಯಾವ ರೀತಿಯ ಸ್ಥಾನಮಾನ ಹಾಲುಮತ ಸಮುದಾಯ ನೀಡಿದೆ ಎಂಬುದನ್ನು ಕಂಡು ಕೊಂಡಿದ್ದಾರೆ. ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಸೈದಾಪುರ ಗ್ರಾಮದ ಸಿದ್ದಪ್ಪ ಮೇಟಿ ಎಂಬು ಹಾಡುಗಾರ ಹಾಡಿದ 'ಜನಪದ ಹಾಲುಮತ ಮಹಾ ಕಾವ್ಯದಲ್ಲಿ' ಹೆಣ್ಣನ್ನು ಎಡ ಪಕ್ಕೆಲುವಿನಲ್ಲಿ ಸೃಷ್ಟಿಯಾದ ಹೆಣ್ಣುಗೊಂಬೆ ಎಂತಲೂ, ನೀರಿನಿಂದ ಆವೃತ್ತಗೊಂಡ ಈ ಲೋಕದಲ್ಲಿ ಗಂಡಿನ ರುಂಡ ತಯಾರಾಗಿ ತದನಂತರ ಪುರುಷ ತಯಾರಾದನು ಆನಂತರ ಮಾನವ ಕುಲಕೋಟಿ ಉದಯವಾಯಿತು ಎಂಬ ಕಾವ್ಯದಲ್ಲಿ ಹೆಣ್ಣಿನ ಅಸ್ಥಿತ್ವವೇ ಇಲ್ಲದ ಹಾಗೂ ಸೃಷ್ಟಿ ಉಗಮಕ್ಕೆ ಗಂಡು ಹೆಣ್ಣುಗಳು ಜೀವ ತಳಿಯಲೇಬೇಕು ಎಂಬ ಪರಿಜ್ಞಾನವೂ ಈ ಕಾವ್ಯಗಳು ಹೊಂದಿಲ್ಲ ಎಂಬ ಸತ್ಯವನ್ನು ಡಾ.ಕಟ್ಟಿ ಸಂಶೋಧಿಸಿದ್ದಾರೆ. ಡಾ.ವೀರಣ್ಣ ದಂಡೆ ಅವರ ಜನಪದ ಹಾಲುಮತ ಮಹಾಕಾವ್ಯದಲ್ಲಿ ಹೆಣ್ಣು ಗಂಡಿನ ಉಪ ಉತ್ಪನ್ನವೆಂದೂ ಹಾಗೂ ಅವಳು ಸ್ವತಂತ್ರವಾಗಿ ಹುಟ್ಟಿಲ್ಲ ವೆಂದೂ ಬಿಂಬಿಸುವ ಕಾರ್ಯ ಮಾಡಿವೆ. ಆ ಮೂಲಕ ಹೆಣ್ಣಿನ ಮೇಲೆ ತಮ್ಮ ಹಕ್ಕು ಸಾಧಿಸಲು ಅದು ಹೇಗೆ ಪುರುಷ ವರ್ಗ ಕಥೆ ಕಟ್ಟುತ್ತವೆ ಎನ್ನುವ ಕಟು ಸತ್ಯವನ್ನು ತಿಳಿಸಿದ್ದಾರೆ. ಪ್ರತಿಯೊಂದು ಪುರಾಣ ಮತ್ತು ಜನಪದ ಮಹಾಕಾವ್ಯಗಳು ತಮ್ಮ ಸಾಂಸ್ಕೃತಿಕ ನಾಯಕನ ಉಗಮವನ್ನು ರೋಚಕಗೊಳಿಸುತ್ತಾ ಹಾಗೆಯೇ ಹೆಣ್ಣನ್ನು ಗೌಣಗೊಳಿಸುತ್ತಾ ಸಾಗಿದ್ದಾರೆ ಎಂಬ ಸತ್ಯವನ್ನು ತಿಳಿಸಿದ್ದಾರೆ. ಡಾ.ವೀರಣ್ಣ ದಂಡೆ ಅವರ ಜನಪದ ಹಾಲುಮತ ಮಹಾಕಾವ್ಯದಲ್ಲಿ ಪಾರ್ವತಿಯು ತನ್ನ ಬಲ ಮೊಲೆಯ ಹಾಲನ್ನು ಮಣ್ಣಿಗೆ ಹಾಕಿ ಆ ಮಣ್ಣಿನ ಮೂಲಕ ಗಂಡು ಶಿಸುವನ್ನು ಮತ್ತು ಎಡಮೊಲೆಯ ಹಾಲು ಮಣ್ಣಿಗೆ ಹಾಕಿ ಹೆಣ್ಣು ಶಿಸುವನ್ನು ಪಡೆದಳು ಎಂಬಲ್ಲಿಗೆ ಎಡ ಬಲಗಳೆಂಬ ಮತ್ತು ಎಡಕ್ಕೆ ಹೆಣ್ಣು ಎಂಬ ಪೂರ್ವಾಗ್ರಹ ಪೀಡಿತ ಗಂಡಿನ ಮನಸು ಕೆಲಸ ಮಾಡಿದೆ. ಎಡ ಹೀನವೆಂದೂ ಬಲ ಬಲಾಬಲವೆಂದೂ ಭಿನ್ನತೆ ಸೃಷ್ಟಿಸುವ ಕಾರ್ಯ ಆಗಿದೆ. ಹೀಗೆ ಎಲ್ಲ ಕ್ಷೇತ್ರ ಮತ್ತು ಸನ್ನಿವೇಶಗಳಲ್ಲಿ ಇಂಥ ಅನರ್ಥತೆಗಳನ್ನು ತುಂಬಿ ಅದನ್ನೇ ಪದೇ ಪದೇ ಹೆಳುತ್ತಾ ಶತಮಾನಗಳಿಂದ ಹೆಣ್ಣನ್ನು ಕೀಳಾಗಿ ನೋಡುವ ಕಾರ್ಯ ನಡೆದಿದೆ ಎಂಬುದನ್ನು ಸಂಶೋಧಕರು ಬಹಳ ಖಾರವಾಗಿಯೇ ಟೀಕಿಸಿದ್ದಾರೆ. ಹುಲಜಂತಿಯ ಆರಾಧ್ಯ ದೈವ ಮಾಳಿಂಗರರಾಯನ ಚರಿತ್ರೆಯಲ್ಲಿ ಮೂರು ಭೊಗಸೆ ನೀರು ಕುಡಿದು ಅಡಿಗೆ ಮಾಡಿದ ಶಾಪವಾಗಿ ಮಾಳಿಂಗರಾಯನ ಪತ್ನಿ ಹೇಗೆ ಅಸು ನೀಗುತ್ತಾಳೆ ಎಂಬಲ್ಲಿಗೆ ಚರಿತ್ರೆಯ ಪುಟಗಳಿಂದ ಅವಳನ್ನು ದೂರಸರಿಸುವ ಕೆಲಸ ಹೇಗೆ ನಿರಂತರ ಮಾಡುತ್ತಿರುತ್ತಾರೆ ಎಂಬುದನ್ನು ಹೊರಗೆಡವಿದ್ದಾರೆ. ಇಡೀ ಲೋಕವ್ಯವಹಾರದ ಆಧಾರ ಸ್ಥಂಭವಾದ ತಾಯಿಯ ಗರ್ಭವನ್ನು 'ಜಡಯೋನಿ'ಯೆಂದು ಗ್ರಹಿಸಿಕೊಂಡು ರೇವಣಸಿದ್ಧೇಶ್ವರ ಪುರಾಣದಲ್ಲಿ ಕಥನಕಟ್ಟಲಾಗಿದೆ. ಇಲ್ಲಿ ಪುರುಷ ರಾಜಕಾರಣ ಕೆಲಸ ಮಾಡಿದೆ ಎನ್ನುವುದು ಸಂಶೋಧಕರು ಉಲ್ಲೇಖಿಸಿದ್ದಾರೆ. ರೇವಣಸಿದ್ದನು ಹಲವಾರು ಲಿಂಗಾಯತ ರಾಜರುಗಳನ್ನು ಸೋಲಿಸುತ್ತಾ ಅವರ ಪುತ್ರಿಯರನ್ನು ವಿವಾಹವಾಗುತ್ತಾ ಸಾಗುವುದು ಫ್ಯೂಡಲಿಸಮ ಅನ್ನು ನೆನಪಿಸುತ್ತದೆ. ಅಮೋಘಸಿದ್ಧನ ಪುರಾಣ ಕಾವ್ಯ, ಮೈಲಾರ ಪರಂಪರೆಯ ಕಾವ್ಯ, ಇವುಗಳಲ್ಲಿಯೂ ಇಂಥದ್ದೇ ಘಟನೆಗಳು ಪೋಣಿಸಿದ್ದು ಇದು ಪುರುಷರು ತಮಗೆ ಬೇಕಾದಂತೆ ಪುರಾಣ ರಚಿಸಿಕೊಂಡಿದ್ದಾರೆ ಎಂಬುದನ್ನು ಮುಖ್ಯವಾಗಿ ಸಂಶೋಧಕರು ಉಲ್ಲೇಖಿಸಿದ್ದಾರೆ. ಮತ್ತು ಹಾಲುಮತ ಜನಪದ ಕಥನಗಳು ಮತ್ತು ಕಾವ್ಯಗಳಲ್ಲಿಯೂ ಇದೇ ಪುರುಷ ಪ್ರಧಾನತೆ ಎದ್ದು ಕಾಣುತ್ತದೆ. ಮದುವೆಯಲ್ಲಿ ಮದುಮಗನಾಗುವ ತಮ್ಮನಿಗೆ ಮುತ್ತಿನ ಸೆರಗು ಮರೆ ಮಾಡುವ ಅಕ್ಕ ನ ಪದ್ಧತಿ, ಗೊಂಡರಲ್ಲಿ ಅತ್ತಿಗೆಯನ್ನು ಮದುವೆಯಾಗುವ ಪದ್ಧತಿ ಇವೆಲ್ಲ ಪುರುಷ ಅಧಿಕಾರಶಾಹಿತ್ವದ ಪ್ರತಿರೂಪಗಳಾಗಿ ಗೋಚರಿಸುತ್ತವೆ.

ಆದರೂ ಹಾಲುಮತದ ಗೊಂಡ ಸಂಪ್ರದಾಯದಲ್ಲಿ
ಎರ್ಡು ಹೆಂಗಸರು ಸೇರಿ
ಒಬ್ಬ ಗಂಡಸಿಗೆ ಬಸಿರು ಮಾಡವರೆ ಅದೆಂಥದು ?

ಎಂಬ ಒಗಟು ಮತ್ತೊಮ್ಮೆ ಸ್ತ್ರೀ ಶಕ್ತಿಯನ್ನು ಪುನಃಸ್ಥಾಪಿಸುವ ಕ್ರಿಯೆ ಆಗಾಗ ನಡೆದಿದೆ ಎಂಬುದನ್ನು ಶೋಧಿಸಿ ಉಲ್ಲೇಖಿಸಿರುವುದು ಸ್ವಲ್ಪ ಸಮಾಧಾನ ತರುವಂತದ್ದಾಗಿದೆ. ಈ ರೀತಿಯಾಗಿ ಪ್ರತಿಯೊಂದು ಪುರಾಣ ಮಹಾಕಾವ್ಯ ಹಾಗೂ ಜಾನಪದದಲ್ಲಿ ಹೇಗೆ ಸ್ತ್ರೀ ಲೋಕ ರಚನೆಗೊಂಡಿದೆ ಕಾಲಾಂತರದಿಂದ ಅವಳು ಅದು ಹೇಗೆ ತುಳಿತಕ್ಕೆ ಒಳಗಾಗಿದ್ದಾಳೆ ಎಲ್ಲ ಮಗ್ಗುಲುಗಳಿಂದ ವಿಶ್ಲೇಷಣೆ ಮಾಡಿದ್ದಾರೆ.

'ಇತಿಹಾಸ ಅರಿಯದವರು ಇತಿಹಾಸ ನಿರ್ಮಿಸಲಾರರು' ಎಂಬ ಡಾ. ಬಿ. ಆರ್. ಅಂಬೇಡ್ಕರ ಅವರ ಮಾತಿನಂತೆ ಕುರುಬ ಸಮುದಾಯದ ಹೆಣ್ಣಿನ ಇತಿಹಾಸ ಯುವ ಪೀಳಿಗೆ ಅರಿಯಬೇಕಾದ ಅವಶ್ಯಕತೆ ಇದೆ. ಅಂದಾಗ ಮಾತ್ರ ಮುಂದಿನ ಇತಿಹಾಸ ರಚಿಸಲು ಸಹಾಯವಾಗುತ್ತದೆ. ಹಾಲುಮತ ಜನಾಂಗದಲ್ಲಿ ಪ್ರಾಚೀನ ಸಾಂಸ್ಕೃತಿಕ ಪರಂಪರೆಯಂತೆ ಅತ್ಯಂತ ಪ್ರಾಚೀನ ಇತಿಹಾಸದ ಪುರಾವೆಗಳು ಇವೆ. ಈ ಹಾಲುಮತದ ಇತಿಹಾಸದಲ್ಲಿ ಮಹಿಳೆಗೆ ಯಾವ ರೀತಿಯ ಸ್ಥಾನ ಮಾನಗಳು ಲಭ್ಯವಾಗಿವೆ ಹಾಗೂ ಅವಳು ಇತಿಹಾಸದಲ್ಲಿ ಹೇಗೆ ಕಾಣಿಸಿಕೊಂಡಿದ್ದಾಳೆ ಎಂಬುದನ್ನು ವಿಸ್ತೃತವಾಗಿ ಪುರಾವೆಗಳೊಂದಿಗೆ ಸಂಶೋಧಕರು ಚರ್ಚಿಸಿದ್ದಾರೆ ಮತ್ತು ನಿರ್ಣಯಿಸಿದ್ದಾರೆ. ಶಂಬಾ ಜೋಶಿ, ಡಬ್ಲ್ಯೂಬಿ. ಇಲಿಯಟ್ ಅಭಿಪ್ರಾಯಗಳನ್ನು ಮುಂದಿಟ್ಟುಕೊಂಡು ಕುರುಂಬರು ಎಂದು ಗುರುತಿಸಿರುವ ಕೇರಳದ ಮಲಬಾರಿನಲ್ಲಿ ಇಂದು ಸ್ಥಳವಿದೆ ಎನ್ನುವುದನ್ನು ಹೇಳುತ್ತಾ ಹಕ್ಕಬುಕ್ಕರು, ಕದಂಬರು, ಪಲ್ಲವರು, ದೇವಗಿರಿಯ ಯಾದವರು, ಇಂದೋರಿನ ಹೋಳ್ಕರ, ಬರೋಡದ ಗಾಯಕವಾಡರು, ರಾಷ್ಟ್ರಕೂಟ ದೊರೆಗಳು ಇವರೆಲ್ಲ ಕುರುಬರೇ ಎಂಬ ಚರಿತ್ರಕಾರರು ಸಂಶೋಧನೆ ಮಾಡಿರುವ ಕುರಿತು ವಿಶ್ಲೇಷಣೆ ಮಾಡುತ್ತಾ ಸಂಶೋಧಕರು ಆ ಚರಿತ್ರೆಗಳಲ್ಲಿ ಮಹಿಳೆಯ ಸ್ಥಾನ ಮಾನ ಹೇಗಿದ್ದವು ಎಂಬುದನ್ನು ಸಾರಣೆ ಹಿಡಿದಿದ್ದು ಹೆಣ್ಣುಮಕ್ಕಳ ಚರಿತ್ರೆ ಅರಿಯುವಲ್ಲಿ ಅವರ ಸ್ಥಿತಿಗತಿಯನ್ನು ತಿಳಿಯಲು ಈ ಅಧ್ಯಾಯ ಬಹಳ ಉಪಯುಕ್ತವಾಗಿದೆ.

ನಾವು ಎಂತಿರುತ್ತೇವೆಯೋ ಅದು ನಮ್ಮ ಸಂಸ್ಕೃತಿ ನಾವು ಯಾವುದನ್ನು ಉಪಯೋಗಿಸುತ್ತೇವೆಯೋ ಅದು ನಮ್ಮ ನಾಗರೀಕತೆ ಇದು ಸಮಾಜ ಶಾಸ್ತ್ರೀಯ ವ್ಯಾಖ್ಯೆ. ಹೀಗೆ ಹೆಣ್ಣು ಹೇಗೆ ಇದ್ದಳು ಎಂಬುದನ್ನು ವರೆಗೆ ಹಚ್ಚುವ ಕಾರ್ಯ ಸಂಶೋಧಕರು ಮಾಡಿದ್ದಾರೆ. ಅವಳು ಹಾಲುಮತದ ಪರಮೋಚ್ಚ ಮಹಾಕಾವ್ಯಗಳಲ್ಲಿ ಜನಪದ ಮಾಹಾ ಕಾವ್ಯಗಳಲ್ಲಿ ಮತ್ತು ಮೌಖಿಕ ಸಂಸ್ಕೃತಿಯಲ್ಲಿ ಹೇಗೆ ಉಳಿದಿದ್ದಾಳೆ ಎಂಬುದು ಇಲ್ಲಿನ ಹುಡಕಾಟವಾಗಿದೆ. ಯಾದಗಿರಿ ಜಿಲ್ಲೆಯ ಸೈದಾಪುರದ ಸಿದ್ದಣ್ಣ ಮೇಟಿ ಹಾಗೂ ಸಂಶೋಧಕ ಡಾ. ವೀರಣ್ಣ ದಂಡೆ ಅವರ ಜನಪದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಾಹಾ ಕಾವ್ಯಗಳಲ್ಲಿ ಹಾಗೂ ರೇವಣಸಿದ್ಧೇಶ್ವರ ಪುರಾಣದಲ್ಲಿ ಹುಲಿಜಂತಿ ಮಾಳಿಂಗರಾಯ ಅವರ ಜೀವನ ವೃತ್ತಾಂತದಲ್ಲಿ ಅದು ಹೇಗೆ ಹೆಣ್ಣನ್ನು ಎಡಕ್ಕೆ ಹುಟ್ಟಿದವಳೆಂದು, ರೇವಣಸಿದ್ಧೇಶ ಅಯೋನಿಜ ಎಂಬುದು, ಅವಳು ಎಡಕ್ಕೆ ಕೂಡಲು ಮಾತ್ರ ಅರ್ಹಳು ಎಂದು ಹೇಳಲಾಗಿದೆ ಇದೆಲ್ಲ ಪುರುಷ ನಿರ್ಮಿತ ಹಾಗೂ ಕಪೋಲಕಲ್ಪಿತ ಎನ್ನುವುದು ಸಂಶೋಧಕರ ನಿರ್ಣಯವಾಗಿದ್ದು ಸರಯಾಗಿಯೇ ಇದೆ. ಮೈಲಾರಲಿಂಗ ಮತ್ತು ಅಮೋಘಸಿದ್ಧ ಪರಂಪರೆಯಲ್ಲಿ ಹೆಣ್ಣನ್ನು ಬಹಳ ಕೀಳಾಗಿ ಮತ್ತು ತುಚ್ಚವಾಗಿ ಕಂಡ ಬಗೆಯನ್ನು ಸಂಶೋಧಕರು ಬಹಳ ಬೇಸರದಿಂದ ವಿಶ್ಲೇಷಣೆ ಮಾಡಿದ್ದಾರೆ. ನಂತರ ಜನಪದ ಕಥೆಗಳಲ್ಲಿಯೂ ಹೆಣ್ಣಿನ ಗೋಳು ಇದೇ ಇದ್ದರೂ ಗೊಂಡ ಕುರುಬರಲ್ಲಿ ಇಬ್ಬರು ಹೆಂಗಸರು ಸೇರಿ ಒಬ್ಬನನ್ನು ಬಸಿರು ಮಾಡುವ ಧ್ವನಿ ಮೂಡಿದ್ದು ಹೆಣ್ಣಿನ ಶಕ್ತಿಯ ಫಲ ಎನ್ನಬೇಕು.

■■

– 12ನೇ ಪುಟದಿಂದ ಮುಂದುವರೆದುದು

ಜ್ವರ, ಕೆಮ್ಮು, ನೆಗಡಿ ಮುಂತಾದ ರೋಗಪೀಡಿತ ಮಕ್ಕಳನ್ನು ದೇವಸ್ಥಾನದ ಬಳಿ ಕರೆದೊಯ್ದು ಪೂಜಾರಿಯಿಂದ ಬಲಗೈ ಮುಷ್ಠಿಗೆ (ಚುಟಿಗೆ) ಊದಿನ– ಕಡ್ಡಿಯಿಂದ ಸುಡಿಸುತ್ತಾರೆ. ಮತ್ತು ಭಂಡಾರ ಮೈಗೆ ಸವರುತ್ತಾರೆ. ಕುರಿಯ ಕರಿ ಮತ್ತು ಬಿಳಿ ಉಣ್ಣೆಯಿಂದ ತಯಾರಿಸಿದ ದಾರ ಕೈಗೆ ಕಟ್ಟುತ್ತಾರೆ. ಅಲ್ಲದೆ ಎತ್ತುಗಳ ಕೊರಳು, ಕೊಂಬುಗಳಿಗೆ ಮತ್ತು ವಾಹನಗಳಿಗೂ ಕಟ್ಟುತ್ತಾರೆ. ಮತ್ತು ತೀರ್ಥ ಪ್ರೋಕ್ಷಣೆ ಮಾಡಿಸುವ ಪದ್ಧತಿ ಬುಡಕಟ್ಟು ಸಮುದಾಯದಲ್ಲಿ ಈಗಲೂ ಇದೆ. ಮುಂಗಾರಿನ ಬೀಜಬಿತ್ತನೆ ಕಾರ್ಯ ಆರಂಭ ಮತ್ತು ನಂತರದಲ್ಲಿ ರಾಜ್ಯದ ವಿವಿಧೆಡೆಯಿಂದ ಪಶುಪಾಲಕರು, ಕುರಿಗಾಯಿಗಳು ಪ್ರತಿ ಸೋಮವಾರದಂದು ಆರಾಧ್ಯ ದೈವ ಜಗಲೂರಜ್ಜನ ಈ ಮಹಾಪುಣ್ಯಕ್ಷೇತ್ರಕ್ಕೆ ಬಂದು ಮೀಸಲು ಹಾಲು–ತುಪ್ಪ ಸುರಿಯುವ ಪರಂಪರೆ ಇದೆ. ನನ್ನಿವಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನನ್ನಿವಾಳದ ಗುಡ್ಡ, ಸೋಮನಬಂಡೆ, ಗುಹಾಂತರ ದೇವಾಲಯ, ಬೋರೆದೇವರ ದನಗಳ ಗೂಡು ಮತ್ತು ಸುತ್ತ ಮುತ್ತಲಲ್ಲಿ ಇರುವ ಪೆತ್ತಮ್ಮನವರಹಟ್ಟಿ, ಕರೆಕಾಟ್ಲಹಟ್ಟಿ, ಬೋರೇದೇವರ ಹಟ್ಟಿ, ಬೊಮ್ಮದೇವರಹಟ್ಟಿ, ಬಂಡೆಹಟ್ಟಿ, ಗಡ್ಡರಹಟ್ಟಿ, ಬಂಗಾರದೇವರಹಟ್ಟಿ, ಕುರಿತಿಮ್ಮಯ್ಯನಹಟ್ಟಿ, ವರವಿನವರಹಟ್ಟಿ, ಚಿನ್ನಯ್ಯನಹಟ್ಟಿ ಹೀಗೆ ಮುಂತಾದ ಹಲವು ಹಟ್ಟಿಗಳ ಬುಡಕಟ್ಟು ಸಂಸ್ಕೃತಿ, ಆಚಾರ–ವಿಚಾರ, ಉಡುಗೆ–ತೊಡಿಗೆ, ಆಹಾರ ಪದ್ಧತಿ, ಜನಪದ ಕಲೆ, ಮೌಖಿಕ ಸಾಹಿತ್ಯ ಕುರಿತ ಅಧ್ಯಯನದ ಸಲುವಾಗಿ ಕ್ಷೇತ್ರಕಾರ್ಯ ನಡೆಸಲು ಪ್ರತಿವರ್ಷ ಈ ಭಾಗಕ್ಕೆ ಬರುವ ನೂರಾರು ಜನ ವಿದ್ಯಾರ್ಥಿಗಳು, ಸಮಾಜ ವಿಜ್ಞಾನಿಗಳು, ಜಾನಪದ ಸಂಶೋಧಕರು ಈ ಮಹಾಕ್ಷೇತ್ರಕ್ಕೂ ಭೇಟಿ ನೀಡುತ್ತಾರೆ. ಹಾಗಾಗಿ ನಾಡಿನ ಬುಡಕಟ್ಟು ಸಂಸ್ಕೃತಿ ಮತ್ತು ಜಾನಪದ ಪರಂಪರೆಯ ಜೀವನಾಡಿಯಾಗಿದೆ.

ಹಿರಿಯೂರು ತಾಲ್ಲೂಕು ವೇಣುಕಲ್ಲುಗುಡ್ಡದ ಐತಿಹಾಸಿಕ ಕೋಟೆ–ಬುರುಜು : ಚಿತ್ರದುರ್ಗ ಜಿಲ್ಲೆಯ ಉದ್ದಗಲಕ್ಕೂ ಹರಡಿ ಹಬ್ಬಿರುವ ಬೆಟ್ಟಗುಡ್ಡಗಳ ಸಾಲು, ಕಣಿವೆ, ಹಳ್ಳ–ಕೊಳ್ಳಗಳು, ಕೋಟೆ ಕೊತ್ತಲಗಳು, ಗುಡಿ–ಗೋಪುರಗಳು ಜಿಲ್ಲೆಯ ಪರಂಪರೆಗೆ ಘನತೆ ತಂದುಕೊಟ್ಟಿವೆ. ಜಿಲ್ಲೆಯ ಗಡಿ ಗ್ರಾಮ ಧರ್ಮಪುರ ಹೋಬಳಿಯ ವೇಣುಕಲ್ಲುಗುಡ್ಡ ಕೂಡ ಐತಿಹಾಸಿಕ ಹಾಗೂ ಜಾನಪದೀಯ ಮಹತ್ವ ಪಡೆದುಕೊಂಡಿದೆ. ಧರ್ಮಪುರದ ದಕ್ಷಿಣಕ್ಕೆ ಸುವರ್ಣಾಮುಖಿ, ಪಶ್ಚಿಮಕ್ಕೆ ವೇದಾವತಿ ನದಿಗಳು – ಸಂಗಮವಾಗಿ ಹರಿಯುತ್ತಿವೆ. ಭೌಗೋಳಿಕವಾಗಿ ಬಯಲುಸೀಮೆ ಬರದ ಬೀಡಾಗಿದ್ದರೂ ಜಾನಪದೀಯ ಸಾಂಸ್ಕೃತಿಕ ನೆಲೆಗಳು ಮತ್ತು ಐತಿಹಾಸಿಕ ಕುರುಹುಗಳನ್ನು ತನ್ನ ಒಡಲಲ್ಲಿರಿಸಿಕೊಂಡು ಶ್ರೀಮಂತವಾಗಿದೆ. ಈ ನೆಲದಲ್ಲಿ ನೊಳಂಬರು, ಚೋಳರು, ನಿಡಗಲ್ಲು ಪಾಳೇಗಾರರು, ಸಂಡೂರಿನ ರಾಜರು ಮತ್ತು ವಿಜಯನಗರದ ಆಳ್ವಿಕೆ ಕಾಲದ ಅತಿಹ್ಯವನ್ನು ಸಾರುವ ಅನೇಕ ಕುರುಹುಗಳನ್ನು ಹೊಂದಿದೆ. ವೇಣುಶಿಲಾದ್ರಿಪುರ (ವೇಣುಕಲ್ಲುಗುಡ್ಡ) ಸ್ವತಂತ್ರ ಪಾಳೆಪಟ್ಟಾಗಿದ್ದು 12ನೇ ಶತಮಾನದ ಸುಮಾರಿನಲ್ಲಿ ಕಸ್ತೂರಿ ರಂಗಪ್ಪನಾಯಕ ಆಳ್ವಿಕೆ ಮಾಡಿದ್ದ. ಇಲ್ಲಿಯ ಬೆಟ್ಟದ ಮೇಲೆ ಏಳುಸುತ್ತಿನ ಕೋಟೆ ನಿರ್ಮಿಸಿ ಆಳ್ವಿಕೆ ಮಾಡಿದ್ದ ಐತಿಹಾಸಿಕ ಕುರುಹುಗಳು ಇಂದಿಗೂ ಕಂಡು ಬರುತ್ತವೆ.

ವೇಣುಕಲ್ಲು ಗುಡ್ಡದ ವಿಸ್ತೀರ್ಣ 108 ಎಕರೆ ಪ್ರದೇಶ ಆವರಿಸಿಕೊಂಡಿದೆ. ಕಾರೇ, ಕವಳಿ, ಬಂದ್ರೆ, ತುಗ್ಗಲಿಮರ ಮುಂತಾದ ಹಲವು ಜಾತಿಯ ಗಿಡ–ಮರ–ಬಳ್ಳಿಗಳು ಬೆಳೆದು ಮಳೆಗಾಲದಲ್ಲಿ ಇಡೀ ಗುಡ್ಡದ ಪ್ರದೇಶ ಹಸಿರಿನಿಂದ ಕಂಗೊಳಿಸುತ್ತದೆ. ಕೋಟೆ, ಬತೇರಿ, ಬುರುಜು, ತುಪ್ಪದಕೊಳ, ಕಸ್ತೂರಿ ರಂಗಪ್ಪನ ಕಾಲದಲ್ಲಿ ನಿರ್ಮಿಸಿದ ಕಲ್ಯಾಣಿ, ಕಲ್ಲಿನ ಗಣಪತಿ ವಿಗ್ರಹ, ನಾರುಣ್ಣೆಕಲ್ಲು, ಪ್ರವಾಸಿಗರನ್ನು ಆಕರ್ಷಿಸುತ್ತವೆ. ಗುಡ್ಡದ ಮೇಲಿರುವ ಸುರಂಗಮಾರ್ಗ ಚಿತ್ರದುರ್ಗ ಮತ್ತು ನಿಡಗಲ್ಲು ಸಂಸ್ಥಾನದವರೆಗೆ ಸಂಪರ್ಕವಿದೆ ಎಂಬ ಪ್ರತೀತಿ ಇದೆ. ವೇಣುಕಲ್ಲುಗುಡ್ಡ ಕೋಟೆ ಏಳು ದ್ವಾರ ಬಾಗಿಲುಗಳನ್ನು ಒಳಗೊಂಡಿದ್ದು ಬಸವನಗುಡಿ, ಆಂಜನೇಯ, ತಿಮ್ಮಪ್ಪ, ರಂಗಪ್ಪ, ಚೌಡಮ್ಮ ದೇವಸ್ಥಾನ ತುಂಬಾ ಆಕರ್ಷಕವಾಗಿವೆ. ಮತ್ತು ಮೇಗಳ ಮಠ, ಗಾರೆಬಾವಿ, ಕಾಡುಗೊಲ್ಲರ ಸಾಂಸ್ಕೃತಿಕ ವೀರ ಎತ್ತಪ್ಪ, ಬಸಪ್ಪ, ಸಿದ್ದಪ್ಪ, ಹಾಲಪ್ಪಯ್ಯ, ಈರನಾಗಮ್ಮ ದೇವರುಗಳ ಪುಣ್ಯಭೂಮಿಯೂ ಆಗಿದೆ. ಪಾಳೇಗಾರರ ಧಾರ್ಮಿಕ ಗುರುಗಳಾದ ಹಾಲಪ್ಪಯ್ಯ ಹೆಸರಿನ ಮಠ, ಸಾಧು–ಸಂತರು ಸಂಚರಿಸಿದ ಪ್ರದೇಶವಾಗಿದೆ ಎಂಬುವುದು ಈ ಭಾಗದ ಜನರ ನಂಬಿಕೆ.

ಗುಡ್ಡದ ಮೇಲೆ ಮದ್ದು ಅರೆಯುವ ಕಲ್ಲುಗಳು, ಕುದುರೆ ಲಾಯಗಳು ಮತ್ತು ಮೇಲಿನ ಪ್ರದೇಶದಲ್ಲಿ ಜನವಸತಿಯ ಕುರುಹುಗಳು ಅಲ್ಲಲ್ಲಿ ಕಂಡು ಬರುತ್ತವೆ. ಮಯೂರಶಕೆ, ರಕ್ತಭೂತಾಳಿ, ಹಾಲು ಭೂತಾಳಿ, ಕಲ್ಲುಹೂವು ಒಳಗೊಂಡಂತೆ ಅನೇಕ ಗಿಡಮೂಲಿಕೆ ಗಿಡಗಳು ಈ ಗುಡ್ಡದ ಪ್ರದೇಶದಲ್ಲಿ ಬೆಳೆದಿವೆ. ಮತ್ತು ದೇವಸ್ಥಾನಕ್ಕೆ ಹೋಗಲು ರಸ್ತೆ, ಶುದ್ಧ ಕುಡಿಯುವ ನೀರು, ಭಕ್ತರಿಗಾಗಿ ಸಮುದಾಯ ಭವನ ಮುಂತಾದ ಮೂಲಭೂತ ಸೌಲಭ್ಯ ಕಲ್ಪಿಸಲಾಗಿದೆ. ಈ ಗುಡ್ಡದ ಮೇಲೆ ನಿಂತು ದೂರದ ವಿಹಂಗಮ ನೋಟ ನೋಡುವುದೇ ಚಂದ.

ಬುಡಕಟ್ಟು ಸಂಸ್ಕೃತಿ ಮತ್ತು ಜಾನಪದ ಪರಂಪರೆ ಹೊಂದಿರುವ ಜಿಲ್ಲೆಯ ವೇಣುಕಲ್ಲು ಗುಡ್ಡ, ತಳಕು ಎತ್ತಪ್ಪನ ಗುಡ್ಡ, ಚಳ್ಳಕೆರೆ ಜಗಲೂರಜ್ಜಸ್ವಾಮಿ ಮಹಾಪುಣ್ಯಕ್ಷೇತ್ರ ಮತ್ತು ಎನ್‌ಗೌರೀಪುರದ ಉಮಾಮಹೇಶ್ವರ ದೇವಸ್ಥಾನ ಮುಂತಾದ ಜಿಲ್ಲೆಯ ಅಲಕ್ಷಿತ ಪ್ರೇಕ್ಷಣೀಯ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಪ್ರವಾಸಿಗರ ತಾಣವಾಗಿಯೂ ಮಾಡಬೇಕಿದೆ.

ಪರಾಮರ್ಶನ ಗ್ರಂಥಗಳು

- **ಮೀರಾಸಾಬಿಹಳ್ಳಿ ಶಿವಣ್ಣ :** ದುರುಗ ಜಾನಪದ.
- **ತಿಪ್ಪೇಸ್ವಾಮಿ ಪಿ. :** ಮ್ಯಾಸಬೇಡರ ಮೌಖಿಕ ಕಥನಗಳು.
- **ಉಪ್ಪಾರಹಟ್ಟಿ ಚಿತ್ತಯ್ಯ ಕೆ. :** ಕ್ಯಾಪಪ್ಪ ಪರಿಷೆ.
- **ಪ್ರಜಾವಾಣಿ (2025) :** ಕೋಟೆ ನಾಡು ವಿಶೇಷ ಪುರವಣಿ.

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

'ಜ್ವಾಲಾಮುಖಿಯ ಮೇಲೆ' ಕಾದಂಬರಿಯಲ್ಲಿನ ಕಾರ್ಮಿಕ ವರ್ಗದ ಹೋರಾಟ ಮತ್ತು ಬದುಕು

✍ **ಮುನಿಕೃಷ್ಣ ಸಿ.,** ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 1940–50ರ ದಶಕವು ಪ್ರಗತಿಶೀಲ ಚಳವಳಿ ಶೋಷಿತರ, ದೀನ ದಲಿತರ ಮತ್ತು ಶ್ರಮಿಕ ವರ್ಗದ ಧ್ವನಿಯಾಗಿ ಹೊರಹೊಮ್ಮಿದ ಮಹತ್ವದ ಕಾಲಘಟ್ಟ. ಈ ಚಳವಳಿಯ ಮುಂಚೂಣಿ ಬರಹಗಾರರಲ್ಲಿ ಒಬ್ಬರಾದ ಬಸವರಾಜ ಕಟ್ಟೀಮನಿ ಅವರು ಸಮಾಜದ ಕೆಳಸ್ತರದ, ತುಳಿತಕ್ಕೊಳಗಾದ ವರ್ಗಗಳ ಧ್ವನಿಯಾಗಿ ಕಾಣಿಸಿಕೊಳ್ಳುತ್ತಾರೆ. ಅವರ ಕಾದಂಬರಿಗಳಲ್ಲಿ ಶೋಷಿತರ ನೋವು, ಆಕ್ರೋಶ ಮತ್ತು ಬಂಡಾಯದ ಕಿಚ್ಚು ಸದಾ ಜಾಗೃತವಾಗಿರುತ್ತದೆ. ಅವರು ಶೋಷಿತರ, ಕಾರ್ಮಿಕರ ಮತ್ತು ರೈತರ ಪರವಾಗಿ ಧ್ವನಿ ಎತ್ತಿದವರು. ಬಸವರಾಜ ಕಟ್ಟೀಮನಿಯವರು 1951 ರಲ್ಲಿಪ್ರಕಟಿಸಿದ 'ಜ್ವಾಲಾಮುಖಿಯ ಮೇಲೆ' ಕಾದಂಬರಿಯು ಕನ್ನಡದ ಪ್ರಗತಿಶೀಲ ಸಾಹಿತ್ಯ ಚಳವಳಿಯ ಒಂದು ಪ್ರಮುಖಕೃತಿ. ಈ ಕಾದಂಬರಿಯಲ್ಲಿ ಕಾರ್ಮಿಕರ ಬದುಕು, ಅವರ ಮೇಲಾಗುವ ಶೋಷಣೆ ಹಾಗೂ ಅವರಲ್ಲಿ ಮೂಡುವ ಜಾಗೃತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

'ಜ್ವಾಲಾಮುಖಿಯ ಮೇಲೆ' ಕಾದಂಬರಿಯು ಕೈಗಾರಿಕಾ ಕ್ರಾಂತಿಯ ನಂತರದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಿಲುಕಿದ ಗಿರಣಿ ಕಾರ್ಮಿಕರ ಶೋಷಿತ ಬದುಕಿನ ನೈಜ ಕೈಗನ್ನಡಿಯಾಗಿದೆ. ಈ ಕಾದಂಬರಿಯಲ್ಲಿ ಕಟ್ಟೀಮನಿಯವರು ಕಾರ್ಮಿಕರನ್ನು ಕೇವಲ ಲಾಭತರುವ ಯಂತ್ರಗಳಂತೆ ಬಳಸಿಕೊಳ್ಳುವ ಮಾಲೀಕ ವರ್ಗದ ಕ್ರೌರ್ಯವನ್ನು ಮತ್ತು ಕನಿಷ್ಠ ಸೌಲಭ್ಯಗಳಿಲ್ಲದ, ಇಕ್ಕಟ್ಟಿನ ವಸತಿಗಳಲ್ಲಿ ನರಕಯಾತನೆ ಅನುಭವಿಸುವ ಕಾರ್ಮಿಕರ ಅಸಹಾಯಕತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ನಿರಂತರ ಶೋಷಣೆ ಮತ್ತು ಆರ್ಥಿಕ ಅಸಮಾನತೆಯು ಕಾರ್ಮಿಕರ ಮನಸ್ಸಿನಲ್ಲಿ ಅತೃಪ್ತಿಯ ಕೆಂಡವಾಗಿ ಹೇಗೆ ಸುಡುತ್ತಿರುತ್ತದೆ ಹಾಗೂ ಆ ಅಸಮಾಧಾನವು ಮಿತಿಮೀರಿದಾಗ 'ಜ್ವಾಲಾಮುಖಿ'ಯಂತೆ ಸ್ಫೋಟಗೊಂಡು ವ್ಯವಸ್ಥೆಯನ್ನೇ ಹೇಗೆ ನಡುಗಿಸುತ್ತದೆ ಎಂಬುದು ಇಲ್ಲಿನ ಮುಖ್ಯ ವಸ್ತುವಾಗಿದೆ. ಕಾರ್ಮಿಕರು ಸಂಘಟಿತರಾಗಿ ಕಾರ್ಮಿಕ ಸಂಘಗಳನ್ನು ಕಟ್ಟಿಕೊಳ್ಳುವುದು, ತಮ್ಮ ಹಕ್ಕುಗಳಿಗಾಗಿ ಮುಷ್ಕರ ಮತ್ತು ಸತ್ಯಾಗ್ರಹದ ಹಾದಿ ಹಿಡಿಯುವುದು ಕೇವಲ ಹೊಟ್ಟೆಪಾಡಿಗಾಗಿ ನಡೆಸುವ ಹೋರಾಟವಲ್ಲ; ಬದಲಾಗಿ ಅದು ಬಂಡವಾಳ ಶಾಹಿಗಳ ಅಹಂಕಾರದ ವಿರುದ್ಧ ನಡೆಸುವ ಹೋರಾಟ. ಗಿರಣಿ ಕೆಲಸ ನಿಲ್ಲಿಸಿ ಮುಷ್ಕರ ಹೂಡುವುದು ಕಾರ್ಮಿಕರ ಪ್ರಬಲ ಅಸ್ತ್ರವಾಗಿದೆ. ಈ ಹಂತದಲ್ಲಿ ನಾಯಕತ್ವದ ಪಾತ್ರ ಮತ್ತು ಸಂಘಟನೆಯಲ್ಲಿ ಬರುವ ಏರುಪೇರುಗಳನ್ನು ಕಾದಂಬರಿ ವಸ್ತು ನಿಷ್ಠವಾಗಿ ಅನಾವರಣಗೊಳಿಸುತ್ತದೆ.

ಈ ಕಾದಂಬರಿ ಗಿರಣಿ ಕಾರ್ಮಿಕರ ಅಸಹಾಯಕ ಬದುಕು, ಅವರ ವಸತಿ ಸಮಸ್ಯೆ, ಬಂಡವಾಳಶಾಹಿ ವ್ಯವಸ್ಥೆಯು ಕಾರ್ಮಿಕರನ್ನು ಕೇವಲ ಆರ್ಥಿಕ ಲಾಭಾಂಶದ ಸರಕುಗಳನ್ನಾಗಿ ಕಾಣುವ ಕ್ರೌರ್ಯ, ಹಸಿವು ಮತ್ತು ಅವಮಾನಗಳ ನಡುವೆ ಬದುಕುವ ಕಾರ್ಮಿಕ ವರ್ಗದ ಬದುಕು ಮತ್ತು ಅವರು ಎದುರಿಸುವ ಸಾಮಾಜಿಕ ಅಸಮಾನತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಕಾರ್ಮಿಕರ 'ಬದುಕು' ಎಷ್ಟೊಂದು ದಾರುಣವಾಗಿದೆ ಎಂಬುದು ಅವರು ವಾಸಿಸುವ ಕೂಲಿಕಾರ ವಸತಿ ಪ್ರದೇಶಗಳ ಶೋಚನೀಯ ಸ್ಥಿತಿಯನ್ನು ಈ ಕೆಳಗಿನಂತೆ ವರ್ಣಿಸುತ್ತಾರೆ.

"ಧರ್ಮಪುರದ ಚರಂಡಿಗಳ ಹೊಲಸನ್ನೆಲ್ಲ ತೆಗೆದುಕೊಂಡು ದೂರ ಸಾಗಿಸುವ ದೊಡ್ಡ ಚರಂಡಿ ಈ ವಸತಿಯ ಪಕ್ಕದಲ್ಲೇ ಹರಿದಿದೆ ಸಾಮೀ. ಈ ಕತ್ತಲಲ್ಲಿ ಕಾಣಿಸೋದಿಲ್ಲ ನಿಮಗೆ. ಹಗಲು ಹೊತ್ತು ಬಂದು ನೋಡಿದರೆ ಕಣ್ಣು ಮುಚ್ಚಿಕೊಂಡೀರಿ ನೀವು. ಅಂತಹ ಹೊಲಸು ತುಂಬಿದೆ. ನಗರದ ಕೊಳೆಯೆಲ್ಲ ಹರಿದು ಬರೋದು ಬೇರೆ, ಕೂಲಿಕಾರ ವಸತಿಯ ಮಲ ಮೂತ್ರ ಬೇರೆ. ಇನ್ನು ವಾಸನೆ ಬಡಿಯದಿದ್ದೀತೇ?"[1]

ಕಾರ್ಮಿಕರು ವಾಸಿಸುವ 'ವಸತಿ'ಯ ಪಕ್ಕದಲ್ಲೇ ನಗರದ ಕೊಳಚೆ ಹರಿಯುವ ದೊಡ್ಡ ಚರಂಡಿ ಇದೆ ಎಂಬ ವರ್ಣನೆ, ಅವರು ಎಂತಹ ನರಕ ಸದೃಶ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಹಗಲಿನಲ್ಲಿ ನೋಡಲಾರದಂತಹ ಕೊಳಕು, ಮಲ–ಮೂತ್ರದ ದುರ್ವಾಸನೆ ನಡುವೆಯೇ ಅವರ ಜೀವನ ಸಾಗುತ್ತದೆ. ಇದು ಕೇವಲ ಬಡತನವಲ್ಲ, ಬದಲಾಗಿ ಒಂದು ವರ್ಗದ ಮೇಲೆ ಹೇರಲಾದ ಅಮಾನವೀಯ ಬದುಕಾಗಿದೆ.

'ಕೋಳಿಯು ಗೂಡುಗಳಿಗಿಂತಲೂ ವಿದ್ರೂಪ' ಅಲ್ಲಿಯೇ ಮಲವಿಸರ್ಜನೆ, ಅಲ್ಲಿಯೇ ಊಟ! 'ನಾಯಿಗಳ ಹಾಗೆ, ಹಂದಿಗಳ ಹಾಗೆ'[2] ಎಂದು ವರ್ಣಿಸಿರುವುದು ಅವರ ಬದುಕಿನ ಕನಿಷ್ಠ ಮಟ್ಟವನ್ನು ಸೂಚಿಸುತ್ತದೆ. ಇಟ್ಟಿಗೆ, ಸಿಮೆಂಟ್ ಇಲ್ಲದ, ಕೇವಲ ಹುಲ್ಲು–ಮಣ್ಣಿನಿಂದ ಕೂಡಿದ ಆಶ್ರಯ ಅವರ ಆರ್ಥಿಕ ಅಸಹಾಯಕತೆಯನ್ನು ಬಿಂಬಿಸುತ್ತದೆ. ಒಬ್ಬ ಮನುಷ್ಯ ಎಲ್ಲಿಯವರೆಗೆ ಸಂಕೋಚ ಅಥವಾ ಅಸಹ್ಯವನ್ನು ಮರೆತು ಬದುಕುತ್ತಿದ್ದಾನೆ ಹಾಗೂ ಕಾರ್ಮಿಕರ ಮೂಲಭೂತ ಸೌಕರ್ಯಗಳಿಲ್ಲದ, ಘನತೆಯಿಲ್ಲದ ಜೀವನ ಮತ್ತು ಆತ ಬದುಕಿಗಾಗಿ ಮಾಡುವ ಹೋರಾಟ ಎಷ್ಟು ತೀವ್ರವಾಗಿದೆ ಎಂಬುದು ತಿಳಿಯುತ್ತದೆ.

ಆಳುವ ವರ್ಗವು ಶ್ರಮಿಕರನ್ನು ಕೇವಲ ದುಡಿಯುವ ಯಂತ್ರಗಳಂತೆ ನೋಡುತ್ತದೆಯೇ ಹೊರತು, ಘನತೆಯಿಂದ ಬದುಕ ಬೇಕಾದ ಮನುಷ್ಯರನ್ನಾಗಿ ಅಲ್ಲ ಎಂಬ ಕಟು ಸತ್ಯ ಇಲ್ಲಿದೆ. ವ್ಯವಸ್ಥೆಯು ಒಬ್ಬ ಮನುಷ್ಯನನ್ನು ಮನುಷ್ಯನನ್ನಾಗಿ ಪರಿಗಣಿಸದಿದ್ದಾಗ, ಅವನು ಸಂಘಟಿತನಾಗಿ ಹೇಗೆ ಪ್ರತಿಭಟಿಸುತ್ತಾನೆ ಮತ್ತು ಆ ಬದುಕಿನಿಂದಲೇ ಅವನಲ್ಲಿ 'ಹೋರಾಟ'ದ ಕಿಚ್ಚು ಹೇಗೆ ಹತ್ತಿಕೊಳ್ಳುತ್ತದೆ ಎಂಬುದನ್ನು ವಿವರಿಸಲು ಇದು ಅತ್ಯುತ್ತಮ ಕಾದಂಬರಿಯಾಗಿದೆ.

"ಇವರ ದುಡಿತ, ಇವರ ಬೆವರು, ಇವರ ರಕ್ತ ಮಾತ್ರ ಬೇಕು ಆ ಬಂಡವಾಳಗಾರರಿಗೆ. ಇವರು ಬದುಕಿರುವರೇ, ಸತ್ತಿರುವರೇ, ಇವರಿಗೆ ವಾಸಿಸಲು ಸರಿಯಾದ ಮನೆಗಳಿವೆಯೇ ಇಲ್ಲವೇ, ಇರುವ ಮನೆಗಳು ಎಂಥವಿವೆ, ಅವುಗಳ ಪರಿಸ್ಥಿತಿ ಹೇಗಿದೆ, ಅಲ್ಲಿ ಗಾಳಿ ಆಡುವುದೇ, ಬೆಳಕು ಬರುವುದೇ, ಅವರ ಓಣಿಯಲ್ಲಿ ನಲ್ಲಿಯ ನೀರಿನ ಸೌಕರ್ಯವುಂಟೇ, ದೀಪದ ಅನುಕೂಲತೆಯುಂಟೇ ಎಂಬ ಯೋಚನೆಗಳು ಆ ಬಂಡವಾಳ ಗಾರರಿಗಿರುವುದಿಲ್ಲ. ದಿನವಿಡೀ ಆ ಗಿರಣಿಯ ಕುಲುಮೆಯಲ್ಲಿ ದೇಹ ಕರಗಿಸಿ ಬಂದ ಈ ಬಡಜೀವಿಗಳು ಮನೆಗೆ ಬರುತ್ತಲೂ ಇದ್ದು ಬಿದ್ದದ್ದನ್ನು ತಿಂದು ನಿದ್ದೆ ಹೋಗುತ್ತವೆ. ತಮಗೆ ಬೆಳಕು ಬೇಕು, ಗಾಳಿ ಬೇಕು ಎಂಬ ಕಲ್ಪನೆಯೂ ಇವರಿಗಿದ್ದಂತಿಲ್ಲ. ತಾವೂ ಮನುಷ್ಯರು, ಇನ್ನಿತರರ ಹಾಗೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸುಖದಿಂದ ವಾಸಿಸುವ ಅಧಿಕಾರ ತಮಗೂ ಇದೆಯೆಂಬುದನ್ನೇ ಇವರು ಮರೆತುಬಿಟ್ಟಹಾಗಿದೆ."[3]

ಬಂಡವಾಳಶಾಹಿಗಳಿಗೆ ಕಾರ್ಮಿಕನು ಒಬ್ಬ 'ಮನುಷ್ಯ'ನಾಗಿ ಕಾಣಿಸುವುದಿಲ್ಲ. ಲೇಖಕರು ಬಳಸುವ ಮಾತುಗಳು ಶೋಷಣೆಯ ತೀವ್ರತೆಯನ್ನು ವಿವರಿಸುತ್ತವೆ. ಬಂಡವಾಳಶಾಹಿಗಳಿಗೆ ಬೇಕಿರುವುದು ಕಾರ್ಮಿಕರ ದುಡಿತ, ಬೆವರು ಮತ್ತುರಕ್ತ ಮಾತ್ರ. ಅವರ ಬದುಕು–ಸಾವಿನ ಬಗ್ಗೆ ಮಾಲೀಕರಿಗೆ ಕಿಂಚಿತ್ತೂ ಕಾಳಜಿಯಿಲ್ಲ. ದಿನವಿಡೀ ದುಡಿದು ರಾತ್ರಿ ಎಲ್ಲೋ ಒಂದು ಕಡೆ ಬಿದ್ದುಕೊಳ್ಳುವ ಸ್ಥಿತಿ ಅವರಲ್ಲಿನ 'ಮನುಷ್ಯತ್ವ'ವನ್ನೇ ಮರೆಸಿ ಬಿಟ್ಟಿದೆ. ತಮಗೂ ಸುಖವಾಗಿ ಬದುಕುವ ಹಕ್ಕಿದೆ ಎಂಬುದನ್ನು ಅವರು ಮರೆಯುವಂತೆ ಮಾಡಲಾಗಿದೆ. ಇದು ಕೇವಲ ಆರ್ಥಿಕ ಶೋಷಣೆಯಲ್ಲ; ಬದಲಾಗಿ ಮಾನಸಿಕವಾಗಿಯೂ ಅವರನ್ನು ಗುಲಾಮಗಿರಿಗೆ ತಳ್ಳುವ ಒಂದು ಶೋಷಕ ಸಂಚು ಎಂಬುದು ಶಂಕರನ ಪಾತ್ರದ ಮಾತುಗಳಿಂದ ತಿಳಿಯುತ್ತದೆ.

'ನಮ್ಮ ಹಳ್ಳಿ ನಮ್ಮ ಭೂಮಿ ಅಂದರೆ ಪ್ರಾಣಕ್ಕಿಂತ ಹೆಚ್ಚು ನಮಗೆ' 'ಹಳ್ಳಿಯ ರೈತರನ್ನು ಕೂಲಿಕಾರರನ್ನಾಗಿ ಮಾರ್ಪಡಿಸುವ ಈ ಹೀನ ದೀನ ಸ್ಥಿತಿ![4] ಎನ್ನುವ ಮಾತುಗಳು, ಅವರು ಸ್ವೇಚ್ಛೆಯಿಂದ ಬಂದವರಲ್ಲ, ಬದಲಾಗಿ ವ್ಯವಸ್ಥೆಯ ಸಂಚಿಗೆ ಬಲಿಯಾಗಿ ಬಂದವರು ಎಂಬುದನ್ನು ಎತ್ತಿತೋರಿಸುತ್ತವೆ.

ಕೃಷಿ ಮೂಲದ ಜನರು ಹೇಗೆ ಕೈಗಾರಿಕಾ ಕಾರ್ಮಿಕರಾಗಿ ಪರಿವರ್ತಿತರಾಗುತ್ತಿದ್ದಾರೆ ಎಂಬುದನ್ನು ವಿವರಿಸುತ್ತದೆ. ಹಳ್ಳಿಯ ಮುಕ್ತ ವಾತಾವರಣದಲ್ಲಿ ಸ್ವಾವಲಂಬಿಗಳಾಗಿದ್ದ ರೈತರು, ಹೊಟ್ಟೆಪಾಡಿಗಾಗಿ ನಗರದ ಗಿರಣಿಗಳಿಗೆ ಬಂದು ಅಸಹಾಯಕರಾಗಿ ಪರಾವಲಂಬಿ ಶ್ರಮಜೀವಿಗಳಂತೆ ದುಡಿಯುವ ಕಟು ವಾಸ್ತವವನ್ನು ಇದು ಬಿಂಬಿಸುತ್ತದೆ. ಕಾರ್ಮಿಕರ ಬದುಕು ಕೇವಲ ಆರ್ಥಿಕ ಸಂಕಷ್ಟವಲ್ಲ, ಅದುದೈಹಿಕ ಮತ್ತು ಮಾನಸಿಕವಾಗಿ ಹದಗೆಡುವುದೂ ಹೌದು. ಗಿರಣಿಯ ಕೆಲಸಕ್ಕೆ ಸೇರಿದ ಮೇಲೆ ಅಣ್ಣನ ಸಾವು, ತಂದೆ–ತಾಯಿಯ ಅಗಲಿಕೆ ಮತ್ತು ಅತ್ತಿಗೆಯ ಮರುಮದುವೆಯ ಪ್ರಸಂಗಗಳು ಕೆಲಸದ ಜಾಗದ ಅನಾರೋಗ್ಯಕರ ವಾತಾವರಣ ಮತ್ತು ಅದರಿಂದ ಸಂಭವಿಸುವ ಅಕಾಲಿಕ ಮರಣಗಳನ್ನು ಸೂಚಿಸುತ್ತವೆ.

ಬಂಡವಾಳಶಾಹಿ ವ್ಯವಸ್ಥೆಯ ಕ್ರೌರ್ಯ ಮತ್ತು ಅದಕ್ಕೆ ಬಲಿಯಾಗುವ ಕಾರ್ಮಿಕರ ಅಸಹಾಯಕ ಬದುಕನ್ನು ಈ ಕಾದಂಬರಿಯು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಹಳ್ಳಿಯಿಂದ ಪಟ್ಟಣಕ್ಕೆ ಹೊಟ್ಟೆಪಾಡಿಗಾಗಿ ವಲಸೆ ಬರುವ ಜನ ಸಾಮಾನ್ಯರು ಕಾರ್ಖಾನೆಗಳ ಧೂಳು, ಹೊಗೆ ಮತ್ತು ಯಂತ್ರಗಳ ಆರ್ಭಟದ ನಡುವೆ ತಮ್ಮ ಅಸ್ತಿತ್ವವನ್ನು ಹೇಗೆ ಕಳೆದುಕೊಳ್ಳುತ್ತಾರೆ ಎಂಬುದನ್ನು ಇಲ್ಲಿ ಕಾಣಬಹುದು. ಈ ಕಾದಂಬರಿಯು ಕೇವಲ ಕಾರ್ಮಿಕ ವರ್ಗದ ಸಂಘರ್ಷವನ್ನಷ್ಟೇ ಚಿತ್ರಿಸದೆ, ಭೂಮಿಯನ್ನು ಕಳೆದುಕೊಂಡ ರೈತರು ಹೇಗೆ ಕೈಗಾರಿಕೀಕರಣದ ಸುಳಿಗೆ ಸಿಲುಕುತ್ತಾರೆ ಎಂಬುದನ್ನು ಮನಮುಟ್ಟುವಂತೆ ಚಿತ್ರಿಸಿದೆ.

ಮಾಲೀಕರಿಗೆ ಗಿರಣಿಯ ಲಾಭವಷ್ಟೇ ಮುಖ್ಯ. ಕಾರ್ಮಿಕನೊಬ್ಬ ಗಾಯಗೊಂಡರೆ ಅಥವಾ ಮೃತಪಟ್ಟರೆ ಅವನ ಕುಟುಂಬದ ಬಗ್ಗೆ ಮಾಲೀಕರಿಗೆ ಯಾವುದೇ ಕಾಳಜಿ ಇರುವುದಿಲ್ಲ. ಕಡಿಮೆ ಸಂಬಳ, ದೀರ್ಘಾವಧಿಯ ಕೆಲಸ ಮತ್ತು ಸಾಮಾಜಿಕ ಭದ್ರತೆಯಿಲ್ಲದ ಸ್ಥಿತಿಯು ಬಂಡವಾಳಶಾಹಿಗಳ ಕ್ರೌರ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅಮಾನವೀಯ ದುಡಿಮೆ, ಅತಿಯಾದ ಲಾಭಕ್ಕಾಗಿ ಕಾರ್ಮಿಕರಿಂದ 12–14 ಗಂಟೆಗಳ ಕಾಲ ಸತತವಾಗಿ ಕೆಲಸ ಮಾಡಿಸಿಕೊಳ್ಳುವುದು ಮತ್ತು ಕಡಿಮೆ ವೇತನ ನೀಡುವುದು ಈ ವ್ಯವಸ್ಥೆಯ ಕ್ರೌರ್ಯವಾಗಿದೆ.

ಕಾರ್ಮಿಕರ ಹೋರಾಟವು ಕೇವಲ ಮಾಲೀಕರ ವಿರುದ್ಧ ಮಾತ್ರವಲ್ಲ, ಬದಲಾಗಿ ಮಾಲೀಕ, ಸರ್ಕಾರ, ಆಡಳಿತ ಯಂತ್ರ ಎಂಬ 'ಅಪವಿತ್ರ ಮೈತ್ರಿ'ಯ ವಿರುದ್ಧವಾಗಿದೆ ಎಂಬುದನ್ನು ಸಾಬೀತುಪಡಿಸುತ್ತದೆ. 12 ತಾಸುಗಳ ದುಡಿಮೆ ಮತ್ತು ಹಕ್ಕುಗಳ ನಿರಾಕರಣೆಯ ಮಾತುಗಳು ಕಾರ್ಮಿಕರ ಬದುಕಿನ ಅಭದ್ರತೆಯನ್ನು ಮತ್ತು ಅವರ ಹೋರಾಟ ಎಷ್ಟು ಕಠಿಣವಾಗಿದೆ ಎಂಬುದನ್ನು ಚಿತ್ರಿಸುತ್ತವೆ.

ಈ ಕಾದಂಬರಿಯಲ್ಲಿ ಬರುವ ಸರೋಜಾ, ಸಾವಿತ್ರಿ, ರತ್ನಮ್ಮ, ನಾಗಮ್ಮ ಎಂಬ ಸ್ತ್ರೀಯರ ಕಾರ್ಮಿಕ ವರ್ಗದ ವಿವಿಧ ಮುಖಗಳನ್ನು ಪ್ರತಿನಿಧಿಸುತ್ತಾರೆ. ಚಂದ್ರಣ್ಣನ ಆಲೋಚನೆಗಳ ಮೂಲಕ ಲೇಖಕರು ಕಾರ್ಮಿಕ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ವಿವಿಧ ಸಾಮಾಜಿಕ ಹಿನ್ನೆಲೆಯ ಮಹಿಳೆಯರನ್ನು ಶಾರದಾಮಣಿಯಂತಹ ಶ್ರೀಮಂತ ವರ್ಗದ ಯುವತಿಯ ಜೊತೆ ಹೋಲಿಸುತ್ತಾರೆ.

"ಶ್ರಮ ಜೀವಿಗಳ ಹೋರಾಟದಲ್ಲಿ ಭಾಗವಹಿಸಲೆಂದು ಕರುಳಿನ ಬಳಗವನ್ನೇ ತೊರೆದು ಇಷ್ಟು ದೂರ ಬಂದ ಸರೋಜಾ; ಹೊಟ್ಟೆಗಾಗಿ ಶರೀರವನ್ನು ಮಾರಿಕೊಳ್ಳುತ್ತಿದ್ದರೂ ಅದರಿಂದ ಬಂದ ಹಣವನ್ನು ಈ ಚಳವಳಿಗೆ ಸಲ್ಲಿಸುವ ಸಾವಿತ್ರಿ; ಮನೆಯಲ್ಲಿಒಡಹುಟ್ಟಿದ ಸೋದರ ಅಸ್ತವ್ಯಸ್ಥನಾಗಿ ಬಿದ್ದಿದ್ದರೂ ಇಲ್ಲಿ ಬಂದು ದುಡಿಯುತ್ತಿರುವ ರತ್ನಮ್ಮ; ಗಂಡನ ದಬ್ಬಾಳಿಕೆಯನ್ನು ಸಹಿಸಿ ಕೊನೆಗೆ ಅದರಿಂದ ಮುಕ್ತಳಾಗಿ ಈ ಚಳವಳಿಯಲ್ಲಿ ತನ್ನ ಕಷ್ಟಮಯ ಬಾಳನ್ನು ತೇಲಿಬಿಟ್ಟ ನಾಗಮ್ಮ; ಸಾಹುಕಾರರ ಏಕ ಮಾತ್ರ ಮುದ್ದಿನ ಮಗಳಾಗಿ ಬೆಳೆದು ಕಾಲೇಜಿನಲ್ಲಿ ಓದುತ್ತ ಆಧುನಿಕ ಫ್ಯಾಷನ್ನಿನ ಮೂರ್ತಿಯಂತ ಪ್ರತಿಮೆಯಾಗಿ ಮೆರೆಯುತ್ತ ಕತೆ ಕಾದಂಬರಿಗಳನ್ನೋದಿ ಕಾಲಹರಣ ಮಾಡುತ್ತ ತಿರುಗುವ ಶಾರದಾಮಣಿ!"[5] ಕಾರ್ಮಿಕ ಮಹಿಳೆಯರಿಗಿರುವ ಬದುಕಿನ ಗುರಿ ಮತ್ತು ಹೋರಾಟದ ಕಿಚ್ಚು ಶಾರದಾಮಣಿಯಂತಹ ಮೇಲ್ವರ್ಗದ ಯುವತಿಯರಲ್ಲಿ ಕಂಡು ಬರುವುದಿಲ್ಲ. ಸುಖದ ಸುಪ್ಪತ್ತಿಗೆಯಲ್ಲಿರುವವರಿಗೆ ತ್ಯಾಗದ ಮಹತ್ವವನ್ನು ಅರಿಯುವುದು ಅಸಾಧ್ಯವೆಂಬ ವರ್ಗ ಸಂಘರ್ಷದ ಆಯಾಮವನ್ನೂ ಹಾಗೂ ವಿವಿಧ ಹಿನ್ನೆಲೆಗಳಿಂದ ಬಂದ ಮಹಿಳೆಯರು ಸಾಮಾಜಿಕ ಹೋರಾಟದಲ್ಲಿ ಹೇಗೆ ತೊಡಗಿಸಿಕೊಂಡಿದ್ದಾರೆ ಎಂಬುದನ್ನೂ ಇಲ್ಲಿ ಕಾಣಬಹುದು.

ಗಿರಣಿಯ ಮಾಲೀಕರು ಅಥವಾ ಪ್ರಭಾವಿ ವ್ಯಕ್ತಿಗಳು ಕಾರ್ಮಿಕ ವರ್ಗದ ಮಹಿಳೆಯರ ಅಸಹಾಯಕತೆಯನ್ನು ಹೇಗೆ ತಮ್ಮ ಸ್ವಾರ್ಥ ಮತ್ತು ಲೈಂಗಿಕ ಸುಖಕ್ಕಾಗಿ ಬಳಸಿಕೊಳ್ಳುತ್ತಾರೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ. "ತಿಂದು ಕೊಬ್ಬಿದ ಈ ನೀಚ ಶ್ರೀಮಂತರಿಗೆ ನಮ್ಮಂಥ ಬಡ ಹೆಂಗಳೆಯರನ್ನು ಕೆಡಿಸೋದೇ ಒಂದು ಆಟ"[6] ಎನ್ನುವ ರತ್ನಮ್ಮರ ಮಾತು ಸಮಾಜದಲ್ಲಿ ಲೈಂಗಿಕ ಶೋಷಣೆಯನ್ನು ಎತ್ತಿ ತೋರಿಸುತ್ತದೆ. ಕಾರ್ಮಿಕನ ಶ್ರಮವು ಕೇವಲ ಬಂಡವಾಳಶಾಹಿಗಳ ಲಾಭಕ್ಕೆ ಬಳಕೆಯಾಗುತ್ತದೆಯೇ ಹೊರತು ಅವನ ಬದುಕಿನಲ್ಲಿ ಯಾವುದೇ ಸುಧಾರಣೆಯನ್ನು ತರುವುದಿಲ್ಲ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಹಸಿವು, ಅವಮಾನ ಮತ್ತು ನಿರಂತರದೈಹಿಕ ಹಿಂಸೆ ಕಾರ್ಮಿಕರಲ್ಲಿ ತೀವ್ರವಾದ ಆಕ್ರೋಶವನ್ನು ಹುಟ್ಟುಹಾಕುತ್ತವೆ. ಶೋಷಣೆ ಮಿತಿ ಮೀರಿದಾಗ ಕಾರ್ಮಿಕರ ಅಸಮಾಧಾನವು ಜ್ವಾಲಾಮುಖಿಯಂತೆ ಹೇಗೆ ಸ್ಫೋಟಗೊಳ್ಳುತ್ತದೆ ಎಂಬುದನ್ನು ವಿವರಿಸಿದ್ದಾರೆ.

"ಕೂಲಿಕಾರರ ಹೃದಯ ಅಸಂತೋಷದ, ಅತೃಪ್ತಿಯ ಜ್ವಾಲಾಮುಖಿಯಂತಾಗಿದೆ. ಅವರ ಸಹನೆ ತೀರಿ ಹೋಗುತ್ತಿದೆ. ಎಂದು ಸ್ಫೋಟವಾಗುವುದೋ ಏನೋ ಈ ಜ್ವಾಲಾಮುಖಿ. ಕೂಲಿಕಾರರ ಈ ಅತೃಪ್ತಿಯ ಜ್ವಾಲಾಮುಖಿಯನ್ನು ಗುರುತಿಸದೆ ಮಾಲಿಕ ಅವರ ಉದರದ ಮೇಲೆ ನಿಂತು ತನ್ನ ನೃತ್ಯ ನಡೆಸಿದ್ದಾನೆ. ಕುದಿದು ಕುದಿದು ಹೊರಳಿ ಹೊರಳಿ ತಪ್ತವಾಗಿರುವ ಆ ಲಾವಾರಸ ಹಠಾತ್ತಾಗಿ ಚಿಮ್ಮಿ ನೆಗೆದು ಈ ಮಾಲಿಕರ

– 107ನೇ ಪುಟಕ್ಕೆ ಮುಂದುವರೆದುದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ದೇವರ ದಾಸಿಮಯ್ಯ

✍ ಡಾ. ಭಾಗ್ಯಜ್ಯೋತಿ, ಸಹ ಪ್ರಾಧ್ಯಾಪಕರು ಕನ್ನಡ, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಕಲಬುರ್ಗಿ.

ಹನ್ನೆರಡನೆಯ ಶತಮಾನದ ಶರಣರಲ್ಲಿ ಪ್ರಮುಖರಾಗಿರುವ ಜೇಡರ ದಾಸಿಮಯ್ಯನವರು ಬಸವಣ್ಣನವರ ಹಿರಿಯ ಸಮಕಾಲೀನವರು. ಈತನು ಸದ್ಯಕ್ಕೆ ಕನ್ನಡದ ಶ್ರೇಷ್ಠ ಮತ್ತು ಆದ್ಯ ವಚನಕಾರನೆಂದು ಹೆಸರುವಾಸಿಯಾಗಿದ್ದಾನೆ. ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ ಬೇರೆ ಬೇರೆ ಎಂದು ಹಲವು ವರ್ಷಗಳವರೆಗೆ ಗೊಂದಲವಿತ್ತು ನಂತರ ಹಲವಾರು ಸಂಶೋಧನೆಯ ಫಲವಾಗಿ ಇವರಿಬ್ಬರು ಒಂದೆ ಎಂದು ತಿಳಿಯಲಾಗಿದೆ.

ಜೀವನ ಚರಿತ್ರೆ

ಹಿರಿಯ ಶರಣ, ಐತಿಹಾಸಿಕ ವ್ಯಕ್ತಿಯಾಗಿದ್ದ ಜೇಡರ ದಾಸಿಮಯ್ಯ ಜನಿಸಿದ್ದು ಇಂದಿನ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮುದುನೂರಿನಲ್ಲಿ ಈ ಊರಿನ ಕಲಿಕಾಲ ದಂಡಕಾಮಯ್ಯ ಮತ್ತು ಶಂಕರಿ ಎಂಬ ದಂಪತಿಗಳ ಪುತ್ರರೀತ. ತನ್ನ ಬಾಲ್ಯ ಜೀವನವನ್ನು ಹುಟ್ಟೂರಿನಲ್ಲಿಯೇ ಕಳೆದನು. ಇಲ್ಲಿಯ ರಾಮನಾಥ ಲಿಂಗವೇ ಜೇಡರ ದಾಸಿಮಯ್ಯನ ಆರಾಧ್ಯ ದೈವ ಆ ರಾಮನಾಥನ ಭಕ್ತನಾಗಿದ್ದ ದಾಸಿಮಯ್ಯ ಆ ದೇವನಿಗೆ ನಿತ್ಯಪೂಜೆ ಸಲ್ಲಿಸುತ್ತ ಬೆಳೆದನು. ಸುಮಾರು 150 ಕ್ಕಿಂತಲೂ ಅಧಿಕ ವಚನಗಳನ್ನು ರಚಿಸಿದ ಈತನ ವಚನಾಂಕಿತ ರಾಮನಾಥ. ಈತನ ಮನೆತನದ ವೃತ್ತಿ ನೇಕಾರಿಕೆಯಾಗಿತ್ತು ಜೇಡರ ದಾಸಿಮಯ್ಯ ಹುಟ್ಟಿನಿಂದ ಬಡ ನೇಕಾರ ಕುಟುಂಬದವನು ಎಂದು ಊಹಿಸಲು ಅವಕಾಶವಿದೆ. ಅವನ ತಂದೆ–ತಾಯಿಯರು ನೂಲು ನೇಯ್ದು ಜೀವನೋಪಾಯ ಮಾಡುತ್ತಿದ್ದರು. ಬಾಲ್ಯದಲ್ಲಿಯೇ ದಾಸಿಮಯ್ಯನಿಗೆ ಹಸಿವು ಎಂದರೆ ಏನೆಂಬುದರ ಅರಿವಿತ್ತು. ಇದಕ್ಕೆ ಆತನ ವಚನವೇ ಸಾಕ್ಷಿಯಾಗಿದೆ.

"ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜಡಿದೊಮ್ಮೆ ನುಡಿಯದಿರಾ
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ ರಾಮನಾಥ"

ಎಂದಿರುವುದನ್ನಿಲ್ಲಿ ಗಮನಿಸಬಹುದು. ಜೇಡರ ದಾಸಿಮಯ್ಯನು ತಾನು 'ತವನಿಧಿ'ಯನ್ನು ಹೊಂದಿ ಶ್ರೀಮಂತರಾದ ಮೇಲೆ ತನ್ನ ಪಕ್ವ ವಯಸ್ಸಿನಲ್ಲಿ ವಚನ ಬರೆದಿದ್ದರೂ ಅವನು ಬಾಲ್ಯದಲ್ಲಿ ಅನುಭವಿಸಿದ ಹಸಿವು ಅದರಿಂದ ಅನುಭವಿಸಿದ ನೋವು, ಇತರರು ಅವನನ್ನು ಕಂಡು ಜಡಿದು ಮಾತನಾಡಿದ್ದೆಲ್ಲವೂ ಅವನ ನೆನಪಿನಲ್ಲಿ ಉಳಿದಿದೆ. ತನ್ನಿಂದ ಬಡ ಜನರ ಹಸಿವನ್ನು ಹೋಗಲಾಡಿಸುವ ಪ್ರಯತ್ನವನ್ನೂ ಜೇಡರ ದಾಸಿಮಯ್ಯ ಮಾಡಿದ್ದನ್ನು ಮುಂದೆ ಗಮನಿಸಬಹುದು.

ತನ್ನ ವೃತ್ತಿಯ ಮೂಲಕ ಶ್ರದ್ಧೆ, ನಿಷ್ಠೆಯಿಂದ ಮುಂದುವರೆದಿರುವ ದಾಸಿಮಯ್ಯ, ಅದನ್ನು ಕಾಯಕವಾಗಿ ರೂಢಿಸಿಕೊಂಡು ಕ್ರಮೇಣ ಹತ್ತಿ ಬಟ್ಟೆಯೊಂದಿಗೆ ಚಿತ್ತಾರದ ವಸ್ತ್ರಗಳನ್ನು, ರೇಶ್ಮೆಯ ಬಟ್ಟೆಗಳನ್ನು ನೇಯ್ದು, ತನ್ನ ಆದಾಯವನ್ನು ಹೆಚ್ಚಿಸಿಕೊಂಡಿದ್ದಾನೆ. ಮುದುನೂರಿನ ಗ್ರಾಮದ ಸುತ್ತಮುತ್ತ ಸಾಕಷ್ಟು ಒರತೆಗಳಿದ್ದು, ಅಲ್ಲಿಂದ ವರ್ಷವಿಡೀ ಉಕ್ಕಿಬರುತ್ತಿದ್ದ ನೀರಿನಿಂದ ಕೂಡಿದ ಆ ಪ್ರದೇಶದಲ್ಲಿ ಒಂದಿಷ್ಟು ಜಮೀನು ಪಡೆದು ಅಲ್ಲಿಯೂ ಸಮೃದ್ಧ ಬೆಳೆ ಬೆಳೆದಿದ್ದಾನೆನಿಸುತ್ತದೆ. ಭಕ್ತಿ–ದಾಸೋಹದ ವ್ಯಕ್ತಿತ್ವವುಳ್ಳ ದಾಸಿಮಯ್ಯ ಬಡವರನ್ನು, ಅಬಲರನ್ನು ಕಂಡು, ತಾನು ನೇಯ್ದ ವಸ್ತ್ರ, ಬೆಳೆದ ದವಸ ಧಾನ್ಯಗಳನ್ನು ಹಂಚಿದ್ದಾನೆ ಎಂಬುದಕ್ಕೆ ಆತನ ವಚನಗಳಲ್ಲಿ ಸಾಕ್ಷಿ ಸಿಗುತ್ತದೆ.

ಜೇಡರ ದಾಸಿಮಯ್ಯನ ಹೆಂಡತಿ ದುಗ್ಗಳೆ. ಈಕೆ ತಂದೆ–ತಾಯಿಯರು ನಿಂತು ಮದುವೆ ಮಾಡಿದ ಹೆಣ್ಣಲ್ಲ, ಸ್ವತಃ ದಾಸಿಮಯ್ಯನೇ ಅವಳನ್ನು ಪರೀಕ್ಷಿಸಿ, ಆಯ್ಕೆ ಮಾಡಿಕೊಂಡು ಕೈ ಹಿಡಿದ ಪತ್ನಿ. ಅವರಿಬ್ಬರ ದುಡಿಮೆಯಿಂದ, ಆದರ್ಶ ಬದುಕಿನಿಂದ ದಾಸಿಮಯ್ಯನ ಸಂಪತ್ತು ಹೆಚ್ಚಾಗಿದೆ. ಪ್ರತಿಯೊಂದು ತನ್ನ ನಡೆ–ನುಡಿಯಲ್ಲಿ ಗಂಡನನ್ನೇ ಅನುಸರಿಸಿಕೊಂಡು ಬಂದಿರುವ ಅವಳ ಪತಿ ಭಕ್ತಿಯೂ ಅಪೂರ್ವವಾಗಿತ್ತು. ಗಂಡನ ಮಾತಿಗೆ ಯಾವುದಕ್ಕೂ ಪ್ರತಿ ನುಡಿಯದ ಅವಳ ನಡೆ ಆದರ್ಶ ಕುಟುಂಬಕ್ಕೆ ಮಾದರಿಯಾಗಿತ್ತು.

ದಾಸಿಮಯ್ಯನ ಕಾಯಕ

ಅನುರೂಪಳಾದ ಪತ್ನಿಯ ಕೈಹಿಡಿದು ಕೃತಾರ್ಥ ಭಾವದಿಂದಿರುವ ಜೇಡರ ದಾಸಿಮಯ್ಯ ಶ್ರಮಜೀವಿ. ತನ್ನ ಜೀವನ ಸಂಗಾತಿಯೊಂದಿಗೆ ಕಾಯಕ ಜೀವಿಯಾಗಿ ಬಾಳಿದ ದಾಸಿಮಯ್ಯ ದಾಸೋಹಿಯೂ ಆಗಿದ್ದನು. ಆತನು ತನ್ನ ಸತಿಯೊಂದಿಗೆ ನೇಯ್ಗೇ ಕಾಯಕ ಮಾಡುತಿದ್ದುದು ಸುಸ್ಪಷ್ಟವಾಗಿದೆ. ಆತನ ಒಂದು ವಚನದಲ್ಲಿ ಉಲ್ಲೇಖವಿದೆ.

"ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಳ ಮುಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು
ಈ ಸೀರೆಯ ನೇಯ್ದವ ನಾನೋ ನೀನೋ ರಾಮನಾಥ"

ನೇಕಾರಿಕೆಯ ಪರಿಭಾಷೆಯನ್ನು ಆಧ್ಯಾತ್ಮಿಕ ಪರಿಭಾಷೆಯಾಗಿ ಬಳಸಿಕೊಂಡುದುದಕ್ಕೆ ಈ ವಚನ ಸಾಕ್ಷಿಯಾಗುತ್ತದೆ. ನೇಯ್ಗೆ ಕಾಯಕಕ್ಕೆ ಸಂಬಂಧಿಸಿದ ಉಂಕೆ(ನೂಲಿನ ಹಾಸು), ಸರಿಗೆ (ನೂಲು), ಅಣಿಯೇಳು (ಮಗ್ಗದ ಹಾಸು, ಹೊಕ್ಕು, ಜೋಡಣೆ), ಲಾಳಿ ಕಂಡಿಕೆ ಅಣೆಕಟ್ಟು (ಮಗ್ಗದ ಹಾಸಿನ ಮೇಲ್ಭಾಗದ ಮತ್ತು ಕೆಳಭಾಗದ ದಾರ ಜೋಡಿಸಿದ ಕಟ್ಟು) ಮುಂತಾದ ವೃತ್ತಿ ಸಂಬಂಧಿತ ಪದಗಳು ಇಲ್ಲಿ ಬಳಕೆಯಾಗಿರುವುದು ದಾಸಿಮಯ್ಯ ನೇಯ್ಗೇ ಕಾಯಕದವನು ಎಂಬುದನ್ನು ದೃಢಪಡಿಸುತ್ತದೆ.

ಶಿವಜ್ಞಾನ ಗಳಿಸಿಕೊಂಡು ಅನುಭಾವಿಯಾಗಿದ್ದ ದಾಸಿಮಯ್ಯನ ಅಹಂಕಾರವನ್ನು ಶಂಕರ ದಾಸಿಮಯ್ಯನು "ತವನಿಧಿ"ಯನ್ನು ಇಲ್ಲವಾಗಿಸುವ ಮೂಲಕ ಮುರಿದನೆಂಬ ಸಂದರ್ಭವು ಬಸವ ಪುರಾಣ ಮೊದಲಾದ ಕೃತಿಗಳಲ್ಲಿದೆ. ತಾನು ಶಿವನಿಂದ ತವನಿಧಿಯನ್ನು ಪಡೆದು ಗರ್ವಿಷ್ಟನಾದ ದಾಸಿಮಯ್ಯ "ಶಿವನಂತೆ ಕೊಡುವವರು ಯಾರೂ ಇಲ್ಲ. ತನ್ನಂತೆ ಪಡೆದವರೂ ಯಾರೂ ಇಲ್ಲ" ಎಂದು ಅಹಂಕಾರ ಪಟ್ಟನಂತೆ. ಆದರೆ ದುಗ್ಗಳೆಗೆ ಮಾತ್ರ ಅಂತಹ ಅಹಂಕಾರ ಬುದ್ಧಿ ಬಂದಿರಲಿಲ್ಲ. ಅಂಥ ಸಮಯದಲ್ಲಿ ಜೇಡರ ದಾಸಿಮಯ್ಯನನ್ನು ಶಂಕರ ದಾಸಿಮಯ್ಯ ಮುದೂನೂರಿಗೆ ಬಂದು ಭೇಟಿ ಮಾಡಿದನು. ಅವನ ಅಹಂಕಾರ ಮುರಿದ ಕಥೆಯಿದೆ. ತನ್ನ ಧನ ಮದದ ಅರಿವಾಗಿ ಪಶ್ಚಾತ್ತಾಪ ಪಟ್ಟುಕೊಂಡು ಮುಂದೆ ವಿನಯದಿಂದ ಸರಳ ಜೀವನವನ್ನು ನಡೆಸಲು ಆರಂಭಿಸಿದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಜೇಡರ ದಾಸಿಮಯ್ಯನಿಗೆ ಶಂಕರ ದಾಸಿಮಯ್ಯರಿಂದ ಅಂದಿನ ಕಾಲದಲ್ಲಿ ವ್ಯಾಪಕವಾದ ಪ್ರಚಾರದಲ್ಲಿದ್ದ ಬಸವ ಚಳುವಳಿಯ ಅರಿವು ಉಂಟಾಗಿರುವ ಸಾಧ್ಯತೆಯಿದೆ, ಹಾಗಾಗಿ ಆತನು ತನ್ನ ಹೆಂಡತಿ ದುಗ್ಗಳೆಯೊಂದಿಗೆ ಮುದುನೂರಿನಿಂದ ಕಲ್ಯಾಣಕ್ಕೆ ತೆರಳಿ ಬಸವಣ್ಣನವರನ್ನು ಭೇಟ್ಟಿಯಾಗಿರುವನು. ಬಿಜ್ಜಳನ ಬಂಢಾರಿಯಾಗಿದ್ದ ಬಸವಣ್ಣನವರ ವೈಜ್ಞಾನಿಕ ವಿಚಾರ ಹಾಗೂ ಸಾಮಾಜಿಕ ಸೇವೆಯನ್ನು ಕಂಡು, ಆ ಸೇವೆಗಾಗಿಯೇ ತಮ್ಮ ಕುಟುಂಬವೇ ಬದುಕನ್ನ ಮೀಸಲಾಗಿಸಿದ್ದನ್ನು ಗಮನಿಸಿದ ಜೇಡರ ದಾಸಿಮಯ್ಯನವರ ಮುಂದಿನ ಜೀವನ ಶೈಲಿಯೇ ಬದಲಾಗಿದೆ. ವಿದ್ಯಾವಂತನು, ಭಕ್ತನು ಆಗಿದ್ದ ಜೇಡರ ದಾಸಿಮಯ್ಯನು ಕಲ್ಯಾಣದಲ್ಲಿಯೇ ಲಿಂಗದೀಕ್ಷೆಯನ್ನು ಪಡೆದು ಇಷ್ಟಲಿಂಗಾರಾಧಕನೂ ಆಗಿದ್ದಾನೆ. ಅದು ಅವನಿಗೆ ಕರಸ್ಥಲ ಜ್ಯೋತಿಯಾಯಿತು.

ವಚನ ರಚನೆ

ಜೇಡರ ದಾಸಿಮಯ್ಯನು ಬಸವ ಯುಗದ ಹಿರಿಯ ಶರಣನೀತನು. ಈತನ ವಚನಗಳಲ್ಲಿ ಉಕ್ತವಾಗಿರುವ ಪದಗಳ ವಚನ ಗಮನಿಸಿದರೆ ಆತನು ತನ್ನ ಸಮಕಾಲೀನ ಶರಣರ ಶ್ರೇಷ್ಠವಾದ ಮಾತುಗಳನ್ನು ಕುರಿತೇ ಹೇಳಿರುವಂತೆನಿಸುತ್ತದೆ.

"ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ
ನಿಮ್ಮನಿತ್ತ ಕಾಣಾ ರಾಮನಾಥ"

ಎನ್ನುವ ಈ ವಚನ ದಾಸಿಮಯ್ಯನ ಸಮಕಾಲೀನ ಸ್ಥಿತಿಯನ್ನು ಕುರಿತೇ ಹೇಳುತ್ತಿದೆ ಎಂಬುದರಲ್ಲಿ ಯಾವ ಸಂದೇಹವೂ ಕಾಣದು. ಕಲ್ಯಾಣಕ್ಕೆ ಬಂದಾಗ ಈ ವಚನ ರಚಿಸಿರುವಂತಿದೆ. ಈಗಾಗಲೇ ತವನಿಧಿಯಿಂದ ಶ್ರೀಮಂತಿಕೆ ಪಡೆದು ಅದರ ಅಲ್ಪ ಸುಖ ಕಂಡಿರುವ ದಾಸಿಮಯ್ಯ ಕಲ್ಯಾಣಕ್ಕೆ ಬಂದು ಶರಣರ ಸಂಘ ಸುಖ, ಮಾತುಗಳಿಂದ ಸಂತೃಪ್ತಿ ಹೊಂದಿ ಈ ಮಾತನ್ನು ಆಡಿದನೆನಿಸುತ್ತದೆ.

"ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಸುಳಿದು ಬೀಸುವ ಗಾಳಿ ನಿಮ್ಮ ದಾನ
ಎತ್ತು ನಿಮ್ಮ ದಾನ; ಬಿತ್ತು ನಿಮ್ಮ ದಾನ
ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ"

ಎಂದು ಆ ದೇವನ ಕೃಪೆಯನ್ನು ಕೊಂಡಾಡುತ್ತಾನೆ. ಅವನಿತ್ತ ದಾನವನ್ನು ಅನುಭವಿಸುವ ಮಾನವರು ಅನ್ಯರನ್ನು ಹೊಗಳುವ ಜನರನ್ನು ಕುನ್ನಿಗಳನೇನೆಂಬೆ ಎಂದು ಹರಿಹಾಯ್ದು ಮಾತನಾಡುತ್ತಾನೆ. ಅಗೋಚರ ಶಕ್ತಿಗೆ ಮನುಷ್ಯ ಕೃತಜ್ಞನಾಗಬೇಕು ಅದನ್ನು ಸ್ಮರಿಸುವದೇ ನಿಜ ಧರ್ಮ, ನಾವು ಬದುಕುವ ಭೂಮಿ, ಕುಡಿವ ನೀರು, ಸೇವಿಸುವ ಗಾಳಿ, ತಿನ್ನುವ ಬೆಳೆ ಎಲ್ಲವೂ ಆ ಪರಮಾತ್ಮನ ಅನುಗ್ರಹದಿಂದ ದೊರಕಿವೆ. ಇವಿಲ್ಲದೆ ಮಾನವನ ಜೀವನವಿಲ್ಲ ಎನ್ನುತ್ತಾನೆ.

"ಅರುಹು ಅರಿಯಲೆಂದು
ಕುರುಹ ಕೈಯಲ್ಲಿ ಕೊಟ್ಟ
ಅರುಹನೆ ಮರದು ಕುರುಹನೆ ಹರಿದ
ಈ ಕುರುಂಬರಿಗಿನ್ನೆತ್ತಣ ಮುಕ್ತಿಯೊ? ರಾಮನಾಥ"

ಇಷ್ಟಲಿಂಗವು ತನ್ನರಿವನ್ನ ಅರಿಯುವ ದೇವ ಕುರುಹು. ಅದು ಕರಸ್ಥಲದಲ್ಲಿರುವಾಗ ಅರುಹನ್ನೇ ಮರೆತು ಕುರುಹನೆ ಹರಿದವರಿಗೆ ಮುಕ್ತಿ ಇಲ್ಲ ಎನ್ನುತ್ತಾನೆ. ಇದು ಅಂತರಂಗ ಬಹಿರಂಗದಲ್ಲಿ ಸಂಚಾರ ಸಂಪತ್ತಿನ ಆಚರಣೆಯಿದು. ಇದನರಿಯದೆ ನಾಲ್ವತ್ತೆಂಟು ಸ್ಥಾನಗಳಲ್ಲಿ ಕ್ರಿಯಾಭರಿತವಧರಿಸುವ ನಿರ್ಣಯ ಹೇಳಿ, ಅಂತರಂಗ ಜಪವನ್ನು ಬೇರೆ ಮಾಡಲು ಹೇಳುವವನನ್ನು ಆಚಾರದ್ರೋಹಿ ಎಂದು ಕರೆಯುವಲ್ಲಿ ಹಿಂದೆ ಸರಿಯುವುದಿಲ್ಲ ಎನ್ನುತ್ತಾನೆ. ಸಾತ್ವಿಕ ಗುಣದ ದಾಸಿಮಯ್ಯನಾಡುವ ನಿಷ್ಠುರ ನುಡಿ, ಆವೇಶಭರಿತ ಭಾವ, ರೊಚ್ಚಿನ ಮಾತುಗಳನ್ನು ಗಮನಿಸಿದರೆ, ಆತನೆದುರಿಸಿದ ಕಾಲದ ಪರಿಸರವೆನ್ನಬೇಕು.

ಕೆಳವರ್ಗದವನೆಂದು ಅಂದಿನ ಸಮಾಜ ಅವನಿಗೆ ನೀಡಿದ ನೋವು ಕಾಲಮಾನದ ಒತ್ತಡ ಧರ್ಮ ಪ್ರೀತಿ ಆತನನ್ನು ಕಠೋರವಾಗಿಸಿರುವ ಸಾಧ್ಯತೆಯಿದೆ. ಆತನು ಹೇಳಿರುವ ದೇವಸ್ವರೂಪ, ಭಕ್ತಿನಿಷ್ಠೆ, ಸ್ತ್ರೀಪರ ಚಿಂತನೆ ಜೀವನ ಮೌಲ್ಯಗಳು, ವೈಚಾರಿಕತೆಯಂತಹ ಗಹನವಾದ ವಿಚಾರಗಳು ಅಂದಿನ ಶರಣತತ್ವ ಚಿಂತನೆಗೆ ನೆಲೆಯಾಗಿ ನಿಂತವು. ತನ್ನ ಬಹುಮುಖಿ ಜ್ಞಾನದ ಮೂಲಕ ದಾಸಿಮಯ್ಯನು ಲಿಂಗಾಯತ ಧರ್ಮಕ್ಕೆ ವಿಶಿಷ್ಟವಾದ ಕೊಡುಗೆಯನ್ನಿತ್ತು ಪ್ರಮುಖ ಶರಣರಲ್ಲಿ ಪರಿಗಣಿತನಾಗಿದ್ದಾನೆ. ಆತನು ಕಲ್ಯಾಣದಲ್ಲಿಯೇ ಮಹಾಬಯಲಿನಲ್ಲಿ ಬಯಲಾಗಿರುವಂತಿದೆ. ಈ ಶರಣರ ಸ್ಮಾರಕವನ್ನು ಕಲ್ಯಾಣದಲ್ಲಿ ನಾವು ಇಂದಿಗೂ ಕಾಣುತ್ತೇವೆ.

ಪರಾಮರ್ಶನ ಗ್ರಂಥಗಳು

- **ಡಾ. ಸೋಮನಾಥ ಯಾಳವಾರ (2020) :** ಶರಣ ಜೇಡರ ದಾಸಿಮಯ್ಯ.
- **ಡಾ. ಬಸವರಾಜ ಸಬರದ (2022) :** ಶರಣರ ಧಾರ್ಮಿಕ ಸಿದ್ಧಾಂತಗಳು.

■■



ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com. www. vidyanidhionline.com

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸ್ನಾತಕ ವಿದ್ಯಾರ್ಥಿಗಳ ರಾಜಕೀಯ ಜಾಗೃತಿ : ಒಂದು ಅಧ್ಯಯನ

ಡಾ. ನಿರೀಕ್ಷಣ್ ಸಿಂಗ್ ಗೌಗಿ ಎಸ್.ಕೆ. ಸಹಾಯಕ ಪ್ರಾಧ್ಯಾಪಕರು, ಸಮಾಜಕಾರ್ಯ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟಂಪಾಡಿ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ.

ಸಾರಾಂಶ

ಒಂದು ದೇಶ ಸಮೃದ್ಧವಾಗಿ ಅಭಿವೃದ್ಧಿ ಹೊಂದಬೇಕಾದರೆ ಹಲವಾರು ಅಂಶಗಳು (ಉದಾಹರಣೆಗೆ: ಸಾಮಾಜಿಕ, ಆರ್ಥಿಕ, ತಂತ್ರಜ್ಞಾನ ಮತ್ತು ರಾಜಾಕೀಯದಂತಹ ಅಂಶಗಳು/ಕ್ಷೇತ್ರಗಳು) ಸುಧಾರಣೆಗೊಂಡು ಬಲಿಷ್ಟವಾಗಬೇಕು. ಪ್ರಜೆಗಳ ಭಾಗವಹಿಸುವಿಕೆಯ ಮಟ್ಟ, ಸಾಂವಿಧಾನಿಕ ಸಂಸ್ಥೆಗಳ ಕಾರ್ಯಶೈಲಿ ಮತ್ತು ದಕ್ಷತೆ, ಕಾನೂನು ಸುವ್ಯವಸ್ಥೆ, ಆರೋಗ್ಯ, ಜೀವಿತಾವಧಿ ಮತ್ತು ಶೈಕ್ಷಣಿಕ ಪ್ರಗತಿ ಮುಂತಾದವುಗಳ ಆಧಾರದ ಮೇಲೆ ರೂಪುಗೊಂಡ ಪ್ರಜಾಪ್ರಭುತ್ವ ವ್ಯವಸ್ಥೆಯು ದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ. ಸಾಮಾಜಿಕ ಅಸಮತೋಲನ, ಲಿಂಗತಾರಾಮ್ಯತೆ, ಗುಣಮಟ್ಟದ ಶಿಕ್ಷಣದ ಕೊರತೆ, ಆರ್ಥಿಕ ಮತ್ತು ರಾಜಕೀಯವಾಗಿ ಹೊರಗುಳಿಯುವಿಕೆ (Economic and Political Exclusion) ಮುಂತಾದ ಪಿಡುಗುಗಳನ್ನು ಶಮನ ಮಾಡಿದಾಗ ಮಾತ್ರ ದೇಶದಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಸಾಧಿಸಬಹುದು.

ಈ ದಿಕ್ಕಿನಲ್ಲಿ ಮುನ್ನಡೆಯಲು ಯುವಜನತೆಯನ್ನು ಜಾಗೃತಗೊಳಿಸಬೇಕಾದ ಕರ್ತವ್ಯ ಸಾಮಾಜಿಕ ಸಂಸ್ಥೆ ಮತ್ತು ಶೈಕ್ಷಣಿಕ ಸಂಸ್ಥೆಗಳ ಮೇಲಿದೆ. ಯುವ ಸಮುದಾಯವನ್ನು ಜಾಗೃತಗೊಳಿಸಲು ಇರುವ ಅಡೆತಡೆಗಳನ್ನು ಗುರುತಿಸಿ, ಅವುಗಳನ್ನು ಪರಿಹರಿಸುವ ಕಾರ್ಯವನ್ನು ಸಮಾಜ ಸುಧಾರಕರು ಮಾಡಿರುವುದನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು.

ಈ ಹಿನ್ನೆಲೆಯಲ್ಲಿ ಸ್ನಾತಕ ವಿದ್ಯಾರ್ಥಿಗಳ ರಾಜಕೀಯ ಗ್ರಹಿಕೆ (Perception) ಮತ್ತು ಜಾಗೃತಿಯನ್ನು (Awareness) ಅರ್ಥೈಸಿಕೊಳ್ಳುವ ಸಲುವಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಸಾಕ್ಷ್ಯಆಧಾರಿತ ಅಧ್ಯಯನದಲ್ಲಿ (Emperical-based Study) ಪಡೆದ ಫಲಿತಾಂಶಗಳನ್ನು ಸೂಕ್ತ ಕೋಷ್ಟಕಗಳ ಮೂಲಕ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ.

ಪ್ರಮುಖ ಪದಗಳು : ರಾಜಕೀಯ ಗ್ರಹಿಕೆ, ರಾಜಕೀಯ ಅರಿವು, ಮತದಾನ, ಪ್ರಜಾಪ್ರಭುತ್ವ ವ್ಯವಸ್ಥೆ, ಮತ್ತು ಚುನಾವಣಾ ನೀತಿ ಸಂಹಿತೆ.

ಪೀಠಿಕೆ (Introduction)

ನಿರ್ಭಿತ, ನಿಷ್ಪಕ್ಷಪಾತ, ಮತ್ತು ಪಾರದರ್ಶಕವಾದ ಚುನಾವಣಾ ವ್ಯವಸ್ಥೆ ಒಂದು ಬಲಿಷ್ಠ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಆಧಾರ ಸ್ತಂಭಗಳು. ಈ ನಿಟ್ಟಿನಲ್ಲಿ ಸರ್ಕಾರಗಳು ಕಾನೂನು/ಸಂವಿಧಾನಿಕ ಉಪಬಂಧಗಳ ಮೂಲಕ ಚುನಾವಣಾ ಸಂಸ್ಥೆಗಳನ್ನು (ಉದಾಹರಣೆಗೆ ಭಾರತದಲ್ಲಿ ಭಾರತೀಯ ಚುನಾವಣಾ ಆಯೋಗ (Election Commission of India – E.C.I) ಸ್ಥಾಪಿಸಿವೆ. ಇಂತಹ ಸಂಸ್ಥೆಗಳು ದೇಶದ ಚುನಾವಣೆಯನ್ನು ನಿಯಂತ್ರಿಸುವ ನೀತಿ ನಿಯಮಗಳನ್ನು (ಉದಾಹರಣೆಗೆ ಚುನಾವಣಾ ಮಾದರಿ ನೀತಿ ಸಂಹಿತೆ – Model Code of Conduct), ನಿರ್ದೇಶನಗಳನ್ನು ಕಾಲದಿಂದ ಕಾಲಕ್ಕೆ ಮಾರ್ಪಾಡು ಮಾಡಿ, ಜಾರಿಗೊಳಿಸುತ್ತಾ ಬಂದಿವೆ.

ಮತದಾನ ಮಾಡುವ ಪ್ರಜೆಗಳು ಹೆಚ್ಚು ಜವಾಬ್ದಾರಿಯುತವಾಗಿ ತನ್ನ ಮತವನ್ನು ಚಲಾಯಿಸಿ, ಪ್ರಬುದ್ಧ ಸರ್ಕಾರವನ್ನು ರಚಿಸಬೇಕು. ಪ್ರಬುದ್ಧ ಪ್ರಜೆಗಳ ಮತ ಪಡೆದು ಅಧಿಕಾರ ಹಿಡಿದಂತಹ ರಾಜಕೀಯ ಪಕ್ಷವು ಜನರ ಅಶೋತ್ತರಗಳನ್ನು ಈಡೇರಿಸಲು ಕಟಿಬದ್ಧವಾಗಿರುತ್ತದೆ. ಅಧಿಕಾರ ಪಡೆದು ಸರ್ಕಾರ ರಚಿಸುವ ಉದ್ದೇಶವನ್ನು ಎಲ್ಲಾ ರಾಜಕೀಯ ಪಕ್ಷಗಳು ಹೊಂದಿರುತ್ತವೆ. ಈ ನಿಟ್ಟಿನಲ್ಲಿ, ರಾಜಕೀಯ ಪಕ್ಷಗಳು ಪ್ರಜೆಗಳ ಬೇಡಿಕೆ ಮತ್ತು ಅವಶ್ಯಕತೆಗಳನ್ನು ಅರಿತು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ಪರಿಣಾಮಕಾರಿಯಾಗಿ ತಯಾರು ಮಾಡಲು ಸಾಧ್ಯ.

ಚುನಾವಣಾ ಪ್ರಣಾಳಿಕೆಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ ಮತ್ತು ರಾಜಕೀಯ ಪಕ್ಷಗಳ ಉದ್ದೇಶಗಳು ಮತ್ತು ಭರವಸೆಗಳ ಬಗ್ಗೆ ಮತದಾರರಿಗೆ ತಿಳಿಸುತ್ತವೆ. ಈ ದಾಖಲೆಗಳು, ಅಧಿಕಾರಕ್ಕೆ ಬಂದರೆ, ಪಕ್ಷವು ಅನುಸರಿಸಲು ಉದ್ದೇಶಿಸಿರುವ ನೀತಿಗಳು, ಕಾರ್ಯಕ್ರಮಗಳು ಮತ್ತು ದೃಷ್ಟಿಕೋನವನ್ನು ವಿವರಿಸುತ್ತದೆ.

ಸಾಹಿತ್ಯ ವಿಮರ್ಶೆ (Review of Literature)

ರಾಜಕೀಯ ಅರಿವು ಪ್ರಜಾಪ್ರಭುತ್ವದ ಯಶಸ್ಸಿಗೆ ಪ್ರಮುಖ ಸಾಧನವಾಗಿದೆ. ರಾಜಕೀಯ ವಾತಾವರಣದ ಸರಿಯಾದ ಜ್ಞಾನವಿಲ್ಲದೆ ಮತದಾರ ತನ್ನ ಪ್ರಜಾಸತ್ತಾತ್ಮಕ ಹಕ್ಕನ್ನು ಸಂಪೂರ್ಣವಾಗಿ ಅನುಭವಿಸಲು ಸಾಧ್ಯವಿಲ್ಲ. ಹೆಚ್ಚು ಅತ್ಯಧುನಿಕ ಜಗತ್ತಿನಲ್ಲಿ, ಮತದಾರರು ವಿಭಿನ್ನ ರಾಜಕೀಯ ವಿದ್ಯಾಮಾನಗಳನ್ನು ತಾರ್ಕಿಕ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಭಾರತದಂತಹ ದೇಶದಲ್ಲಿ ಇದು ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡಿಲ್ಲ ಎಂದು Patgiri (2015) ರವರು ತಮ್ಮ ಸಂಶೋಧನಾ ಲೇಖನದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ರಾಜಕೀಯ ಮಾಹಿತಿ ಮತ್ತು ಸನ್ನಿವೇಶಗಳ ನಡುವಿನ ಮಂಥನದ ಫಲವಾಗಿ ವ್ಯಕ್ತಿಯ ರಾಜಕೀಯ ಅರಿವು ಹೆಚ್ಚುತ್ತದೆ. ಸಾರ್ವಜನಿಕ ವಲಯದಲ್ಲಿ ಸರಿಯಾದ ರಾಜಕೀಯ ಮಾಹಿತಿಗಳು ಪ್ರಜೆಗಳಿಗೆ ಮುಕ್ತವಾಗಿ ಮತ್ತು ಪಾರದರ್ಶಕವಾಗಿ ಲಭ್ಯವಿರಬೇಕು. Denk (2018) ರವರ ಪ್ರಕಾರ ರಾಜಕೀಯ ಮಾಹಿತಿಗಳು ಒಂದು ಮಹತ್ತರವಾದ ಶಕ್ತಿ. ಈ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿದಾಗ ಮಾತ್ರ ದೃಢ ರಾಜಕೀಯ ವ್ಯವಸ್ಥೆಯನ್ನು ಸೃಷ್ಟಿಸಬಹುದು. ರಾಜಕೀಯ ಅರಿವು ಮೂಡಿರುವ ಒಬ್ಬ ಜವಾಬ್ದಾರಿಯುತ ವ್ಯಕ್ತಿಯು ಸ್ಥಿರ ರಾಜಕೀಯ ಅಭಿಪ್ರಾಯ, ಹೆಚ್ಚಿನ ಸೈದ್ಧಾಂತಿಕ ಸಹನೆ, ಮತ್ತು ರಾಜಕೀಯ ಅಭ್ಯರ್ಥಿಗಳ ವಿವರ ಮುಂತಾದವುಗಳೊಂದಿಗೆ ಉತ್ತಮ ರಾಜಕೀಯ ವರ್ತನೆಯನ್ನು ಪ್ರದರ್ಶಿಸುತ್ತಾನೆ ಮತ್ತು ಸೂಕ್ತ ಅಭ್ಯರ್ಥಿಗಳಿಗೆ ಯಾವುದೇ ಆಮೀಷಗಳಿಗೆ ಬಲಿಯಾಗದೆ ಮತವನ್ನು ನೀಡುತ್ತಾನೆ (Kleinberg and Lau, 2019).

ಸಂಶೋಧನಾ ಪದ್ಧತಿ (Researh Methodology)

ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮತ್ತು ಪ್ರಜಾಪ್ರಭುತ್ವವನ್ನು ಸಂರಕ್ಷಿಸುವಲ್ಲಿ ಯುವ ಜನತೆಯ ಪಾತ್ರ ಪ್ರಮುಖವಾದದ್ದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಚುನಾವಣೆಯ ಸಮಯದಲ್ಲಿ ಮತದಾನ ಮಾಡುವಾಗ ಜನರು ಅಭ್ಯರ್ಥಿಯ ಬಗೆಗಿನ ಹಲವಾರು ಅಂಶಗಳನ್ನು ಪರಿಗಣಿಸಿ ಮತ ಚಲಾಯಿಸುತ್ತಾರೆ. ಭಾರತದಲ್ಲಿ ಜನಪ್ರತಿನಿಧಿಗಳ ಆಯ್ಕೆ ಬಹುಪಾಲು ಸಂದರ್ಭಗಳಲ್ಲಿ ಅಭ್ಯರ್ಥಿಯ ಅರ್ಹತೆಯ ಆಧಾರದ ಮೇಲೆ ಆಗುವುದಿಲ್ಲ. ಪ್ರಜೆಗಳು ಅಭ್ಯರ್ಥಿಯ ಜಾತಿ, ಧರ್ಮ, ಅಭ್ಯರ್ಥಿಯು ಸ್ಥಳೀಯನೇ?, ಮುಂತಾದ ಅಂಶಗಳನ್ನು ಪರಿಗಣಿಸಿ ಮತ ಚಲಾಯಿಸುತ್ತಾರೆ. ಈ ಹಿನ್ನೆಲೆಯಲ್ಲಿ ರಾಜಕೀಯ ಅರಿವಿಗೆ ಸಂಬಂಧಿಸಿದಂತೆ, ಸ್ನಾತಕ ವಿದ್ಯಾರ್ಥಿಗಳ ಗ್ರಹಿಕೆ ಮತ್ತು ಜಾಗೃತಿಯ ಮಟ್ಟವನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಗುರಿ ಮತ್ತು ನಿರ್ದಿಷ್ಟ ಉದ್ದೇಶಗಳು (Aim and Specific Objectives)

ಈ ಅಧ್ಯಯನದ ಪ್ರಮುಖ ಗುರಿಯು ಮತದಾನ ಮಾಡುವ ಸಂದರ್ಭದಲ್ಲಿ ಸ್ನಾತಕ ವಿದ್ಯಾರ್ಥಿಗಳು ಅನುಸರಿಸುವ ಮಾದರಿಯನ್ನು (Voting Pattern) ವಿವರಿಸುವುದಾಗಿದೆ. ಅಧ್ಯಯನವೂ ಕೆಳಗಿನ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದೆ. ಅವುಗಳೆಂದರೆ –

1. ಸ್ನಾತಕ ವಿದ್ಯಾರ್ಥಿಗಳ ರಾಜಕೀಯ ಗ್ರಹಿಕೆಯನ್ನು (Political Perception) ತಿಳಿಯುವುದು;
2. ಸ್ನಾತಕ ವಿದ್ಯಾರ್ಥಿಗಳ ಸಾಮಾಜಿಕ ಧಾರ್ಮಿಕ ಗ್ರಹಿಕೆಯನ್ನು (Socio-religious Perception) ಅರ್ಥೈಸುವುದು;
3. ಸ್ನಾತಕ ವಿದ್ಯಾರ್ಥಿಗಳ ಆರ್ಥಿಕ ಗ್ರಹಿಕೆಯನ್ನು (Economic Pattern) ತಿಳಿಯುವುದು; ಮತ್ತು
4. ಸ್ನಾತಕ ವಿದ್ಯಾರ್ಥಿಗಳು ಮತದಾನ ಮಾಡುವಾಗ ಪರಿಗಣಿಸುವ ಇತರ ಸಾಮಾನ್ಯ ಮಾದರಿಯನ್ನು (Other General Pattern of Voting) ತಿಳಿಯುವುದು.

ಮೇಲಿನ ಉದ್ದೇಶಗಳಿಗೆ ಅನುಗುಣವಾಗಿ ಸಂಶೋಧಕರು **ವಿವರಣಾತ್ಮಕ ಸಂಶೋಧನಾ ವಿನ್ಯಾಸ**ವನ್ನು (Descriptive Research Design) ಅಳವಡಿಸಿಕೊಂಡಿದ್ದಾರೆ.

ಅಧ್ಯಯನ ಕ್ಷೇತ್ರ (Area of Study)

ಈ ಅಧ್ಯಯನಕ್ಕಾಗಿ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ ವಿದ್ಯಾರ್ಥಿಗಳಿಂದ ಆನ್ಲೈನ್ ಸಮೀಕ್ಷೆಯ ಮುಖಾಂತರ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ.

ಸೇರ್ಪಡೆ ಮತ್ತು ಹೊರಗೆಡುವಿಕೆಯ ಮಾನದಂಡಗಳು (Inclusion and Exclusion Criteria)

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ ವಿದ್ಯಾರ್ಥಿಗಳಿಂದ ಈ ಕೆಳಗಿನ ಮಾನದಂಡಗಳ ಆಧಾರದ ಮೇಲೆ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ.

1. ವಿದ್ಯಾರ್ಥಿಯು ಕನಿಷ್ಠಪಕ್ಷ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ವಿಧಾನಸಭೆ ಅಥವಾ ಲೋಕಸಭೆ ಇವುಗಳಲ್ಲಿ ಯಾವುದಾದರೂ ಒಂದು ಹಂತದ ಚುನಾವಣೆಯಲ್ಲಿ ಮತದಾನ ಮಾಡಿರಬೇಕು.
2. ಮತದಾನ ಮಾಡುವ ಕನಿಷ್ಠ ವಯಸ್ಸನ್ನು ತಲುಪಿದ್ದು, ಮತದಾನದ ಗುರುತಿನ ಚೀಟಿಯನ್ನು ಹೊಂದಿದ್ದು ಯಾವುದೇ ಹಂತದ ಚುನಾವಣೆಯಲ್ಲಿ ಮತದಾನ ಮಾಡದೆ ಇರುವ ವಿದ್ಯಾರ್ಥಿಗಳ ದತ್ತಾಂಶಗಳನ್ನು ಈ ಅಧ್ಯಯನಕ್ಕೆ ಪರಿಗಣಿಸಿರುವುದಿಲ್ಲ.

ವಿಶ್ವ ಮತ್ತು ಮಾದರಿಯ ವಿಧ (Universe and Sampling Method)

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸ್ನಾತಕ ವಿದ್ಯಾರ್ಥಿಗಳು **ಸಂಶೋಧನಾ ವಿಶ್ವದ ಘಟಕ**ಗಳಾಗಿರುತ್ತಾರೆ. **ಅಸಂಭವನೀಯ ಮಾದರಿ ವಿನ್ಯಾಸ**ವಾದ (Non-probability Sampling Method) **ಅನುಕೂಲಕರ ಮಾದರಿ ವಿಧ**ವನ್ನು (Convienient Sampling Method) ಅಳವಡಿಸಿಕೊಂಡು 116 ಸ್ನಾತಕ ವಿದ್ಯಾರ್ಥಿಗಳಿಂದ ದತ್ತಾಂಶವನ್ನು ಸಂಗ್ರಹಿಸಲಾಗಿದೆ. 116 ವಿದ್ಯಾರ್ಥಿಗಳಲ್ಲಿ25 (21.55%) ವಿದ್ಯಾರ್ಥಿಗಳು ಸೇರ್ಪಡೆ ಮಾನದಂಡವನ್ನು ಪೂರೈಸಲ್ಪಡದೆ ಇರುವುದರಿಂದ ಅವರ ದತ್ತಾಂಶಗಳನ್ನು ಪರಿಗಣಿಸಲಾಗಿಲ್ಲ. ಉಳಿದ 91(N) ವಿದ್ಯಾರ್ಥಿಗಳು ಸೇರ್ಪಡೆ ಮಾನದಂಡವನ್ನು ಪೂರೈಸುವುದರಿಂದ ಅವರ ದತ್ತಾಂಶಗಳನ್ನು ಪರಿಗಣಿಸಲಾಗಿದೆ. ಆದ್ದರಿಂದ 91 ವಿದ್ಯಾರ್ಥಿಗಳ ಗುಂಪು **ಮಾದರಿಯ ಗಾತ್ರ**ವಾಗಿರುತ್ತದೆ (Sample Size).

ದತ್ತಾಂಶ ಸಂಗ್ರಹಣೆಯ ಸಾಧನ (Tool of Data Collection)

ಸಂಶೋಧಕರು ಅಧ್ಯಯನದ ಗುರಿ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ಸ್ವಯಂ ಭರ್ತಿ ಮಾಡುವ (Self-administered) ಪ್ರಶ್ನಾವಳಿಯನ್ನು ರಚಿಸಿದ್ದಾರೆ. ಈ ಪ್ರಶ್ನಾವಳಿಯು ಎರಡು ಭಾಗಗಳನ್ನು ಹೊಂದಿದೆ. ಅವುಗಳೆಂದರೆ –

ಭಾಗ– 01 : ವಿದ್ಯಾರ್ಥಿಗಳ ಸಾಮಾನ್ಯ ಮಾಹಿತಿ ಉದಾಹರಣೆಗೆ ಹೆಸರು, ವಯಸ್ಸು, ಲಿಂಗ, ಧರ್ಮ, ಶಿಕ್ಷಣ ಮತ್ತು ವಾಸ ಸ್ಥಳ.

ಭಾಗ – 02 : ಈ ಭಾಗವು ಒಟ್ಟು 21 ಹೇಳಿಕೆಗಳನ್ನು ಒಳಗೊಂಡಿದೆ. ಮುಂದುವರೆದು, ಈ 21 ಹೇಳಿಕೆಗಳನ್ನು 04 ನಿಯತಾಂಕ ಗಳನ್ನಾಗಿ (Parameters) ವಿಂಗಡಿಸಲಾಗಿದೆ.

ನಿಯತಾಂಕ – I : ಸಾಮಾಜಿಕ ಧಾರ್ಮಿಕತೆಗೆ ಸಂಬಂಧಿಸಿದ ಹೇಳಿಕೆ (ಹೇಳಿಕೆ ಸಂಖ್ಯೆ: 1, 2, 3, 9, 14 ಮತ್ತು 19 – ಒಟ್ಟು 06 ಹೇಳಿಕೆಗಳು).

ನಿಯತಾಂಕ – II : ರಾಜಕೀಯಕ್ಕೆ ಸಂಬಂಧಿಸಿದ ಹೇಳಿಕೆಗಳು (ಹೇಳಿಕೆ ಸಂಖ್ಯೆ: 5, 6, 7, 16 ಮತ್ತು 20 – ಒಟ್ಟು 05 ಹೇಳಿಕೆಗಳು)

ನಿಯತಾಂಕ – III : ಆರ್ಥಿಕ ಅಂಶಗಳಿಗೆ ಸಂಬಂಧಿಸಿದ ಹೇಳಿಕೆಗಳು (ಹೇಳಿಕೆ ಸಂಖ್ಯೆ: 10, 12 ಮತ್ತು 13 – ಒಟ್ಟು 03 ಹೇಳಿಕೆಗಳು)

ನಿಯತಾಂಕ – IV : ಇತರೆ ಸಾಮಾನ್ಯ ಅಂಶಗಳಿಗೆ ಸಂಬಂಧಿಸಿದ ಹೇಳಿಕೆಗಳು (ಹೇಳಿಕೆ ಸಂಖ್ಯೆ: 4, 8, 11, 15, 17, 18 ಮತ್ತು 21 – ಒಟ್ಟು 07 ಹೇಳಿಕೆಗಳು)

Choudhari et al. (2015) : ಅವರು ಮಾಡಿದ ಸಂಶೋಧನಾ ಕಾರ್ಯಗಳ ಆಧಾರದ ಮೇಲೆ ಹೇಳಿಕೆಗಳನ್ನು/ಪ್ರಶ್ನೆಗಳನ್ನು ರೂಪಿಸಲಾಗಿದೆ.

ದತ್ತಾಂಶಗಳ ವಿಶ್ಲೇಷಣೆ (Data Analysis)

ದತ್ತಾಂಶ ಸಂಗ್ರಹಿಸಿದ 91 ವಿದ್ಯಾರ್ಥಿಗಳಲ್ಲಿ 67 (73.62%) ವಿದ್ಯಾರ್ಥಿಗಳು 19–22; ಮತ್ತು 24 (26.37%) ವಿದ್ಯಾರ್ಥಿಗಳು 23–26 ವಯೋ ಗುಂಪಿಗೆ ಸೇರಿರುತ್ತಾರೆ. 46 (50.54%).

ISSN : 2249-2429 ಸಂಶೋಧನೆ RNI REG.NO.KARKAN/2011/38712

ವಿದ್ಯಾರ್ಥಿಗಳು ಗಂಡು ಮತ್ತು 45 (49.45%) ರಷ್ಟು ಮಂದಿ ವಿದ್ಯಾರ್ಥಿನಿಯರಾಗಿರುತ್ತಾರೆ.

87 (95.60) ಹಿಂದು, 03 (3.29%) ಮುಸ್ಲಿಂ ಮತ್ತು 01 (1.09) ಕ್ರೈಸ್ತ ಧರ್ಮಕ್ಕೆ ಸೇರಿದ ವಿದ್ಯಾರ್ಥಿಗಳಾಗಿರುತ್ತಾರೆ.

26 (28.57%) ರಷ್ಟು ವಿದ್ಯಾರ್ಥಿಗಳು ಬಿ.ಎ; 51 (56.04) ರಷ್ಟು ವಿದ್ಯಾರ್ಥಿಗಳು ಬಿ.ಕಾಂ; 12 (13.18%) ರಷ್ಟು ವಿದ್ಯಾರ್ಥಿಗಳು ಬಿ.ಎಸ್ಸಿ ಮತ್ತು 02 (2.19%) ರಷ್ಟು ವಿದ್ಯಾರ್ಥಿಗಳು ಬಿ.ಬಿ.ಎ ವ್ಯಾಸಂಗ ಮಾಡುತ್ತಿದ್ದಾರೆ.

71 (78.02%) ರಷ್ಟು ವಿದ್ಯಾರ್ಥಿಗಳು ನಗರ ಪ್ರದೇಶದಲ್ಲಿ ಮತ್ತು 20 (21.97%) ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ ವಾಸಿಸಿರುತ್ತಾರೆ. 71 (78.02%) ರಷ್ಟು ವಿದ್ಯಾರ್ಥಿಗಳು ಲೋಕಸಭಾ ಚುನಾವಣೆ; 64 (70.32%) ರಷ್ಟು ವಿದ್ಯಾರ್ಥಿಗಳು ವಿಧಾನಸಭಾ ಚುನಾವಣೆ; 43 (47.25%) ರಷ್ಟು ವಿದ್ಯಾರ್ಥಿಗಳು ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ; 51 (56.04%) ರಷ್ಟು ವಿದ್ಯಾರ್ಥಿಗಳು ತಾಲೂಕು ಪಂಚಾಯತ್ ಚುನಾವಣೆಯಲ್ಲಿ; ಮತ್ತು 51 (56.04%) ರಷ್ಟು ವಿದ್ಯಾರ್ಥಿಗಳು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ತಮ್ಮ ಮತವನ್ನು ಚಲಾಯಿಸಿರುತ್ತಾರೆ.

ಕೋಷ್ಟಕ–1 : ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಜಾತಿಯ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಜಾತಿಯು ಪ್ರಮುಖವಾದದ್ದು	02 (2.19%)
2.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಜಾತಿಯು ಪ್ರಮುಖವಾದದಲ್ಲ	11 (12.08%)
3.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಜಾತಿಯನ್ನು ಪರಿಗಣಿಸಲೇಬಾರದು	78 (85.71%)

ಕೋಷ್ಟಕ–2 : ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳ ಧರ್ಮದ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಧರ್ಮವು ಪ್ರಮುಖವಾದದ್ದು	08 (8.79%)
2.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಧರ್ಮವು ಪ್ರಮುಖವಾದದಲ್ಲ	16 (17.58%)
3.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಧರ್ಮವನ್ನು ಪರಿಗಣಿಸಲೇಬಾರದು	67 (73.62%)

ಕೋಷ್ಟಕ–3 : ಚುನಾವಣೆಗೆ ಸ್ಪರ್ಧಿಸಿದ ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆಯ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯು ಪ್ರಮುಖವಾದದ್ದು	56 (61.53%)
2.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯು ಪ್ರಮುಖವಾದದಲ್ಲ	11 (12.08%)
3.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಶೈಕ್ಷಣಿಕ ಅರ್ಹತೆಯು ಪರಿಗಣಿಸಲೇಬಾರದು	24 (26.37%)

ಕೋಷ್ಟಕ–4 : ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ವರ್ಚಸ್ಸು/ರಾಜಕೀಯ ಅಂತಸ್ತು/ಪ್ರಸಿದ್ಧತೆಯ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ವರ್ಚಸ್ಸು/ರಾಜಕೀಯ ಅಂತಸ್ತು/ಪ್ರಸಿದ್ಧತೆಯು ಪ್ರಮುಖವಾದದ್ದು	32 (35.16%)
2.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ವರ್ಚಸ್ಸು/ರಾಜಕೀಯ ಅಂತಸ್ತು/ಪ್ರಸಿದ್ಧತೆಯ ಪ್ರಮುಖವಾದದಲ್ಲ	15 (16.48%)
3.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ವರ್ಚಸ್ಸು/ರಾಜಕೀಯ ಅಂತಸ್ತು/ಪ್ರಸಿದ್ಧತೆಯ ಪರಿಗಣಿಸಲೇಬಾರದು	44 (48.35%)

ಕೋಷ್ಟಕ–5 : ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯು ಯಾವ ರಾಜಕೀಯ ಪಕ್ಷದಿಂದ ಸ್ಪರ್ಧಿಸಿದ್ದಾನೆ ಎಂಬುದರ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಯಾವ ರಾಜಕೀಯ ಪಕ್ಷದಿಂದ ಸೇರಿದ್ದಾನೆ ಎಂಬುದು ಪರಿಗಣಿಸಿ ಮತ ಚಲಾಯಿಸುತ್ತೇನೆ	49 (53.84%)
2.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಯಾವ ರಾಜಕೀಯ ಪಕ್ಷದಿಂದ ಸೇರಿದ್ದಾನೆ ಎಂಬುದನ್ನು ಪರಿಗಣಿಸದೆ ಮತ ಚಲಾಯಿಸುತ್ತೇನೆ	23 (25.27%)
3.	ತಟಸ್ಥ	19 (20.87%)

ಕೋಷ್ಟಕ–6 : ರಾಜಕೀಯ ಪಕ್ಷದ ಚುನಾವಣಾ ಪ್ರಣಾಳಿಕೆಯ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ರಾಜಕೀಯ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಪರಿಗಣಿಸಿ ಮತ ಚಲಾಯಿಸುತ್ತೇನೆ	49 (53.84%)
2.	ರಾಜಕೀಯ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಪರಿಗಣಿಸದೆ ಮತ ಚಲಾಯಿಸುತ್ತೇನೆ	24 (26.37%)
3.	ತಟಸ್ಥ	24 (26.37%)

ಕೋಷ್ಟಕ–7 : ಚುನಾವಣೆಗೆ ಸ್ಪರ್ಧಿಸಿರುವ ಆಭ್ಯರ್ಥಿಯ ರಾಜಕೀಯ ಪಕ್ಷದ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಅಭ್ಯರ್ಥಿಯು ರಾಷ್ಟ್ರೀಯ ರಾಜಕೀಯ ಪಕ್ಷದಿಂದ ಆತ/ಆಕೆ ಸ್ಪರ್ಧಿಸಿದ್ದರೆ ಮಾತ್ರ ಮತಚಲಾಯಿಸುತ್ತೇನೆ	19 (20.87%)
2.	ಅಭ್ಯರ್ಥಿಯು ರಾಷ್ಟ್ರೀಯ ರಾಜಕೀಯ ಪಕ್ಷದಿಂದ ಅಥವಾ ಸ್ಥಳೀಯ ರಾಜಕೀಯ ಪಕ್ಷದಿಂದ ಸ್ಪರ್ಧಿಸಿದ್ದಾನೆಯೇ/ಸ್ಪರ್ಧಿಸಿದ್ದಾಳೆಯೇ ಎಂಬುದನ್ನು ಪರಿಗಣಿಸುವುದಿಲ್ಲ	55 (60.43%)
3.	ಅಭ್ಯರ್ಥಿಯು ಸ್ಥಳೀಯ ರಾಜಕೀಯ ಪಕ್ಷದಿಂದ ಸ್ಪರ್ಧಿಸಿದರೆ ಮಾತ್ರ ಪರಿಗಣಿಸುತ್ತೇನೆ	17 (18.68%)

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕೋಷ್ಟಕ–8 : ಅಭ್ಯರ್ಥಿಯು ಮುಂದೆ (ಚುನಾಯಿತನಾದ ನಂತರ) ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳು ಪರಿಗಣನೆ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಅಭ್ಯರ್ಥಿಯು ಮುಂದೆ (ಚುನಾಯಿತನಾದ ನಂತರ) ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳನ್ನು ಪರಿಗಣಿಸಿ ಮತಚಲಾಯಿಸುತ್ತೇನೆ	81 (89.01%)
2.	ಅಭ್ಯರ್ಥಿಯು ಮುಂದೆ (ಚುನಾಯಿತನಾದ ನಂತರ) ಕೈಗೊಳ್ಳಬಹುದಾದ ಅಭಿವೃದ್ಧಿ ಕಾರ್ಯಗಳನ್ನು ಪರಿಗಣಿಸದೆ ಮತಚಲಾಯಿಸುತ್ತೇನೆ	04 (4.39%)
3.	ತಟಸ್ಥ	06 (6.59%)

ಕೋಷ್ಟಕ–9 : ಕುಟುಂಬದ ಸದಸ್ಯರ ಪ್ರಭಾವ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಮತ ಚಲಾಯಿಸುವಾಗ ಕುಟುಂಬದ ಸದಸ್ಯರ ಪ್ರಭಾವಕ್ಕೆ ಒಳಗಾಗಿ ಮತಚಲಾಯಿಸುತ್ತೇನೆ	15 (16.48%)
2.	ಮತ ಚಲಾಯಿಸುವಾಗ ಕುಟುಂಬದ ಯಾವುದೇ ಸದಸ್ಯರ ಪ್ರಭಾವಕ್ಕೆ ಒಳಗಾಗದೆ ಮತ ಚಲಾಯಿಸುತ್ತೇನೆ	56 (61.53%)
3.	ತಟಸ್ಥ	20 (21.97%)

ಕೋಷ್ಟಕ–10 : ಹಣ ಪಡೆದು ಮತ ಚಲಾಯಿಸುವುದರ ಬಗ್ಗೆ ಅಭಿಪ್ರಾಯ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಹಣ ಸ್ವೀಕರಿಸುವುದು ಮತ್ತು ಹಣ ನೀಡಿದ ವ್ಯಕ್ತಿಗೆ ಮತ ನೀಡುವುದು ಸರಿ	05 (5.49%)
2.	ಹಣ ಸ್ವೀಕರಿಸುವುದು ಸರಿ ಆದರೆ ಹಣ ನೀಡಿದ ವ್ಯಕ್ತಿಗೆ ಮತ ನೀಡುವುದು ತಪ್ಪು	21 (23.07%)
3.	ಹಣವನ್ನು ಸ್ವೀಕರಿಸಲೇಬಾರದು	65 (71.42%)

ಕೋಷ್ಟಕ–11 : ಸಾಮಾಜಿಕ ಮಾಧ್ಯಮದ ಪ್ರಭಾವ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಅಭ್ಯರ್ಥಿಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಲಭ್ಯವಿರುವ ಮಾಹಿತಿಯ ಪ್ರಭಾವಕ್ಕೆ ಒಳಗಾಗಿ ಮತಚಲಾಯಿಸುತ್ತೇನೆ	36 (39.56%)
2.	ಅಭ್ಯರ್ಥಿಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಲಭ್ಯವಿರುವ ಮಾಹಿತಿಯ ಪ್ರಭಾವಕ್ಕೆ ಒಳಗಾಗದೆ ಮತ ಚಲಾಯಿಸುತ್ತೇನೆ	41 (45.05%)
3.	ಯಾವುದೇ ಸಾಮಾಜಿಕ ಜಾಲತಾಣ ಅಥವಾ ಮಾಧ್ಯಮವನ್ನು ಬಳಸುವುದಿಲ್ಲ	14 (15.38%)

ಕೋಷ್ಟಕ–12 : ಚುನಾವಣೆಯ ಸಂದರ್ಭದಲ್ಲಿ ಮದ್ಯ ಸ್ವೀಕರಿಸಿ ಮತ ನೀಡುವುದರ ಬಗ್ಗೆ ಅಭಿಪ್ರಾಯ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಮದ್ಯವನ್ನು ಸ್ವೀಕರಿಸಿ ಮತ ಚಲಾಯಿಸುವುದು ಸರಿ	36 (39.56%)
2.	ಮದ್ಯವನ್ನು ಸ್ವೀಕರಿಸಿ, ಮದ್ಯ ವಿತರಿಸದ ಅಭ್ಯರ್ಥಿಗೆ ಮತ ಚಲಾಯಿಸುವುದು ಸರಿ	41 (45.05%)
3.	ಮದ್ಯವನ್ನು ಸ್ವೀಕರಿಸಲೇಬಾರದು	14 (15.38%)

ಕೋಷ್ಟಕ–13 : ವಸ್ತುಗಳನ್ನು (ಉದಾಹರಣೆಗೆ ಚಿನ್ನ/ಬೆಳ್ಳಿ/ಸೀರೆ/ಇತರ ವಸ್ತುಗಳು) ಪಡೆದು ಮತ ಚಲಾಯಿಸುವುದರ ಬಗ್ಗೆ ಅಭಿಪ್ರಾಯ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ವಸ್ತುಗಳನ್ನು ಸ್ವೀಕರಿಸಿ ಮತಚಲಾಯಿಸುವುದು ಸರಿ	03 (3.29%)
2.	ವಸ್ತುಗಳನ್ನು ಸ್ವೀಕರಿಸಿ, ವಸ್ತುಗಳನ್ನು ವಿತರಿಸದ ಅಭ್ಯರ್ಥಿಗೆ ಮತ ಚಲಾಯಿಸುವುದು ಸರಿ	19 (20.87%)
3.	ವಸ್ತುಗಳನ್ನು ಸ್ವೀಕರಿಸಲೇಬಾರದು	69 (75.82%)

ಕೋಷ್ಟಕ–14 : ಸ್ನೇಹಿತರ ಪ್ರಭಾವ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಮತ ಚಲಾಯಿಸುವಾಗ ಸ್ನೇಹಿತರ ಪ್ರಭಾವಕ್ಕೆ ಒಳಗಾಗಿ ಮತಚಲಾಯಿಸುತ್ತೇನೆ	05 (5.49%)
2.	ಮತ ಚಲಾಯಿಸುವಾಗ ಸ್ನೇಹಿತರ ಪ್ರಭಾವಕ್ಕೆ ಒಳಗಾಗದೆ ಮತ ಚಲಾಯಿಸುತ್ತೇನೆ	23 (69.23%)
3.	ತಟಸ್ಥ	63 (25.27%)

ಕೋಷ್ಟಕ–15 : ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯ ಪ್ರಾಮಾಣಿಕತೆ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಪ್ರಾಮಾಣಿಕ ಅಭ್ಯರ್ಥಿಗೆ ಮತ ಚಲಾಯಿಸುತ್ತೇನೆ	78 (85.71%)
2.	ಪ್ರಾಮಾಣಿಕ ಅಭ್ಯರ್ಥಿಗೆ ಮತ ಚಲಾಯಿಸುತ್ತೇನೆ	06 (6.59%)
3.	ತಟಸ್ಥ	07 (7.69%)

ಕೋಷ್ಟಕ–16 : ರಾಜಕೀಯ ಹಿನ್ನೆಲೆವುಳ್ಳ ಕುಟುಂಬದ ಅಭ್ಯರ್ಥಿ

ಕ್ರ. ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ರಾಜಕೀಯ ಹಿನ್ನೆಲೆವುಳ್ಳ ಕುಟುಂಬದ ಅಭ್ಯರ್ಥಿಗೆ ಮತ ಚಲಾಯಿಸುವುದು ಸರಿ	22 (24.17%)
2.	ರಾಜಕೀಯ ಹಿನ್ನೆಲೆವುಳ್ಳ ಕುಟುಂಬದ ಅಭ್ಯರ್ಥಿಗೆ ಮತ ಚಲಾಯಿಸುವುದು ತಪ್ಪು	25 (27.47%)
3.	ತಟಸ್ಥ	44 (48.35%)

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕೋಷ್ಟಕ–17 : ಅಭ್ಯರ್ಥಿಯು ಈ ಹಿಂದೆ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಅಭ್ಯರ್ಥಿಯು ಈ ಹಿಂದೆ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಪರಿಗಣನೆ ಸರಿ	76 (83.51%)
2.	ಅಭ್ಯರ್ಥಿಯು ಈ ಹಿಂದೆ ಕೈಗೊಂಡ ಅಭಿವೃದ್ಧಿ ಕಾರ್ಯಗಳ ಪರಿಗಣನೆ ತಪ್ಪು	07 (7.69%)
3.	ತಟಸ್ಥ	08 (7.79%)

ಕೋಷ್ಟಕ–18 : ಸಹಾನುಭೂತಿಯ (Sympathy) ಆಧಾರದ ಮೇಲೆ ಮತ ಚಲಾವಣೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಸಹಾನುಭೂತಿಯ ಆಧಾರದ ಮೇಲೆ ಮತ ಚಲಾವಣೆ ಸರಿ	08 (7.79%)
2.	ಸಹಾನುಭೂತಿಯ ಆಧಾರದ ಮೇಲೆ ಮತ ಚಲಾವಣೆ ತಪ್ಪು	58 (63.73%)
3.	ತಟಸ್ಥ	25 (27.47%)

ಕೋಷ್ಟಕ–19 : ಅಭ್ಯರ್ಥಿಯ ಪರಿಚಯ (Acquaintance)

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಯು ನನ್ನ ಪರಿಚಯಸ್ತನಾಗಿದ್ದರೆ ಒಳ್ಳೆಯದು	23 (25.27%)
2.	ಸಹಾನುಭೂತಿಯ ಆಧಾರದ ಮೇಲೆ ಮತ ಚಲಾವಣೆ ತಪ್ಪು	31 (34.06%)
3.	ತಟಸ್ಥ	37 (40.64%)

ಕೋಷ್ಟಕ–20 : ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮತ ಚಲಾಯಿಸುವಾಗ ಕೇಂದ್ರದಲ್ಲಿ ಸರ್ಕಾರ ರಚಿಸಿದ ರಾಜಕೀಯ ಪಕ್ಷಕ್ಕೆ ಮತ/ಪಕ್ಷದ ಪರಿಗಣನೆ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮತ ಚಲಾಯಿಸುವಾಗ ಕೇಂದ್ರದಲ್ಲಿ ಸರ್ಕಾರ ರಚಿಸಿದ ರಾಜಕೀಯ ಪಕ್ಷಕ್ಕೆ ಮತ/ಪಕ್ಷದ ಪರಿಗಣನೆ ಸರಿ	46 (50.54%)
2.	ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮತ ಚಲಾಯಿಸುವಾಗ ಕೇಂದ್ರದಲ್ಲಿ ಸರ್ಕಾರ ರಚಿಸಿದ ರಾಜಕೀಯ ಪಕ್ಷಕ್ಕೆ ಮತ/ಪಕ್ಷದ ಪರಿಗಣನೆ ತಪ್ಪು	23 (25.27%)
3.	ತಟಸ್ಥ	28 (30.76%)

ಕೋಷ್ಟಕ–21 : NOTA (None of the Above)ಗೆ ಸಂಬಂಧಿಸಿದ ಅಭಿಪ್ರಾಯ

ಕ್ರ.ಸಂ.	ಪ್ರತಿಕ್ರಿಯೆ	ಪ್ರತಿಕ್ರಿಯಿಸಿದವರ ಸಂಖ್ಯೆ
1.	NOTA (None of the Above) ತುಂಬಾ ಅವಶ್ಯಕ	40 (43.95%)
2.	NOTA (None of the Above) ಅವಶ್ಯಕವಲ್ಲ	32 (35.16%)
3.	ತಟಸ್ಥ	19 (20.87%)

ಚರ್ಚೆ (Discussions)

ಮತ ಚಲಾಯಿಸುವಾಗ ಜಾತಿ ಮತ್ತು ಧರ್ಮವನ್ನು ಪರಿಗಣಿಸುವುದು ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ವಗಳನ್ನು ದುರ್ಬಲಗೊಳಿಸುತ್ತದೆ. ಏಕೆಂದರೆ:

ಸಮಾನತೆ ಮತ್ತು ನ್ಯಾಯೋಚಿತತೆ : ಸಮಾನತೆ ಮತ್ತು ನ್ಯಾಯೋಜಿತತೆಯು ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಆಧಾರ ಸ್ತಂಭಗಳು. ತಾರತಮ್ಯ ಮತ್ತು ಅಸಮಾನತೆಯು ಪಾರದರ್ಶಕ ಚುನಾವಣಾ ವ್ಯವಸ್ಥೆಯನ್ನು ಹೊಂದಿರುವ ಪ್ರಜಾಪ್ರಭುತ್ವ ಪದ್ಧತಿಯನ್ನು ದುರ್ಬಲಗೊಳಿಸುತ್ತದೆ.

ಅರ್ಹತೆ ಮತ್ತು ಸಾಮರ್ಥ್ಯ : ಪ್ರತಿಯೊಬ್ಬ ನಾಗರಿಕನು ಅವರ ಜಾತಿ ಅಥವಾ ಧರ್ಮವನ್ನು ಲೆಕ್ಕಿಸದೆ ಸಮಾನ ಪರಿಗಣನೆಗೆ ಅರ್ಹರು. ರಾಜಕೀಯ ನಿರ್ಧಾರಗಳು ಅಭ್ಯರ್ಥಿಗಳ ಅರ್ಹತೆ ಮತ್ತು ಸಾಮರ್ಥ್ಯವನ್ನು ಆಧರಿಸಿರಬೇಕು, ಅವರ ಜಾತಿ ಅಥವಾ ಧಾರ್ಮಿಕತೆಯನಲ್ಲ. ಜಾತಿ ಮತ್ತು ಧರ್ಮದ ಆಧಾರದ ಮೇಲೆ ನಾಯಕರನ್ನು ಆಯ್ಕೆ ಮಾಡುವುದರಿಂದ ಹೆಚ್ಚು ಅರ್ಹ ಅಭ್ಯರ್ಥಿಗಳನ್ನು ಕಡೆಗಣಿಸಿದಂತಾಗುತ್ತದೆ. **ವಿಭಜನೆ:** ಮತದಾನದಲ್ಲಿ ಜಾತಿ ಮತ್ತು ಧರ್ಮಕ್ಕೆ ಒತ್ತು ನೀಡುವುದರಿಂದ ಸಮುದಾಯಗಳ ನಡುವೆ ಒಡಕು ಮೂಡುತ್ತದೆ. ಇದು ಎಲ್ಲಾ ನಾಗರಿಕರ ಮೇಲೆ ಪರಿಣಾಮ ಬೀರಿ, ತಾರತಮ್ಯ ಆಧಾರಿತ ರಾಜಕೀಯ ವ್ಯವಸ್ಥೆಯನ್ನು ಬೆಂಬಲಿಸಿದಂತಾಗುತ್ತದೆ.

ಜಾತ್ಯತೀತತೆ : ಅನೇಕ ಪ್ರಜಾಪ್ರಭುತ್ವಗಳು ಜಾತ್ಯತೀತತೆಯನ್ನು ಎತ್ತಿಹಿಡಿಯುತ್ತವೆ. ಧರ್ಮದ ಆಧಾರದ ಮೇಲೆ ಮತದಾನವು ಈ ತತ್ವಕ್ಕೆ ವಿರುದ್ಧವಾಗಿದೆ (ಕೋಷ್ಟಕ 1 ಮತ್ತು 2).

ಮತಗಳನ್ನು ಚಲಾಯಿಸುವಾಗ ಸ್ನೇಹಿತರು ಮತ್ತು ಕುಟುಂಬದ ಸದಸ್ಯರಿಂದ ಪ್ರಭಾವಿತರಾಗಬಾರದು. ಏಕೆಂದರೆ, ಪ್ರಜೆಗಳ ನಿರ್ಧಾರಗಳು ಅಭ್ಯರ್ಥಿಗಳ ಅರ್ಹತೆ ಮತ್ತು ಅವರ ನಾಯಕತ್ವದ ಸಾಮರ್ಥ್ಯದ ಬಗ್ಗೆ ಅವರ ಸ್ವಂತ ತಿಳುವಳಿಕೆಯನ್ನು ಆಧರಿಸಿರಬೇಕು. ಮತದಾನವು ವೈಯಕ್ತಿಕ ಜವಾಬ್ದಾರಿಯಾಗಿದ್ದು ಅದು ವೈವಿಧ್ಯಮಯ ದೃಷ್ಟಿಕೋನಗಳು ಮತ್ತು ಮಾಹಿತಿಯ ಚಿಂತನಶೀಲತೆಯನ್ನು ಅವಲಂಬಿಸಬೇಕಾಗಿರುತ್ತದೆ (ಕೋಷ್ಟಕ 9 ಮತ್ತು 14).

ಮತಗಳನ್ನು ಚಲಾಯಿಸುವಾಗ ರಾಜಕೀಯ ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಪರಿಗಣಿಸಬೇಕು. ಏಕೆಂದರೆ, ಅದು ಅವರ ಉದ್ದೇಶಿತ ನೀತಿಗಳು, ಯೋಜನೆಗಳು ಮತ್ತು ಆಡಳಿತದ ದೃಷ್ಟಿಕೋನವನ್ನು ವಿವರಿಸುತ್ತದೆ. ಇದು ಪಕ್ಷ ಮತ್ತು ಮತದಾರರ ನಡುವಿನ ಸೇತುವೆಯಂತೆ ಕಾರ್ಯನಿರ್ವಹಿಸುತ್ತದೆ. ಚುನಾಯಿತರಾದರೆ ಅವರು ಸಾಧಿಸುವ ಗುರಿಯನ್ನು ನಿರ್ದಿಷ್ಟಪಡಿಸುತ್ತದೆ. ಪ್ರಣಾಳಿಕೆಗಳನ್ನು ಪರಿಶೀಲಿಸುವ ಮೂಲಕ, ಆರ್ಥಿಕತೆ, ಆರೋಗ್ಯ, ರಕ್ಷಣೆ, ಶಿಕ್ಷಣ, ಪರಿಸರ ಮತ್ತು ಸಾಮಾಜಿಕ ಕಲ್ಯಾಣದಂತಹ ವಿಷಯಗಳಲ್ಲಿ ಯಾವ ಪಕ್ಷವು ತಮ್ಮ ಆದ್ಯತೆಗಳು ಮತ್ತು ಮೌಲ್ಯಗಳೊಂದಿಗೆ ಹೆಚ್ಚು ನಿಕಟವಾಗಿ ಹೊಂದಾಣಿಕೆ ಮಾಡುತ್ತದೆ ಎಂಬುದನ್ನು ಮತದಾರರು ನಿರ್ಣಯಿಸಬಹುದು (ಕೋಷ್ಟಕ 06).

ತಿಳುವಳಿಕೆಯುಳ್ಳ ನಿರ್ಧಾರ–ಮಾಡುವಿಕೆಯು (Decision Making) ಅಭ್ಯರ್ಥಿಗಳು ಪ್ರತಿನಿಧಿಸುವ ಸರ್ಕಾರದ ನಿರ್ದೇಶನ ಮತ್ತು ನೀತಿಗಳನ್ನು ರೂಪಿಸಲು ಕೊಡುಗೆ ನೀಡುತ್ತದೆ. ರಾಷ್ಟ್ರೀಯ ರಾಜಕೀಯ ಪಕ್ಷ ಅಥವಾ ಪ್ರಾದೇಶಿಕ ರಾಜಕೀಯ ಪಕ್ಷದ ನಡುವಿನ ಆಯ್ಕೆಯು ಪ್ರಜೆಗಳ ಸಮಸ್ಯೆಗಳ ಸ್ವರೂಪವನ್ನು ಮತ್ತು ಚುನಾವಣೆಯ ಸಂದರ್ಭದಂತಹ ವಿವಿಧ ಅಂಶಗಳನ್ನು ಅವಲಂಬಿಸಿರುತ್ತದೆ. ರಾಷ್ಟ್ರೀಯ

ಪಕ್ಷಗಳು ಸಾಮಾನ್ಯವಾಗಿ ವಿಶಾಲವಾದ ನೀತಿಗಳನ್ನು ಪ್ರಸ್ತುತಪಡಿಸುತ್ತವೆ. ಮತದಾರರು ಯಾವ ಪಕ್ಷದ ಪ್ರಣಾಳಿಕೆ ತಮ್ಮ ಆದ್ಯತೆಗಳು ಮತ್ತು ಕಾಳಜಿಗಳೊಂದಿಗೆ ಹೆಚ್ಚು ನಿಕಟವಾಗಿ ಹೊಂದಿಕೆಯಾಗುತ್ತದೆ ಎಂಬುದನ್ನು ಪರಿಗಣಿಸಬೇಕು, ಅವುಗಳು ರಾಷ್ಟ್ರೀಯ ಅಥವಾ ಪ್ರಾದೇಶಿಕ ವ್ಯಾಪ್ತಿಯಲ್ಲಿರಲಿ. ಅಂತಿಮವಾಗಿ, ಯಾವ ಪಕ್ಷವು ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಟ್ಟದಲ್ಲಿ ಮತದಾರರ ಅಗತ್ಯಗಳನ್ನು ಉತ್ತಮವಾಗಿ ಪ್ರತಿನಿಧಿಸುತ್ತದೆ ಮತ್ತು ಪರಿಹರಿಸುತ್ತದೆ ಎಂಬುದರ ಮೇಲೆ ನಿರ್ಧಾರವು ಆಧರಿಸಿರಬೇಕು (ಕೋಷ್ಟಕ 5, 7, ಮತ್ತು 20).

ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿ ಹಾಗೂ ಯುವ ಸಮುದಾಯದ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ ತೀವ್ರವಾಗಿದೆ. ಈ ಪ್ರವೃತ್ತಿ ಯುವ ಸಮುದಾಯದ ಗ್ರಹಿಕೆಯ ಸಾಮರ್ಥ್ಯದ ಮೇಲೆ ಪ್ರಭಾವ ಬೀರುವ ಶಕ್ತಿಯನ್ನು ಹೊಂದಿದೆ. Saroha (2016) ಅವರು ಜನತೆಯ ಮೇಲೆ ಸಾಮಾಜಿಕ ಮಾಧ್ಯಮಗಳ ಪ್ರಭಾವ ಕುರಿತು ಸಂಶೋಧನೆಯನ್ನು ಕೈಗೊಂಡಿರುತ್ತಾರೆ. ಅವರ ಪ್ರಕಾರ ರಾಜಕೀಯ ಮತ್ತು ರಾಜಕಾರಣಿಗಳ ಬಗೆಗಿನ ಆಡಳಿತ ವ್ಯವಸ್ಥೆಯ ಹಲವು ಅಂಶಗಳ ಬಗೆಗಿನ ಮಾಹಿತಿಯನ್ನು ಸುಲಭವಾಗಿ ಯುವಕರಿಗೆ ತಲುಪಿಸುವ ಮಾರ್ಗವಾಗಿ ಸಾಮಾಜಿಕ ಮಾಧ್ಯಮಗಳು ಮಾರ್ಪಟ್ಟಿವೆ. ಇದು ರಾಜಕೀಯ ಮತ್ತು ರಾಜಕಾರಣಿಗಳಿಗೆ ಸಂಬಂಧಿಸಿದಂತೆ ಗ್ರಹಿಕೆಯನ್ನು ರೂಪಿಸುವ ಸಾಧನವು ಕೂಡ ಆಗಿದೆ ಎಂದಿದ್ದಾರೆ. ಆದರೆ, ಯುವಕರ ರಾಜಕೀಯ ಗ್ರಹಿಕೆಯ ಸ್ವರೂಪವನ್ನು ಸಾಮಾಜಿಕ ಮಾಧ್ಯಮಗಳು ಸರಿಯಾಗಿ ರೂಪಿಸುತ್ತಿದೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಏಕೆಂದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುದ್ದಿಗಳು ವಾಸ್ತವಕ್ಕೆ ಹತ್ತಿರವಾಗಿದೆಯೇ? ಎಂಬುದನ್ನು ನಿರ್ಧರಿಸುವ ಅಥವಾ ಪ್ರಶ್ನಿಸುವ ಮನಸ್ಥಿತಿಯನ್ನು ಯುವಜನರು ಹಲವು ಬಾರಿ ಹೊಂದಿರುವುದಿಲ್ಲ (Kanagavel and Chandrasekaran, 2014) (ಕೋಷ್ಟಕ 11).

ಮತದಾರರ ಮೇಲೆ ಪ್ರಭಾವ ಬೀರಲು ಹಣ, ಮದ್ಯ, ಅಥವಾ ಇತರ ವಸ್ತು ಸರಕುಗಳ ವಿತರಣೆಯು ಪ್ರಜಾಸತ್ತಾತ್ಮಕ ಚುನಾವಣೆಗಳ ಸಮಗ್ರತೆಗೆ ತೀವ್ರ ಬೆದರಿಕೆಯಾಗಿದೆ. ಸಾಮಾನ್ಯವಾಗಿ "ಮತ–ಖರೀದಿ" ಎಂದು ಕರೆಯಲ್ಪಡುವ ಈ ಅಭ್ಯಾಸವು ನ್ಯಾಯಯುತ ಪ್ರಾತಿನಿಧ್ಯ ಮತ್ತು ಮುಕ್ತ ಆಯ್ಕೆಯ ತತ್ವಗಳನ್ನು ದುರ್ಬಲಗೊಳಿಸುತ್ತದೆ.

ಮತ–ಖರೀದಿಯನ್ನು ಎದುರಿಸುವ ಪ್ರಯತ್ನಗಳಲ್ಲಿ ಚುನಾವಣಾ ಕಾನೂನುಗಳ ಕಟ್ಟುನಿಟ್ಟಾದ ಜಾರಿ, ನೈತಿಕ ಮತದಾನದ ಅಭ್ಯಾಸಗಳ ಕುರಿತು ಸಾರ್ವಜನಿಕ ಜಾಗೃತಿ ಅಭಿಯಾನಗಳು ಮತ್ತು ಪ್ರಚಾರದ ಪಾರದರ್ಶಕತೆಯನ್ನು ಉತ್ತೇಜಿಸುವುದು ಸೇರಿವೆ. ಪ್ರಜಾಸತ್ತಾತ್ಮಕ ಚುನಾವಣೆಗಳ ನ್ಯಾಯಸಮ್ಮತತೆ ಮತ್ತು ವಿಶ್ವಾಸಾರ್ಹತೆಯನ್ನು ಕಾಪಾಡಲು ಈ ಕ್ರಮಗಳು ಅತ್ಯಗತ್ಯ (ಕೋಷ್ಟಕ 12 ಮತ್ತು 13).

NOTAಗೆ ಸಂಬಂಧಿಸಿದಂತೆ, ಸಾರ್ವಜನಿಕ ವಲಯದಲ್ಲಿ ವಿರೋಧ ಅಭಿಪ್ರಾಯಗಳಿವೆ. ಒಂದು ಗುಂಪು NOTA ಒಳ್ಳೆಯ ಆಚರಣೆಯಾಗಿದೆ ಎಂಬ ಅಭಿಪ್ರಾಯವನ್ನು ಹೊಂದಿದ್ದರೆ, ಮತ್ತೊಂದು ಗುಂಪು NOTAವು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಪೂರಕವಾದದಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಸಾರ್ವಜನಿಕರ ಈ ಅಭಿಪ್ರಾಯವನ್ನೇ ಹೋಲುವ ಫಲಿತಾಂಶವೂ ಪ್ರಸ್ತುತ ಸಂಶೋಧನೆಯಲ್ಲಿ ಕಂಡು ಬಂದಿದೆ (ಕೋಷ್ಟಕ 21).

ಉಪಸಂಹಾರ (Conclusion)

ಚುನಾವಣಾ ಆಧಾರಿತ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಭಾಗವಹಿಸುವಿಕೆ ಅತಿ ಮುಖ್ಯವಾದದ್ದು. ಅದರಲ್ಲೂ ಯುವಸಮುದಾಯ ಪ್ರಜಾಪ್ರಭುತ್ವದ ಮಹಾ ಹಬ್ಬವೆಂದೇ ಕರೆಯಲ್ಪಡುವ ಮತದಾನದಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು. ಯುವಜನತೆ, ವಿಶೇಷವಾಗಿ ವಿದ್ಯಾರ್ಥಿ ಸಮುದಾಯವನ್ನು ಹೆಚ್ಚು ಜಾಗರೂಕರನ್ನಾಗಿ ಮಾಡಬೇಕಾದದ್ದು ಜವಾಬ್ದಾರಿಯುತ ಸಮಾಜದ ಕರ್ತವ್ಯ. ವಿವಿಧ ಮಾರ್ಗಗಳ ಮೂಲಕ ಉದಾಹರಣೆಗೆ ಜಾಹೀರಾತು, ನಾಮಫಲಕ, ಪತ್ರಿಕ ಮಾಧ್ಯಮ, ಟಿ.ವಿ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ವಿದ್ಯಾರ್ಥಿ ಸಮುದಾಯವನ್ನು ಜಾಗರೂಕರನ್ನಾಗಿ ಮಾಡಬೇಕಿದೆ.

ಪರಾಮರ್ಶನ ಗ್ರಂಥಗಳು

- **Choudhari, Laxman., Savla, Neel., & Pathak, Vivek. (2015) :** On What Basis Indian People Vote. *International Journal of Humanities and Social Science Invention*, 4 (5), 43-48.
- **Denk, Thomas. (2018) :** Political Awareness, Concept and Measurement. *Institute for Teacher Education* (ILU). 1-17.
- **Kanagavel, Rajalakshmi., & Chandrasekaren, Velayutham. (2011) :** Creating Political Awareness through Social Networking – An Empirical Study with Special Reference to Tamil Nadu Elections, 2011. *Journal of Social Media Studies*, 1(1), 71-81.
- **Kleinberg, M.S., & Lau, R.R. (2019) :** The Importance of Political Knowledge for Effective Citizenship: Differences between the Broadcast and Internet Generation, *American Association for Public Opinion Research*, 83(2), 338-382.
- **Patgiri, Mrinal (2015) :** Political Awareness among Voters of Different Age Groups, *International Journal of Social Science and Humanities Research*, 2(2), 142-147.
- **Saroha, J.K. (2016) :** The Political Awareness among Youth, *International Journal of Engineering and Management Research*, 6(5), 574-576.

■■

ವಿದ್ಯಾ ಪ್ರಕಾಶನ®
ಜೆ.ಟಿ.ಮಠ ರೋಡ, ಗದಗ - 582101
e-mail: vidyaprakashana26@gmail.com
www.shikshansoudha.in

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪ್ರಾಚೀನ ಕರ್ನಾಟಕಕ್ಕೆ ಹೊರನಾಡಿನ ವರ್ತಕರ ಕೊಡುಗೆಗಳು ಒಂದು ಅಧ್ಯಯನ

✍ ಡಾ. ನಾಗಮ್ಮ ಹೆಚ್.ಎನ್. ಇತಿಹಾಸ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ, ಜಿ. ತುಮಕೂರು.

ಒಂದು ಪ್ರದೇಶದ ಆರ್ಥಿಕತೆಯನ್ನು ನಿರ್ಧರಿಸುವಲ್ಲಿ ಆ ಪ್ರದೇಶದ ಕೃಷಿ, ಕೈಗಾರಿಕೆ, ವ್ಯಾಪಾರ–ವಾಣಿಜ್ಯಗಳು ಪ್ರಧಾನ ಪಾತ್ರ ವಹಿಸುತ್ತವೆ. ಕೃಷಿ ಮತ್ತು ಕೈಗಾರಿಕೆಗಳು ಉತ್ಪಾದಕ ಕ್ಷೇತ್ರಗಳಾದರೆ, ವ್ಯಾಪಾರ ಮತ್ತು ವಾಣಿಜ್ಯವು ಸೇವಾ ಕ್ಷೇತ್ರವಾಗಿದೆ. ಪ್ರಾಚೀನ ಕರ್ನಾಟಕವನ್ನು ಆಳಿದ ರಾಜರು ನಾಡಿನ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ವ್ಯಾಪಾರವನ್ನು ಪ್ರೋತ್ಸಾಹಿಸಿದರು. ಇದರಿಂದಾಗಿ ಕರ್ನಾಟಕದ ವರ್ತಕರು ಮಾತ್ರವಲ್ಲದೆ ಹೊರನಾಡಿನಿಂದಲೂ ನೂರಾರು ವರ್ತಕರು ಕರ್ನಾಟಕಕ್ಕೆ ಬಂದು ನೆಲೆಸಿದರು. ಕರ್ನಾಟಕವು ವಾಣಿಜ್ಯ ಯೋಗ್ಯ ವಾತಾವರಣವನ್ನು ಕಲ್ಪಿಸಿತ್ತು. ಹೊರರಾಜ್ಯಗಳಿಂದ ಕರ್ನಾಟಕಕ್ಕೆ ವಲಸೆ ಬಂದ ವರ್ತಕರಲ್ಲಿ ಬಹಳಷ್ಟು ವರ್ತಕರು ಇಲ್ಲಿಯೇ ನೆಲೆಸಿ ನಾಡಿನ ಆರ್ಥಿಕತೆ, ಧಾರ್ಮಿಕ, ರಾಜಕೀಯ, ಸಾಮಾಜಿಕ ಕ್ಷೇತ್ರಗಳಿಗೆ ಮಹತ್ತರ ಕೊಡುಗೆಗಳನ್ನು ನೀಡಿದ್ದಾರೆ. ಕೆರೆಯ ನೀರನು ಕೆರೆಗೆ ಚೆಲ್ಲು ಎಂಬಂತೆ ನಾಡಿನ ವ್ಯಾಪಾರದಲ್ಲಿ ಗಳಿಸಿದ ಲಾಭದಲ್ಲಿ ನಿರ್ದಿಷ್ಟ ಭಾಗವನ್ನು ನಾಡಿನ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿರುವುದು ಚರಿತ್ರೆಯ ಅಧ್ಯಯನದಿಂದ ತಿಳಿದುಬರುತ್ತದೆ. ಪ್ರಸ್ತುತ ಲೇಖನದಲ್ಲಿ ಇಂತಹ ವರ್ತಕರ ಕೊಡುಗೆಗಳ ಬಗ್ಗೆ ಅಧ್ಯಯನ ಮಾಡಲಾಗಿದೆ.

ಹೊಯ್ಸಳರು, ಕಲ್ಯಾಣದ ಚಾಲುಕ್ಯರು ಮತ್ತು ಸೇವುಣರ ಸಮಕಾಲೀನ ಆಳ್ವಿಕೆಯ ಅವಧಿಯಲ್ಲಿ ಕರ್ನಾಟಕಕ್ಕೆ ವರ್ತಕರು ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದರು. ಹೊರನಾಡಿನಿಂದ ಇಲ್ಲಿಗೆ ವ್ಯಾಪಾರಕ್ಕಾಗಿ ಬಂದವರಲ್ಲಿ ಕೇರಳದ ವರ್ತಕರು ಮಂಚೂಣಿಯಲ್ಲಿದ್ದಾರೆ. ಅವರುಗಳಲ್ಲಿ ಕೊಮರಮೂರ್ಕ್ಕನೆಂಬ ವ್ಯಾಪಾರಿಯು ಪ್ರಮುಖನಾಗಿದ್ದಾನೆ. "ಕೊಳೆಮೂಕ್ಕ ಪರಂಬುಗಾದ ಸಮಸ್ತಗುಣಸಂಪನ್ನ ಮಲೆಯಾಳವಡ್ಡವ್ಯವಹಾರಿ" ಎನಿಸಿದ ಕೊಮರಮೂರ್ಕ್ಕನು ಕೇವಲ ವ್ಯಾಪಾರಿ ಮಾತ್ರವಲ್ಲದೆ ಮಹಾದಾನಿಯೂ ಆಗಿದ್ದನು. ಬಾಗಳಿಯ ಶ್ರೀ ಸ್ವಯಂಭುಕಲಿದೇವರ ನಂದಾದೀವಿಗೆಗಾಗಿ ಹಾಗೂ ಶಿವಶಕ್ತಿಜೀಯರಿಗೆ ಐದು ಗದ್ಯಾಣವನ್ನು ಧಾರಾಪೂರ್ವಕವಾಗಿ ನೀಡಿದನೆಂದು ಕ್ರಿ.ಶ. 1108ರ ಬಾಗಳಿ ಶಾಸನವು ತಿಳಿಸುತ್ತದೆ. ಅದೇ ವರ್ಷ ಮತ್ತೊಬ್ಬ ಮಲೆಯಾಳ ವ್ಯಾಪಾರಿ ಚಿನ್ನಗೆಯ ಕಪ್ಪಿಸೆಟ್ಟಿಯು ನೀಲೇಶ್ವರ ದೇವರ ಸೇವೆಗಾಗಿ ಭೂಮಿಯನ್ನು ದಾನವಾಗಿ ನೀಡಿದನು. ಅದೇ ರೀತಿ ಬಾಗಳಿಯ ಕ್ರಿ.ಶ. 1113ರ ಮತ್ತೊಂದು ಶಾಸನದಲ್ಲಿ ಮಲೆಯಾಳ ವಡ್ಡವ್ಯವಹಾರಿ ಪೊನ್ಮರ್ಖಿಸೆಟ್ಟಿಯು ಬಳ್ಳಗಲಿಯ ಮಹಾಜನರ ಸಮ್ಮುಖದಲ್ಲಿ ಶಿವಶಕ್ತಿಪಂಡಿತರ ಪಾದಪೂಜೆ ಮಾಡಿ ಕಲಿದೇವರ ನಂದಾದೀವಿಗೆಗೆ 149 ಗದ್ಯಾಣಗಳನ್ನು ನೀಡಿದನು. ಈ ಮಲೆಯಾಳಿ ವ್ಯಾಪಾರಿಗಳ ಧಾರ್ಮಿಕ ಕೊಡುಗೆಗಳನ್ನು ಇಲ್ಲಿ ಮುಖ್ಯವಾಗಿ ಗಮನಿಸಬಹುದಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ಬಳ್ಳಗಲಿಯು ಅಗ್ರಹಾರವಾಗಿದ್ದಲ್ಲದೆ, ಪ್ರಮುಖ ಸಾಂಸ್ಕೃತಿಕ ಕೇಂದ್ರವೂ ಆಗಿತು.

ಕೇರಳ ದೇಶದಿಂದ ಹೊಯ್ಸಳರ ಕಾಲದಲ್ಲಿ ಕರ್ನಾಟಕಕ್ಕೆ ವಲಸೆ ಬಂದ ಕುಂಜಿಸೆಟ್ಟಿ ಮತ್ತು ಅವನ ಕುಟುಂಬವನ್ನು ಪ್ರಮುಖವಾಗಿ ಗುರುತಿಸಬಹುದು. ಕೇರಳದೇಶಲಕ್ಷ್ಮಿಯ ಮುಖಾರವಿಂದಕ್ಕೆ ಕನ್ನಡಿಯಂತಿದ್ದ ಕುಟುಂಬಕ್ಕೆ ಸೇರಿದ ಕುಂಜಿಸೆಟ್ಟಿಯು ಒಬ್ಬ ಮಹಾವ್ಯಾಪಾರಿ (ವಡ್ಡವ್ಯವಹಾರಿ) ಯಾಗಿದ್ದನು. ಮಾತ್ರವಲ್ಲದೆ ಮಲೆಯಾಳ ನಾನಾದೇಶಿಗಳ ಪ್ರಮುಖನು, ವೈಶ್ಯಕುಲಾಭರಣನೂ ಗುಣಶೀಲಗಳ ಗಣಿಯೂ, ಭದ್ರಕಾಳಿಯ ಪರಮಭಕ್ತನೂ ಆಗಿದ್ದನು. ಈತ ಕೇವಲ ವ್ಯಾಪಾರಿ ಮಾತ್ರವಾಗಿರದೆ, ಹೊಯ್ಸಳ ಇಮ್ಮಡಿ ಬಲ್ಲಾಳನ ಸೇವೆಯಲ್ಲಿದ್ದು, ಮಹಾದಂಡನಾಯಕನೂ ಆಗಿದ್ದನು. 2ನೇ ಬಲ್ಲಾಳನು ಉಚ್ಚಂಗಿ ದುರ್ಗವನ್ನು ವಶಪಡಿಸಿಕೊಳ್ಳುವಲ್ಲಿ ಈತನ ಶ್ರಮ ಅಪಾರವಾಗಿತ್ತು. ಈತನ ಸಾಮರ್ಥ್ಯವನ್ನು ಮೆಚ್ಚಿದ 2ನೇ ಬಲ್ಲಾಳನು ಕುಂಜಿಸೆಟ್ಟಿಗೆ "ವೀರದಪೆರ್ಮೆ" ಮತ್ತು "ಜಸದಸೊಂಪಂ" ಎಂಬ ಬಿರುದುಗಳನ್ನು ನೀಡಿ ಗೌರವಿಸಿದನು ಹಾಗೂ ಸುಭಟಪಟ್ಟದ ಗೌರವವನ್ನು ನೀಡಿದನು. ಈ ಮನೆತನಕ್ಕೆ ಸೇರಿದ ಕುಂಜನಂಬಿಸೆಟ್ಟಿಯು ಉತ್ತಮ ವ್ಯಾಪಾರಿ ಯಾಗಿದ್ದುದರ ಜೊತೆಗೆ ಉತ್ತಮ ರಾಯಭಾರಿ ಕುಶಲಿಯೂ ಆಗಿದ್ದನು. ದಕ್ಷಿಣ ಭಾರತದ ಪ್ರಭುತ್ವಕ್ಕಾಗಿ 2ನೇ ಬಲ್ಲಾಳನು ತೀವ್ರ ಹೋರಾಟಗಳಲ್ಲಿ ನಿರತನಾಗಿದ್ದಾಗ ಕಳಚೂರಿ ಸಂಕಮನು ರಾಜಧಾನಿಯ ಮೇಲೆ ಹಠಾತ್ ದಾಳಿ ನಡೆಸುತ್ತಾನೆ. ಈ ಸಂದರ್ಭದಲ್ಲಿ 2ನೇ ಬಲ್ಲಾಳನಿಗೆ ಸಂಕಮನೊಡನೆ ಒಪ್ಪಂದ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಇಂತಹ ಸಂಕಷ್ಟ ಸಂದರ್ಭದಲ್ಲಿ ಉತ್ತಮ ರಾಯಭಾರಿ ಕುಶಲಿಯಾದ ಕುಂಜನಂಬಿಸೆಟ್ಟಿಯು ಇಬ್ಬರ ನಡುವೆ ಮೈತ್ರಿ ಒಪ್ಪಂದವನ್ನು ಏರ್ಪಡಿಸುವಲ್ಲಿ ಯಶಸ್ವಿಯಾಗುತ್ತಾನೆ. ಈ ಒಪ್ಪಂದವನ್ನು ಇಬ್ಬರು ರಾಜರು ಸಮ್ಮತಿಸುತ್ತಾರೆ. ಈತನು ಸತ್ಯದ ಸಾಕಾರಸ್ವರೂಪ ಹಾಗೂ ಸಮಾಲೋಚನೆಯಲ್ಲಿ ವಿದ್ಯಾಧರ ನೆನಿಸಿದ್ದನು. ಅಂದು ಇಡೀ ಹೊಯ್ಸಳ ರಾಜ್ಯದಲ್ಲಿಯೇ ಯಾವ ಸೆಟ್ಟಿಯು ಈತನಿಗೆ ಸರಿಸಮನಾಗಿರಲಿಲ್ಲ ಎಂದು ಶಾಸನಗಳು ಈತನನ್ನು ಹೊಗಳಿವೆ. ಇಲ್ಲಿ ಮಲೆಯಾಳಿ ವ್ಯಾಪಾರಿಗಳ ರಾಜಕೀಯ ಕ್ಷೇತ್ರದ ಕೊಡುಗೆಯನ್ನು ಮುಖ್ಯವಾಗಿ ಗುರುತಿಸಬಹುದಾಗಿದೆ. ಇದೇ ಮನೆತನಕ್ಕೆ ಸೇರಿದ ಭಂಡಿನಂಬಿಯು ಬಂಡಿಗಟ್ಟಲೆ ಧನವನ್ನು ದಾನ ಮಾಡಿದುದರಿಂದ ಅವನಿಗೆ ಆ ಹೆಸರು ಬಂದಿತೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಹೀಗೆ ನಾಡಿನ ಆರ್ಥಿಕ ಶ್ರೀಮಂತಿಕೆಯ ಹಿನ್ನೆಲೆಯಲ್ಲಿ ಇಲ್ಲಿಗೆ ವ್ಯಾಪಾರದ ಉದ್ದೇಶದಿಂದ ಬಂದ ವರ್ತಕ ಕುಟುಂಬವೊಂದು ವ್ಯಾಪಾರದಿಂದಾಗಿ ಅಪಾರವಾದ ಸಂಪತ್ತನ್ನು ಗಳಿಸಿತು. ಈ ಸಂಪತ್ತು ಅವರನ್ನು ರಾಜಕೀಯವಾಗಿ, ಧಾರ್ಮಿಕವಾಗಿ ಪ್ರಬಲರಾಗುವಂತೆ ಮಾಡಿತು. ಕುಂಜಿಸೆಟ್ಟಿಯ ಕುಟುಂಬವಲ್ಲದೆ ಮಲೆಯಾಳ ವಡ್ಡವ್ಯವಹಾರಿಗಳಾದ ಚಿನ್ನಗೆಯ ಕಪ್ಪಿಸೆಟ್ಟಿ, ದಾಮೋದರಸೆಟ್ಟಿಯರು ಕೂಡ ಕೇರಳದಿಂದ ವ್ಯಾಪಾರಕ್ಕಾಗಿ ಕರ್ನಾಟಕಕ್ಕೆ ಬಂದವರಾಗಿದ್ದರು. ಮಲೆಯಾಳ ವರ್ತಕರು (ಕೊಮಾರ ಮುರ್ಖಿ, ಚಿನ್ನಗೇಯಿ ಕಪ್ಪಿಸೆಟ್ಟಿ, ಪೊನ್ಮರ್ಖಿಸೆಟ್ಟಿ) ಬಳ್ಳಗಲಿ ಅಗ್ರಹಾರದಲ್ಲಿ ಅಲ್ಲಿನ ಕಲಿದೇವ ದೇವಾಲಯಕ್ಕೆ ದಾನದತ್ತಿಗಳನ್ನು ನೀಡುವುದರ ಜೊತೆಗೆ, ಅನ್ನಸತ್ರ, ಶಾಲೆ, ಅಲ್ಲಿನ ಪಿರಿಯಕೆರೆಯ ದುರಸ್ತಿಗೆ ಅಪಾರ ಪ್ರಮಾಣದ ದಾನ ನೀಡಿದರೆಂದು ಅಲ್ಲಿನ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಹೊಯ್ಸಳ 2ನೇ ಬಲ್ಲಾಳನ ಕಾಲದಲ್ಲಿ ಕೇರಳದಿಂದ ವಲಸೆ ಬಂದ ಮತ್ತೊಂದು ಪ್ರಮುಖ ವರ್ತಕ ಕುಟುಂಬವೆಂದರೆ ಕಂಡನಂಬಿಯ ಕುಟುಂಬ. ಇವರು ವ್ಯಾಪಾರದ ಜೊತೆಗೆ ದಾನ–ಧರ್ಮ, ರಾಜಕೀಯದಲ್ಲೂ ಪ್ರಧಾನ ಪಾತ್ರ ವಹಿಸಿದ್ದರು. ಮಲೆಯಾಳ

ISSN : 2249-2429 ಸಂಶೋಧನೆ RNI REG.NO.KARKAN/2011/38712

ವಡ್ಡವ್ಯವಹಾರಿಯಾದ ಕುಂಜನಂಬಿಯು (2ನೇ ಬಲ್ಲಾಳ ಕಾಲಾವಧಿ) ಸೋಮನಾಥನ ಮಹಾನ್ ಭಕ್ತನಾಗಿದ್ದು, ಆತನನ್ನು 'ತನುವಂ ಜಂಗಮದೆಡೆಯೊಳು ಮನಮಂ ಶ್ರೀ ಸೋಮನಾಥ ಪದ ಪಂಕಜದೊಳ್ ವಿನಿಯೋಗಿಸಿ' ಎಂದು ಶಾಸನವೊಂದರಲ್ಲಿ ಬಣ್ಣಿಸಲಾಗಿದೆ.

ಮಹಾವಡ್ಡ ವ್ಯವಹಾರಿಯಾದ ಹಿರಿಯ ಬಂಡಿನಂಬಿಸೆಟ್ಟಿಯ ಅಳಿಯ ಮಹಾವಡ್ಡ ವ್ಯವಹಾರಿಯಾಗಿದ್ದ ಕಂಡನಂಬಿಯು ತನ್ನ ಮಗ ಕುಂಜನಂಬಿಯ ಮರಣದ ನಂತರ ಆತನ ಹೆಸರಿನಲ್ಲಿ ಹಿರಿಯೂರಿನಲ್ಲಿ (ಅರಸೀಕೆರೆ ತಾ.) ಕ್ರಿ. ಶ. 1254ರಲ್ಲಿ ಕುಂಜೇಶ್ವರ ದೇವಾಲಯವನ್ನು ನಿರ್ಮಿಸಿ ಹೇರಳವಾದ ದಾನ–ದತ್ತಿಗಳನ್ನು ನೀಡಿದನು. ಅಲ್ಲದೆ ಹಿರಿಯೂರು (ಮುತ್ತನ ಹೊಸವೂರು) ಗ್ರಾಮವನ್ನು ಅಗ್ರಹಾರವಾಗಿ ನಿರ್ಮಿಸಿ ಅದನ್ನು ಬ್ರಾಹ್ಮಣರಿಗೆ ದಾನವಾಗಿ ನೀಡಿದನು. ಕಂಡನಂಬಿಯ ಮಗಳಾದ ಗಣಕುಮಾರಿ ಚಂದವ್ವೆಯು ದೇವಾಲಯದ ಮುಖ್ಯಸ್ಥೆಯಾಗಿ ಉಂಬಳಿಯನ್ನು ಪಡೆದಳು. ಈಕೆಗೆ ವಿಭೂತಿಪಟ್ಟವನ್ನು ಕಟ್ಟಲಾಯಿತು. ಕೇರಳದ ಈ ಕುಟುಂಬವು ವೀರಶೈವ ಧರ್ಮವನ್ನು ಅನುಸರಿಸುತ್ತಿತ್ತು. ಕ್ರಿ.ಶ.1233ರ ಅರಕೆರೆ(ಅರಸೀಕೆರೆ ತಾ.)ಶಾಸನದಲ್ಲಿ ತಿಳಿಸಿರುವಂತೆ ವಿಷ್ಣುದೇವಾಲಯವನ್ನು ನಿರ್ಮಿಸಿ ಭೂದಾನ ನೀಡಿದ ಮಲೆಯಾಳ ವರ್ತಕ ದಾಮೋದರ ಸೆಟ್ಟಿಯನ್ನು ಶಾಸನದಲ್ಲಿ 'ಸಮಸ್ತ ವಸ್ತುವಾಹನ ಪರೀಕ್ಷಾ ವಿಶೇಷೋನ್ನತ ಯೆಹ ವಡ್ಡವ್ಯವಹಾರಿಯು ಭಯ ನಾನಾ ದೇಸಿ ಮಲೆಯಾಳ ಮುಖ್ಯ ವಿಪ್ರಪ್ರಸಾದಂ ದಾಮೋದರ ಸೆಟ್ಟಿಯರು' ಎಂದು ಹೊಗಳಲಾಗಿದೆ. ಈತನು ಮಹಾ ವಡ್ಡವ್ಯವಹಾರಿಯೂ, ಉಭಯ ನಾನಾದೇಸಿಯೂ ಆಗಿದ್ದನು.

ಮಹಾ ವಡ್ಡವ್ಯವಹಾರಿ, ಉಭಯ ನಾನಾ ದೇಶಿ, ಮಲೆಯಾಳ ವ್ಯಾಪಾರಿಗಳ ಮುಖ್ಯಸ್ಥನಾದ ಪರಮೇಶ್ವರ ನಾಯಕ ಕೂಡ ಕ್ರಿ. ಶ. 13ನೇ ಶತಮಾನದಲ್ಲಿ ಹೊಯ್ಸಳರ ಕಾಲಾವಧಿಯಲ್ಲಿ ಕೇರಳ ದೇಶದಿಂದ ವಲಸೆ ಬಂದನು. ಈತನು ಕ್ರಿ. ಶ. 1280ರಲ್ಲಿ ಗ್ರಾಮವೊಂದನ್ನು ನಾರಾಯಣಪುರ ಎಂಬ ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ಅದನ್ನು ದಾನವಾಗಿ ನೀಡಿದನು. ಹಿರಿಸಿಂಗಿಯಲ್ಲಿ (ಸಿರಸಂಗಿ) ಹೆಬ್ಬೇಶ್ವರ ದೇವರಿಗೆ ದಾನವನ್ನು ನೀಡುವ ಸಂದರ್ಭದಲ್ಲಿ ಶ್ರೀಮದ್ ಅಯ್ಯಾವೊಳೆ ಐನೂರ್ವರ್ ಸದಸ್ಯರು, ಶ್ರೀಮತ್ ಸಮಯ ಚಕ್ರವರ್ತಿ ಜಯಮೊಯ್ಯಸೆಟ್ಟಿ, ಸೋವಿಸೆಟ್ಟಿ, ಎರಡು ನೂರರೆಂಟು ಪಟ್ಟಣದ ಸೆಟ್ಟಿಗುತ್ತರು, ಸ್ಥಳದ ಮುಮ್ಮರಿದಂಡರು, ಮೂರು ಸಾಸಿರದ ನಾಲ್ಕು ಪಟ್ಟಣದ ಸೆಟ್ಟಿಗುತ್ತರು, ಸಮಸ್ತ ಉಭಯ ನಾನಾ ದೇಶಿಗಳು, ಬಿರುದರು, ಬೀರವಣಿಗರು, ಗವರೆಗಳು, ಗಾತ್ರಿಗರು, ಐವತ್ತೊಕ್ಕಲು, ಸಮಸ್ತ ನಖರರು ಸಭೆ ಸೇರಿ ನೀಡಬೇಕಾದ ದಾನವನ್ನು ನಿರ್ಧರಿಸಿದರು. ಆ ಪ್ರಕಾರ ಅಂಗಡಿಯ ನಖರರು ಪ್ರತ್ಯೇಕ ಅಂಗಡಿಗೆ ಚೈತ್ರದ ಪರ್ವಕ್ಕೆ ಒಂದು ಹಾಗ, ಪವಿತ್ರದ ಪರ್ವಕ್ಕೆ ಒಂದು ಹಾಗವನ್ನು ಬಿಟ್ಟರು. ಗಾತ್ರಿಗರು ಹೇರಿಂಗೆ ನೂರು ಎಲೆ, ಹೊರೆಗೆ ಐವತ್ತು ಎಲೆಯನ್ನು ಬಿಟ್ಟರು. ಈ ದಾನವನ್ನು ನಡೆಸಲು ಶ್ರೀಮನ್ಮಹಾ ವಡ್ಡವ್ಯವಹಾರಿ ಸಿರಿಕುಮಾರ ನಾಯಕ, ಮುಖ್ಯ ಸಮಸ್ತ ಮಲೆಯಾಳ ನಾನಾದೇಶಿಗಳು ದಾನದ ಧರ್ಮವನ್ನು ನಡೆಸಿಕೊಂಡು ಹೋಗಲು ಮಹಾನಾಡು ಸಭೆಯಲ್ಲಿ ತೀರ್ಮಾನಿಸಲಾಯಿತು. ವರ್ತಕರನ್ನು ಒಂದುಗೂಡಿಸುವಲ್ಲಿ ಹಾಗೂ ಶ್ರೇಣಿಗಳ ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಈ ಮಹಾನಾಡು ಸಭೆ ಪ್ರಧಾನ ಪಾತ್ರ ವಹಿಸುತ್ತಿತ್ತು ಎಂಬುದು ಈ ಶಾಸನದಿಂದ ತಿಳಿಯುತ್ತದೆ. ಮಲೆಯಾಳ ವರ್ತಕರು ದಾನ–ದತ್ತಿಗಳನ್ನು ನೀಡಿರುವುದು ಮಾತ್ರವಲ್ಲದೆ ದಾನ ಧರ್ಮವನ್ನು ನಡೆಸುವ ಜವಾಬ್ದಾರಿಯನ್ನು ನಿರ್ವಹಿಸಿರುವುದು ಈ ಘಟನೆಯಿಂದ ತಿಳಿದುಬರುತ್ತದೆ.

ಪ್ರಾಚೀನ ಕರ್ನಾಟಕದ ಪ್ರಮುಖ ರಾಜಕೀಯೇತರ ಸಂಸ್ಥೆ ಮಹಾನಾಡು ಸಭೆ. ಮಹಾನಾಡು ಸಭೆಯು ರಾಜಕೀಯೇತರ ಸಂಸ್ಥೆಯಾಗಿದ್ದರೂ ಪ್ರಾಚೀನ ಕರ್ನಾಟಕದ ರಾಜಕೀಯದಲ್ಲಿ ಪ್ರಧಾನ ಪಾತ್ರ ವಹಿಸಿತ್ತು. ಈ ಸಂಸ್ಥೆಯಲ್ಲಿ ಸ್ಥಳೀಯ ವರ್ತಕರು, ವಿವಿಧ ಕಸುಬುದಾರರು, ಒಕ್ಕಲುಗಳು, ಪಿಟ್ಟುಗಳು ಮುಂತಾದ ಶ್ರೇಣಿಗಳ ಸದಸ್ಯರು ಇದರ ಸದಸ್ಯರಾಗಿದ್ದರು. ಈ ಮಹಾನಾಡು ಸಭೆಯಲ್ಲಿ ಹೊರರಾಜ್ಯಗಳಿಂದ ವಲಸೆ ಬಂದ ವರ್ತಕರು ಕೂಡ ಪ್ರಬಲರಾಗಿದ್ದರು ಎಂಬ ವಿಷಯ ಶಾಸನಗಳಿಂದ ತಿಳಿದುಬರುತ್ತದೆ. ಉದಾ: ಹಿರಿಸಿಂಗಿ ಮಹಾನಾಡು ಸಭೆಯಲ್ಲಿ ಲಾಲಾ (ದಕ್ಷಿಣ ಗುಜರಾತ್) ಮತ್ತು ಮಲೆಯಾಳ ವರ್ತಕರು ಪ್ರಬಲರಾಗಿದ್ದು, ಅಲ್ಲಿ ಚರ್ಚೆಯಾಗುತ್ತಿದ್ದ ವಿಷಯಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದರೆಂಬ ಅಂಶ ಶಾಸನಗಳಿಂದ ತಿಳಿದುಬರುತ್ತದೆ.

ಸೌರಾಷ್ಟ್ರದ ಒಂದು ಶ್ರೀಮಂತ ಕುಟುಂಬದಲ್ಲಿ ಹುಟ್ಟಿದ ಅಡಯ್ಯ (ಅದಯ್ಯ) ಎಂಬ ವ್ಯಾಪಾರಿಯೂ ಕರ್ನಾಟಕದ ಪುಲಿಗೆರೆಗೆ ಬಂದು ಅಲ್ಲಿಯೇ ನೆಲೆನಿಂತು ಬೆಲೆಬಾಳುವ ಲೋಹಗಳಾದ ಚಿನ್ನ ಮತ್ತು ಬೆಳ್ಳಿಯ ವ್ಯಾಪಾರದಲ್ಲಿ ತೊಡಗಿದ್ದನು. ಈ ಎಲ್ಲಾ ಪ್ರಮುಖಾಂಶಗಳು ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ವ್ಯಾಪಾರ–ವಾಣಿಜ್ಯ ಹಾಗೂ ಆರ್ಥಿಕ ಶ್ರೀಮಂತಿಕೆಯನ್ನು ಸೂಚಿಸುತ್ತದೆ.

ಕ್ರಿ. ಶ. 1389ರಲ್ಲಿ ವಿಜಯನಗರದ ಬುಕ್ಕನ ಆಳ್ವಿಕೆಯಲ್ಲಿ ಗೂರ್ಜರ ದೇಶದ ಕಂಭಾತಿನಗರದ ವ್ಯಾಪಾರಿ ಅಜ್ಜಾಸಾಹು ಕಡಲಮಾರ್ಗವಾಗಿ ವ್ಯಾಪಾರಕ್ಕಾಗಿ ಕರ್ನಾಟಕದ ಬಾರಕೂರಿಗೆ ಬಂದನು. ನಂತರ ಇಲ್ಲಿಯೇ ಉಳಿದು ವ್ಯಾಪಾರದಲ್ಲಿ ತೊಡಗಿದನು. ನಂತರದ ಕಾಲದಲ್ಲಿ ಬಾರಕೂರಿನ ಕುಂಬಾರಕೇರಿಯಲ್ಲಿನ ಮಹಮದೀಯರಿಂದ ಭೂಮಿಯನ್ನು ಕೊಂಡು ಪಾರ್ಶ್ವನಾಥ ಸ್ವಾಮಿಯ ಪೂಜಾ ಕೈಂಕರ್ಯಗಳಿಗೆ ದಾನವಾಗಿ ನೀಡಿದನು. ಅಜ್ಜಾಸಾಹು ಮೂಲತಃ ವೈಶ್ಯನಾದರೂ ಜಿನಧರ್ಮವನ್ನು ಪರಿಪಾಲಿಸುತ್ತಿದ್ದನು. ಅವನ ಪ್ರಯಾಣದ ಸಂದರ್ಭದಲ್ಲಿ ಬಿರುಗಾಳಿಗೆ ಸಿಲುಕಿದ ಅವನ ಹಡಗನ್ನು ಪಾರ್ಶ್ವನಾಥ ಸ್ವಾಮಿಯು ರಕ್ಷಿಸಿದ್ದರಿಂದ ಅವನ ಹಡಗು ಬಾರಕೂರನ್ನು ತಲುಪಲು ಸಾಧ್ಯವಾಯಿತು. ಈ ಘಟನೆಯ ನಂತರ ಅವನು ಜಿನನ ಪರಮ ಭಕ್ತನಾದನೆಂದು ಹುಂಚದ ಶಾಸನವು ತಿಳಿಸುತ್ತದೆ. ಇದು ವ್ಯಾಪಾರಿಗಳ ಧಾರ್ಮಿಕ ಸಹಿಷ್ಣುತಾ ಭಾವನೆಯನ್ನು ತಿಳಿಸುತ್ತದೆ.

ಮಲೆಯಾಳ ನಾನಾದೇಶಿ ವಡ್ಡವ್ಯವಹಾರಿ ನಂಬಿ ಗಣ್ಣಿಸೆಟ್ಟಿಯು ಕರ್ನಾಟಕದಲ್ಲಿ ವ್ಯಾಪಾರ ಮಾಡುವುದರ ಜೊತೆಗೆ ಇಲ್ಲಿನ ಆಡಳಿತದಲ್ಲಿಯೂ ಪ್ರಧಾನ ಪಾತ್ರ ವಹಿಸಿದ್ದನು. ಈತನು ಕೋಗಳಿ–500ರ ಉಪ ವಿಭಾಗವಾದ ಬಿಕ್ಕಿಗ– 70 ರಲ್ಲಿನ ದುಗ್ಗಟಿಯ ಆಡಳಿತಗಾರನಾಗಿದ್ದನು. ಧಾರ್ಮಿಕವಾಗಿ ಕೂಡ ನಂಬಿಗಣ್ಣಸೆಟ್ಟಿಯ ಕೊಡುಗೆ ಅಪಾರ. ಈತನು ದುಗ್ಗಟಿಯ ಊರೊಡೆಯನಾದ ಬ್ರಹ್ಮದೇವನಾಯಕನ ಜೊತೆಗೂಡಿ ಮಹಾದೇವ ದೇವರಿಗೆ 800 ಕಮ್ಮ ಬೆದ್ದಲೆ ಭೂಮಿ, 3 ಮತ್ತರು ಎರೆಭೂಮಿ ಹಾಗೂ ನಂದಾದೀವಿಗೆಗೆ ಗಾಣವೊಂದನ್ನು ನೀಡಿದನು. ಈತನನ್ನು "ಸ್ವಸ್ತಿ ಸಮಸ್ತ ವಸ್ತುವಿಷಯ ವ್ಯಾಪಾರನಿಯತನಂ ವಸ್ತುಗುಣಸಂಪನ್ನನು ನುಡಿದು ಮತ್ತನ್ನನುವಾಸ್ತಿತ ಚಿಂತಾಮಣಿಯಂ ವ್ಯವಹಾರ ಚಿಂತಾಮಣಿಯು ಮಷ್ಯಾದಸ ಪಟ್ಟಣ ಸಮುದ್ಧರಣನು ಸಮಯ ಸಮುದ್ಧರಣನು ಸಾರದಾ ದೇವೀಲಬ್ಧವರ ಪ್ರಸಾದನು ಶ್ರೀಮದ್ದೇಸಿಯಂಕಕಾರನು ಶ್ರೀಮಂನ್ನಾನಾ ದೇಸಿ ಮಲೆಯಾಳ ವಡ್ಡವ್ಯವಹಾರಿ ನಂಬಿಗಣ್ಣಿಸೆಟ್ಟಿ" ಎಂದು ಕ್ರಿ. ಶ. 1126ರ ದುಗ್ಗವಟ್ಟಿಯ (ಹರಪ್ಪನಹಳ್ಳಿ ತಾ.) ಶಾಸನವು ನಂಬಿ ಗಣ್ಣಿಸೆಟ್ಟಿಯನ್ನು ಹೊಗಳಿದೆ. ಮಲೆಯಾಳ ವಡ್ಡ ವ್ಯವಹಾರಿಯಾದ ದಾಮೋದರ ಸೆಟ್ಟಿಯು ಕೇರಳ ದೇಶದ ಕೊಳೆಮುಖ್ಯ ಪಟ್ಟಣದ ಆಡಳಿತಾಧಿಕಾರಿಯಾಗಿದ್ದನೆಂದು ಕ್ರಿ. ಶ. 1233ರ ಅರಕೆರೆಯ (ಅರಸೀಕೆರೆ ತಾ.) ಶಾಸನವು ತಿಳಿಸುತ್ತದೆ. ಈತನೂ ಕೂಡ ಕರ್ನಾಟಕಕ್ಕೆ ವಲಸೆ ಬಂದು ವ್ಯಾಪಾರದಲ್ಲಿ ತೊಡಗಿದ್ದನು.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕವು ವಾಣಿಜ್ಯಕ್ಕೆ ಯೋಗ್ಯ ವಾತಾವರಣವನ್ನು ಸೃಷ್ಟಿಸಿತ್ತೆಂಬುದು ಕೇರಳ ವರ್ತಕರ ವಲಸೆಯಿಂದ ತಿಳಿದುಬರುತ್ತದೆ. ಕೇರಳದ ಮಹಾವಡ್ಡ ವ್ಯವಹಾರಿಗಳಾದ ದಾಮೋದರ ಸೆಟ್ಟಿ, ಕುಂಜಿಸೆಟ್ಟಿಯ ವಂಶಜರು, ಕೊಮರಮುರ್ಕ್ಕ ಮುಂತಾದ ವರ್ತಕರು ಕೆರೆಯ ನೀರನು ಕೆರೆಗೆ ಚೆಲ್ಲು ಎಂಬಂತೆ ಇಲ್ಲಿನ ವ್ಯಾಪಾರದಿಂದ ಗಳಿಸಿದ ಲಾಭದ ನಿರ್ದಿಷ್ಟ ಭಾಗವನ್ನು ಕರ್ನಾಟಕದ ಧಾರ್ಮಿಕ ಕ್ಷೇತ್ರಕ್ಕೆ ತೊಡಗಿಸಿರುವುದು ಸಂಶೋಧನಾ ಅಧ್ಯಯನದಿಂದ ತಿಳಿದುಬರುತ್ತದೆ. ಒಟ್ಟಾರೆ ಹೊರನಾಡಿನಿಂದ ಕನ್ನಡ ನಾಡಿಗೆ ವಲಸೆ ಬಂದ ವರ್ತಕರು ನಾಡಿನ ವ್ಯಾಪಾರದಿಂದ ಗಳಿಸಿದ ಸಂಪತ್ತನ್ನು ನಾಡಿನ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳ ಅಭಿವೃದ್ಧಿಗೆ ತೊಡಗಿಸಿರುವುದು ಅವರ ಆರ್ಥಿಕ ಉದಾರತೆಯನ್ನು ತಿಳಿಸುತ್ತದೆ. ಇಲ್ಲಿ ಗಳಿಸಿದ್ದನ್ನು ಇಲ್ಲಿಯೇ ಖರ್ಚು ಮಾಡಿದರು. ನಾಡಿನ ರಾಜಕೀಯದಲ್ಲಿಯೂ ಪ್ರಬಲರಾಗಿದ್ದು ರಾಜ್ಯದ ರಕ್ಷಣೆಗೂ ತಮ್ಮದೇ ಆದ ಕೊಡುಗೆಯನ್ನು ವಲಸೆ ವರ್ತಕರು ನೀಡಿದ್ದಾರೆ.

ಪರಾಮರ್ಶನ ಗ್ರಂಥಗಳು

- **ನರಸಿಂಹಮೂರ್ತಿ ಎ.ವಿ. (ಗೌ.ಸಂ.) (1997) :** ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–10(ಪ), ಅರಸೀಕೆರೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ,
- **ದೀಕ್ಷಿತ್ ಜಿ.ಎಸ್., (2001) :** (ಎರಡನೇ ಮುದ್ರಣ), ಲೋಕಲ್ ಸೆಲ್ಫ್ ಗವರ್ನಮೆಂಟ್ ಇನ್ ಮೆಡಿವಲ್ ಕರ್ನಾಟಕ, ಧಾರವಾಡ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- **ಗೋಪಾಲ್ ಬಾ.ರಾ.(ಸಂ.) (1990) :** ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–9 (ಪ), ಬೇಲೂರು ತಾ., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ಮೈಸೂರು ವಿಶ್ವವಿದ್ಯಾನಿಲಯ.
- **ಪಂಚಮುಖಿ ಆರ್.ಎಸ್.(ಸಂ.):** ಕರ್ನಾಟಕ ಇನ್ಸ್‌ಕ್ರಿಪ್ಷನ್ ಸಂಪುಟ–1, ಧಾರವಾಡ ಕನ್ನಡ ರಿಸರ್ಚ್ ಇನ್ಸ್‌ಟಿಟ್ಯೂಟ್,
- **ಅನ್ಯುಯಲ್ ರಿಪೋರ್ಟ್ ಆಫ್ ಮೈಸೂರು ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್ (1938).**
- **ಶಾಮಾಶಾಸ್ತ್ರಿ ಆರ್. (ಸಂ.) (2017) :** (ಮರುಮುದ್ರಣ), ಎಸ್.ಐ.ಐ.ಸಂ.9, ಭಾಗ–1, ನವದೆಹಲಿ ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ.
- **ಮಲ್ಲಿಕಾ ಎಸ್. ಘಂಟಿ (ಸಂ.) (2019) :** ಕರ್ನಾಟಕದ ಜೈನ ಶಾಸನ ಸಂಪುಟ–3, ಹೊಸನಗರ ತಾ., ಹಂಪಿ ಕನ್ನಡ ವಿಶ್ವವಿದ್ಯಾಲಯ.

■■

– 66ನೇ ಪುಟದಿಂದ ಮುಂದುವರೆದುದು

ಲಂಕೇಶರು ಮನುಷ್ಯನನ್ನೇ ಕೇಂದ್ರವಾಗಿಸಿಕೊಳ್ಳುತ್ತಾರೆ. ಹಾಗಾಗಿ ಮನುಷ್ಯ ಸಂವೇದನೆಯ ಮೂಲಕವೇ ಸಾಮಾಜಿಕ ಸ್ಥಿತ್ಯಂತರಗಳನ್ನು ಗ್ರಹಿಸುವ ಲಂಕೇಶರ ಕತೆಗಳು ಸಮಾಜವೊಂದರ ಸತ್ಯ ಸ್ವರೂಪಗಳನ್ನು, ಅಲ್ಲಿನ ಪಲ್ಲಟಗಳನ್ನು ಅರ್ಥೈಸಿಕೊಳ್ಳಲು ಸಾಕಷ್ಟು ಅವಕಾಶ ನೀಡುತ್ತವೆ. ಸಾಮಾಜಿಕ ಬದುಕಿನ ಬೇರುಗಳಿಂದಲೇ ಅನುಭವಗಳನ್ನು ಹರಳುಗಟ್ಟಿಸಿಕೊಂಡು ಬರೆದ ಲಂಕೇಶರು ಯಾವುದೇ ಸಿದ್ಧಾಂತದ ಮೂಲಕ ಬದುಕನ್ನು ನೋಡಲಿಲ್ಲ. ಸಮಾಜದ ನಿಜಸ್ವರೂಪವನ್ನು ಕಾಣಲು ಮನುಷ್ಯನನ್ನೇ ಮಾಧ್ಯಮವನ್ನಾಗಿ ಮಾಡಿಕೊಂಡರು.

ಅಡಿ ಟಿಪ್ಪಣಿಗಳು

1. ಸಮಗ್ರ ಕಥೆಗಳು , ಪಿ.ಲಂಕೇಶ್, ಪುಟ–77
2. ಸಮಗ್ರ ಕಥೆಗಳು, ಪಿ.ಲಂಕೇಶ್, 1992, ಪುಟ–77
3. ಮಂಜು ಕವಿದ ಸಂಜೆ ಮತ್ತು ಇತರ ಕಥೆಗಳು ಪಿ.ಲಂಕೇಶ್, ಪತ್ರಿಕೆ ಪ್ರಕಾಶನ,2004 ಪುಟ–10
4. ಸಮಗ್ರ ಕಥೆಗಳು, ಪಿ.ಲಂಕೇಶ್, 1992, ಪುಟ–349
5. ಸಮಗ್ರ ಕಥೆಗಳು, ಪಿ.ಲಂಕೇಶ್, 1992, ಪುಟ–342
6. ಸಮಗ್ರ ಕಥೆಗಳು, ಪಿ.ಲಂಕೇಶ್, 1992, ಪುಟ–376

ಪರಾಮರ್ಶನ ಗ್ರಂಥಗಳು

- ಪಿ.ಲಂಕೇಶ್ (1992) : ಸಮಗ್ರ ಕಥೆಗಳು,
- **ಎನ್.ಕೆ. ಕೋದಂಡರಾಮ (1992) :** ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಮೈಸೂರು ಗಾಯತ್ರಿ ಸ್ಮಾರಕ ಗ್ರಂಥಮಾಲೆ.
- **ಟಿ.ಪಿ. ಅಶೋಕ (1991) :** ಸಾಹಿತ್ಯ ಸಂದರ್ಭ, ಸಾಗರ ಅಕ್ಷರ ಪ್ರಕಾಶನ.
- **ಪಿ.ಲಂಕೇಶ್ (2004) :** ಮಂಜು ಕವಿದ ಸಂಜೆ ಮತ್ತು ಇತರ ಕಥೆಗಳು, ಪತ್ರಿಕೆ ಪ್ರಕಾಶನ.
- **ಎಚ್. ಶಶಿಕಲಾ (2016) :** ಏಕ–ಅನೇಕ, ಬೆಳಕು ಪ್ರಕಾಶನ.
- **ವಿಜಯಾದಬ್ಬೆ (2017) :** ತಲೆಮಾರಿನ ತಳಮಳ,

■■

– 85ನೇ ಪುಟದಿಂದ ಮುಂದುವರೆದುದು

ಆನಂತರ ಬಸವಣ್ಣನ ಅಣತಿಯಂತೆ ನೀಲಾಂಬಿಕೆಯನ್ನು ಕರೆತರು ವಷ್ಟರಲ್ಲಿಯೇ ಬಸವಣ್ಣ ಲಿಂಗೈಕ್ಯರಾದ ಸುದ್ದಿ ತಿಳಿದು ಕೂಡಲಸಂಗಮದ ನದಿಗಳ ಇನ್ನೊಂದು ತಟದಲ್ಲಿರುವ ಗ್ರಾಮದಲ್ಲಿ ನೀಲಮ್ಮ ಮತ್ತು ಅಪ್ಪಣ್ಣ ಲಿಂಗೈಕ್ಯರಾದರು ಎಂದು ತಿಳಿದುಬರುತ್ತದೆ. ನೀಲಮ್ಮ (ನೀಲಾಂಬಿಕೆ) ಲಿಂಗದಲ್ಲಿ ಲೀನವಾದುದಕ್ಕೆ ಅಪ್ಪಣ್ಣ ಅಯ್ಯೋ ತಂಗಿ ಅಡಗಿದಳು ಎಂಬ ಉದ್ಗಾರ ತೆಗೆದು ತಾನು ಅಲ್ಲಿಯೇ ಐಕ್ಯವಾದುದರಿಂದ ಈ ಗ್ರಾಮಕ್ಕೆ **"ತಂಗಡಗಿ"** ಎಂಬ ಹೆಸರು ಬಂದಿರುವುದು ವಿದಿತವಾಗುತ್ತದೆ ಇಲ್ಲಿ ಇವರಿರ್ವರ ಸಮಾಧಿಯ ಮೇಲೆ ಗ್ರಾಮಸ್ಥರು ದೇವಾಲಯ ನಿರ್ಮಿಸಿರುವರು.

ಬಸವಾದಿ ಶಿವಶರಣರಲ್ಲಿ ಅಪ್ಪಣ್ಣನ ಸ್ಥಾನ ನಿಜಕ್ಕೂ ಘನವಾದದ್ದೆ, ಅಪ್ಪಣ್ಣ–ಬಸವಣ್ಣ ಜೀವವೊಂದು ದೇಹರವೆರಡು ಎನ್ನುವಂತೆ ಬದುಕಿದ್ದರು ಬಸವಾದಿ ಶರಣರಲ್ಲಿ ಅಪ್ಪಣ್ಣ ಮಹಾಶರಣನಾಗಿ ಬಾಳಿ ಹೋದ ಧೃವತಾರೆಯಾಗಿದ್ದಾನೆ. ಇಂತಹ ಮಹಾನ್ ಶರಣರ ಜೀವನ ನಮ್ಮ ಬಾಳಹಾದಿಯಲ್ಲಿ ಬೆಳಕಿನ ಕಂಬ ಇದ್ದಂತೆ ಈ ಬೆಳಕಿನಲ್ಲಿ ನಡೆದು ನಮ್ಮ ಬದುಕು ನಾವು ಹಸನವಾಗಿಸಿಕೊಳ್ಳಬೇಕು ಈ ಶರಣ ವಚನಗಳು ಮಾನವೀಯ ಮೌಲ್ಯಯಗಳಾಗಿವೆ ಎಂಬುದನ್ನು ಮರೆಯವಂತಿಲ್ಲಾ. ಹಡಪದ ಅಪ್ಪಣ್ಣನು ಶಿವಭಕ್ತನಾಗಿ ಈತ ಮಾಡಿದ ಸಮರ್ಪಣಾ ರೂಪದ ಸೇವಾಭಾವ ಉಜ್ವಲ ಮತ್ತು ಅವರ್ಣನೀಯವಾದುದು.

ಪರಾಮರ್ಶನ ಗ್ರಂಥಗಳು

- **ಡಾ. ವ್ಹಿ. ಜಿ. ಪೂಜಾರ (ಸಂ.) :** ಶ್ರೀ ಹಡಪದ ಶರಣರು – ಶರಣೆಯರು
- **ಡಾ. ವಚನ ಕುಮಾರಸ್ವಾಮಿ :** ನಿಜಸುಖಿ ಹಡಪದ ಅಪ್ಪಣ್ಣ

■■

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕರ್ನಾಟಕದ ಪರಿಸರ ಸಂವೇದಿ ಪ್ರದೇಶಗಳಲ್ಲಿ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಸಂಘರ್ಷ : ಒಂದು ವಿಶ್ಲೇಷಣಾತ್ಮಕ ಅಧ್ಯಯನ (2025–26)

✍ **ಬಸವರಾಜ ಕುರಗುಂದ,** ಸಂಶೋಧನಾ ವಿದ್ಯಾರ್ಥಿ, ರಾಣಿ ಚನ್ನಮ್ಮ ವಿ.ವಿ. ಬೆಳಗಾವಿ. ಮತ್ತು ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಶ್ರೀ ಜ.ಫ. ಸರಕಾರಿ ಪ್ರಥಮ ದರ್ಜೆ ಕಾಲೇಜು ಶಿರಹಟ್ಟಿ. ಜಿ. ಗದಗ.

✍ **ಪ್ರೊ. ವೈ. ಎಸ್. ಬಲವಂತಗೋಳ,** ಸಂಶೋಧನಾ ಮಾರ್ಗದರ್ಶಕರು. ರಾಣಿ ಚನ್ನಮ್ಮ ವಿ.ವಿ.ಬೆಳಗಾವಿ.

ಸಾರಾಂಶ

ಕರ್ನಾಟಕ ರಾಜ್ಯವು ಭಾರತದಲ್ಲಿಯೇ ಒಂದು ಪ್ರಗತಿಪರ ರಾಜ್ಯವೆಂದು ಗುರುತಿಸಲ್ಪಡುತ್ತದೆ. ಅದು ತನ್ನ 'ಕೈಗಾರಿಕಾ ನೀತಿ 2025–30'ರ ಅಡಿಯಲ್ಲಿ ಶೇ. 12% ರಷ್ಟು ವಾರ್ಷಿಕ ಬೆಳವಣಿಗೆಯ ಗುರಿ ಇರಿಸಿಕೊಂಡಿದೆ. ಆದರೆ ಈ ಮಹತ್ವಾಕಾಂಕ್ಷೆಯು ರಾಜ್ಯದ ಪರಿಸರ ಸಂವೇದಿ ವಲಯಗಳಾದ ಪಶ್ಚಿಮ ಘಟ್ಟಗಳು ಮತ್ತು ಅಭಯಾರಣ್ಯಗಳ ಸಂರಕ್ಷಣೆಯೊಂದಿಗೆ ನೇರ ಸಂಘರ್ಷಕ್ಕೆಳಿದಿವೆ. ಪ್ರಸ್ತುತ ಲೇಖನವು ರಾಜ್ಯದ ಪ್ರಮುಖ ಆರು ಯೋಜನೆಗಳನ್ನು,; ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ (PSHP), ಮೇಕೆದಾಟು ಸಮತೋಲನ ಜಲಾಶಯ, ಕಳಸಾ–ಬಂಡೂರಿ ನಾಲಾ ಯೋಜನೆ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಪರಿಸರ ಸಂವೇದಿ ವಲಯ (ESZ) ಕಡಿತ, ರಾಷ್ಟ್ರೀಯ ಹೆದ್ದಾರಿ–75ರ ವಿಸ್ತರಣೆ ಮತ್ತು ಬೆಡ್ತಿ–ವರದಾ ಮತ್ತು ಅಘನಾಶಿನಿ–ವೇದಾವತಿ ನದಿ ಜೋಡಣೆ ಯೋಜನೆಗಳನ್ನು ವಿಶ್ಲೇಷಿಸುತ್ತದೆ. ಈ ಯೋಜನೆಗಳು ಸುಸ್ಥಿರ ಅಭಿವೃದ್ಧಿ ಗುರಿಗಳಾದ SDG–15 (ಭೂಮಿಯ ಮೇಲಿನ ಜೀವ ಸಂಕುಲ) ಮತ್ತು SDG–6 (ಸ್ವಚ್ಛ ನೀರು) ಸಾಧಿಸುವಲ್ಲಿ ಬೀರುವ ಪ್ರಭಾವಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಪ್ರಸ್ತಾವನೆ

ಕರ್ನಾಟಕ ರಾಜ್ಯವು ಸುಸ್ಥಿರ ಅಭಿವೃದ್ಧಿ ಗುರಿಗಳ ಅನುಷ್ಠಾನದಲ್ಲಿ ಭಾರತದ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ನೀತಿ ಆಯೋಗದ 2023–24ರ ಸುಸ್ಥಿರ ಅಭಿವೃದ್ಧಿ ಗುರಿಗಳ ಅನುಷ್ಠಾನದ ಸೂಚ್ಯಂಕದ ವರದಿಯ ಪ್ರಕಾರ ಕರ್ನಾಟಕವು ತನ್ನ ಅಂಕಗಳನ್ನು 72 ರಿಂದ 75ಕ್ಕೆ ಏರಿಸಿಕೊಳ್ಳುವ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ 5ನೇ ಸ್ಥಾನಕ್ಕೆ ಜಿಗಿದಿದೆ. ಆದಾಗ್ಯೂ, ರಾಜ್ಯವು ಭೌಗೋಳಿಕವಾಗಿ ವಿಶ್ವದ ಪ್ರಮುಖ ಜೀವವೈವಿಧ್ಯ ತಾಣಗಳಲ್ಲಿ ಒಂದಾದ ಪಶ್ಚಿಮ ಘಟ್ಟಗಳನ್ನು ಹೊಂದಿರುವುದರಿಂದ, ಇಲ್ಲಿನ ಮೂಲ ಸೌಕರ್ಯ ಯೋಜನೆಗಳು ತೀವ್ರ ಸವಾಲುಗಳನ್ನು ಎದುರಿಸುತ್ತಿವೆ. 2026ರ ಈ ಕಾಲಘಟ್ಟದಲ್ಲಿ ಅನೇಕ ಬೃಹತ್ ಯೋಜನೆಗಳು ಸುಪ್ರೀಂ ಕೋರ್ಟ್ ನೇಮಿತ ಸಮಿತಿಗಳ (CEC) ಮತ್ತು ಕೇಂದ್ರ ಪರಿಸರ ಸಚಿವಾಲಯದ (MoEFCC) ತೀವ್ರ ನಿಗಾದಲ್ಲಿವೆ.

ಸಂಶೋಧನಾ ವಿಧಾನ ಮತ್ತು ಚೌಕಟ್ಟು

"ಕರ್ನಾಟಕದ ಪರಿಸರ ಸಂವೇದಿ ಪ್ರದೇಶಗಳಲ್ಲಿ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಸಂಘರ್ಷ : ಒಂದು ವಿಶ್ಲೇಷಣಾತ್ಮಕ ಅಧ್ಯಯನ (2025–26)" ಎಂಬ ಲೇಖನವು ವಿಶ್ಲೇಷಣಾತ್ಮಕ ಸ್ವರೂಪದ್ದಾಗಿದ್ದು, ಈ ಲೇಖನದಲ್ಲಿ ಬಳಸಲಾದ ಮಾಹಿತಿಯು ದ್ವಿತೀಯ ಮೂಲಗಳಿಂದ ಸಂಗ್ರಹಿಸಲಾಗಿದೆ. ಈ ಅಧ್ಯಯನವು 'ಪ್ರಾಜೆಕ್ಟ್ ಇಂಪ್ಯಾಕ್ಟ್ ಅಸೆಸ್‌ಮೆಂಟ್' (PIA) ಚೌಕಟ್ಟನ್ನು ಬಳಸಿಕೊಂಡಿದೆ. ಇಲ್ಲಿ ಪ್ರಮುಖವಾಗಿ ಮೂರು ಮಾನದಂಡಗಳನ್ನು ಪರಿಗಣಿಸಲಾಗಿದೆ.

- **ಜೀವ ವೈವಿಧ್ಯದ ಮೇಲೆ ಪ್ರಭಾವ :** ಸಂರಕ್ಷಿತ ಪ್ರದೇಶಗಳಿಗೆ ಸಾಮೀಪ್ಯ ಮತ್ತು ಸ್ಥಳೀಯ ಜೀವ ಪ್ರಭೇದಗಳಿಗೆ ಇರುವ ಬೆದರಿಕೆ.
- **ನಿಯಂತ್ರಕ ಸಂಸ್ಥೆಗಳಿಂದ ಅನುಮತಿ ಸ್ಥಿತಿಗತಿ :** ಅರಣ್ಯ ಮತ್ತು ಪರಿಸರ ಇಲಾಖೆಗಳ ಇಲಾಖೆಗಳ ಪ್ರಸ್ತುತ ಸ್ಥಿತಿ.
- **ಸುಸ್ಥಿರ ಅಭಿವೃದ್ಧಿ ಗುರಿಗಳ ಸಮತೋಲನ :** ಆರ್ಥಿಕ ಗುರಿಗಳು ಮತ್ತು ಪರಿಸರ ಗುರಿಗಳ ನಡುವಿನ ಹೊಂದಾಣಿಕೆ.

ಕರ್ನಾಟಕದ ಪ್ರಮುಖ ಪರಿಸರ ಸಂವೇದಿ ಯೋಜನೆಗಳ ವಿಶ್ಲೇಷಣೆ

1. ಶರಾವತಿ ಪಂಪ್ಡ್ ಸ್ಟೋರೇಜ್ ಜಲ ವಿದ್ಯುತ್ (ಹೈಡ್ರೋಎಲೆಕ್ಟ್ರಿಕ್) ಯೋಜನೆ (PSHP)

ಶಿವಮೊಗ್ಗ ಜಿಲ್ಲೆಯ ಪಶ್ಚಿಮ ಘಟ್ಟದ ಅರಣ್ಯ ಪ್ರದೇಶದಲ್ಲಿ ರಾಜ್ಯ ಸರ್ಕಾರ ಶರಾವತಿ ಪಂಪ್ಡ್ ಸ್ಟೋರೇಜ್ ಭೂಗತ ಜಲ ವಿದ್ಯುತ್ (ಹೈಡ್ರೋಎಲೆಕ್ಟ್ರಿಕ್) ಯೋಜನೆಗೆ ಮುಂದಾಗಿದೆ. ಈ ಯೋಜನೆಯಿಂದ 2000 ಮೆಗ್ಯಾವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿಯನ್ನು ಸರ್ಕಾರ ಹೊಂದಿದೆ. ಇದಕ್ಕಾಗಿ ಈಗಾಗಲೇ ಟೆಂಡರ್ ಸಹ ಕರೆದು ಕೆಲಸ ನಿರ್ವಹಿಸಲು ಗುತ್ತಿಗೆ ನೀಡಿದೆ. ಇದರ ಬೆನ್ನಲ್ಲೇ ಈ ಯೋಜನೆಗೆ ಸ್ಥಳೀಯರಿಂದ ಮತ್ತು ಪರಿಸರವಾದಿಗಳ ತೀವ್ರ ವಿರೋಧ ವ್ಯಕ್ತವಾಗುತ್ತಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ಹೈಡ್ರೋಎಲೆಕ್ಟ್ರಿಕ್ ಯೋಜನೆ ಎಂದರೇನು?

ಶರಾವತಿ ನದಿಗೆ ಲಿಂಗನಮಕ್ಕಿಯಲ್ಲಿ ಆಣೆಕಟ್ಟು ಕಟ್ಟಲಾಗಿದೆ. ಇಲ್ಲಿ ನಾಲ್ಕು ವಿದ್ಯುತ್‌ಗಾರಗಳಿಂದ 1469.20 ಮೆಗ್ಯಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಈ ನೀರು ಮುಂದೆ ಸಾಗಿ ಗೇರುಸೊಪ್ಪ ಆಣೆಕಟ್ಟೆಗೆ ಹೋಗುತ್ತದೆ. ಅಲ್ಲಿಯೂ 240 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ. ನಂತರದಲ್ಲಿ ಶರಾವತಿ ನದಿ ಮುಂದೆ ಸಾಗಿ, ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಮೂಲಕ ಅರಬ್ಬಿ ಸಮುದ್ರ ಸೇರುತ್ತದೆ. ಶರಾವತಿ ಪಂಪ್ಡ್ ಸ್ಟೋರೇಜ್ ಹೈಡ್ರೋಎಲೆಕ್ಟ್ರಿಕ್ ಯೋಜನೆಯಲ್ಲಿ ಗೇರುಸೊಪ್ಪ ಆಣೆಕಟ್ಟೆಯಲ್ಲಿ ಸಂಗ್ರಹವಾಗುವ ನೀರನ್ನು ಮತ್ತೆ ಗುರುತ್ವಾಕರ್ಷಣೆಗೆ ವಿರುದ್ಧವಾಗಿ ವಿದ್ಯುತ್ ಬಳಸಿಕೊಂಡು ತಲಕಳಲೆ ಆಣೆಕಟ್ಟೆಗೆ ಎತ್ತಿ ತರಲಾಗುತ್ತದೆ. ಹೀಗೆ ಎತ್ತಿ ತಂದ ನೀರಿನಿಂದ ಮತ್ತೆ 2000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವುದು ಯೋಜನೆಯ ಉದ್ದೇಶವಾಗಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ಜಲ ವಿದ್ಯುತ್ (ಹೈಡ್ರೋಎಲೆಕ್ಟ್ರಿಕ್) ಯೋಜನೆ ಪಕ್ಷಿ ನೋಟ

- ಒಟ್ಟು ಯೋಜನಾ ವೆಚ್ಚ– 10,500 ಕೋಟಿ ರೂ.

ISSN : 2249-2429 ಸಂಶೋಧನೆ RNI REG.NO.KARKAN/2011/38712

- ಒಳಗೊಂಡ ಜಿಲ್ಲೆ– ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳು
- ಒಟ್ಟು ಅರಣ್ಯ ಭೂಮಿ– 54.155 ಹೆಕ್ಟರ್
- ಯೋಜನೆಗೆ ಒಳಗೊಂಡ ಅರಣ್ಯೇತರ ಭೂಮಿ– 88.608 ಹೆಕ್ಟರ್
- ಎಷ್ಟು ಮರಗಳು ಕಟಾವಾಗಲಿವೆ ? ಶಿವಮೊಗ್ಗ ಜಿಲ್ಲೆಯ ಸಾಗರ ವಿಭಾಗ– 745 ಮರಗಳು
- ಶಿವಮೊಗ್ಗ ವನ್ಯಜೀವಿ ವಲಯ–1518 ಮರಗಳು
- ಉತ್ತರ ಕನ್ನಡ ಹೊನ್ನಾವರ ವಿಭಾಗ– 13,756
- ಒಟ್ಟು ಕಟಾವಾಗಲಿರುವ ಮರಗಳು– 16,041

ಸ್ಥಳ : ಯೋಜನೆಯನ್ನು ಶರಾವತಿ ಕಣಿವೆ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದು, ಯೋಜನೆಯ ಕೆಳಮಟ್ಟದಲ್ಲಿ ಗೇರುಸೊಪ್ಪ ಹಾಗೂ ಮೇಲ್ಮಟ್ಟದಲ್ಲಿ ತಳಕಳಲೆ ಜಲಾಶಯಗಳು ಅಸ್ತಿತ್ವದಲ್ಲಿ ಇವೆ. ಎರಡೂ ಜಲಾಶಯಗಳನ್ನು ಏಳು ಕಿಲೋಮೀಟರ್ ಸುರಂಗ ಮಾರ್ಗದ ಮೂಲಕ ಜೋಡಿಸಿ ನೀರು ಹರಿಬಿಟ್ಟು ವಿದ್ಯುತ್ ಉತ್ಪಾದನೆಗೆ ಯೋಜಿಸಲಾಗಿದೆ.

ಯೋಜನೆಗೆ ತಾತ್ಕಾಲಿಕ ಅನುಮತಿ : ಈ ಯೋಜನೆಯನ್ನು ಕಾರ್ಯಗತಗೊಳಿಸಲು ಡಿಸೆಂಬರ್ 2023ರಲ್ಲಿ ನೀಡಲಾದ ಹೊಸ ಮಾರ್ಗಸೂಚಿಗಳ (TOR) ಪ್ರಕಾರ ಪರಿಸರದ ಮೇಲೆ ಬೀರುವ ಪ್ರಭಾವದ ಅಧ್ಯಯನಗಳು (EIA) ಪೂರ್ಣಗೊಂಡಿವೆ. ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಅನುಮತಿ ಬಾಕಿ ಇದ್ದು, 26/06/2025 ರಂದು ನಡೆದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ (NBWL) ಸಭೆಯಲ್ಲಿ ಈ ಯೋಜನೆಗೆ ತಾತ್ಕಾಲಿಕ (In-principle) ಅನುಮತಿ ನೀಡಲಾಗಿದೆ.

ಶರಾವತಿ ಪಂಪ್ಡ್ ಸ್ಟೋರೇಜ್ ಜಲ ವಿದ್ಯುತ್ ಯೋಜನೆಗೆ ವಿರೋಧ ಏಕೆ ?

ಈ ಯೋಜನೆ ಪಶ್ಚಿಮ ಘಟ್ಟಗಳ ವಲಯದಲ್ಲಿ ಬರುತ್ತದೆ ಹಾಗೂ ಅರಣ್ಯ ಭೂಮಿಯನ್ನು ಬಳಸಲಾಗುತ್ತದೆ. ಪರಿಸರ ಸೂಕ್ಷ್ಮ ವಲಯವಾಗಿರುವ ಈ ಪ್ರದೇಶ ಅತ್ಯಂತ ಹಳೆಯದಾದ ಮತ್ತು ಇತರೆ ಭಾಗದಲ್ಲಿ ಇರದಂತಹ ಪ್ರಭೇದದ ಸಸ್ಯಗಳು ಇಲ್ಲವೆ. ಇದಲ್ಲದೆ ಇದು ಅವನತಿಯಲ್ಲಿ ಇರುವ ಸಿಂಗಳೀಕ ದಂತಹ ಪ್ರಾಣಿಗಳ ಆವಾಸ ಸ್ಥಾನ ಕೂಡ. ಇನ್ನು ಈ ಭಾಗದಲ್ಲಿ ಈಗಾಗಲೇ ಹಲವಾರು ಅಭಿವೃದ್ಧಿ ಕಾರ್ಯದಿಂದ ಭೂಕುಸಿತ ದುರಂತಗಳು ನಡೆದಿದೆ. ಇದಲ್ಲದೇ ಅಭಿವೃದ್ಧಿ ಕಾರ್ಯದಿಂದ ನದಿಯ ದಿಕ್ಕು ಸಹ ಬದಲಾಗಿದೆ. ಹಲವು ಜೀವ ವೈವಿಧ್ಯ ಹೊಂದಿರುವ ಈ ಪ್ರದೇಶದಲ್ಲಿ ಅಭಿವೃದ್ಧಿಗೆ ಮುಂದಾದರೆ ಜೀವ ಸಂಕುಲಕ್ಕೆ ಆಪತ್ತು ಎದುರಾಗಲಿದೆ. ಈಗಾಗಲೇ ಶರಾವತಿ ಜಲವಿದ್ಯುತ್ ಯೋಜನೆಯಿಂದ ಸಾವಿರಾರು ಜನ ತಮ್ಮ ನೆಲೆ ಕಳೆದುಕೊಂಡು ಸೂಕ್ತ ಪರಿಹಾರ ಸಹ ದೊರಕದೆ, ಉದ್ಯೋಗವೂ ಸಿಗದೆ ನಿರಾಶ್ರಿತರಾಗಿದ್ದಾರೆ. ಇನ್ನೂ ಈ ಯೋಜನೆ ಅಡಿ ಸುರಂಗ ಮಾರ್ಗ ಮಾಡುವುದರಿಂದ ಭೂಕುಸಿತದ ಆತಂಕವು ಇದ್ದು ಪರಿಸರಕ್ಕೆ ದೊಡ್ಡ ಹಾನಿಯಾಗಲಿದೆ. ಹೀಗಾಗಿ ಸ್ಥಳೀಯ ಜನರು ಮತ್ತು ಪರಿಸರವಾದಿಗಳು ವಿರೋಧ ವ್ಯಕ್ತಪಡಿಸುತ್ತಿದ್ದಾರೆ.

ಇದು 2000 ಮೆಗಾವ್ಯಾಟ್ ಸಾಮರ್ಥ್ಯದ ನವೀಕರಿಸಬಹುದಾದ ಇಂಧನ ಶೇಕರಣಾ ಯೋಜನೆಯಾಗಿದ್ದರೂ, ಇದರ ಪರಿಸರ ಬೆಲೆ ಅಧಿಕವಾಗಿದೆ.

ವೈಜ್ಞಾನಿಕ ವಿಮರ್ಶೆ : ಈ ಯೋಜನೆಯ ಪರಿಸರ ಪರಿಣಾಮ ಅಂದಾಜು (EIA) ವರದಿಯನ್ನು ತಜ್ಞರು 'ಅವೈಜ್ಞಾನಿಕ' ಎಂದು ಕರೆದಿದ್ದಾರೆ. ಪ್ರಮುಖವಾಗಿ ವರದಿಯಲ್ಲಿ 18,000 ಟನ್ ಸ್ಫೋಟಕಗಳ ಬಳಕೆಯಿಂದ ಪರಿಸರದ ಮೇಲಾಗುವ ಮಾಲಿನ್ಯ ಮತ್ತು ರಾಸಾಯನಿಕ ಸೋರಿಕೆಯ ಬಗ್ಗೆ ಉಲ್ಲೇಖವಿಲ್ಲದಿರುವುದು ದೊಡ್ಡ ಲೋಪವಾಗಿದೆ.

ಜೀವವೈವಿಧ್ಯದ ನಷ್ಟ : ಅಳಿವಿನಂಚಿನಲ್ಲಿರುವ ಸಿಂಹಬಾಲದ ಸಿಂಗಳೀಕ (LTM) ಪ್ರಾಣಿಗಳ ಏಕೈಕ ಆವಾಸಸ್ಥಾನವಾದ ಶರಾವತಿ ಕಣಿವೆಯಲ್ಲಿ ಸುಮಾರು 400 ಎಕೆರೆಗೂ ಹೆಚ್ಚು ದಟ್ಟ ಅರಣ್ಯ ನಾಶವಾಗುವ ಆತಂಕವಿದೆ. ಈ ಪ್ರಾಣಿಗಳು ಮರದಿಂದ ಮರಕ್ಕೆ ಜಿಗಿಯುವ ಪ್ರಾಣಿಗಳಾಗಿದ್ದು, ಅರಣ್ಯದ ನಡುವೆ ರಸ್ತೆ ಅಥವಾ ವಿದ್ಯುತ್ ಮಾರ್ಗಗಳ ನಿರ್ಮಾಣದಿಂದ ಅವುಗಳ ಸಹಜ ಜೀವನ ಮತ್ತು ಸಂತಾನೋತ್ಪತ್ತಿಗೆ ಅಡ್ಡಿಯಾಗಲಿದೆ.

ಪರ್ಯಾಯ ವ್ಯವಸ್ಥೆ : ತಜ್ಞರ ಪ್ರಕಾರ ಇಂತಹ ಬೃಹತ್ ಆಣೆಕಟ್ಟು ಯೋಜನೆಗಳ ಬದಲು ಸೌರ ಶಕ್ತಿ ಮತ್ತು ಪವನ ಶಕ್ತಿಯನ್ನು ಬ್ಯಾಟರಿ ಶೇಖರಣಾ ವ್ಯವಸ್ಥೆಗಳ (BESS) ಮೂಲಕ ನಿರ್ವಹಿಸುವುದು ಪರಿಸರಕ್ಕೆ ಪೂರಕವಾಗಿದೆ.

ಪರಿಸರ ಆತಂಕ : ಈ ಯೋಜನೆಗಾಗಿ ಶರಾವತಿ ಕಣಿವೆಯ ಸಿಂಹಬಾಲದ ಸಿಂಗಳೀಕ ಅಭಯಾರಣ್ಯದ ಸುಮಾರು 54 ಹೆಕ್ಟರ್ ದಟ್ಟ ಅರಣ್ಯವನ್ನು ಬಳಸಿಕೊಳ್ಳಬೇಕಾಗುತ್ತದೆ.

ವಿಮರ್ಶೆ : ಪರಿಸರ ಪರಿಣಾಮ ಅಂದಾಜು ವರದಿಯಲ್ಲಿ 18,000 ಟನ್ ಸ್ಫೋಟಕಗಳ ಬಳಕೆಯಿಂದಾಗುವ ಹಾನಿ ಮತ್ತು ತ್ಯಾಜ್ಯ ವಿಲೇವಾರಿ ಬಗ್ಗೆ ಸರಿಯಾದ ಮಾಹಿತಿಯಿಲ್ಲ ಎಂಬ ದೂರುಗಳಿವೆ. ಮೇ 2025ರಲ್ಲಿ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಭೂಕುಸಿತದ ಭೀತಿ ಮತ್ತು ಜೀವವೈವಿಧ್ಯದ ಹಾನಿಯ ಕಾರಣ ನೀಡಿ ಅರಣ್ಯ ಅನುಮತಿಯನ್ನು ನಿರಾಕರಿಸಿದೆ.

2. ಮೇಕೆದಾಟು ಸಮತೋಲನ ಜಲಾಶಯ ಯೋಜನೆ

ಮೇಕೆದಾಟು ಸಮತೋಲನ ಜಲಾಶಯ ಯೋಜನೆಯು ಕರ್ನಾಟಕದ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಒಂದು ಬಹುಪಯೋಗಿ ಯೋಜನೆಯಾಗಿದೆ. ರೂ. 9,000 ಕೋಟಿ ವೆಚ್ಚದ ಈ ಯೋಜನೆಯು ಕುಡಿಯುವ ನೀರಿನ ಭರವಸೆ ನೀಡುತ್ತದೆಯಾದರೂ ಗಂಭೀರ ಅರಣ್ಯ ಹಾನಿಗೆ ಕಾರಣವಾಗಲಿದೆ ಎಂಬುವುದು ಪರಿಸರವಾದಿಗಳ ವಾದ.

ಯೋಜನೆಯ ಪ್ರಮುಖ ಅಂಶಗಳು (2026 ಜನೇವರಿ)

ಉದ್ದೇಶ : ಬೆಂಗಳೂರು ಮತ್ತು ಸುತ್ತಮತ್ತಲಿನ ಜಿಲ್ಲೆಗಳಿಗೆ ಸುಮಾರು 4.75 ಟಿ.ಎಂ.ಸಿ. ಕುಡಿಯುವ ನೀರು ಪೂರೈಸುವ ಹಾಗೂ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ.

ಜಲಾಶಯದ ಸಾಮರ್ಥ್ಯ : ಈ ಸಮತೋಲನ ಜಲಾಶಯವು ಒಟ್ಟು 67.16 ಟಿ.ಎಂ.ಸಿ. ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ.

ಸ್ಥಳ : ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ ಒಂದು ಬಹುಪಯೋಗಿ ಯೋಜನೆಯಾಗಿದೆ. ಕಾವೇರಿ ಮತ್ತು ಅರ್ಕಾವತಿ ನದಿಗಳ ಸಂಗಮ ಸ್ಥಳದಿಂದ ಸುಮಾರು 1.5 ಕಿ.ಮೀ. ದೂರದಲ್ಲಿರುವ 'ಒಂಟಿಗುಂಡ್ಲು' ಎಂಬಲ್ಲಿ ಈ ಆಣೆಕಟ್ಟು ನಿರ್ಮಾಣವಾಗಲಿದೆ.

ವೆಚ್ಚ : ಈ ಯೋಜನೆಯ ಅಂದಾಜು ವೆಚ್ಚ 9,000 ಕೋಟಿ ರೂಪಾಯಿಗಳು.

ಭೂಮಿಯ ಬಳಕೆ : ಯೋಜನೆಗೆ ಒಟ್ಟು 5,252 ಹೆಕ್ಟರ್ ಭೂಮಿ ಅಗತ್ಯವಿದ್ದು ಇದರಲ್ಲಿ ಸುಮಾರು 3,181 ಹೇಕ್ಟರ್ ಕಾವೇರಿ ವನ್ಯಜೀವಿ ಅಭಯಾರಣ್ಯದ ವ್ಯಾಪ್ತಿಗೆ ಬರುತ್ತದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪರಿಸರದ ಮೇಲೆ ಪ್ರಭಾವ : ಈ ಯೋಜನೆಯು ಅಂತರಾಜ್ಯ ಜಲ ವಿವಾದದ ಜೊತೆಗೆ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿಯೂ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಈ ಯೋಜನೆಯಿಂದಾಗಿ ಸುಮಾರು 4,996 ಹೆಕ್ಟರ್ ಅರಣ್ಯ ಭೂಮಿ ಮುಳುಗಡೆಯಾಗಲಿದ್ದು, ಇದು ಕಾವೇರಿ ವನ್ಯಜೀವಿ ಅಭಯಾರಣ್ಯದ ಪ್ರಮುಖ ಭಾಗವಾಗಿದೆ. ಇದು ಏಷ್ಯಾಟಿಕ್ ಆನೆಗಳ ಪ್ರಮುಖ ವಲಸೆ ದಾರಿಯನ್ನು (Elephant Corridor) ಕತ್ತರಿಸುವುದರಿಂದ ಆನೆಗಳ ಸಹಜ ಸಂಚಾರಕ್ಕೆ ಹಾನಿ ಮಾಡಲಿದೆ. ಇದರಿಂದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಮಾನವ–ಆನೆ ಸಂಘರ್ಷ ಹೆಚ್ಚಾಗುವ ಭೀತಿಯಿದೆ. 'ಸಮುದ್ರಕ್ಕೆ ವ್ಯರ್ಥವಾಗಿ ಹರಿಯುವ ನೀರನ್ನು ಉಳಿಸುವುದು' ಎಂಬ ವಾದವು ಪರಿಸರ ವಿಜ್ಞಾನದ ದೃಷ್ಟಿಯಿಂದ ತಪ್ಪಾಗಿದೆ. ನದಿ ನೀರು ಸಮುದ್ರಕ್ಕೆ ಸೇರುವುದು ಸಮುದ್ರದ ಉಪ್ಪಿನಂಶ ನಿಯಂತ್ರಿಸಲು ಮತ್ತು ಕರಾವಳಿಯ ಪರಿಸರ ವ್ಯವಸ್ಥೆಯನ್ನು ಕಾಪಾಡಲು ಅಗತ್ಯವಾಗಿದೆ ಎಂಬುದು ವಿಜ್ಞಾನಿಗಳ ವಾದ.

ಯೋಜನೆಯ ಪ್ರಸ್ತುತ ಸ್ಥಿತಿ (ಜನೇವರಿ 2026)

1. ಸುಪ್ರೀಂಕೋರ್ಟ್ ತೀರ್ಪು : ನವೆಂಬರ್ 2025ರಲ್ಲಿ ಸುಪ್ರೀಂ ಕೋರ್ಟ್ ತಮಿಳುನಾಡು ಸರ್ಕಾರದ ಆಕ್ಷೇಪಗಳನ್ನು ತಿರಸ್ಕರಿಸಿ, ಯೋಜನೆಯ ಸಮಗ್ರ ಯೋಜನಾ ವರದಿಯನ್ನು (DPR) ಪರಿಶೀಲಿಸಲು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (CWMA) ಮತ್ತು ಕೇಂದ್ರ ಜಲ ಆಯೋಗಕ್ಕೆ (CWC) ಅನುಮತಿ ನೀಡಿದೆ. ಆದರೂ ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಅಡಿಯಲ್ಲಿ ಇಂದಿಗೂ ಅಂತಿಮ ಅನುಮತಿ ದೊರೆತಿಲ್ಲ.

2. ಪರಿಷ್ಕೃತ ಸಮಗ್ರ ಯೋಜನಾ ವರದಿ (DPR) **:** ಕರ್ನಾಟಕ ಸರ್ಕಾರವು ಯೋಜನೆಯಲ್ಲಿನ ಕೆಲವು ತಾಂತ್ರಿಕ ಲೋಪಗಳನ್ನು ಸರಿಪಡಿಸಿ ಶೀಘ್ರದಲ್ಲೇ ಕೇಂದ್ರಕ್ಕೆ ಪರಿಷ್ಕೃತ ಸಮಗ್ರ ಯೋಜನಾ ವರದಿ (DPR) ಸಲ್ಲಿಸಲು ನಿರ್ಧರಿಸಿದೆ.

3. ಅರಣ್ಯ ಇಲಾಖೆ ಅನುಮತಿ : ಜನೇವರಿ 2026ರಲ್ಲಿ ಕಾವೇರಿ ನೀರಾವರಿ ನಿಗಮವು ಆಣೆಕಟ್ಟು ನಿರ್ಮಾಣಕ್ಕಾಗಿ 12,692 ಎಕರೆ ಅರಣ್ಯ ಭೂಮಿ ಬಳಸಿಕೊಳ್ಳಲು ಅನುಮೋದನೆ ಕೋರಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಮತ್ತೆ ಪ್ರಸ್ತಾವಣೆಯನ್ನು ಸಲ್ಲಿಸಿದೆ.

4. ವಿವಾದ : ತಮಿಳುನಾಡು ರಾಜ್ಯವು ಈ ಯೋಜನೆಯಿಂದ ತನಗೆ ಸಿಗಬೇಕಾದ ನೀರಿನ ಪಾಲಿನಲ್ಲಿ ವ್ಯತ್ಯಯವಾಗಬಹುದು ಎಂಬ ಆತಂಕದಿಂದ ಮೊದಲಿನಿಂದಲೂ ಈ ಯೋಜನೆಯನ್ನು ವಿರೋಧಿಸುತ್ತಾ ಬಂದಿದೆ. ಕರ್ನಾಟಕ ಸರ್ಕಾರವು ಈ ಯೋಜನೆಯನ್ನು ತನ್ನ ಹಕ್ಕಿನ ವ್ಯಾಪ್ತಿಯಲ್ಲಿ ನಿರ್ಮಿಸುತ್ತಿರುವುದಾಗಿ ಮತ್ತು ತಮಿಳುನಾಡಿಗೆ ನಿಗದಿಪಡಿಸಿದ ನೀರಿನ ಪಾಲನ್ನು ಬಿಡುಗಡೆ ಮಾಡಲು ಇದು ಸಹಕಾರಿಯಾಗಲಿದೆ ಎಂದು ವಾದಿಸುತ್ತಿದೆ.

3. ಕಳಸಾ–ಬಂಡೂರಿ ನಾಲಾ ತಿರುವು ಯೋಜನೆ

ಕಳಸಾ–ಬಂಡೂರಿ ನಾಲಾ ತಿರುವು ಯೋಜನೆಯು ಉತ್ತರ ಕರ್ನಾಟಕದ ಜನಜೀವನದ ಮೇಲೆ ನೇರ ಪರಿಣಾಮ ಬೀರುವ ಅತ್ಯಂತ ಪ್ರಮುಖ ಯೋಜನೆಯಾಗಿದೆ. ಉತ್ತರ ಕರ್ನಾಟಕದ ಹುಬ್ಬಳ್ಳಿ–ಧಾರವಾಡ, ಗದಗ, ಬಾಗಲಕೋಟ ಮತ್ತು ಬೆಳಗಾವಿ ಜಿಲ್ಲೆಗಳು ಕರ್ನಾಟಕದಲ್ಲಿ ಅತಿ ಹೆಚ್ಚು ಒಣ (ಮಳೆ ಆಶ್ರಿತ) ಬೇಸಾಯದ ವಲಯವಾಗಿದೆ. ಇಲ್ಲಿನ 13ಕ್ಕೂ ಹೆಚ್ಚು ಪಟ್ಟಣಗಳ 50 ಲಕ್ಷಕ್ಕೂ ಹೆಚ್ಚು ಜನರಿಗೆ ಕುಡಿಯುವ ನೀರಿನ ಖಾತ್ರಿಗಾಗಿ ಈ ಯೋಜನೆ ಅನಿವಾರ್ಯವಾಗಿದೆ. ಮಹದಾಯಿ ನದಿಯು ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ 'ಕಣಕುಂಬಿ'ಯಲ್ಲಿ ಹುಟ್ಟುತ್ತದೆ. ಇದು ಪಶ್ಚಿಮಕ್ಕೆ ಹರಿದು ಗೋವಾ ರಾಜ್ಯದಲ್ಲಿ ಹರಿದು ಅರಬ್ಬಿ ಸಮುದ್ರ ಸೇರುತ್ತದೆ. ಮಹದಾಯಿ ನದಿಗೆ ಗೋವಾದಲ್ಲಿ ಮಾಂಡೋವಿ ಎಂದು ಕರೆಯಲಾಗುತ್ತದೆ.

ಯೋಜನೆಯ ಮೂಲ ಉದ್ದೇಶ ಮತ್ತು ರೂಪರೇಷೆ : ಮಹದಾಯಿ (ಮಾಂಡೋವಿ) ನದಿಯ ಉಪನದಿಗಳಾದ 'ಕಳಸಾ' ಮತ್ತು 'ಬಂಡೂರಿ' ನಾಲಾಗಳಿಗೆ ಆಣೆಕಟ್ಟುಗಳನ್ನು ನಿರ್ಮಿಸಿ ಆ ನೀರನ್ನು ಮಲಪ್ರಭಾ ನದಿಗೆ ತಿರುಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಬೆಳಗಾವಿ, ಧಾರವಾಡ, ಗದಗ ಮತ್ತು ಬಾಗಲಕೋಟ ಜಿಲ್ಲೆಗಳ ಕುಡಿಯುವ ನೀರಿನ ದಾಹವನ್ನು ನೀಗಿಸುವ ಗುರಿ ಹೊಂದಿದೆ. ಒಟ್ಟು 7.56 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಕರ್ನಾಟಕ ಸರ್ಕಾರ ಯೋಜಿಸಿದೆ. ಇದರಲ್ಲಿ ಒಟ್ಟು 3.9 ಟಿ.ಎಂ.ಸಿ. ನೀರನ್ನು ಕುಡಿಯುವ ನೀರಿಗಾಗಿ ಮತ್ತು ಉಳಿದ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಲು ಉದ್ದೇಶಿಸಿದೆ. ಮಲಪ್ರಭಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾದಲ್ಲಿ ಸವದತ್ತಿ, ನವಲಗುಂದ ಮತ್ತು ನರಗುಂದ ಭಾಗದ ರೈತರ ಕೃಷಿ ಚಟುವಟಿಕೆಗಳಿಗೆ ಪರೋಕ್ಷವಾಗಿ ಸಹಕಾರಿಯಾಗಲಿದೆ.

ಕಾನೂನಾತ್ಮಕ ವಿಶ್ಲೇಷಣೆ ಮತ್ತು ಅನುಮತಿಯ ಸ್ಥಿತಿಗತಿ (2026ರ ಜನೇವರಿ ಯಲ್ಲಿ ಇದ್ದಂತೆ) : ಮಹದಾಯಿ ಜಲವಿವಾದ ನ್ಯಾಯ ಮಂಡಳಿಯು (MWDT) 2018 ರಲ್ಲಿ ಕರ್ನಾಟಕಕ್ಕೆ ಒಟ್ಟು 13.42 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಿ ತೀರ್ಪು ನೀಡಿದ್ದರೂ, ಇದರಲ್ಲಿ ಕುಡಿಯುವ ನೀರಿಗಾಗಿ 3.9 ಟಿ.ಎಂ.ಸಿ. ಮತ್ತು ವಿದ್ಯುತ್ ಉತ್ಪಾದನೆಗೆ 8.02 ಟಿ.ಎಂ.ಸಿ. ಮೀಸಲಿದೆ. ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳ ಆಕ್ಷಪಣೆ ಮೇರೆಗೆ ಕೇಂದ್ರ ಸರ್ಕಾರವು ಆಗಷ್ಟ 2025 ರಲ್ಲಿ ಮಹದಾಯಿ ಜಲವಿವಾದ ನ್ಯಾಯಮಂಡಳಿಯ ಅವಧಿಯನ್ನು ಆಗಷ್ಟ 16, 2026ರ ವರೆಗೆ ವಿಸ್ತರಿಸಿದೆ. ಗೋವಾ ಸರ್ಕಾರವು "ವನ್ಯಜೀವಿ ಸಂರಕ್ಷಣಾ ಕಾಯ್ದೆ–1972"ರ ಅಡಿ ಈ ಯೋಜನೆಯನ್ನು ವಿರೋಧಿಸಿ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿದೆ. ಹೀಗಾಗಿ ಯೋಜನೆ ಅನುಷ್ಠಾನಕ್ಕೆ ಹಲವು ವರ್ಷಗಳ ಕಾಲ ಅರಣ್ಯ ಮತ್ತು ಪರಿಸರ ಇಲಾಖೆಯ ಅನುಮತಿ ವಿಳಂಬವಾಗಿದೆ. ಕರ್ನಾಟಕ ಸರ್ಕಾರವು ಕೇಂದ್ರ ಜಲ ಆಯೋಗದ ತಾಂತ್ರಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಪರಿಷ್ಕೃತ ಯೋಜನಾ ವರದಿಯನ್ನು ಸಲ್ಲಿಸಿದೆ (2025–26). ರಾಷ್ಟ್ರೀಯ ವನ್ಯಜೀವಿ ಮಂಡಳಿಯಲ್ಲಿ ಈ ಯೋಜನೆಯ ಕುರಿತು ಒಮ್ಮತ ಮೂಡದ ಕಾರಣ ಇದರ ಅನುಷ್ಠಾನಕ್ಕೆ ಅಂತಿಮ ಅನುಮತಿ ದೊರೆತಿರುವುದಿಲ್ಲ.

ವಿವಾದ ಹಾಗೂ ಆಕ್ಷೇಪಣೆಗಳು : ಈ ಯೋಜನೆಯು ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವಿನ ಸಂಘರ್ಷಕ್ಕೆ ಕಾರಣವಾಗಿದೆ. ಮಾಂಡೋವಿ ನದಿಯು ಗೋವಾದ ಜೀವನಾಡಿಯಾಗಿದೆ. ನದಿಯ ಉಪನದಿಗಳ ದಿಕ್ಕನ್ನು ಬದಲಿಸುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ ಮತ್ತು ಉಪ್ಪು ನೀರು ನದಿಯ ಒಳಗೆ ಪ್ರವೇಶಮಾಡಿ ಆ ಭಾಗದ ಜೀವ ವೈವಿಧ್ಯಕ್ಕೆ ಮಾರಕವಾಗಲಿದೆ ಎಂಬುವುದು ಗೋವಾದ ಆಕ್ಷೇಪಣೆ. ಇನ್ನೊಂದು ಕಡೆ ಮಲಪ್ರಭಾ ನದಿ ವ್ಯಾಪ್ತಿಯಲ್ಲಿ ಜನಸಂಖ್ಯೆ ಹೆಚ್ಚಾಗಿರುವುದರಿಂದ ಕುಡಿಯುವ ನೀರು ಮಾನವ ಹಕ್ಕು ಮತ್ತು ಆದ್ಯತೆಯ ವಿಷಯವಾಗಿದೆ ಎಂಬುವುದು ಕರ್ನಾಟಕದ ವಾದವಾಗಿದೆ.

ಪರಿಸರ ವಿಜ್ಞಾನದ ವಿಶ್ಲೇಷಣೆ : ಈ ಯೋಜನೆಯು ಪಶ್ಚಿಮ ಘಟ್ಟಗಳ ಅತ್ಯಂತ ಸೂಕ್ಷ್ಮ ಅರಣ್ಯ ಪ್ರದೇಶವಾದ ಮಹದಾಯಿ ಮತ್ತು ಭೀಮಗಡ ವನ್ಯಜೀವಿ ಅಭಯಾರಣ್ಯದ ಬಳಿ ಬರುತ್ತದೆ. ಈ ಪ್ರದೇಶವು (ಯಾವುದೇ ಕಾರಣಕ್ಕೂ ಹಸ್ತಕ್ಷೇಪ ಮಾಡಬಾರದ ಅರಣ್ಯ) ವರ್ಗಕ್ಕೆ ಸೇರಿದೆ. ಭೀಮಗಡ ವನ್ಯಜೀವಿ ಅಭಯಾರಣ್ಯ ಕೇವಲ 29 ಮೀಟರ್ ದೂರದಲ್ಲಿದೆ. ಇಲ್ಲಿನ ಕಾಡಿನ ನಾಶವು ಮಲೆನಾಡಿನ ಮೈಕ್ರೋ–ಕ್ಲೈಮೇಟ್ (ಸೂಕ್ಷ್ಮ ಹವಾಮಾನ)

ISSN : 2249-2429 ಸಂಶೋಧನೆ RNI REG.NO.KARKAN/2011/38712

ಬದಲಾವಣೆಗೆ ಕಾರಣವಾಗಬಹುದು. ಇಡೀ ಪ್ರದೇಶವು ಯುನೆಸ್ಕೊ ನೈಸರ್ಗಿಕ ಪಾರಂಪರಿಕ ತಾಣವಾಗಿದ್ದು, ಈ ಯೋಜನೆಯಿಂದಾಗಿ ಸಾವಿರಾರು ಎಕರೆ ಅರಣ್ಯ ಭೂಮಿ ಮುಳುಗಡೆಯಾಗುವ ಸಾಧ್ಯತೆಯಿದ್ದು, ಇದು ಆನೆ ಮತ್ತು ಹುಲಿ ಕಾರಿಡಾರ್ ಮತ್ತು ಸ್ಥಳೀಯ ಜೈವಿಕ ವೈವಿಧ್ಯತೆಯ ಮೇಲೆ ಪ್ರಭಾವ ಬೀರಲಿದೆ. ನದಿ ತಿರುವು ಯೋಜನೆಗಳು ದೀರ್ಘಾವಧಿಯಲ್ಲಿ ಉತ್ತರ ಕರ್ನಾಟಕದಲ್ಲಿ ಭೂ–ಸವಕಳಿ ವೇಗ ಹೆಚ್ಚಿಸಿ ಮರಭೂಮಿಕರಣಕ್ಕೆ ಕಾರಣವಾಗಬಹುದು. ಈ ಹಿನ್ನಲೆಯಲ್ಲಿ ಸುಸ್ಥಿರ ಅಭಿವೃದ್ಧಿ ಮಾದರಿಯಲ್ಲಿ ಕಾಮಗಾರಿ ನಡೆಸಲು ಈಗೀನ ಯೋಜನೆಯಲ್ಲಿ ಒತ್ತು ನೀಡಲಾಗಿದೆ. ಮಹದಾಯಿ ನದಿಯ ಸಿಹಿ ನೀರಿನ ಹರಿವು ಕಡಿಮೆಯಾದಲ್ಲಿ ಗೋವಾದ ಮಾಂಡೋವಿ ನದಿಯ ಮುಖಜ ಭೂಮಿಯಲ್ಲಿ ಅರಬ್ಬಿ ಸಮುದ್ರದ ಉಪ್ಪು ನೀರು ಒಳ ನುಗ್ಗಿ ಮ್ಯಾಂಗ್ರೋವ್ ಕಾಡುಗಳು ಮತ್ತು ಒಟ್ಟಾರೆ ಪರಿಸರ ಸಮತೋಲನ ಕೆಡಬಹುದಾದ ಸಾಧ್ಯತೆಯಿದೆ. ಈ ಯೋಜನೆ ಕೇವಲ ಆಣೆಕಟ್ಟು ನಿರ್ಮಾಣವಲ್ಲ ಬದಲಾಗಿ ಒಂದು ಜಲಾನಯನ ಪ್ರದೇಶದಿಂದ (Basin) ಮತ್ತೊಂದು ಜಲಾನಯನಕ್ಕೆ ನೀರನ್ನು ವರ್ಗಾಯಿಸುವ (Inter-basin water transfer) ಸಂಕೀರ್ಣ ಪ್ರಕ್ರಿಯೆಯಾಗಿದೆ. ಕಳಸಾ ಮತ್ತು ಬಂಡೂರಿ ಎಂಬ ಎರಡು ಹಳ್ಳಗಳಿಗೆ ಅಡ್ಡಲಾಗಿ ತಡೆಗೋಡೆ ನಿರ್ಮಿಸಿ 3.9 ಟಿ.ಎಂ.ಸಿ. ನೀರನ್ನು ಪೂರ್ವಕ್ಕೆ ಹರಿಯುವ ಮಲಪ್ರಭಾ ನದಿಗೆ ತಿರುಗಿಸಲಾಗುತ್ತದೆ.

ಸಾಮಾಜಿಕ ಮತ್ತು ಆರ್ಥಿಕ ಅನಿವಾರ್ಯತೆ : ಹುಬ್ಬಳ್ಳಿ–ಧಾರವಾಡದಂತಹ ವೇಗವಾಗಿ ಬೆಳೆಯುತ್ತಿರುವ ನಗರಗಳ ಕುಡಿಯುವ ನೀರು ಹಾಗೂ ಔದ್ಯೋಗಿಕ ಬೆಳವಣಿಗೆಗೆ ಈ ಯೋಜನೆ ಅನಿವಾರ್ಯವಾಗಿದೆ. ಉತ್ತರ ಕರ್ನಾಟಕದ ಸುಮಾರು 50ಲಕ್ಷ ಜನರ **"ಕುಡಿಯುವ ನೀರಿನ ಹಕ್ಕ"**ನ್ನು ಈ ಯೋಜನೆಯಿಂದ ಖಾತ್ರಿಪಡಿಸ ಬಹುದಾಗಿದೆ. ಹೆಚ್ಚು ನೀರು ಲಭ್ಯವಿರುವ ವರ್ಷಗಳಲ್ಲಿ ಅದನ್ನು ಕೃಷಿ ಹಾಗೂ ಕೈಗಾರಿಕೆಗಳಿಗೂ ಬಳಸಬಹುದಾಗಿದೆ. ಈ ಯೋಜನೆಯು ಉತ್ತರ ಕರ್ನಾಟಕದ ರೈತ ಚಳುವಳಿಯ ಶಕ್ತಿಯ ಕೇಂದ್ರವಾಗಿ ಮಾರ್ಪಟ್ಟಿದೆ. ದಶಕಗಳ ರೈತ ಚಳುವಳಿ ಮತ್ತು ಅದಕ್ಕೆ ದೊರಕಿದ ಎಲ್ಲ ರಂಗಗಳ ಬೆಂಬಲದಿಂದಾಗಿ ಇಂದು ಈ ಯೋಜನೆ ಅನುಷ್ಠಾನಗೊಳ್ಳುವ ಹಂತಕ್ಕೆ ತಲುಪಿದೆ.

ಸಂಕ್ಷಿಪ್ತ ವಿಶ್ಲೇಷಣೆ : ಈ ಯೋಜನೆಯು ಪ್ರಸ್ತುತ **"ಕುಡಿಯುವ ನೀರಿನ ಹಕ್ಕು"** ಮತ್ತು **"ಪರಿಸರ ಸಂರಕ್ಷಣೆ"**ಯ ನಡುವಿನ ಸಂಘರ್ಷವಾಗಿ ರೂಪಾಂತರಗೊಂಡಿದೆ. ಈ ಯೋಜನೆಯು ಕೇವಲ ಒಂದು ಎಂಜಿನಿಯರಿಂಗ್ ಯೋಜನೆಯಾಗಿ ಉಳಿಯದೆ, ಉತ್ತರ ಕರ್ನಾಟಕದ **'ಜಲ ಭದ್ರತೆ'**ಯ ಸಂಕೇತವಾಗಿದೆ. ತಾಂತ್ರಿಕವಾಗಿ ಇದು ಸರಳವಾದ **'ಗ್ರಾವಿಟಿ ಕೆನಾಲ್'** (ಗುರುತ್ವಾಕರ್ಷಣೆ ಆಧಾರಿತ ನಾಲೆ) ಕಾರ್ಯಸಾಧು ಯೋಜನೆಯಾಗಿದ್ದರೂ, ಅಂತರರಾಜ್ಯ ರಾಜಕೀಯ ಮತ್ತು ಪಶ್ಚಿಮ ಘಟ್ಟಗಳ ಪರಿಸರ ಸಮತೋಲನ ಕಾಯ್ದುಕೊಳ್ಳುವುದು ದೊಡ್ಡ ಸವಾಲಾಗಿದೆ.

4. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ 'ಪರಿಸರ ಸೂಕ್ಷ್ಮ ವಲಯದ (ESZ) ಕಡಿತ'

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ (BNP) 'ಪರಿಸರ ಸೂಕ್ಷ್ಮ ವಲಯ'ದ (Eco- Sensitive Zone) ವಿಸ್ತೀರ್ಣವನ್ನು ಕಡಿತ ಗೊಳಿಸಿರುವುದು ಪರಿಸರ ಸಂರಕ್ಷಣೆ ಮತ್ತು ನಗರಾಭಿವೃದ್ಧಿಯ ನಡುವಿನ ಸಂಘರ್ಷದ ಒಂದು ಪ್ರಮುಖ ಪ್ರಕರಣವಾಗಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನವು ಬೆಂಗಳೂರು ಮಹಾನಗರದ ಪಕ್ಕದಲ್ಲಿರುವ ಒಂದು ಅತ್ಯಂತ ಸೂಕ್ಷ್ಮ ಜೀವವೈವಿಧ್ಯ ತಾಣವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇದರ 'ಪರಿಸರ ಸೂಕ್ಷ್ಮ ವಲಯ' (ESZ)ದ ವ್ಯಾಪ್ತಿಯನ್ನು ಸುಮಾರು 268.96 ಚದರ ಕಿ.ಮೀ. ನಿಂದ 168.84 ಚದರ ಕಿ.ಮೀ. ಕಡಿತ ಗೊಳಿಸಲಾಗಿದೆ.

ನಗರೀಕರಣದ ಪ್ರಕ್ರಿಯೆಯಲ್ಲಿ ಬೆಂಗಳೂರು ನಗರದ ವೇಗದ ಬೆಳವಣಿಗೆಯಿಂದಾಗಿ ಉದ್ಯಾನವನದ ಸುತ್ತಮುತ್ತಲಿನ ಭೂಮಿಗೆ ಹೆಚ್ಚಿನ ಬೇಡಿಕೆಯಿದೆ. ವಸತಿ ಸಮುಚ್ಚಯಗಳು ಮತ್ತು ವಾಣಿಜ್ಯ ಯೋಜನೆಗಳಿಗೆ ಅವಕಾಶ ನೀಡಲು ಈ ಕಡಿತ ಪೂರಕವಾಗಿದೆ. ಉದ್ಯಾನವನದ ಬಫರ್ ಝೋನ್ ವ್ಯಾಪ್ತಿಯಲ್ಲಿ ಅನೇಕ ಕಲ್ಲು ಕ್ವಾರಿಗಳಿವೆ. 'ಪರಿಸರ ಸೂಕ್ಷ್ಮ ವಲಯ'ದ ವ್ಯಾಪ್ತಿ ಕಡಿಮೆಯಾದಷ್ಟೂ ಈ ಗಣಿಗಾರಿಕೆ ಚಟುವಟಿಕೆಗಳಿಗೆ ಕಾನೂನುಬದ್ಧ ರಕ್ಷಣೆ ಸಿಗುತ್ತದೆ. ರಸ್ತೆಗಳ ಅಗಲೀಕರಣ ಮತ್ತು ಮೂಲಸೌಕರ್ಯ ಯೋಜನೆಗಳ ಅನುಷ್ಠನಕ್ಕೆ ಸುಲಭವಾಗಲಿ ಎಂಬುದು ಸರ್ಕಾರದ ಒಂದು ವಾದವಾಗಿದೆ.

ಪರಿಸರ ವ್ಯವಸ್ಥೆಯ ಮೇಲಾಗುವ ಪರಿಣಾಮಗಳು : ಈ ಕಡಿತವು ಕೇವಲ ಅಂಕಿಅಂಶಗಳ ಬದಲಾವಣೆಯಲ್ಲ ಬದಲಿಗೆ ಇದು ಪರಿಸರದ ಮೇಲೆ ಗಂಭೀರ ಪರಿಣಾಮ ಬೀರಲದೆ. ಬನ್ನೇರುಘಟ್ಟವು ಆನೆಗಳ ಪ್ರಮುಖ ಕಾರಿಡಾರ್ (Elephant Corridor) ಆಗಿದೆ. ಈ ಕಡಿತದ ಲಾಭ ಪಡೆದ ಗಣಿಗಾರಿಕೆ ಮತ್ತು ರಿಯಲ್ ಎಸ್ಟೇಟ್ ಚಟುವಟಿಕೆಗಳು ಉದ್ಯಾನವನದ ತೀರಾ ಹತ್ತಿರಕ್ಕೆ ಬರಲಿವೆ. ಇದರಿಂದ ಆನೆಗಳ ಚಲನ–ವಲಯಕ್ಕೆ ಹಾನಿಯಾಗಲಿದೆ. 'ಪರಿಸರ ಸೂಕ್ಷ್ಮ ವಲಯ' (ESZ)ದ ಕಡಿತದಿಂದ ಆನೆಗಳ ನೈಸರ್ಗಿಕ ಹಾದಿಯಲ್ಲಿ ಕಟ್ಟಡಗಳು ನಿರ್ಮಾಣ ವಾಗುವುದರಿಂದ ಆನೆಗಳು ಜನವಸತಿ ಪ್ರದೇಶಕ್ಕೆ ನುಗ್ಗಿ ಮಾನವ–ಆನೆ ಸಂಘರ್ಷ ಹೆಚ್ಚಾಗುವ ಸಾಧ್ಯತೆಯಿದೆ. ಉದ್ಯಾನವನದ ಸುತ್ತಲಿನ ಬಫರ್ ಝೋನ್ ವನ್ಯ ಜೀವಿಗಳಿಗೆ 'ರಕ್ಷಣಾತ್ಮಕ ಕವಚ'ದಂತೆ ಕಾರ್ಯ ನಿರ್ವಹಿಸುತ್ತದೆ. ಇದು ಇಲ್ಲದಿದ್ದರೆ ಕಾಡು ಪ್ರಾಣಿಗಳ ಆವಾಸಸ್ಥಾನಕ್ಕೆ ನೇರವಾದ ಧಕ್ಕೆ ಉಂಟಾಗುತ್ತದೆ. ಜೊತೆಗೆ ಈ ಪ್ರದೇಶವು ಬೆಂಗಳೂರಿನಂತಹ ಮಹಾನಗರದ ಅಂರ್ತಜಲ ಹೆಚ್ಚಿಸಲು ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಕಾಂಕ್ರೀಟ್ ಕಾಡು ನಿರ್ಮಾಣವಾದರೆ ಮಳೆ ನೀರು ಭೂಮಿಗೆ ಇಳಿಯುವುದು ಕಡಿಮೆಯಾಗುತ್ತದೆ.

ರಸ್ತೆಗಳ ಸಾಮೀಪ್ಯವು ಅರಣ್ಯ ನಾಶದ ಸಾಧ್ಯತೆಯನ್ನು ಶೇ.21ರಷ್ಟು ಹೆಚ್ಚಿಸಲಿದೆ. ಕಾಡಿನ ನಡುವೆ ರಸ್ತೆ ನಿರ್ಮಾಣದಿಂದ ಮಣ್ಣು ಸಡಿಲಗೊಂಡು 2018 ಮತ್ತು 2024ರಲ್ಲಿ ಕೊಡಗಿನಲ್ಲಿ ಸಂಭವಿಸಿದಂತೆ ಬೀಕರ ಭೂಕುಸಿತಗಳು ಸಂಭವಿಸುವ ಸಾಧ್ಯತೆಯಿದೆ. ಸಾವಿರಾರು ಮರಗಳನ್ನು ಕಡಿಯುವುದರಿಂದ ಕೇವಲ ಮರಗಳಷ್ಟೇ ಅಲ್ಲದೇ, ಅವುಗಳ ಮೇಲೆ ಅವಲಂಬಿತ ಸಾವಿರಾರು ಪ್ರಾಣಿ, ಪಕ್ಷಿ, ಕೀಟ ಪ್ರಭೇಧಗಳು ನಾಶವಾಗಲಿವೆ.

ಸಂಕ್ಷಿಪ್ತ ವಿಶ್ಲೇಷಣೆ : ಸುಪ್ರೀಂ ಕೋರ್ಟ್ ನೇಮಿಸಿದ **'ಕೇಂದ್ರ ಸಶಕ್ತ ಸಮಿತಿ'** (Central Empowered Committee) ಸದಸ್ಯರು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನಕ್ಕೆ ಬೇಟಿ ನೀಡಿ ಪರಿಸರ ಸೂಕ್ಷ್ಮ ವಲಯದ ಕಡಿತದ ಕುರಿತು ಸ್ಥಳೀಯರ ಸಮಸ್ಯೆಗಳನ್ನು, ಪರಿಸರ ಕಾರ್ಯಕರ್ತರ ವಾದವನ್ನು ಆಲಿಸಿದೆ. ಬನ್ನೇರುಘಟ್ಟದ ಪರಿಸರ ಸೂಕ್ಷ್ಮ ವಲಯದ ಕಡಿತವು ಪರಿಸರ ಕಾರ್ಯಕರ್ತರು ಮತ್ತು ವಿಜ್ಞಾನಿಗಳ ಕಳವಳಕ್ಕೆ ಕಾರಣವಾಗಿದೆ. ನ್ಯಾಯಾಲಯದ ಹಸ್ತಕ್ಷೇಪ ಮತ್ತು ಸಾರ್ವಜನಿಕರ ಒತ್ತಡವು ಈ ನಿರ್ಧಾರವನ್ನು ಮರುಪರಿಶೀಲಿಸುವಂತೆ ಮಾಡಿದೆ. ಪರಿಸರ ಸಮತೋಲನವು ಹದಗೆಟ್ಟರೆ ಅದು ನೇರವಾಗಿ ಬೆಂಗಳೂರು ನಗರದ ಹವಾಮಾನ ಮತ್ತು ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಬೆಂಗಳೂರಿನ 'ಉದ್ಯಾನ ನಗರಿ' ಹೆಸರು ಉಳಿಯಬೇಕಾದರೆ ಬನ್ನೇರುಘಟ್ಟದಂತಹ ಶ್ವಾಸಕೋಶಗಳು ಉಳಿಯುವುದು ಅನಿವಾರ್ಯ.

5. ರಾಷ್ಟ್ರೀಯ ಹೆದ್ದಾರಿ–75ರ ವಿಸ್ತರಣೆ

ರಾಷ್ಟ್ರೀಯ ಹೆದ್ದಾರಿ–75 ಮಂಗಳೂರು ಮತ್ತು ಬೆಂಗಳೂರು

ISSN : 2249-2429 ಸಂಶೋಧನೆ RNI REG.NO.KARKAN/2011/38712

ನಗರಗಳನ್ನು ಸಂಪರ್ಕಿಸುವ ಕರ್ನಾಟಕದ ಅತ್ಯಂತ ಪ್ರಮುಖ ಆರ್ಥಿಕ ನಾಡಿಮಿಡಿತವಾಗಿದೆ. ಮಂಗಳೂರಿನ ಬಂದರಿನಿಂದ ಸರಕುಗಳ ಸಾಗಾಣಿಗೆ ಈ ರಸ್ತೆ ಅತ್ಯಗತ್ಯ. ಚತುಷ್ಪಥ (4-lane) ರಸ್ತೆಯು ಪ್ರಯಾಣದ ಸಮಯವನ್ನು ಸುಮಾರು 2–3 ಗಂಟೆಗಳಷ್ಟು ಕಡಿಮೆ ಮಾಡುತ್ತದೆ ಆ ಮೂಲಕ ಇಂಧನ ಉಳಿತಾಯಕ್ಕೆ ಸಹಕಾರಿಯಾಗಲಿದೆ. ಹಾಸನ–ಅಡ್ಡಹೊಳೆ ಮಧ್ಯೆ ಚತುಷ್ಪಥ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಕೆಲವು ಕಡೆ ವಿಳಂಬವಾಗಿದೆ. ಅಡ್ಡಹೊಳೆ–ಬಿ.ಸಿ. ರೋಡ್ ಮಧ್ಯೆ 48 ಕಿ.ಮೀ. ವಿಸ್ತರಣೆಯು ಅಂತಿಮ ಹಂತದಲ್ಲಿದೆ. ಶಿರಾಡಿ ಘಾಟ್ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ 6 ಸುರಂಗಗಳ (Tunnel) ಬೃಹತ್ ಯೋಜನೆಯು ಇನ್ನೂ ಡಿ.ಪಿ.ಆರ್. ಮತ್ತು ಅನುಮೋದನೆಯ ಹಂತದಲ್ಲಿದೆ. ಈ ರಸ್ತೆಯ ಚತುಷ್ಪಥ (4-lane) ಮತ್ತು ಷಟ್ಪಥ (6-lane) ವಿಸ್ತರಣೆಯು ಅಭಿವೃದ್ಧಿಯ ದೃಷ್ಟಿಯಿಂದ ಎಷ್ಟು ಮುಖ್ಯವೋ ಪರಿಸರ ಸಂರಕ್ಷಣೆ ದೃಷ್ಟಿಯಿಂದ ಅಷ್ಟೇ ಸವಾಲಿನ ಯೋಜನೆಯಾಗಿದೆ.

ಪರಿಸರ ವ್ಯವಸ್ಥೆಯ ಮೇಲಾಗುವ ಪರಿಣಾಮಗಳು : ಈ ಯೋಜನೆಯು ಪ್ರಮುಖವಾಗಿ ಶಿರಾಡಿ ಘಾಟ್ ಪ್ರದೇಶ ಮತ್ತು ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರ ವ್ಯವಸ್ಥೆಯ ಮೇಲೆ ದೊಡ್ಡ ಪ್ರಭಾವ ಬೀರುತ್ತಿದೆ. ರಾಷ್ಟ್ರೀಯ ಹೆದ್ದಾರಿ–75 ಪಶ್ಚಿಮ ಘಟ್ಟಗಳ ಮೂಲಕ ಹಾದು ಹೋಗಲಿದೆ, ರಸ್ತೆ ವಿಸ್ತರಣೆಯಿಂದಾಗಿ ಕಾಡುಗಳು ತುಂಡಾಗಲಿವೆ. ಇದು ವನ್ಯ ಜೀವಿಗಳ ಮುಕ್ತ ಸಂಚಾರಕ್ಕೆ ಅಡ್ಡಿಯಾಗಲಿದೆ. ಇನ್ನೊಂದು ಅರ್ಥದಲ್ಲಿ ಪಶ್ಚಿಮ ಘಟ್ಟಗಳು ಛಿದ್ರೀಕರಣಕ್ಕೆ ಒಳಗಾಗಲಿವೆ. ಸಕಲೇಶಪುರ ಮತ್ತು ಆಲೂರು ಭಾಗಗಳಲ್ಲಿ ಆನೆಗಳ ಸಂಚಾರ ಮಾರ್ಗಗಳು ಈ ಹೆದ್ದಾರಿಗೆ ಅಡ್ಡಲಾಗಲಿವೆ. ವಿಸ್ತರಣೆಯು ಮಾನವ–ವನ್ಯಜೀವಿ ಸಂಘರ್ಷವನ್ನು ಮತ್ತಷ್ಟು ಹೆಚ್ಚಿಸುವ ಆತಂಕವಿದೆ. ಶಿರಾಡಿ ಘಾಟ್ ನಲ್ಲಿ ರಸ್ತೆ ಅಗಲೀಕರಣಕ್ಕಾಗಿ ಗುಡ್ಡಗಳನ್ನು ಕತ್ತರಿಸುವುದರಿಂದ ಭೂಕುಸಿತದ ಅಪಾಯ ಹೆಚ್ಚಾಗಲಿದೆ. ಈಗಾಗಲೇ ಈ ಪ್ರದೇಶದಲ್ಲಿ ಮಳೆಗಾಲದಲ್ಲಿ ಈ ರಸ್ತೆ ಪದೇ ಪದೇ ಬಂದ್ ಆಗುತ್ತಿದೆ. ಗುಡ್ಡ ಕುಸಿತ ಮತ್ತು ಮಣ್ಣಿನ ಸವೆತ ಈ ಭಾಗದಲ್ಲಿ ಹೆಚ್ಚಲಿದೆ.

ಸುಸ್ಥಿರ ಪರಿಹಾರಗಳು ಹಾಗೂ ಯೋಜನೆಯ ವಿಶ್ಲೇಷಣೆ : ವನ್ಯಜೀವಿಗಳು ರಸ್ತೆ ದಾಟಲು ನಿರ್ದಿಷ್ಟ ಜಾಗಗಳಲ್ಲಿ ಮೇಲ್ಸೇತುವೆ (Eco-Ducts) ಅಥವಾ ಕೆಳಮಾರ್ಗ (ಅಂಡರ್‌ಪಾಸ್)ಗಳನ್ನು ವೈಜ್ಞಾನಿಕವಾಗಿ ನಿರ್ಮಿಸಬೇಕು. ಗುಡ್ಡಗಳನ್ನು ಕತ್ತರಿಸಿದಾಗ ಆ ಜಾಗೆಯಲ್ಲಿ ಮಣ್ಣು ಕುಸಿಯದಂತೆ ತಡೆಯಲು ಆಧುನಿಕ ಜೈವಿಕ ತಂತ್ರಜ್ಞಾನದ (Bio Engineering) ಮೊರೆ ಹೋಗಬೇಕು. ರಸ್ತೆಯ ಮೇಲಿನ ಒತ್ತಡ ಕಡಿಮೆ ಮಾಡಲು ರೈಲ್ವೆ ಸರಕು ಸಾಗಣೆಯನ್ನು ಬಲಪಡಿಸಬೇಕು. ರಾಷ್ಟ್ರೀಯ ಹೆದ್ದಾರಿ–75ರ ವಿಸ್ತರಣೆಯು ಕರ್ನಾಟಕದ ಆರ್ಥಿಕತೆಗೆ ಚೈತನ್ಯ ನೀಡುತ್ತದೆ ಆದರೂ ಇದು ಪಶ್ಚಿಮ ಘಟ್ಟಗಳ 'ಜೈವಿಕ ವೈವಿಧ್ಯತೆಯ ಹಾಟ್‌ಸ್ಪಾಟ್'ಅನ್ನು ಬಲಿತಗೆದುಕೊಳ್ಳಬಾರದು. ಆಧುನಿಕ ತಂತ್ರಜ್ಞಾನದ ಎಂಜಿನಿಯರಿಂಗ್ ಕೌಶಲ್ಯ ಮತು ಪರಿಸರ ಕಾಳಜಿವುಳ್ಳ ಯೋಜನೆ ಇದಾಗಬೇಕು.

6. ಬೆಡ್ತಿ–ವರದಾ ಮತ್ತು ಅಘನಾಶಿನಿ–ವೇದಾವತಿ ನದಿ ಜೋಡನೆ ಯೋಜನೆ

ಬೆಡ್ತಿ–ವರದಾ ಮತ್ತು ಅಘನಾಶಿನಿ–ವೇದಾವತಿ ನದಿ ಜೋಡನೆ ಯೋಜನೆಯು ಕರ್ನಾಟಕದ ಜಲಸಂಪನ್ಮೂಲ ನಿರ್ವಹಣೆಯಲ್ಲಿ ಅತ್ಯಂತ ವಿವಾದಾತ್ಮಕ ಹಾಗೂ ಜಟಿಲ ತಾಂತ್ರಿಕತೆ ಬೇಡುವ ಯೋಜನೆಯಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ 'ಸಮುದ್ರಕ್ಕೆ ವ್ಯರ್ಥವಾಗಿ ಹರಿಯುವ' ಪಶ್ಚಿಮಕ್ಕೆ ಹರಿಯುವ ನದಿಗಳ ನೀರನ್ನು ತಿರುಗಿಸಿ, ಬಯಲು ಸೀಮೆಯ ಬರಪೀಡಿತ ಜಿಲ್ಲೆಗಳಾದ ಗದಗ, ಹಾವೇರಿ ಹಾಗೂ ಚಿತ್ರದುರ್ಗ ಜಿಲ್ಲೆಗಳಿಗೆ ನೀರು ಒದಗಿಸುವುದು. ಉತ್ತರ ಕನ್ನಡದ ಬೆಡ್ತಿ (ಗಂಗಾವಳಿ) ನದಿಯ ಉಪನದಿಗಳಿಂದ ಸುಮಾರು 242 ಮಿಲಿಯನ್ ಕ್ಯೂಬಿಕ್ ಮೀಟರ್ (MCM) ನೀರನ್ನು ಕೃಷ್ಣಾ ನದಿಯ ಉಪನದಿಯಾದ ವರದಾ ನದಿಗೆ ತಿರುಗಿಸುವುದು ಈ ಯೋಜನೆಯ ಮೊದಲ ಭಾಗವಾಗಿದೆ. ಇದಕ್ಕಾಗಿ ಆಣೆಕಟ್ಟು ಮತ್ತು ಸುಮಾರು 15 ಕಿ.ಮೀ. ಉದ್ದದ ಸುರಂಗಗಳ ನಿರ್ಮಾಣದ ಪ್ರಸ್ತಾವಣೆ ಇದೆ. ಅಘನಾಶಿನಿ ನದಿಯ ನೀರನ್ನು ಚಿತ್ರದುರ್ಗ ಜಿಲ್ಲೆಯ ವೇದಾವತಿ ನದಿಯ ವಾಣಿ ವಿಲಾಸ ಜಲಾಶಯದ ಕಡೆಗೆ ಪಂಪ್ ಮಾಡುವ ಬೃಹತ್ ಯೋಜನೆ ಎರಡನೇ ಭಾಗವಾಗಿದೆ. ಇದು ಎತ್ತಿನಹೊಳೆ ಯೋಜನೆಯನ್ನೇ ಹೋಲುವ ಯೋಜನೆಯಾಗಿದೆ.

ಉತ್ತರ ಕರ್ನಾಟಕದ ಬರಪೀಡಿತ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದ್ದು, ಕೃಷಿಗೆ ನೀರಿಲ್ಲದೆ ಜನರು ವಲಸೆ ಹೋಗುತ್ತಿದ್ದಾರೆ. ಈ ಯೋಜನೆಗಳು ಸಫಲವಾದರೆ ಲಕ್ಷಾಂತರ ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ದೊರಕಲಿದೆ. ಕೃಷಿ ಮತ್ತು ಕುಡಿಯುವ ನೀರಿನ ಖಾತ್ರಿಗೆ ಇದು ಅವಶ್ಯಕವಿದೆ. ಬೆಡ್ತಿ–ವರದಾ ಯೋಜನೆಗೆ ಅಂದಾಜು ರೂ. 10,000 ಕೋಟಿ ವೆಚ್ಚವಾಗಲಿದೆ.

ಪರಿಸರ ವ್ಯವಸ್ಥೆಯ ಮೇಲಾಗುವ ಪರಿಣಾಮಗಳು : ಈ ನದಿಗಳು ಹರಿಯುವ ಉತ್ತರ ಕನ್ನಡದ ಅರಣ್ಯಗಳು ಪಶ್ಚಿಮ ಘಟ್ಟಗಳ ಭಾಗವಾಗಿದ್ದು, ಇವುಗಳಲ್ಲಿ ಸುಮಾರು 1,741 ಜಾತಿಯ ಹೂ ಬಿಡುವ ಸಸ್ಯಗಳು ಮತ್ತು 420ಕ್ಕೂ ಹೆಚ್ಚು ಜಾತಿಯ ಪ್ರಾಣಿ–ಪಕ್ಷಿಗಳಿವೆ. ಯೋಜನೆಗಾಗಿ ಸುಮಾರು 500 ರಿಂದ 1,000 ಎಕರೆ ದಟ್ಟ ಅರಣ್ಯ ನಾಶವಾಗುವ ಸಾಧ್ಯತೆಯಿದೆ. ಈ ಭಾಗದ ಜೀವವೈವಿಧ್ಯತೆಗೆ ದಕ್ಕೆಯಾಗಲಿದೆ. ಪಶ್ಚಿಮಕ್ಕೆ ಹರಿಯುವ ನದಿಗಳು ವೇಗವಾಗಿ ಹರಿಯುತ್ತವೆ ಮತ್ತು ಇವುಗಳು ಕರಾವಳಿಯ ಜೀವವೈವಿಧ್ಯಕ್ಕೆ ಪೋಷಕಾಂಶಗಳನ್ನು ತರುತ್ತವೆ. ನೀರನ್ನು ತಿರುಗಿಸಿದರೆ ಕರಾವಳಿಯ ಮೀನುಗಾರಿಕೆ ಮತ್ತು ಸಿಹಿನೀರಿನ ಲಭ್ಯತೆಯ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ನದಿಯ ನೈಸರ್ಗಿಕ ಹರಿವಿಗೆ ಅಡ್ಡಿಯಾದಾಗ ಅದು ಒಂದಿಲ್ಲಾ ಒಂದು ಅಡ್ಡ ಪರಿಣಾಮ ಬೀರಲೇಯಿದೆ.

'ನೀರು ಸಮುದ್ರಕ್ಕೆ ಹರಿದು ವ್ಯರ್ಥವಾಗುತ್ತಿದೆ' ಎಂಬ ವಾದವೇ ಪರಿಸರ ವಿಜ್ಞಾನಿಗಳ ಪ್ರಕಾರ ತಪ್ಪು. ಸಮುದ್ರಕ್ಕೆ ಸೇರುವ ನೀರು ಸಮುದ್ರದ ಲವಣಾಂಶಗಳನ್ನು ಸಮತೋಲನದಲ್ಲಿಡಲಿದೆ. ಈ ಪೋಷಕಾಂಶಗಳು ಸಮುದ್ರದ ಜೀವಿಗಳ ಉಳಿವಿಗೆ ಅತ್ಯಗತ್ಯ. ಪಶ್ಚಿಮ ಘಟ್ಟಗಳ ಸೂಕ್ಷ್ಮ ಪ್ರದೇಶದಲ್ಲಿ ಸುರಂಗಗಳನ್ನು ಕೊರೆಯುವುದು ಮತ್ತು ಬೃಹತ್ ಸ್ಫೋಟಗಳನ್ನು ನಡೆಸುವುದು ಭೂಕುಸಿತಕ್ಕೆ ದಾರಿ ಮಾಡಿಕೊಡಬಹುದು.

ಅಭಿವೃದ್ಧಿ ಮತ್ತು ಆರ್ಥಿಕತೆಯ ಆಯಾಮ

ಉತ್ತರ ಕರ್ನಾಟಕದ ಬರಪೀಡಿತ ಜಿಲ್ಲೆಗಳಲ್ಲಿ ಕುಡಿಯುವ ನೀರು ಮತ್ತು ಕೃಷಿಗೆ ನೀರಿನ ಬೇಡಿಕೆ ಮತ್ತು ಲಭ್ಯತೆಯಲ್ಲಿ ದೊಡ್ಡ ಅಂತರವಿದೆ. ಇದರಿಂದಾಗಿಯೇ ಈ ಭಾಗದಲ್ಲಿ ವಲಸೆ ಪ್ರಮಾಣ ಹೆಚ್ಚಿದೆ. ಈ ಯೋಜನೆಗಳು ಅನುಷ್ಠಾನ ಗೊಂಡಲ್ಲಿ ಲಕ್ಷಾಂತರ ಹೆಕ್ಟೇರ್ ಭೂಮಿಗೆ ನೀರು ಲಭ್ಯವಾಗಿ, ಉದ್ಯೋಗ ಸೃಷ್ಟಿಯಾಗಲಿವೆ. ಸರ್ಕಾರ ಬಯಲು ಸೀಮೆಯ ಜನರ ಕುಡಿಯುವ ನೀರಿನ ಹಕ್ಕು ಮತ್ತು ಸಮಾನ ಜಲ ಹಂಚಿಕೆಯ ನೀತಿಯ ಭಾಗವಾಗಿ ಈ ಯೋಜನೆ ನೋಡುತ್ತಿದೆ.

ಸ್ಥಳೀಯರ ವಿರೋಧ : ಉತ್ತರ ಕನ್ನಡ ಜಿಲ್ಲೆಯ ಜನರು ಮತ್ತು ಪರಿಸರವಾದಿಗಳು 'ನಮ್ಮ ಪರಿಸರ ನಾಶಮಾಡಿ ಬೇರೆಡೆಗೆ ನೀರು ಒಯ್ಯುವುದು ಬೇಡ' ಎಂದು ಈ ಯೋಜನೆಗಳಿಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈಗಾಗಲೇ ಸಾಕಷ್ಟು ಯೋಜನೆಗಳ ಅನುಷ್ಠಾನದಿಂದಾಗಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಸಹಿಷ್ಣುತೆ ಅಪಾಯದಲ್ಲಿದೆ ಎಂಬುದು ಪರಿಸರವಾದಿಗಳ ಅಭಿಪ್ರಾಯ.

ಶಿಫಾರಸ್ಸುಗಳು ಮತ್ತು ಉಪಸಂಹಾರ : ಮೇಲಿನ ಆರು ಬೃಹತ್ ಯೋಜನೆಗಳನ್ನು ಪರೀಶಿಲಿಸಲಾಗಿ ಈ ಕೆಳಗಿನ ಶಿಫಾರಸ್ಸುಗಳನ್ನು ಈ ಲೇಖನ ನೀಡ ಬಯಸುತ್ತದೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

- ಬೃಹತ್ ಜಲವಿದ್ಯುತ್ ಯೋಜನೆಗಳ ಬದಲು ಸೌರಶಕ್ತಿ ಮತ್ತು ಬ್ಯಾಟರಿ ಶೇಖರಣೆಯಂತಹ ವಿಕೇಂದ್ರೀಕೃತ ಇಂಧನ ಯೋಜನೆಗಳಿಗೆ ಸರ್ಕಾರ ಆದ್ಯತೆ ನೀಡಬೇಕು.
- ಯಾವುದೇ ಯೋಜನೆಯ ಮೊದಲು ಎಲ್ಲ ಸಹಭಾಗಿಗಳನ್ನು ಒಳಗೊಂಡ ಸಮಗ್ರ ಪರಿಸರ ವ್ಯವಸ್ಥೆಯ ಅಧ್ಯಯನ ನಡೆಯಬೇಕು ಹಾಗೂ ಇದು ಯಾವುದೇ ಪೂರ್ವಗ್ರಹಗಳಿಂದ ಕುಡಿರಬಾರದು.
- ರಾಜ್ಯದ 'ಹಸಿರು ಸೂಚ್ಯಂಕ' (ಗ್ರೀನ್ ಇಂಡೆಕ್ಸ್) ಪೋರ್ಟಲ್ ಮೂಲಕ ಪ್ರತಿಯೊಂದು ಯೋಜನೆಯ ಪರಿಸರ ಹಾನಿಯನ್ನು ಪಾರದರ್ಶಕವಾಗಿ ಸಾರ್ವಜನಿಕರಿಗೆ ತಿಳಿಸಬೇಕು.
- ಯೋಜನೆಗಳ ಯೋಜನಾ ಹಂತದಲ್ಲಿಯೇ ಅದರ 'ಸುಸ್ಥಿರತೆ' (sustainability) ಕುರಿತು ಸಾಕಷ್ಟು ಅಧ್ಯಯನವಾಗಬೇಕು.

ಈ ಮೇಲಿನ ಯೋಜನೆಗಳು ಕೇವಲ ಇಂಜಿನಿಯರಿಂಗ್ ಸವಾಲುಗಳಲ್ಲ, ಇವುಗಳು ಸ್ಥಳೀಯರ ಹಕ್ಕುಗಳು ಮತ್ತು ಲಭ್ಯ ಸಂಪನ್ಮೂಲಗಳ ಸಮಾನ ಹಂಚಿಕೆಯ ನೈಸರ್ಗಿಕ ನ್ಯಾಯದ ಸವಾಲುಗಳಾಗಿವೆ. ಈ ಯೋಜನೆಗಳಿಗೆ ಪರ್ಯಾಯವಾಗಿ ಮಳೆನೀರು ಕೋಯ್ಲು, ಕೆರೆಗಳ ಪುನರುಜ್ಜೀವನ ಮತ್ತು ಸ್ಥಳೀಯ ಜಲಮೂಲಗಳ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡಿದರೆ ಪಶ್ಚಿಮ ಘಟ್ಟಗಳ ಅಸ್ತಿತ್ವಕ್ಕೆ ಧಕ್ಕೆ ಬರದಂತೆ ಬರವನ್ನು ಎದುರಿಸಬಹುದು. ಈ ಯೋಜನೆಗಳು ಕೇವಲ ಪರಿಸರದ ಸಮಸ್ಯೆಗಳಲ್ಲ ಬದಲಿಗೆ 'ಪರಿಸರ ಸಾಲ' ಇದ್ದಂತೆ ನಾವು ಇಂದಿನ ಅಗತ್ಯೆಗಳಿಗೆ ಅತಿಯಾಗಿ ಪರಿಸರ ಸಂಪನ್ಮೂಲಗಳನ್ನು ಬಳಸಿದರೆ ಮುಂದಿನ ಪೀಳಿಗೆ ಹವಾಮಾನ ವೈಪರೀತ್ಯದಂತಹ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂಬ ವಿವೇಕ ನಮ್ಮಲ್ಲಿರಬೇಕು. 'ಸಮಗ್ರ ಪರಿಸರ ಪ್ರಭಾವದ ಮೌಲ್ಯಮಾಪನ' ಆಗುವ ವರೆಗೆ ಇಂತಹ ಯೋಜನೆಗಳಿಗೆ ಮುಂದಾಗುವುದು ಆತುರದ ನಿರ್ಧಾರವಾಗಬಹುದು.

ಪರಾಮರ್ಶನ ಗ್ರಂಥಗಳು

- **ಕರ್ನಾಟಕ ಕೈಗಾರಿಕಾ ನೀತಿ 2025–30, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕರ್ನಾಟಕ ಸರ್ಕಾರ.**
- **ನೀತಿ ಆಯೋಗ, ಎಸ್.ಡಿ.ಜಿ. ಇಂಡಿಯಾ ಇಂಡೆಕ್ಸ ವರದಿ 2023–24.**
- **ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಕರ್ನಾಟಕ ಹವಾಮಾನ ಬದಲಾವಣೆ ಕ್ರಿಯಾ ಯೋಜನೆ.**
- **ಮಹದಾಯಿ ಜಲವಿವಾದ ನ್ಯಾಯಾಧೀಕರಣದ ತೀರ್ಪು ಮತ್ತು ವಿಶ್ಲೇಷಣೆ.**
- **ನಾಗರಾಜ ಅಡ್ವೆ (ಇಂಗ್ಲೀಷ್ ಮೂಲ), ಕೆ.ಪಿ. ಸುರೇಶ (ಕನ್ನಡಕ್ಕೆ) (2024):** ಭಾರತದಲ್ಲಿ ಜಾಗತಿಕ ತಾಪಮಾನ ವಿಜ್ಞಾನ, ಪರಿಣಾಮ ಮತ್ತು ರಾಜಕೀಯ, ಮಂಡ್ಯ ಸಂಕಥನ ಪ್ರಕಾಶನ ಉದಯಗಿರಿ.
- **ಅಪೂರ್ವ ಪಶ್ಚಿಮ ಘಟ್ಟ, ನಾಗೇಶ ಹೆಗಡೆ (2017) :** ಬೆಂಗಳೂರು ಭೂಮಿ ಬುಕ್ಸ್.
- **The Western Ghats Ecology Expert Panel (WGEEP). (2011, August 31) :** Madhav Gadgil Report. The Ministry of Environment and Forests, Government of India.

■■

– 90ನೇ ಪುಟದಿಂದ ಮುಂದುವರೆದುದು

ಹುಟ್ಟಡಗಿಸಿ ಬಿಡುವ ಕಾಲ ಸಮೀಪಿಸುತ್ತಿದೆ. ಅದುವರೆಗೆ ಸಾಗುವುದು ಇವರ ನರ್ತನ–ಇವರಿಗೆ ಬೆಂಬಲವಾಗಿರುವ ಈ ಸರ್ಕಾರದ ನರ್ತನ."[7]

ಕಾರ್ಮಿಕರ ಹೃದಯವನ್ನು 'ಅಸಂತೋಷದ, ಅತೃಪ್ತಿಯ ಜ್ವಾಲಾಮುಖಿ'ಗೆ ಹೋಲಿಸಲಾಗಿದೆ. ಅಂದರೆ, ಮೇಲ್ನೋಟಕ್ಕೆ ಶಾಂತವಾಗಿ ಕಂಡರೂ ಒಳಗೆ ಕ್ರಾಂತಿಯ ಕಿಚ್ಚು ಕುದಿಯುತ್ತಿದೆ ಎಂದರ್ಥ. 'ಸಹನೆ ತೀರಿ ಹೋಗುತ್ತಿದೆ' ಎಂಬ ಮಾತು ಶೋಷಿತ ವರ್ಗದ ಸ್ಫೋಟಕ ಮನಸ್ಥಿತಿಯನ್ನು ಬಿಂಬಿಸುತ್ತದೆ. ಶೋಷಣೆಒಂದು ಹಂತ ಮೀರಿದಾಗ ಅದು ಕ್ರಾಂತಿಯಾಗಿ ಮಾರ್ಪಡುತ್ತದೆ ಎಂಬುದಕ್ಕೆ ಇದು ಮುನ್ಸೂಚನೆ.

ಕಾರ್ಮಿಕರ ಬದುಕನ್ನು ಹಸನು ಮಾಡಬೇಕಾದ ವ್ಯವಸ್ಥೆಯು ಹೇಗೆ ಶೋಷಕರ ಪರವಾಗಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಇದು ಹಸಿವು ಮತ್ತು ಬಡತನದ ಮೇಲೆ ನಡೆಯುವ ಬಂಡವಾಳಶಾಹಿಯ ದರ್ಪವನ್ನು ತೋರುತ್ತದೆ. ಈ ಶೋಷಣೆಗೆ ಸರ್ಕಾರದ ಬೆಂಬಲವೂ ಇದೆ. ಕಾರ್ಮಿಕ ವರ್ಗವು ಕೇವಲ ಮಾಲೀಕರ ವಿರುದ್ಧ ಮಾತ್ರವಲ್ಲದೆ, ಇಡೀ ವ್ಯವಸ್ಥೆಯ ವಿರುದ್ಧ ಹೋರಾಡಬೇಕಾದ ಅನಿವಾರ್ಯತೆಯನ್ನು ಈ ಕಾದಂಬರಿ ಸಾರುತ್ತದೆ. ಕುದಿಯುತ್ತಿರುವ ಲಾವಾರಸ ಹಠಾತ್ತಾಗಿಚಿಮ್ಮಿ ಮಾಲೀಕರ ಹುಟ್ಟಡಗಿಸುವ ಕಾಲ ಹತ್ತಿರವಿದೆ ಎಂದು ಕಾದಂಬರಿಯ ಶೀರ್ಷಿಕೆಯ ಮೂಲಕ ಕಟ್ಟೀಮನಿಯವರು ಎಚ್ಚರಿಕೆಯನ್ನು ನೀಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ' ಕಾದಂಬರಿಯು ಕೇವಲ ಒಂದು ಕಥೆಯಲ್ಲ; ಅದು ಶೋಷಿತ ವರ್ಗದ ಬದುಕಿನ ಬವಣೆ ಮತ್ತು ವ್ಯವಸ್ಥೆಯ ವಿರುದ್ಧದ ಹೋರಾಟದ ಪ್ರತಿಬಿಂಬವಾಗಿದೆ. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸಾಮಾನ್ಯ ಜನರ ನಿರೀಕ್ಷೆಗಳು ಕಮರಿ ಹೋದಾಗ, ಬದುಕು ಒಂದು ಜ್ವಾಲಾಮುಖಿಯ ಮೇಲೆ ನಿಂತಂತೆ ಭಾಸವಾಗುತ್ತದೆ.

ಪರಾಮರ್ಶನ ಗ್ರಂಥಗಳು

- **ಬಸವರಾಜ ಕಟ್ಟಿಮನಿ :** ಜ್ವಾಲಾಮುಖಿಯ ಮೇಲೆ ಬೆಂಗಳೂರು ಸಪ್ನ ಬುಕ್ ಹೌಸ್.
- **ಆಧುನಿಕ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ,** ಸಂಪುಟ 02, ಪ್ರಗತಿಶೀಲ, ಬೆಂಗಳೂರು ಬೆಂಗಳೂರು ವಿಶ್ವವಿದ್ಯಾನಿಲಯ.
- **ಎಚ್.ಎಸ್ ರಾಘವೇಂದ್ರರಾವ್ :** ಪ್ರಗತಿಶೀಲತೆ, ಬೆಂಗಳೂರು ಅಭಿನವ ಪ್ರಕಾಶನ, ವಿಜಯನಗರ.

ಅಡಿ ಟಿಪ್ಪಣಿಗಳು

1. ಜ್ವಾಲಾಮುಖಿಯ ಮೇಲೆ–ಬಸವರಾಜಕಟ್ಟೀಮನಿ–ಪುಟ–142
2. ಅದೇ ಪುಟ–143
3. ಅದೇ ಪುಟ–229
4. ಅದೇ ಪುಟ–161
5. ಅದೇ ಪುಟ–311
6. ಅದೇ ಪುಟ–406
7. ಅದೇ ಪುಟ–83

■■

ISSN : 2249-2429 ಸಂಶೋಧನೆ RNI REG.NO.KARKAN/2011/38712

ಗಜೇಂದ್ರಗಡದಲ್ಲಿನ ವಲಸೆ : ಒಂದು ಸಮಾಜಶಾಸ್ತ್ರೀಯ ಅಧ್ಯಯನ

✍ **ಡಾ. ಪ್ರಶಾಂತ ಹುಲಕುಂದ,** ಸಹಾಯಕ ಪ್ರಾಧ್ಯಾಪಕರು, ಎಸ್.ಬಿ.ಎಸ್.ಎಸ್. ಸರಕಾರಿ ಪ್ರಥಮ ದರ್ಜೆ ಕಾಲೇಜು, ಗಜೇಂದ್ರಗಡ, ಜಿ. ಗದಗ

ಸಾರಾಂಶ

ವಲಸೆಯು ಜನಸಂಖ್ಯಾ ಬದಲಾವಣೆಯ ಪ್ರಮುಖ ಅಂಶವಾಗಿದ್ದು, ವ್ಯಕ್ತಿಗಳ ಹಾಗೂ ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಮಹತ್ತರ ಪರಿಣಾಮ ಬೀರುತ್ತದೆ. ಕರ್ನಾಟಕದ ಗದಗ ಜಿಲ್ಲೆಯ ಗಜೇಂದ್ರಗಡ ಪಟ್ಟಣ ಮತ್ತು ಅದರ ಸುತ್ತಮುತ್ತಲಿನ ಗ್ರಾಮಗಳಿಂದ ಉದ್ಯೋಗ, ಉತ್ತಮ ಆದಾಯ ಹಾಗೂ ಜೀವನೋಪಾಯದ ಉದ್ದೇಶದಿಂದ ಅನೇಕ ಯುವಕರು ಮತ್ತು ಕಾರ್ಮಿಕರು ಕರಾವಳಿ ಕರ್ನಾಟಕದ ಮಂಗಳೂರು ಹಾಗೂ ನೆರೆಯ ಗೋವಾ ರಾಜ್ಯಕ್ಕೆ ವಲಸೆ ಹೋಗುತ್ತಿರುವುದು ಗಮನಾರ್ಹವಾಗಿದೆ. ಮೀನು ಸಂಸ್ಕರಣಾ ಘಟಕಗಳು, ಹೋಟೆಲ್ ಉದ್ಯಮ, ಕಟ್ಟಡ ನಿರ್ಮಾಣ, ಸಾರಿಗೆ, ಗೃಹೋಪಯೋಗಿ ಸೇವೆಗಳು ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಉದ್ಯೋಗ ದೊರೆಯುತ್ತಿರುವುದರಿಂದ ಈ ಪ್ರದೇಶಗಳು ಪ್ರಮುಖ ಆಕರ್ಷಣಾ ಕೇಂದ್ರಗಳಾಗಿವೆ. ಪ್ರಸ್ತುತ ಅಧ್ಯಯನವು ಗಜೇಂದ್ರಗಡದ ಯುವಕರ ವಲಸೆಯ ಪ್ರಮುಖ ಕಾರಣಗಳು ಹಾಗೂ ಅದರ ಸಾಮಾಜಿಕ ಪರಿಣಾಮಗಳನ್ನು ವಿಶ್ಲೇಷಿಸುತ್ತದೆ. ಅಧ್ಯಯನಕ್ಕಾಗಿ ಸರಳ ಯಾದೃಚ್ಛಿಕ ಮಾದರಿ ವಿಧಾನವನ್ನು ಬಳಸಿ 20 ವಲಸೆ ಕುಟುಂಬಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಅಧ್ಯಯನವು ಉದ್ಯೋಗ ಮತ್ತು ಹೆಚ್ಚಿನ ಆದಾಯವು ವಲಸೆಯ ಪ್ರಮುಖ ಕಾರಣಗಳಾಗಿವೆ ಎಂದು ಕಂಡುಹಿಡಿದಿದೆ.

ಪ್ರಮುಖ ಪದಗಳು : ವಲಸೆ, ಗಜೇಂದ್ರಗಡ, ಮಂಗಳೂರು, ಗೋವಾ, ಉದ್ಯೋಗ, ಸಮಾಜಶಾಸ್ತ್ರ, ಗ್ರಾಮೀಣ ವಲಸೆ.

ಪೀಠಿಕೆ

ವಲಸೆಯು ಜನಸಂಖ್ಯೆಯ ಚಲನಶೀಲತೆಯ ಪ್ರಮುಖ ಅಂಶವಾಗಿದ್ದು, ವ್ಯಕ್ತಿಗಳು ಅಥವಾ ಕುಟುಂಬಗಳು ಉದ್ಯೋಗ, ಶಿಕ್ಷಣ, ವ್ಯಾಪಾರ, ವಿವಾಹ ಅಥವಾ ಉತ್ತಮ ಜೀವನಮಟ್ಟದ ಉದ್ದೇಶದಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುವುದನ್ನು ಸೂಚಿಸುತ್ತದೆ. ಆಧುನಿಕ ಸಮಾಜದಲ್ಲಿ ವಲಸೆಯು ಕೇವಲ ಭೌಗೋಳಿಕ ಚಲನೆಯಲ್ಲ; ಅದು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿವರ್ತನೆಯ ಪ್ರಮುಖ ಪ್ರಕ್ರಿಯೆಯಾಗಿದೆ. ವಲಸೆಯು ವ್ಯಕ್ತಿಗಳ ಜೀವನೋಪಾಯವನ್ನು ಸುಧಾರಿಸುವುದರ ಜೊತೆಗೆ ಮೂಲ ಪ್ರದೇಶ ಮತ್ತು ಗಮ್ಯಸ್ಥಾನದ ಅಭಿವೃದ್ಧಿಯ ಮೇಲೂ ಪರಿಣಾಮ ಬೀರುತ್ತದೆ.

ಗದಗ ಜಿಲ್ಲೆಯ ಗಜೇಂದ್ರಗಡವು ಮುಖ್ಯವಾಗಿ ಕೃಷಿ ಮತ್ತು ಕೃಷಿ ಆಧಾರಿತ ಆರ್ಥಿಕತೆಯನ್ನು ಹೊಂದಿರುವ ಪ್ರದೇಶವಾಗಿದೆ. ಅನಿಯಮಿತ ಮಳೆ, ಕೃಷಿಯಲ್ಲಿ ಅನಿಶ್ಚಿತ ಆದಾಯ, ಸ್ಥಳೀಯ ಮಟ್ಟದಲ್ಲಿ ಕೈಗಾರಿಕೆಗಳ ಕೊರತೆ ಹಾಗೂ ಸೀಮಿತ ಉದ್ಯೋಗಾವಕಾಶಗಳಿಂದಾಗಿ ಅನೇಕ ಯುವಕರು ಉದ್ಯೋಗಕ್ಕಾಗಿ ಹೊರ ರಾಜ್ಯ ಮತ್ತು ಇತರ ಜಿಲ್ಲೆಗಳಿಗೆ ವಲಸೆ ಹೋಗುತ್ತಿದ್ದಾರೆ. ವಿಶೇಷವಾಗಿ ಕರಾವಳಿ ಕರ್ನಾಟಕದ ಮಂಗಳೂರು ಮತ್ತು ಪ್ರವಾಸೋದ್ಯಮ ಹಾಗೂ ನಿರ್ಮಾಣ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಿರುವ ಗೋವಾ ಪ್ರಮುಖ ಉದ್ಯೋಗ ಕೇಂದ್ರಗಳಾಗಿವೆ.

ಗಜೇಂದ್ರಗಡದಿಂದ ವಲಸೆ ಹೋಗುವ ಬಹುತೇಕ ಯುವಕರು ಹೋಟೆಲ್ ಉದ್ಯಮ, ಕಟ್ಟಡ ನಿರ್ಮಾಣ, ಮೀನು ಸಂಸ್ಕರಣಾ ಘಟಕಗಳು, ವಾಹನ ಚಾಲನೆ, ವ್ಯಾಪಾರ ಸಂಸ್ಥೆಗಳು ಹಾಗೂ ಖಾಸಗಿ ಸೇವಾ ಕ್ಷೇತ್ರಗಳಲ್ಲಿ ಉದ್ಯೋಗ ಪಡೆಯುತ್ತಿದ್ದಾರೆ. ಕೆಲವರು ಋತುಮಾನಿಕವಾಗಿ ವಲಸೆ ಹೋಗುತ್ತಿದ್ದರೆ, ಇನ್ನು ಕೆಲವರು ಶಾಶ್ವತವಾಗಿ ನೆಲೆಸುತ್ತಿದ್ದಾರೆ. ಈ ವಲಸೆಯಿಂದ ಕುಟುಂಬದ ಆದಾಯ ಹೆಚ್ಚಾದರೂ, ಕುಟುಂಬದಿಂದ ದೂರವಿರುವುದು, ಸಾಮಾಜಿಕ ಸಂಬಂಧಗಳ ಬದಲಾವಣೆ ಹಾಗೂ ಸ್ಥಳೀಯ ಕಾರ್ಮಿಕರ ಕೊರತೆಯಂತಹ ಸಮಸ್ಯೆಗಳೂ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಗಜೇಂದ್ರಗಡದಲ್ಲಿ ನಡೆಯುತ್ತಿರುವ ವಲಸೆಯ ಸ್ವರೂಪ, ಕಾರಣಗಳು ಹಾಗೂ ಸಾಮಾಜಿಕ ಪರಿಣಾಮಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡುವುದು ಅತ್ಯಂತ ಅಗತ್ಯವಾಗಿದೆ.

ಸಾಹಿತ್ಯ ಸಮೀಕ್ಷೆ

ಎವರೆಟ್ ಎಸ್. ಲೀ (1966) ಅವರು ತಮ್ಮ ಕೃತಿಯಲ್ಲಿ ವಲಸೆಯು ಮೂಲ ಪ್ರದೇಶದಲ್ಲಿನ ಪ್ರತಿಕರ್ಷಣಾ ಅಂಶಗಳು ಮತ್ತು ಗಮ್ಯಸ್ಥಾನದ ಆಕರ್ಷಣಾ ಅಂಶಗಳ ಪರಿಣಾಮವಾಗಿದೆ ಎಂದು ವಿವರಿಸಿದ್ದಾರೆ. ಉದ್ಯೋಗ, ಹೆಚ್ಚಿನ ವೇತನ ಮತ್ತು ಉತ್ತಮ ಜೀವನಮಟ್ಟವು ಪ್ರಮುಖ ಆಕರ್ಷಣಾ ಅಂಶಗಳಾಗಿವೆ.

ಯುಎನ್ ಜನಸಂಖ್ಯಾ ವಿಭಾಗ ಪ್ರಕಾರ, ಆರ್ಥಿಕ ಅವಕಾಶಗಳ ಅಸಮಾನ ಹಂಚಿಕೆ ಗ್ರಾಮೀಣ ಪ್ರದೇಶಗಳಿಂದ ನಗರ ಮತ್ತು ಕೈಗಾರಿಕಾ ಪ್ರದೇಶಗಳಿಗೆ ವಲಸೆಯನ್ನು ಹೆಚ್ಚಿಸುತ್ತದೆ. ಯುವಜನರಲ್ಲಿ ಉದ್ಯೋಗ ಸಂಬಂಧಿತ ವಲಸೆಯೇ ಅತ್ಯಂತ ಸಾಮಾನ್ಯವಾಗಿದೆ.

ರಾಷ್ಟ್ರೀಯ ಮಾದರಿ ಸಮೀಕ್ಷೆ ವರದಿಗಳ ಪ್ರಕಾರ, ಗ್ರಾಮೀಣ ಭಾರತದಲ್ಲಿ ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಯುವಕರು ಕೃಷಿಯೇತರ ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಉದ್ಯೋಗ ಮತ್ತು ಆದಾಯ ಹೆಚ್ಚಳವೇ ಪ್ರಮುಖ ಕಾರಣಗಳಾಗಿವೆ.

ಡಾ. ಎಂ. ಎನ್. ಶ್ರೀನಿವಾಸ್ ಅವರು ಗ್ರಾಮೀಣ ಸಮಾಜದಲ್ಲಿನ ಆರ್ಥಿಕ ಬದಲಾವಣೆಗಳು ಮತ್ತು ನಗರೀಕರಣವು ಗ್ರಾಮದಿಂದ ನಗರಕ್ಕೆ ವಲಸೆಯನ್ನು ಉತ್ತೇಜಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ವಲಸೆಯು ಸಾವಾಜಿಕ ಚಲನಶೀಲತೆಯನ್ನು ಹೆಚ್ಚಿಸಿದರೂ ಕುಟುಂಬದ ಸಾಂಪ್ರದಾಯಿಕ ಸಂಬಂಧಗಳಲ್ಲಿ ಬದಲಾವಣೆ ಉಂಟುಮಾಡುತ್ತದೆ.

ಕರ್ನಾಟಕದ ಉತ್ತರ ಭಾಗದಲ್ಲಿ ನಡೆದ ವಿವಿಧ ಸಮಾಜಶಾಸ್ತ್ರೀಯ ಅಧ್ಯಯನಗಳು ಗದಗ, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಭಾಗಗಳಿಂದ ಮಂಗಳೂರು, ಗೋವಾ, ಹುಬ್ಬಳ್ಳಿ ಹಾಗೂ ಬೆಂಗಳೂರಿಗೆ ಉದ್ಯೋಗಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ವಲಸೆ ಹೋಗುತ್ತಿರುವುದನ್ನು ಸೂಚಿಸಿವೆ. ಹೋಟೆಲ್ ಉದ್ಯಮ, ನಿರ್ಮಾಣ ವಲಯ ಮತ್ತು ಸೇವಾ ಕ್ಷೇತ್ರಗಳು ಪ್ರಮುಖ ಉದ್ಯೋಗ ಮೂಲಗಳಾಗಿವೆ.

ಸಂಶೋಧನೆಯ ಉದ್ದೇಶಗಳು

1. ಗಜೇಂದ್ರಗಡದಿಂದ ನಡೆಯುವ ವಲಸೆಯ ಪ್ರಮುಖ ಕಾರಣಗಳನ್ನು ಅಧ್ಯಯನ ಮಾಡುವುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

2. ವಲಸೆಯ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ವಿಶ್ಲೇಷಿಸುವುದು.

ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನವು ವರ್ಣನಾತ್ಮಕ ಸ್ವರೂಪದ್ದಾಗಿದೆ. ಅಧ್ಯಯನಕ್ಕಾಗಿ ಪ್ರಾಥಮಿಕ ಮಾಹಿತಿಯನ್ನು ಸಂದರ್ಶನ ಅನುಸೂಚಿ ಮೂಲಕ ಸಂಗ್ರಹಿಸಲಾಯಿತು. ಪ್ರತಿಸ್ಪಂದಕರನ್ನು ಆಯ್ಕೆ ಮಾಡಲು ಸರಳ ಯಾದೃಚ್ಛಿಕ ಮಾದರಿ ವಿಧಾನವನ್ನು ಅನುಸರಿಸಲಾಯಿತು. ಒಟ್ಟು 20 ವಲಸೆ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು. ಸಂಗ್ರಹಿಸಿದ ಮಾಹಿತಿಯನ್ನು ಕೋಷ್ಟಕೀಕರಣ ಮಾಡಿ ಶೇಕಡಾವಾರು ವಿಧಾನದಿಂದ ವಿಶ್ಲೇಷಿಸಲಾಯಿತು.

ಗಜೇಂದ್ರಗಡದಿಂದ ವಲಸೆ ಹೋಗುವ ಪ್ರಮುಖ ಸ್ಥಳಗಳು

ಗಜೇಂದ್ರಗಡದಿಂದ ವಲಸೆ ಹೋಗುವ ಯುವಕರು ಮತ್ತು ಕಾರ್ಮಿಕರು ಯಾವ ಪ್ರದೇಶಗಳಿಗೆ ಹೆಚ್ಚಾಗಿ ತೆರಳುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರತಿಸ್ಪಂದಕರಿಂದ ಮಾಹಿತಿ ಸಂಗ್ರಹಿಸಲಾಯಿತು. ಅವರು ಉದ್ಯೋಗಕ್ಕಾಗಿ ತೆರಳಿದ ಪ್ರಮುಖ ಸ್ಥಳಗಳನ್ನು ವರ್ಗೀಕರಿಸಿ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ – 1
ಗಜೇಂದ್ರಗಡದಿಂದ ವಲಸೆ ಹೋಗುವ ಪ್ರಮುಖ ಸ್ಥಳಗಳು (N = 20)

ವಲಸೆ ಸ್ಥಳ	ಆವೃತ್ತಿ	ಶೇಕಡಾವಾರು
ಮಂಗಳೂರು	8	40
ಗೋವಾ	6	30
ಹುಬ್ಬಳ್ಳಿ–ಧಾರವಾಡ	3	15
ಬೆಂಗಳೂರು	2	10
ಇತರೆ	1	5
ಒಟ್ಟು	20	100

ದತ್ತಾಂಶ ವಿಶ್ಲೇಷಣೆ ಹಾಗೂ ಅರ್ಥವಿವರಣೆ

ಒಟ್ಟು 20 ಪ್ರತಿಸ್ಪಂದಕರಲ್ಲಿ 40% ಜನರು ಉದ್ಯೋಗಕ್ಕಾಗಿ ಮಂಗಳೂರಿಗೆ ವಲಸೆ ಹೋಗಿದ್ದಾರೆ. 30% ಜನರು ಗೋವಾಕ್ಕೆ, 15% ಜನರು ಹುಬ್ಬಳ್ಳಿ–ಧಾರವಾಡಕ್ಕೆ, 10% ಜನರು ಬೆಂಗಳೂರಿಗೆ ಹಾಗೂ 5% ಜನರು ಇತರೆ ಸ್ಥಳಗಳಿಗೆ ವಲಸೆ ಹೋಗಿದ್ದಾರೆ.

ಗಜೇಂದ್ರಗಡದಿಂದ ಮಂಗಳೂರು ಮತ್ತು ಗೋವಾಕ್ಕೆ ಹೆಚ್ಚಿನ ಪ್ರಮಾಣದಲ್ಲಿ ವಲಸೆ ನಡೆಯುತ್ತಿರುವುದು ಈ ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಈ ಪ್ರದೇಶಗಳಲ್ಲಿ ಹೋಟೆಲ್ ಉದ್ಯಮ, ಮೀನುಗಾರಿಕೆ, ಕಟ್ಟಡ ನಿರ್ಮಾಣ, ಪ್ರವಾಸೋದ್ಯಮ ಹಾಗೂ ಸೇವಾ ವಲಯಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಿರುವುದರಿಂದ ಯುವಕರು ಈ ಸ್ಥಳಗಳನ್ನು ಹೆಚ್ಚು ಆಯ್ಕೆ ಮಾಡುತ್ತಿದ್ದಾರೆ.

ವಲಸೆಯ ಪ್ರಮುಖ ಕಾರಣಗಳು

ಗಜೇಂದ್ರಗಡದಿಂದ ವಲಸೆ ಹೋಗಲು ಕಾರಣವಾಗಿರುವ ಪ್ರಮುಖ ಅಂಶಗಳನ್ನು ತಿಳಿಯಲು ಪ್ರತಿಸ್ಪಂದಕರಿಂದ ಮಾಹಿತಿ ಸಂಗ್ರಹಿಸಲಾಯಿತು. ಅವರ ಉತ್ತರಗಳನ್ನು ಕೆಳಗಿನಂತೆ ವರ್ಗೀಕರಿಸಲಾಗಿದೆ.

ದತ್ತಾಂಶ ವಿಶ್ಲೇಷಣೆ ಹಾಗೂ ಅರ್ಥವಿವರಣೆ

35% ಪ್ರತಿಸ್ಪಂದಕರು ಸ್ಥಳೀಯ ಮಟ್ಟದಲ್ಲಿ ಉದ್ಯೋಗದ ಕೊರತೆಯಿಂದ ವಲಸೆ ಹೋಗಿರುವುದಾಗಿ ತಿಳಿಸಿದ್ದಾರೆ. 30% ಜನರು ಹೆಚ್ಚಿನ ಆದಾಯಕ್ಕಾಗಿ, 15% ಜನರು ಉತ್ತಮ ಜೀವನಮಟ್ಟಕ್ಕಾಗಿ, ಉಳಿದವರು ಕುಟುಂಬದ ಆರ್ಥಿಕ ಸಮಸ್ಯೆ ಹಾಗೂ ಸಂಬಂಧಿಕರ ಪ್ರಭಾವದಿಂದ ವಲಸೆ ಹೋಗಿದ್ದಾರೆ.

ಕೋಷ್ಟಕ – 2 : ವಲಸೆಯ ಪ್ರಮುಖ ಕಾರಣಗಳು (N = 20)

ವಲಸೆಯ ಕಾರಣ	ಆವೃತ್ತಿ	ಶೇಕಡಾವಾರು
ಉದ್ಯೋಗದ ಕೊರತೆ	7	35
ಹೆಚ್ಚಿನ ಆದಾಯ	6	30
ಉತ್ತಮ ಜೀವನಮಟ್ಟ	3	15
ಕುಟುಂಬದ ಆರ್ಥಿಕ ಸಮಸ್ಯೆ	2	10
ಸ್ನೇಹಿತರು/ಸಂಬಂಧಿಕರ ಪ್ರಭಾವ	2	10
ಒಟ್ಟು	20	100

ಗಜೇಂದ್ರಗಡದಲ್ಲಿ ಉದ್ಯೋಗಾವಕಾಶಗಳ ಕೊರತೆ ಮತ್ತು ಕಡಿಮೆ ಆದಾಯವು ವಲಸೆಗೆ ಪ್ರಮುಖ ಕಾರಣಗಳಾಗಿವೆ. ಮಂಗಳೂರು ಮತ್ತು ಗೋವಾ ಪ್ರದೇಶಗಳಲ್ಲಿ ಹೆಚ್ಚಿನ ಸಂಬಳ ಮತ್ತು ನಿರಂತರ ಉದ್ಯೋಗ ದೊರೆಯುವುದರಿಂದ ಯುವಕರು ಅಲ್ಲಿಗೆ ವಲಸೆ ಹೋಗುತ್ತಿದ್ದಾರೆ.

ಸಂಶೋಧನೆಯ ಪ್ರಮುಖ ಕಂಡುಬಂದ ಅಂಶಗಳು

1. ಗಜೇಂದ್ರಗಡದಿಂದ ಉದ್ಯೋಗಕ್ಕಾಗಿ ವಲಸೆ ಹೋಗುವವರಲ್ಲಿ ಹೆಚ್ಚಿನವರು ಮಂಗಳೂರಿಗೆ (40%) ಮತ್ತು ಗೋವಾಕ್ಕೆ (30%) ತೆರಳುತ್ತಿದ್ದಾರೆ.
2. ಉದ್ಯೋಗದ ಕೊರತೆ (35%) ಮತ್ತು ಹೆಚ್ಚಿನ ಆದಾಯ (30%) ವಲಸೆಯ ಪ್ರಮುಖ ಕಾರಣಗಳಾಗಿವೆ.
3. ವಲಸೆ ಹೋಗುವವರು ಮುಖ್ಯವಾಗಿ ಹೋಟೆಲ್ ಉದ್ಯಮ, ಕಟ್ಟಡ ನಿರ್ಮಾಣ, ಮೀನು ಸಂಸ್ಕರಣಾ ಘಟಕಗಳು ಹಾಗೂ ಸೇವಾ ಕ್ಷೇತ್ರಗಳಲ್ಲಿ ಉದ್ಯೋಗ ಹೊಂದಿದ್ದಾರೆ.
4. ವಲಸೆಯಿಂದ ಹೆಚ್ಚಿನ ಕುಟುಂಬಗಳ ಆರ್ಥಿಕ ಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆ ಕಂಡುಬಂದಿದೆ.
5. ವಲಸೆಯು ಕುಟುಂಬದ ಆದಾಯವನ್ನು ಹೆಚ್ಚಿಸಿದರೂ, ಕುಟುಂಬದಿಂದ ದೂರವಿರುವುದು ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಬದಲಾವಣೆ ಕಂಡುಬಂದಿದೆ.

ತೀರ್ಮಾನ

ಗಜೇಂದ್ರಗಡ ಪ್ರದೇಶದಲ್ಲಿ ವಲಸೆಯು ಪ್ರಮುಖವಾಗಿ ಆರ್ಥಿಕ ಕಾರಣಗಳಿಂದ ಪ್ರೇರಿತವಾಗಿದೆ. ಸ್ಥಳೀಯ ಮಟ್ಟದಲ್ಲಿ ಕೈಗಾರಿಕೆಗಳು ಮತ್ತು ಸ್ಥಿರ ಉದ್ಯೋಗಾವಕಾಶಗಳ ಕೊರತೆಯಿಂದ ಯುವಕರು ಮಂಗಳೂರು, ಗೋವಾ ಮತ್ತು ಇತರ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಈ ವಲಸೆಯು ಕುಟುಂಬಗಳ ಆರ್ಥಿಕ ಅಭಿವೃದ್ಧಿಗೆ ನೆರವಾಗುತ್ತಿದ್ದರೂ, ಕುಟುಂಬದ ಸದಸ್ಯರ ಬೇರ್ಪಡುವಿಕೆ, ಗ್ರಾಮೀಣ ಕಾರ್ಮಿಕರ ಕೊರತೆ ಮತ್ತು ಸಾಮಾಜಿಕ ಸಂಬಂಧಗಳಲ್ಲಿನ ಬದಲಾವಣೆಯಂತಹ ಸಮಸ್ಯೆಗಳಿಗೂ ಕಾರಣವಾಗುತ್ತಿದೆ. ಆದ್ದರಿಂದ ಗಜೇಂದ್ರಗಡ ಪ್ರದೇಶದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿ, ಕೌಶಲ್ಯ ತರಬೇತಿ, ಸ್ವಯಂ ಉದ್ಯೋಗ ಯೋಜನೆಗಳು ಹಾಗೂ ಸ್ಥಳೀಯ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆ ನೀಡಿದರೆ ಅನಗತ್ಯ ವಲಸೆಯನ್ನು ಕಡಿಮೆ ಮಾಡಬಹುದು ಮತ್ತು ಸ್ಥಳೀಯ ಅಭಿವೃದ್ಧಿಯನ್ನು ಉತ್ತೇಜಿಸಬಹುದು.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಪರಾಮರ್ಶನ ಗ್ರಂಥಗಳು

- **Government of India (2011) :** Census of India 2011: Migration Tables. Office of the Registrar General & Census Commissioner, India.
- **Lee E. S. (1966) :** A theory of migration. Demography, 3(1), 47–57.
- **National Sample Survey Office (2021) :** Periodic Labour Force Survey (PLFS) Annual Report. Ministry of Statistics and Programme Implementation.
- **Srinivas M. N. (1966) :** Social Change in Modern India. University of California Press.
- **United Nations. (2020) :** International Migration 2020 Highlights. United Nations Department of Economic and Social Affairs (UN DESA).
- **World Bank. (2023) :** World Development Report: Migrants, Refugees, and Societies. World Bank.

■■

– 36ನೇ ಪುಟದಿಂದ ಮುಂದುವರೆದುದು

ಹೋಗುಗಳು ಅವನ ಅರಿವಿನ ಮೂಲಕ ನಡೆಯುತ್ತವೆ. ಅಂದರೆ ಸಮಕಾಲೀನ ಕಾಲಘಟ್ಟದ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರಣವೇ ಸಂಸ್ಕೃತಿ. ಈ ಸಾಂಸ್ಥಿಕ ವಲಯದಲ್ಲಿ ಸಮಾನತೆಗೆ, ಸಾಮಾಜಿಕ ಅರಿವಿಗೆ ಹೆಚ್ಚು ಪ್ರಾಧಾನ್ಯತೆ ದೊರಕಬೇಕು.ಆದ್ದರಿಂದಲೇ ಕನಕದಾಸರು ಸಮಕಾಲೀನ ಸಮಾಜಕ್ಕೆ ಬೇಕಾಗುವ ಸ್ವಾತಂತ್ರ್ಯ, ಸಮಾನತೆ, ಸಮತೆ, ನೈತಿಕತೆ, ಸ್ವಾಭಿಮಾನ ಮುಂತಾದ ನೈತಿಕ ಮೌಲ್ಯಗಳನ್ನು ತಮ್ಮ ರಾಮಧಾನ್ಯ ಚರಿತ್ರೆ ಕೃತಿಯ ಮುಖೇನ ಅಭಿವ್ಯಕ್ತಿಸಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಶ್ರಮಿಸಿದ್ದಾರೆ. ತಿನ್ನುವ ಆಹಾರದಲ್ಲಿ ಯಾವುದು ಶ್ರೇಷ್ಠ ಮತ್ತು ಕನಿಷ್ಠ ಎನ್ನುವುದಕ್ಕಿಂತ ಮಾನವನ ಹಸಿವು ಮತ್ತು ಅವನ ಕಷ್ಟ ಸಂಕಟಗಳಿಗೆ ಒದಗುವುದೇ ಶ್ರೇಷ್ಠವೆಂಬ ಪರಮಸತ್ಯ ಮತ್ತು ಸಮಾನತೆಯ ತತ್ವ ಪ್ರತಿಪಾದನೆ ಅಸಾಧಾರಣವೆಂಬುದನ್ನು ಕನಕದಾಸರು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಹೀಗಾಗಿ 'ರಾಮಧಾನ್ಯಚರಿತ್ರೆ' ಕೃತಿಯು ಸಮಾಜದಲ್ಲಿನ ಸಾಮಾಜಿಕ ಸ್ಥಿತಿಗತಿಗಳನ್ನು ಪ್ರಶ್ನಿಸುವ ಮಹತ್ವದ ಕೃತಿಯಾಗಿದೆ. ಆದ್ದರಿಂದ ಈ ಕೃತಿಯಲ್ಲಿ ಸಾಮಾಜಿಕತತ್ವ, ಮಾನವೀಯತೆ, ಸಮತೆ ಮತ್ತು ಸಮಾನತೆಯ ಮೌಲ್ಯಗಳು ಸ್ಪಷ್ಟವಾಗಿ ಪ್ರಧಾನ ನೆಲೆಯಲ್ಲಿ ಅನಾವರಣಗೊಂಡಿದೆ.

ಪರಾಮರ್ಶನ ಗ್ರಂಥಗಳು

- **ದೇ. ಜವರೇಗೌಡ (1979) :** ರಾಮಧಾನ್ಯಚರಿತ್ರೆ (ಸಂ.) ಮೈಸೂರು ಡಿ.ವಿ.ಕೆ., ಮೂರ್ತಿ ಪ್ರಕಾಶನ.
- **ದೇ. ಜವರೇಗೌಡ (1979) :** ಕನಕಾವಲೋಕನ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- **ಬಿ.ವಿ. ಶಿರೂರ :** ಕನಕದಾಸರು ಮತ್ತು ಆಧುನಿಕ ಚಿಂತನೆಗಳು ಮುಖಾಮುಖಿ, ಕನಕ ಅಧ್ಯಯನ ಪೀಠ, ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯ,
- **ಸರೋಜಿನಿ ಸಿ. ಹಿರೇಮಠ (2016) :** ರಾಮಧಾನ್ಯಚರಿತ್ರೆ ಸಂಘರ್ಷದ ನೆಲೆ, ಕನಕ ಅಧ್ಯಯನ ಪೀಠ, ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯ.
- **ಕಾ. ತ. ಚಿಕ್ಕಣ್ಣ (2016) :** ಕನಕದಾಸರು, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ.

■■

– 52ನೇ ಪುಟದಿಂದ ಮುಂದುವರೆದುದು

ಇತ್ಯಾದಿ) ಲಿಂಗಾಯತ ಧರ್ಮದೊಳಗೆ ವಿಲೀನಗೊಂಡವು. ಈ ಕಾರಣಕ್ಕಾಗಿ ಲಿಂಗಾಯತ ಕವಿಗಳು ಕೆಲವು ಆಂತರೀಕ ಬದಲಾವಣೆಗಳನ್ನು ಮಾಡಿಕೊಂಡು, ಶೈವಮತಗಳ ಓಲೈಕೆಯೊಂದಿಗೆ ಶಿವಧರ್ಮ ಸಾರುತ್ತ ಈ ಧರ್ಮವನ್ನು ಹೆಚ್ಚು–ಹೆಚ್ಚು ಪ್ರಚಾರ ಮಾಡಲು ಕಾರ್ಯತತ್ಪರರಾದರು. ವೈದಿಕ ಮತಕ್ಕೆ ಎದುರಾಳಿಯಾಗಿ ನಿಂತರೂ ಕೂಡಾ ಒಂದು ಕಡೆ ಹೊಂದಾಣಿಕೆ ಅನಿವಾರ್ಯವೆಂದು ಅರಿತು ಹೀಗೆ ಬೇರೆ ಬೇರೆ ಮೂಲಗಳಿಂದ ಧರ್ಮ ದರ್ಶನ ಮಾಡಿಸಿದರು.

ಒಟ್ಟಿನಲ್ಲಿ ಈ ರೀತಿಯ ಸಾಹಿತ್ಯ ರಚನೆಯಾಗಲು ಮೂಲ ಕಾರಣಗಳು ಏನಿರಬಹುದೆಂದು ಪ್ರಶ್ನಿಸಿಕೊಂಡಾಗ ಚಾರಿತ್ರಿಕವಾದ ಹಲವು ದಾಖಲೆಗಳು ನಮಗೆ ಸಿಗುತ್ತವೆ. 12ನೇ ಶತಮಾನದಲ್ಲಿ ಈ ಧರ್ಮವನ್ನು ಎಲ್ಲಾ ಕುಲ–ಕಸುಬಿನ ಜನರು ಒಪ್ಪಿ, ಇದೇ ಧರ್ಮದ ಮಾರ್ಗದಲ್ಲಿ ನಡೆದಿದ್ದರು. ಆದರೆ 15ನೇ ಶತಮಾನದ ಕಾಲಸಂದರ್ಭ ಹಾಗಿರಲಿಲ್ಲ; ಅವ್ಯವಸ್ಥೆಗೊಳಗಾಗಿತ್ತು. ಸಂಸಾರದಲ್ಲಿದ್ದು ಸ್ವಾರ್ಥದಿಂದ ಬದುಕಿದರೆ ಈ ಧರ್ಮ ನೆಲಕಚ್ಚುತ್ತಿತ್ತು ಅದಕ್ಕಾಗಿಯೇ ನೂರೊಂದು ವಿರಕ್ತರ ಗಣ, 701 ವಿರಕ್ತರ ಗಣ, ಕವಿಗಳ ಬಣ ಹುಟ್ಟಿಕೊಂಡಿತು. ಪರಿಸರ ಹೇಗೆ ಬದಲಾಗುತ್ತದೆಯೋ ಹಾಗೆ ಸಮುದಾಯ ಕೂಡಾ ಬದಲಾಗುವ ಅನಿವಾರ್ಯತೆ ಇತ್ತು. ಹಾಗಾಗಿ ಮಹಮ್ಮದೀಯರ ಮತ್ತು ವೈದಿಕರ ಹಾಗೂ ಜೈನ ಧರ್ಮೀಯರ ನಡುವೆ ತಮ್ಮ ಧರ್ಮವನ್ನು ಉಳಿಸಿಕೊಳ್ಳುವ ಜೊತೆಗೆ ಬೆಳೆಸುವ ತುರ್ತು ಪರಿಸ್ಥಿತಿ ಅಂದಿತ್ತು. ಛಿದ್ರಗೊಂಡ, ಮತಾಂತರಗೊಂಡ ಹಳೆ ಸಂಪ್ರದಾಯ–ಮೌಢ್ಯತೆ–ಅನಾಚಾರಕ್ಕೆ ಒಳಗಾದ ಜನರನ್ನು ಒಗ್ಗೂಡಿಸಬೇಕಿತ್ತು. ಎಲ್ಲೋ ಪಲ್ಲಟವಾಗುತ್ತಿದ್ದ ತಳಸಮುದಾಯಗಳನ್ನು ಮತ್ತೆ ಶರಣ ಧರ್ಮದ ಅಡಿಗೆ ತಂದು ನಿಲ್ಲಿಸಬೇಕಿತ್ತು. ಲೌಕೀಕ ಬದುಕಿಗೆ ಜೋತು ಬೀಳದೆ ವಿರಾಗಿಗಳಾಗಿ ಲೋಕಾನುಭವದೊಂದಿಗೆ ಶಾಸ್ತ್ರ ಸಾಹಿತ್ಯವನ್ನು ಬರೆಯುವ ಮುಖಾಂತರ ಬೋಧಿಸುವ ಕಾರ್ಯವು ಮಾಡಬೇಕಾಗಿತ್ತು. ತಮ್ಮ ದೇವರನ್ನು ಶಾಸ್ತ್ರ ಸಂಪ್ರದಾಯಗಳನ್ನು ಶುದ್ಧವಾಗಿರಿಸಿಕೊಳ್ಳಲು ಮಡಿ–ಮೈಲಿಗೆ ಪಾಲಿಸುವ ಅನಿವಾರ್ಯತೆ ಇವರಿಗೆ ಇತ್ತೆ ಹೊರತು ಮನುಷ್ಯರನ್ನು ಕೀಳಾಗಿ ಕಾಣುವುದಲ್ಲ. ಈ ಧರ್ಮದ ತತ್ವ ಸಿದ್ಧಾಂತಗಳನ್ನು ಉಪದೇಶ ಮಾಡಲಿಲ್ಲ; ಅವುಗಳನ್ನು ಇಟ್ಟುಕೊಂಡು ವ್ಯಕ್ತಿ ಶುದ್ಧತೆ ಮಾಡಿದರು. ಆ ಮೂಲಕ ವ್ಯಕ್ತಿ(ಅಂತರಂಗ) ಶುದ್ಧಿ ಜೊತೆಗೆ ಬಹಿರಂಗ(ಸಮಾಜ) ಶುದ್ಧಿ ಈ ಕಾಲಘಟ್ಟದಲ್ಲಾಯಿತು. ಆದ್ದರಿಂದಲೇ ಇದು ಲಿಂಗಾಯತ ಧರ್ಮದ ಸುವರ್ಣಯುಗ–ವಸಂತಯುಗವೆನಿಸಿತು.

ಪರಾಮರ್ಶನ ಗ್ರಂಥಗಳು

- **ಡಾ. ಶಿವಾನಂದ ವಿರಕ್ತಮಠ :** ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ.
- **ಪ್ರೊ.ಸಂ.ಶಿ. ಭೂಸನೂರಮಠ (ಸಂ.) :** ವಿಜಯ ಕಲ್ಯಾಣ.
- **ಡಾ. ಮೃತ್ಯುಂಜಯ ರುಮಾಲೆ :** ಹಂಪೆಯ ಸುತ್ತ ಶೋಧ.
- **ಡಾ. ರಣಧೀರ :** ನೂರೊಂದು ವಿರಕ್ತರು ಮತ್ತು ವೀರಶೈವ ಧರ್ಮ; ಸಾಂಸ್ಕೃತಿಕ ಅಧ್ಯಯನ
- **ಡಾ. ಎನ್. ಜಿ. ಮಹಾದೇವಪ್ಪ :** ಲಿಂಗಲೀಲಾ ವಿಲಾಸ ಚಾರಿತ್ರೆ ಗದ್ಯ ಸಾರಾಂಶ.
- **ಎಸ್. ವಿದ್ಯಾಶಂಕರ್ (ಸಂ.) :** ಚಾಮರಸನ ಪ್ರಭುಲಿಂಗಲೀಲೆ.
- **ಎಚ್. ದೇವೀರಪ್ಪ (ಸಂ.) :** ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ.

■■

ISSN : 2249-2429 ಸಂಶೋಧನೆ RNI REG.NO.KARKAN/2011/38712

ಕಲ್ಯಾಣ ಕರ್ನಾಟಕದ ಪ್ರಸ್ತುತ ಶೈಕ್ಷಣಿಕ ನೀತಿ : ಆಡಳಿತದ ಪಾತ್ರ ಮತ್ತು ಕೊಡುಗೆಗಳ ವಿಶ್ಲೇಷಣಾತ್ಮಕ ಅಧ್ಯಯನ

✍ ಡಾ. ಸಿದ್ಧಲಿಂಗಪ್ಪ ಎಸ್. ದೇಶಮುಖ್, ಕನ್ನಡ ಸಹ ಪ್ರಾಧ್ಯಾಪಕರು, ಸೈಂಟ್ ಕ್ಲಾರೆಟ್ ಕಾಲೇಜು, ಜಾಲಹಳ್ಳಿ, ಬೆಂಗಳೂರು.

ಸಾರಾಂಶ

ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಪರಿಸರವು ಕಳೆದ ಕೆಲವು ವರ್ಷಗಳಲ್ಲಿ ಎರಡು ಮುಖ್ಯ ಅಡ್ಡಧುರಿಗಳ ಮೇಲೆ ರೂಪಾಂತರಗೊಳ್ಳುತ್ತಿದೆ : (1) ರಾಜ್ಯದ ಶೈಕ್ಷಣಿಕ ನೀತಿ ರೂಪಿಕೆ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ 2020 (ರಾ. ಶೈ. ನಿ–2020) ಜಾರಿಗೆ ಸಂಬಂಧಿಸಿದ ಪ್ರಕ್ರಿಯೆಗಳು, (2) ಸಂವಿಧಾನದ 371(ಜ) ವಿಶೇಷ ಉಪಬಂದಿಯಡಿ ಪ್ರಾದೇಶಿಕ ಮೀಸಲಾತಿ ಹಾಗೂ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ (ಕೇಕೆಆರ್ಡಿಬಿ) ಮುಖಾಂತರ ಕ್ಷೇತ್ರನಿಷ್ಠ ಹೂಡಿಕೆ. 2023–24ನೇ ಸಾಲನ್ನು "ಶಿಕ್ಷಣದ ವರ್ಷ"ವೆಂದು ಘೋಷಿಸಿ ಮೂಲಸೌಕರ್ಯ ಅಭಿವೃದ್ಧಿ ಮತ್ತು ಗುಣಮಟ್ಟ ಸುಧಾರಣೆಗೆ ಒತ್ತು ನೀಡಲಾಗಿದೆ; 2025–26ನೇ ಸಾಲಿಗೆ 5,000 ಕೋಟಿ ರೂಪಾಯಿ ಮಿತಿಯ ಯೋಜನಾ ವಿನ್ಯಾಸವನ್ನು ಮಂಜೂರು ಮಾಡಲಾಗಿದೆ.

ಇದರಿಂದಾದರೂ, ಕಲಿಕೆ–ಫಲಿತಾಂಶಗಳ ಮಟ್ಟ, ಗ್ರಾಮೀಣ ಹಾಗೂ ನಗರ ಪ್ರದೇಶಗಳ ಮೂಲಸೌಕರ್ಯ ಅಸಮತೋಲನ, ಶಿಕ್ಷಕರ ಭರ್ತಿ ಮತ್ತು ತರಬೇತಿ, ಭಾಷಾ–ನುಡಿವೇಳೆ ಅನುಷ್ಠಾನದಲ್ಲಿ ಇನ್ನೂ ಸವಾಲುಗಳು ಉಳಿದಿವೆ. ನೀತಿ ಮಟ್ಟದಲ್ಲಿ ಎರಡು–ಭಾಷಾ ಕ್ರಮ, ಪ್ರಾಥಮಿಕ ಹಂತದಲ್ಲಿ ಕನ್ನಡ/ಮಾತೃಭಾಷೆಗೆ ಆದ್ಯತೆ, ಸ್ಥಳೀಯ ಪಠ್ಯವಸ್ತುಗಳ ಬಲಪಡಿಸುವ ತಂತ್ರಗಳು ರಾಜ್ಯದ ಶೈಕ್ಷಣಿಕ ನೀತಿಯ ಭವಿಷ್ಯದ ದಿಕ್ಕನ್ನು ಸೂಚಿಸುತ್ತವೆ.

ಇದೇ ವೇಳೆ, ಡಿಜಿಟಲ್ ತಂತ್ರಜ್ಞಾನ ಬಳಕೆ, ಆನ್ಲೈನ್ ಮತ್ತು ಮಿಶ್ರಿತ ಶಿಕ್ಷಣ ಮಾದರಿಗಳ ಜಾರಿ, ಕೌಶಲ್ಯಾಭಿವೃದ್ಧಿ ಕೇಂದ್ರಗಳ ಸ್ಥಾಪನೆ, ಹಾಗೂ ವಿದ್ಯಾರ್ಥಿಗಳ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಶಿಕ್ಷಣ ಕ್ಷೇತ್ರದ ಒಳಹೊರಗಿನ ಬದಲಾವಣೆಗಳಿಗೆ ಉತ್ತೇಜನ ನೀಡುತ್ತಿವೆ. ಈ ಅಧ್ಯಯನವು ಕಲ್ಯಾಣ ಕರ್ನಾಟಕದ ಶೈಕ್ಷಣಿಕ ನೀತಿ ಮತ್ತು ಆಡಳಿತದ ಪರಸ್ಪರ ಸಂಬಂಧವನ್ನು ವಿಶ್ಲೇಷಿಸಿ, ಪ್ರಾದೇಶಿಕ ಸಮಾನತೆ, ಗುಣಮಟ್ಟ ಹಾಗೂ ಸುಸ್ಥಿರ ಅಭಿವೃದ್ಧಿಯ ದೃಷ್ಟಿಯಿಂದ ಶಿಫಾರಸುಗಳನ್ನು ಒದಗಿಸುವ ಉದ್ದೇಶ ಹೊಂದಿದೆ.

ಮುಖ್ಯ ಶಬ್ದಗಳು : ಕಲ್ಯಾಣ ಕರ್ನಾಟಕ, 371(ಜ), ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ, ರಾಜ್ಯ ಶೈಕ್ಷಣಿಕ ನೀತಿ, ರಾಷ್ಟ್ರೀಯ ಶಿಕ್ಷಣ ನೀತಿ 2020, ಭಾಷಾ ನೀತಿ, ಸಾರ್ವಜನಿಕ ಶಾಲೆಗಳು, ಕಲಿಕೆ–ಫಲಿತಾಂಶಗಳು.

ಪರಿಚಯ

ಕಲ್ಯಾಣ ಕರ್ನಾಟಕವು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಸೇರಿ ಏಳು ಜಿಲ್ಲೆಗಳ ಐತಿಹಾಸಿಕವಾಗಿ ಹಿಂದುಳಿದ ವಲಯವಾಗಿದೆ. 2013ರಿಂದ ಸಂವಿಧಾನದ 371 (ಜ) ವಿಶೇಷ ಉಪಬಂದಿಯಡಿ ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಮೀಸಲಾತಿ, ಪ್ರತ್ಯೇಕ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ರಚನೆ ಮೊದಲಾದ ವ್ಯವಸ್ಥಾತ್ಮಕ ಸಹಾಯ ದೊರಕುತ್ತಿದೆ.

ಈ ವಲಯವು ಹಿಂದಿನ ದಶಕಗಳಲ್ಲಿ ಶಿಕ್ಷಣ, ಆರೋಗ್ಯ, ಮೂಲಸೌಕರ್ಯ, ಕೈಗಾರಿಕಾ ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ರಾಜ್ಯದ ಇತರೆ ಭಾಗಗಳಿಗಿಂತ ಹಿಂದುಳಿದ ಸ್ಥಿತಿಯಲ್ಲಿತ್ತು. ವಿಶೇಷ ಉಪಬಂದಿಯ ಜಾರಿಯಿಂದ ನಂತರ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಯೋಜನೆಗಳು, ಉದಾಹರಣೆಗೆ, ಸರ್ಕಾರಿ ಶಾಲೆಗಳ ನವೀಕರಣ, ಶಿಕ್ಷಕರ ನೇಮಕಾತಿ, ವಿದ್ಯಾರ್ಥಿವೇತನ ಯೋಜನೆಗಳು, ವಸತಿ ನಿಲಯಗಳ ನಿರ್ಮಾಣ, ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣ ಸಂಸ್ಥೆಗಳ ವಿಸ್ತರಣೆ ಮುಂತಾದವು ಕೈಗೆತ್ತಿಕೊಳ್ಳಲಾಗಿದೆ.

ಇದಲ್ಲದೆ, ಪ್ರಾದೇಶಿಕ ಮಟ್ಟದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಬಲವರ್ಧನೆ, ಕನ್ನಡ ಮತ್ತು ಸ್ಥಳೀಯ ಭಾಷೆಯ ಬೋಧನೆಗೆ ಉತ್ತೇಜನ, ಕೌಶಲ್ಯಾಭಿವೃದ್ಧಿ ಕೇಂದ್ರಗಳ ಸ್ಥಾಪನೆ, ಹಾಗೂ ಮಾಹಿತಿ ತಂತ್ರಜ್ಞಾನ ಆಧಾರಿತ ಪಠ್ಯಸಾಮಗ್ರಿಗಳ ಬಳಕೆಗೂ ಪ್ರಾಮುಖ್ಯತೆ ನೀಡಲಾಗಿದೆ. ರಾಜ್ಯ ಸರ್ಕಾರದ ಶೈಕ್ಷಣಿಕ ನೀತಿಗಳು ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಷ್ಠಾನ ಪ್ರಕ್ರಿಯೆ ಈ ವಲಯದಲ್ಲಿ ಶಿಕ್ಷಣದ ಗುಣಮಟ್ಟ, ಸಮಾನತೆ ಮತ್ತು ಪ್ರವೇಶಾರ್ಹತೆಯನ್ನು ಹೆಚ್ಚಿಸಲು ಪೂರಕವಾಗಿದೆ.

ಈ ಹಿನ್ನೆಲೆಯಲ್ಲಿ, ಕಲ್ಯಾಣ ಕರ್ನಾಟಕದ ಪ್ರಸ್ತುತ ಶೈಕ್ಷಣಿಕ ಪರಿಸ್ಥಿತಿ, ನೀತಿಗಳ ಅನುಷ್ಠಾನ, ಹಾಗೂ ಆಡಳಿತದ ಪಾತ್ರವನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಅಗತ್ಯವಾಗಿದೆ.

ನೀತಿ–ಪರಿಸರ : ರಾಷ್ಟ್ರೀಯ ಶಿಕ್ಷಣ ನೀತಿ 2020ರಿಂದ ರಾಜ್ಯ ಶೈಕ್ಷಣಿಕ ನೀತಿ ಕಡೆ

2023ರ ಅಕ್ಟೋಬರ್ ತಿಂಗಳಿಂದ ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿ 2020ಗೆ ಪರ್ಯಾಯವಾಗಿ ರಾಜ್ಯ ಶೈಕ್ಷಣಿಕ ನೀತಿ ರೂಪಿಸಲು ಸುಖದೇವ ಥೋರಟ್ ಅವರ ಅಧ್ಯಕ್ಷತೆಯ ಸಮಿತಿಯನ್ನು ನೇಮಿಸಿತು. 2025ರ ಆಗಸ್ಟ್ ಮೊದಲ ವಾರದಲ್ಲಿ ಈ ಸಮಿತಿಯ ವರದಿ ಸರ್ಕಾರಕ್ಕೆ ಸಲ್ಲಿಕೆ ಹಂತ ತಲುಪಿದೆ. ರಾಜ್ಯ ಶೈಕ್ಷಣಿಕ ನೀತಿ ಪ್ರಾಥಮಿಕವಾಗಿ ಶಾಲಾ ಹಂತದಲ್ಲಿ ದ್ವಿಭಾಷಾ ಕ್ರಮ (ಕನ್ನಡ ಅಥವಾ ಮಾತೃಭಾಷೆ ಜೊತೆಗೆ ಇಂಗ್ಲಿಷ್), ಪ್ರಾಥಮಿಕ ಹಂತದಲ್ಲಿ (ಕನಿಷ್ಠ ಐದನೇ ತರಗತಿ ತನಕ) ಕನ್ನಡ ಅಥವಾ ಮಾತೃಭಾಷೆ ಮಾಧ್ಯಮಕ್ಕೆ ಆದ್ಯತೆ, ಸ್ಥಳೀಯೀಕೃತ ಪಠ್ಯಕ್ರಮ, ಹಾಗೂ ಖಾಸಗಿ ಶಾಲೆಗಳ ಮೇಲಿನ ನಿಯಂತ್ರಣ ಬಲಪಡಿಸುವಂತಹ ಶಿಫಾರಸುಗಳನ್ನು ಮಾಡಿದೆ.

2025ರ ಆಗಸ್ಟ್ 13ರಂದು, ರಾಷ್ಟ್ರೀಯ ಶಿಕ್ಷಣ ನೀತಿ ಮುಂದುವರಿಸುವಂತೆ ಬೇಡಿದ್ದ ಸಾರ್ವಜನಿಕ ಹಿತ ವಾದವನ್ನು ಹೈಕೋರ್ಟ್ ತಳ್ಳಿಹಾಕಿ, ಶಿಕ್ಷಣ ನೀತಿ ರೂಪಿಸುವುದು ವಿಧಾನಮಂಡಲ ಮತ್ತು ಕಾರ್ಯಾಂಗದ ವ್ಯಾಪ್ತಿಯಲ್ಲಿಯೇ ಬರುತ್ತದೆ ಎಂಬ ತಾತ್ವಿಕ ನಿಲುವನ್ನು ದೃಢಪಡಿಸಿದೆ.

ಪರಿಣಾಮ : ಭಾಷಾ ಬೋಧನೆಯಲ್ಲಿ ದ್ವಿಭಾಷಾ ತರಬೇತಿ, ಸ್ಥಳೀಯ ವಿಷಯ–ವಸ್ತುಗಳ ಆಧಾರದ ಮೇಲೆ ಕಲಿಕೆಯ ಗುಣಮಟ್ಟ ಏರಿಕೆ, ಸರ್ಕಾರಿ ಶಾಲಾ ವ್ಯವಸ್ಥೆಯನ್ನು ಕೇಂದ್ರ ಬಿಂದುವಾಗಿಟ್ಟ ಹಣಕಾಸು ಮತ್ತು ಸಂಘಟನಾ ಬಲವರ್ಧನೆ, ಹಾಗೂ ಗ್ರಾಮೀಣ–ನಗರ ಶೈಕ್ಷಣಿಕ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಅಸಮತೋಲನ ಕಡಿತಗೊಳಿಸುವ ದಿಕ್ಕಿನಲ್ಲಿ ಕ್ರಮಗಳು ಜಾರಿಗೆ ಬರಲು ಸಾಧ್ಯತೆ. ಇದಲ್ಲದೆ, ಶಿಕ್ಷಕರಿಗೆ ಭಾಷಾ–ತಂತ್ರಜ್ಞಾನ ಸಮನ್ವಯ ತರಬೇತಿ, ಸ್ಥಳೀಯ ಇತಿಹಾಸ–ಸಂಸ್ಕೃತಿ ಆಧಾರಿತ ಪಠ್ಯವಸ್ತುಗಳ ಅಭಿವೃದ್ಧಿ, ಹಾಗೂ ಪೋಷಕರ ಪಾಲ್ಗೊಳ್ಳುವಿಕೆ ಹೆಚ್ಚಿಸುವ ತಂತ್ರಗಳು ರಾಜ್ಯ ಶೈಕ್ಷಣಿಕ ನೀತಿಯ ಪ್ರಮುಖ ಅಂಶಗಳಾಗಿ ಹೊರಹೊಮ್ಮುತ್ತಿವೆ.

371(ಜ) ವಿಶೇಷ ಉಪಬಂದಿ: ಶಿಕ್ಷಣಕ್ಕೆ ನೀಡಿದ ಚಟುವಟಿಕೆಗಳು

ಸಂವಿಧಾನದ 371(ಜ) ವಿಶೇಷ ಉಪಬಂದಿಯಡಿ ಕಲ್ಯಾಣ ಕರ್ನಾಟಕ ವಲಯಕ್ಕೆ ಕೆಳಗಿನ ರೀತಿಯ ಶಿಕ್ಷಣ ಸಂಬಂಧಿತ ಸವಲತ್ತುಗಳು ದೊರಕುತ್ತಿವೆ:

- ಪ್ರಾದೇಶಿಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಳೀಯ ವಿದ್ಯಾರ್ಥಿಗಳಿಗೆ ಮೀಸಲಾತಿ ಅವಕಾಶ.
- ಸರ್ಕಾರಿ ಉದ್ಯೋಗಗಳಲ್ಲಿ ಪ್ರಾದೇಶಿಕ ಆಯ್ಕೆ ಮತ್ತು ಬಡ್ತಿಯಲ್ಲಿ ಪ್ರಾಥಮ್ಯ.
- ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಮುಖಾಂತರ ಸಮಾನ ಹಂಚಿಕೆ ಹಾಗೂ ಗುರಿಪ್ರದ ಹೂಡಿಕೆ.

ಈ ಕ್ರಮಗಳು ವೃತ್ತಿಪರ ಕಾಲೇಜುಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಅವಕಾಶಗಳನ್ನು ಸ್ಥಳೀಯ ವಿದ್ಯಾರ್ಥಿಗಳಿಗೆ ಹೆಚ್ಚಿಸಿವೆ. ಅಲ್ಲದೆ, ಸರ್ಕಾರಿ ಮತ್ತು ಅರೆ–ಸರ್ಕಾರಿ ಉದ್ಯೋಗಗಳಲ್ಲಿ ಸ್ಥಳೀಯ ಯುವಕರ ಪಾಲ್ಗೊಳ್ಳುವಿಕೆ ಸ್ಪಷ್ಟವಾಗಿ ವೃದ್ಧಿಯಾಗಿದೆ.

ಶಿಕ್ಷಣ ಕ್ಷೇತ್ರದಲ್ಲಿ 371(ಜ) ಅಡಿಯಲ್ಲಿ ಕೈಗೆತ್ತಿಕೊಳ್ಳಲಾದ ಪ್ರಮುಖ ಚಟುವಟಿಕೆಗಳಲ್ಲಿ : ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿ, ಪ್ರಾದೇಶಿಕ ಮಟ್ಟದಲ್ಲಿ ವಿಶ್ವವಿದ್ಯಾಲಯಗಳ ಸ್ಥಾಪನೆ, ವಿದ್ಯಾರ್ಥಿವೇತನ ಮತ್ತು ಉಚಿತ ವಸತಿ ನಿಲಯಗಳ ವಿಸ್ತರಣೆ, ವಿಶೇಷ ತರಬೇತಿ ಕೇಂದ್ರಗಳ ಆರಂಭ, ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಬಲವರ್ಧನೆ ಸೇರಿವೆ.

ಇದೇ ವೇಳೆ, ಸ್ಥಳೀಯ ಭಾಷಾ–ಸಂಸ್ಕೃತಿಗೆ ಆದ್ಯತೆ ನೀಡುವ ಪಠ್ಯಕ್ರಮ ರೂಪಣೆ, ಶಿಕ್ಷಕರಿಗೆ ಪ್ರಾದೇಶಿಕ ಭಾಷಾ–ಸಂವೇದನೆ ತರಬೇತಿ, ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ತಾಂತ್ರಿಕ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳೂ ಜಾರಿಗೆ ಬಂದಿವೆ. ಈ ಎಲ್ಲಾ ಕ್ರಮಗಳು ಕಲ್ಯಾಣ ಕರ್ನಾಟಕದ ಶಿಕ್ಷಣದ ಪ್ರವೇಶಾರ್ಹತೆ, ಗುಣಮಟ್ಟ ಮತ್ತು ಸಮಾನತೆಯನ್ನು ಸುಧಾರಿಸುವ ದಿಕ್ಕಿನಲ್ಲಿ ಪರಿಣಾಮಕಾರಿ ಹೆಜ್ಜೆಯಾಗಿವೆ.

ಆಡಳಿತದ ಕೊಡುಗೆ : ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಮತ್ತು ವಿಭಾಗೀಯ ಇಲಾಖೆಗಳು

1. ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ (ಕೇಕೆಆರ್ಡಿಬಿ) ಕಾರ್ಯಯೋಜನೆ ಮತ್ತು ಹಣಕಾಸು

2023–24ನೇ ಸಾಲನ್ನು "ಶಿಕ್ಷಣದ ವರ್ಷ"ವೆಂದು ಘೋಷಿಸಿ, ಒಟ್ಟು ಅನುದಾನದ ಕನಿಷ್ಠ 25 ಶೇಕಡಾವನ್ನು ವಿದ್ಯಾಭ್ಯಾಸಕ್ಕೆ ಮೀಸಲಿಡಲಾಯಿತು. ಅಕ್ಷರ ಆವಿಷ್ಕಾರ ಕಾರ್ಯಕ್ರಮದಡಿ ಸರ್ಕಾರಿ ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ, ಓದು–ಗಣಿತ ಕೌಶಲ್ಯ ಬಲವರ್ಧಕ ಅಭಿಯಾನ, ಹಾಗೂ ಡಿಜಿಟಲ್ ಪಾಠ್ಯಸಾಮಗ್ರಿ ಒದಗಿಸುವ ಯೋಜನೆಗಳನ್ನು ಜಾರಿಗೊಳಿಸಲಾಯಿತು.

2025–26ನೇ ಸಾಲಿನ ಕ್ರಿಯಾ ಯೋಜನೆಗೆ ?5,000 ಕೋಟಿ ರೂಪಾಯಿ ಮಿತಿಯ ಅನುದಾನವನ್ನು ರಾಜ್ಯಪಾಲರು ಜುಲೈ 24, 2025 ರಂದು ಮಂಜೂರು ಮಾಡಿದರು. ಈ ಯೋಜನೆ ಡಾ. ನಂಜುಂಡಪ್ಪ ಸಮಿತಿ ಶಿಫಾರಸು ಮಾಡಿದ ಪ್ರಾದೇಶಿಕ ಅಭಿವೃದ್ಧಿ ಸೂಚ್ಯಂಕ (ಸಿಡಿಐ) ಆಧಾರಿತ ಹೂಡಿಕೆ ವಿನ್ಯಾಸವನ್ನು ಅನುಸರಿಸುತ್ತದೆ, ಇದರಿಂದ ಶಿಕ್ಷಣದ ಅಸಮತೋಲನ ನಿವಾರಣೆ ಹಾಗೂ ಹಿಂದುಳಿದ ತಾಲೂಕುಗಳಿಗೆ ಗುರಿಪ್ರದ ಹೂಡಿಕೆ ಸಾಧ್ಯವಾಗುತ್ತದೆ.

ಪಟ್ಟಿ 1 : 371(ಜ) ಅಡಿಯಲ್ಲಿ ಕಲ್ಯಾಣ ಕರ್ನಾಟಕದ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳ ಅಂಕಿ ಅಂಶಗಳು.

ಕ್ರ. ಸಂ.	ವಿಭಾಗ ಮೀಸಲಾತಿ ಶೇಕಡಾವಾರು	2023–24ರಲ್ಲಿ ಲಾಭ ಪಡೆದ ವಿದ್ಯಾರ್ಥಿಗಳು/ ಅರ್ಹರು	ಪ್ರಮುಖ ಬದಲಾವಣೆಗಳು
1.	ಪ್ರಾದೇಶಿಕ ವಿಶ್ವವಿದ್ಯಾಲಯಗಳು ಹಾಗೂ ಪದವಿ ಕಾಲೇಜು ಪ್ರವೇಶ	70%	58,246 ಪ್ರವೇಶಾರ್ಹತೆ ಗಣನೀಯ ಏರಿಕೆ
2.	ವೃತ್ತಿಪರ ಕಾಲೇಜುಗಳು (ವೈದ್ಯಕೀಯ, ಇಂಜಿನಿಯರಿಂಗ್, ಕೃಷಿ, ಪಶು ವೈದ್ಯ, ನರ್ಸಿಂಗ್)	68%	52,754 ಸ್ಥಳೀಯ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಹೆಚ್ಚಳ
3.	ತಾಂತ್ರಿಕ ಶಿಕ್ಷಣ (ಪಾಲಿಟೆಕ್ನಿಕ್, ಐಟಿಐ	65%	19,350 ಉದ್ಯೋಗಮುಖಿ ಕೌಶಲ್ಯಾಭಿವೃದ್ಧಿ ವೇಗ
4.	ಸರ್ಕಾರಿ ಉದ್ಯೋಗ (ಗ್ರೂಪ್–ಸಿ, ಗ್ರೂಪ್–ಡಿ ಹುದ್ದೆಗಳು)	80%	7,520 ಸ್ಥಳೀಯ ನೇಮಕಾತಿ ಪ್ರಮಾಣ ಏರಿಕೆ
5.	ಸರ್ಕಾರಿ ಸೇವೆಯಲ್ಲಿ ಬಡ್ತಿ ಪ್ರಾಥಮ್ಯ	––	ಸ್ಥಳೀಯರಿಗೆ ವೃತ್ತಿಜೀವನ ವೃದ್ಧಿ ಅವಕಾಶ

2. ಶಾಲಾ ಶಿಕ್ಷಣ: ಸಾರ್ವಜನಿಕ ಶಾಲಾ ಮಾದರಿಗಳು

ಕರ್ನಾಟಕ ಪಬ್ಲಿಕ್ ಸ್ಕೂಲ್ (ಕೆಪಿಎಸ್) ಮಾದರಿಯನ್ನು ವಿಸ್ತರಿಸುವ ಉದ್ದೇಶದಿಂದ 2025–26ರಿಂದ 200 ಹೊಸ ಕೆಪಿಎಸ್ ಶಾಲೆಗಳ ಸ್ಥಾಪನೆ ಯೋಜಿಸಲಾಗಿದೆ. ಇದರಿಗಾಗಿ ರಾಜ್ಯ ಸರ್ಕಾರ, ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಹಾಗೂ ಕೇಕೆಆರ್ಡಿಬಿ ಸಂಯುಕ್ತ ಅನುದಾನ ಒದಗಿಸುತ್ತಿವೆ. ಕಲ್ಯಾಣ ಕರ್ನಾಟಕ ವಲಯಕ್ಕೆ ಹೆಚ್ಚುವರಿ ಕೆಪಿಎಸ್ ಶಾಲೆಗಳ ಮಂಜೂರಾತಿ ನೀಡಲಾಗಿದೆ.

ಮೋರಾರ್ಜಿ ದೇಸಾಯಿ ವಸತಿ ಶಾಲೆಗಳು, ಮೌಲಾನಾ ಆಜಾದ್ ವಸತಿ ಶಾಲೆಗಳು, ಅಹಿತಕರ ವರ್ಗಗಳ (ಬಿಸಿಎಂ), ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಸ್ಟೆಲ್‌ಗಳ ಬಲವರ್ಧನೆಗೂ ಆದ್ಯತೆ ನೀಡಲಾಗಿದೆ. 2025ರ ಬಜೆಟ್ ಚಕ್ರದಲ್ಲಿ ಹೊಸ ಘಟಕಗಳ ಸ್ಥಾಪನೆಗೆ ? 186 ಕೋಟಿ ರೂಪಾಯಿ ಅನುದಾನ ಮೀಸಲಾಗಿದ್ದು, ಮೂಲಸೌಕರ್ಯ ಸುಧಾರಣೆ ಕಾರ್ಯಗಳು ಪ್ರಗತಿಪಥದಲ್ಲಿವೆ.

3. ಇಲಾಖಾತ್ಮಕ ಯೋಜನೆಗಳು

ಆದಿವಾಸಿ, ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರೀ–ಮೆಟ್ರಿಕ್ ಮತ್ತು ಪೋಸ್ಟ್–ಮೆಟ್ರಿಕ್ ವಿದ್ಯಾರ್ಥಿವೇತನ, ಉಚಿತ ವಸತಿ ವ್ಯವಸ್ಥೆ, ಪಠ್ಯಸಾಮಗ್ರಿ ಪೂರೈಕೆ, ಉನ್ನತ ಶಿಕ್ಷಣದಲ್ಲಿ ಪ್ರವೇಶ ಸುಲಭಗೊಳಿಸುವ ಕ್ರಮಗಳು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರಗಳನ್ನು ಇಲಾಖಾ ಮಟ್ಟದಲ್ಲಿ ಜಾರಿಗೆ ತರುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುವಜನ ಮತ್ತು ಕ್ರೀಡಾ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ ಮುಂತಾದವು ಸಹಕಾರಿ ಪಾತ್ರ ವಹಿಸುತ್ತಿವೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

ಹೆಚ್ಚುವರಿ ಅಂಶಗಳು

- ಗ್ರಾಮೀಣ ಶಾಲೆಗಳಲ್ಲಿ ಇ–ಗ್ರಂಥಾಲಯ ಮತ್ತು ಡಿಜಿಟಲ್ ಕಲಿಕೆ ಕೇಂದ್ರಗಳ ಸ್ಥಾಪನೆ.
- ಶಿಕ್ಷಕರಿಗೆ ನಿರಂತರ ವೃತ್ತಿಪರ ತರಬೇತಿ (Continuous Professional Development) ಕಾರ್ಯಕ್ರಮಗಳು.
- ವಿಶೇಷ ಅಗತ್ಯಗಳಿರುವ ವಿದ್ಯಾರ್ಥಿಗಳಿಗೆ ಸಮಾವೇಶಿತ ಶಿಕ್ಷಣ ಮಾದರಿಗಳ ಅನುಷ್ಠಾನ.
- ಶಾಲಾ ಮಟ್ಟದಲ್ಲಿ ಆರೋಗ್ಯ–ಪೌಷ್ಟಿಕತೆ ಕಾರ್ಯಕ್ರಮಗಳ ಬಲಪಡಿಕೆ.

ಪ್ರಸ್ತುತ ಸ್ಥಿತಿಚಿತ್ರ : ಸಾಧನೆಗಳು ಮತ್ತು ಅಸಮತೋಲನಗಳು

1. ಬಜೆಟ್ ಧೋರಣೆ

2024–25ನೇ ಸಾಲಿನ ರಾಜ್ಯ ಬಜೆಟ್ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸರಾಸರಿ 11.9 ಶೇಕಡಾ ಅನುದಾನ ಮೀಸಲಿಡಲಾಗಿದೆ. ಹೂಡಿಕೆ ಪ್ರಮಾಣ ಕ್ರಮೇಣ ಏರಿಕೆಯಾಗುತ್ತಿದ್ದರೂ, ಕಲ್ಯಾಣ ಕರ್ನಾಟಕದ ಅನೇಕ ಶಾಲೆಗಳ ಮೂಲಸೌಕರ್ಯ ಇನ್ನೂ ದುರ್ಬಲ ಸ್ಥಿತಿಯಲ್ಲಿದೆ. ಇದರಿಂದಾಗಿ ಹೆಚ್ಚುವರಿ ಅನುದಾನ, ಗುರಿಪ್ರದ ಯೋಜನೆಗಳು ಮತ್ತು ವೇಗವಾದ ಕಾರ್ಯಸಾಧನೆ ಅವಶ್ಯಕವಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಜಿಲ್ಲಾ ಮಟ್ಟದ ಬಜೆಟ್ ಹಂಚಿಕೆ ಮತ್ತು ನೇರ ನಿಗಾವಹಣೆ ಕ್ರಮಗಳು ಅಗತ್ಯವೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

2. ಕಲಿಕೆ–ಫಲಿತಾಂಶ ಮತ್ತು ಮೂಲಸೌಕರ್ಯ

ಕಲ್ಯಾಣ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ದ್ವಿತೀಯ ಪಿಯು ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಕುಸಿತದಿಂದ ಆತಂಕ ವ್ಯಕ್ತವಾಗಿದೆ. ಇದರ ಹಿನ್ನೆಲೆಯಲ್ಲಿ ಸರ್ಕಾರ ಮತ್ತು ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಓದು ಕರ್ನಾಟಕ ಹಾಗೂ ಗಣಿತಾಭಿವೃದ್ಧಿ ವಿಶೇಷ ಅಭಿಯಾನಗಳನ್ನು ಘೋಷಿಸಿದೆ. ಜೊತೆಗೆ, ಶಾಲೆಗಳ ಮೂಲಸೌಕರ್ಯ ಪರಿಷ್ಕಾರ ಯೋಜನೆಗಳ ಭಾಗವಾಗಿ ಶೌಚಾಲಯ ನಿರ್ಮಾಣ, ಶುದ್ಧ ಕುಡಿಯುವ ನೀರು, ತರಗತಿ ಕೊಠಡಿ ವಿಸ್ತರಣೆ, ಹಾಗೂ ಶಿಕ್ಷಕರ ಖಾಲಿ ಹುದ್ದೆಗಳ ತ್ವರಿತ ಭರ್ತಿ ಕಾರ್ಯಗಳನ್ನು ಆದ್ಯತೆಯೊಂದಿಗೆ ಕೈಗೆತ್ತಿಕೊಳ್ಳಲಾಗಿದೆ.

ಹೆಚ್ಚುವರಿ ಸಾಧನೆಗಳು

- ಡಿಜಿಟಲ್ ಕಲಿಕಾ ಉಪಕರಣಗಳ ವಿತರಣೆ ಮತ್ತು ಇ–ಗ್ರಂಥಾಲಯಗಳ ಸ್ಥಾಪನೆ.
- ಪ್ರಾದೇಶಿಕ ಭಾಷಾ–ಸಂಸ್ಕೃತಿ ಆಧಾರಿತ ಪಠ್ಯಕ್ರಮ ರೂಪಣೆ.
- ವಿಶೇಷ ಅಗತ್ಯಗಳಿರುವ ಮಕ್ಕಳಿಗಾಗಿ ಸಮಾವೇಶಿತ ಶಿಕ್ಷಣ ಮಾದರಿ ಜಾರಿ.
- ಹಳ್ಳಿಗಳಲ್ಲೂ ಮಾದರಿ ಶಾಲೆಗಳ ಸ್ಥಾಪನೆ.

ಮುಖ್ಯ ಅಸಮತೋಲನಗಳು

- ಕೆಲವು ತಾಲೂಕುಗಳಲ್ಲಿ ಪ್ರಾಥಮಿಕ ಹಂತದ ಕಲಿಕೆ ಮಟ್ಟ ರಾಜ್ಯ ಸರಾಸರಿಗಿಂತ ಕಡಿಮೆ.
- ಮೂಲಸೌಕರ್ಯ ಸುಧಾರಣೆಗಾಗಿ ಘೋಷಿಸಿದ ಅನುದಾನದ ಕಾರ್ಯಗತಗೊಳಿಸುವಿಕೆ ನಿಧಾನ.
- ಶಿಕ್ಷಕರ ನೇಮಕಾತಿ ಪ್ರಕ್ರಿಯೆ ವಿಳಂಬ, ವಿಶೇಷವಾಗಿ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ.
- ಗ್ರಾಮೀಣ ಮತ್ತು ನಗರ ಶಾಲೆಗಳ ನಡುವೆ ಸೌಲಭ್ಯಗಳ ಅಸಮತೋಲನ.

ನೀತಿ–ವಿಮರ್ಶೆ

ಭಾಷಾ ನೀತಿ (ಎರಡು–ಭಾಷಾ ಕ್ರಮ) : ಕಲಿಕೆ–ಆಧಾರ ಹಂತದಲ್ಲಿ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮವು ಕಲಿಕೆ–ಫಲಿತಾಂಶಗಳನ್ನು ಸುಧಾರಿಸಲು ಪೂರಕವಾಗಿದೆ. ಆದರೆ, ಅದೇ ಸಮಯದಲ್ಲಿ ಇಂಗ್ಲಿಷ್ ಭಾಷಾ ಸಾಮರ್ಥ್ಯವನ್ನು ಬೆಳೆಸಲು ಸಮತೋಲನಕಾರಿ, ಯೋಜಿತ ತರಬೇತಿ ಮತ್ತು ಪಾಠ್ಯಸಾಮಗ್ರಿ ಅಭಿವೃದ್ಧಿ ಅಗತ್ಯವಾಗಿದೆ.

ಸ್ಥಳೀಯೀಕೃತ ಪಠ್ಯ ಮತ್ತು ಸಾರ್ವಜನಿಕ ಶಾಲೆಗಳ ಬಲವರ್ಧನೆ : ರಾಜ್ಯ ಶೈಕ್ಷಣಿಕ ನೀತಿ ಸ್ಥಳೀಯ ಇತಿಹಾಸ ಮತ್ತು ಸಮಾಜಗೀತಿಯನ್ನು ಪಠ್ಯಕ್ರಮದಲ್ಲಿ ಒಳಗೊಳ್ಳುವ ಅವಕಾಶ ಒದಗಿಸಿದರೂ, ಶಿಕ್ಷಕರ ನಿರಂತರ ತರಬೇತಿ, ಪಾಠದ ಗುಣಮಟ್ಟದ ಮೌಲ್ಯಮಾಪನ, ಮತ್ತು ತಾಂತ್ರಿಕ ಕೌಶಲ್ಯಾಭಿವೃದ್ಧಿ ವ್ಯವಸ್ಥೆಯನ್ನು ಬಲಪಡಿಸುವುದು ಅವಶ್ಯಕವಾಗಿದೆ.

371(ಜ) ಮೀಸಲಾತಿಯ ಸ್ಥಿರ ಲಾಭ ಮತ್ತು ಪುನರ್ಪರಿಶೀಲನೆ : ಕಾಲೇಜು ಪ್ರವೇಶ ಮತ್ತು ಸರ್ಕಾರಿ ಉದ್ಯೋಗ ಪ್ರವಾಹದಲ್ಲಿ ಸ್ಥಳೀಯರಿಗೆ ಅವಕಾಶ ವಿಸ್ತರಿಸಿದರೂ, ದೀರ್ಘಾವಧಿಯಲ್ಲಿ ಕೌಶಲ್ಯ ಸಾಧನೆಗಳ ಮೌಲ್ಯ ನಿರ್ಣಯ, ಹಾಗೂ ಪ್ರಾದೇಶಿಕ ಮಟ್ಟದಲ್ಲಿ ಗುಣಮಟ್ಟದ ಉದ್ಯೋಗ ಸೃಷ್ಟಿಸುವ ಕಾರ್ಯತಂತ್ರಗಳ ರೂಪಣೆ ಮುಖ್ಯವಾಗಿದೆ.

ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಕಾರ್ಯಕ್ಷಮತೆ: ಮುಂದಿನ 5–10 ವರ್ಷದ ದೃಷ್ಟಿಯೋಜನೆ, ಯೋಜನಾ ನಿರ್ವಹಣಾ ಸಾಮರ್ಥ್ಯ, ನಿರಂತರ ಮೇಲ್ವಿಚಾರಣೆ, ಮತ್ತು ಫಲಿತಾಂಶ–ಆಧಾರಿತ ಮೌಲ್ಯಮಾಪನ ಕ್ರಮಗಳ ಮೇಲೆ ತಜ್ಞ ಸಮಿತಿಗಳು ಒತ್ತಾಯಿಸುತ್ತಿವೆ. ಇದರಿಂದ ಹೂಡಿಕೆಗಳು ಗುರಿಪ್ರದವಾಗಿ ಜಾರಿಗೊಳ್ಳುವಂತಾಗುತ್ತದೆ ಮತ್ತು ಶಿಕ್ಷಣ ಕ್ಷೇತ್ರದ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗುತ್ತದೆ.

ಮುಂದಿನ ದಶಕಕ್ಕೆ ಕಾರ್ಯಪದ್ಧತಿ (ಹಿತೈಷಿ ಶಿಫಾರಸುಗಳು)

1. ಅಡಿಪಾಯ ಬರವಣಿಗೆ–ಗಣಿತ ಮಿಷನ್ 2.0. : ತರಗತಿ 1ರಿಂದ 3ರವರೆಗೆ ದೈನಂದಿನ ಓದು–ಗಣಿತ ಅಭ್ಯಾಸ ಕ್ರಮ, ತ್ರೈಮಾಸಿಕ ನಿರ್ವಿಚಾರಕ ಮೌಲ್ಯಮಾಪನ, ಮತ್ತು ಕಲಿಕೆ ದತ್ತಾಂಶ ಫಲಕಗಳನ್ನು (ಜಿಲ್ಲೆ/ತಾಲೂಕು/ಶಾಲೆ ಮಟ್ಟದಲ್ಲಿ) ಜಾರಿಗೆ ತರುವುದು. ಕಲಿಕೆ ಹಿಂದುಳಿದ ಮಕ್ಕಳಿಗೆ ಹೆಚ್ಚುವರಿ ಶೈಕ್ಷಣಿಕ ಬೆಂಬಲ ತರಗತಿಗಳು.

2. ಶಿಕ್ಷಕ ಬಲ ಸ್ಥಿರೀಕರಣ : 100 ಶೇಕಡಾ ಶಿಕ್ಷಕ ನಿಯೋಜನೆ ಸಾಧಿಸುವಂತೆ ವಿಷಯವಾರು ಖಾಲಿ ಹುದ್ದೆಗಳ ತ್ವರಿತ ಭರ್ತಿ. ಅಡಿಪಾಯ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ (ಎಫ್. ಎಲ್. ಎನ್.), ದ್ವಿಭಾಷಾ ಬೋಧನಾ ವಿಧಾನ, ಮತ್ತು ಕಲಿಕೆ ಹಿಂದುಳಿದ ವಿದ್ಯಾರ್ಥಿಗಳಿಗೆ ಬೆಂಬಲ ಪೆಡಗೋಗಿಯಲ್ಲಿ ಶಿಕ್ಷಕರಿಗೆ ವಾರ್ಷಿಕ ಕನಿಷ್ಠ 10 ದಿನಗಳ ನವೀಕರಣ ತರಬೇತಿ.

3. ಮೂಲಸೌಕರ್ಯ ಅಸಮತೋಲನ ನಿವಾರಣೆ : ಶೌಚಾಲಯ, ಶುದ್ಧ ಕುಡಿಯುವ ನೀರು, ಡಿಜಿಟಲ್ ತರಗತಿ, ವಿಜ್ಞಾನ ಪ್ರಯೋಗಾಲಯ, ಮತ್ತು ಗ್ರಂಥಾಲಯ–ಪ್ರತಿ ಶಾಲೆಗೆ ಕನಿಷ್ಠ ಮಾನದಂಡಗಳನ್ನು ಖಚಿತಪಡಿಸಿಕೊಳ್ಳುವುದು. ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಅನುದಾನದಲ್ಲಿ "ಶಿಕ್ಷಣಕ್ಕೆ 25% ಕಡ್ಡಾಯ ಮೀಸಲು" ಅನುಷ್ಠಾನಕ್ಕೆ ನಿಖರ ಪರಿಶೀಲನಾ ಕ್ರಮ.

ISSN : 2249-2429 ಸಂಶೋಧನೆ RNI REG.NO.KARKAN/2011/38712

4. ಮಾದರಿ ಶಾಲೆಗಳ ಗುಣಮಟ್ಟ ಭರವಸೆ : ಹೊಸ ಕರ್ನಾಟಕ ಪಬ್ಲಿಕ್ ಶಾಲೆಗಳು ಮತ್ತು ವಸತಿ ಶಾಲೆಗಳಿಗೆ ಶಿಕ್ಷಕರ ಅರ್ಹತಾ ಮಾನದಂಡ, ವಿದ್ಯಾರ್ಥಿ–ಶಿಕ್ಷಕ ಅನುಪಾತದ ಕಾಪಾಡಿಕೆ, ಮತ್ತು ಫಲಿತಾಂಶ–ಆಧಾರಿತ ಅನುದಾನ ವ್ಯವಸ್ಥೆ.

5. ಪೋಷಕ ಮತ್ತು ಸಮುದಾಯ ಪಾಲ್ಗೊಳ್ಳಿಕೆ : ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳಿಗೆ (ಎಸ್ಡಿಎಂಸಿ) ಯೋಜನಾ ತರಬೇತಿ, ಸ್ಥಳೀಯ ಭಾಷಾ–ಸಾಂಸ್ಕೃತಿಕ ವಿಷಯಗಳ ಒಳಗೊಳ್ಳಿಕೆ, ಹಾಗೂ ಪೋಷಕರೊಂದಿಗೆ ತ್ರೈಮಾಸಿಕ ಕಲಿಕೆ–ಅಭಿವೃದ್ಧಿ ಸಭೆಗಳು.

6. ಶಾಲೋತ್ತರ ಮಾರ್ಗಗಳು : ಕೈಗಾರಿಕಾ ತರಬೇತಿ ಸಂಸ್ಥೆಗಳು (ಐಟಿಐ) ಮತ್ತು ತಾಂತ್ರಿಕ ಪದವಿ ಕಾಲೇಜುಗಳೊಂದಿಗೆ ಸಂಪರ್ಕ ಬಲಪಡಿಸಿ, ತರಬೇತಿ–ಶಿಕ್ಷಣ–ಶಿಶಿಕ್ಷಣ (ಪ್ರಾಯೋಗಿಕ ತರಬೇತಿ) ಒಪ್ಪಂದಗಳನ್ನು ವಿಸ್ತರಿಸುವುದು. 371(ಜ) ಮೀಸಲಾತಿಯೊಂದಿಗೆ ವೃತ್ತಿ ಮಾರ್ಗದರ್ಶನ ಶಿಬಿರಗಳನ್ನು ಆಯೋಜಿಸುವುದು.

7. ತೆರೆಯಲಾದ ದತ್ತಾಂಶ ಸೂಚ್ಯಂಕಗಳು : ಜಿಲ್ಲಾವಾರು ಎಫ್.ಎಲ್.ಎನ್. ಶೇಕಡಾವಾರು, ಎಸ್.ಎಸ್.ಎಲ್.ಸಿ. ಮತ್ತು ಪೂರ್ವವಿಶ್ವವಿದ್ಯಾಲಯ ಫಲಿತಾಂಶ, ಹಾಜರಾತಿ ಪ್ರಮಾಣ, ಶಿಕ್ಷಕ ಖಾಲಿ ಹುದ್ದೆಗಳ ಮಾಹಿತಿ, ಮೂಲಸೌಕರ್ಯ ಸೂಚ್ಯಂಕ—ಪ್ರತಿ ತ್ರೈಮಾಸಿಕ ಸಾರ್ವಜನಿಕ ಪ್ರಕಟಣೆ.

ಸಮಾರೋಪ

ಕಲ್ಯಾಣ ಕರ್ನಾಟಕದಲ್ಲಿ ರಾಜ್ಯದ ಶಿಕ್ಷಣ ಅಭಿವೃದ್ಧಿ ಯೋಜನೆಗಳ ದಿಕ್ಕು–ಸೂಚನೆ, 371(ಜ) ಸಂವಿಧಾನಿಕ ಬೆಂಬಲ, ಮತ್ತು ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಗುರಿನಿಷ್ಠ ಹೂಡಿಕೆಯ **"ತ್ರಿಕೋನ"** ಈಗಾಗಲೇ ಮೂಲಸೌಕರ್ಯ ವಿಸ್ತರಣೆ ಮತ್ತು ಪ್ರವೇಶ ಅವಕಾಶಗಳಲ್ಲಿ ಫಲಿತಾಂಶ ನೀಡುತ್ತಿದೆ. ಮುಂದಿನ ಅವಧಿಯಲ್ಲಿ ಕಲಿಕೆ ಫಲಿತಾಂಶಗಳು ಮತ್ತು ಶಾಲಾ ಜೀವನದ ಗುಣಮಟ್ಟವನ್ನು ನಿರಂತರವಾಗಿ ಅಳೆಯುವ ಮೂಲಕ, ಭಾಷಾ–ಬೋಧನಾ ಸಮತೋಲನ, ಶಿಕ್ಷಕರ ನಿರಂತರ ತರಬೇತಿ, ಹಾಗೂ ಯೋಜನಾ ನಿರ್ವಹಣೆಯ ಪಾರದರ್ಶಕತೆ—ಇವುಗಳ ಮೇಲೆ ಕೇಂದ್ರೀಕರಿಸಿದರೆ ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಪರಿವರ್ತನೆ ಶಾಶ್ವತ ಮತ್ತು ಸಮಗ್ರವಾಗಬಹುದು.

ಅದರೊಂದಿಗೆ, ಗ್ರಾಮೀಣ ಮತ್ತು ಹಿಂದುಳಿದ ವಲಯಗಳ ಮಕ್ಕಳಿಗೆ ಸಮಾನ ಅವಕಾಶ ಕಲ್ಪಿಸುವುದು, ತಾಂತ್ರಿಕ ಮತ್ತು ವೃತ್ತಿಪರ ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವುದು, ಮತ್ತು ಪೋಷಕ–ಸಮುದಾಯದ ನೇರ ಪಾಲ್ಗೊಳ್ಳಿಕೆಯನ್ನು ಬಲಪಡಿಸುವುದು ಅಗತ್ಯ. ಡಿಜಿಟಲ್ ತಂತ್ರಜ್ಞಾನವನ್ನು ಕಲಿಕೆಯಲ್ಲಿ ಸಮರ್ಪಕವಾಗಿ ಅಳವಡಿಸುವುದು, ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಸಮಸ್ಯಾಪರಿಹಾರ ಸಾಮರ್ಥ್ಯವನ್ನು ಉತ್ತೇಜಿಸುವುದು, ಹಾಗೂ ಶಾಲಾ ಆಡಳಿತದಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ವೃದ್ಧಿಸುವ ಕ್ರಮಗಳು ಶಿಕ್ಷಣ ಕ್ಷೇತ್ರವನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ.

ಶಿಕ್ಷಣದ ಹೂಡಿಕೆ ಕೇವಲ ಮೂಲಸೌಕರ್ಯ ನಿರ್ಮಾಣವಲ್ಲ, ಅದು ಭವಿಷ್ಯದ ಮಾನವ ಸಂಪನ್ಮೂಲ ನಿರ್ಮಾಣಕ್ಕೆ ಮಾಡಿದ ಬಂಡವಾಳ ಹೂಡಿಕೆ. ಕಲ್ಯಾಣ ಕರ್ನಾಟಕ ಈ ಅರಿವಿನೊಂದಿಗೆ ಮುಂದಿನ ದಶಕದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ದೇಶಕ್ಕೆ ಮಾದರಿಯಾಗುವ ಸಾಮರ್ಥ್ಯ ಹೊಂದಿದೆ.

ಪರಾಮರ್ಶನ ಗ್ರಂಥಗಳು

- **ಭಾರತದ ಸಂವಿಧಾನ (2013) :** ಕಲಂ 371(ಜ) – ಕರ್ನಾಟಕಕ್ಕೆ ವಿಶೇಷ ವಿಧಿನಿಯಮ.
- **ಕರ್ನಾಟಕ ಸರ್ಕಾರ (2024) :** ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ವಾರ್ಷಿಕ ವರದಿ 2023–24. ಬೆಂಗಳೂರು ಕೆಕೆಆರ್ಡಿಬಿ.
- **ಟೈಮ್ಸ್ ಆಫ್ ಇಂಡಿಯಾ (2025, ಆಗಸ್ಟ್ 12) :** ರಾಜ್ಯ ಶಿಕ್ಷಣ ನೀತಿಯಲ್ಲಿ ಪ್ರಾಥಮಿಕ ಹಂತದಲ್ಲಿ ದ್ವಿಭಾಷಾ ಬೋಧನೆ ಶಿಫಾರಸು.
- **ಹಿಂದೂಸ್ತಾನ್ ಟೈಮ್ಸ್ (2025, ಜುಲೈ 20) :** 200 ಹೊಸ ಕರ್ನಾಟಕ ಸಾರ್ವಜನಿಕ ಶಾಲೆಗಳ ಘೋಷಣೆ.
- **ಪಿಆರ್ಎಸ್ ವಿಧಾನಮಂಡಲ ಸಂಶೋಧನೆ (2024) :** ಕರ್ನಾಟಕ ಬಜೆಟ್ ವಿಶ್ಲೇಷಣೆ 2024–25.
- **ಎಸರ್ ವರದಿ (2024) :** ಗ್ರಾಮೀಣ ಕರ್ನಾಟಕ ಕಲಿಕೆ ಫಲಿತಾಂಶ ಸಮೀಕ್ಷೆ.
- **ಕರ್ನಾಟಕ ಶಿಕ್ಷಣ ಇಲಾಖೆ (2023) :** ಪ್ರೌಢಶಾಲಾ ಶಿಕ್ಷಣದ ಗುಣಮಟ್ಟ ಮತ್ತು ಮೂಲಸೌಕರ್ಯ ವರದಿ. ಬೆಂಗಳೂರು, ಶಿಕ್ಷಣ ಇಲಾಖೆ.
- **ಬೆಂಗಳೂರು ವಿಶ್ವವಿದ್ಯಾಲಯ (2022) :** ಕರ್ನಾಟಕದ ಪ್ರಾದೇಶಿಕ ಶಿಕ್ಷಣ ಅಭಿವೃದ್ಧಿ ಅಧ್ಯಯನ. ಬೆಂಗಳೂರು, ಶಿಕ್ಷಣ ಸಂಶೋಧನಾ ಕೇಂದ್ರ.
- **ಯುನೆಸ್ಕೋ (2023) :** ದಕ್ಷಿಣ ಭಾರತದ ಶಿಕ್ಷಣ ಮತ್ತು ಕಲಿಕೆ ಸಾಮರ್ಥ್ಯ ವರದಿ. ಪ್ಯಾರಿಸ್, ಯುನೆಸ್ಕೋ ಪ್ರಕಾಶನ.
- **ಆಕ್ಸ್ಫರ್ಡ್ ವಿಶ್ವವಿದ್ಯಾಲಯ (2024) :** ಗ್ರಾಮೀಣ ಭಾರತದ ಶಿಕ್ಷಣ ಸವಾಲುಗಳು, ಕರ್ನಾಟಕದ ಅಧ್ಯಯನ. ಆಕ್ಸಫರ್ಡ್ ಶಿಕ್ಷಣ ಅಧ್ಯಯನ ಕೇಂದ್ರ.

■■

– 74ನೇ ಪುಟದಿಂದ ಮುಂದುವರೆದುದು

ಅದೇ ರೀತಿ ದಾಮೋದರ ಖೇಣಿಯವರ ಮಗಳು ಜಲಜ ಆತ್ಮರಾಮ ಸಿದ್ದಿಯನ್ನು ಪ್ರೀತಿಸಿ ಮನೆಯಲ್ಲಿ ಒಪ್ಪದಿದ್ದಾಗ ಅವನ ಜೊತೆ ಓಡಿ ಹೋಗಿ ಅವನನ್ನು ಮದುವೆಯಾಗಿ ಸುಂದರ ಸಂಸಾರ ನಡೆಸುತ್ತಾಳೆ. ಹೀಗೆ ಅವಳು ತನ್ನ ಬದುಕಿನ ಆಯ್ಕೆಯ ಬಗ್ಗೆ ಸ್ಪಷ್ಟತೆಯನ್ನು ಹೊಂದಿರುತ್ತಾಳೆ.

ಹೀಗೆ ನಂದಿನಿ, ನಳಿನಿ, ಜಲಜ ಪಾತ್ರಗಳಲ್ಲಿ ಗಂಡು–ಹೆಣ್ಣಿನ ಸಂಬಂಧಗಳ ಸಂಕೀರ್ಣತೆಯಲ್ಲಿ ತನ್ನತನದ ಶೋಧ, ತನ್ನ ಅಸ್ತಿತ್ವ ಮತ್ತು ಅಸ್ಮಿತೆಯನ್ನು ಹುಡುಕುತ್ತ ತನ್ನ ಬದುಕಿನ ಬಗ್ಗೆ ತನ್ನ ನಿಷ್ಠೆ ಮತ್ತು ಆಯ್ಕೆಯ ಪರವಾಗಿ ಗಟ್ಟಿಯಾಗಿ ನಿಲ್ಲುವುದನ್ನು ಕಾಣಬಹುದಾಗಿದೆ.

ಪರಾಮರ್ಶನ ಗ್ರಂಥಗಳು

- **ಸುನಂದಾ ಕಡಮೆ (2024) :** ಹೈವೇ 63, ವಾಗರ್ಥ ಪ್ರಿಂಟರ್ಸ್, ಬೆಂಗಳೂರು ಆಕೃತಿ ಪುಸ್ತಕ, ರಾಜಾಜಿನಗರ.

■■

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಂಶೋಧನಾ ಪದವೀಧರರು ಸಂಶೋಧನಾ ಸಮಯದಲ್ಲಿ ಮಾರ್ಗದರ್ಶಕರ ಮಾರ್ಗದರ್ಶನದ ಕುರಿತು ಹೊಂದಿದ್ದ ಅಭಿಪ್ರಾಯದ ವಿಶ್ಲೇಷಣಾತ್ಮಕ ಅಧ್ಯಯನ

✍ ಡಾ. ರಂಗಸ್ವಾಮಿ ಆಯ್. ಜೆ., ಸಹಾಯಕ ಪ್ರಾಧ್ಯಾಪಕರು, ಕುವೆಂಪು ಶಾಂತ ಮನೋತ್ಸವ ಮಹಾವಿದ್ಯಾಲಯ, ಶಿವಮೊಗ್ಗ.

ಸಾರಾಂಶ :

ಪ್ರಭಾವಶೀಲ ಸಂಶೋಧನಾ ಮಾರ್ಗದರ್ಶನವು ಸಂಶೋಧನಾ ಪದವೀಧರರ ಶೈಕ್ಷಣಿಕ ಪ್ರಗತಿ, ಸಂಶೋಧನೆಯ ಗುಣಮಟ್ಟ ಮತ್ತು ಸಂಶೋಧನಾ ಕಾರ್ಯಕ್ರಮದ ಸಕಾಲಿಕ ಪೂರ್ಣಗೊಳಿಸುವಿಕೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಅಧ್ಯಯನವು ಸಂಶೋಧನಾ ಪದವೀಧರರುಸಂಶೋಧನಾ ಸಮಯದಲ್ಲಿ ತಮ್ಮ ಸಂಶೋಧನಾ ಮಾರ್ಗದರ್ಶಕರ ಕುರಿತು ಹೊಂದಿದ್ದ ಅಭಿಪ್ರಾಯಗಳನ್ನು ಪರಿಶೀಲಿಸುತ್ತದೆ, ವಿಶೇಷವಾಗಿ, ಒಟ್ಟಾರೆ ತೃಪ್ತಿಯ ಮಟ್ಟ ಮತ್ತು ಮಾರ್ಗದರ್ಶನದ ವಿವಿಧ ಆಯಾಮಗಳ ಕುರಿತು ಅವರ ಅನುಭವಗಳನ್ನು ವಿಶ್ಲೇಷಿಸುತ್ತದೆ. ವಿವರಣಾತ್ಮಕ ಸಮೀಕ್ಷೆಯ ವಿಧಾನವನ್ನು ಬಳಸಿಕೊಂಡು, 94 ಸಂಶೋಧನಾ ಪದವೀಧರರಿಂದ ರಚನಾತ್ಮಕ ಪ್ರಶ್ನಾವಳಿಯ ಮೂಲಕ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು.ದತ್ತಾಂಶ ವಿಶ್ಲೇಷಣೆಗಾಗಿ ಶೇಕಡಾವಾರು ವಿಶ್ಲೇಷಣೆ ಮತ್ತು ಸರಾಸರಿ ಅಂಕಗಳ ವ್ಯಾಖ್ಯಾನದ ಮೂಲಕ ಮಾಹಿತಿಯನ್ನು ವಿಶ್ಲೇಷಿಸಲಾಯಿತು. ಫಲಿತಾಂಶಗಳು ಬಹುಪಾಲು ಪದವೀಧರರು ತಮ್ಮ ಮಾರ್ಗದರ್ಶಕರ ಬಗ್ಗೆ ಮಧ್ಯಮದಿಂದ ಉನ್ನತ ಮಟ್ಟದ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆಂದು ಸಂಶೋಧನೆಯು ಬಹಿರಂಗಪಡಿಸುತ್ತದೆ.ಆದರೆ ಗಮನಾರ್ಹ ಅನುಪಾತದ ಸಂಶೋಧನಾ ಪದವೀಧರರು ನಕಾರಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು, ಉನ್ನತ ವಿಧಾನಶಾಸ್ತ್ರೀಯ ಬೆಂಬಲ, ಸಂಖ್ಯಾಶಾಸ್ತ್ರೀಯ ಮಾರ್ಗದರ್ಶನ ಮತ್ತು ಮಾರ್ಗದರ್ಶಕರ ಆಯ್ಕೆಯಲ್ಲಿ ಸ್ವಾತಂತ್ರ್ಯದ ಕೊರತೆ ಇತ್ಯಾದಿ ಅಂಶಗಳಲ್ಲಿ ಅಂತರಗಳಿವೆ ಎಂದು ಸೂಚಿಸುತ್ತದೆ.ಸಂಶೋಧನಾ ಫಲಿತಾಂಶಗಳು ಮತ್ತು ಸಾಂಸ್ಥಿಕ ಸಂಶೋಧನಾ ಗುಣಮಟ್ಟವನ್ನು ಹೆಚ್ಚಿಸಲು ಸಂಶೋಧನಾ ಮೇಲ್ವಿಚಾರಣಾ ಅಭ್ಯಾಸಗಳನ್ನು ವ್ಯವಸ್ಥಿತವಾಗಿ ಬಲಪಡಿಸುವ ಅಗತ್ಯವನ್ನು ಅಧ್ಯಯನವು ಒತ್ತಿಹೇಳುತ್ತದೆ.

ಕೀವರ್ಡ್ಸ್ : ಸಂಶೋಧನಾ ಮಾರ್ಗದರ್ಶನ, ಸಂಶೋಧನಾ ಪದವೀಧರ, ಸಂಶೋಧನಾ ಮಾರ್ಗದರ್ಶಕ, ಅಭಿಪ್ರಾಯ, ಉನ್ನತ ಶಿಕ್ಷಣ

ಪರಿಚಯ

ಸಂಶೋಧನೆಯು ಶೈಕ್ಷಣಿಕ ಅಧ್ಯಯನದ ಶ್ರೇಷ್ಠ ಹಂತವಾಗಿದ್ದು, ಸಂಶೋಧಕರ ಮೂಲಭೂತ ಜ್ಞಾನ ಸೃಷ್ಟಿ, ಉನ್ನತ ಸಂಶೋಧನಾ ವಿಧಾನಗಳ ಅನ್ವಯ ಮತ್ತು ದೀರ್ಘಕಾಲಿಕ ಬೌದ್ಧಿಕ ತೊಡಗಿಸಿಕೊಳ್ಳುವಿಕೆಯನ್ನು ಒಳಗೊಂಡಿದೆ. (ಫಿಲಿಪ್ಸ್ & ಪಗ್, 2015).ಈ ಹಂತದಲ್ಲಿ ಸಂಶೋಧನಾ ಮಾರ್ಗದರ್ಶಕರ ಪಾತ್ರ ಕೇಂದ್ರಸ್ಥಾನದಲ್ಲಿದೆ. ಮೇಲ್ವಿಚಾರಕರು ಪ್ರಶ್ನೆಗಳನ್ನು ರೂಪಿಸುವುದು, ಸೂಕ್ತ ವಿಧಾನಗಳನ್ನು ಆಯ್ಕೆ ಮಾಡುವುದು ಮತ್ತು ಫಲಿತಾಂಶಗಳನ್ನು ಅರ್ಥೈಸುವಲ್ಲಿ ಸಂಶೋಧಕರಿಗೆ ಮಾರ್ಗದರ್ಶನ ನೀಡುವುದಲ್ಲದೆ, ಅವರ ವಿಮರ್ಶಾತ್ಮಕ ಚಿಂತನೆ, ವೃತ್ತಿಪರ ಗುರುತು ಮತ್ತು ಶೈಕ್ಷಣಿಕ ಸಮುದಾಯದಲ್ಲಿ ಏಕೀಕರಣದ ಮೇಲೆ ಪ್ರಭಾವ ಬೀರುವ ಮಾರ್ಗದರ್ಶಕರಾಗಿಯೂ ಕಾರ್ಯ ನಿರ್ವಹಿಸುತ್ತಾರೆ (ಲೀ, 2008).

ಸಂಶೋಧನಾರ್ಥಿಗಳಿಗೆ ಉತ್ತಮ ಗುಣಮಟ್ಟದ ಮಾರ್ಗದರ್ಶನವು ಪ್ರೇರಣೆ, ಸಂಶೋಧನಾ ಉತ್ಪಾದಕತೆ, ಆತ್ಮವಿಶ್ವಾಸ ಮತ್ತು ಸಮಯೋಚಿತ ಪದವಿ ಪೂರ್ಣತೆಗೆ ಸಹಕಾರಿಯಾಗುತ್ತದೆ. ಆದರೆ ಅಸಮರ್ಪಕ ಅಥವಾ ಅಸಮಂಜಸ ಮಾರ್ಗದರ್ಶನವು ವಿಳಂಬ, ಒತ್ತಡ ಮತ್ತು ಕ್ಷೀಣತೆಗೆ ಕಾರಣವಾಗಬಹುದು.(ಲೋವಿಟ್ಸ್, 2001; ಗಾರ್ಡ್ನರ್, 2009). ಭಾರತದಲ್ಲಿ, ವಿಶೇಷವಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮಾವಳಿ ಗಳಡಿ, ಮಾರ್ಗದರ್ಶಕರು ಶೈಕ್ಷಣಿಕ ಹಾಗೂ ಭಾವನಾತ್ಮಕ ಬೆಂಬಲ ಒದಗಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಪಿಹೆಚ್.ಡಿ ನೋಂದಣಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮಾರ್ಗದರ್ಶಕರ ಮೇಲಿನ ಹೊರೆ ಹೆಚ್ಚುತ್ತಿದೆ ಮತ್ತು ಗುಣಮಟ್ಟದ ಮಾರ್ಗದರ್ಶನದಲ್ಲಿ ಅಸಮಾನತೆಗಳ ಕುರಿತು ಕಳವಳಗಳನ್ನು ಹುಟ್ಟುಹಾಕಿದೆ.

ನೀತಿ ಉಪಕ್ರಮಗಳು ಪಿಹೆಚ್.ಡಿ. ಸಂಶೋಧನೆಯನ್ನು ಬಲಪಡಿಸುವ ಗುರಿಯನ್ನು ಹೊಂದಿದ್ದರೂ, ಔಪಚಾರಿಕ ನಿರೀಕ್ಷೆಗಳು ಮತ್ತು ನಿಜವಾದ ಮೇಲ್ವಿಚಾರಣಾ ಅನುಭವಗಳ ನಡುವಿನ ಅಂತರವು ಮುಂದುವರಿಯುತ್ತದೆ. ಸಂಶೋಧನಾ ಪದವೀಧರರು ಸಂಶೋಧನಾ ಸಮಯದಲ್ಲಿ ತಮ್ಮ ಮೇಲ್ವಿಚಾರಕರ ಬಗ್ಗೆ ಹೊಂದಿದ್ದ ಅಭಿಪ್ರಾಯಗಳನ್ನು ತನಿಖೆ ಮಾಡುವುದರಿಂದ ಈ ಅಂತರವನ್ನು ಬಹಿರಂಗಪಡಿಸಬಹುದು, ಸಾಂಸ್ಥಿಕ ಸುಧಾರಣೆಗಳನ್ನು ಮಾರ್ಗದರ್ಶನ ಮಾಡಲು ಮತ್ತು ಹೆಚ್ಚು ಪರಿಣಾಮಕಾರಿ ಮಾರ್ಗದರ್ಶನ ಅಭ್ಯಾಸಗಳನ್ನು ಬೆಂಬಲಿಸಲು ಒಳನೋಟಗಳನ್ನು ನೀಡುತ್ತದೆ. ಆದ್ದರಿಂದ ಈ ಅಧ್ಯಯನವು ಸಂಶೋಧನಾ ಮೇಲ್ವಿಚಾರಣೆಯ ಬಗ್ಗೆ ಸಂಶೋಧನಾ ಪದವೀಧರರ ಅಭಿಪ್ರಾಯಗಳನ್ನು ಪರೀಕ್ಷಿಸುವ ಮತ್ತು ಸಂಶೋಧನಾ ಗುಣಮಟ್ಟವನ್ನು ಹೆಚ್ಚಿಸುವ ಪ್ರಯತ್ನಗಳಿಗೆ ಕೊಡುಗೆ ನೀಡುವ ಗುರಿಯನ್ನು ಹೊಂದಿದೆ.

ಅಧ್ಯಯನದ ಅಗತ್ಯ ಮತ್ತು ತಾರ್ಕಿಕತೆ

ಸಂಶೋಧನಾ ಮಾರ್ಗದರ್ಶನವು ಪಿಹೆಚ್.ಡಿ. ಸಂಶೋಧನೆಯ ಫಲಿತಾಂಶಗಳನ್ನು ನೇರವಾಗಿ ಪ್ರಭಾವಿಸುವ ಪ್ರಮುಖ ಅಂಶವಾಗಿದೆ.ಇದು ಸಂಶೋಧನೆಯ ಗುಣಮಟ್ಟ, ಸ್ವಂತಿಕೆ ಮತ್ತು ಕ್ರಮಶಾಸ್ತ್ರೀಯ ಕಠಿಣತೆಯನ್ನು ನೇರವಾಗಿ ಪ್ರಭಾವಿಸುತ್ತದೆ ಮತ್ತು ಪಿಹೆಚ್.ಡಿ. ಕಾರ್ಯಕ್ರಮಗಳನ್ನು ಸಕಾಲಿಕವಾಗಿ ಪೂರ್ಣಗೊಳಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ (ಲೀ. 2008; ಡೀಮ್ ಮತ್ತು ಬ್ರೆಹೋನಿ, 2000). ಭಾರತದಲ್ಲಿ ಪಿಹೆಚ್.ಡಿ. ನೋಂದಣಿ ವೇಗವಾಗಿ ವೃದ್ಧಿಯಾಗಿದೆ. ಆದ್ದರಿಂದ ಮಾರ್ಗದರ್ಶನದ ಗುಣಮಟ್ಟದ ಕುರಿತು ಅನುಭವಾಧಾರಿತ ಅಧ್ಯಯನಗಳು ಸಂಸ್ಥಾತ್ಮಕ ಸುಧಾರಣೆಗಳಿಗೆ ಸಹಾಯಕವಾಗುತ್ತವೆ. ಉತ್ತಮ ಮಾರ್ಗದರ್ಶನವು ಸಂಶೋಧನಾರ್ಥಿಗಳ ಆತ್ಮವಿಶ್ವಾಸ, ಪ್ರೇರಣೆ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಮತ್ತು ಮಾನಸಿಕ ಕಲ್ಯಾಣವನ್ನು ಹೆಚ್ಚಿಸಿ ಸಂಶೋಧನಾ ಉತ್ಪಾದಕತೆಯನ್ನು ವೃದ್ಧಿಸುತ್ತದೆ.

ಪರಿಣಾಮಕಾರಿ ಮೇಲ್ವಿಚಾರಣೆಯು ಸಂಶೋಧನಾರ್ಥಿಗಳಿಗೆ ಸಂಕೀರ್ಣ ಸಂಶೋಧನಾ ಪ್ರಕ್ರಿಯೆಗಳನ್ನು ಮಾರ್ಗದರ್ಶನ ಮಾಡುವಲ್ಲಿ ಬೆಂಬಲಿಸುವುದಲ್ಲದೆ, ವಿಶ್ವಾಸಾರ್ಹ ಜ್ಞಾನ ಉತ್ಪಾದನೆಗೆ ಅಡಿಪಾಯ ವಾಗಿರುವ ಸಂಶೋಧನಾ ನೀತಿಶಾಸ್ತ್ರ, ಶೈಕ್ಷಣಿಕ ಸಮಗ್ರತೆ ಮತ್ತು ಜವಾಬ್ದಾರಿಯುತ ವಿದ್ವತ್ಪೂರ್ಣ ನಡವಳಿಕೆಯನ್ನು ಸಹ ಒಳಗೊಳ್ಳುತ್ತದೆ (ಲೋವಿಟ್ಸ್, 2001). ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಸೂಚಿಸಿದ ನಿಯಂತ್ರಕ ಚೌಕಟ್ಟುಗಳ ಅಡಿಯಲ್ಲಿ ಪಿಹೆಚ್.ಡಿ. ದಾಖಲಾತಿ ವೇಗವಾಗಿ ವಿಸ್ತರಿಸಿರುವ ಭಾರತೀಯ ಉನ್ನತ ಶಿಕ್ಷಣ ಸಂದರ್ಭದಲ್ಲಿ, ಸಂಶೋಧನಾ ಮಾರ್ಗದರ್ಶಕರ ಪಾತ್ರವು ಹೆಚ್ಚಿನ ನೀತಿ ಪ್ರಸ್ತುತತೆಯನ್ನು ಪಡೆದುಕೊಂಡಿದೆ, ಏಕೆಂದರೆ ಮೇಲ್ವಿಚಾರಣೆಯ ಗುಣಮಟ್ಟದ ಮೇಲಿನ ಪ್ರಾಯೋಗಿಕ ಪುರಾವೆಗಳು ಸಾಂಸ್ಥಿಕ ಸುಧಾರಣೆಗಳು ಮತ್ತು ಪಿಹೆಚ್.ಡಿ ನಿಯಮಗಳನ್ನು ತಿಳಿಸಬಹುದು. ಇದಲ್ಲದೆ, ಸಕಾರಾತ್ಮಕ ಮತ್ತು ಬೆಂಬಲಿತ ಮೇಲ್ವಿಚಾರಣಾ ಸಂಬಂಧಗಳು ಸಂಶೋಧನಾರ್ಥಿಗಳ ಶೈಕ್ಷಣಿಕ ವಿಶ್ವಾಸ, ಪ್ರೇರಣೆ ಮತ್ತು ಮಾನಸಿಕ ಯೋಗಕ್ಷೇಮಕ್ಕೆ ಗಮನಾರ್ಹವಾಗಿ ಕೊಡುಗೆ ನೀಡುತ್ತವೆ, ಇದರಿಂದಾಗಿ ಕ್ಷೀಣತೆಯನ್ನು ಕಡಿಮೆ ಮಾಡುತ್ತದೆ ಮತ್ತು ಸಂಶೋಧನಾ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ (ಗಾರ್ಡ್ನರ್, 2009).ರಾಷ್ಟ್ರೀಯ ಶಿಕ್ಷಣ ನೀತಿ 2020 ರಂತಹ ರಾಷ್ಟ್ರೀಯ ಉನ್ನತ ಶಿಕ್ಷಣ ಆದ್ಯತೆಗಳೊಂದಿಗೆ ಹೊಂದಿಕೆಯಾಗುವ ಸಾಂಸ್ಥಿಕ ಸಂಶೋಧನಾ ಸಂಸ್ಕೃತಿ, ಮಾರ್ಗದರ್ಶನ ವ್ಯವಸ್ಥೆಗಳು ಮತ್ತು ಸಹಯೋಗದ ವಿದ್ವತ್ಪೂರ್ಣ ಪರಿಸರಗಳನ್ನು ಬಲಪಡಿಸಲು ಮೇಲ್ವಿಚಾರಣಾ ಅಭ್ಯಾಸಗಳನ್ನು ಅರ್ಥಮಾಡಿಕೊಳ್ಳುವುದು ಸಹ ಅತ್ಯಗತ್ಯ.

ಈ ಗುರುತಿಸಲ್ಪಟ್ಟ ಪ್ರಾಮುಖ್ಯತೆಯ ಹೊರತಾಗಿಯೂ, ಸಂಶೋಧನಾ ಪದವೀಧರರು ಸಂಶೋಧನಾ ಸಮಯದಲ್ಲಿ ತಮ್ಮ ಸಂಶೋಧನಾ ಮಾರ್ಗದರ್ಶಕರ ಬಗ್ಗೆ ಹೊಂದಿದ್ದ ಅಭಿಪ್ರಾಯಗಳನ್ನು ಪರಿಶೀಲಿಸುವ ವ್ಯವಸ್ಥಿತ ಪ್ರಾಯೋಗಿಕ ಅಧ್ಯಯನಗಳು ಸೀಮಿತವಾಗಿವೆ, ವಿಶೇಷವಾಗಿ ಭಾರತೀಯ ಸಂದರ್ಭದಲ್ಲಿ. ಅಸ್ತಿತ್ವದಲ್ಲಿರುವ ಹೆಚ್ಚಿನ ಸಾಹಿತ್ಯವು ಪ್ರಧಾನವಾಗಿ ಪಿಹೆಚ್.ಡಿ. ಸಂಶೋಧನೆಯಲ್ಲಿ ಮೂಲಸೌಕರ್ಯ, ಆಡಳಿತಾತ್ಮಕ ಅಥವಾ ಕಾರ್ಯವಿಧಾನದ ಸವಾಲುಗಳನ್ನು ಒತ್ತಿಹೇಳಿದೆ, ಆದರೆ ಸಂಶೋಧನಾ ಮೇಲ್ವಿಚಾರಣೆಯ ಮಾನವ, ಸಂಬಂಧಿತ ಮತ್ತು ಮಾರ್ಗದರ್ಶನ ಆಯಾಮಗಳು ತುಲನಾತ್ಮಕವಾಗಿ ಕಡಿಮೆ ವಿದ್ವತ್ಪೂರ್ಣ ಗಮನವನ್ನು ಪಡೆದಿವೆ. ಆದ್ದರಿಂದ ಪ್ರಸ್ತುತ ಅಧ್ಯಯನವು ಪಿಹೆಚ್.ಡಿ ಸಂಶೋಧನಾರ್ಥಿಗಳ ಸಂಶೋಧನಾ ಮಾರ್ಗದರ್ಶನದ ಜೀವಂತ ಅನುಭವಗಳಿಗೆ ದತ್ತಾಂಶ–ಚಾಲಿತ ಒಳನೋಟಗಳನ್ನು ನೀಡುವ ಮೂಲಕ ಈ ನಿರ್ಣಾಯಕ ಅಂತರವನ್ನು ಪರಿಹರಿಸುವ ತಾರ್ಕಿಕತೆಯನ್ನು ಆಧರಿಸಿದೆ. ಮೇಲ್ವಿಚಾರಣೆಯ ಬಹು ಆಯಾಮಗಳಲ್ಲಿ ಗ್ರಹಿಕೆಗಳನ್ನು ಪ್ರಾಯೋಗಿಕವಾಗಿ ಪರಿಶೀಲಿಸುವ ಮೂಲಕ, ಮೇಲ್ವಿಚಾರಣಾ ಅಭ್ಯಾಸಗಳಲ್ಲಿ ಸುಧಾರಣೆಗಳನ್ನು ಬೆಂಬಲಿಸುವ, ಸಾಂಸ್ಥಿಕ ನೀತಿ ನಿರ್ಧಾರಗಳನ್ನು ತಿಳಿಸುವ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪಿಹೆಚ್.ಡಿ ಸಂಶೋಧನಾ ಗುಣಮಟ್ಟ ಮತ್ತು ಪರಿಣಾಮಕಾರಿತ್ವದ ವರ್ಧನೆಗೆ ಕೊಡುಗೆ ನೀಡುವ ಪುರಾವೆ ಆಧಾರಿತ ತಿಳುವಳಿಕೆಯನ್ನು ಉತ್ಪಾದಿಸುವ ಗುರಿಯನ್ನು ಈ ಅಧ್ಯಯನವು ಹೊಂದಿದೆ.

ಸಮಸ್ಯೆಯ ವಿವರಣೆ

ಅಧ್ಯಯನದ ಸಮಸ್ಯೆಯನ್ನು ಈ ಕೆಳಕಂಡಂತೆ ಕಾಣಬಹುದಾಗಿದೆ.

"ಸಂಶೋಧನಾ ಪದವೀಧರರು ಸಂಶೋಧನಾ ಸಮಯದಲ್ಲಿ ಮಾರ್ಗದರ್ಶಕರ ಮಾರ್ಗದರ್ಶನದ ಕುರಿತು ಹೊಂದಿದ್ದ ಅಭಿಪ್ರಾಯದ ವಿಶ್ಲೇಷಣಾತ್ಮಕ ಅಧ್ಯಯನ"

ಸಂಕ್ರಿಯಾತ್ಮಕ ಪದಗಳ ವ್ಯಾಖ್ಯಾನಗಳು

1. **ಮಾರ್ಗದರ್ಶಕರ ಕುರಿತು ಸಂಶೋಧನಾ ಪದವೀಧರರ ಅಭಿಪ್ರಾಯ:** ಪ್ರಸ್ತುತ ಅಧ್ಯಯನದಲ್ಲಿ ಪಿಹೆಚ್.ಡಿ. ಸಂಶೋಧನೆಗೆ ಸಂಬಂಧಿಸಿದಂತೆ ಮಾರ್ಗದರ್ಶಕರು ಈಗಾಗಲೇ ನೀಡಿರುವ ಮಾರ್ಗದರ್ಶನದ ಕುರಿತು ಸಂಶೋಧನಾ ಪದವೀಧರರು ಹೊಂದಿರುವ ಅಭಿಪ್ರಾಯವನ್ನು "ಮಾರ್ಗದರ್ಶಕರ ಕುರಿತು ಸಂಶೋಧನಾರ್ಥಿಗಳ ಅಭಿಪ್ರಾಯ" ಎಂದು ಪರಿಗಣಿಸಲಾಗಿದೆ.
2. **ಸಂಶೋಧನಾ ಪದವೀಧರ** : ಪ್ರಸ್ತುತ ಅಧ್ಯಯನದಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಶಿಕ್ಷಣ ವಿಭಾಗದಲ್ಲಿ ಪಿಹೆಚ್.ಡಿ ಸಂಶೋಧನಾ ಪದವಿಗೆ ದಾಖಲಾಗಿ UGC ಹಾಗೂ ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ 2009 ರಿಂದ 2024ರ ಅವಧಿಯಲ್ಲಿ ಸಂಶೋಧನೆಯನ್ನು ಪೂರ್ಣಗೊಳಿಸಿ ಪಿಹೆಚ್.ಡಿ. ಪದವಿ ಪಡೆದಿರುವ ವ್ಯಕ್ತಿಯನ್ನು "ಸಂಶೋಧನಾ ಪದವೀಧರ" ಎಂದು ಪರಿಗಣಿಸಲಾಗಿದೆ.

ಅಧ್ಯಯನದ ಉದ್ದೇಶಗಳು

1. ಮಾರ್ಗದರ್ಶಕರ ಕುರಿತು ಸಂಶೋಧನಾ ಪದವೀಧರರ ಅಭಿಪ್ರಾಯದ ಮಟ್ಟ ಹಾಗೂ ಅಭಿಪ್ರಾಯಗಳ ವಿಶ್ಲೇಷಣಾತ್ಮಕ ಅಧ್ಯಯನ ಮಾಡುವುದು.
2. ಸಂಶೋಧನಾ ಪದವೀಧರರು ತಮ್ಮ ಮಾರ್ಗದರ್ಶಕರ ಕುರಿತು ಹೊಂದಿದ್ದ ಅಭಿಪ್ರಾಯಗಳನ್ನು ಅಧ್ಯಯನ ಮಾಡುವುದು.

ಸಂಶೋಧನಾ ವಿಧಾನ

ಈ ಅಧ್ಯಯನದಲ್ಲಿ ವಿವರಣಾತ್ಮಕ ಸಮೀಕ್ಷಾ ವಿಧಾನವನ್ನು ಅಳವಡಿಸಿಕೊಂಡಿದ್ದು, ಇದು ಸಂಶೋಧನಾ ಮಾರ್ಗದರ್ಶನಕ್ಕೆ ಸಂಬಂಧಿಸಿದಂತೆ ಸಂಶೋಧನಾ ಪದವೀಧರರ ವರ್ತನೆಗಳು ಮತ್ತು ಅಭಿಪ್ರಾಯಗಳ ಕುರಿತು ವ್ಯವಸ್ಥಿತ ಮಾಹಿತಿಯನ್ನು ಸಂಗ್ರಹಿಸಲು ಸೂಕ್ತವಾಗಿದೆ.

ಪ್ರತಿಚಯನ

ಕರ್ನಾಟಕದಲ್ಲಿ 14 ವಿಶ್ವವಿದ್ಯಾಲಯಗಳು ಶಿಕ್ಷಣ ಸಂಶೋಧನಾ ವಿಭಾಗವನ್ನು ಹೊಂದಿದ್ದು 2009–2024 ರ ಅವಧಿಯಲ್ಲಿ ಸುಮಾರು 196 ಜನ ಸಂಶೋಧನಾ ಪದವಿಯನ್ನು(ಪಿಹೆಚ್.ಡಿ.) ಪಡೆದಿರುತ್ತಾರೆ. ಇದರಲ್ಲಿ 94 ಸಂಶೋಧನಾ ಪದವೀಧರರನ್ನು ಸಂಶೋಧನಾ ಪ್ರತಿಚಯನವಾಗಿ ಆಯ್ಕೆಮಾಡಲಾಗಿದೆ.

ದತ್ತಾಂಶ ಸಂಗ್ರಹಣಾ ಸಾಧನ ಮತ್ತು ತಂತ್ರಗಳು

ಪ್ರಸ್ತುತ ಅಧ್ಯಯನದಲ್ಲಿ ಸಂಶೋಧನಾ ಮಾರ್ಗದರ್ಶನದ ಬಗ್ಗೆ ಸಂಶೋಧನಾ ಪದವೀಧರರ ಅಭಿಪ್ರಾಯಗಳನ್ನು ನಿರ್ಣಯಿಸಲು ಪ್ರಾಥಮಿಕ ಸಾಧನವಾಗಿ ರಚನಾತ್ಮಕ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ. ಪ್ರಶ್ನಾವಳಿಯು ಶೈಕ್ಷಣಿಕ ಬೆಂಬಲ, ಕ್ರಮಶಾಸ್ತ್ರೀಯ ಮಾರ್ಗದರ್ಶನ, ನೈತಿಕ ಮೇಲ್ವಿಚಾರಣೆ, ಮಾರ್ಗದರ್ಶಕರು ಮತ್ತು ಸಂಶೋಧನಾ ಪದವೀಧರರನಡುವಿನ ಪರಸ್ಪರ ಸಂಬಂಧಗಳು ಮತ್ತು ಸಂಶೋಧನಾ ಪದವೀಧರರುಗಳಿಗೆ ಒದಗಿಸಲಾದ ಸ್ವಾಯತ್ತತೆಯ ಮಟ್ಟವನ್ನು ಒಳಗೊಂಡಂತೆ ಮೇಲ್ವಿಚಾರಣೆಯ ಬಹು ಆಯಾಮಗಳನ್ನು ತಿಳಿಸುವ 23 ಹೇಳಿಕೆಗಳನ್ನು ಒಳಗೊಂಡಿತ್ತು. ಈ ಸಮಗ್ರ ವಿನ್ಯಾಸವು ಸಂಶೋಧನಾ ಮಾರ್ಗದರ್ಶನದ ಶೈಕ್ಷಣಿಕ ಮತ್ತು ಸಂಬಂಧಿತ ಅಂಶಗಳೆರಡನ್ನೂ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸೆರೆಹಿಡಿಯಲಾಗಿದೆ ಎಂದು ಖಚಿತಪಡಿಸಿತು. ಪ್ರತಿಕ್ರಿಯಿಸಿದವರಿಂದ ಸಂಗ್ರಹಿಸಿದ ದತ್ತಾಂಶವನ್ನು ಶೇಕಡಾವಾರು ವಿಶ್ಲೇಷಣೆಯನ್ನು ಬಳಸಿಕೊಂಡು ವ್ಯವಸ್ಥಿತವಾಗಿ ವಿಶ್ಲೇಷಿಸಲಾಯಿತು. ಇದು ವಿಭಿನ್ನ ವಸ್ತುಗಳಾದ್ಯಂತ ಪ್ರತಿಕ್ರಿಯೆಗಳ ವಿತರಣೆಯ ತಿಳುವಳಿಕೆಯನ್ನು ಮತ್ತು ಸರಾಸರಿ ಸ್ಕೋರ್ ವ್ಯಾಖ್ಯಾನವನ್ನು ಸುಗಮಗೊಳಿಸಿತು, ಇದು ಪಿಹೆಚ್.ಡಿ ಸಂಶೋಧನಾ ಪದವೀಧರರುಗಳು ಸಂಶೋಧನಾ ಸಮಯದಲ್ಲಿ ತಮ್ಮ ಸಂಶೋಧನಾ ಮಾರ್ಗದರ್ಶಕರುಗಳ ಬಗ್ಗೆ ಒಟ್ಟಾರೆ ಹೊಂದಿರುವ ಅಭಿಪ್ರಾಯಗಳ ಮಟ್ಟವನ್ನು ನಿರ್ಧರಿಸಲು ಸಹಾಯ ಮಾಡಿತು. ಈ ವಿಶ್ಲೇಷಣಾತ್ಮಕ ತಂತ್ರಗಳು ಸಂಶೋಧನಾ ಮೇಲ್ವಿಚಾರಣಾ ಅಭ್ಯಾಸಗಳಲ್ಲಿ ಗುಣಮಟ್ಟ, ಪರಿಣಾಮಕಾರಿತ್ವ ಮತ್ತು ಸುಧಾರಣೆಯ ಕ್ಷೇತ್ರಗಳನ್ನು ಮೌಲ್ಯಮಾಪನ ಮಾಡಲು ದೃಢವಾದ ಚೌಕಟ್ಟನ್ನು ಒದಗಿಸಿದವು.

ದತ್ತಾಂಶ ವಿಶ್ಲೇಷಣೆ

ಶೇಕಡಾವಾರು ವಿಶ್ಲೇಷಣೆ ಮತ್ತು ಸರಾಸರಿ ಅಂಕಗಳ ಆಧಾರದ ಮೇಲೆ ಮಾಹಿತಿ ವಿಶ್ಲೇಷಿಸಲಾಯಿತು.

ಫಲಿತಾಂಶಗಳು 52.1% ಪಿಹೆಚ್.ಡಿ ಸಂಶೋಧನಾ ಪದವೀಧರರು ಮಧ್ಯಮ ಮಟ್ಟದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಎಂದು ಸೂಚಿಸುತ್ತವೆ, ಇದು ಸಂಶೋಧನಾ ಮಾರ್ಗದರ್ಶನದೊಂದಿಗೆ ಹೊಂದಿರುವ ಸರಾಸರಿ ತೃಪ್ತಿಯನ್ನು ಸೂಚಿಸುತ್ತದೆ. 23.4% ಜನರು

ಕೋಷ್ಟಕ 1 : ಮಾರ್ಗದರ್ಶಕರ ಕುರಿತು ಸಂಶೋಧನಾ ಪದವೀಧರರ ಅಭಿಪ್ರಾಯದ ಮಟ್ಟಗಳ ಶೇಕಡಾವಾರು ವಿವರಗಳು.

ಮಾರ್ಗದರ್ಶಕರ ಕುರಿತುಸಂಶೋಧನಾ ಪದವೀಧರರ ಅಭಿಪ್ರಾಯದ ಮಟ್ಟಗಳು	ವ್ಯಾಪ್ತಿ	ಆವೃತ್ತಿ	ಶೇಕಡಾವಾರು	ಸರಾಸರಿ
ಧನಾತ್ಮಕ	109 ಮತ್ತು ಅದಕ್ಕಿಂತ ಹೆಚ್ಚು	22	23.4%	112.59
ತಟಸ್ಥ	90 ರಿಂದ 108	49	52.1%	100.63
ಋಣಾತ್ಮಕ	89 ಮತ್ತು ಅದಕ್ಕಿಂತ ಕೆಳಗೆ	23	24.5%	73.00
ಒಟ್ಟು		94	100.0%	96.67

ಹೆಚ್ಚಿನ ತೃಪ್ತಿಯನ್ನು ವರದಿ ಮಾಡಿದರೆ, ಸುಮಾರು 24.5% ಜನರು ನಕಾರಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮೇಲ್ವಿಚಾರಣೆಯ ಗುಣಮಟ್ಟವು ಸಾಮಾನ್ಯವಾಗಿ ಸ್ವೀಕಾರಾರ್ಹವಾಗಿದ್ದರೂ, ಗಣನೀಯ ಪ್ರಮಾಣದ ಸಂಶೋಧನಾ ಪದವೀಧರರು ಅತೃಪ್ತಿಯನ್ನು ಅನುಭವಿಸಿರುತ್ತಾರೆ, ಇದು ಕೇಂದ್ರೀಕೃತ ಹಸ್ತಕ್ಷೇಪವನ್ನು ಸಮರ್ಥಿಸುತ್ತದೆ ಎಂದು ಈ ವಿತರಣೆಯು ಬಹಿರಂಗಪಡಿಸುತ್ತದೆ.

ಕೋಷ್ಟಕ 2 :

ಮಾರ್ಗದರ್ಶಕರ ಕುರಿತು ಸಂಶೋಧನಾ ಪದವೀಧರರ ಅಭಿಪ್ರಾಯದ ಮಟ್ಟಗಳ ಶೇಕಡಾವಾರು ವಿಶ್ಲೇಷಣಾ ವಿವರಗಳು.

ಕ್ರ. ಸಂ.	ಹೇಳಿಕೆ	ಬಲವಾಗಿ ಒಪ್ಪುತ್ತೇನೆ	ಒಪ್ಪುತ್ತೇನೆ	ನಿರ್ಧರಿಸಿಲ್ಲ	ಒಪ್ಪುವುದಿಲ್ಲ	ಬಲವಾಗಿ ಒಪ್ಪುವುದಿಲ್ಲ
1.	ನನಗೆ ಮಾರ್ಗದರ್ಶಕರು ಹಲವು ವಿಚಾರ ಸಂಕಿರಣ ಮತ್ತು ವಿವಿಧ ಸಮ್ಮೇಳನಗಳಲ್ಲಿ ಭಾಗವಹಿಸಿ ಸಂಶೋಧನಾ ಪತ್ರಿಕೆಗಳಲ್ಲಿ ಲೇಖನ ಮಂಡಿಸುವಂತೆ ಪ್ರೋತ್ಸಾಹಿಸುತ್ತಿದ್ದರು.	61.7%	61.7%	31.9%	1.1%	4.3%
2.	ನನ್ನ ಮಾರ್ಗದರ್ಶಕರು ಸಮಾಜದಲ್ಲಿ ಉತ್ತಮವಾದ ಗೌರವವನ್ನು ಹೊಂದಿದ್ದರು.	60.6%	34.0%	1.1%	1.1%	3.2%
3.	ನನ್ನ ಮಾರ್ಗದರ್ಶಕರು ವಿಭಾಗದ ಎಲ್ಲಾ ಸಂಶೋಧನಾ ಪದವೀಧರರ ಸಹಕಾರದಿಂದ ಕೊಂಡೊಯ್ಯುತ್ತಿದ್ದರು.	59.6%	29.8%	1.1%	4.3%	5.3%
4.	ನನ್ನ ಸಂಶೋಧನೆಗೆ ನನ್ನ ಮಾರ್ಗದರ್ಶಕರು ನೀಡುವ ಮಾರ್ಗದರ್ಶನದ ಕುರಿತು ನನಗೆ ತೃಪ್ತಿಯಿದೆ	58.5%	36.2%	1.1%	2.1%	2.1%
5.	ನನ್ನ ಮಾರ್ಗದರ್ಶಕರು ನನಗೆ ಸಂಶೋಧನೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದ್ದರು.	55.8%	38.3%	0%	1.1%	2.1%
6.	ನನ್ನ ಮಾರ್ಗದರ್ಶಕರು ಸಂಶೋಧನಾರ್ಥಿಗಳಿಗೆ ಮಾರ್ಗದರ್ಶನ ನೀಡುವಾಗ ಯಾವುದೇ ತಾರತಮ್ಯ ಮಾಡುತ್ತಿರಲಿಲ್ಲ.	55.3%	34.0%	1.1%	3.2%	6.4%
7.	ನನ್ನ ಮಾರ್ಗದರ್ಶಕರು ಹಿರಿಯ ಸಂಶೋಧನಾರ್ಥಿಗಳ ಜೊತೆಗೆ ಉತ್ತಮವಾದ ಬಾಂಧವ್ಯವನ್ನು ಹೊಂದಿದ್ದರು.	57.4%	33.0%	0%	4.3%	5.3%
8.	ಸಂಶೋಧನಾ ಸಮಸ್ಯೆಯ ಆಯ್ಕೆಯಲ್ಲಿ ಮಾರ್ಗದರ್ಶಕರು ನನಗೆ ಅತ್ಯುತ್ತಮ ಮಾರ್ಗದರ್ಶನ ನೀಡಿದ್ದರು.	56.4%	39.4%	0%	1.1%	5.3%
9.	ಮಾರ್ಗದರ್ಶನಕ್ಕಾಗಿ ಭೇಟಿಯಾದಾಗ ಮಾರ್ಗದರ್ಶಕರು ನನಗೆ ಸರಿಯಾಗಿ ಪ್ರತಿಕ್ರಿಯೆ ನೀಡುತ್ತಿದ್ದರು.	56.4%	37.2%	1.1%	3.2%	2.1%

ISSN : 2249-2429 ಸಂಶೋಧನೆ RNI REG.NO.KARKAN/2011/38712

10.	ಮಾರ್ಗದರ್ಶಕರು ನನ್ನ ಕಡೆಯಿಂದ ಅತ್ಯುತ್ತಮವಾದ ಸಂಶೋಧನಾ ಪ್ರಬಂಧವನ್ನು ಹೊರತರುವ ಹಂಬಲ ಹೊಂದಿದ್ದರು.	60.6%	34.0%	1.1%	1.1%	3.2%
11.	ನನ್ನ ಸಂಶೋಧನಾ ಕಾರ್ಯದಲ್ಲಿ ನನಗೆ ಯಾವುದೇ ಗೊಂದಲಗಳು ಇದ್ದಲ್ಲಿ ಮಾರ್ಗದರ್ಶಕರು ಅವುಗಳ ಪರಿಹಾರಕ್ಕೆ ಸಲಹೆ ನೀಡುತ್ತಿದ್ದರು.	60.6%	34.0%	1.1%	1.1%	3.2%
12.	ನನ್ನ ಮಾರ್ಗದರ್ಶಕರು ಸಂಶೋಧನಾ ಮತ್ತು ಶೈಕ್ಷಣಿಕ ಕಾರ್ಯಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು.	59.6%	29.8%	1.1%	4.3%	5.3%
13.	ದತ್ತಾಂಶ ವಿಶ್ಲೇಷಣೆಗೆ ಸಂಬಂಧಿಸಿದಂತೆ ಸೂಕ್ತ ಸಂಖ್ಯಾಶಾಸ್ತ್ರೀಯ ತಂತ್ರಗಳನ್ನು ಆಯ್ಕೆಮಾಡಿಕೊಳ್ಳುವ ಬಗ್ಗೆ ಮಾರ್ಗದರ್ಶಕರು ಜ್ಞಾನ ಹೊಂದಿದ್ದರು.	58.5%	36.2%	1.1%	2.1%	2.1%
14.	ನನ್ನ ಮಾರ್ಗದರ್ಶಕರು ಈಗಾಗಲೇ ಸಂಶೋಧನಾ ಕಾರ್ಯ ಮುಗಿಸಿರುವ ವಿದ್ಯಾರ್ಥಿಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿರುತ್ತಾರೆ.	55.8%	38.3%	0%	1.1%	2.1%
15.	ಸಂಶೋಧನೆಗೆ ಸಂಬಂಧಪಟ್ಟಂತೆ ಹಲವು ಸಂಪನ್ಮೂಲ ವ್ಯಕ್ತಿಗಳನ್ನು ಭೇಟಿಯಾಗಲು ಮಾರ್ಗದರ್ಶಕರು ಸೂಕ್ತ ನಿರ್ದೇಶನ ನೀಡುತ್ತಿದ್ದರು.	55.3%	34.0%	1.1%	3.2%	6.4%
16.	ಮಾರ್ಗದರ್ಶಕರಿಗೆ ಸಂಶೋಧನೆಯಲ್ಲಿ ಬಳಕೆಯಾಗುವ ತಂತ್ರಜ್ಞಾನದ ಕುರಿತು ಜ್ಞಾನವಿತ್ತು.	57.4%	33.0%	0%	4.3%	5.3%
17.	ಸಂಶೋಧನಾ ಸಂಖ್ಯಾಶಾಸ್ತ್ರದ ಕುರಿತು ನನ್ನ ಮಾರ್ಗದರ್ಶಕರು ನನಗೆ ಮಾರ್ಗದರ್ಶನ ಮಾಡುತ್ತಿದ್ದರು.	56.4%	39.4%	0%	1.1%	5.3%
18.	ಸಂಶೋಧನಾ ಸಂಖ್ಯಾಶಾಸ್ತ್ರಗಳ ಆಯ್ಕೆಯ ಕುರಿತು ಮಾರ್ಗದರ್ಶಕರು ಸಲಹೆ ಮತ್ತು ಸೂಚನೆಗಳನ್ನು ನೀಡುತ್ತಿದ್ದರು.	56.4%	37.2%	1.1%	3.2%	2.1%
19.	ನನ್ನ ಸಂಶೋಧನಾ ಕಾರ್ಯದ ಪ್ರತೀ ಹಂತದಲ್ಲೂ ಮಾರ್ಗದರ್ಶಕರು ನನಗೆ ಅತ್ಯುತ್ತಮವಾದ ಸಂಪನ್ಮೂಲಗಳನ್ನು ಒದಗಿಸಿದ್ದರು	44.7%	41.5%	2.1%	6.4%	5.3%
20.	ಮಾರ್ಗದರ್ಶಕರು ಸಂಶೋಧನೆಯ ಬಗ್ಗೆ ಅತ್ಯುತ್ತಮ ಜ್ಞಾನವನ್ನು ಹೊಂದಿದ್ದು ಉತ್ತಮ ಮಾರ್ಗದರ್ಶನ ನೀಡುತ್ತಿದ್ದರು.	41.5%	46.8%	1.1%	6.4%	4.3%
21.	ಕೋರ್ಸ್‌ವರ್ಕ್ ಸಂದರ್ಭದಲ್ಲಿ ಮಾರ್ಗದರ್ಶಕರು ನನಗೆ ಸಂಶೋಧನೆಯ ಕುರಿತಂತೆ ಎಲ್ಲಾ ರೀತಿಯ ತರಬೇತಿಯನ್ನು ನೀಡಿದ್ದರು.	41.5%	36.2%	6.4%	6.4%	9.6%
22.	ನಾನು ಮಾರ್ಗದರ್ಶಕರ ಸಂಶೋಧನಾ ಸಾಮರ್ಥ್ಯದ ಬಗ್ಗೆ ಸಂಶೋಧನೆಗೆ ಸೇರುವ ಮೊದಲೇ ತಿಳಿದುಕೊಂಡಿದ್ದೆ.	27.7%	36.2%	2.1%	21.3%	12.8%
23.	ಸಂಶೋಧನಾರ್ಥಿಯಾಗಿ ಆಯ್ಕೆಯ ಸಂದರ್ಭದಲ್ಲಿ ನನಗೆ ಮಾರ್ಗದರ್ಶಕರನ್ನು ಆಯ್ಕೆ ಮಾಡಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯವಿತ್ತು.	23.4%	25.5%	1.1%	29.8%	20.2%

ಚರ್ಚೆ

ಪಿಹೆಚ್.ಡಿ. ಸಂಶೋಧನಾ ಪದವೀಧರರ ಪ್ರತಿಕ್ರಿಯೆಗಳ ಅಂಶವಾರು ವಿಶ್ಲೇಷಣೆಯು ಮೇಲ್ವಿಚಾರಣಾ ಅಭ್ಯಾಸಗಳಲ್ಲಿ ಸುಧಾರಣೆಯ ಅಗತ್ಯವಿರುವ ಸಾಮರ್ಥ್ಯಗಳು ಮತ್ತು ಕ್ಷೇತ್ರಗಳನ್ನು ಎತ್ತಿ ತೋರಿಸುತ್ತದೆ. ಒಟ್ಟಾರೆಯಾಗಿ, ಹೆಚ್ಚಿನ ಸಂಶೋಧನಾ ಪದವೀಧರರು ಸಕಾರಾತ್ಮಕ ಅನುಭವಗಳನ್ನು ವರದಿ ಮಾಡಿದ್ದಾರೆ, ವಿಶೇಷವಾಗಿ ಲೇಖನಗಳನ್ನು ಪ್ರಕಟಿಸಲು ಮತ್ತು ಸಮ್ಮೇಳನಗಳಲ್ಲಿ ಭಾಗವಹಿಸಲು ಪ್ರೋತ್ಸಾಹ, ಸಂಶೋಧನಾ ಸಮಸ್ಯೆಯ ಆಯ್ಕೆಯಲ್ಲಿ ಬೆಂಬಲ ಮತ್ತು ರಚನಾತ್ಮಕ ಪ್ರತಿಕ್ರಿಯೆ. 90% ಕ್ಕಿಂತ ಹೆಚ್ಚು ಪ್ರತಿಕ್ರಿಯಿಸಿದವರು ತಮ್ಮ ಮೇಲ್ವಿಚಾರಕರು ವಿದ್ವತ್ಪೂರ್ಣ ಪ್ರಸರಣದಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸಿದ್ದಾರೆ ಎಂದು ಸೂಚಿಸಿದ್ದಾರೆ, ಇದು ಸಂಶೋಧನಾ ಪದವೀಧರರ ಶೈಕ್ಷಣಿಕ ಜಾಲಗಳಲ್ಲಿ ಸಂಯೋಜಿಸುವಲ್ಲಿ ಮೇಲ್ವಿಚಾರಕರ ನಿರ್ಣಾಯಕ ಪಾತ್ರವನ್ನು ಪ್ರತಿಬಿಂಬಿಸುತ್ತದೆ (ಫಿಲಿಪ್ಸ್ ಮತ್ತು ಪಗ್, 2015; ಗಾರ್ಡ್ನರ್, 2009).

ನ್ಯಾಯಯುತ, ಸೌಹಾರ್ದಯುತ ಸಂಬಂಧಗಳು ಮತ್ತು ತಾರತಮ್ಯದ ಅನುಪಸ್ಥಿತಿಯ ಬಗ್ಗೆ ಸಕಾರಾತ್ಮಕ ಅಭಿಪ್ರಾಯಗಳನ್ನು ಸಹ ಗಮನಿಸಲಾಯಿತು, ಇದು ಪರಸ್ಪರ ಬೆಂಬಲ ಮತ್ತು ಸಮಾನ ಚಿಕಿತ್ಸೆಯನ್ನು ಸಾಮಾನ್ಯವಾಗಿ ಉತ್ತಮವಾಗಿ ನಿರ್ವಹಿಸಲಾಗುತ್ತದೆ ಎಂದು ಸೂಚಿಸುತ್ತದೆ. ಆದಾಗ್ಯೂ, ಸುಮಾರು 8–11% ಸಂಶೋಧನಾ ಪದವೀಧರರು ಈ ಕ್ಷೇತ್ರಗಳಲ್ಲಿ ಅತೃಪ್ತಿಯನ್ನು ವರದಿ ಮಾಡಿದ್ದಾರೆ, ಇದು ಮೇಲ್ವಿಚಾರಣೆಯ ಗುಣಮಟ್ಟವು ಮಂಡಳಿಯಲ್ಲಿ ಏಕರೂಪವಾಗಿಲ್ಲ ಎಂದು ಸೂಚಿಸುತ್ತದೆ.

ತಾಂತ್ರಿಕ ಮತ್ತು ಮುಂದುವರಿದ ಮೇಲ್ವಿಚಾರಣೆಯ ಕ್ಷೇತ್ರಗಳಲ್ಲಿ ಕಳವಳಗಳು ಹೆಚ್ಚು ಸ್ಪಷ್ಟವಾಗುತ್ತವೆ. ಸಂಶೋಧನಾ ವಿಧಾನ, ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ, ಪರಿಕರಗಳ ಆಯ್ಕೆ ಮತ್ತು ವಿಶೇಷ ತಂತ್ರಗಳ ಮೇಲಿನ ಮಾರ್ಗದರ್ಶನವು ಕಡಿಮೆ ಒಪ್ಪಂದದ ಮಟ್ಟಗಳು ಮತ್ತು ಹೆಚ್ಚಿನ ದರದ ತಟಸ್ಥತೆ ಅಥವಾ ಭಿನ್ನಾಭಿಪ್ರಾಯವನ್ನು ತೋರಿಸಿದೆ. ಈ ಸಂಶೋಧನೆಗಳು ಮೂಲಭೂತ ಮಾರ್ಗದರ್ಶನ ತೃಪ್ತಿಕರವಾಗಿದ್ದರೂ,

ವಿಶೇಷ ಮಾರ್ಗದರ್ಶನವನ್ನು ಕಡಿಮೆ ಮಟ್ಟದಲ್ಲಿ ಒದಗಿಸಲಾಗಿದೆ ಎಂದು ಸೂಚಿಸುತ್ತವೆ (ಲೀ, 2008; ವಿಸ್ಕರ್, 2012). ಇದರ ಜೊತೆಗೆ, ವಿವಿಧ ಸಂಶೋಧನಾ ಹಂತಗಳಲ್ಲಿ ಅನಿಯಮಿತ ಶೈಕ್ಷಣಿಕ ಸಂವಹನ ಮತ್ತು ಸೀಮಿತ ಬೆಂಬಲವು ವಿದ್ವತ್ಪೂರ್ಣ ಅಭಿವೃದ್ಧಿಗೆ ಅಡ್ಡಿಯಾಗುವ ಅಸಂಗತತೆಯನ್ನು ಸೂಚಿಸುತ್ತದೆ.

ಅಂತಿಮವಾಗಿ, ಮೇಲ್ವಿಚಾರಕರನ್ನು ಆಯ್ಕೆ ಮಾಡುವಲ್ಲಿ ಸೀಮಿತ ಸ್ವಾತಂತ್ರ್ಯ ಮತ್ತು ಮಾರ್ಗದರ್ಶಿಯ ಸಂಶೋಧನಾ ಪರಿಣತಿಯ ನಿರ್ಬಂಧಿತ ಅರಿವಿನಂತಹ ಸಂಶೋಧನಾ ಪದವೀಧರರ ಸ್ವಾಯತ್ತತೆಗೆ ಸಂಬಂಧಿಸಿದ ಸಮಸ್ಯೆಗಳು ವೈಯಕ್ತಿಕ ಮೇಲ್ವಿಚಾರಕರ ನ್ಯೂನತೆಗಳಿಗಿಂತ ರಚನಾತ್ಮಕ ಮತ್ತು ಸಾಂಸ್ಥಿಕ ನಿರ್ಬಂಧಗಳನ್ನು ಸೂಚಿಸುತ್ತವೆ. ಪ್ರತಿಕ್ರಿಯಿಸಿದವರಲ್ಲಿ ಸುಮಾರು ಅರ್ಧದಷ್ಟು ಜನರು ಮೇಲ್ವಿಚಾರಕರ ಆಯ್ಕೆಯ ಬಗ್ಗೆ ಅತೃಪ್ತಿಯನ್ನು ವರದಿ ಮಾಡಿದ್ದಾರೆ, ಇದು ನಂಬಿಕೆ, ಪ್ರೇರಣೆ ಮತ್ತು ದೀರ್ಘಕಾಲೀನ ಒಪ್ಪಂದದ ಮೇಲೆ ಪರಿಣಾಮ ಬೀರುತ್ತದೆ (ಗಾರ್ಡ್ನರ್, 2009).

ಸಂಕ್ಷಿಪ್ತವಾಗಿ ಹೇಳುವುದಾದರೆ, ಸಂಶೋಧನೆಗಳು ದ್ವಂದ್ವ ವಾಸ್ತವವನ್ನು ಬಹಿರಂಗಪಡಿಸುತ್ತವೆ. ಪಿಹೆಚ್.ಡಿ. ಮೇಲ್ವಿಚಾರಕರು ಮೂಲಭೂತ ಶೈಕ್ಷಣಿಕ ಮತ್ತು ಮಾರ್ಗದರ್ಶನ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸುತ್ತಾರೆ ಆದರೆ ಸಂಶೋಧನಾರ್ಥಿಗಳಿಗೆ ಸುಧಾರಿತ ತಾಂತ್ರಿಕ ಮಾರ್ಗದರ್ಶನ, ರಚನಾತ್ಮಕ ಸಂವಹನ ಮತ್ತು ಸ್ವಾಯತ್ತತೆಯನ್ನು ಒದಗಿಸುವಲ್ಲಿ ವಿಫಲರಾಗುತ್ತಾರೆ. ಉದ್ದೇಶಿತ ತರಬೇತಿ, ಹೊಂದಿಕೊಳ್ಳುವ ಮೇಲ್ವಿಚಾರಣಾ ನೀತಿಗಳು ಮತ್ತು ವರ್ಧಿತ ಸಂವಹನದ ಮೂಲಕ ಈ ಅಂತರವನ್ನು ಪರಿಹರಿಸುವುದು ಪಿಹೆಚ್.ಡಿ. ಸಂಶೋಧನೆಯ ಮೇಲ್ವಿಚಾರಣೆಯನ್ನು ಬಲಪಡಿಸಬಹುದು, ಸಂಶೋಧನಾ ಗುಣಮಟ್ಟವನ್ನು ಸುಧಾರಿಸಬಹುದು ಮತ್ತು ಬೆಂಬಲಿತ ಸಂಶೋಧನಾ ವಾತಾವರಣವನ್ನು ಬೆಳೆಸಬಹುದು.

ಅಧ್ಯಯನದ ಪರಿಣಾಮಗಳು

ಈ ಅಧ್ಯಯನದ ಫಲಿತಾಂಶಗಳು ಸಂಸ್ಥಾತ್ಮಕ ನೀತಿಗಳು, ಸಂಶೋಧನಾ ಮಾರ್ಗದರ್ಶನ ಕ್ರಮಗಳು ಹಾಗೂ ಮಾರ್ಗದರ್ಶಕರ ವೃತ್ತಿಪರ ಅಭಿವೃದ್ಧಿಗೆ ಮಹತ್ವದ ದಿಕ್ಕು ತೋರಿಸುತ್ತವೆ. ಪಿಹೆಚ್.ಡಿ ಸಂಶೋಧನೆಯ ಮೇಲ್ವಿಚಾರಣೆಯಲ್ಲಿ ಸಂಬಂಧಾತ್ಮಕ (relational) ಮತ್ತು ತಾಂತ್ರಿಕ (technical) ಎರಡೂ ಆಯಾಮಗಳನ್ನು ಒಳಗೊಂಡ ಸಮಗ್ರ ದೃಷ್ಟಿಕೋನದ ಅಗತ್ಯವಿದೆ ಎಂಬುದನ್ನು ಇವು ಒತ್ತಿಹೇಳುತ್ತವೆ.

1. ಮಾರ್ಗದರ್ಶಕರಿಗೆ ಪರಿಚಯಾತ್ಮಕ ಮತ್ತು ನಿರಂತರ ತರಬೇತಿ

ಅನೇಕ ಮಾರ್ಗದರ್ಶಕರು ಸಮರ್ಪಕ ಶೈಕ್ಷಣಿಕ ಬೆಂಬಲ ನೀಡುತ್ತಿದ್ದರೂ, ಮಾರ್ಗದರ್ಶನ ಕೌಶಲ್ಯಗಳು ಮತ್ತು ಸಂಶೋಧನಾ ನೈತಿಕತೆ ಕುರಿತ ಜ್ಞಾನದಲ್ಲಿ ಇನ್ನೂ ಕೊರತೆಗಳಿವೆ. ಹೊಸ ಮಾರ್ಗದರ್ಶಕರಿಗೆ ಸಂರಚಿತ ಪರಿಚಯ ಕಾರ್ಯಕ್ರಮಗಳು ಮತ್ತು ಅವಧಿಪರ ಮರುತರಬೇತಿ ಕಾರ್ಯಾಗಾರಗಳನ್ನು ವಿಶ್ವವಿದ್ಯಾಲಯಗಳು ಜಾರಿಗೊಳಿಸಬೇಕು.ಇದರಿಂದ ವಿದ್ಯಾರ್ಥಿಗಳ ಭಾವನಾತ್ಮಕ, ಸಾಮಾಜಿಕ ಹಾಗೂ ಬೌದ್ಧಿಕ ಅಗತ್ಯಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ (Lee, 2008; Wisker, 2012).

2. ಉನ್ನತ ಮಟ್ಟದ ವಿಧಾನಶಾಸ್ತ್ರೀಯ ಮತ್ತು ಸಂಖ್ಯಾಶಾಸ್ತ್ರೀಯ ತರಬೇತಿ

ಸಂಶೋಧನಾ ವಿಧಾನಶಾಸ್ತ್ರ, ಸಂಖ್ಯಾಶಾಸ್ತ್ರೀಯ ವಿಶ್ಲೇಷಣೆ ಮತ್ತು ವಿಶೇಷ ಉಪಕರಣಗಳ ಬಳಕೆಯಲ್ಲಿ ಮಾರ್ಗದರ್ಶನದಲ್ಲಿ ಕೊರತೆಗಳು ಕಂಡುಬಂದಿವೆ. ಆಧುನಿಕ ಸಂಶೋಧನಾ ವಿಧಾನಗಳು ಮತ್ತು ವಿಷಯನಿಷ್ಠ ತಂತ್ರಗಳಲ್ಲಿ ವಿಶೇಷ ತರಬೇತಿ ನೀಡುವುದರಿಂದ ಮಾರ್ಗದರ್ಶಕರು ತಜ್ಞಮಟ್ಟದ ಬೆಂಬಲ ನೀಡಲು ಸಾಧ್ಯವಾಗುತ್ತದೆ. ಇದರಿಂದ ಸಂಶೋಧನೆಯ ಗುಣಮಟ್ಟ ಮತ್ತು ಪಿಹೆಚ್.ಡಿ. ಸಂಶೋಧನೆಯನ್ನು ಪೂರ್ಣಗೊಳಿಸುವಿಕೆಯ ಸಮಯಪಾಲನೆ ಸುಧಾರಿಸುತ್ತದೆ (Lovitts, 2001; Manathunga, 2005).

3. ವಿದ್ಯಾರ್ಥಿಗಳ ಸ್ವಾಯತ್ತತೆಯನ್ನು ಉತ್ತೇಜಿಸುವ ವ್ಯವಸ್ಥೆಗಳು

ಮಾರ್ಗದರ್ಶಕರ ಆಯ್ಕೆಯಲ್ಲಿ ಸೀಮಿತ ಸ್ವಾತಂತ್ರ್ಯವು ಪ್ರಮುಖ ಚಿಂತೆಯಾಗಿ ಹೊರಹೊಮ್ಮಿದೆ. ಸಂಶೋಧನಾ ಆಸಕ್ತಿ, ಪರಿಣಿತಿ ಹಾಗೂ ಹೊಂದಾಣಿಕೆ ಆಧಾರಿತ ಪಾರದರ್ಶಕ ನಿಯೋಜನಾ ಕ್ರಮಗಳನ್ನು ಸಂಸ್ಥೆಗಳು ಜಾರಿಗೊಳಿಸಬೇಕು. ಇದರಿಂದ ವಿಶ್ವಾಸ, ಪ್ರೇರಣೆ ಮತ್ತು ಫಲಪ್ರದ ಮಾರ್ಗದರ್ಶಕ-ಸಂಶೋಧನಾರ್ಥಿಗಳ ಸಂಬಂಧಗಳನ್ನು ಅಭಿವೃದ್ಧಿಪಡಿಸಬಹುದು(Gardner, 2009; Kumar & Rao, 2019).

4. ಸಂಸ್ಥಾತ್ಮಕ ಪ್ರತಿಕ್ರಿಯಾ ವ್ಯವಸ್ಥೆಗಳು

ಮಾರ್ಗದರ್ಶನದಲ್ಲಿ ಕಂಡುಬರುವ ವೈವಿಧ್ಯತೆ ರಚನಾತ್ಮಕ ಪ್ರತಿಕ್ರಿಯಾ ವ್ಯವಸ್ಥೆಗಳ ಅಗತ್ಯವನ್ನು ಸೂಚಿಸುತ್ತದೆ. ನಿಯಮಿತ ಮೌಲ್ಯಮಾಪನಗಳ ಮೂಲಕ ಸಂಶೋಧನಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಿದರೆ, ಕೊರತೆಗಳನ್ನು ಗುರುತಿಸಲು, ಉತ್ತಮ ಮಾರ್ಗದರ್ಶನವನ್ನು ಗುರುತಿಸಿ ಪ್ರಶಂಸಿಸಲು ಮತ್ತು ಮಾರ್ಗದರ್ಶಕರ ವೃತ್ತಿಪರ ಅಭಿವೃದ್ಧಿಗೆ ದಾರಿಯಿಡಲು ಸಾಧ್ಯವಾಗುತ್ತದೆ (Phillips & Pugh, 2015; Sambrook, Stewart, & Roberts, 2008).

5. ನಿಯಮಿತ ಶೈಕ್ಷಣಿಕ ಸಂವಹನ

ಮಾರ್ಗದರ್ಶಕರ ಮತ್ತು ಸಂಶೋಧನಾರ್ಥಿಗಳ ನಡುವೆ ನಿಯಮಿತ ಹಾಗೂ ಸಂರಚಿತ ಸಂವಹನ ಅತ್ಯಂತ ಮಹತ್ವದ್ದಾಗಿದೆ. ವಿಶ್ವವಿದ್ಯಾಲಯಗಳು ನಿಯಮಿತ ಸಭೆಗಳು, ಕಾರ್ಯಾಗಾರಗಳು ಮತ್ತು ಸಂಶೋಧನಾ ಚರ್ಚಾ ವೇದಿಕೆಗಳನ್ನು ಆಯೋಜಿಸುವ ಮೂಲಕ ಸಂಶೋಧನಾ ಪ್ರಗತಿಯನ್ನು ನಿರಂತರವಾಗಿರಿಸಬಹುದು ಮತ್ತು ಅಗತ್ಯ ಕೌಶಲ್ಯಗಳನ್ನು ಬೆಳೆಸಬಹುದು (McAlpine & Amundsen, 2011).

6. ಸಂಶೋಧನಾ ಫಲಿತಾಂಶಗಳನ್ನು ಸುಧಾರಿಸಲು ಮೇಲ್ವಿಚಾರಣಾ ಕ್ರಮಗಳನ್ನು ಬಲಪಡಿಸುವುದು

ಉನ್ನತ ಮಟ್ಟದ ಮಾರ್ಗದರ್ಶನವು ಪಿಹೆಚ್.ಡಿ. ಸಂಶೋಧನೆಯನ್ನು ಪೂರ್ಣಗೊಳಿಸುವಿಕೆಯ ಪ್ರಮಾಣ, ಸಂಶೋಧನಾ ಉತ್ಪಾದಕತೆ ಮತ್ತು ಶೈಕ್ಷಣಿಕ ಆತ್ಮವಿಶ್ವಾಸದ ಮೇಲೆ ನೇರ ಪರಿಣಾಮ ಬೀರುತ್ತದೆ (Lovitts, 2001; Gardner, 2009). ನೈತಿಕ ಮಾರ್ಗದರ್ಶನ, ತಾಂತ್ರಿಕ ಬೆಂಬಲ ಮತ್ತು ಸಂರಚಿತ ಸಹಾಯವನ್ನು ಸಂಯೋಜಿಸುವ ಮೂಲಕ ಸಹಾಯಕ ಸಂಶೋಧನಾ ವಾತಾವರಣವನ್ನು ನಿರ್ಮಿಸಬಹುದು.

7. ರಾಷ್ಟ್ರೀಯ ಉನ್ನತ ಶಿಕ್ಷಣ ನೀತಿಗೆ ಸಂಬಂಧಿಸಿದ ಪರಿಣಾಮಗಳು

ಈ ಅಧ್ಯಯನದ ಸಾಕ್ಷ್ಯಾಧಾರಿತ ಫಲಿತಾಂಶಗಳು ಮಾರ್ಗದರ್ಶಕರ ಅರ್ಹತೆ, ಕಡ್ಡಾಯ ತರಬೇತಿ ಮತ್ತು ಮೇಲ್ವಿಚಾರಣಾ ಕ್ರಮಗಳ ಕುರಿತ ರಾಷ್ಟ್ರೀಯ ಮಾರ್ಗಸೂಚಿಗಳನ್ನು ರೂಪಿಸಲು ಸಹಕಾರಿ ಆಗಬಹುದು. ಇದರಿಂದ ಭಾರತೀಯ ಉನ್ನತ ಶಿಕ್ಷಣದಲ್ಲಿ ಮಾರ್ಗದರ್ಶನದ ಮಾನದಂಡಗಳನ್ನು ಏಕರೂಪಗೊಳಿಸಿ ಹೊಣೆಗಾರಿಕೆಯನ್ನು ಹೆಚ್ಚಿಸಬಹುದು (UGC, 2016; NEP, 2020).

ISSN : 2249-2429 ಸಂಶೋಧನೆ RNI REG.NO.KARKAN/2011/38712

8. ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿ

ಪ್ರಭಾವಶೀಲ ಮಾರ್ಗದರ್ಶನವು ಶೈಕ್ಷಣಿಕ ನೆರವು, ನೈತಿಕ ಮಾರ್ಗದರ್ಶನ ಮತ್ತು ಮಾನಸಿಕ–ಸಾಮಾಜಿಕ ಬೆಂಬಲವನ್ನು ಏಕೀಕರಿಸಬೇಕು. ಈ ಸಮಗ್ರ ದೃಷ್ಟಿಕೋನವನ್ನು ಬಲಪಡಿಸುವುದರಿಂದ ಅಧ್ಯಯನ ತೊರೆಯುವಿಕೆ ಕಡಿಮೆಯಾಗಬಹುದು, ಮಾನಸಿಕ ಕಲ್ಯಾಣ ಸುಧಾರಿಸಬಹುದು ಮತ್ತು ವೃತ್ತಿಪರ ಗುರುತು ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ (Lee, 2008; Wisker et al., 2007).

ಒಟ್ಟಾರೆ, ಈ ಪರಿಣಾಮಗಳು ಪಿಹೆಚ್.ಡಿ ಸಂಶೋಧನಾ ಮಾರ್ಗದರ್ಶನವನ್ನು ಸುಧಾರಿಸಲು ಸಾಕ್ಷ್ಯಾಧಾರಿತ, ವ್ಯವಸ್ಥಿತ ಮತ್ತು ಸಮಗ್ರ ಕಾರ್ಯತಂತ್ರಗಳನ್ನು ಅನುಸರಿಸುವ ಅಗತ್ಯವಿದೆ ಎಂಬುದನ್ನು ಒತ್ತಿಹೇಳುತ್ತವೆ. ಇದರಿಂದ ವೈಯಕ್ತಿಕ ವಿದ್ಯಾರ್ಥಿಗಳ ಯಶಸ್ಸು ಹಾಗೂ ಸಂಸ್ಥಾತ್ಮಕ ಸಂಶೋಧನಾ ಮೇಲುಗೈ ಎರಡನ್ನೂ ಉತ್ತೇಜಿಸಬಹುದು.

ಉಪಸಂಹಾರ

ಒಟ್ಟಾರೆ, ಈ ಅಧ್ಯಯನದಲ್ಲಿನ ಪಿಹೆಚ್.ಡಿ. ಸಂಶೋಧನಾ ಪದವೀಧರರು ತಮ್ಮ ಸಂಶೋಧನಾ ಮಾರ್ಗದರ್ಶಕರ ಕುರಿತು ಮಧ್ಯಮದಿಂದ ಧನಾತ್ಮಕ ಮಟ್ಟದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಶೈಕ್ಷಣಿಕ ಹಾಗೂ ಮಾರ್ಗದರ್ಶನ ಸಂಬಂಧಿತ ಮೂಲಭೂತ ನಿರೀಕ್ಷೆಗಳು ಸಾಮಾನ್ಯವಾಗಿ ಪೂರೈಸಲ್ಪಡುತ್ತಿವೆ ಎಂಬುದು ಸ್ಪಷ್ಟವಾಗುತ್ತದೆ. ಪ್ರಕಟಣೆಗಳಿಗೆ ಪ್ರೋತ್ಸಾಹ, ಸಂಶೋಧನಾ ಸಮಸ್ಯೆಗಳ ಪರಿಹಾರದಲ್ಲಿ ಬೆಂಬಲ ಹಾಗೂ ಮಾರ್ಗದರ್ಶಕರ ಒಟ್ಟಾರೆ ಸಾಮರ್ಥ್ಯದ ಕುರಿತು ಸಂಶೋಧನಾ ಪದವೀಧರರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇದು ಸಂಶೋಧನಾರ್ಥಿಗಳ ತೊಡಗಿಸಿಕೊಳ್ಳುವಿಕೆಯನ್ನು ನಿರಂತರವಾಗಿರಿಸಿ, ಸಂಶೋಧನಾ ಪ್ರಗತಿಗೆ ಮಾರ್ಗದರ್ಶಕರು ನೀಡುವ ನಿರ್ಮಾಣಾತ್ಮಕ ಪಾತ್ರವನ್ನು ಪ್ರತಿಬಿಂಬಿಸುತ್ತದೆ. (Lovitts, 2001; Lee, 2008).

ಆದಾಗ್ಯೂ, ಗಣನೀಯ ಸಂಖ್ಯೆಯ ಸಂಶೋಧನಾ ಪದವೀಧರರು ಅಸಮಾಧಾನವನ್ನೂ ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ, ಮಾರ್ಗದರ್ಶಕರ ಆಯ್ಕೆಯಲ್ಲಿ ಸೀಮಿತ ಸ್ವಾಯತ್ತತೆ, ಉನ್ನತ ಮಟ್ಟದ ವಿಧಾನಶಾಸ್ತ್ರೀಯ ಮಾರ್ಗದರ್ಶನದ ಕೊರತೆ ಹಾಗೂ ಅಸಮರ್ಪಕ ಅಥವಾ ಅಸಂಗತ ಶೈಕ್ಷಣಿಕ ಸಂವಹನ ಪ್ರಮುಖ ಸಮಸ್ಯೆಗಳಾಗಿ ಕಾಣಿಸಿಕೊಂಡಿವೆ. ಇಂತಹ ಕೊರತೆಗಳು ಸಂಶೋಧನೆಯ ಗುಣಮಟ್ಟವನ್ನು ಕುಗ್ಗಿಸುವುದರ ಜೊತೆಗೆ ಪದವಿ ಪೂರ್ಣಗೊಳಿಸುವಿಕೆಯಲ್ಲಿ ವಿಳಂಬ ಉಂಟುಮಾಡಿ, ವೃತ್ತಿಪರ ಅಭಿವೃದ್ಧಿಗೆ ಅಡ್ಡಿಯಾಗಬಹುದು. ಹಿಂದಿನ ಅಧ್ಯಯನಗಳೂ ಸಹ ಅಸಮಾನ ಮೇಲ್ವಿಚಾರಣೆಯಿಂದ ಒತ್ತಡ, ಪ್ರೇರಣೆಯ ಕುಸಿತ ಮತ್ತು ಪಿಹೆಚ್.ಡಿ ಸಂಶೋಧನಾರ್ಥಿಗಳ ಅಧ್ಯಯನ ತೊರೆಯುವಿಕೆಯು ಸಂಭವಿಸಬಹುದು ಎಂದು ಸೂಚಿಸಿವೆ (Gardner, 2009; Phillips & Pugh, 2015).

ಈ ಅಧ್ಯಯನವು ಪಿಹೆಚ್.ಡಿ. ಮೇಲ್ವಿಚಾರಣೆಯಲ್ಲಿ ವ್ಯವಸ್ಥಿತ ಸುಧಾರಣೆಯ ಅಗತ್ಯವಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಮಾರ್ಗದರ್ಶಕರ ವಿಧಾನಶಾಸ್ತ್ರೀಯ ಮತ್ತು ಸಂಖ್ಯಾಶಾಸ್ತ್ರೀಯ ಪರಿಣಿತಿಯನ್ನು ವೃದ್ಧಿಸುವುದು, ಸಂಶೋಧನಾರ್ಥಿಗಳ ಸ್ವಾಯತ್ತತೆಯನ್ನು ಉತ್ತೇಜಿಸುವುದು ಹಾಗೂ ನಿಯಮಿತ ಮತ್ತು ಪರಿಣಾಮಕಾರಿ ಸಂವಹನವನ್ನು ಬಲಪಡಿಸುವುದು ಸಂಶೋಧನಾ ಫಲಿತಾಂಶಗಳನ್ನೂ ಒಟ್ಟಾರೆ ಪಿಹೆಚ್.ಡಿ. ಅನುಭವವನ್ನೂ ಸುಧಾರಿಸಬಹುದು. ವಿಶ್ವವಿದ್ಯಾಲಯ ಅನುದಾನ ಆಯೋಗದ ಚೌಕಟ್ಟಿನಡಿ ಸಂಸ್ಥೆಗಳು ಮೇಲ್ವಿಚಾರಣೆಯ ಗುಣಮಟ್ಟದ ಭದ್ರತೆಗೆ ಆದ್ಯತೆ ನೀಡಿ, ಹೊಣೆಗಾರಿಕೆ ಮತ್ತು ನಿರಂತರ ಸುಧಾರಣೆಯನ್ನು ಖಚಿತಪಡಿಸುವ ಸಂರಚಿತ ಪ್ರತಿಕ್ರಿಯಾ ವ್ಯವಸ್ಥೆಗಳನ್ನು ಜಾರಿಗೆ ತರಬೇಕು.

ಈ ಅಂಶಗಳನ್ನು ಸಮರ್ಪಕವಾಗಿ ಗಮನಿಸಿದರೆ, ವಿಶ್ವವಿದ್ಯಾಲಯಗಳು ಸಹಾಯಕ ಮತ್ತು ಉನ್ನತ ಗುಣಮಟ್ಟದ ಪಿಹೆಚ್.ಡಿ ಸಂಶೋಧನಾ ವಾತಾವರಣವನ್ನು ನಿರ್ಮಿಸಿ, ಬಲಿಷ್ಠ ರಾಷ್ಟ್ರೀಯ ಸಂಶೋಧನಾ ಸಂಸ್ಕೃತಿಯ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಬಹುದು.

ಪರಾಮರ್ಶನ ಗ್ರಂಥಗಳು

- **Deem R., & Brehony K. J. (2000) :** Doctoral students' access to research cultures - Are some more unequal than others? *Studies in Higher Education, 25*(2), 149–165.
- **Gardner S. K. (2009) :** The development of doctoral students: Phases of challenge and support. *ASHE Higher Education Report, 34*(6), 1–127.
- **Golde C. M. (2005) :** The role of the department and discipline in doctoral student attrition. *Journal of Higher Education, 76*(6), 669–700.
- **Lee A. (2008) :** How are doctoral students supervised? Concepts of doctoral research supervision. *Studies in Higher Education, 33*(3), 267–281.
- **Lovitts B. E. (2001) :** *Leaving the ivory tower: The causes and consequences of departure from doctoral study*. Rowman & Littlefield.
- **Lovitts B. E. (2005) :** Being a good cours taker is not enough: A theoretical perspective on the transition to independent research. *Studies in Higher Education, 30* (2), 137–154.
- **Manathunga C. (2005) :** Early warning signs in postgraduate research education: A different approach to ensuring timely completions. *Teaching in Higher Education, 10*(2), 219–233.
- **McAlpine L., & Amundsen C. (2011) :** Making meaning of diverse experiences: Constructing an identity through time. *Teaching in Higher Education, 16*(6), 683–694.
- **Pearson M., Evans T., & Macauley P. (2011) :** *The doctorate of the future*. Sense Publishers.
- **Phillips E. M., & Pugh D. S. (2015) :** *How to get a PhD: A handbook for students and their supervisors* (6th ed.). Open University Press.
- **Sambrook S., Stewart J., & Roberts C. (2008) :** Doctoral supervision… a view from above, below and the middle! *Journal of Further and Higher Education, 32*(1), 71–84.
- **University Grants Commission (2022) :** *UGC regulations for Ph.D. programmes*. New Delhi: Author.
- **National Education Policy 2020 (2020) :** *National education policy 2020*. Ministry of Education, Government of India.
- **Kumar V., & Rao D. B. (2019) :** Research supervision in Indian universities: Issues and challenges. *International Journal of Educational Research, 8*(3), 45–54.
- **Singh A., & Sharma R. (2021) :** Doctoral supervision and research outcomes: Evidence from Indian higher education institutions. *Journal of Higher Education Policy and Management, 43*(4), 421–435.

■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ರೂಬಲ್ ನಾಗಿ
(ROUBLE NAGI)

✍ ಡಾ. ಗೀತಾ ಕೊಣ್ಣೂರ, ಸಹಶಿಕ್ಷಕಿ, ಕರ್ನಾಟಕ ಪಬ್ಲಿಕ್ ಸ್ಕೂಲ್, ಕಾರಟಗಿ

ರೂಬಲ್ ನಾಗಿ (ಜನನ : ಜುಲೈ 8, 1980) ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಂಸಿಸಲ್ಪಟ್ಟ ಭಾರತದ ಪ್ರಖ್ಯಾತ ಕಲಾಕಾರರು, ಶಿಲ್ಪಕಲಾವಿದೆ, ಸಾಮಾಜಿಕ ಕಾರ್ಯಕರ್ತೆ ಮತ್ತು ಶಿಕ್ಷಣ ತಜ್ಞೆಯಾಗಿದ್ದಾರೆ. ಭಾರತದ ಅತ್ಯಂತ ಹಿಂದುಳಿದ ಮತ್ತು ಬಡ ಸಮುದಾಯಗಳಲ್ಲಿನ ಶೈಕ್ಷಣಿಕ ಕೊರತೆಯನ್ನು ನೀಗಿಸಲು ಕಲೆಯನ್ನು (Art) ಒಂದು ಪ್ರಮುಖ ಮಾಧ್ಯಮವಾಗಿ ಬಳಸಿಕೊಳ್ಳುವ ಮೂಲಕ ಇವರು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದಾರೆ.

ಆರಂಭಿಕ ಜೀವನ : ಜಮ್ಮು ಮತ್ತು ಕಾಶ್ಮೀರದಲ್ಲಿ ಜನಿಸಿದ ಇವರು, ನಂತರ ತಮ್ಮ ಪ್ರಮುಖ ಸಾಮಾಜಿಕ ಮತ್ತು ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ಮುಂಬೈ ಅನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡರು. ಶಿಕ್ಷಣ– ಇವರು ಲಂಡನ್‌ನ ಪ್ರತಿಷ್ಠಿತ **'ಸ್ಲೇಡ್ ಸ್ಕೂಲ್ ಆಫ್ ಫೈನ್ ಆರ್ಟ್'** (Slade School of Fine Art) ಸಂಸ್ಥೆಯಲ್ಲಿ ಲಲಿತಕಲೆ (Fine Arts) ಅಭ್ಯಾಸ ಮಾಡಿದರು.ಇವರು ಬರೆದ **'ದಿ ಸ್ಲಮ್ ಕ್ವೀನ್'** (The Slum Queen - 2022) ಎಂಬ ಪುಸ್ತಕವು ಭಾರತದ ಕೊಳೆಗೇರಿಗಳು ಮತ್ತು ಹಳ್ಳಿಗಳಲ್ಲಿ ಅವರು ನಡೆಸಿದ ಸುದೀರ್ಘ ಮತ್ತು ಸ್ಫೂರ್ತಿದಾಯಕ ಸಾಮಾಜಿಕ ಹೋರಾಟದ ಕಥೆಯನ್ನು ದಾಖಲಿಸಿದೆ. ಸಾಮಾಜಿಕ ಶಿಕ್ಷಣ ಕ್ಷೇತ್ರಕ್ಕೆ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಮುನ್ನ, ಇವರು ಕಲಾ ಜಗತ್ತಿನಲ್ಲಿ ದೊಡ್ಡ ಹೆಸರು ಮಾಡಿದ್ದರು. **ಭಿತ್ತಿಚಿತ್ರಗಳು (Murals)** ಇವರು ದೇಶ–ವಿದೇಶಗಳಲ್ಲಿ 800 ಕ್ಕೂ ಹೆಚ್ಚು ದೊಡ್ಡ ಪ್ರಮಾಣದ ಸಾರ್ವಜನಿಕ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ ಮತ್ತು 150 ಕ್ಕೂ ಹೆಚ್ಚು ಕಲಾ ಪ್ರದರ್ಶನಗಳನ್ನು ನಡೆಸಿದ್ದಾರೆ.

ಶೈಕ್ಷಣಿಕ ಮತ್ತು ಸಾಮಾಜಿಕ ಪ್ರಭಾವ (RNAF) ಇವರು ತಮ್ಮ 'ರೂಬಲ್ ನಾಗಿ ಆರ್ಟ್ ಫೌಂಡೇಶನ್' (RNAF) ಎಂಬ ಸ್ವಯಂಸೇವಾ ಸಂಸ್ಥೆಯ ಮೂಲಕ ದೇಶದಲ್ಲಿ ಸುಸ್ಥಿರ ಮತ್ತು ಗುಣಮಟ್ಟದ ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದಾರೆ. ಲಿವಿಂಗ್ ವಾಲ್ಸ್ ಆಫ್ ಲರ್ನಿಂಗ್ (Living Walls of Learning) : ಕೊಳೆಗೇರಿ ಮತ್ತು ಹಳ್ಳಿಗಳ ರಸ್ತೆ ಬದಿಯ ಗೋಡೆಗಳನ್ನು ತೆರೆದ ತರಗತಿ ಕೋಣೆಗಳನ್ನಾಗಿ ಪರಿವರ್ತಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಗೋಡೆಗಳ ಮೇಲೆ ಸುಂದರವಾದ ಚಿತ್ರಗಳನ್ನು ಬಿಡಿಸುವ ಮೂಲಕ ಮಕ್ಕಳಿಗೆ ಗಣಿತ, ವಿಜ್ಞಾನ, ಭಾಷೆ, ಪರಿಸರ ಮತ್ತು ಸಾರ್ವಜನಿಕ ಆರೋಗ್ಯದ ಪಾಠಗಳನ್ನು ಆಟದ ಮಾದರಿಯಲ್ಲಿ ಕಲಿಸಲಾಗುತ್ತದೆ. 800 + ಕಲಿಕಾ ಕೇಂದ್ರಗಳು : ಇವರ ಫೌಂಡೇಶನ್ ಭಾರತದಾದ್ಯಂತ 100 ಕ್ಕೂ ಹೆಚ್ಚು ಕೊಳೆಗೇರಿ ಮತ್ತು ಹಳ್ಳಿಗಳಲ್ಲಿ 800ಕ್ಕೂ ಹೆಚ್ಚು ಸಮುದಾಯ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಿದೆ. ಈ ಮೂಲಕ ಈವರೆಗೆ ಶಾಲೆಗೇ ಹೋಗದ 10 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡಿ, ನಂತರ ಅವರನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಲಾಗಿದೆ. ಶಾಲಾ ಡ್ರಾಪ್–ಔಟ್ ಇಳಿಕೆ : ಇವರ ಈ ಸೃಜನಶೀಲ ಶಿಕ್ಷಣ ಪದ್ಧತಿಯಿಂದಾಗಿ, ಇವರು ಕಾರ್ಯನಿರ್ವಹಿಸುವ ಪ್ರದೇಶಗಳಲ್ಲಿ ಶಾಲೆಯನ್ನು ಅರ್ಧಕ್ಕೆ ಬಿಡುವ ಮಕ್ಕಳ (Drop-out) ಪ್ರಮಾಣ ಶೇಕಡಾ 50 ಕ್ಕಿಂತಲೂ ಹೆಚ್ಚು ಕಡಿಮೆಯಾಗಿದೆ

ಮಿಸಾಲ್ ಮುಂಬೈ / ಮಿಸಾಲ್ ಇಂಡಿಯಾ (Misaal India) : ಇದು ಕಲೆಯ ಮೂಲಕ ಕೊಳೆಗೇರಿಗಳನ್ನು ಬದಲಾಯಿಸುವ ಭಾರತದ ಅತಿ ದೊಡ್ಡ ಅಭಿಯಾನವಾಗಿದೆ. ಇದರ ಅಡಿಯಲ್ಲಿ ದೇಶದ 1,55,000 ಕ್ಕೂ ಹೆಚ್ಚು ಮನೆಗಳಿಗೆ ಜಲನಿರೋಧಕ (Water proofing) ವ್ಯವಸ್ಥೆ ಕಲ್ಪಿಸಿ, ಸುಂದರ ಬಣ್ಣಗಳನ್ನು ಹಚ್ಚಿ ನವೀಕರಿಸಲಾಗಿದೆ. ಇದು ಕೇವಲ ಬಣ್ಣ ಹಚ್ಚುವುದಲ್ಲದೆ, ಕೊಳೆಗೇರಿ ಜನರ ಮನಸ್ಥಿತಿಯನ್ನು ಸ್ವಚ್ಛತೆ ಮತ್ತು ಶಿಕ್ಷಣದ ಕಡೆಗೆ ಬದಲಾಯಿಸಿದೆ.

ರೀಡ್ ಆಂಡ್ ರೈಟ್ ಇಂಡಿಯಾ (Read & Write India) : ಈ ಯೋಜನೆಯಡಿ ಬಡ ಮಕ್ಕಳಿಗೆ ಇ–ಲರ್ನಿಂಗ್ ಸೌಲಭ್ಯಗಳು, ಡಿಜಿಟಲ್ ಪುಸ್ತಕಗಳು ಮತ್ತು ಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ. ಗಡಿ ಗ್ರಾಮಗಳು ಮತ್ತು ಮದರಸಾ ಡಿಜಿಟಲೀಕರಣ: ಜಮ್ಮು–ಕಾಶ್ಮೀರದ ಗಡಿ ನಿಯಂತ್ರಣ ರೇಖೆಯ (LoC) ಸಮೀಪವಿರುವ ಪುಲ್ವಾಮಾ, ತಂಗ್‌ಧರ್ ಮತ್ತು ಕುಪ್ವಾರಾದಂತಹ ಅತ್ಯಂತ ದುರ್ಗಮ ಮತ್ತು ಸಂಘರ್ಷ ಪೀಡಿತ ಪ್ರದೇಶಗಳ ಮದರಸಾಗಳಲ್ಲಿ ಇವರು ಕಂಪ್ಯೂಟರ್ ಸಾಕ್ಷರತೆಗಾಗಿ ಡಿಜಿಟಲ್ ಕ್ಲಾಸ್‌ರೂಮ್‌ಗಳನ್ನು ಸ್ಥಾಪಿಸಿದ್ದಾರೆ.ಮಹಿಳಾ ಸಬಲೀಕರಣ : ಇವರ ಸಂಸ್ಥೆಯು ಬಡ ಮಹಿಳೆಯರಿಗಾಗಿ ಹೊಲಿಗೆ, ಕರಕುಶಲ ಕಲೆ ಮುಂತಾದ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ನಡೆಸುತ್ತಿದ್ದು, ಸಾವಿರಾರು ಮಹಿಳೆಯರು ಸ್ವಾವಲಂಬಿ ಗಳಾಗಲು ಸಹಾಯ ಮಾಡಿದೆ.

ಇವರ ಈ ಅಪ್ರತಿಮ ಸಾಧನೆಗಾಗಿ ಫೆಬ್ರವರಿ 2026 ರಲ್ಲಿ ದುಬೈನಲ್ಲಿ ನಡೆದ ವಿಶ್ವ ಸರ್ಕಾರಗಳ ಶೃಂಗಸಭೆಯಲ್ಲಿ ಇವರಿಗೆ ಶಿಕ್ಷಣ ಕ್ಷೇತ್ರದ ಅತ್ಯುನ್ನತ $ 1 ಮಿಲಿಯನ್ (ಸುಮಾರು 8.3 ಕೋಟಿ ರೂ.) ಮೊತ್ತದ **"ಗ್ಲೋಬಲ್ ಟೀಚರ್ ಪ್ರೈಸ್ 2026" (ಜಾಗತಿಕ ಶಿಕ್ಷಕ ಪ್ರಶಸ್ತಿ) ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿಯನ್ನು ಶಿಕ್ಷಣ ಕ್ಷೇತ್ರದ 'ನೋಬೆಲ್ ಪ್ರಶಸ್ತಿ'** ಎಂದೇ ಪರಿಗಣಿಸಲಾಗುತ್ತದೆ. 2026 ರ ಗ್ಲೋಬಲ್ ಟೀಚರ್ ಪ್ರಶಸ್ತಿಗಾಗಿ ವಿಶ್ವದ 139 ದೇಶಗಳಿಂದ 5,000 ಕ್ಕೂ ಹೆಚ್ಚು ನಾಮನಿರ್ದೇಶನಗಳು ಬಂದಿದ್ದವು. ಅದರಲ್ಲಿ ಅತ್ಯುತ್ತಮ ಸಾಧನೆಗಾಗಿ ರೂಬಲ್ ನಾಗಿ ಅವರನ್ನು ವಿಜೇತರನ್ನಾಗಿ ಆಯ್ಕೆ ಮಾಡಲಾಯಿತು. ತಮ್ಮ ಜನಸೇವಾ ಮನೋಭಾವವನ್ನು ಮುಂದುವರಿಸಿರುವ ರೂಬಲ್ ನಾಗಿ ಅವರು, ತಮಗೆ ಪ್ರಶಸ್ತಿಯ ರೂಪದಲ್ಲಿ ಬಂದ ಸಂಪೂರ್ಣ $ 1 ಮಿಲಿಯನ್ (ಸುಮಾರು 8.3 ಕೋಟಿ ರೂ.) ಹಣವನ್ನು ಭಾರತದಾದ್ಯಂತ ಇರುವ ಬಡ ಯುವಕ–ಯುವತಿಯರಿಗೆ ಉಚಿತ ತಾಂತ್ರಿಕ ಮತ್ತು ವೃತ್ತಿಪರ ತರಬೇತಿ ನೀಡುವ 'ಉಚಿತ ಡಿಜಿಟಲ್ ತರಬೇತಿ ಸಂಸ್ಥೆ' (Free Vocational Digital Training Institute) ಸ್ಥಾಪಿಸಲು ಬಳಸುವುದಾಗಿ ಘೋಷಿಸಿದ್ದಾರೆ.

ರೂಬಲ್ ನಾಗಿ ಅವರ 'ಮಿಸಾಲ್ ಇಂಡಿಯಾ' (Misaal India)

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಮತ್ತು ಶಿಕ್ಷಣ ಯೋಜನೆಗಳು ಪ್ರಸ್ತುತ ಭಾರತದ 16 ಕ್ಕೂ ಹೆಚ್ಚು ರಾಜ್ಯಗಳಲ್ಲಿ ವಿಸ್ತರಿಸಲ್ಪಟ್ಟಿವೆ. ಕರ್ನಾಟಕದಲ್ಲಿ ಇವರ ಯೋಜನೆಗಳ ನೇರ ಅನುಷ್ಠಾನದತ್ತ ಗಮನಹರಿಸಿದೆ. ರೂಬಲ್ ನಾಗಿ ಆರ್ಟ್ ಫೌಂಡೇಶನ್ (RNAF) ದಕ್ಷಿಣದ ಪ್ರಮುಖ ಮಹಾನಗರಗಳಾದ ಬೆಂಗಳೂರು ಸೇರಿದಂತೆ ಕರ್ನಾಟಕದ ಇತರ ಹಿಂದುಳಿದ ಗ್ರಾಮೀಣ ಮತ್ತು ಕೊಳೆಗೇರಿ ಪ್ರದೇಶಗಳಲ್ಲಿಯೂ ಭಿತ್ತಿಚಿತ್ರಗಳ ಮೂಲಕ ಮುಕ್ತ ಕಲಿಕಾ ಕೇಂದ್ರಗಳನ್ನು (Living Walls of Learning) ತೆರೆಯಲು ಯೋಜಿಸುತ್ತಿದೆ.

ಉಪಸಂಹಾರ : ತಮ್ಮ ಕಲಾಕೃತಿಗಳನ್ನು ಕೇವಲ ಶ್ರೀಮಂತರ ಕಲಾ ಪ್ರದರ್ಶನಾಲಯಗಳಿಗೆ (Galleries) ಸೀಮಿತಗೊಳಿಸದೆ, ದೇಶದ ಸಾರ್ವಜನಿಕರ ಏಳಿಗೆಗೆ ಮತ್ತು ಬಡ ಮಕ್ಕಳ ಶಿಕ್ಷಣಕ್ಕೆ ಬಳಸಲು ನಿರ್ಧರಿಸಿದರು. ಮಿಸಾಲ್ ಇಂಡಿಯಾ ಜನಪ್ರಿಯಗೊಳಿಸಿದ ಕಲೆ ಆಧಾರಿತ ಅನುಭವ ಕಲಿಕೆಯ ಪರಿಕಲ್ಪನೆಯನ್ನು ಕರ್ನಾಟಕದಾದ್ಯಂತ ಸ್ಥಳೀಯವಾಗಿ ಅಳವಡಿಸಿಕೊಳ್ಳಲಾಗಿದೆ: ನಮ್ಮ ಶಾಲಾ, ನನ್ನ ಕೊಡುಗೆಯ ಮೂಲಕ ವಿವಿಧ ರಾಜ್ಯ ಸರ್ಕಾರ–ಚಾಲಿತ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಅಡಿಯಲ್ಲಿ, ಕರ್ನಾಟಕದ ಸ್ಥಳೀಯ ಎನ್‌ಜಿಒಗಳು ಮತ್ತು ಕಾರ್ಪೊರೇಟ್ ಸಿಎಸ್‌ಆರ್ ಘಟಕಗಳು **"ಸಂವಾದಾತ್ಮಕ ಭಿತ್ತಿಚಿತ್ರ"** ಪರಿಕಲ್ಪನೆಯನ್ನು ಪುನರಾವರ್ತಿಸಿವೆ. ರಾಮನಗರ, ತುಮಕೂರು ಮತ್ತು ಮೈಸೂರಿನಂತಹ ಜಿಲ್ಲೆಗಳಲ್ಲಿರುವ ನೂರಾರು ಗ್ರಾಮೀಣ ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳ ಧಾರಣವನ್ನು ಹೆಚ್ಚಿಸಲು ತಮ್ಮ ಕಾಂಪೌಂಡ್ ಗೋಡೆಗಳನ್ನು ಕನ್ನಡ ಜಾನಪದ, ಗಣಿತದ ಆಕಾರಗಳು ಮತ್ತು ವಿಜ್ಞಾನ ರೇಖಾಚಿತ್ರಗಳಿಂದ ಚಿತ್ರಿಸಿವೆ. ಸ್ಥಳೀಯ ಎನ್‌ಜಿಒ ಸಹಾಯ ಸಹಕಾರದ ಮೂಲಕ ಬೆಂಗಳೂರಿನ ನಗರ ಕೊಳೆಗೇರಿಗಳಲ್ಲಿ ಕೆಲಸ ಮಾಡುವ ಸಂಸ್ಥೆಗಳು ಡ್ರಾಪ್ ಔಟ್ ಆಗಿರುವ ಯುವಕರನ್ನು ತೊಡಗಿಸಿಕೊಳ್ಳಲು ಇದೇ ರೀತಿಯ ಕಲಾ ಶಿಬಿರಗಳನ್ನು ಬಳಸಿಕೊಳ್ಳುತ್ತಿವೆ. ಈ ಅಂಶಗಳು ಅವರನ್ನು ಸರ್ಕಾರಿ ಶಾಲೆಗಳಿಗೆ ಹಿಂತಿರುಗಿಸುವ ಮೊದಲು ಅವರ ನಡುವಿನ ಅಂತರವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತವೆ.

■■

– 64ನೇ ಪುಟದಿಂದ ಮುಂದುವರೆದುದು

5. ಅದೇ, ಪುಟ 51
6. ಡಿವಿಜಿ ಕೃತಿಶ್ರೇಣಿ ಸಂಪುಟ–3 ನಾಟಕ ಪುಟ 67–68
7. ಅದೇ ಪುಟ 70–71
8. ಅದೇ ಪುಟ. 83–84
9. 1. ವಿದ್ಯಾರಣ್ಯರ ಕಾಲ ಮತ್ತು ಜೀವಿತ ವಿವರಗಳು. 2. ವಿದ್ಯಾರಣ್ಯರ ಸಮಕಾಲೀನರು. 3. ಪರಿಶಿಷ್ಟ ವಿಚಾರಗಳು.
10. ಡಿವಿಜಿ ಕೃತಿಶ್ರೇಣಿ ಸಂಪುಟ–3 ನಾಟಕ ಪುಟ 334
11. ಲೋಕಜ್ಞಾನ ಪುಟ 60

ಪರಾಮರ್ಶನ ಗ್ರಂಥಗಳು

- **ರಾಘವೇಂದ್ರ ರಾವ್ ಕೆ. ಕನ್ನಡಕ್ಕೆ : ಆರ್ಯ, (2005) :** ಕರ್ನಾಟಕ ಏಕೀಕರಣದ ನಾಲ್ವರು ಚಿಂತಕರು, ಧಾರವಾಡ ಮನೋಹರ ಗ್ರಂಥ ಮಾಲಾ.
- **ಸಂ. ನಾಯಕ. ಹಾ.ಮಾ. (2010) :** ಡಿವಿಜಿ ಕೃತಿಶ್ರೇಣಿ ಸಂಪುಟ–3 ನಾಟಕ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- **ಡಿ. ವಿ. ಜಿ. (2021) :** ಪ್ರಹಸನತ್ರಯೀ ಮೂರು ಹಾಸ್ಯ ಪ್ರಕರಣಗಳು, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ.
- **ಡಿ. ವಿ. ಜಿ. (2021) :** ಎರಡು ನಾಟಕಗಳು, ತಿಲೋತ್ತಮೆ ಕನಕಾಲುಕ, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ.
- **ಡಿ. ವಿ. ಜಿ. (2021) :** ಶ್ರೀ ವಿದ್ಯಾರಣ್ಯ ವಿಜಯ, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ.
- **ಡಿ. ವಿ. ಜಿ. (2021) :** ಪರಶುರಾಮ, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ.
- **ಡಿ. ವಿ. ಜಿ. (2021) :** ಕನ್ನಡ ಮ್ಯಾಕ್‌ಬೆತ್, ಹುಬ್ಬಳ್ಳಿ ಸಾಹಿತ್ಯ ಪ್ರಕಾಶನ.

■■

– 20ನೇ ಪುಟದಿಂದ ಮುಂದುವರೆದುದು

ಕ್ರಾಂತಿಯ ಮೂಲಕ ಎಚ್ಚರಿಸುವಂತ ಗಟ್ಟಿದನಿಯಾಗಿ ಇಲ್ಲಿನ ಕಾವ್ಯಗಳು ದನಿಯಾಗುತ್ತವೆ. ಇವರ ಪ್ರತಿಯೊಂದು ಕವಿತೆಯಲ್ಲೂ ಕೂಡ ಸಮಾಜಮುಖಿಯಾದ ಅಭಿವ್ಯಕ್ತಿಯು ಎದ್ದು ಕಾಣುತ್ತದೆ. ಸಿದ್ಧಲಿಂಗಯ್ಯನವರು ಹೆಣ್ಣು, ದಲಿತರು ಹಗೂ ನೊಂದವರ ಪರವಾಗಿ ತಮ್ಮ ಕವಿತೆಗಳನ್ನು ಬರೆದಿದ್ದಾರೆ. ಇವರ ಬಹುಪಾಲು ಕವಿತೆಗಳು ಹೆಣ್ಣಿನ ನೋವು, ಆಸೆಗಳು, ಯಾತನೆ ಹಾಗೂ ಶೋಷಣೆಗಳನ್ನು ಕುರಿತು ಚರ್ಚಿಸುತ್ತದೆ. ತಳಸಮುದಾಯಗಳ ಶೋಷಿತರ ದನಿಯಾಗಿ ಸಿದ್ಧಲಿಂಗಯ್ಯರವರ ಕವಿತೆಗಳನ್ನು ನೋಡಬಹುದಾಗಿದೆ.

'ಹೊಲೆಮಾದಿಗರ ಹಾಡು' ಸಂಕಲನದ ಅಡುಗೂಲಜ್ಜಿಯ ಕಥೆ, ನನ್ನವಳಿಗೆ, ಮಸಣದ ಚೆಲುವಿಗೆ ಈ ಕವಿತೆಗಳಲ್ಲಿ ಮನುಷ್ಯ ಬದುಕಿನ ಪ್ರೀತಿ, ಪ್ರೇಮ, ಪ್ರಣಯ ಹಾಗೂ ಅದು ಈಡೇರದ ವಿರಹಗಳ ಕುರಿತ ಚರ್ಚೆಯು ಸಾದ್ಯವಾಗಿದೆ. ಇಲ್ಲಿನ ಪ್ರತಿ ಪದ್ಯವೂ ಸಹ ಕ್ರಾಂತಿಕಾರಕ ನೆಲೆಯಲ್ಲಿ ಮೂಡಿಬಂದಿವೆ. 'ಸಾವಿರಾರು ನದಿಗಳು' ಸಂಕಲನದ ಬೆಲ್ಚಿಯ ಹಾಡು, ಬಿದ್ದಾವು ಮನೆಗಳು, ಕಂಡೆ ನನ್ನವಳ ಒಂದು ದಿವಸ ಕವಿತೆಗಳು ಪ್ರಮುಖವಾಗಿ ಹೆಣ್ಣಿನ ಸ್ಥಿತಿಯನ್ನು ಕುರಿತಂತೆ ಚರ್ಚಿಸುತ್ತವೆ. 'ಹೊಲೆ ಮಾದಿಗರ ಹಾಡು' ಸಂಕಲನದ ಕವಿತೆಗಳು ಸಾವಿರಾರು ನದಿಗಳು ಸಂಕಲನಕ್ಕಿಂತ ತೀರಾ ಭಿನ್ನವಾಗಿದೆ. 'ಕಪ್ಪು ಕಾಡಿನ ಹಾಡು' ಸಂಕಲನದ ಬೆಂಗಳೂರಿನ ಹಾಡು, ಸುಟ್ಟಾವು ಬೆಳ್ಳಿ ಕಿರಣ, ರಾಣಿಯ ಪ್ರೇಮ ಮುಂತಾದ ಕವಿತೆಗಳಲ್ಲಿ ಸ್ತ್ರೀಯರ ಮೇಲಿನ ಆಕ್ರಮಣ, ದೌರ್ಜನ್ಯ, ಶೋಷಣೆಯ ಹಲವು ಮುಖಗಳನ್ನು ಸಿದ್ಧಲಿಂಗಯ್ಯರವರ ಕವಿತೆಗಳಲ್ಲಿ ಅನಾವರಣಗೊಂಡಿರುವುದನ್ನು ಈ ಲೇಖನದಲ್ಲಿ ಗಮನಿಸಬಹುದಾಗಿದೆ.

ಪರಾಮರ್ಶನ ಗ್ರಂಥಗಳು

- **ಸಿದ್ಧಲಿಂಗಯ್ಯ (2012) :** ಮೆರವಣಿಗೆ, ಬೆಂಗಳೂರು ಅಂಕಿತ ಪುಸ್ತಕ ಪ್ರಕಾಶನ.
- **ಅಗ್ರಹಾರ ಕೃಷ್ಣಮೂರ್ತಿ (ಸಂ.) (2006) :** ಸಂಸ್ಕೃತಿ ಕಥನ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
- **ಎಚ್ ದಂಡಪ್ಪ (ಸಂ.) (2001) :** ಬಡವರ ನಗುವಿನ ಶಕ್ತಿ, ಬೆಂಗಳೂರು ಅಂಕಿತ ಪುಸ್ತಕ ಪ್ರಕಾಶನ.

■■

SHIKSHAN SOUDAH *Kannada Quarterly* Printer, Publisher, Editor and Owned by : **Jayadev Mailarappa Menasagi** Resi. : Okkalageri Oni, GADAG-582101, Tq. Gadag, Dist.: Gadag. Karnataka State Printed at **Maima Akshara Mudrana,** S.P. Gadag Compound, J.T.Math Road, GADAG 582101, Tq. Gadag, Dist.: Gadag. Karnataka State Phone : 08372-200527, email : shikshansoudha@gmail.com. www.shikshansoudha.in